ನಿರಂಜನ

ಮಿಂಚು



C

CI

ಮಿಂಚು

ನಿರಂಜನ

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

MINCHU—A Novel in Kannada by Niranjana. Published by G.K.Ananthram for IBH Prakashana 5th Main Road Gandhinagar Bangalore–560 009

Pages : 256 + iv Price : Rs. 32–00

© Seemanthini Niranjana

Publishing Rights in Kannada : IBH Prakashana

ಬೆಲೆ : ರೂ. 32–00 © ಸೀಮಂತಿನಿ ನಿರಂಜನ

ಮೊದಲನೆಯ ಮುದ್ರಣ : ನವಂಬರ್ 1987. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯ ರಸ್ತೆ ಗಾಂಧಿನಗರ ಬೆಂಗಳೂರು–560009
ಮುದ್ರಕರು : ಎಂ. ಎಸ್. ರಾಮ ಮೋಹನ್ ಇಳಾ ಅಸೋಸಿಯೇಟ್ಸ್ ನಂ. 181/183 ಮೂರನೇ ಮುಖ್ಯ ರಸ್ತೆ ಚಾಮರಾಜಪೇಟೆ ಬೆಂಗಳೂರು–560 018

೧೯೬೦ರಲ್ಲಿ, ಕಿಷ್ಕಿಂಧೆ ರಾಜ್ಯದಲ್ಲಿ, ಮಿಂಚು !

O 1955ರಲ್ಲಿ 'ಕೊನೇ ನಮಸ್ಕಾರ' ಎಂಬ ಕಾದಂಬರಿ ಬರೆದೆ. ಅದರ ನಾಯಿಕೆ ಅಸಾಮಾನ್ಯ ವ್ಯಕ್ತಿ. ಅವಳ ಕಥೆ ಅಲ್ಲಿಗೆ ಮುಗಿಯಿತು ಎನ್ನುವಂತಿರಲಿಲ್ಲ. 1960ರಲ್ಲಿ 'ತೊಟ್ಟಿಲು ತೂಗದ ಕೈ' ಎಂಬ ಕಾದಂಬರಿಯಲ್ಲಿ ಆಕೆ ಮತ್ತೆ ಕಾಣಿಸಿಕೊಂಡಳು. (ಅದೇ ವೇಳೆಯಲ್ಲಿ ಮಾನ್ಯ ಮಿತ್ರ ಪ್ರಾಧ್ಯಾಪಕ ಶ್ರೀ ಎಂ. ವಿ. ಸೀ. ಯವರು ಅದೇ ಹೆಸರಿನ ಒಂದು ನಾಟಕ ಬರೆದರು. "ಇಬ್ಬರಿಗೂ ಒಂದೇ ಶೀರ್ಷಿಕೆ ಹೊಳೆದದ್ದು ಸಾಹಿತ್ಯ ಪ್ರಪಂಚದ ಒಂದು ಸೋಜಿಗದ ವಿದ್ಯಮಾನ"—೧೫-೯-೧೯೮೭ರಲ್ಲಿ ಎಂ. ವಿ. ಸೀ. ಬರೆದ ಪತ್ರದಲ್ಲಿ.)

'ನನ್ನ .... ಕೈ' 'ಪ್ರಜಾಮತ' ಸಾಪ್ತಾಹಿಕದಲ್ಲಿ ಧಾರಾವಾಹಿಯಾಯಿತು. ಮುಂದೆ ಪುಸ್ತಕ ರೂಪದಲ್ಲಿ ಪ್ರಕಟಿಸಲೆಂದು ಒಬ್ಬ ಪ್ರಕಾಶಕರಿಗೆ ಕೊಟ್ಟೆ. ಅವರು ಹೇಳುವ ಪ್ರಕಾರ, ಬೆಂಕಿ ತಗಲಿ ಅದು ನಾಶವಾಯಿತು.

1960ರಲ್ಲಿ ಬರೆದುದನ್ನು ಪುನರ್ ಸೃಷ್ಟಿಸಿದರೆ ಹೇಗೆ ?—ಈ ವರ್ಷದ ಆಗಸ್ಟ್ ಸೆಪ್ಟೆಂಬರ್‌ಗಳಲ್ಲಿ ಆ ಪ್ರಯತ್ನ ಮಾಡಿದೆ. ಇಪ್ಪತ್ತೇಳು ವರ್ಷ ಹಿಂದೆ ರಚಿಸಿದ್ದರ ನೆನಪು ಎಷ್ಟೋ ಮಾಸಿತ್ತು. ಬರೆಯುತ್ತ ಬರೆಯುತ್ತ ತೀರಾ ಹೊಸದೇ ಎನ್ನಿಸು ವಂತಹ ಕೃತಿ ರೂಪು ತಳೆಯಿತು. 'ಮಿಂಚು !' ಎಂಬ ಬೇರೆಯೇ ಹೆಸರನ್ನಿಟ್ಟೆ.

'ತೊಟ್ಟಿಲು ತೂಗದ ಕೈ' ಯ ಮುದ್ರಿತ ಹಾಳೆಯೋ ಹಸ್ತಪ್ರತಿಯೋ ಮುಂದೆ ದೊರೆತರೆ ? ಕಾಲು ಶತಮಾನಕ್ಕೂ ಹೆಚ್ಚು ಕಾಲ ಕಳೆದ ಮೇಲೆ ಒಂದು ಕೃತಿಯನ್ನು ಪುನರ್ ಸೃಷ್ಟಿಸಿದರೆ ಹೇಗಿರುತ್ತದೆ ಎಂಬುದನ್ನು ಅಭ್ಯಸಿಸಲು, ಆ ಕೃತಿ (ಕೃತಿಸ್ವಾಮ್ಯ : ಸೀಮಂತಿನೀ ನಿರಂಜನ) ಸಹಾಯಕವಾದೀತು.

O 'ಮಿಂಚು !' ವಿಲಂಬವಿಲ್ಲದೆ ಓದುಗರಿಗೆ ದೊರೆಯಲು ಕನ್ನಡದ ಹೆಸರಾಂತ ಪ್ರಕಟಣ ಸಂಸ್ಥೆ ಐಬಿಎಚ್ ಪ್ರಕಾಶನದ ಶ್ರೀ ಜಿ. ಕೆ. ಅನಂತರಾಮ್ ಕಾರಣರು. ಮುದ್ರಣದ ರೂವಾರಿ ಇಳಾ ಅಸೋಸಿಯೇಟ್ಸ್‌ನ ಶ್ರೀ ಎಂ.ಎಸ್.ರಾಮ ಮೋಹನ್. ಅವರಿಗೆ ನಾನು ಕೃತಜ್ಞ.

ನಿರಂಜನ

೧ ನವೆಂಬರ್ ೧೯೮೭
ಬೆಂಗಳೂರು

೧

ಮೂರನೆಯ ತರಗತಿಯಲ್ಲಿ ಮುಂಬಯಿಗೆ ಜುಕು ಜುಕು ಜೂ ಪಯಣ. ಮೇಲ್ತರಗತಿಯ ಪ್ರವಾಸಕ್ಕೆ ಹಣವಿರಲಿಲ್ಲ ಎಂದಲ್ಲ. ಸುಮ್ಮ ಸುಮ್ಮನೆ ಖರ್ಚು ಮಾಡುವುದೇತಕ್ಕೆ ? ಮಹಾತ್ಮರು ಥರ್ಡ್ ಕ್ಲಾಸಿನವರಾಗಿಯೇ ಇಂಡಿಯಾದ ಉದ್ದಗಲಕ್ಕೆ ಪ್ರಯಾಣ ಬೆಳೆಸಿ ಜನಕೋಟಿಯ ಮೇಲೆ ಮೋಡಿ ಬೀಸಲಿಲ್ಲವೆ ? ವಿಚಿತ್ರ ಮನುಷ್ಯ. 'ಮೊದಲು ವಯಸ್ಸಿಗೆ ಮನ್ನಣೆ' ಎಂದು ತನ್ನಷ್ಟಕ್ಕೆ ಪಿಸುನುಡಿದಿದ್ದರೂ ಸಾಕಾಗುತ್ತಿತ್ತು. ಅವರಿಗೇ ಪಟ್ಟಕಟ್ಟುತ್ತಿದ್ದರು. ಅರ್ಧ ನಗ್ನ ಸಮ್ರಾಟ. ಅಂಗೈ ಬಳಿಗೆ ಬಂದಿದ್ದ ಅಧಿಕಾರವನ್ನು ಬದಿಗೆ ತಳ್ಳಿದರು ; ಹುತಾತ್ಮರಾದರು.

ಯಾರಿಗೆ ಗೊತ್ತು ? ತಾನು ಕುಳಿತಿದ್ದ ಮೂಲೆಯಲ್ಲಿಯೇ ಮಹಾತ್ಮರೂ ಹಿಂದೊಮ್ಮೆ ಕುಳಿತಿದ್ದರೇನೊ. ಆ ಪುಣ್ಯ ಬಲದಿಂದ ತಾನೂ ಒಬ್ಬ ಹಿರಿಯ ವ್ಯಕ್ತಿಯಾದರೆ? ಬೇಡ ಎನ್ನುವುದಿಲ್ಲ. ಹಾಗೆ ಆಯಿತು. ಅಧಿಕಾರ ಹತ್ತಿರಕ್ಕೆ ಬಂತು-ಎಂದಿಟ್ಟುಕೊಳ್ಳಿ. ಅದನ್ನು ಬದಿಗೆ ತಳ್ಳಲಾರೆ. ಬಿಗಿ ಮುಷ್ಟಿಯಲ್ಲಿಟ್ಟುಕೊಳ್ಳುವೆ. ಹುತಾತ್ಮಳು ಎನ್ನಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ.

ಒಬ್ಬ ಎದ್ದು, ಎದುರು ದಿಕ್ಕಿನಲ್ಲಿ ಮೇಲ್ಗಡೆ ಹೇರಿದ್ದ ಸಾಮಾನುಗಳಲ್ಲಿ ಕೆಲವನ್ನು ಕೆಳಗಿದ್ದವರಿಗೆ ದಾಟಿಸಿ, ಉಳಿದುವನ್ನು ಜೋಡಿಸಿ, ಮಿಕ್ಕ ಜಾಗದಲ್ಲಿ ರಗ್ ಹಾಸಿದ. ಸಾಕಷ್ಟು ಲವಲವಿಕೆಯಿಂದಲೆ ಮೇಲಕ್ಕೆ ಏರಿ ಪವಡಿಸಿದ. ಮಗ್ಗುಲು ಹೊರಳಿದ ಅವನ ದೃಷ್ಟಿಗೆ ತಾನು ತುತ್ತು. ಇಬ್ಬರು ಸೀಟು ಬಿಟ್ಟು ಕೊಟ್ಟರೆ ತಾನೂ ಮುದುಡಿ ಮಲಗಬಹುದು.

ತಾನು ಚಡಪಡಿಸುತ್ತಿದ್ದುದನ್ನು ಕಂಡು, ತಂಗಿಯನ್ನೋ ಮಡದಿಯನ್ನೋ ಪ್ರೇಯಸಿಯನ್ನೋ ಕರೆದೊಯ್ಯುತ್ತಿದ್ದ ಯುವಕ ಕೇಳಿದ:

"ಸಂಗಡ ಯಾರೂ ಇಲ್ಲಾಂತ ಕಾಣ್ತದೆ. ಹೆಂಗಸರ ಕಂಪಾರ್ಟ್‌ಮೆಂಟ್..."

ತಾನು ಉತ್ತರವಿತ್ತೆ :

"ಅದು ಬೋರು. ಆರೋಗ್ಯ ಅಷ್ಟು ಚೆನ್ನಾಗಿಲ್ಲ.... ಜನರಲ್ ಕಂಪಾರ್ಟ್‌ಮೆಂಟ್ ವಾಸಿ ಅಂತ—"

"ಇನ್ನು ಸ್ವಲ್ಪ ಹೊತ್ತಿನಲ್ಲಿ ಕೆಳಗೆ ಕೆಲವರಾದರೂ ಹಾಸ್ಕೊಳ್ತಾರೆ. ಆಗ ಸೀಟು ಖಾಲಿಯಾಗ್ತದೆ. ಇವಳಿಗೂ—"

"ಇವರು ?"

"ನನ್ನ ತಂಗಿ, ಗಂಡ ಪೂನಾದಲ್ಲಿದ್ದಾನೆ. ಮುಟ್ಟಿಸಿ ಬರಬೇಕು."

ಆಗಲೆ ಆದಿಶೇಷನಾಗಿದ್ದವನು ಆ ಹುಡುಗಿಯನ್ನೂ ಕಬಳಿಸುತ್ತಿದ್ದ. ತನ್ನನ್ನೂ ಯಾರನ್ನು ಹೆಚ್ಚು ? ಯಾರನ್ನು ಕಮ್ಮಿ ?

ದೃಷ್ಟಿಯ ಆಟ ಮೈಗಂಟಿದ ಚಟ. ಈಗ ಮಾತ್ರ ಬೇಕಾಗಿರುವುದು ದೇಹಕ್ಕೆ ವಿಶ್ರಾಂತಿ, ದೇಹಕ್ಕೂ ಮನಸ್ಸಿಗೂ.

"ನೀವು ಮುಂಬಯಿಗೆ ?"

ಯುವಕ ಕೇಳಿದ್ದ. ಸಟೆಯಾಡುವ ಅಗತ್ಯವಿಲ್ಲ.

"ಹೌದ್ರೀ...."

"ನಾನು ಮುಂಬಯಿ ನೋಡಿಲ್ಲ."

ಸುಮ್ಮನಿದ್ದೆ. ತನ್ನ ಯೌವನ ಆರಂಭವಾದುದೇ ಅಲ್ಲಿ ಎನ್ನಲೆ ? ಈ ಸಂಭಾಷಣೆ ತನಗಿಷ್ಟವಿಲ್ಲ. ತಾನು ಮುಂದುವರಿಸಲಿಲ್ಲವೆಂದು, ಆತ ಮೌನ ತಳೆದ.

ಗಾಂಧಿ ಮಲಗಲು ಇಡೀ ಪೀಠಸಾಲೇ ಇರುತ್ತಿತ್ತೇನೊ. ಪ್ರಾಥಮಿಕ ಶಾಲೆಯಲ್ಲಿ ಮಧ್ಯಾಹ್ನದ ಬಿಡುವಿನಲ್ಲಿ ಇಬ್ಬರು ಅಧ್ಯಾಪಕರು ಬೆಂಚುಗಳ ಮೇಲೆ ಮಲಗುತ್ತಿದ್ದರು. ಹುಡುಗರ ಸದ್ದು ಎಷ್ಟೇ ಇರಲಿ, ಮಾಸ್ತರರ ಚುಟುಕು ನಿದ್ದೆಗೆ ಅದು ಅಡ್ಡಿಯಾಗುತ್ತಿರಲಿಲ್ಲ. ಮಹಾತ್ಮರು ಮಲಗಿದಾಗಲೋ ಸದ್ದು ರೈಲುಗಾಡಿಯದೊಂದೇ.

ರಾಷ್ಟ್ರದ ಹಿತವನ್ನು ಗಮನದಲ್ಲಿಟ್ಟವರು ರಾಷ್ಟ್ರಪಿತನನ್ನು ನಿಂದಿಸುವುದುಂಟೆ ? ಇದು ಅಧಮರು ಮಾಡುವ ಕೆಲಸ. 'ನಿಂದಕರಿರಬೇಕು' ಎಂಬ ವಚನಾಮೃತವೇ ಇಲ್ಲವೆ ? ಗಾಂಧೀ ದೇವರೇ ಸರಿ. ಈಗ ಆಗಬೇಕಾಗಿರುವುದು ಊರೂರಲ್ಲಿ ಗಾಂಧೀ ದೇವಾಲಯ. ಹರಿಜನರಿಗೆ ಪ್ರವೇಶ ? ಇದೊಳ್ಳೆಯ ತಮಾಷೆ. ತನ್ನದು ಸಡಿಲ ಕೊರಳಿನ ಕುಪ್ಪಸ. ಆ ಕಡೆ ಮೇಲೆ ಮಲಗಿರುವ ಮನುಷ್ಯನ ದೃಷ್ಟಿ ಒಳಹೊಕ್ಕು ತನ್ನ ವಕ್ಷಸ್ಥಲವನ್ನು ನೋಡುತ್ತಿದೆ. ಗಾಂಧೀಜಿಯ ಹಿಂದೆ ಮುಂದೆ ಎಷ್ಟೊಂದು ಜನ ಲಲನಾಮಣಿಗಳಿದ್ದರು ! ಥೆ! ಥೆ! ಗಾಂಧೀಜಿಯ ಬಗೆಗೆ ಇಂಥ ವಿಚಾರ ಸಲ್ಲದು. ಉಪ್ಪು ಖಾರ ತಿನ್ನುವ ಹುಲುಮಾನವರೆಲ್ಲಿ ? ಮೇಕೆ ಹಾಲನ್ನಷ್ಟೆ ಸೇವಿಸುವ ಅತಿಮಾನವನೆಲ್ಲಿ ? ಅವರು ವೃದ್ಧರಾದಾಗ ತಾನು ಲಂಗ ತೊಡುತ್ತಿದ್ದ ಮೊದ್ದು ಹುಡುಗಿ. ಆಗ ಅವರೇನಾದರೂ ತನ್ನೂರಿಗೆ ಬಂದಿದ್ದರೆ ಖಂಡಿತ ಉಮ್ಮ ಕೊಡುತ್ತಿದ್ದರು. ಹತ್ತಿಪ್ಪತ್ತು ವರ್ಷ ಮೊದಲೇ ಹುಟ್ಟಿದ್ದರೆ ತಾನೀಗ ರಾಷ್ಟ್ರದ ನಾಯಕ ಮಣಿಗಳಲ್ಲಿ ಒಬ್ಬಳಾಗುತ್ತಿದ್ದೆ. ಇರಲಿ. ಈಗಲಾದರೂ ಆಗಿರುವ ನಷ್ಟವೇನು ? ಕಿಷ್ಕಿಂಧೆ ರಾಜ್ಯದ ಮುಖ್ಯ ಪಟ್ಟಣವಾದ ಕಲ್ಯಾಣನಗರದಲ್ಲಿ ತಾನು ಪ್ರತಿಷ್ಠಿತಳೇ ಅಲ್ಲವೆ? ಅದೇ ಆಗ ಬಿರಿದಂತಿದ್ದ ನಿತ್ಯಪುಷ್ಪವಾದ ತನ್ನ ಸುತ್ತಲೂ ಹಾರಾಡುತ್ತಿದ್ದ ಆ ದುಂಬಿಗಳ ವಿಷಯದಲ್ಲಿ ತಾನು ತುಸು ಎಚ್ಚರ ವಹಿಸಬೇಕಾಗಿತ್ತು. ಅರಗಿನ ಮನೆಯಾಯಿತೆ ತನ್ನ ಕನಸಿನ ಮನೆ ? ದೇಶದ ಸ್ವಾತಂತ್ರ್ಯ

ಸಂಗ್ರಾಮದಲ್ಲಿ ಆದ ಏರಿಳಿತಗಳು ಎಷ್ಟೊಂದು ? 'ಪ್ರತಿಯೊಂದು ಸೋಲೂ ಗೆಲುವಿನತ್ತ ಸಾಗುವ ಸೋಪಾನ'. ಯಾರು ಹೇಳಿದ್ದು ಹೀಗೆಂದು? ಯಾರಾದರೇನು? ಒಳ್ಳೆಯ ಮಾತು.

"ಟಿಕೆಟ್ ! ಟಿಕೆಟ್ !"

ತನ್ನಲ್ಲಿದೆ ಟಿಕೆಟು. ಎಷ್ಟೋ ವರ್ಷ ಹಿಂದೆ ಅಹಮ್ಮದಾಬಾದ್–ಮುಂಬಯಿ ದಾರಿಯಲ್ಲಿ.... ಈಗ ಯಾಕೆ ಅದರ ನೆನಪು ? ಇವನೇ ಅಲ್ಲವಷ್ಟೆ ? ಅವನೀಗ ನಿವೃತ್ತನಾಗಿ ತನ್ನ ಹುಟ್ಟೂರು ಸೇರಿರಬೇಕು. 'ದೊಂಗಲುನ್ನಾರು ಜಾಗ್ರತ !'— ಇದನ್ನು 'ಟಿಕೆಟ್ ಕಲೆಕ್ಟರುನ್ನಾರು ಜಾಗ್ರತ !' ಎಂದು ಬದಲಾಯಿಸಿದರೆ ? 'ಟಿಕೆಟ್ ಕಲೆಕ್ಟರ್'ಗಿಂತ 'ಟಿ.ಸಿ' ವಾಸಿ. 'ಟಿ.ಸಿ. ಲುನ್ನಾರು ?' 'ಟಿ.ಸಿ. ಉನ್ನಾರು ?' 'ಟಿ.ಸಿ. ರುನ್ನಾರು ?' ಯಾವುದೋ ಒಂದು. ಕನ್ನಡ ರಾಜ್ಯದಲ್ಲಿ ಓಡಾಡುವ ರೈಲು. ಕನ್ನಡದಲ್ಲಿಯೇ ಇರಬೇಕು—ಇಂಥ ಎಚ್ಚರಿಕೆ ಮಾತುಗಳೆಲ್ಲ....

ಟಿಕೆಟ್ ಇಲ್ಲದ ಪ್ರಯಾಣ ದಂಡನಾರ್ಹ. ದೇಶದ ಬೊಕ್ಕಸಕ್ಕೆ ಕನ್ನವಿಡುವವನು ಪಾಪಿ. ಈ ಡಬ್ಬಿಯಲ್ಲಿ ? ತಾನು ಪ್ರಯಾಣ ಬೆಳೆಸುತ್ತಿರುವ ಇಲ್ಲಿ ?

"ಮೆಡಾಮ್, ಟಿಕೆಟ್...."

ತನ್ನಲ್ಲಿಗೆ ಬಂದ. ಧಡೂತಿ ಆಸಾಮಿ. ಎರಡು ದಶಕ ಹಿಂದೆ—ಮುಂದಕ್ಕೆ ಚಾಚದ ಹೊಟ್ಟೆ....ಯೌವನದ ಮೋಡಿಯೇ ಮೋಡಿ.

ಬಲಮಗ್ಗುಲಿಗೆ ಆತುಕೊಂಡಿದ್ದ ಹ್ಯಾಂಡ್‌ಬಾಗ್. ಅದರಿಂದ ಹೊರಬಂದ ಟಿಕೆಟ್. ಇವನು ತನ್ನನ್ನು ಈವರೆಗೆ ಕಂಡ ಭಾಗ್ಯವಂತನಲ್ಲ.

ಗಾಂಭೀರ್ಯ, ಮೌನ.

ಮೇಲಿನ ವರ್ಗದಲ್ಲಾದರೆ, 'ಎಕ್ಸ್‌ಕ್ಯೂಸ್ ಮಿ' ಎಂಬ ಪೀಠಿಕೆಯ ಬಳಿಕ ಮಾತ್ರ 'ಟಿಕೆಟ್'ನ ಪ್ರಸ್ತಾಪ.

ಅಲ್ಲಿ 'ಥ್ಯಾಂಕ್ಯೂ'. ಇಲ್ಲಿ ಉಪೇಕ್ಷೆಯ ನೋಟ.

ನಸುನಕ್ಕನಲ್ಲ ? ನಲ್ಲನಲ್ಲದ ನಲ್ಲ. ತನ್ನ ಹಿರಿಮೆಯನ್ನೊಪ್ಪಿಕೊಂಡು ಮೆಚ್ಚುಗೆಯ ತುಟಿ ಸಲಾಂ.

ಸೀಟಿನ ಕೆಳಗೆ ಮಲಗಿದ್ದ ಬಡಪಾಯಿ ಸಂಸಾರ. ರಾಜಠೀವಿಯಿಂದ ಕುಳಿತಿದ್ದ ಇಬ್ಬರು. "ಪಕ್ಕದ ಕಂಪಾರ್ಟ್‌ಮೆಂಟಿನಲ್ಲಿದಾರೆ". "Sorry. ಎಷ್ಟಾಗುತ್ತೆ ಕೊಡ್ತೀನಿ." ರಶೀದಿ ಪುಸ್ತಕ. ಅದರ ಬೆನ್ನಿನ ಮೇಲೆ ಅಂಕೆಸಂಖ್ಯೆ ಜಮಾ, ಟಿಕೆಟಿನ ಚಾರ್ಜ್ ಮತ್ತು ದಂಡ ತೆತ್ತುದಾಯಿತು. ಉಳಿದ ದೊಂಗರಿಗೆ "ನಡೀರೋ. ಬಾಗಿಲ ಹತ್ರ ನಿಂತ್ಕೊಳ್ಳಿ !"

"ಬಿಡಿ ಸೋಮಿ, ಬಡವಗು."

"ಎಲ್ಲಾ ಗೊತ್ತು."

ಮುಂದಿನ ಸ್ಟೇಷನಿನಲ್ಲಿ ಅವರೆಲ್ಲ ಇಳಿಯಬೇಕು. ಹೊಸ ಸ್ಥಳ ವಿತರಣೆಯಲ್ಲಿ ಕಾಲು ಚಾಚುವುದು ಸಾಧ್ಯ. ಯಾರು ದೊಂಗ ? ಟಿಕೆಟ್‌ರಹಿತ ಪ್ರಯಾಣಿಕನೊ? ಅದನ್ನು ಇದನ್ನು ಎಗರಿಸುವ ಕಳ್ಳನೊ ? ಹೊರಗೆ ಮುಂದಿನ ಸ್ಟೇಷನಿನಲ್ಲಿ 'ಟಿ.ಸಿ' ಏನು ಮಾಡುವ ? ಹೆದರಿಸಿ ಇದ್ದುಬದ್ದುದನ್ನು ದೋಚುವನೊ ? 'ಸಬ್ ಚೋರ್ ಹೈ', ಯಾರು ಹೀಗೆ ಮೊದಲು ಹೇಳಿದವರು ? ಎಷ್ಟು ಹಳೆಯದು ಈ ಮಾತು ?

ರೈಲು ನಿಂತಿತು. ಮುಂದೆ ಚಲಿಸಿತು.

ಸೀಟಿನ ಮೇಲೆ ಈಗ ಅವಳ ತಲೆ ಆಚೆಗೆ ; ತನ್ನದು ಈಚೆಗೆ. ಅವಳ ಅಣ್ಣ ಕೆಳಗೆ ಹಾಸಿಕೊಂಡ—ತಂಗಿಯ ರಕ್ಷಕ ? ಬೊಗಳೆ ?

ತನ್ನ ಬಾಯಿಯಿಂದ ಮಾತು :

"ದಾರೀಲಿ ಮಲಕೊಳ್ಳೋವರು ಬದೀಲಿ ಸ್ವಲ್ಪ ಜಾಗ ಬಿಡೀಪ್ಪ. ಟಾಯ್ಲೆಟಿಗೆ ಹೋಗುವವರಿಗೆ ಅಡ್ಡಿ ಮಾಡ್ಬೇಡಿ."

ಮೇಲ್ಗಡೆ ಪವಡಿಸಿದ ಆದಿಶೇಷನಿಗೆ ಈ ರಾತ್ರೆ ಶಯನಸ್ವಪ್ನ. ತನಗೆ ನಿದ್ದೆ ಬರುವುದೊ ಇಲ್ಲವೊ ?

ಹುಡುಗ ಮುಂಡೇವು ನಮಸ್ಕರಿಸಿ ಬೀಳ್ಕೊಟ್ಟಿದ್ದುವು. ದೊಡ್ಡ ನಮಸ್ಕಾರ. ಕೊನೆಯದೆ ? ಅಥವಾ ಗೆಲುವಿನತ್ತ ತನ್ನನ್ನು ಎತ್ತಿ ಒಯ್ಯಲು ಒಂದು ಸೋಪಾನ?

ಟಾಯ್ಲೆಟಿಗೆ ಹೋಗಿಬಂದೆ. ಚಪ್ಪಲಿ ಯಾರಿಗೋ ತುಸು ತಗಲಿರಬೇಕು. ಸದ್ಯಃ ಆತ ಕಿರಿಚಲಿಲ್ಲ. ಇನ್ನು ಬೆಳಗಾಗುವವರೆಗೂ ನಿರಾತಂಕ....

"....ಈ ಕೆಲ ತಿಂಗಳಲ್ಲಿ ತಾನು ಪಡಬಾರದ ಪಾಡುಪಟ್ಟೆ. ಸ್ವಾಮೀಜಿಯ ಆಸರೆಯಲ್ಲಿ ಏಕಾಂತ ದೊರೆಯದೆ ಇರುತ್ತಿದ್ದರೆ ತನಗೆ ಹುಚ್ಚೇ ಹಿಡಿಯುತ್ತಿತ್ತು. ಅಥವಾ ಆಗಲೇ ಹಿಡಿದಿದ್ದ ಒಂದು ಬಗೆಯ ಮರುಳನ್ನು ಸ್ವಾಮೀಜಿ ಬಿಡಿಸಿದರೆಂದೆ?

"ನೀನು ಬಳಲಿದ್ದೀಯಾ. ನಿನ್ನ ಮನಸ್ಸಿಗೆ ನೆಮ್ಮದಿ ಬೇಕು, ವಿಶ್ರಾಂತಿ ಬೇಕು" —ಎಂದಿದ್ದರು ಸ್ವಾಮೀಜಿ, ಆ ರಾತ್ರೆ ಕಳೆದು ಬೆಳಗಾದ ಮೇಲೆ.

ಎಲ್ಲರಂತೆಯೇ ಇವರು ಎಂದು ಇರುಳು ಬಹಳ ಹೊತ್ತು ಕಾದಿದ್ದೆ. ವಿಚಿತ್ರ. ಸ್ವಾಮೀಜಿ ಬರಲಿಲ್ಲ. ಬೆಳಗಾದ ಮೇಲೆ, ದೇವರಪೂಜೆ ಮುಗಿದ ಬಳಿಕ ಸ್ವಾಮೀಜಿ ಕರೆದರು. ಅಳಲನ್ನು ತೋಡಿಕೊಂಡೆ.

"ನೊಂದ ಜೀವ" ಎಂದರು, ಯಾವುದೋ ಟಿಪ್ಪಣಿ ಮಾಡಿಕೊಂಡಂತೆ.

ಎಳಸು. ಸಂದೇಹವಿರಲಿಲ್ಲ.

ಕಣ್ಣುಗಳಿಂದ ತೊಟ್ಟಿಕ್ಕಿದ ಎರಡು ಹನಿಗಳನ್ನು ಝಾಡಿಸಿ ತಾನು ರಾಗವೆಳೆದಿದ್ದೆ.

"ತಮ್ಮದು ಧರ್ಮಮಠ."

"ಹೌದು. ಮಧ್ಯಪ್ರದೇಶದ ಧರ್ಮೇಂದ್ರಬಾಬಾ ಇದರ ಸ್ಥಾಪಕರು."

"ಮುಂಬಯಿಯಲ್ಲಿದ್ದಾಗ ಅವರನ್ನು ಕಾಣುವ ಬಯಕೆಯಾಗಿತ್ತು. ಕಲ್ಯಾಣ ನಗರಕ್ಕೆ ಬೇಗನೆ ಹೊರಡಬೇಕಾಗಿ ಬಂದದ್ದರಿಂದ ಆ ಬಯಕೆ ಈಡೇರಲಿಲ್ಲ.

"ಆ ಮಠದ ಪರಿಸರ ನನಗಿಷ್ಟ. ತಪೋವನ ಎಂತಲೇ ಜನ ಅದನ್ನು ಕರೀತಾರೆ"

"ಹಾಗೇಂತ ಕೇಳಿದ್ದೇನೆ."

"ಬಾಬಾಜಿ ದ್ರಷ್ಟಾರರು. ದೇಶದ ಐವತ್ತಾರು ಭಾಗಗಳಲ್ಲಿ ಐವತ್ತಾರು ಮಠ ಸ್ಥಾಪಿಸುವ ಗುರಿ ಅವರದು. ಕಿಷ್ಕಿಂಧೆಯ ಹೊಣೆ ನಿನ್ನದು ಅಂತ ಹೇಳಿ ನನ್ನನ್ನು ಇಲ್ಲಿಗೆ ಕಳಿಸಿದಾರೆ."

"ನನ್ನಂಥ ಅಭಾಗಿನಿ ಮಠ ಸೇರಬಹುದೆ ?"

"ಇದರಲ್ಲಿ ಅಧ್ಯಾತ್ಮದ ಐಹಿಕದ ಸೂಕ್ಷ್ಮಗಳು ಅಡಗಿವೆ. ನಿರ್ಧಾರ ಕೈಗೊಳ್ಳುವ ಅಧಿಕಾರವಿರುವುದು ಬಾಬಾಜಿಯೊಬ್ಬರಿಗೇ...."

ಅಭಾಗಿನಿ ಎಂದೆ. ಸ್ವಾಮೀಜಿಯ ಅನುಕಂಪದ ಸೆಲೆ ಎಷ್ಟು ಒಸರುತ್ತದೋ ನೋಡೋಣವೆಂದು. ಅವರ ಮುಖ ಮ್ಲಾನವಾಯಿತು. ಮಾತು ನಿಂತಿತು.

ಮುಂಬಯಿಗೆ. ಅಲ್ಲಿಂದ ಧರ್ಮೇಂದ್ರ ಬಾಬಾರಲ್ಲಿಗೆ. ಇಲ್ಲಿಯೇ ಇರು–ಎಂದು ಬಾಬಾಜಿ ಹೇಳಿದರೆ? ಎದುರುಗಡೆಯ ಮೇಲುಪೀಠದವನು ನಿದ್ದೆ ಹೋಗಿದ್ದಾನೆ. ತನಗೂ ನಿದ್ದೆ ಬರುತ್ತಿದೆ.

("ಓ ದೇವರೇ ! ಧರ್ಮೇಂದ್ರ ಬಾಬಾ ನನ್ನ ಕೈ ಬಿಡದಂತೆ ನೋಡಿಕೊ.")

ಗಡಕ್–ಗಡಕ್....

ಒಂದು ದಿನದ ಆಸರೆಗೆ ಕಾಣಿಕೆಯಾಗಿ ಸ್ವಾಮೀಜಿಗೆ ತನ್ನಲ್ಲಿದ್ದ ಬಂಗಾರದ ಒಂದೆಳೆ ಸರವನ್ನು ಕೊಡುವ ಯೋಚನೆ ಮೂಡಿತ್ತಲ್ಲ ತನ್ನಲ್ಲಿ ? ವಿವೇಕ ಕುಟುಕಿದ್ದರಿಂದ ಅದು ಉಳಿಯಿತು. ತನ್ನಂಥ ಹೆಂಗಸರನ್ನು ನೋಡಿಯೇ ಯಾವನೋ ಗಾದೆ ಕಟ್ಟಿರಬೇಕು : 'ಹೆಂಗಸರ ಬುದ್ಧಿ ಮೊಣಕಾಲಿನ ಕೆಳಗೆ....'

ಚಳಿಯಾಗುತ್ತಿದೆ. ಶಾಲಿನಿಂದ ಬುದ್ಧಿಯನ್ನು ಮುಚ್ಚಬೇಕು.

* * *

ಕಿಷ್ಕಿಂಧೆಯನ್ನು ಉತ್ತರ–ದಕ್ಷಿಣವೆಂದು ವಿಂಗಡಿಸುವ ಅವಳಿನದಿ ತುಂಗಭದ್ರಾ.

ಸೇತುವೆ ದಾಟುತ್ತಿದ್ದಂತೆ ಸೂರ್ಯರಶ್ಮಿ ಡಬ್ಬಿಯೊಳಕ್ಕೆ ಇಣಿಕಿನೋಡಿತು. ಪುಟ್ಟವ್ವ ಭಾರವಾಗಿದ್ದ ರೆಪ್ಪೆಗಳನ್ನು ಅರೆತೆರೆದು ಮತ್ತೆ ಮುಚ್ಚಿದಳು. ಭದ್ರವಾಗಿ. ಇನ್ನೊಂದು ಗುಟುಕು ನಿದ್ದೆ. ನಿಧಾನವಾಗಿ ಬಟ್ಟಲು ಬರಿದಾಯಿತು. ಪೂರ್ತಿ ಎಚ್ಚರ.

ಸಂಡಾಸ್ (ಇನ್ನು ಮುಂದೆ ಈ ಪದವೇ ಚಾಲೂ) ಸ್ವಚ್ಛವಾಗಬೇಕಾದರೆ ಹಸನೂರು ಬರಬೇಕು. ಆದರೆ ಈಗೊಮ್ಮೆ ಹೋಗಲೇಬೇಕಲ್ಲ ? ಗಾಂಧೀತಾತ ತನ್ನ ಪಾಯಖಾನೆ ಪಾತ್ರೆಯನ್ನು ತಾನೇ ಒಯ್ಯುತ್ತಿದ್ದರಂತೆ. ಸಂಡಾಸ್ ತೊಳೆಯುತ್ತಿದ್ದರಂತೆ. ಆ ಮಟ್ಟಕ್ಕೆ ಏರಬೇಕಾದರೆ ಯಾವುದಕ್ಕೂ ಹಿಂಜರಿಯಬಾರದು.

ಪೇಸ್ಟ್ ಮತ್ತು ಬ್ರಶ್. ಭುಜದ ಮೇಲೆ ಟವೆಲು. ಇಸ್ಸಿ.... ಇಸ್ಸಿ... ಸೀರೆಯನ್ನು ಮೊಣಕಾಲಿನವರೆಗೆ ಎತ್ತಿಕೊಳ್ಳದೆ ಬೇರೆ ಗತಿಯಿಲ್ಲ. ಬಾಗಿಲು ಮುಚ್ಚಿದ ಮೇಲೆ ತಾನು ಸ್ವತಂತ್ರಳು....

....ಇನ್ನು ಚಹಾದ ಉಪಾಹಾರದ ನಿಲ್ದಾಣ. ಮೇಲೆ ಮಲಗಿದ್ದವನು ಮೊದಲೇ ಇಳಿದಿದ್ದ.

ಸೇದುತ್ತಿದ್ದ ಬೀಡಿಯನ್ನು ಕಿಟಿಕಿಯ ಆಚೆಗೆ ಎಸೆದು ಬಾಗಿಲಿನತ್ತ ನೆಗೆದ. ಅವನಿಗೆ ಬೇಕಾಗಿದ್ದುದು ಕ್ಯಾಂಟೀನು. ಆತ ತನ್ನ ಕಡೆಗೊಮ್ಮೆ ನೋಡಿದಂತಾಯಿತೆಂದು ಪುಟ್ಟವ್ವ ಅಂದಳು.

"ಅಣ್ಣ, ಏನಾದರೂ ಬ್ರೇಕ್‌ಫಾಸ್ಟ್ ಕಳಿಸ್ರಿ."

"ಹುಡುಗರು ಬರ್ತಾರೋ ಇಲ್ವೋ. ಕೇಳಿ ನೋಡ್ತೀನಿ."

"ಫಸ್ಟ್‌ಕ್ಲಾಸ್ ಪ್ಯಾಸೆಂಜರು. ಟಿಕೆಟ್ ಸಿಗದೆ—"

"ಹೇಳ್ತೀನಿ."

ಡಬ್ಬಿಯಲ್ಲಿದ್ದವರು ಪರಿಚಿತೆಯನ್ನು ಮತ್ತೊಮ್ಮೆ ಕಣ್ಣರಳಿಸಿ, ನೋಡಿದರು.

ಕ್ಯಾಂಟೀನಿನಲ್ಲಿ ಒಬ್ಬ ಹುಡುಗ ಭಕ್ಷೀಸಿನ ಸಾಧ್ಯತೆಯನ್ನು ಕಲ್ಪಿಸಿ, ಬಂದವನು ತೋರಿದ ಡಬ್ಬಿಯನ್ನು ಗಮನಿಸಿದ.

ಹಸಿದ ನಾಲಗೆಗೆ ರುಚಿ ಎನಿಸಿದ ಉಪಾಹಾರ ಬಂತು. ಪುಟ್ಟವ್ವ ತೇಗುತ್ತಿದ್ದಂತೆ ಹುಡುಗ ಪ್ರತ್ಯಕ್ಷನಾದ. ಇಪ್ಪತ್ತೈದು ಪೈಸೆ ಭಕ್ಷೀಸ್ ಕಂಡು ಹಿಗ್ಗಿದ. (ಫಸ್ಟ್‌ಕ್ಲಾಸ್ ಅಂತಸ್ತು ಸುಳ್ಳು. ಈ ತರಗತಿಗೆ ಇಷ್ಟು ಭಕ್ಷೀಸ್ ಸಾಕು. ಪುಟ್ಟವ್ವ, ಹುಡುಗ ಇಬ್ಬರಲ್ಲೂ ಅದೇ ಯೋಚನೆ.)

ಅಣ್ಣ ಮಾತುಗಾರನಲ್ಲ, ಬರಿಯ ನೋಟಗಾರ.

ಮಾರನೆಯ ದಿನ ಪೂನಾ ನಿಲ್ದಾಣದಲ್ಲಿ, ಯುವತಿಯೂ ಪ್ರಾಯಶಃ ಅವಳ ನಿಜವಾದ ಅಣ್ಣನೂ ಇಳಿದ ಮೇಲೆ ಮರಾಠಿಮಯ ಡಬ್ಬಿಯಲ್ಲಿ 'ಮಹಡಿಮನೆ'ಯ ಅಣ್ಣ ಕನ್ನಡ ಡಿಂಡಿಮ ಬಾರಿಸದೆ, ಮರಾಠಿಯಲ್ಲಿ ಕೇಳಿದ :

"ಮುಂಬಯಿಗೆ ?"

"ಅವನಿಗಿಂತ ಕಡಮೆಯವಳೆ ಆಕೆ ?"

ಅದೇ ಭಾಷೆಯಲ್ಲಿ ಉತ್ತರವಿತ್ತಳು :

"ಹ್ಞ."

"ಬಳಗದವರ ಮನೆಗೆ ?"

"ಹೌದು."

"ಕಲ್ಯಾಣನಗರದಲ್ಲಿ—"

"ಗೆಳತಿ ಮನೆಗೆ ಹೋಗಿದ್ದೆ. ನೀವು ?"

"ಸಣ್ಣ ಪೇಟೆಯಲ್ಲಿ ಜವಳಿ ಅಂಗಡಿ ಇದೆ. ಜವಳಿ ಖರೀದಿಗೇಂತ ಮುಂಬಯಿಗೆ—"

"ಗೊತ್ತಾಯ್ತು."

ಅವನ ಬ್ಯಾಗು ತುಂಬ ನೂರು ರೂಪಾಯಿ ನೋಟುಗಳಿರಬಹುದು. ತನ್ನ ಟ್ರಂಕಿನಲ್ಲೂ ಇಲ್ಲವೆ ಆಭರಣ ಗೀಭರಣ ?

ಕಲ್ಯಾಣ. ಬಳಿಕ ಮುಂಬಯಿ ಸೆಂಟ್ರಲ್‌ನಲ್ಲಿ ಇಳಿದಾಗ ಅಣ್ಣ ಕೇಳಿದ, ಡಿಂಡಿಮ ಭಾಷೆಯಲ್ಲಿ.

"ನೀವು ಯಾವ ಕಡೆಗೆ ? ಒಟ್ಟಿಗೇ ಟ್ಯಾಕ್ಸಿ ಮಾಡೋಣವಾಂತ ?"

"ಬೇಡ. ನೀವು ಹೋಗಿ. ನಮ್ಮ ಮನೆಯಿಂದ ಕಾರು ಬರ್ತದೆ."

"ಸರಿ. ಮುಂದೆ ನೀವು ಯಾವಾಗಲಾದರೂ ಕಲ್ಯಾಣನಗರಕ್ಕೆ ಬಂದಾಗ ನಮ್ಮ ಅಂಗಡಿಗೆ ಭೇಟಿ ನೀಡ್ಬೇಕು. ಇಗೊಳ್ಳಿ, ಕಾರ್ಡು."

ತುಸು ಕಿವಿ ಮಡಚಿದ್ದ ವಿಸಿಟಿಂಗ್‌ಕಾರ್ಡ್ ಅವಳ ಕೈಗೆ ಬಂತು.

"ಗಂಧದ ತೆಳು ಹಾಳೆ ಮೇಲೆ ಕಾರ್ಡ್ ಮಾಡಿಸಿ."

"ಆಗಲಿ ಮೇಡಂ.... ನಮ್ಮ ಅಂಗಡಿಗೆ—"

"ಬರ್ತೇವೆ, ಬರ್ತೇವೆ."

೪

೧

ಪುಟ್ಟವ್ವ ಅಳುಕುತ್ತ ಕರೆಗಂಟೆಯೊತ್ತಿದಳು. ತಬ್ಬಿಕೊಳ್ಳಬೇಕು, ತುಸು ಅಳಬೇಕು. "ಮೃದುಲಾಬೆನ್, ನಾನು ಕಾಗದ ಕೂಡಾ ಬರೀಲಿಲ್ಲ. ನನ್ನ ಅಸ್ತಿತ್ವಕ್ಕೊಂದು ರೂಪಕೊಟ್ಟವರು ನೀವು. ಅದನ್ನು ಮರೆತಂತೆ ನಟಿಸಿದ ಕೃತಘ್ನೆ ನಾನು." ಮೊದಲೇ ರೂಪಿಸಿದ್ದ ವಾಕ್ಯಗಳು. ಮರೆತೆನೊ ಆಭಾಸವಾದೀತು. ಬಾಗಿಲು ತೆರೆದವಳು ಒಬ್ಬಳು ಹುಡುಗಿ. ಗುಜರಾಥಿಯಂತೆ ಕಂಡಳು. ಮಾತು ಮರಾಠಿಯಲ್ಲಿ.

"ಯಾರು ಬೇಕು ?"

"ಮೃದುಲಾಬೆನ್ ಇದಾರಾ ?"

"ಹ್ಞಾ. ನೀವು ?"

"ಅವರ ಗೆಳತಿ. ಕಲ್ಯಾಣನಗರದಿಂದ ಬಂದಿದೀನಿ."

"ಕೂತ್ಕೊಳ್ಳಿ" ಎಂದು ಹೇಳಿ, ಫ್ಯಾನ್ ಹಾಕಿ, ಆಕೆ ಒಳಗೆ ನಡೆದಳು. ಪುಟ್ಟವ್ವ ಟ್ರಂಕ್ ಚೀಲಗಳನ್ನು ಒಳತಂದಳು.

ತಕ್ಷಣ ಬರಲಿಲ್ಲ ಮೃದುಲಾಬೆನ್. ತನ್ನ ಮೇಲೆ ಸಿಟ್ಟು. ಮಾನಸಿಕ ತಾಕಲಾಟವೇನೊ. (ಒಮ್ಮೆ ಹೊರಗೆ ಬಾ. ನೋಡಿಯೇ ಬಿಡ್ತೀನಿ. 'ಮೃದುಲಾಬೆನ್, ನಾನು ಕಾಗದ ಕೂಡಾ ಬರೀಲಿಲ್ಲ....' ವಾಕ್ಯ ಮರೆತಿಲ್ಲ...)

ಅಲಂಕೃತ ದಿವಾಣಖಾನೆ. ಗೋಡೆಯಲ್ಲಿ ಮಹಾತ್ಮ ; ಮಗ್ಗುಲಲ್ಲಿ ಠಕ್ಕರ್ ಬಾಪಾ (ಠಕ್ಕರಿಗೆಲ್ಲ ಇವನು ಬಾಪೂ ?) ತ್ಸು–ತ್ಸು ಕೆಟ್ಟ ವಿಚಾರಗಳು ! ಇವರು ಗುಜರಾಥಿನವರೆಂದು ಎಷ್ಟು ಹೆಮ್ಮೆ ಮೃದುಲಾಗೆ. ಅವಳದೊಂದು ವಾದವಿತ್ತು : ಸೇವೆ ಎನ್ನುವ ಪದವನ್ನು ಭಾರತಕ್ಕೆ ನೀಡಿದ್ದೇ ಗುಜರಾಥಿ ಭಾಷೆ. ಆಗಲಪ್ಪ, ಆಗಲಿ.

ಹಡಗು ನಿಧಾನವಾಗಿ ಬರುತ್ತಿದೆ. ಎದ್ದು ನಿಲ್ಲುವುದು ಮೇಲು. ಪುಟ್ಟವ್ವನೇ ಇರಬೇಕೆಂದು ತರ್ಕಿಸಿದ್ದಳು ಮೃದುಲಾ. ಸಿಟ್ಟು ಬಂದಿತ್ತು, ಕಡಮೆಯಾಗಿತ್ತು.

"ಪುಟ್ಟಾ ! ನೀನು !"

ಸಾಲುಗಳು ದಡದಡಿಸಿದುವು..... "ಕೃತಘ್ನೆ ನಾನು." ಒಬ್ಬರನ್ನೊಬ್ಬರು ತಬ್ಬಿಕೊಂಡರು. ಪುಟ್ಟವ್ವ ಅತ್ತಳು. ಆ ಕಂಬನಿ ಕಂಡು ಮೃದುಲೆಯೂ ಕರಗಿದಳು.

ಮೃದುಲಾಬೆನ್ ಗುರು, ಪುಟ್ಟವ್ವ ಶಿಷ್ಯೆ.

"ಬರಿ ಕೈಲಿ ಬಂದೆಯಾ ?"

"ಇದ್ದಕ್ಕಿದ್ದಂತೆ ಹೊರಟೆ."

"ಏನಾಯ್ತು ?"

"ಅದೊಂದು ದೊಡ್ಡ ಕಥೆ. ಬರಿ ಕೈ ಎನ್ನಬೇಡಿ. ನನ್ನನ್ನೇ ಕಾಣಿಕೆಯಾಗಿ ನಾನು ಒಪ್ಪಿಸ್ತಿದೀನಿ."

"ನೀನು ಮೊದ್ದು, ಮುದ್ದು. ಕೂತ್ಕೊ."

ಇಬ್ಬರೂ ಕುಳಿತರು. ಸೋಫಾ ಕುಸಿಯಿತು.

"ಈ ಫ್ಲ್ಯಾಟ್ ಈಗ ನನ್ನ ಸ್ವಂತದ್ದು."

"ನಿಮ್ಮ ಸಾಧನೆ ದೊಡ್ಡದು."

"ನೀನು ಕಲ್ಯಾಣನಗರಕ್ಕೆ ಹೊರಟಾಗ ಗೋಡೆಗಳಿಗೆ ಬಣ್ಣಲೇಪನ ನಡೆದಿತ್ತು. ವಿಳಾಸ ಸಿದ್ಧವಾಗಿತ್ತು. ನೀನು ಕೇಳಿ ಬರಕೊಂಡೆ."

"ಅಂದೆನಲ್ಲ, ಕಾಗದ ಕೂಡಾ ಬರೀಲಿಲ್ಲ ಅಂತ. ಅಂತೂ ಭವ್ಯ ವಸತಿ. ಅವತ್ತು ನೀವು ವಿಳಾಸ ಕೊಟ್ಟದ್ದರಿಂದ ನೇರ ಬಂದು ಕರೆಗಂಟೆ ಒತ್ತಿದೆ. ನನ್ನ ದೇವರಿಗೆ ಅದು ಕೇಳಿಸ್ತು."

ಹುಡುಗಿಯತ್ತ ನೋಡಿ,

—"ಚಹಾ" ಅಂದಳು, ಮೃದುಲಾಬೆನ್.

ಆ ಕ್ರಿಯೆ ಮುಗಿದೊಡನೆ ಸೂಚನೆ ಬಂತು ;

"ಆಂಟಿಗೆ ಗೆಸ್ಟ್‌ರೂಮ್ ತೋರಿಸು."

ಹಾಗೆ ಹೇಳಿದವಳು ಮುಂದುವರಿಸಿ ಅಂದಳು ;

"ಬಿಡು ನಾನೇ ಕರಕೊಂಡು ಹೋಗ್ತೀನಿ. ಅವರ ಸಾಮಾನು ಒಯ್ದು ಇಡು. ಬಾ ಪುಟ್ಟ. ಮನೆ ನೋಡುವಿಯಂತೆ."

ಮೂರನೆಯ ಮಹಡಿ. ಲಿಫ್ಟ್‌ನಲ್ಲಿ ಬಂದಿದ್ದಳು ಪುಟ್ಟವ್ವ. ರಸ್ತೆಯಿಂದ ನೋಡಿದಾಗ ಚಿಕ್ಕದಾಗಿ ಕಂಡಿತ್ತು. ಬಿಲದಂತೆ. ವಾಸ್ತವವಾಗಿ ಇದು ಬಿಲವಲ್ಲ, ಹುತ್ತ. ಮೂರು ಬೆಡ್‌ರೂಮ್‌ಗಳು.

"ಇದು ಮಾಸ್ಟರ್ ರೂಮ್. ಅಂದರೆ ನನ್ನದು."

"ನಿಮ್ಮ ಸೋದರಳಿಯ ಇದ್ದನಲ್ಲ ?"

"ಮದುವೆ ಮಾಡ್ಕೊಂಡು ಬೇರೆಯಾದ. ವರ್ಸೋವಾದಲ್ಲಿ ಎರಡು ಬೆಡ್ ರೂಮ್ ಫ್ಲ್ಯಾಟ್ ತೆಗೆಸಿಕೊಟ್ಟಿದ್ದೀನಿ."

ಪುಟ್ಟವ್ವನ ಹೊಟ್ಟೆಯೊಳಗೇನೊ ಕುಟುಕಿದಂತಾಯಿತು. ಮೂರ್ಖಳಂತೆ ಕಲ್ಯಾಣನಗರದ ಮರೀಚಿಕೆಯನ್ನು ಬೆನ್ನಟ್ಟಿದೆ. ಮೃದುಲಾಬೆನ್ ಆ ಕ್ಷಣ ಆ ವಿಷಯವನ್ನು ಕುರಿತೇ—

"ನೀನು ದುಡುಕಿದೆ, ಪುಟ್ಟಾ. ಆ ರಂಗ....ನಾಥ—ಅಲ್ಲ ?"

"....ಸ್ವಾಮಿ."

"ಅವನ ಬಲೆಗೆ ಬಿದ್ದೆ. ಇಲ್ಲೇ ಇದ್ದಿದ್ದರೆ ಈ ವೇಳೆಗೆ ನೀನೂ ಒಂದು

ಫ್ಲ್ಯಾಟ್‌ನಲ್ಲಿರ್ತಿದ್ದೆ........ಇರಲಿ. ನೀನು ಗುಜರಾಥಿ, ಮರಾಠಿ, ಹಿಂದೂಸ್ಥಾನಿ ಮರೆತಿಲ್ಲವಲ್ಲ?"

"ಹೇಗೆ ಮರೆತೇನು ಮೃದುಲಾಬೆನ್ ? ಈ ನೀರು ಕುಡಿದೇ ಅಲ್ಲವಾ ನಾನು ಬೆಳೆದದ್ದು ?"

"ನಿನ್ನ ಕೊಠಡಿ ಹೇಗಿದೆ ? ಅದು ಅಟಾಚ್ಡ್ ಬಾತ್. ಸ್ನಾನಮಾಡಿ ಬಾ. ಊಟ ಆದ್ಮೇಲೆ ಸಂಜೆವರೆಗೂ ನಿದ್ದೆಮಾಡು. ರಾತ್ರೆಯೆಲ್ಲ ನಿನ್ನ ಸಾಹಸದ ಕಥೆ ಹೇಳು."

* * *

ಈ ಪುಟ್ಟ (ವ್ವ) ಹೇಳುವುದೆಲ್ಲ ನಿಜವಾದರೆ, ಇವಳ ಬಗ್ಗೆ ತಾನು ಅಭಿಮಾನ ತಳೆಯಬಹುದು ಎನಿಸಿತು ಮೃದುಲಾಬೆನ್‌ಗೆ. ಮುಂಬಯಿಯ ಬಸಿರಿನಿಂದ ಬಲು ದೂರ ಕಿಷ್ಕಿಂಧೆ. ಸಾವಿರ ಸುಳ್ಳು ಹೇಳಬಹುದು. ಅದು ಹಾಗಲ್ಲ ಹೀಗೆ ಎಂದು ಬೊಟ್ಟು ಮಾಡಿ ತೋರುವವರು ಯಾರಿದ್ದಾರೆ ಇಲ್ಲಿ ?

"ಎರಡು ವರ್ಷಗಳಲ್ಲೇ ಇಪ್ಪತ್ತು ಜಿಲ್ಲಾ ಕೇಂದ್ರಗಳಲ್ಲಿ ಇಪ್ಪತ್ತು ಅನಾಥಾಶ್ರಮಗಳನ್ನು ಸ್ಥಾಪಿಸಿದೆ."

"ಭೇಷಕ್." ಮನಸ್ಸಿನಲ್ಲೆ 'ಇಷ್ಟು ಮಾಡಿಸಲು ಎಷ್ಟು ಜನರಿಗೆ ಸೆರಗು ಹಾಸಿದಳೊ ?'

"ಕಲ್ಯಾಣನಗರದಲ್ಲಿ ಕೇಂದ್ರ ಅನಾಥಾಶ್ರಮ. ಹೊರನಾಡಿನಿಂದ ಬಂದವಳೊಂತ ಒಂದು ಕಷ್ಟ ಕೊಟ್ಟರಪ್ಪಾ."

"ಸಹಜ. ರಾಷ್ಟ್ರೀಯ ಭಾವೈಕ್ಯದ ಮುಖವಾಡದ ಕೆಳಗೆ ಆಗದವರ ವಿರುದ್ಧ ಹಲ್ಲುಮಸೆತ."

"ಜೀವ ತೇದು ನಿಧಿ ಸಂಗ್ರಹಿಸಿದೆ. ಮೊನ್ನೆಯಷ್ಟೆ ಮೂರು ಮಹಡಿ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿಸಿದೆ."

"ಕೋನಶಿಲೆ ಯಾರಿಟ್ಟರು ?"

"ಪ್ರಧಾನಿಯನ್ನೆ ಕರೆಸಬೇಕೂಂತಿದ್ದೆ. ಆದರೆ ಅವರು ಕೊಟ್ಟ ದಿನಾಂಕಗಳು ನಮಗೆ ಸರಿ ಬೀಳಲಿಲ್ಲ. ಹೀಗಾಗಿ—"

"ಸಿ. ಎಂ.ನ್ನ ಕೇಳ್ದೆ, ಅಲ್ವಾ ? ಏನು ಅವನ ಹೆಸರು—ಜಾಣಪ್ಪ ?"

"ಜಾಣಪ್ಪ ನಿಜವಾಗಿಯೂ ದಡ್ಡಪ್ಪ."

ಪದಗಳ ಅರ್ಥವನ್ನು ಹಿಂದೂಸ್ಥಾನಿಯಲ್ಲಿ ತಿಳಿದು, ಮೃದುಲಾಬೆನ್ ನಕ್ಕಳು.

"ಈ ಕನ್ನಡ ಮಜಾಶೀರ ಭಾಷೆ....ಕಟ್ಟಡ ನಿನ್ನ ವಾಸ್ತವ್ಯಕ್ಕೊ ?"

"ಅನಾಥಾಶ್ರಮಕ್ಕೆ. ಮಗ್ಗುಲಲ್ಲೆ ಗೆಸ್ಟ್‌ಹೌಸ್ ಕಟ್ಟಿಸಿ, ಅದರಲ್ಲಿ ನಾನಿರ್ತೇನೆ."

('ನಿನ್ನದು ಗೆಸ್ಟ್‌ರೂಮ್. ನನ್ನದು ಗೆಸ್ಟ್ ಹೌಸ್'—ಪುಟ್ಟವ್ವನ ಒಳದನಿ.)

('ಯಾಕೊ, ಶಂಕೆ. ನನ್ನ ಶಿಷ್ಯೆ ಸುಳ್ಳಾಡುತ್ತಿಲ್ಲವಷ್ಟೆ ? ಹಾಗೆ ನೋಡಿದರೆ ನಾನು ಹೇಳುತ್ತಿರುವುದೆಲ್ಲ ನಿಜವೆ ?'—ಎನಿಸಿತು ಬೆನ್‌ಗೆ.)

ಅವಳು ಕೇಳಿದಳು:

"ನಾನು ಕಲ್ಯಾಣನಗರಕ್ಕೆ ಬಂದರೆ ಆ ಗೆಸ್ಟ್‌ಹೌಸಿನಲ್ಲಿರಿಸ್ತೀಯೊ ?"

"ಕಟ್ಟಡಗಳು ಪೂರ್ತಿಯಾಗಲು ಎರಡು ಮೂರು ವರ್ಷ ಹಿಡಿದೀತು."

"ನನಗೇನೂ ಅವಸರವಿಲ್ಲ. ದಿಲ್ಲಿಯಲ್ಲಿ ನನಗೆ ಪ್ರಭಾವಶಾಲಿ ಸ್ನೇಹಿತರಿದ್ದಾರೆ. ಅವರಿಗೆ ಹೇಳಿ ಕಟ್ಟಡದ ಉದ್ಘಾಟನೆಗೆ ಪ್ರಧಾನಿಯನ್ನೇ ಗೊತ್ತುಪಡಿಸೋಣ."

"ನೀವು ಅಧ್ಯಕ್ಷೆಯಾಗಿ ಬನ್ನಿ."

"ನನ್ನ ದಿನಾಂಕಗಳು ನಿನಗೆ ಸರಿಹೋಗಬೇಕಲ್ಲ ಪುಟ್ಟಾ."

"ಲೇವಡಿ ಮಾಡ್ತಿದೀರಿ. ಅವತ್ತು ಹೇಗೆ ಇದ್ದಿರೋ ಹಾಗೆಯೇ ಇದ್ದೀರಿ ಇವತ್ತೂ."

"ಇಲ್ಲಿಗೆ ಈಗ ನೀನು ಬಂದಿರೋ ಉದ್ದೇಶ ತಿಳೀತು. ಆಶ್ರಮದ ಭವನ ನಿರ್ಮಾಣಕ್ಕೆ ದೇಣಿಗೆ ಕೂಡಿಸಬೇಕು, ಅಲ್ಲವಾ ?"

"ದುರ್ಬೀನು ಹಿಡಿದು ಒಳಗಿನದೆಲ್ಲ ತಿಳಕೊಂಡ್ಬಿಡ್ತೀರಿ ನೀವು!"

"ಬಿಸ್‌ನೆಸ್ ನಾಳೆಗೆ ಇಟ್ಕೊಳ್ಳೋಣ. ಆದರೆ ನೀನು ಸ್ವಲ್ಪ ಸಮಯ ಇಲ್ಲಿರ ಬೇಕಾಗುತ್ತೆ."

"ಧಾರಾಳವಾಗಿ ಇರ್ತೀನಿ. ಒಂದು ತಿಂಗಳು ಸಾಕಾ ?"

"ನಾನೂ ನಿನ್ನ ಜತೆ ಹೊರಟರೆ ಸಾಕಾದೀತು."

"ನಿಮ್ಮನ್ನು ನಂಬಿಯೇ ನಾನು ಇಲ್ಲಿಗೆ ಬಂದಿರೋದು."

"ನೀನು ಹೋದಮೇಲೆ ಮೂವರು ಶಿಷ್ಯೆಯರನ್ನ ತಯಾರು ಮಾಡಿದೆ. ಉತ್ತರ ಪ್ರದೇಶದವರು. ಒಬ್ಬಳು ಅಲಹಾಬಾದಿನಲ್ಲಿದ್ದಾಳೆ. ಇನ್ನೊಬ್ಬಳು ಬಿಹಾರಿನಲ್ಲಿ. ಮೂರನೆಯವಳು ಕಲ್ಕತ್ತೆಯಲ್ಲಿ."

"ಅವರು ನನ್ನ ಹಾಗಲ್ಲ. ಕಾಗದ ಗೀಗದ ಬರೀತಿರಬಹುದು."

"ಅದಕ್ಕೆ ನಾನು ಪ್ರೋತ್ಸಾಹ ಕೊಡೋದಿಲ್ಲ."

"ಸರಿ, ಮತ್ತೆ. ನೀವು 'ಬರಿ ಪುಟ್ಟಾ' ಅಂದಿದ್ದರೆ ರೀಮುಗಟ್ಟಲೆ ಕಾಗದ ಕೊಳ್ತಿದ್ದೆ."

"ಒಂದು ಗೋದ್ರೆಜ್ ಕಪಾಟ ತುಂಬ ಫೋಟೋ ಆಲ್ಬಮುಗಳಿವೆ. ನಿಧಾನ ವಾಗಿ ನೋಡುವಿಯಂತೆ."

"ಹಳೇದು ಕೆಲವು ನಾನು ನೋಡಿರ್ಬೇಕು."

"ನನ್ನ ಅಲ್ಪಾಯು ಕಂದನನ್ನ ಎತ್ಕೊಂಡ ನನ್ನ ಬಾಣಂತಿತನದ ಚಿತ್ರ ನೆನಪಿದೆಯಾ ?"

"ಇದೆ. ನೆನೆಸಿಕೊಂಡಾಗ ಸಂಕಟವಾಗುತ್ತೆ. ಬದುಕಿದ್ದರೆ ಈ ಹೊತ್ತಿಗೆ ಮೂವತ್ತೈದು ವರ್ಷ ಆಗ್ತಿತ್ತು–ಅಲ್ಲವಾ ?"

"ಹೌದು, ಪುಟ್ಟಾ. (ಬಂದ ಉಮ್ಮಳವನ್ನು ಹತೋಟಿಯಲ್ಲಿಡುತ್ತ) ನಿನ್ನ ಆರೋಗ್ಯ ಚೆನ್ನಾಗಿಯೇ ಇದ್ದಂತೆ ಕಾಣ್ತದೆ. ತೊಂದರೆಗಳೇನೂ ಇರ್ಲಿಲ್ವ ?"

"ದೇವರ ದಯದಿಂದ ಇಲ್ಲ, ಮೃದುಲಾಬೆನ್."

"ಮಗುವನ್ನು ಪಡೆದು ಕಳೆದುಕೊಂಡ ನಾನು ನತದೃಷ್ಟೆ. ಅಂಥ ಸಂಕಟಕ್ಕೀಡಾಗದ ನೀನು ಭಾಗ್ಯಶಾಲಿ."

ಮೃದುಲಾಬೆನ್ ಕುಳಿತ ಕಡೆಯಿಂದಲೆ ಗುಂಡಿಯೊತ್ತಿದಳು.

ದೂರದಿಂದ : "ಬಂದೆ, ಮಾಜಿ."

ಕಾಣಿಸಿಕೊಂಡವಳು ಆ ಹುಡುಗಿಯೇ: ಅಂದವಾದ ಮೈಕಟ್ಟು. (ಮುದ್ದಿಸಿ ಬೆಳೆಸಿದಾಳೆ. ವಿವಿಧೋದ್ದೇಶಬಾಲಿಕೆಯೇ. ಸಂದೇಹವಿಲ್ಲ;)

"ಕಿಷ್ಕಿಂಧೆಯವರು ಕಾಫಿ ಜನ. ಮಾಡಿ ತಗೊಂಡ್ಬಾ. ಫಿಲ್ಟರ್ ಬಳಸು."

ತಲೆಯಾಡಿಸಿ ಹುಡುಗಿ ಮಾಯವಾದಳು.

"ಇವಳು ಹತ್ತು ವರ್ಷದವಳಿದ್ದಾಗ ನನ್ನ ಹತ್ತಿರ ಬಿಟ್ಟು ಹೋದರು: ಅನಾಥೆ. ಈ ಐದು ವರ್ಷಗಳಿಂದ ಸಾಕ್ತಾ ಇದೀನಿ. ಆ ಸೋದರಳಿಯ ಬೋ–ಮಗ ಈ ಚಿಕ್ಕವಳ ಜತೆ ಆಟ ಶುರುಮಾಡ್ದ. ಅವನ ಮದುವೆ ಅವಸರದಲ್ಲಿ ಆದದ್ದಕ್ಕೆ ಅದೇ ಕಾರಣ."

"ಬಾಯಿ ಬಿಚ್ಚದಿರಲಿ ಅಂತ ಫ್ಲ್ಯಾಟೂ ಕೊಟ್ಟರಿ."

"ಗುರುವಿಗೆ ತಿರುಮಂತ್ರ ಹೇಳೋ ಜಾತಿ ನಿನ್ನದು."

"ಎಲ್ಲಾ ನಿಮ್ಮ ಆಶೀರ್ವಾದ."

ಹಿರಿಯವಳು ಸಣ್ಣನೆ ನಕ್ಕಳು. ಪ್ರಭೆ ಬೀರುವ ನವರತ್ನಗಳನ್ನು ಕೂಡಿಸಿದ್ದ ಅರ್ಧ ಡಜನ್ ಬಂಗಾರದ ಬಳೆಗಳಿದ್ದ ಬಲಮುಂಗೈ ಜೀವ ತಳೆಯಿತು, ಮುಂಗುರುಳನ್ನು ಹಿಂದಕ್ಕೆ ತಳ್ಳಲು. ಎಡಗೈಯಲ್ಲಿತ್ತು, ಸ್ವರ್ಣಸಂಕೋಲೆಯ ಪುಟ್ಟ ವಾಚು. ಅದರತ್ತ ಅವಳು ದೃಷ್ಟಿ ಹಾಯಿಸಿದಳು.

"ನೀನು ಕಾಂಟಾಕ್ಟ್ ಲೆನ್ಸ್ ಅಂತ ಕೇಳಿದೀಯಾ ?"

"ಹುಡುಗೀರು ಹಾಕ್ಕೋತಾರಂತೆ."

"ದೃಷ್ಟಿದೋಷ ಇರೋರು. ಮುಖ್ಯವಾಗಿ ಇದರ ಅಗತ್ಯ ನನ್ನಂಥವರಿಗೆ. ಹತ್ತಿರ ಬಾ."

ಪುಟ್ಟವ್ವ ಅಕ್ಕನ ಬಳಿ ಸರಿದಳು. ಪ್ರಜ್ಞೆ ಬಂತು.

"ನನ್ನ ಪಾಪೆ ನೋಡು. ಏನಾದರೂ ಕಾಣಿಸ್ತಿದೆಯ ?"

"ನನ್ನ ಮೂತಿ."

"ನಿನ್ನ ತಲೆ. ನನ್ನ ಪಾಪೆಯ ಮೇಲೆ ಲೆನ್ಸ್ ಇದೆ. ಅದು ಹಾಕಿಕೊಂಡರೆ ಕನ್ನಡಕ ಬೇಕಾಗೋದಿಲ್ಲ. ರಾತ್ರೆ ತೆಗೆದಿಡ್ಬೇಕು."

"ಅದಕ್ಕೆ ವಿಶ್ರಾಂತಿ. ರಾತ್ರಿ ಅದರ ಅಗತ್ಯವೂ ಇರೋದಿಲ್ಲ. ಅಲ್ವ ಬೆನ್?"

"ಅದು ಯಾವುದಕ್ಕೋ ಅದರದೇ ಧ್ಯಾನವಂತೆ..."

"ಹೋಗಿ, ಮೃದುಲಾಜಿ."

ಮೂಲೆಯತ್ತ ಬೊಟ್ಟು ಮಾಡಿ ಮನೆಯೊಡತಿ ಅಂದಳು :

"ಅದು ರೆಕಾರ್ಡ್ ಪ್ಲೇಯರ್. ನೂರಾರು ರೆಕಾರ್ಡ್‌ಗಳಿವೆ. ಲತಾದ್ದು ಜಾಸ್ತಿ. ಪೇರಿಸಿ ಇಟ್ಟು ಚಾಲೂ ಮಾಡಿದರೆ ಒಂದರ ಅನಂತರ ಒಂದಾಗಿ ಹಾಡು ಬರ್‍ತಾನೇ ಇರ್ತದೆ."

"ನನ್ನ ಆಶ್ರಮದಲ್ಲಿ ಇದು ಒಂದು ದಿನ ಬಾಳೋದಿಲ್ಲ."

"ಅದು ನಿಜ ಅನ್ನು."

ತನ್ನ ಆಶ್ರಮದ ಮೇಲೆ ಗುಜರಾಥಿನ ಛಾಯೆ ಬಿದ್ದಾಗಲೆಲ್ಲ ಪುಟ್ಟವ್ವನಿಗೆ ಪೂರ್ಣ ಎಚ್ಚರ. ಮುಚ್ಚಿಡಬೇಕಾದ ಎಷ್ಟೊಂದು ಛಿದ್ರಗಳಿವೆ ತನ್ನಲ್ಲಿ! ಇವ ಳಾದರೋ ತನ್ನ ನೂರಾರು ಛಿದ್ರಗಳನ್ನು ಎಷ್ಟೊಂದು ಸೊಗಸಾಗಿ ಮುಚ್ಚಿಕೊಂಡಿ ದ್ದಾಳೆ. ತನಗೀಗ ಶನಿದೆಸೆ ಇದ್ದೀತು. ಪವಾಡ ಪುರುಷರನ್ನು ಮೃದುಲಾಬೆನ್ ಬಹಳ ಬಲ್ಲಳು. ಯಾರಾದರೊಬ್ಬರನ್ನು ತಾನು ನೋಡುವುದೇ ಸರಿ.

ಕಾಫಿ ಬಂತು.

"ಚೆನ್ನಾಗಿದೆ.... ನಿನ್ನ ಹೆಸರೇನು ?"

ಹುಡುಗಿಯ ಬದಲು ಒಡತಿ ಉತ್ತರಿಸಿದಳು :

"ನಾನು ಜುಮ್ಕಿ ಅಂತ ಕರೀತೇನೆ."

"ದಿಲ್ಲಿಯಲ್ಲಿ ಟೆಲಿವಿಷನ್ ಶುರು ಮಾಡಿದಾರಂತಲ್ಲ."

"ಕಳೆದ ಸಲ ಹೋದಾಗ ನೋಡಿದ್ದೆ. 'ದೇವದಾಸ' ಹಾಕಿದ್ರು."

"ದೇವದಾಸ ? ಹಳೇದು ?"

"ಆದರೇನಾಯ್ತು ? ಮನೇಲೆ ಕೂತ್ಕೊಂಡು ನೋಡಬಹುದಲ್ಲ ?"

"ಮುಂಬಯಿ–ಕಲ್ಯಾಣನಗರಕ್ಕೆಲ್ಲ ಬರೋಕೆ ಇನ್ನೆಷ್ಟು ವರ್ಷ ಬೇಕೊ?"

"ನಮ್ಮದು ಬಡದೇಶ ಪುಟ್ಟಾ. ಈ ವ್ಯವಸ್ಥೆಗೆ ಭಾರೀ ದುಡ್ಡು ಅಗತ್ಯ. ವಿದೇಶೀ ಸಾಲ ಪಡೀದೆ ಆಗೋ ಕೆಲಸವೇ ಅಲ್ಲ ಇದು."

"ಬೆನ್, ಇಲ್ಲಿ ಒಂದರ ಕೊರತೆ ಇದೆ ಅನ್ನಿಸುತ್ತೆ."

ಹಿರಿಯವಳ ಹುಬ್ಬುಗಳು ಮೇಲೇರಿದುವು.

"ಫೋನ್."

"ವೇಯಿಟಿಂಗ್ ಲಿಸ್ಟಿನಲ್ಲಿದೀನಿ. ಕಮಿಟಿ ಸದಸ್ಯರಿಗೆ ಹೇಳಿ ಆಗಿದೆ. ಒಬ್ಬರು ಮೇಯರ್, ಇನ್ನೊಬ್ಬರು ಎಂ. ಪಿ. ಬೇಗನೆ ಆದೀತು. ಸದ್ಯಕ್ಕಂತೂ ಎದುರು

ಫ್ಲ್ಯಾಟಿನಲ್ಲಿದೆ. ಅಗತ್ಯವಿದ್ದಾಗ ಹೋಗಿ ರಿಂಗ್ ಮಾಡ್ತೀನಿ. ಹೊರಗಿನವರಿಗೆ ಮಾತ್ರ ಆ ನಂಬರ್ ಕೊಟ್ಟಿಲ್ಲ. ನಿಮ್ಮಲ್ಲಿ ?"

"ವೇಯಿಟಿಂಗ್ ಲಿಸ್ಟ್ !"

ಬೆನ್ ನಕ್ಕಳು.

"ಬಾಲ್ಕನಿಗೆ ಹೋಗೋಣ."

ಜುಮ್ಕಿ ಯಾವ ಪರದೆಯ ಮರೆಯಲ್ಲಿದ್ದಳೊ ? ಓಡಿ ಬಂದು ಫ್ಯಾನ್ ಅರಿಸಿದಳು. ಮುಂದುಗಡೆಯ ಗಗನಚುಂಬಿಯ ಕೃಪೆಯಿಂದ ಇಲ್ಲಿ ನೆರಳಿತ್ತು. ತಣ್ಣನೆಯ ಗಾಳಿ ಸಂದಿಗೊಂದಿಗಳೆಡೆಯಿಂದ ಅತ್ತ ಸುಳಿಯತೊಡಗಿತ್ತು.

ಪ್ಲಾಸ್ಟಿಕ್ ಹೆಣಿಗೆಯ ಕುರ್ಚಿಗಳು.

"ಇದು ಹೊಸ ಫ್ಯಾಶನ್, ಪುಟ್ಟಾ."

"ನನಗೆ ತಿಳೀದಾ ? ಮುಂಬಯಿಯಲ್ಲಿ ಪ್ರತಿ ದಿನವೂ ಹೊಸ ಫ್ಯಾಶನ್ನೇ !

"ಈ ಕಟ್ಟಡಕ್ಕೆ ಲಿಫ್ಟ್ ಹಾಕೋದಕ್ಕೆ ಜಾಗಬಿಟ್ಟಿದ್ದಾರೆ."

"ವೇಯಿಟಿಂಗ್ ಲಿಸ್ಟ್‌ನಲ್ಲಿದೆ ಬಹುಶಃ !"

"ಹೌದು. ಸದ್ಯ : ನನ್ನದು ಮೂರನೇ ಮಹಡಿ. ಹತ್ತೋದು ಇಳಿಯೋದು ಕಷ್ಟವಾಗೋದಿಲ್ಲ."

"ಈ ಭವನಕ್ಕೆ 'ಸೇವಾ' ಅಂತ ಹೆಸರಿಡಿಸಬೇಕೂಂತ ಬಹಳ ಪ್ರಯತ್ನ ಪಟ್ಟೆ. ಆಗಲಿಲ್ಲ."

"ಆ ಜನ ಒಪ್ಪಿದ್ದರೆ ಚೆನ್ನಾಗ್ತಿತ್ತು."

"ನಿರ್ಮಾಣ ಸಂಘದ ಸಮಿತಿಯಲ್ಲಿ ನನ್ನ ಬೆಂಬಲಿಗರೂ ಇದ್ದಾರೆ. ಆದರೆ ಹೆಸರಿನ ವಿಷಯದಲ್ಲಿ ಸರ್ವಾನುಮತ ಬೇಕೂಂತ ನಿಬಂಧನೆ ಇದೆ. ನನ್ನ ಬಾಗಿಲಿಗೆ 'ಸೇವಾ' ಅಂತ ಪ್ಲೇಟ್ ಹೊಡಿಸ್ತೀನಿ ಅಂದೆ. ಸಮಸ್ಯೆ ಬಗೆಹರಿಸಿದಿರೀಂತ ನನ್ನನ್ನು ಹೊಗಳಿದರು. ನನ್ನ ವಿಷಯದಲ್ಲಿ ಅವರಿಗೆ ಗೌರವ."

"ನಿರ್ಮಾಣವೆಚ್ಚ ಒಂದು ಲಕ್ಷ ಆಗಬಹುದೂಂತ ಆಗ ಹೇಳಿದ್ದೀರಿ. ಅಲ್ಲವೆ ಬೆನ್ ?"

"ಏನು ನೆನಪೇ ನಿನ್ನದು ! ಒಂದು ಹತ್ತುಸಾವಿರ ಹೆಚ್ಚಾಯ್ತು. ಈಗ ಇದರ ಬೆಲೆ ಐದುಲಕ್ಷ. ಇನ್ನು ಪ್ರತಿ ವರ್ಷ ಮೌಲ್ಯ ಹೆಚ್ಚುತ್ತಾ ಹೋಗ್ತದೆ."

"ನಿಮಗೆ ನೂರು ವರ್ಷ ಆದ್ಮೇಲೆ ಇದನ್ನೇನು ಮಾಡ್ತೀರಾ ?"

"ನೂರಿಪ್ಪತ್ತೈದು ಆದಮೇಲೆ ಸೇವಾಸದನ ರಾಷ್ಟ್ರಕ್ಕೆ ಅರ್ಪಿತವಾಗಲೂ ಬಹುದು. ರಾಷ್ಟ್ರವಲ್ಲವೆ ನಮ್ಮೆಲ್ಲರ ತಾಯಿ ತಂದೆ ?"

"ಆಸ್ತಿ ಮುಂದಿನ ಪೀಳಿಗೆಗೆ ಹೋಗ್ತದೆ ಅಂತ ಕೇಳಿದ್ದೆ."

"ಸಾಕು ಈ ಮಾತು. ಸದ್ಯಕ್ಕಂತೂ ನೀನು ನನ್ನ ದೃಷ್ಟಿಯ ಮುಂದಿಲ್ಲ !"

"ನನ್ನದು ಬೋಳು ಹಣೆ. ಇದರಲ್ಲಿ ಲಿಪಿ ಇಲ್ಲ."

"ನನ್ನದರಲ್ಲಿ ಇತ್ತು, ಸೋಪು ತೀಡಿ ತೊಳೆದು ಬಿಟ್ಟಿದ್ದಾರೆ...."

ಆ ಮಾತು, ಈ ಮಾತು, ಅವರು, ಇವರು. ಪುಟ್ಟವ್ವ ಅಂದುಕೊಂಡಳು: ವಯಸ್ಸಿನ ಪ್ರಭಾವ ಇರಬೇಕು ; ಇವಳ ಆಲೋಚನಾಶಕ್ತಿ ಮತ್ತೆಮತ್ತೆ ಬಾಲ್ಯದತ್ತ ಯೌವನದತ್ತ ಜಾರು ಬಂಡೆಯಾಟ ಆಡುತ್ತಿರುತ್ತದೆ.

ಬೆನ್‌ಗೆ ಅನಿಸಿತು : 'ನನ್ನ ಸಾಧನೆ ಕಂಡು ಇವಳಿಗೆ ಹೊಟ್ಟೆಯುರಿ. ಎದೆ ಬಲಿಯಿತು. ಉರುಳಿಯೇ ಬಿಟ್ಟಳು. ನನ್ನ ಆಪ್ತ ಕಾರ್ಯದರ್ಶಿಯಾಗಿ ಇಲ್ಲಿಯೇ ಇರಬಹುದಾಗಿತ್ತು. ದೊಡ್ಡದಲ್ಲ. ಹೇಳಿದ್ದರಲ್ಲಿ ಕಾಲಂಶವಾದರೂ ನಿಜವಾದರೆ ಇವಳು ಸಮರ್ಥೆಯೇ ಸರಿ....'

"ಪುಟ್ಟಾ, ನಾನು ರಾತ್ರಿ ಊಟ ಬಿಟ್ಟಿದೀನಿ. ಒಂದು ಚಪಾತಿ ಮಾತ್ರ. ನಿನಗೆ ಏನು ಮಾಡಿಸೋಣ ?"

"ನನಗೂ ಒಂದು ಚಪಾತಿ ಸಾಕು."

"ಮಲಗುವ ಮುನ್ನ ಒಂದು ಲೋಟ ಹಾಲು ಕುಡೀತೇನೆ."

"ಹಾಲು ನನಗೂ ಇಷ್ಟ."

"ಒಂದಿಷ್ಟು ಬಾದಾಮಿ."

ಪುಟ್ಟವ್ವನ ಸಹನೆ ಬಿರಿಯಿತು.

"ಬೇಡ ! ಬೇಡ ! ಬೇಡ !"

"ಹೌದು, ಪುಟ್ಟಾ. ನೀನು ನನಗಿಂತ ಚಿಕ್ಕವಳು. ನಿನಗೆ ಯಾಕೆ ಬಾದಾಮಿಯ ಅಧಿಕ ಶಕ್ತಿ ?"

"ಇವತ್ತು ನನಗೆ ಆಯಾಸವಾಗಿದೆ. ಬೇರೆ ಮಾತೇನಿದ್ದರೂ ನಾಳೆ."

"ಹಾಗೇ ಆಗಲಿ. ಒಳಗೆ ಹೋಗೋಣ. ಜುಮ್ಕಿ ಆಗಲೇ ದೀಪ ಹಾಕಿದ್ದಾಳೆ."

ಏಳುತ್ತ,

"ಶಿವ ಶಿವ."

"ರಾಮ್ ರಾಮ್."

೩

ಮಾರನೆಯ ಬೆಳಗ್ಗೆ ಎದುರು ಫ್ಲ್ಯಾಟಿನ ಬಾಗಿಲ ಗುಂಡಿಯೊತ್ತಿ ಮೃದುಲಾ ಬೆನ್ "ತೊಂದರೆ ಕೊಡ್ತೀನಿ, ಕ್ಷಮಿಸಿ." ಎಂದು ರಾಗವೆಳೆದಳು.

"ಯಾರು ?" ಎಂದಿತೊಂದು ಗೊಗ್ಗರ ಧ್ವನಿ ಫೋನಿನ ಇನ್ನೊಂದು ಕೊನೆಯಿಂದ.

"ವಿನೋದ್ ?"

"ಹ್ಞಾ."

"ನಾನು ಮೃದುಲಾ."

"ರಾತ್ರಿ ಡ್ಯೂಟಿಯಿತ್ತು. ನಿದ್ರೆ ಕೆಡಿಸಿದಿರಿ."

"ಪುನಃ ಮಲಗ್ಬೇಡ. ಬ್ರೇಕ್‌ಫಾಸ್ಟ್‌ಗೆ ಇಲ್ಲಿಗೇ ಬಾ. ಸ್ವಲ್ಪ ಅರ್ಜೆಂಟ್ ಕೆಲಸ ಇದೆ."

"ಸಂಜೆ ಬಂದರೆ ಸಾಲದಾ ?"

"ಈಗಲೇ ಬಾ ವಿನೋದ್. ಪ್ಲೀಸ್."

"ಇನ್ನು ಹತ್ತು ಮಿನಿಟ್ನಲ್ಲಿ ಹೊರಟೆ. ಬ್ರೇಕ್‌ಫಾಸ್ಟ್ ಮರೀಬೇಡಿ."

"ಟ್ಯಾಕ್ಸೀಲಿ ಬಾ. ಬಾಡಿಗೆ ನನ್ನ ಲೆಕ್ಕಕ್ಕೆ."

ರಿಸೀವರ್ ಕೆಳಗಿಟ್ಟ ಸದ್ದು. ಫ್ಲ್ಯಾಟ್ ನಿವಾಸಿಗಳು ಬಿಹಾರಿನ ಪಾಂಡೆ ದಂಪತಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪಾಂಡೆ ಅಧಿಕಾರಿ. ಅದು ಬ್ಯಾಂಕಿನ ಫೋನು. ಬಿಲ್ ಸಂದಾಯದ ತೊಂದರೆ ಇರಲಿಲ್ಲ. ಆದರೂ ಶ್ರೀಮತಿ ಪಾಂಡೆ ಗೊಣಗಿದ್ದಳು : "ಆ ಹೆಂಗಸಿನ ನಡತೆ ಒಂದು ಥರಾ ಇದೆ ಅಂದ್ರೆ," ಆತ ಹೇಳಿದ್ದ: "ನೀನು ಅಸೂಯೆ ಪಡುವಂಥದು ಅವಳಲ್ಲಿ ಏನೂ ಇಲ್ಲ. ವಾರಕ್ಕೆ ಒಂದೆರಡು ಸಲ ಪರವಾಗಿಲ್ಲ ಅಂತ ಸೂಚನೆ ಕೊಡು. ಪ್ರಭಾವಶಾಲೀ ಹೆಂಗಸು. ಸ್ನೇಹವೂ ಬೇಡ , ವೈರವೂ ಬೇಡ."

ಒಂದು ವಾರ ಬಿಟ್ಟು ಶ್ರೀಮತಿ ಪಾಂಡೆ ಹೇಳಿಯೇಬಿಟ್ಟಳು :

"ಹೋದ ಕ್ವಾರ್ಟರಿನ ಬಿಲ್ಲು ಭಾರಿ ಅಂತ ಆಡಿಟ್ ಆಕ್ಷೇಪ ಬಂತಂತೆ. ವಾರಕ್ಕೊಮ್ಮೆ ಎರಡು ಸಲ ಪರವಾಗಿಲ್ಲ ಬಹೆನ್‌ಜಿ."

ಭಾರಿ ಬಿಲ್ಲಿಗೆ ಕಾರಣ ಬಿಹಾರಿನ ಬಂಧುಗಳಿಗೆ ಇಲ್ಲಿಂದ ಪದೇ ಪದೇ ಮಾಡುತ್ತಿದ್ದ ಟ್ರಂಕ್ ಕಾಲು.

ಇವರ ದುರ್ದಾನವೇ ಬೇಡ: ರಸ್ತೆಯಾಚೆಗಿನ ಪಬ್ಲಿಕ್‌ಕಾಲ್ ಬೂತಿಗೆ ಹೋಗುವುದೆ ಸರಿ ಎನಿಸಿತು. ಆದರೆ, ಅನಿಸಿಕೆಗೆ ಅಪಜಯವಾಯಿತು. "ಆಗಲಿ ಮಿಸೆಸ್ ಪಾಂಡೆ. ವಾರಕ್ಕೆ ಎರಡೇ ಸಲ," ಎಂದಳು.

ಹತ್ತಿರದಲ್ಲೇ ಹಿತ್ಮೆಷಿಯೊಬ್ಬರ ಮನೆ ಇತ್ತು. ವಾರಕ್ಕೆ ನಾಲ್ಕಾರು ಬಾರಿ ಅಲ್ಲಿಗೆ ಹೋಗಿ, ದೊಡ್ಡ ಪಟ್ಟಿಯನ್ನೆ ಮುಂದಿಟ್ಟುಕೊಂಡು ಫೋನ್ ವ್ಯವಹಾರ ಗಳನ್ನೆಲ್ಲ ಮುಗಿಸುತ್ತಿದ್ದಳು ಮೃದುಲಾಬೆನ್. ಟೆಲಿಫೋನ್ ಸಂಭಾಷಣೆ ಒಂದೆರಡು ಸಲ ಬಹಳ ದೀರ್ಘವಾಯಿತು. ಎರಡು ಫೋನ್‌ಗಳಿದ್ದರೂ ಒಡೆಯರಿಗೆ ಕಿರಿಕಿರಿ ಯಾಗಿತ್ತು. ಇಂಪಾದ ಸ್ವರದಲ್ಲಿ ಅವರೆಂದಿದ್ದರು: "ಮೃದುಲಾಜಿ, ಫೋನ್ ಮಾಡೋದು ಒಂದು ಕಲೆ. ವೃಥಾ ಒಂದು ಪದವೂ ನಮ್ಮ ಬಾಯಿಯಿಂದ ಜಿನುಗ ಬಾರದು; ಕೇಳುವವರ ಕಿವಿಯೊಳಕ್ಕೆ ಧುಮುಕಬಾರದು. ಚುಟುಕಾದಷ್ಟೂ ಚೆಂದ. ಮಾತು ಮಾಣಿಕ್ಯ ಅನಿಸೋದು ಹಾಗೆ."

ಉಗುಳು ನುಂಗಿ ಮೃದುಲಾಬೆನ್ ಅಂದಳು:

"ವರ್ತಕ ಚಕ್ರವರ್ತಿಯಾದ ನೀವು ಹಾಗೆ ಹೇಳೋದು ಸಹಜ. ಫೋನ್ ಒಂದು ಸಲ ಟ್ರಿಣ್ ಅನ್ನೋದರೊಳಗೆ ಒಂದು ಲಕ್ಷ ಈಚೆಗೆ ಬಂದಿರ್‍ತದೆ."

ಹಿತ್ಮೆಷಿ ವಿಧುರ. ಮಗಳು ಗಂಡನ ಮನೆಗೆ ತೆರಳಿದ್ದಳು. ಮೃದುಲಾಳನ್ನು ಕೆಂಗಣ್ಣಿನಿಂದ ನೋಡುವವರು ಇಲ್ಲಿ ಯಾರೂ ಇರಲಿಲ್ಲ.

ಮೃದುಲಾ ಒಲವಿನ ನೋಟ ಬೀರಿ ಮುತ್ತು ಉದುರಿಸಿದಳು.

"ಇನ್ನೂ ಒಂದು ಕಾರಣಕ್ಕೆ ಚುಟುಕು ಸಂಭಾಷಣೆ ಮೇಲು. ಮಿಗಿತಾಯ ವಾಗೋ ವೇಳೇಲಿ ಬೇರೇನಾದರೂ ಮಾಡಬಹುದು."

"ಹೊತ್ತುಗೊತ್ತು ಒಂದೂ ಇಲ್ಲದ ತುಂಟಾಟ ನಿನ್ನದು."

* * *

ಮೃದುಲಾಬೆನ್ ವಿನೋದ್‌ಗೆ ಕಿಷ್ಕಿಂಧೆಯ ಸಮಾಜ ಸೇವಾ ಧುರೀಣೆಯ ಪರಿಚಯ ಮಾಡಿಕೊಟ್ಟಳು. "ನನ್ನ ಶಿಷ್ಯೆ" ಎಂದಳು.

ವಿನೋದನೆಂದ:

"ಹಿಂದೆ ಯಾವತ್ತೋ ಒಮ್ಮೆ ಇವರ ವಿಷಯ ಹೇಳಿದ್ದಿರಿ."

ನಾಚಿದ ಪುಟ್ಟವ್ವ ಸೆರಗು ಸರಿಪಡಿಸಿಕೊಂಡಳು.

ಆವನು ತಲೆಗೆ ಬಳಿದಿದ್ದ ದ್ರಾವಕದಲ್ಲಿ ಕಪ್ಪು ಬಣ್ಣ ಮತ್ತು ಅಂಟು ಬೆರೆತಿರ ಬೇಕು. ಯೌವನದ ಧಾರಾಳ ಭ್ರಮೆ. ಒಂದು ದಶಕದ ಹಿಂದೆ ಮೃದುಲಾಳ ಕೇಶ ರಾಶಿಯಲ್ಲಿ ಅಲ್ಲೊಂದು ಇಲ್ಲೊಂದು ಕೂದಲು ಬಿಳಿಯಾಗಿತ್ತು. ಮೂಲದಿಂದಲೆ

ಕತ್ತರಿಸಿ ತೆಗೆಯಲು ಆಗ ಪುಟ್ಟವ್ವ ನೆರವಾಗಿದ್ದಳು. ಈಗ ಅವಳ ತಲೆಯಲ್ಲಿ ಬಿಳಿಯ ಸುಳಿವೇ ಇಲ್ಲ. (ದ್ರಾವಕ ?) ಅಲ್ಲೊಂದು ಇಲ್ಲೊಂದು ಬಿಳಿಯ ಸುಳಿದಾಟಕ್ಕೆ ಈಗ ತನ್ನ ತಲೆ ಬಲಿ.

ಮೃದುಲಾ ಯಾವುದೇ ಕೆಲಸ ಕೈಗೊಂಡರೂ ಜಟ್‌ಪಟ್ ಎಂದು ಅದು ಕೊನೆ ಗಾಣಲೇಬೇಕು.

ಉಪಾಹಾರಕ್ಕೆ ಎಲ್ಲರೂ ಒಟ್ಟಿಗೆ ಕುಳಿತಾಗ ಮೃದುಲಾಬೆನ್ ಅಂದಳು:

"ವಿನೋದ್ ಟೈಮ್ಸ್‌ನಲ್ಲಿ ಪ್ರಧಾನ ಉಪ ಸಂಪಾದಕ. ಇವನ ಹುಟ್ಟೂರು ಅಹಮದಾಬಾದ್. ನನ್ನನ್ನು ಒಡಹುಟ್ಟಿದ ಅಕ್ಕ ಅಂತ ಗೌರವಿಸ್ತಾನೆ. ಬರೆವಣಿಗೆಯ ಎಷ್ಟು ಕೆಲಸವಿದ್ದರೂ ಇವನಿಗೆ ತೊಂದರೆ ಕೊಡ್ತೀನಿ. ಇನ್ನು ಹೆಚ್ಚು ದಿವಸ ಒಂಟಿ ಯಾಗಿರಬೇಡ ಅಂತ ಹೇಳಿದೀನಿ. ಒಪ್ಪಿದಾನೆ. ವಧು ಪರೀಕ್ಷೆ ನಡೀತಾನೇ ಇದೆ. ಐದಾರು ವರ್ಷಗಳಿಂದ."

ಗೂಢಾರ್ಥ ಅಂಗೈರೇಖೆಯಂತೆ ಸ್ಪಷ್ಟವಾಗಿತ್ತು. ಪುಟ್ಟವ್ವ ವಿನೋದನೆಡೆ ನೋಡಿ ಕಣ್ಣು ಮಿಟುಕಿಸಿದಳು. ಅವನ ತುಟಿಗಳು ಮುಗುಳುನಗೆ ಸೂಸಿದುವು. ಇದನ್ನು ಗಮನಿಸಿದ ಮೃದುಲಾಬೆನ್ ತುಸು ಮುಖ ಬಾಗಿಸಿ ಸದ್ದು ಮಾಡದೆ ನಕ್ಕಳು.

"ಪುಟ್ಟವ್ವ ಬಂದಿದಾಳೇಂತ ಮದರಾಸಿ ಇಡ್ಲಿ ಮಾಡಿಸಿದೆ."

ಮೃದುಲಾ ಅಂದುದಕ್ಕೆ ಅತಿಥಿ ಆಕ್ಷೇಪಿಸಿದರು :

"ಕಲ್ಯಾಣನಗರದ ಇಡ್ಲಿ ಅನ್ನಿ."

"ಸರಿ. ಇದು ತಮಿಳರೂ ಕನ್ನಡಿಗರೂ ಹೋರಾಡಿ ಇತ್ಯರ್ಥ ಮಾಡಬೇಕಾದ ವಿವಾದ."

ವಿನೋದನೆಂದ :

"ಏನೇ ಹೇಳಿ, ದಕ್ಷಿಣದವರು ಬುದ್ಧಿವಂತರು."

"ಬಾಪೂನಾಡಿನ ನೀನು ಹೀಗೆ ಹೇಳಬಾರದು."

"ಬಾಪೂನೆ ಅಲ್ಲವಾ ರಾಜಾಜಿ ಬೀಗತನಕ್ಕೆ ಒಪ್ಪಿದ್ದು ?"

ಕೈಬಾಯಿಗಳಿಗೆ ದುಡಿಮೆ. ನಡುನಡುವೆ ಮಾತು.

ವಿನೋದ ನುಡಿದ :

"ಅಕ್ಕನಿಗೆ ಗೊತ್ತು. ರಾಷ್ಟ್ರೀಯ ಭಾವೈಕ್ಯ ನನಗೆ ಬಹಳ ಪ್ರಿಯವಾದ ವಿಷಯ."

"ಆ ಸಂಬಂಧವಾಗಿಯೇ ನಿನ್ನನ್ನು ಇಲ್ಲಿಗೆ ಕರೆಸಿದ್ದು."

"ಭಾವೈಕ್ಯ."

"ದೇಶದ ಎಲ್ಲ ಪ್ರಾಂತಗಳನ್ನೂ–ರಾಜ್ಯಗಳಲ್ಲೂ–ಪ್ರತಿಯೊಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಒಂದೊಂದುಗಾಂಧೀ ಅನಾಥಾಶ್ರಮ. ಭಾರತೀ ಅನಾಥಾಶ್ರಮ. ಅಂತ ಬೇಕಾದರೂ ಕರೀಬಹುದು. ನಿನಗೆ ಬಿಟ್ಟಿದ್ದೇವೆ."

"ದಶಲಕ್ಷದಲ್ಲಿ ಆಗುವಂಥಾದ್ದಲ್ಲ. ದಶಕೋಟಿ ಲೆಕ್ಕಾಚಾರ."

"ಮುಂಬಯಿ, ದಿಲ್ಲಿ, ಕಲ್ಕತ್ತೆ, ಹೈದರಬಾದು, ಮದರಾಸು, ಕಲ್ಯಾಣನಗರಗಳಲ್ಲಿ ಹತ್ತುಕೋಟಿ ಕೂಡಿಸೋದಕ್ಕಾಗೋದಿಲ್ಲ ಅಂತೀಯಾ ?"

"ಐದು ವರ್ಷ ದುಡಿದರೆ ಆದೀತು."

ಪುಟ್ಟವ್ವ ದನಿಗೂಡಿಸಿದಳು ;

"ಪಂಚವಾರ್ಷಿಕ ಯೋಜನೆ !"

"ಮಾತು ಆರಂಭವಾದದ್ದು ಕಿಷ್ಕಿಂಧೆಯ ಜಿಲ್ಲೆಗಳಲ್ಲಿ ಒಂದೊಂದು ಅಂತ. ಈಗ ಇಡೀ ದೇಶವನ್ನೇ ಕಬಳಿಸಿದ್ದೇವೆ."

"ನೂರು ಕಾರ್ಯಕರ್ತೆಯರು ದೇಶಸಂಚಾರ ಮಾಡಬೇಕು."

—ಅಷ್ಟು ಹೇಳಿ, ಬೃಹತ್ ಪ್ರಮಾಣದ ಆ ಚಟುವಟಿಕೆಯನ್ನು ಚಿತ್ರಿಸಿಕೊಳ್ಳುತ್ತ ವಿನೋದ ಕಾಫಿ ಹೀರಿದ.

ಪುಟ್ಟವ್ವ ಒದ್ದಾಡಿದಳು. ಹಿಂದಿನ ರಾತ್ರಿ ಮಲಗಿದೊಡನೆ ನಿದ್ದೆಯ ಆಳಕ್ಕೆ ಇಳಿದಿದ್ದಳು. ಬೆಳಗ್ಗೆ ಬೇಗನೆ ಎಚ್ಚರವಾಗಿತ್ತು. ಹೊರಗೆ ಉಷಃಕಾಲದ ಮಬ್ಬು ಬೆಳಕು. ಕಿಟಿಕಿಯ ಬಳಿ ನಿಂತು ಯೋಚಿಸಿದಳು. ನಿಜ ಸಂಗತಿಯನ್ನು ಮೃದುಲಾಬೆನ್‌ಗೆ ಹೇಳಬೇಕೆ ? ಬೇಡವೆ ? ಸಂಕಟದಿಂದ ಪಾರಾಗಿ ಬಂದೆ. ಅಪಾಯ ಇನ್ನೂ ಹೆಡೆಯಾಡಿಸುತ್ತಿತ್ತು. ಆದರೂ ಅಕ್ಕನ ಹಿತವಚನ ತನಗೆ ಸಂಜೀವನಿ. ನಿಧಿಸಂಗ್ರಹದ ಮಾತು ಬಂದಿತ್ತು. ಇದೇನು ಪುನರ್ಜನ್ಮವೆ ತನಗೆ ? ಕಡಲಿನಲ್ಲಿ ಹೊಯ್ದಾಟಗಳಿದ್ದರೇನಾಯಿತು? ನಾವೆ ಸುರಕ್ಷಿತವಾಗಿರಬೇಕಾದುದಲ್ಲವೆ ಮಹತ್ವದ್ದು? ನಾವಿಕನಿಲ್ಲದ ನಾವೆ. ಮತ್ತೆ ದಡ ಸೇರುವೆನೊ ಇಲ್ಲವೊ ?

ಆದರೆ ಬೆಳಕು ಹರಿದು ಸ್ವಲ್ಪ ಹೊತ್ತಾದೊಡನೆಯೆ ಮೃದುಲಾಳ ಕಾರ್ಯವಿಧಾನ ತನ್ನ ಕಣ್ಣುಗಳೆದುರು ಕೋರೈಸಿದ ಮಿಂಚಾಯಿತು. ಈಗ ವಿನಾಯಕ—ವಿನೋದನಾಯಕ—ಬಂದೇ ಬಿಟ್ಟಿದ್ದಾನೆ, ವಿನಂತಿಪತ್ರ ರಚನೆಗೆ ವಿವರ ಸಂಗ್ರಹಿಸಲು. ಕಿಷ್ಕಿಂಧಾಕಾಂಡ ತನ್ನ ಬೆನ್ನು ಬಿಡದ ಭೇತಾಳ. ಕಲ್ಯಾಣನಗರದಲ್ಲೆ ಆಗಬೇಕಲ್ಲವೆ ತನ್ನ ಕಲ್ಯಾಣ ?

"ವಿನೋದ್, ನಿಧಿಸಂಗ್ರಹ ತಂಡಕ್ಕೊಬ್ಬ ಸಂಪರ್ಕಾಧಿಕಾರಿಬೇಕು. ಹೋದಲ್ಲೆಲ್ಲ ಪತ್ರಿಕಾಗೋಷ್ಠಿ ಇತ್ಯಾದಿ ಕೆಲಸಗಳಿರ್ತವೆ. ಸಾಕಷ್ಟು ಯುವಕನಾಗಿರಬೇಕು : ನಡೆ ಚೆನ್ನ, ನುಡಿ ಚೆನ್ನ..."

"ನಾನು ಆಗಬಹುದಾ ? ನಡತೆ ಬಗ್ಗೆ ಸೆಕ್ಯೂರಿಟಿ ಕೊಡ್ತೀನಿ."

"ಸಹಾಯಕ ಸಂಪಾದಕ ಹುದ್ದೆಗೆ ಹತ್ತಿರ ಬಂದಿದೀಯಾ....ಹುಡುಗಿಯರು ಯಾವಾಗಲೂ ಇರ್ತಾರೆ. ಮೊದಲು ನಿನ್ನ ಸ್ಥಾನ ಭದ್ರ ಮಾಡಿಕೊ."

"ಅಪ್ಪಣೆ! ಮನವಿ ಇತ್ಯಾದಿ ಸಿದ್ಧವಾದ ಮೇಲೆ ನೀವೊಂದು ಪತ್ರಿಕಾಗೋಷ್ಠಿ ಕರೀಬೇಕು."

ತನ್ನೊಳಗಿನ ತಾಕಲಾಟ ಇತರರಿಗೆ ತಿಳಿಯಬಾರದೆಂದು ಪುಟ್ಟವ್ವ ಮುಗುಳು

ನಗೆಯ ಮುಖವಾಡ ಧರಿಸಿದಳು, ಮೃದುಲಾಬೆನ್ ಜತೆ ತಾನೂ ಇರುವ ಪತ್ರಿಕಾ ಗೋಷ್ಠಿಯ ಸುದ್ದಿ ದೇಶದ ಹಲವು ಪತ್ರಿಕೆಗಳಲ್ಲಿ ಬಂದೀತು. ರಾಷ್ಟ್ರ ವ್ಯಾಪ್ತಿಯ ಖ್ಯಾತಿ. ಆದರೆ ಕಲ್ಯಾಣನಗರದಲ್ಲಿ ಯಾರಾದರೂ ಅದನ್ನು ಓದಿದರೊ ? ಇದು ದಾರಿ ಹಿಡಿದ ಮಾರಿಗೆ ಅವಿವೇಕಿ ನೀಡುವ ಅಹ್ವಾನ. ಇವತ್ತು ಸಂಜೆಯೇ ಒಂದೆರಡು ಮುಖ್ಯ ವಿಷಯ ತಿಳಿಸಬೇಕು....

*　*　*

ಆ ಸಂಜೆ ಬಾಲ್ಕನಿಯಲ್ಲಿ ಕುಳಿತಾಗ ಮೃದುಲಾಬೆನ್ ಕೇಳಿದಳು :

"ಬೆಳಗಿನಿಂದೀಚೆಗೆ ಸ್ವಲ್ಪ ಸಪ್ಪಗಿದೀಯಲ್ಲ ಪುಟ್ಟಾ ?"

"ಅಕ್ಕನಿಂದ ಮುಚ್ಚು ಮರೆಯಾಕೆ ? ನಾನು ಇಲ್ಲಿಗೆ ಹೊರಟುದಕ್ಕೆ ಮುನ್ನ ಕಿಷ್ಕಿಂಧೆಯಲ್ಲಿ ಸ್ವಲ್ಪ ಗದ್ದಲವಾಯ್ತು."

"ಹಾಗಾದರೆ, ತಕ್ಷಣವೆ ಅಲ್ಲಿಗೆ ಹಿಂತಿರುಗಿ ಹೋಗಬಾರದು."

"ನನ್ನ ಉತ್ಕರ್ಷ ನೋಡಿ ಕರುಬಿದ ಕೆಲವು ಜನ ಹೊಸ ಆಡಳಿತ ಸಮಿತಿ ಬೇಕು ಅಂತ ಹಟ ಹಿಡಿದು—"

"ಗೊತ್ತಾಯ್ತು ಬಿಡು. ನಾನು ಅನುಭವಿಸದ್ದೆ ಇದೆಲ್ಲ ? ಸುಳ್ಳು ಆರೋಪ ಹೊರಿಸಿ ನೀನು ಆಶ್ರಮ ಬಿಡುವ ಹಾಗೆ ಮಾಡಿದ್ರು. ಈಗ ನಿನ್ನ ತೋಳುಗಳಲ್ಲಿ ಬಲವರ್ಧನೆಯಾಗ್ಬೇಕು. ನಿನ್ನ ಸಾಮರ್ಥ್ಯ ಸದ್ಗುಣಗಳನ್ನ ಬಣ್ಣಿಸಿ ಒಂದೆರಡು ಪತ್ರಿಕೆಗಳಲ್ಲಿ ಪರಿಚಯ ಲೇಖನಗಳನ್ನು ಬರೆಸುವುದು ಕಷ್ಟದ ಕೆಲಸವೇನಲ್ಲ. ಆದರೆ ಕಿಷ್ಕಿಂಧೆಯವರ ಕೈಗೆ ಆ ಸಂಚಿಕೆಗಳು ಸಿಗಬಾರದು."

"ಭಾರತೀ ಅನಾಥಾಶ್ರಮ ನಿಮ್ಮ ಅದ್ಭುತ ಕಲ್ಪನೆ. ಆ ಯೋಜನೆಯನ್ನು ಕಾರ್ಯಗತಗೊಳಿಸುವವರು ನೀವು. ಸ್ವಲ್ಪ ಕಾಲ ನಾನು ಮರೆಯಲ್ಲಿರೋದು ಅಗತ್ಯ."

ಪುಟ್ಟವ್ವನನ್ನೆ ನೋಡುತ್ತ ಕೆಲ ನಿಮಿಷ ಮೌನವಾಗಿದ್ದು ಮೃದುಲಾಬೆನ್ ಅಂದಳು :

"ನಿನ್ನ ಶ್ರೇಯಸ್ಸು ನನಗೆ ಮುಖ್ಯ. ಯೋಜನೆಯನ್ನ ಹಂತಗಳಲ್ಲಿ ಪೂರೈಸೋಣ. ಜಿಲ್ಲೆಗೊಂದು ಅನಾಥಾಶ್ರಮ ಐದು ವರ್ಷ ಕಳೆದ ಮೇಲೆ. ಈ ಅವಧಿಯಲ್ಲಿ ಪ್ರತಿ ರಾಜ್ಯದ ರಾಜಧಾನಿ ಯಲ್ಲೊಂದು ಸಾಕು. ಕೆಲವು ಹೆಸರು ಹೇಳಿ, ಮುಂತಾದ ರಾಜ್ಯ ರಾಜಧಾನಿಗಳಲ್ಲಿ ಎಂದರೆ ಸರಿ. ಕಲ್ಯಾಣನಗರದ ಪ್ರಸ್ತಾಪ ಬೇಡ. ಅಖಿಲ ಭಾರತ ಭಾರತೀ ಅನಾಥಾಶ್ರಮ ಸಮಿತಿಗೆ ಮೊದಲ ಅಧ್ಯಕ್ಷೆ ನಾನು. ನನ್ನ ಉತ್ತರಾಧಿಕಾರಿ ನೀನು. ಸದ್ಯಕ್ಕೆ ನನ್ನ ಸಹಾಯಕಿಯಾಗಿರುವಂತೆ ಅಲಹಾಬಾದಿನಿಂದ ಕರುಣಾದೇವೀನ ಕರೆಸ್ತೀನಿ. ಇಪ್ಪತ್ತು ಸ್ವಯಂಸೇವಕಿಯರು ಸಾಕು. ನಗರದಲ್ಲಿ ನೀನೂ ನನ್ನ ಜತೆ ನಿಧಿ ಸಂಗ್ರಹಕ್ಕೆ ಬಾ. ಪತ್ರಿಕಾಗೋಷ್ಠಿಯಲ್ಲಿ

ನೀನು ಭಾಗವಹಿಸೋದು ಬೇಡ. ಫೋಟೋ ತೆಗೆದಾಗ ಅದರಲ್ಲಿ ನೀನೂ ಕಾಣಿಸಿಕೊಂಡರೆ—"

"ನಿಜ ಬಹೆನ್‌ಜಿ. ನಿಮ್ಮದು ಅಪಾರ ಜ್ಞಾನ. ನಾನು ಇಲ್ಲೇ ಇದ್ದು ನಿಮ್ಮಿಂದ ಇನ್ನೂ ಎಷ್ಟೋ ಕಲಿಯಬೇಕಾಗಿತ್ತು. ನನಗೆ ಆತುರ ಜಾಸ್ತಿ."

"ಯೌವನದಲ್ಲಿ ಹತ್ತು ವರ್ಷ ನಾನು ತಿಂದದ್ದನ್ನೇ ನೀನೂ ತಿಂದು ಬೆಳೆದಿದ್ದೀಯ. ನಮ್ಮಿಬ್ಬರಲ್ಲೂ ಇರೋದು ಒಂದೇ ಶಕ್ತಿ—ಆದಿಶಕ್ತಿ. ನಿಧಿಯ ಗುರಿ ಐವತ್ತು ಲಕ್ಷ ಸಾಕು. ಮುಂಬಯಿಯ ಸಂಗ್ರಹ ಆದೊಡನೆ ಎರಡು ಲಕ್ಷ ಕೊಡ್ತೇನೆ. ಇಲ್ಲಿಂದ ಎಲ್ಲಿಗೆ ಪ್ರಯಾಣ ಬೆಳೆಸ್ತೀಯ ?"

"ಕಲ್ಯಾಣನಗರದಲ್ಲೊಬ್ಬ ಯುವಕ ಸ್ವಾಮಿ ಇದ್ದಾರೆ. ಅವರನ್ನು ಕಂಡಿದ್ದೆ. ತಮ್ಮ ಗುರುಗಳಲ್ಲಿಗೆ ನಾನು ಹೋಗಬೇಕೂಂತ ಅವರ ಅಪೇಕ್ಷೆ. ಜಗದಲಪುರದಲ್ಲಿದ್ದಾರೆ. ಧರ್ಮೇಂದ್ರ ಬಾಬಾ ಅಂತ."

"ಓ ! ಧರ್ಮೇಂದ್ರ ಬಾಬಾ ! ಕೇಳಿದ್ದೇನೆ. ಕೇಳಿದ್ದೇನೆ. ದೇಶದ ಒಂದೊಂದು ರಾಜ್ಯದಲ್ಲಿ ಒಂದೊಂದು ಮಠ ಸ್ಥಾಪನೆ ಅವರ ಅಪೇಕ್ಷೆ. ಮಠಾಧೀಶರಿಗೆ ತರಬೇತಿ ನೀಡಿ ದೀಕ್ಷೆ ಕೊಡ್ತಿದಾರಂತೆ."

"ಹೌದು, ಬಲ್ಲೆ."

"ಪುಣ್ಯವಂತೆ ನೀನು. ಎರಡು ಲಕ್ಷ ರೂಪಾಯಿ ಜತೆ ಬಾಬಾರಲ್ಲಿಗೆ ಹೋಗು. ಅವರು ನಿನಗೆ ಮಾರ್ಗದರ್ಶನ ಮಾಡ್ತಾರೆ. ಏಳು, ನಡೆ. ವಿನೋದ್‌ಗೆ ನನ್ನ ಹಿತೈಷಿ ಮನೆಯಿಂದ ಫೋನ್ ಮಾಡೋಣ. ಯೋಜನೆಗೆ ವೈಜ್ಞಾನಿಕ ರೂಪ ಕೊಟ್ಟದ್ದನ್ನು ಆತನಿಗೆ ಈಗಲೆ ತಿಳಿಸಬೇಕು. ಮೃದುಲಾಬೆನ್ ಹೊರತರುವ ವಿನಂತಿ ಪತ್ರ ಈಗ ಸ್ವಲ್ಪ ಚುಟುಕಾಗಿರ್‍ತದೆ."

"ನನ್ನ ವಿಷಯ..."

ಆತನಿಗ್ಯಾಕೆ ಅದೆಲ್ಲ ? ಕಿಷ್ಕಿಂಧೆಯ ಹೊರಗಿನ ಜವಾಬ್ದಾರಿ ನಿನ್ನಿಂದಾಗೋದಿಲ್ಲ ಎಂದರಾಯ್ತು. ರವಿವಾರ ಅವನಿಗೆ ರಜಾ. ರಾತ್ರಿ ಊಟಕ್ಕೆ ಕರೀತೀನಿ. ವಿನಂತಿ ಪತ್ರದ ಡ್ರಾಫ್ಟ್ ತಗೊಂಡ್ಬಾ ಅಂತಲೂ ಹೇಳ್ತೀನಿ. ಆಗ ಚೆನ್ನಾಗಿ ಪರಿಚಯ ಮಾಡ್ಕೊಳ್ಳಿ.

ರವಿವಾರಕ್ಕೆ ಇನ್ನೆಷ್ಟು ದಿನ ಉಳಿಯಿತು ಎಂದು ಪುಟ್ಟವ್ವ ಲೆಕ್ಕ ಹಾಕಿದಳು.

ಮೃದುಲಾ ಮತ್ತು ಪುಟ್ಟವ್ವ ಹಿತೈಷಿ ಮಹಾನುಭಾವರ ಮನೆಗೆ ಹೋಗುತ್ತಿದ್ದಂತೆ, ಕಾರು ಹಿತ್ತಿಲಿನಿಂದ ರಸ್ತೆಗಿಳಿಯಿತು. ಮಹಿಳಾ ಮಣಿಗಳನ್ನು ಕಂಡೊಡನೆ ನಿಂತಿತು. ಅವಸರದಲ್ಲಿ ಯಜಮಾನರು ಅಂದರು :

"ಬಹೆನ್‌ಜಿ, ಅರ್ಧ ಘಂಟೇಲಿ ಬಂದ್ಬಿಡ್ತೀನಿ. ಅಷ್ಟರೊಳಗೆ ನಿಮ್ಮ ಕಾಲ್‌ಗಳನ್ನೆಲ್ಲ ಮುಗಿಸಿ."

"ಆಗಲಿ, ಆಗಲಿ" ಎಂದಳು ಮೃದುಲಾಬೆನ್.

ಕಾರು ಮುಂದುವರಿಯಿತು. ಅವತ್ತು ದೊಡ್ಡ ಪಟ್ಟಿಯ ದಿನವಲ್ಲ. ಪುಟ್ಟ ಪುಸ್ತಕವಿತ್ತು. ವಿನೋದ್ ಕಾರ್ಯಾಲಯಕ್ಕೆ ಬಂದಿರಲಿಲ್ಲ.

"ಬರುವ ಹೊತ್ತಾಯ್ತು."

ಮೃದುಲಾ ನಂಬರ್ ಕೊಟ್ಟಳು.

"ಅವರ ಸ್ನೇಹಿತರು. ಕಾಯ್ತಿರ್ತೀವಿ."

ಕೆಲ ಮಿನಿಟುಗಳಲ್ಲೆ ರಿಂಗ್ ಬಂತು. ವಿನೋದ್ ತನ್ನ ಸ್ಥಾನಕ್ಕೆ ಬಂದಿದ್ದ. ಮೃದುಲಾಬೆನ್ ಹೇಳಿದ್ದನ್ನೆಲ್ಲ ಕೇಳಿದ ಬಳಿಕ ವಿನೋದ್ ಅಂದ :

"ಹಾಗಾದರೆ ಯೋಜನೆಯೆಲ್ಲ ಪೂರ್ತಿ ನಿಮ್ಮದೇ, ಇದು ಕ್ಷಿಪ್ರಕ್ರಾಂತಿ ಇದ್ದ ಹಾಗಿದೆ !"

"ಪುಟ್ಟ ಇಲ್ಲೇ ಇದ್ದಾಳೆ. ಅವಳೊಂದು ರತ್ನ. ಕಿಷ್ಕಿಂಧೆಯಲ್ಲಿ ಅವಳಿಗೆ ಬಿಡುವಿಲ್ಲದ ಕೆಲಸ."

"ಸರಿ."

ರವಿವಾರ ರಾತ್ರಿಯ ಊಟಕ್ಕೆ ಆಹ್ವಾನ.

"ಉಪಕೃತ" ಎಂಬ ನಾಜೂಕಿನ ಪ್ರತಿಮಾತು ಅತ್ತಣಿಂದ.

....ರವಿವಾರದ ವಿಶೇಷ ಊಟದ ವಿಷಯ ತಿಳಿದು ಜುಮ್ಮಿ ಸಂತೋಷಪಟ್ಟಳು. ಒಂದು ದಿನ ವಿನೋದ್‌ಕಾಕ ಮಾಜಿಯ ಎದುರಲ್ಲೇ ತನ್ನ ನಡುವನ್ನು ಸುತ್ತುವರಿದು ತಬ್ಬಿಕೊಂಡಿದ್ದ. ಮಾಜಿಯ ಅಪ್ಪುಗೆಗಿಂತ ಅದು ಭಿನ್ನವಾಗಿತ್ತು. ನೆನಪಾದಾಗಲೆಲ್ಲ ಮತ್ತೆಮತ್ತೆ ಬೇಕು ಎನಿಸುತ್ತಿತ್ತು. ಆದರೆ ಮಾಜಿ ಗದರಿಸಿದ್ದರು—ತನಗೂ ವಿನೋದ್ ಕಾಕನಿಗೂ. ವಿನೋದನಿಗೆ ಹೊರಹೋಗುತ್ತಿದ್ದಂತೆ ; "ಜುಮ್ಮಿ ಇನ್ನೂ ಸ್ವಲ್ಪ ಬೆಳೀಲಿ, ವಿನೋದ್, ಯಾಕೆ ಅವಸರ ?" ತನಗೆ ಆ ರಾತ್ರಿ ಶಯ್ಯಾಗೃಹದಲ್ಲಿ, ದೀಪ ಆರಿಸಿದ ಬಳಿಕ : "ಹಾಗೆಲ್ಲ ಮಾಡೋದಕ್ಕೆ ಅವನಿಗೆ ಸಲಿಗೆ ಕೊಡ್ಬೇಡ. ನಂಬಬಾರದು ಈ ಗಂಡಸು ಜಾತೀನ."

"ಹಾಗೇ ಆಗಲಿ, ಮಾಜಿ. ನಂಬೋದಿಲ್ಲ, ಮಾಜಿ."

* * *

ವಿಶೇಷ ಅಡುಗೆ ಅಲ್ಲವೆ ?

"ವಿನೋದ್‌ಗೆ ತಂದೂರಿ ಚಿಕನ್ ಇಷ್ಟ."

ಅದು ಒಂದು ಮೈಲು ದೂರದಲ್ಲಿದ್ದ ಮೇಲ್ದರ್ಜೆಯ ಹೋಟಲಿನಿಂದ ಬಂತು.

ಬೇರೆ ರಸಗವಳವೆಲ್ಲ ಜುಮ್ಮಿಯದು. ಮೃದುಲಾ ಆಗಾಗ್ಗೆ ಅಡುಗೆಮನೆಗೆ ಬಂದು, ರುಚಿನೋಡಿ, ಉಸ್ತುವಾರಿ ನಡೆಸಿದಳು.

ಪುಟ್ಟವ್ವ ತೊಟ್ಟಿಲು ತೂಗಿದವಳೂ ಅಲ್ಲ; ಸೌಟು ಹಿಡಿದವಳೂ ಅಲ್ಲ. ಅವಳು ಆಗಾಗ್ಗೆ ಗೊಣಗುತ್ತಿದ್ದಳು :

"ಈ ಸಮಾಜಸೇವೆಯಿಂದಾಗಿ ನಳಪಾಕದ ಪದವಿ ನನಗೆ ದಕ್ಕಲಿಲ್ಲ."

ಇವತ್ತು ಹೀಗೆ ಹೇಳುವಂತಿಲ್ಲ. ಹೇಳಿದರೆ ಮೃದುಲಾ ಛೇಡಿಸುತ್ತಿದ್ದಳು.

"ಮೈ ಬಗ್ಗದ ಸೋಮಾರಿ."

....ಸಂಜೆ, ವಿನೋದ್ ಬಿಸಿಬಿಸಿ ಸಿಹಿ ಕಟ್ಟಿಸಿಕೊಂಡು ಬಂದ.

ಮೃದುಲಾ ಅಂದಳು :

"ಡಬ್ಲ್ ಸಿಹಿ. ನೀನೊಂದು, ಇದೊಂದು."

ಜುಮ್ಕಿ ನಕ್ಕಳು. ಹಾಗೆ ನಕ್ಕು, ಮಾಜಿಯ ಬಯ್ಗುಳಿಂದ ಪಾರಾಗಲು ಅಡುಗೆ ಮನೆಯ ರಕ್ಷಣೆ ಪಡೆದಳು. ಮೃದುಲಾ ಅವಳನ್ನು ಕರೆದು ಅಂದಳು :

"ಮೀರಾಭಜನ್ ಜೋಡಿ ರೆಕಾರ್ಡರ್ ಚಾಲೂ ಮಾಡು."

ಜುಮ್ಕಿ ಯಾರ ಕಡೆಗೂ ನೋಡದೆ ಆಣತಿ ಈಡೇರಿಸಿದಳು. ಪಿಸುದನಿಯ ಶ್ರೇಣಿಯಲ್ಲಿ ಲತಾ ಮಂಗೇಶ್ಕರ್ ಮೀರೆಯಾದಳು. ವಾತಾವರಣ ನಿರ್ಮಾಣಕ್ಕೆ ಭಜನೆಯ ಗುಂಯಾರವ. ಮಾಜಿಯ ಕಲಾಭಿರುಚಿಯ ವೈಖರಿಯನ್ನು ಬಲ್ಲವಳು ಜುಮ್ಕಿ.

ವಿನೋದ್ ಮನವಿ ಪತ್ರವನ್ನೋದಿದ.

ಪುಟ್ಟವ್ವ ಅಂದಳು :

"ಬಹೆನ್‌ಜಿ ಜತೆ ನಾನೂ ಇದಕ್ಕೆ ಸಹಿ ಹಾಕ್ತಿಲ್ಲ ಅಂತ ಬೇಸರ. ಭಾರತೀ ಅನಾಥಾಶ್ರಮದ ಈ ಸಲದ ಶೃಂಖಲೆಗೆ ಮೃದುಲಾಬೆನ್ ಒಬ್ಬರೇ ಕೀರ್ತಿಭಾಜನರು. ಮುಂದೆ ನನ್ನದೇನಾದರೂ ಯೋಜನೆ ಇದ್ದಾಗ ನೇರವಾಗಿ ಇಲ್ಲಿಗೆ ಬರ್ತೇನೆ, ನಿಮಗೆ ತೊಂದರೆ ಕೊಡ್ತೇನೆ, ವಿನೋದ್ ಭಯ್ಯ."

"ಸುಸ್ವಾಗತ, ಸದಾ, ಸರ್ವದಾ."

"ದೇಣಿಗೆಗೆ ವರಮಾನ ತೆರಿಗೆವಿನಾಯಿತಿ ಕೊಟ್ಟೇ ಕೊಡ್ತಾರೆ."

"ಮೊದಲು ಲೆಟರ್ ಹೆಡ್ಸ್. ವರಮಾನ ತೆರಿಗೆ ಕಮಿಶನರ್‌ರೊಂದಿಗೆ ಪತ್ರ ವ್ಯವಹಾರ. ವಿನಂತಿಪತ್ರದಲ್ಲಿ ವಿನಾಯತಿ ಅನುಜ್ಞೆಯ ಸೇರ್ಪಡೆ. ಒಂದೊಂದು ಲಕ್ಷ ಕೊಡುವವರ ಎಂಟು ಹತ್ತು ಹೆಸರುಗಳು ವಿನಂತಿ ಪತ್ರದಲ್ಲಿರಬೇಕು."

ಮೃದುಲಾಬೆನ್ ಮೀರೆಯ ಭಜನೆಗೆ ಅಡ್ಡಿಯಾಗಬಾರದೆಂದು, ಮೇಜನ್ನು ಮೆಲ್ಲನೆ ತಟ್ಟಿ ಅಂದಳು :

"ಭೇಷ್ ವಿನೋದ್ ! ಮುದ್ರಣದ ಜವಾಬ್ದಾರಿ ನಿನ್ನದು. ಒಂದು ವಾರದಲ್ಲಿ ಎಲ್ಲ ಸಿದ್ಧವಾಗಬೇಕು. ಇನ್ನೊಂದು ವಾರದಲ್ಲಿ ಕರುಣಾ ಬಂದ್ಬಿಡ್ತಾಳೆ."

"ಅವಳೇ ಕಾರ್ಯದರ್ಶಿ ಅನ್ನಿ," ಎಂದ ವಿನೋದ. ಅವನ ದೃಷ್ಟಿಯಲ್ಲಿ ಕರುಣಾ ಜಂಭದ ಕೋಳಿ. ಅವಳೊಡನೆ ವಿನೋದನ ಸ್ನೇಹ ಅಲ್ಪಾಯುವಾಗಿತ್ತು. ಬೇರೆ ಇಬ್ಬರು ಹುಡುಗಿಯರು ಅವನಿಗಿಷ್ಟ. ಆದರೆ ಒಪ್ಪಬೇಕು. ಕರುಣಾಳಲ್ಲಿ ರೂಪದ ಜತೆಗೆ ಚುರುಕು ಮೆದುಳೂ ಇತ್ತು.

ಇದು ಪುಟ್ಟವ್ವನ ರಾತ್ರೆ, ತನ್ನದಲ್ಲ. ವಿನೋದನನ್ನು ಚುಚ್ಚಿ ತಾನು ಸಂತೋಷ ಪಡಬೇಕೆಂದೇ ಮೃದುಲಾ ಕರುಣಾಳ ವಿಷಯ ಪ್ರಸ್ತಾಪಿಸಿದ್ದಳು. ಹೊಸ ಯೋಜನೆಯನ್ನು ಕಾರ್ಯಗತಗೊಳಿಸಲು ಅವಳ ನೆರವು ಬೇಕೆಂಬುದಂತೂ ನಿಜಸಂಗತಿ.

ಮಾತು ಮಾತು ಮಥನಿಸಿ ಮುಗಿದಿತ್ತು ಮೀರಾಭಜನೆ.

ಜುಮ್ಮಿ ಕೇಳಿದಳು : "ಶಹನಾಯ್ ಮಾಜಿ ?"

"ಹ್ಞಾ. ಅದರ ಹಿಂದೆ ರವಿಶಂಕರ್ ಇಟ್ಟಿಡು."

ಶಹನಾಯ್ ನಿನದಿಸಿದಂತೆ ತಾಟುಗಳು ಮೇಜಿನತ್ತ ಬಂದವು. ಈಗ ಜುಮ್ಮಿಯೇ ಸೇವಿಕೆ.

"ಮಾಜಿ...."

"ಬಡಿಸು... ವಿನೋದ್, ಜುಮ್ಮಿ ಸಪ್ಪಳ ಮಾಡ್ತಿದಾಳೆ. ಇನ್ನು ನಾವು ಅವಳ ಆಜ್ಞಾನುವರ್ತಿಗಳು."

ವಿನೋದ ನಿರ್ಲಿಪ್ತ ನೋಟದಿಂದ ಜುಮ್ಮಿಯನ್ನು ದಿಟ್ಟಿಸಿದ. ಒಂದೆರಡು ಅಂಗುಲ ಎತ್ತರ ? ಸ್ವಲ್ಪ ತುಂಬಿಲ್ಲವೆ ವಕ್ಷಸ್ಥಲ ?

"ರುಚಿವರ್ಧಕ ?"

ಮಾಜಿಯ ಸನ್ನೆಯನ್ನು ಅರ್ಥಮಾಡಿಕೊಂಡು ಜುಮ್ಮಿ ಸೇವಕಿಯಾದಳು. ವಿನೋದನಿಗೆ ವ್ಹಿಸ್ಕಿ. ಲಲನೆಯರಿಗೆ ಶಾಂಪೇನ್.

ವಂತಿಗೆಗಾಗಿ ಮೃದುಲಾ ಮತ್ತು ಕರುಣಾ ಕೈಜೋಡಿಸಬೇಕಾದ ಕುಳಗಳು.

ಒಂದೊಂದು ಲಕ್ಷದ ಮಾತು ಕೇಳಿಸಿದಾಗ ಪುಟ್ಟವ್ವ ವಿಸ್ಮಿತಳಾಗಿದ್ದಳು. ಈಗ ಸ್ಪಷ್ಟವಾಯಿತು.

"ಲಿಫ್ಟಿನ ಮೇಲ್ಗಡೆ ಒಬ್ಬಿಬ್ಬರು ಘನ ನಾಮಧೇಯರು."

"ಅರ್ಥವಾಯ್ತೆ ಪುಟ್ಟಾ ? ಅವರು ಲಕ್ಷವೂ ಕೊಡಬಹುದು ; ಭಿಕ್ಷವೂ ನೀಡಬಹುದು."

(ತಾನು ಕಿಷ್ಕಿಂಧೆಯಲ್ಲಿ ಶಾಂಪೇನ್ ಪಾರ್ಟಿ ಎಂದು ಕೊಟ್ಟೇನು ? ಕಾಸು ಬಿಚ್ಚದೆಯೆ ಲಕ್ಷಾಧಿಪತಿ ಎನಿಸಿಕೊಳ್ಳುವುದಲ್ಲವೆ ನಿಜವಾದ ಸಿರಿವಂತಿಕೆ ?)

ಕುಡಿತದಲ್ಲಿ ಎಲ್ಲರೂ ಇತಿಮಿತಿಯವರು. ಬೇರೆ ದಿನವಾಗಿದ್ದರೆ, ಬಿಲ್ ಎಷ್ಟೇ ಆದರೂ ಕೊಡಬಲ್ಲ ಧನಿಕನೂ ಬಳಗದಲ್ಲಿದ್ದರೆ, ವಿನೋದ ಹಿಂದು ಮುಂದೆ ನೋಡುತ್ತಿರಲಿಲ್ಲ. ಆದರೆ ಇವತ್ತಲ್ಲ.

"ನಿಮ್ಮಲ್ಲಿ ಕಪಿಗಳು ಜಾಸ್ತೀನ ಬಹೆನ್ ?"

"ಹೌದು, ವಿನೋದ್ ಭಯ್ಯ. ಆದಿಕವಿ ವಾಲ್ಮೀಕಿ ಸುಳ್ಳು ಹೇಳ್ತಾನ ?"

('ಕಿಷ್ಕಿಂಧೆಯಲ್ಲಿ ವಿನೋದನಿಗೆ ಸೋಲಾದರೆ ಕಪಿಗಳು ಕೇಕೆಹಾಕಿ ನಗಬಹುದು' —ಮೃದುಲಾ.)

ರೆಕಾರ್ಡ್ ಪ್ಲೇಯರ್ ಕರ್ ಕರೆಂದಿತು. ಈಗ ಜುಮ್ಮಿ ಚಿಗರೆ. ಸಿತಾರ್ ನಿದ್ದೆ ಹೋಯಿತು.

ಅವರು ಸೋಫಾಗಳತ್ತ ಸಾಗಿದರು.

ಜುಮ್ಮಿ ವಿನೋದ್ ಭಯ್ಯನಿಗೆ 555 ಬ್ರಾಂಡಿನ ಸಿಗರೇಟು ತಂದುಕೊಟ್ಟಳು.

ಮೃದುಲಾಬೆನ್ ರಾಣಿಯಾದಳು :

"ಜುಮ್ಮಿ, ಟೇಬಲ್ ಸ್ವಚ್ಛಮಾಡಿ ನೀನು ಊಟ ಮುಗಿಸು."

"ಹ್ಞಾ. ಮಾಜಿ."

ಗಡಿಯಾರ ನೋಡಿ ವಿನೋದನೆಂದ :

"ಒಂಭತ್ತು ಹದಿನೈದು. ನ್ಯೂಸ್ ಆಗ್ಹೋಯ್ತು."

"ನಿನಗೆ ನ್ಯೂಸಿನ ಹುಚ್ಚು. ರೇಡಿಯೊ ಹಾಕಲಾ ?"

"ಬೇಡ."

ಪುಟ್ಟವ್ವ ಅಂದಳು :

"ನಾನು ಜುಮ್ಮಿ ವಿಷಯ ಯೋಚಿಸ್ತಿದ್ದೆ...."

ಮೃದುಲಾ ಆ ಮಾತನ್ನು ತುಂಡರಿಸಿದಳು :

"ಅಡುಗೆ ರುಚೀದ್ದು ತಾನೆ ? (ಹುಡುಗಿ ಅಡುಗೆಮನೆಯಲ್ಲಿ ಉಣ್ಣುತ್ತಿರುವ ಳೆಂಬುದನ್ನು ಖಚಿತಪಡಿಸಿಕೊಂಡು) ತಬ್ಬಲಿ ಹುಡುಗಿ ಇಲ್ಲಿಗೆ ಬಂದಾಗ ಒಡ್ಡು ಒಡ್ಡಾಗಿದ್ಲು. ಅವಳನ್ನು ತಿದ್ದಿ ಈ ಸ್ಥಿತಿಗೆ ತಂದೆ."

"ನೀವು ಮುಟ್ಟಿದ್ದು ಚಿನ್ನವಾಗ್ತದೆ ಮೃದುಲಾಬೆನ್." ಎಂದಳು ಪುಟ್ಟವ್ವ.

....ಜುಮ್ಮಿ ಮಲಗುವ ಕೊಠಡಿಗಳಲ್ಲಿ ನೀರಿಟ್ಟಳು. ಅವಳು ಬಲ್ಲಳು : ಈ ರಾತ್ರೆ ಹಾಲು ಇಡಬೇಕಾದುದಿಲ್ಲ.

ವಿನೋದ ಮನೆಗೆ ಹೊರಡಲಿಲ್ಲ. ಇವನೂ ಗೆಸ್ಟ್‌ರೂಮಿಗೆ. ಓಹೋ ! ಜುಮ್ಮಿ ಬಾಲ್ಕನಿಗೆ ಹೋದಳು.

ವಿನೋದ 'ಗುಡ್‌ನೈಟ್' ಹೇಳಲು ಮೃದುಲಾಳ ಶಯ್ಯಾಕೊಠಡಿಗೆ ಹೋಗಿ ದೀಪ ಆರಿಸಿ, ಮೃದುಲಾಗೆ ಮುತ್ತಿಟ್ಟ.

"ನೀನು ಒಳ್ಳೆಯವನು. ಇನ್ನು ಹೋಗು" ಎಂದಳು ಭಾರತಿ ಅನಾಥಾಶ್ರಮ ಪ್ರತಿಷ್ಠಾನದ ಸಂಚಾಲಕಿ. ಮತ್ತೆ ಸ್ವಿಚ್ ಹಾಕಿ, ವಿನೋದ ಅತಿಥಿಗಳ ಕೊಠಡಿಗೆ ನಡೆದ. ಬಾಲ್ಕನಿಯ ಬಾಗಿಲು ಹಾಕಿ ಒಳದಿಕ್ಕಿಗೆ ಬರುತ್ತಿದ್ದ ಜುಮ್ಮಿ ಸಿಕ್ಕಿದಳು. ಮುತ್ತು ಕೊಟ್ಟು ಬಾಯಿ ಮುಚ್ಚಿ ಅಂಗಾಂಗಗಳ ಮೇಲೆ ಕೈ ಆಡಿಸಿದ.

ಒಳಗಿನಿಂದ ಮಾಜಿಯ ಸ್ವರ ಕೇಳಿಸಿತು : "ಜುಮ್ಮ್ಯಾ ! ಬಾ ಇಲ್ಲಿ."

"ಬಂದೆ, ಮಾಜೀ.*

ಸ್ವರ ಯಾಕೋ ಒಂದು ಥರಾ ಇದೆಯಲ್ಲ ಎಂದು, "ಎಲ್ಲಿದೀಯಾ ?" ಎಂದಳು ಒಡತಿ.

"ಬಂದೆ."

"ಮುಖ ತೊಳ್ಕೊಂಡು ಬಾ. ನಿದ್ದೆ ಬರ್‍ತಿದೆ."

ಆ ರಾತ್ರೆ ಅಲ್ಲಿಯೇ ಶಯನ.

ಅತಿಥಿಗಳ ಕೊಠಡಿಯಲ್ಲಿ ಒಂದು ಮಂಚದ ಮೇಲೆ ಕಳ್ಳನಿದ್ದೆಯ ಸುಂದರಿಯಾಗಿದ್ದಳು ಪುಟ್ಟವ್ವ. ಮೃದುಲಾಬೆನ್ ಕೊಟ್ಟಿದ್ದ ಬಿಳಿಯ ಹೌಸ್‌ಕೋಟ್. ಹಳೆಯದು? ಈ ಚಿತ್ತಾರ? ಇಲ್ಲಿ ತನ್ನ ಪಾಲಿಗಂತೂ ಇದು ಹೊಸದು. ವಿನೋದ ದೀಪ ಆರಿಸಿ, ಇಬ್ಬರೂ ಪೂಸಿಕೊಂಡಿದ್ದ ಸುಗಂಧ ದ್ರವ್ಯಗಳ ಕಲಹದಲ್ಲಿ ಮೈ ಮರೆಯಲು ಅಣಿಯಾದ.

೪

ಕರುಣ ಬಂದಳು. 'ಮೃದುಲಾ' ನಿಧಾನವಾಗಿ 'ಮೃದುಲಾ ಮಾಯಿ' ಆದಳು. "ಹಲವು ಜನ್ಮಗಳ ಪುಣ್ಯ ಫಲವಿರಬೇಕು ನೀನು ನನಗೆ ಶಿಷ್ಯೆಯಾಗಿ ದೊರೆತಿರೋದು" ಎಂದಳು ಹಿರಿಯವಳು ಕರುಣಾಗೆ.

"ಎಲ್ಲಾ ಸರಿ ಮಾಯಿ. ಆದರೆ ಈ ವಿನೋದನನ್ನ ಕಂಡರೆ ನನಗೆ ಸಿಟ್ಟು ಬರುತ್ತಲ್ಲ ?"

"ರಾಜಿಗಳ ನೂರು ಕೊಂಡಿ ಇಲ್ಲದೆ ಯಾವ ಜೀವನವೂ ಸುಗಮವಾಗೋದಿಲ್ಲ. ಹಿಂದಿನದನ್ನು ಮರೆತುಬಿಡು. ಅವನೀಗ ಸಭ್ಯ ಯುವಕ. ಆತನಿಗೆ ಸದ್ಯದಲ್ಲೇ ಭಡತಿಯಾಗ್ತದೆ. ಇನ್ನು ಐದು ವರ್ಷಗಳಲ್ಲಿ 'ಟೈಮ್ಸ್' ಪತ್ರಿಕೆಗೆ ಸಂಪಾದಕನಾದರೂ ಆದನೇ."

"ಆಗಲಪ್ಪ. ಅವನಿಗೆ ಪ್ರಧಾನ ಸಂಪಾದಕ ಅಂತ ಕಿರೀಟಧಾರಣೆ ಆದರೂ ಅವನ ಬಗ್ಗೆ ನನ್ನ ನಿಲುವು ಬದಲಾಗೋದಿಲ್ಲ."

"ನೀನು ಹಟಮಾರಿ. ಈಗ ಯಾಕೆ ಹೇಳ್ಲಿ ? ಕ್ರಮೇಣ ನಿನಗೇ ಗೊತ್ತಾಗುತ್ತೆ..." ಎಂದು ಮೃದುಲಾ ನಗುತ್ತ ಅಂದಳು.

ಮಾರನೆಯ ದಿನ ವಿನೋದ ಬಂದಾಗ ಕರುಣಾ "ಸಲಾಂ, ಎಡಿಟರ್ ಸಾಬ್" ಎಂದಳು.

ಆತ ಬಲ ಬೆರಳುಗಳನ್ನು ಮೂರು ಬಾರಿ ತುಟಿಗಳಿಗೆ ಮುಟ್ಟಿಸುತ್ತ ಅಂದ :

"ಆಲೇಕುಮ್ ಸಲಾಂ."

ಪುಟ್ಟವ್ವ ಸಣ್ಣನೆ ನಕ್ಕಳು. ಈ ಮನೆಯಲ್ಲಿ ತಾನು ಮೂಲೆಗುಂಪಾಗುತ್ತಿದ್ದೇನೆ ಎನಿಸಿತು ಅವಳಿಗೆ.

....ವಿನಂತಿಪತ್ರ ಅಚ್ಚಾಗಿ ಬಂತು. ಸೊಗಸಾದ ಮುದ್ರಣ.

"ಬಿಲ್ ಸಂದಾಯ ಆಮೇಲೆ ಅಂತ ಹೇಳಿದೇನೆ."

ಮೃದುಲಾ ಕರುಣಾಗೆ ಒಂದನ್ನು ಕೊಟ್ಟಳು. ಎರಡು 'ಸಹಿ'ಗಳು : ಮೃದುಲಾ ಬೆನ್ ಮತ್ತು ಕುಮಾರಿ ಕರುಣಾಬೆನ್. ತನ್ನನ್ನೇ ದಿಟ್ಟಿಸುತ್ತಿದ್ದ ವಿನೋದನತ್ತ ಕರುಣಾ ಕಿರುನಗೆ ಬೀರಿದಳು. ಪುಟ್ಟವ್ವ ವಿನಂತಿಪತ್ರ ಓದಿದಳು. ಯಾವ ಭಾವನೆಯನ್ನೂ ವ್ಯಕ್ತಪಡಿಸಲಿಲ್ಲ.

"ಮುಖ್ಯ ಹತ್ತು ಹೆಸರು ನೀವು ಗೊತ್ತುಮಾಡಿದ ದಿನವೇ ಪತ್ರಿಕಾಗೋಷ್ಠಿ.

ಗೋಷ್ಠಿ ಏರ್ಪಡಿಸೋ ಜವಾಬ್ದಾರಿ ನನ್ನದು. ಗುಂಡುಪಾರ್ಟಿ. ಐದುಸಾವಿರ ಬೇಕಾದೀತು. ಅಲ್ಲಿ, ನಗದು ಇಂದು ಕಡ ನಾಳೆ."

"ಒಪ್ಪಿಗೆ ಕರುಣಾ, ಟಿಪ್ಪಣಿ ಮಾಡಿಕೊ."

ತನ್ನ ನೀರವತೆ ಇತರರಿಗೆ ದುಸ್ಸಹವಾದೀತೆಂದು ಪುಟ್ಟವ್ವ ಅಂದಳು :

"ಒಂದು ಒಳ್ಳೆಯ ಟ್ಯಾಕ್ಸಿ ಗೊತ್ಮಾಡಿಕೊಂಡು, ಸುಮುಹೂರ್ತದಲ್ಲಿ, ಲಕ್ಷಾಧಿಪತಿಗಳಲ್ಲಿಗೆ ಹೊರಡ್ಬೇಕು ಅಲ್ವ ಮೃದುಲಾಬೆನ್ ?"

"ಹ್ಞಾ" ಎಂದು ಮೃದುಲಾ ಕೂಗಿ ಹೇಳಿದಳು : "ಜುಮ್ಮಿ, ಕರುಣಾಗೆ ಡಯರಿ ತಂದ್ಕೊಡು; ಚಹಾಕ್ಕೆ ನೀರಿಡು."

ಮೊದಲ ಎರಡು ಹೆಸರುಗಳ ಸೂಚನೆ. ವಿನೋದನ ಪ್ರತಿಕ್ರಿಯೆ. ಮೃದುಲಾಜಿಯ ತೀರ್ಪು.

...ಚಹಾದ ಕಪ್ಪುಗಳು ಬರಿದಾಗುತ್ತಿದ್ದಂತೆ ಮೃದುಲಾ ಸಪ್ಪಗಿನ ಸ್ವರದಲ್ಲಿ ಅಂದಳು :

"ಯಾವತ್ತೋ ಈ ಬೃಹತ್ ಯೋಜನೆಯ ಕನಸು ಕಂಡಿದ್ದೆ. ಆದರೆ ಒಪ್ಪಲೇಬೇಕು. ಕನಸು ಈಗ ಮೂರ್ತರೂಪ ತಳೆದದ್ದಕ್ಕೆ ಕಾರಣ ಈ ನನ್ನ ಪುಟ್ಟ."

ತೊಟ್ಟಿಕ್ಕಲು ಧಾವಿಸಿದ ಕಂಬನಿಯನ್ನು ತಡೆಹಿಡಿಯಲು, "ಹೆಹ್ಹೆಹ್ಹೆ" ಎಂದು ಸದ್ದು ಮಾಡುತ್ತ ಪುಟ್ಟವ್ವ ನಕ್ಕಳು. ಸಮಜಾಯಿಕೆಯ ನವುರು ಮಾತು. ಆದರೂ ಕಿವಿಗೆ ಇಂಪಾಗಿತ್ತು. ಮರುಕ್ಷಣವೆ ಪುಟ್ಟವ್ವನ ಒಳದನಿ ಉಲಿಯಿತು : "ಯೋಜನೆ ಯಶಸ್ವಿಯಾಗ್ತದೆ. ಇಡೀ ತಿಂಗಳು ನಾನು ಯಾಕೆ ಇಲ್ಲಿರಬೇಕು ? ಎರಡು ಲಕ್ಷ ಕೈಗೆ ಬಿದ್ದೊಡನೆ ಜಗದಲಪುರಕ್ಕೆ ಗಾಡಿಬಿಡಬೇಕು."

ಭಾರತೀ ಅನಾಥಾಶ್ರಮ ಪ್ರತಿಷ್ಠಾನಕ್ಕೆ ಯಾರು ಎಷ್ಟು ಹಣ ಬೇಕಾದರೂ ವಂತಿಗೆ ನೀಡಬಹುದು. ವರಮಾನ ತೆರಿಗೆಯಿಂದ ಆ ಮೊತ್ತಕ್ಕೆ ವಿನಾಯಿತಿಯುಂಟು.

ಕರುಣಾ ವಿವಿಧಭಾರತಿ ಜಾಹೀರಾತಿನಂತೆ ಘೋಷಿಸಿದಳು : "ತೆರಿಗೆ ವಿನಾಯಿತಿ! ತೆರಿಗೆ ವಿನಾಯಿತಿ !"

ಪುಟ್ಟವ್ವ ಧ್ವನಿ ಸೇರಿಸಿದಳು : "ನಿಮ್ಮಲ್ಲಿರುವ ಹಣವನ್ನೆಲ್ಲ ಕೊಟ್ಟುಬಿಡಿ ! ಪೂರ್ತಿ ತೆರಿಗೆ ವಿನಾಯತಿ !"

ಇಂಥ ಸಂದರ್ಭದಲ್ಲಿ ಹಿತೈಷಿಯನ್ನು ಕಾಣದೆ ಇರುವುದು ಅಪಚಾರ—ಎನಿಸಿತು ಮೃದುಲಾಗೆ.

"ಕರುಣಾ, ಸಾಯಂಕಾಲ ಫೋನ್ ಸಾಹುಕಾರರಲ್ಲಿಗೆ ಹೋಗಿ ಬರೋಣ."

ತನ್ನನ್ನು ಕರೆಯಲಿಲ್ಲ, ಕರೆಯುವುದಿಲ್ಲ—ಎಂದು ಪುಟ್ಟವ್ವನಿಗೆ ಪಿಚ್ಚೆನಿಸಿತು. "ಇವರು ಹೋಗಲಿ. ವಿನೋದ ಹಿಂದುಳಿದರೆ ಸಾಕು" ಎಂದುಕೊಂಡಳು.

"ಇವತ್ತು ರಾತ್ರಿ ಪಾಳಿ. ನಾನಿನ್ನು ಹೊರಡಬೇಕು,"ಎನ್ನಬೇಕೆ ಮಹಾರಾಯ?

"ಸಂಗ್ರಹ ಆರಂಭಕ್ಕೆ ಘಳಿಗೆ...."

—ಪುಟ್ಟವ್ವ ರಾಗವೆಳೆಯುತ್ತಿದ್ದಂತೆ ಕರುಣಾ ನಕ್ಕು, ಅಂದಳು :

"ಅಯ್ಯೋ ! ಬಹೆನ್‌ಜಿ ! ಅವರು ನೀಡುವುದು ಒಂದು ಸಹಿ ಮಾತ್ರ. ನಾಮ ಮಾತ್ರ ವಂತಿಗೆ. ರಶೀತಿ ಕೊಡಬೇಕಾಗಿಲ್ಲ."

"ಆದರೂ ಘಳಿಗೆ ನೋಡಬೇಕಪ್ಪ."

ಮೃದುಲಾ ಡಯರಿ ತೆರೆದು ದಿನದ ಹಾಳೆ ಬಿಡಿಸಿ, ವಾರ, ತಿಥಿ, ನಕ್ಷತ್ರ ಗಮನಿಸಿದಳು.

"ಪುಟ್ಟಾ, ಈ ದಿನ ಈ ಹೊತ್ತು ಬಿಟ್ಟರಿಲ್ಲ. ಐದು ವರ್ಷ ಅವಧಿಯೊಳಗೆ ಐವತ್ತು ಲಕ್ಷ ದಾಟ್ತೇವೆ !"

ಹಲ್ಲಿ ಲೊಚಗುಟ್ಟಿತು.

ಮೃದುಲಾ ಅರಚಿದಳು :

"ಕೇಳಿಸ್ತಾ ಎಲ್ಲರಿಗೂ ?"

* * *

ಗೊತ್ತುಪಡಿಸಿದ್ದ ಟ್ಯಾಕ್ಸಿ ರಭಸದಿಂದ ಓಡಾಡಿತು. ಸಂಗ್ರಹಕಾರ್ಯ ಭರದಿಂದ ನಡೆಯಿತು.

ಎರಡು ವಾರ ಕಳೆದ ಮೇಲೆ ಪುಟ್ಟವ್ವನಿಗೆ ಹೊಸ ಸೂಟ್‌ಕೇಸ್‌ಗಳು ಬಂದುವು. ಒಂದು, ಅರಿವೆ ಇತ್ಯಾದಿ ತುಂಬಲು. ಇನ್ನೊಂದು, ಕೈಯಲ್ಲಿ ಹಿಡಿದುಕೊಳ್ಳಲು. ಅದರಲ್ಲಿತ್ತು ಮೃದುಲಾ ಮಾತುಕೊಟ್ಟಿದ್ದ ಮೊತ್ತದ ಅರ್ಧಾಂಶ.

"ಉಳಿದರ್ಧ ನಿಮ್ಮೂರಿಗೆ ನೇರವಾಗಿ ಬರ್ತದೆ. ಹೇಗೂ ಅಲ್ಲಿಗೆ ನಾವು ಬರ್ತೇವಲ್ಲ. ಅಲ್ಲಿ ಸಂಗ್ರಹಿಸಿದ ಹಣದಿಂದಲೇ ಕೊಡ್ತೇವೆ."

ಪುಟ್ಟವ್ವ ಆಕ್ಷೇಪಿಸಲಿಲ್ಲ. ಅವಳ ಸಮಸ್ಯೆ ಪ್ರಯಾಣದ್ದು.

"ಕಷ್ಟದ ಪ್ರವಾಸವಂತೆ." ಎಂದಳು.

ವಿವರ ಕಲೆಹಾಕಿ ವಿನೋದ ಮೃದುಲಾಬೆನ್‌ಗೆ ಕಾರ್ಡು ಬರೆದ.

"ಇಲ್ಲಿಂದ ನಾಗಪುರ, ರಾಯಪುರ ರೈಲುಮಾರ್ಗ. ಅಲ್ಲಿಂದ ಬಸ್ಸಿನಲ್ಲಿ ನೇರ ಜಗದಲಪುರಕ್ಕೆ. ಅದು ಬಸ್ತಾರ್ ಪ್ರದೇಶದಲ್ಲಿದೆ. ಆದಿವಾಸಿಗಳು ಹೆಚ್ಚು. ಶುಭ ಪ್ರಯಾಣ ಕೋರುತ್ತಿದ್ದೇನೆ. ತಿಳಿಸಿಬಿಡಿ."

"ಬೀಳ್ಕೊಡಲು ವಿನೋದ ಬರುವುದಿಲ್ಲ ಹಾಗಾದರೆ—"

ಮೃದುಲಾ ಕೇಳಿದಳು :

"ಜತೆಗೆ ಯಾರಾದರೂ ಬೇಕಾ ? ಸೂಟ್‌ಕೇಸ್‌ಗಳಿವೆಯಲ್ಲ ?"

"ಜುಮ್ಮಿಕ್ಕಾನ ಕಳಿಸೋಕಾಗುತ್ತ ?"

"ಇಲ್ಲ ಪುಟ್ಟಾ. ನೀವೇ ಬನ್ನಿ ಅಂದ ಹಾಗಾಯ್ತು ಇದು. ಅವಳಿಲ್ಲದೆ ಇಲ್ಲಿ ಕೋಳಿ ಕೂಗ್ತದಾ ? ಸೂರ್ಯ ಮುಳುಗ್ತಾನ ?"

ಥೂ ಸ್ವಾರ್ಥಿ !—ಎಂದು ಹೀಗಳೆಯಬೇಕೆನಿಸಿತು. ಮಂಚದ ಕೆಳಗೆ ನಿಂತಿದ್ದ ಪುಟ್ಟ ಸೂಟ್‌ಕೇಸು ಕಣ್ಣಿಗೆ ಬಿದ್ದು, ತಾನು ಕೃತಘ್ನೆಯಾಗಬಾರದು, ತನ್ನ ಗುರು ಮೃದುಲಾಬೆನ್—ಎಂದುಕೊಂಡಳು. ಅವಳು ಸಮರ್ಥೆ, ತನ್ನೊಬ್ಬಳಿಂದಲೆ ಆಗುತ್ತಿತ್ತೆ ಈ ಸಂಗ್ರಹ ಕಾರ್ಯ? ಎರಡು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಒಂದಾದರೂ ಕೊಟ್ಟಳಲ್ಲ ? ಜಗಳಾಡಿ ಪಾಲು ಪಡೆಯಲು ಇದೇನು ಪಿತ್ರಾರ್ಜಿತ ಆಸ್ತಿಯೆ? ಪುಟ್ಟವ್ವನಿಗೆ ಯೋಚನೆಗಳ ನಡುವೆ ನಗು ಬಂತು. ಬಾಪೂ ಹೆಸರಲ್ಲಿ ದೇಶ ಕಟ್ಟುತ್ತಿದ್ದೇವೆ ; ತಂದೆಯ ಆಸ್ತಿಯೇ ಅಲ್ಲವೆ ಈ ದೇಶ ? ಭಾಷಣದಲ್ಲಿ ಬಳಸಿದರೆ ಹೇಗೆ ಈ ಮಾತನ್ನು ? ಆದರೆ, ತಾನು ರಾಷ್ಟ್ರ ಪಕ್ಷದವಳು. ಆಳುವ ಪಕ್ಷದವರ ಭಾಷಣದ ವೈಖರಿ ಬೇರೆಯೇ ಇರಬೇಕಲ್ಲ ? ಆ ಕರುಣಾ ಮಾತ್ರ.... ಅಹಂಕಾರದ ಮೊಟ್ಟೆ. ತಾನು ಯುವತಿ ಅಂತ ಅವಳಿಗೆ ಹೆಮ್ಮೆ. (ಒಮ್ಮೆ ತಾನೂ ಹಾಗೆ ಹೆಮ್ಮೆ ಪಡುತ್ತಿದ್ದೆನಲ್ಲ ?) ಇನ್ನು ದೇಶದಾದ್ಯಂತ ಇವರು ಮೆರೆಯುತ್ತಾರೆ. ಸಂಸಾರ ವಂದಿಗರಲ್ಲ. ಮಕ್ಕಳಿಲ್ಲ. ನಂಬುತ್ತಾರೆ. ಹಣ ಕೊಡುತ್ತಾರೆ. ಪುಣ್ಯವಂತರಲ್ಲವೆ ಭಾರತೀಯ ಅನಾಥ ಮಕ್ಕಳು?

ಕರುಣಾ. ಹಿತೈಷಿಯವರ ಮನೆಗೆ ಹೋಗಿದ್ದಳು ದೊಡ್ಡ ಪಟ್ಟಿಯೊಡನೆ. ಫೋನ್ ಮಾಡಿ ನೂರಾರು ಜನರ ವೇಳೆ ಗೊತ್ತುಮಾಡಬೇಕು. ಹಿತೈಷಿ ಮಹಾನುಭಾವ ದಾನಿಗಳ ಪಟ್ಟಿಯಲ್ಲಿರುವ ಮೊದಲಿಗ. ತನ್ನನ್ನು ಕಂಡಿದ್ದ. ಕುತೂಹಲವಿರಬಹುದು—ಎನಿಸಿತು ಪುಟ್ಟವ್ವನಿಗೆ.

ಮೃದುಲಾ ನುಡಿದಳು:

"ನಮ್ಮ ಮಹಾ ಹಿತೈಷಿ ಕೇಳಿದರು—ಕಿಷ್ಕಿಂಧೆಯವರು ವಾಪಸಾದರೆ ಅಂತ?"

"ನನ್ನನ್ನು ಯಾರು ನೆನಪಿಟ್ಕೋತಾರೆ ಮೃದುಲಾಬೆನ್?"

"ಧರ್ಮೇಂದ್ರ ಬಾಬಾ ಬಳಿ ಶಿಷ್ಯವೃತ್ತಿ ಮಾಡು. ಅವರ ಕಾಯಕಲ್ಪ ಚಿಕಿತ್ಸೆಗೆ ಸಮನಾದದ್ದು ಲೋಕದಲ್ಲಿ ಬೇರೊಂದಿಲ್ಲ. ಭೇಟಿ ಸಿಗೋದೇ ಕಷ್ಟವಂತೆ. ನೀನು ಭಾಗ್ಯಶಾಲಿ. ಅವರ ಮಠದ ಸ್ವಾಮಿಯೇ ಪತ್ರ ಕೊಟ್ಟಿದಾರಲ್ಲ ? ದರ್ಶನ ಸುಲಭವಾಗ್ತದೆ."

"ಯಾವಾಗ ಹೊರಡಲಿ ಮೃದುಲಾಬೆನ್ ?

"ನಾಳೆ ನೀನು ಮತ್ತು ಕರುಣಾಹೋಗಿ ಟಿಕೆಟ್ ಬುಕ್ ಮಾಡಿ. ನಾಳೆ ರಾತ್ರೆಯ ಟ್ರೇನ್. ಇಲ್ಲವಾದರೆ ನಾಡದು."

* * *

ಹೊರಡುವುದಕ್ಕೆ ಮುನ್ನ, ವಿಶೇಷ ಭೋಜನವಿರಲಿಲ್ಲ. ಆದರೆ ಜುಮ್ಮಿ ಚಿಕ್ಕದಾದರೂ ಚೊಕ್ಕವಾದ ಅಡುಗೆ ಮಾಡಿದಳು. ಅಂದು ಸಂಜೆ ಬೇಗನೆ ಊಟ. ಕರುಣಾ ಟ್ಯಾಕ್ಸಿ ತರಲು ಹೋದಾಗ ಜುಮ್ಮಿ ಪುಟ್ಟವ್ವನ ಪಾಲಿನ ಬಾದಾಮಿಹಾಲು ಕೊಟ್ಟಳು.

ಜುಮ್ಮಿ ಕೇಳಿದಳು :

"ಮತ್ಯಾವಾಗ ಬರ್ತೀರಿ ದೀದಿಜಿ ?"

ಹುಡುಗಿಯ ಮುಂಗುರುಳನ್ನು ನೇವರಿಸಿ ಪುಟ್ಟವ್ವ ಅಂದಳು :

"ನಿನ್ನ ಮದುವೆಗೆ ಮುಂಚೆ ಬರ್ತೀನಿ, ಜುಮ್ಮಿ."

ಟ್ಯಾಕ್ಸಿ ಬಂತು. ಮೃದುಲಾ–ಪುಟ್ಟವ್ವ ಪರಸ್ಪರ ತಬ್ಬಿಕೊಂಡರು.

"ಕಾಗದ ಬರಿ, ಪುಟ್ಟಾ."

"ಹೂಂ ಬಹೆನ್."

....ಪುಟ್ಟವ್ವನನ್ನು ಸ್ಥಾನದಲ್ಲಿ ಪ್ರತಿಷ್ಠಾಪಿಸಿ, (ಶಾಲು ಹೊದಿಸಿದ ಸಣ್ಣ ಸೂಟ್‌ಕೇಸು ದಿಂಬು) ಕರವಸ್ತ್ರದಿಂದ ಕಣ್ಣುಗಳನ್ನು ತೀಡಿ, ರೈಲು ನಿಲ್ದಾಣದಲ್ಲಿ ಕರುಣಾ ವಿದಾಯ ನುಡಿದಳು ಅಕ್ಕನಿಗೆ, ಕೈಯಾಡಿಸುತ್ತ.

೫

ನಾಗಪುರ ದಾಟಿದ ಮೇಲೆ ನಿಲ್ದಾಣಗಳಲ್ಲಿ "ಧರ್ಮೇಂದರ್ ಬಾಬಾ ಜಯ ಹೋ" ಘೋಷ ಕೇಳಿಸತೊಡಗಿತು. ಪುಟ್ಟವ್ವ ಖುಶಿ ಪಟ್ಟಳು. ಇನ್ನು ಏಕಾಕಿತನದ ಬೇಸರವಿಲ್ಲ. ಯಾತ್ರಾರ್ಥಿಗಳ ಸಂಖ್ಯೆ ಬಹಳ ದೊಡ್ಡದಲ್ಲ. ತನಗೆ ತಿಳಿಯದೆ ? ಮಠಾಧೀಶರು ತಿರುಪತಿ ವೆಂಕಟರಮಣನಾಗುವುದು ಸಾಧ್ಯವಿಲ್ಲ. ಕುರುಡು ನಂಬಿಕೆಗೂ ಜಾಗೃತ ಶ್ರದ್ಧೆಗೂ ವ್ಯತ್ಯಾಸ ಉಂಟು. ತಿರುಪತಿ ಹುಂಡಿಯೊಳಗೆ ಇಳಿ ಬಿಡುವುದು ಲಾಭದ ಒಂದು ಪಾಲು. ಆದಕ್ಕೆ ಲಂಚ ಎಂದು ಹೆಸರಿಟ್ಟು ತಾನೇಕೆ ಪಾಪಿಯಾಗಲಿ?

ರಾಯಪುರ ಹತ್ತಿರ ಬರುತ್ತಿದ್ದಂತೆ ಪುಟ್ಟವ್ವನಿದ್ದ ಸೆಕೆಂಡ್ ಕ್ಲಾಸ್ ಡಬ್ಬಿಗೂ ಮೂವರ ಒಂದು ಯಾತ್ರಿಕ ತಂಡ ನುಗ್ಗಿತು. ಹಳದಿ ರುಮಾಲು ಕೊರಳಲ್ಲಿ ರುದ್ರಾಕ್ಷಿ–ಗಂಡಸರಿಗೆ. ಸ್ತ್ರೀಯೊಬ್ಬಳಿದ್ದಳು. ಉಟ್ಟಿದ್ದ ಸೀರೆ ಹಳದಿ. ತನ್ನ ಸೀರೆಗಳಲ್ಲಿ ಎರಡು ಬಿಳಿ ಬಣ್ಣದವಿದ್ದುವು. ಕಲ್ಯಾಣನಗರ ಬಿಡುವುದಕ್ಕೆ ಮುನ್ನ ಧರ್ಮೇಂದ್ರ ಮಠದ ಸ್ವಾಮಿಯನ್ನು ಕೇಳಬೇಕಾಗಿತ್ತು—ಸೀರೆಯ ಬಣ್ಣದ ಬಗೆಗೆ. ಮಾನಸಿಕ ತಳಮಳ ಅಡ್ಡಿ ಬಂತು. 'ಪತ್ರ'ಭಿಕ್ಷೆ ಆದೊಡನೆ ಹೊರಟೇ ಬಿಟ್ಟೆ. ಮೃದುಲಾ ಮಾಯಿ ಶ್ರೇಷ್ಠಮಟ್ಟದ ಯೋಗಿನಿಯಾಗಬಹುದಿತ್ತು. ಲೌಕಿಕದ ಸೆಳೆತವೆ ತೀವ್ರವಾಯಿತೇನೊ. ಹಳದಿ ಸೀರೆ ಸಾಮಾನ್ಯ ಭಕ್ತೆಯರಿಗೆ. ತನಗೆ ವಿಶೇಷ ಸ್ಥಾನ ಸಿಗುವುದು ಖಂಡಿತ. "ಬಿಳಿ ಧರಿಸು" ಎನ್ನಬಹುದು ತನ್ನನ್ನು ಉದ್ದೇಶಿಸಿ.

ಕಣ್ಣಿಗೆ ಬಿದ್ದುದೊಂದೇ ಬಸ್ಸು, ರಾಯಪುರದಲ್ಲಿ ಇಳಿದಾಗ. ಬಸ್ಸಿನ ಕಂಡಕ್ಟರ್ ರೈಲು ನಿಲ್ದಾಣದಿಂದ ಹೊರಬಂದ ಯಾತ್ರಾರ್ಥಿಗಳು ಎಷ್ಟು ಜನ ಎಂಬುದನ್ನು ಎಣಿಸಿದ. ಕೈಗಳಲ್ಲಿ ಸೂಟ್‌ಕೇಸಿದ್ದ ಮಹಿಳೆಯ ಬಳಿ ಸಾರಿ "ಜಗದಲ್‌ಪುರ್?" ಎಂದು ಕೇಳಿದ. ಹಿಂದೂಸ್ಥಾನಿಯಲ್ಲಿ ಪುಟ್ಟವ್ವನೆಂದಳು :

"ಹೌದಣ್ಣ. ದರ್ಮೇಂದರ್ ಬಾಬಾ ದರ್ಶನ ಎಷ್ಟು ಗಂಟೆಗೆ ಆಗ್ತದೆ ?"

"ಕತ್ತಲಾಗೋದರೊಳಗೆ ಅಲ್ಲಿ ಇರ್ತೀವಿ. ನಿಮ್ಮ ಸೂಟ್‌ಕೇಸ್ ಮೋಟಾರಿನಲ್ಲಿಟ್ಟು ಈ ನಿಲ್ದಾಣದಲ್ಲೇ ಸ್ನಾನಗೀನ ಮಾಡಿಬಿಡಿ. ಕ್ಯಾಂಟೀನ್ ಫಸ್ಟ್‌ಕ್ಲಾಸ್. ನಾಗಪುರದಿಂದ ಬಂದೀರಾ ?"

"ಮುಂಬಯಿಯಿಂದ."

ಅರ್ಧ ಘಂಟೆಯಲ್ಲಿ ಪೊಂ ಪೊಂ ಮೋಟಾರು ಹೊರಟಿತು. ದಾರಿಯುದ್ದಕ್ಕೂ ಅದು ಆಪೋಶನ ತೆಗೆದುಕೊಂಡ ಆದಿವಾಸಿಗಳು ಹಲವರು. ಪುಟ್ಟವ್ವ ಅತ್ತಿತ್ತ ಕತ್ತು

ಹೊರಳಿಸಿ, ಒಟ್ಟು ಎಷ್ಟು ಜನ ಇರುವರೆಂದು ಎಣಿಸಲು ಯತ್ನಿಸಿದಳು. ಬಟ್ಟೆಗಳಾಚೆ ಮೈಗಳಾಚೆ ಏನೂ ಕಾಣಿಸುತ್ತಿರಲಿಲ್ಲ. ಸಂಖ್ಯೆ ನೂರು ದಾಟಿದ ಮೇಲೆ, ಇನ್ನು ಸಾಕು ಎಂದು ಸುಮ್ಮನಾದಳು.

ಸ್ವಲ್ಪ ವಿದ್ಯೆ ಬಲ್ಲವನಿಗೂ ಅವನ ಹೆಂಡತಿಗೂ ಕಂಡಕ್ಟರ್ ಅವಳ ಬಳಿ ಸೀಟು ಕೊಟ್ಟಿದ್ದ. ಅದು ಬೇಸಗೆ. ಮಧ್ಯಪ್ರದೇಶದ ಆ ಕಗ್ಗಾಡಿನಿಂದ ಗಾಳಿ ಬೀಸಿದಾಗ ಒಂದಿಷ್ಟು ನಿದ್ದೆ. ಬಿಳಿಯುಡುಗೆಯ ಆ ಯೋಗಿನಿ ಬಗೆಗೆ ಆ ಹೆಂಗಸಿಗೆ ಗೌರವ, ಗಂಡಸಿಗೂ. ಸೂರ್ಯ ಎಲ್ಲಿಂದಲೋ ಇರಿದು ನೋಡಿದಾಗ ಪ್ರಯಾಣಿಕರ ಕಿಚಿ ಕಿಚಿ.

ಪುಟ್ಟವ್ವ ಕೇಳಿದಳು :

"ಪ್ರತಿ ದಿವಸ ಧರ್ಮೇಂದರ್ ಬಾಬಾರ ಮಠಕ್ಕೆ ಎಷ್ಟು ಜನ ಬರ್‍ತಾರೆ ?"

"ಹಳ್ಳಿಗಳಿಂದ ಪೇಟೆಗಳಿಂದ ಹತ್ತಿರದಿಂದ ದೂರದಿಂದ ಸಾವಿರಕ್ಕೂ ಹೆಚ್ಚು ಜನ. ಹುಣ್ಣಿಮೆ ರಾತ್ರೆ ಎಷ್ಟೋ ಸಾವಿರ ಜನ. ಬಂದವರು ಯಾವಾಗಲೂ ಬಾಬಾನ ಆಶೀರ್ವಾದ ಪಡೆದು, ದಂತೇಶ್ವರಿ ದೇವಸ್ಥಾನದಲ್ಲಿ ಪ್ರಸಾದ ಸ್ವೀಕರಿಸಿ ವಾಪಸು ಹೊರಡ್ತಾರೆ."

"ಮಳೆಗಾಲದಲ್ಲಿ ?"

"ಇಂದ್ರಾವತಿ ನದಿಯಲ್ಲಿ ಕೆಂಪು ನೀರು, ಅಷ್ಟೆ. ಮಾಜಿಗೆ ಎಲ್ಲಾಯ್ತು ?"

"ಕಂಡಕ್ಟರ್ ಹೇಳ್ಲಿಲ್ವೆ ?"

"ಹೇಳ್ದ. ನಿಮ್ಮ ಬಾಯಿಯಿಂದಲೇ ಕೇಳುವ ಕುತೂಹಲ. ಮುಂಬಯಿ ಯವರು ಅಂದ."

"ಹೌದು."

"ನಾವು ಕಾಡಿನ ಜನ."

"ನಿಸರ್ಗದ ಪವಿತ್ರ ಸಂತಾನ."

"ಅರ್ಥವಾಯ್ತು. ದೊಡ್ಡ ಮಾತು ಹೇಳಿದಿರಿ."

"ಬಸ್ತಾರ್ ದೇಶ ನಮ್ಮದು. ನಾವೇ ಆಳ್ತಿದ್ವಿ. ಪರಕೀಯರ ಫಿತೂರಿಯಿಂದ ನಮ್ಮ ಮಹಾರಾಜರು ರಾಜ್ಯ ಕಳಕೊಂಡ್ರು."

"ಈ ಹೋರಾಟದ, ಸೋಲಿನ ಕಥೆ ನಾನು ಕೇಳಿದ್ದೇನೆ. ಪುಸ್ತಕಗಳಲ್ಲಿ ಓದಿದ್ದೇನೆ."

"ಬಾಬಾ ಅವರ ಮಠದಲ್ಲಿ ಆ ಪುಸ್ತಕಗಳಿವೆ."

"ಧರ್ಮೇಂದರ್ ಬಾಬಾ ರಾಜ ಪರಂಪರೆಯ ಈಗಿನ ಅರಸರಿಗೆ ರಾಜಗುರು ಅಲ್ಲವೆ ?"

"ಹೌದು. ಪ್ರತಿ ವರ್ಷ ಪಟ್ಟಾಭಿಷೇಕದ ವರ್ಧಂತ್ಯುತ್ಸವ ನಡೀತದೆ. ಆಗ ಇಡೀ ಬಸ್ತಾರೇ ಇಲ್ಲಿಗೆ ಬರ್‍ತದೆ."

"ನಿಮ್ಮ ಮಾತು ಕೇಳ್ತಾ ಇದ್ದ ಹಾಗೆ, ಬಾಬಾರನ್ನು ಯಾವಾಗ ನೋಡಿ ಯೇನೋ ಅಂತ ಮನಸ್ಸು ತುಡೀತಿದೆ."

"ಇನ್ನು ಹತ್ತು ಮೈಲು."

ಮುಂದೆ ಕೆಲ ಮೈಲು ಹೋದೊಡನೆ ಸೂರ್ಯ ಮರೆಯಾದ. ಗುಡ್ಡದಿಂದ ಕೆಳಗಿಳಿಯುತ್ತಿದ್ದಂತೆ ಮಿಣುಕು ಹುಳಗಳ ತೊಟ್ಟಿ ಕಾಣಿಸಿತು.

"ಅದು ಜಗದಲಪುರ ಅಲ್ಲವೆ ?"

ಬಸ್ಸು "ಬೋಲೋ ಧರ್ಮೇಂದರ್ ಬಾಬಾ ಜಯ ಹೋ" ಘೋಷದಿಂದ ಕುಲುಕಿತು.

"ಜಗದಲಪುರ ಮಾಜಿ."

"ಇದು ಇಂದ್ರಾವತಿ ನದಿ. ನಮ್ಮ ಪೂರ್ವಜರು ಹಾಕಿದ ಭದ್ರವಾದ ಮರದ ಸೇತುವೆ ಇದೆ. ಅದರ ಆಚೆಗೆ ದಿಬ್ಬದ ಮೇಲೆ ಮಠ. ಆಚೆಗೆ ನಗರ....ನೋಡಿ. ಬಂದೇ ಬಿಟ್ಟಿತು."

ಯಾತ್ರಿಕರ ಜತೆ ಪುಟ್ಟವ್ವನೂ ಅಂದಳು :

"ಬೋಲೊ ಧರ್ಮೇಂದರ್ ಬಾಬಾ ಜಯ ಹೋ."

ನಿಂತವರು, ಕುಳಿತವರು, ಅಂಚುಗಳಲ್ಲಿ ಓಲಾಡುತ್ತಿದ್ದವರು, ಛಾವಣಿಯ ಮೇಲೆ ಆಸೀನರಾಗಿದ್ದವರು—ಎಲ್ಲರೂ ಇಳಿದರು.

ದಿಬ್ಬದ ಮೇಲಿದ್ದುವು ಕಲ್ಲಿನ ಕಟ್ಟಡಗಳು. ಒಂದು ಮುಖ ಮಂಟಪ. ಆ ದೀಪಾಲಂಕಾರದ ಮಧ್ಯೆ ನಿಂತಿದ್ದರು ಬಾಬಾಜಿ, ಕಪ್ಪು ಶಿಲೆಯಲ್ಲಿ ಕಡೆದ ಹೃಷ್ಟ ಪುಷ್ಟ ಮೂರ್ತಿಯಂತೆ. ಕೆಳಗೆ ಬಯಲಿನಲ್ಲಿಯೆ ಇತ್ತು ಧರ್ಮಶಾಲೆ. ಅದು ಯಾತ್ರಾರ್ಥಿಗಳ ವಾಸ್ತವ್ಯಕ್ಕೆ.

ಪುಟ್ಟವ್ವ ತನ್ನ ಪುಟ್ಟಚೀಲದಿಂದ ಒಂದು ಲಕೋಟೆಯನ್ನು ಹೊರತೆಗೆದಳು. ಮಾತಿನ ಜೊತೆಗಾರನಾಗಿದ್ದ ವ್ಯಕ್ತಿಯ ನೆರವನ್ನು ಅವಳು ಕೋರಿದಳು:

"ಈ ಪತ್ರವನ್ನು ಬಾಬಾಜಿಯವರಿಗೆ ಮುಟ್ಟಿಸಬೇಕು. ಅಷ್ಟು ಸಹಾಯ ಮಾಡುತ್ತೀರಾ ?"

"ನಾನು ಅದೃಷ್ಟವಂತ ಮಾಜಿ. ಇಲ್ಲಿ ಕೊಡಿ. ಹೋತನ ಹಾಗೆ ದಿಬ್ಬ ಹತ್ತುತ್ತೇನೆ. ನೀವು ಇಲ್ಲಿಂದಲೆ ನೋಡ್ತಾ ಇರಿ."

"ಬಾಬಾಜಿ ಏನಾದರೂ ಬಾಯುತ್ತರ ಕೊಟ್ಟರೆ ಬಂದು ತಿಳಿಸೋದಕ್ಕೆ ಮರೀ ಬೇಡಿ."

"ಇಳಿಯುವಾಗ ಜಿಂಕೆಯ ಹಾಗೆ ಬರ್‍ತೇನೆ. ಅಥವಾ, ನಾವು ಹೇಳೋ ಹಾಗೆ ಬಾಣದ ವೇಗದಲ್ಲಿ ವಾಪಸಾಗ್ತೇನೆ."

ಹೋತ ಮುಖ ಮಂಟಪ ತಲಪಿದಾಗ 'ಪತ್ರವನ್ನು ನಾನು ನಿರೀಕ್ಷಿಸಿದ್ದೆ' ಎನ್ನುವಂತೆ ವಿಗ್ರಹ ಬಲಗೈ ಚಾಚಿತು. ತಾನು ಸ್ವೀಕರಿಸದೆ, ಲಕೋಟೆ ಒಡೆದು ಪತ್ರವನ್ನು ಓದುವಂತೆ ಬೋಳುತಲೆಯ ಚಿಗುರು ಮೀಸೆಯ ಹುಡುಗನೊಬ್ಬನಿಗೆ ಸನ್ನೆ ಮಾಡಿತು. ಆಜ್ಞಾಧಾರಕನ ತುಟಿಗಳು ಚಲಿಸಿದುದನ್ನು ಪುಟ್ಟವ್ವ ಕಂಡಳು. ಓದಿದ ಬಳಿಕ ಆತ ಪತ್ರವನ್ನು ಮುಖಮಂಟಪದಾಚೆಗಿನ ಮನೆಗೆ ಒಯ್ದ.

ವಿಗ್ರಹದ ತುಟಿಗಳು ಮತ್ತೆ ಚಲಿಸಿದವು. ಹೋತ ಈಗ ಚಿಗರೆ. ಅದನ್ನು ಇಬ್ಬರು ಕಿರಿಯರು ಹಿಂಬಾಲಿಸಿದರು.

"ಪ್ರಣಾಮ. ಬಾಬಾಜಿಯ ಅಪ್ಪಣೆಯಾಗಿದೆ. ತಾವು ಅತಿಥಿಗೃಹಕ್ಕೆ ಬರ ಬೇಕಂತೆ."

ಚಿಕ್ಕವರು ಸೂಟ್‌ಕೇಸ್‌ಗಳನ್ನೆತ್ತಿಕೊಂಡರು. ಬಸ್ ಪ್ರಯಾಣದ ಪರಿಚಿತನೂ ಆತನ ಪತ್ನಿಯೂ ಪುಟ್ಟವ್ವನ ಪಾದಗಳಿಗೆ ನಮಿಸಿದರು.

"ನಿಮಗೆ ಒಳ್ಳೇಯದಾಗಲಿ," ಎಂದಳು ಪುಟ್ಟವ್ವ.

ಒಂದೊಂದೇ ಪಾವಟಿಗೆಯನ್ನೇರುತ್ತ ಅವಳು ದಿಬ್ಬ ಹತ್ತಿದಳು.

೬

ಉಷಃ ಕಾಲದಲ್ಲಿ ಭೇರಿಯ ಸದ್ದಾಯಿತು. ಅದರ ಅಲೆಗಳು ನದಿಯಾಚೆಗೆ ನಗರಕ್ಕೂ ಇಂದ್ರಾವತಿಯುದ್ದಕ್ಕೆ ಮಹಾನದಿಯವರೆಗೂ ಸಂಚರಿಸಿದುವು. ಮೊದಲು ಎಚ್ಚರುವುದು ಧರ್ಮೇಂದರ್ ಬಾಬಾರ ಆಶ್ರಮ ; ಬಳಿಕ ಜಗದಲಪುರ.

ರಾತ್ರೆ ಊಟದ ಬಳಿಕ, "ಇನ್ನು ವಿಶ್ರಾಂತಿ ತಗೋ" ಎಂದಿದ್ದರು ಬಾಬಾಜಿ, ಪುಟ್ಟವ್ವನಿಗೆ. ಈಗ ಭೇರಿಯ ಸದ್ದಿಗೆ ಅವಳು ಎದ್ದಳು. ಎಲ್ಲ ಆಧುನಿಕ ಅನುಕೂಲಗಳೂ ಇದ್ದ ಅತಿಥಿ ಗೃಹ. ಕಿರಿಯ ಶಿಷ್ಯನೊಬ್ಬ ಒಂದು ಸಂದೇಶ ಮುಟ್ಟಿಸಿದ :

"ಬಾಬಾಜಿ ಸ್ನಾನಘಟ್ಟಕ್ಕೆ ಹೋಗ್ತಾರೆ. ನೀವು ಬರಬಹುದಂತೆ."

"ಬಂದೆ."

ಬಾಬಾಜಿ ನಿಧಾನವಾಗಿ ದಿಬ್ಬ ಇಳಿಯುತ್ತಿದ್ದರು. ಪುಟ್ಟವ್ವ ಧಾವಿಸಿ ಹೋಗಿ, ಅವರಿಗಿಂತ ಒಂದು ಹೆಜ್ಜೆ ಹಿಂದಿದ್ದು ನಡೆದಳು. ನಿನ್ನೆಯ ವಿಗ್ರಹವೇ. ನದಿಗೆ ಹೋಗುತ್ತಿದ್ದುದರಿಂದ ಒಂದು ಅಂಗವಸ್ತ್ರವಿತ್ತು ಭುಜದ ಮೇಲೆ.

"ಶಿಷ್ಯ ಎಲ್ಲವನ್ನೂ ವಿವರವಾಗಿ ಬರೆದಿದ್ದಾನೆ. ದಂತೇಶ್ವರಿ ಆದಿಶಕ್ತಿಯ ಸಂಕೇತ. ಪ್ರಕೃತಿಯಲ್ಲಿ ಜೀವಸಂಚಾರವಾದಾಗಲೇ ಈ ದೇಶದ ಉದ್ಧಾರ. ನಮ್ಮ ಸನ್ನಿಧಿಯಲ್ಲಿ ನೀನು ಮರುಹುಟ್ಟು ಪಡೆಯುತೀಯೆ. ಇವತ್ತಿನ ಸಮಾಜ ವ್ಯವಸ್ಥೆಯಲ್ಲಿ ರಾಜಕಾರಣ ಅನಿವಾರ್ಯ. ರಾಜ್ಯ ಆಳುವ ಸೂತ್ರಗಳು ಹೆಣ್ಣಿನ ಕೈಯಲ್ಲಿರಬೇಕು. 'ರಾಮಾಯಣ' 'ಮಹಾಭಾರತ' ಓದಿದೀಯಾ ?"

"ಓದಿದೇನೆ ಬಾಬಾ."

"ಇವು ಬರೀ ಕಥೆಯಲ್ಲ. ಇವುಗಳಲ್ಲಿ ಎಷ್ಟೋ ಮರ್ಮಗಳು ಅಡಗಿವೆ. ವಿಮರ್ಶಾತ್ಮಕ ದೃಷ್ಟಿಯಿಂದ ಓದಬೇಕು. ಒಂದು ಪ್ರಶ್ನೆ ಕೇಳ್ತೀನೆ : ಗ್ರಹಛಿದ್ರ ಬಯಸುವ ಒಬ್ಬ ಪಾಪಿ ಆಪ್ತ ಬಳಗದಲ್ಲಿದ್ದಾನೆ. ಅವನನ್ನು ಏನು ಮಾಡಬೇಕು?"

"ನಿಷ್ಕರುಣೆಯಿಂದ ಕೊಲ್ಲಬೇಕು."

"ಭೇಷ್! ಆದರೆ, ಅಷ್ಟು ಸಾಲದು. ಕೊಂದಮೇಲೆ ಧಾರಾಕಾರವಾಗಿ ಕಣ್ಣೀರು ಸುರಿಸಬೇಕು.... ನಾನು ಹೇಳಿದ ಈ ಮಾತಿಗೆ ಯಾವುದು ಆಧಾರ ?"

"ತಿಳೀದು ಬಾಬಾಜಿ."

"ಮಹಾಭಾರತ. ನಮ್ಮದು ಪ್ರಾಕೃತ ಭಾಷೆ. ಸಂಸ್ಕೃತದಲ್ಲೇ ಆ ಮಹಾಕಾವ್ಯಗಳನ್ನು ಓದಿದ್ದೇವೆ."

"ಜ್ಞಾನಕ್ಕೆ ಸಮನಾದದ್ದು ಬೇರೊಂದಿಲ್ಲ, ಅಲ್ಲವೆ ಬಾಬಾಜಿ?"

"ಇದೆ ಅಧಿಕಾರ. ಆಶ್ಚರ್ಯವಾಯ್ತೆ ?"

"ಇಲ್ಲ."

"ನೀನು ಬುದ್ಧಿವಂತೆ."

"ಇದು ಆಶೀರ್ವಚನ ಬಾಬಾಜಿ."

ಇವರಿಬ್ಬರು ಸ್ನಾನಘಟ್ಟ ತಲಪಿದೊಡನೆ, ಪುಟ್ಟವ್ವನಿಗೆ ಪರಿಚಿತನಾದ ಕಿರಿಯ ಶಿಷ್ಯ ಓಡಿಬಂದ, ಬೋಗುಣಿಯೊಡನೆ.

"ಎಲ್ಲಿಗೆ ಹೋಗಿದ್ದೆ ?" ಎಂದು ಕೇಳಿದರು ಬಾಬಾಜಿ.

"ಮಾಜಿ ಜತೆಯಲ್ಲಿದ್ದಾರೆ ಅಂತ ಹಿಂದೆ ಉಳಿದೆ."

"ಈ ಮಾಜಿ ಇವತ್ತಿನಿಂದ ಇಲ್ಲಿಗೆ ಹೊಸಬರಲ್ಲ. ಇವರು ತಾಯಿ, ಉಳಿದವರೆಲ್ಲ ಮಕ್ಕಳು."

ಘಟ್ಟದತ್ತ ನೋಡುತ್ತ ಪುಟ್ಟವ್ವ ಅಂದಳು :

"ತಮ್ಮದು ಮೊದಲಾಗಲಿ."

"ಮೊದಲು ಕೊನೆ ಎಂಬುದೆಲ್ಲ ಹುಚ್ಚು. ಇದು ಪೂರ್ವಾಶ್ರಮದ ಪಳೆಯುಳಿಕೆ. ಈಜು ಬರುತ್ತೆ ?"

"ಮುಳುಗಿ ಸತ್ತಳು ಎಂಬ ಆರೋಪ ತಟ್ಟದು."

"ಧರ್ಮೇಂದರ್ ಬಾಬಾ ಮುಳುಗಿಸಿ ಕೊಂದ ಎಂದು ನಿನ್ನೂರವರು ದೂರುವಂತೆಯೂ ಇಲ್ಲ! ಇಳಿ. ಹತ್ತಡಿ ಆಚೆಗೆ ಎರಡು ಬಿಲ್ಲು—ಅಂದರೆ ಎರಡಾಳು—ನೀರಿದೆ."

ಎರಡು ಮೀನು. ಒಂದರಿಂದ ಇನ್ನೊಂದು ಸಾಕಷ್ಟು ದೂರದಲ್ಲಿ. ಇದು ಜಲಕ್ರೀಡೆಯಲ್ಲ, ಜಲಯೋಗ.

ಸ್ನಾನ. ಸೂರ್ಯರಶ್ಮಿ ಮುದ್ದಿಡುವುದಕ್ಕೆ ಮೊದಲೆ ನಡೆಯುವ ಪವಿತ್ರ ಮೀಯ.

ಬಾಬಾಜಿ ದಂಡೆಗೆ ಬಂದಾಗ ಶಿಷ್ಯ ಅವರ ಬಳಿ ಸಾರಿ ಬೋಗುಣಿಯನ್ನೆತ್ತಿ ಹಿಡಿದ. ಅದರಲ್ಲಿತ್ತು ಬಲು ಮೃದುವಾದ ಸೀಗೆಕಾಯಿಪುಡಿ. ಬಾಬಾಜಿ ಒಂದಿಷ್ಟನ್ನು ಎತ್ತಿಕೊಂಡು ಬೋಳುತಲೆಗೂ ಮೈಗೂ ತಿಕ್ಕಿದರು.

ಪುಟ್ಟವ್ವ ಒದ್ದೆಯಾಗಿ ಮತ್ತಷ್ಟು ಮೃದುವಾಗಿದ್ದ ಮಾರ್ಜಕವನ್ನು ತಾನು ಸ್ವಲ್ಪ ಎತ್ತಿಕೊಂಡಳು.

ಬಾಬಾಜಿ ಅಂಗವಸ್ತ್ರದಿಂದ ಮೈ ಒರೆಸಿಕೊಂಡು, ಅದನ್ನು ನಡುವಿಗೆ ಸುತ್ತಿ, ಒದ್ದೆ ಲಂಗೋಟಿಯನ್ನು ಬಿಚ್ಚಿದರು. ಶಿಷ್ಯ ಅದನ್ನೆತ್ತಿಕೊಂಡು ಸ್ನಾನಘಟ್ಟದ ಕಲ್ಲಿಗೆ ಬಡೆದು ಹಿಂಡಿದ. ಬಾಬಾಜಿ ಅದನ್ನು ಬಿಗಿದು ಅಂಗವಸ್ತ್ರವನ್ನು ಕೆಳಕ್ಕೆ ಇಳಿಬಿಟ್ಟರು.

ಮಾಜಿ ತಾನು ತಂದಿದ್ದ ಹೊಸ ಬಿಳಿ ಸೀರೆಯುಟ್ಟಳು. ಒದ್ದೆಯಾಗಿ ಕಲ್ಲಿನ ಮೇಲೆ ಬಿದ್ದುದನ್ನು ಶಿಷ್ಯ ಎತ್ತಿದ, ಒಗೆಯಲು.

"ಛೆ ! ಛೆ !" ಎಂದು ಪುಟ್ಟವ್ವ ಆಕ್ಷೇಪಿಸಿದಳು.

ಬಾಬಾಜಿ ಅಂದರು :

"ಇದೆಲ್ಲ ಅವನಿಗೆ ರೂಢಿ, ಮಠಕ್ಕೆ ಯೋಗಿನಿಯರೋ ಮಾತೆಯರೋ ಬಂದರೆ ಅವರ ಸತ್ಕಾರ ಆತನ ಜವಾಬ್ದಾರಿ."

ಬಾಬಾಜಿ, ಮಾಜಿ ಶಿಷ್ಯ ಮಠದತ್ತ ಹೆಜ್ಜೆ ಇಟ್ಟಂತೆ ಮತ್ತು ಧರ್ಮ ಶಾಲೆಯಲ್ಲಿದ್ದವರೆಲ್ಲ ಜಯಕಾರ ಮಾಡಿದರು : ಕೆಲ ಪಾವಟಿಗೆಗಳನ್ನು ಏರಿ, ಧರ್ಮ ಶಾಲೆಯತ್ತ ಮುಖಮಾಡಿ, ಬಲಗೈಯನ್ನೆತ್ತಿ ಬಾಬಾ ಆಶೀರ್ವದಿಸಿದರು.

"ನನ್ನ ಮಕ್ಕಳೇ, ನಿಮಗೆ ಶುಭವಾಗಲಿ !"

"ಪೂಜೆಯಾದಮೇಲೆ ಬಾಬಾ ಹೇಳಿ ಕಳಿಸ್ತಾರೆ. ಪ್ರಸಾದಕ್ಕೆ ಬನ್ನಿ."

* * *

ಆ ದಿನವನ್ನು ಅಲ್ಲಿ ಕಳೆದ ಬಳಿಕ ಮಾರನೆಯ ಬೆಳಗ್ಗೆ ಭಕ್ತಾದಿಗಳ ಬಸ್ ಪ್ರಯಾಣ, ರಾಯಪುರದತ್ತ. ಪೂಜೆ, ಹರಕೆ, ಕಾಣಿಕೆ ಸ್ವೀಕಾರ, ಪ್ರಸಾದ ವಿನಿ ಯೋಗ, ರಾತ್ರಿ ಪ್ರವಚನ. ನಿದ್ದೆ ಹೋಗುವುದಕ್ಕೆ ಮುನ್ನ ಬೇರೆ ಬೇರೆ ಊರುಗಳಿಂದ ಬಾಬಾಜಿಗೆ ಟೆಲಿಫೋನ್ ಕರೆಗಳು. ಇಲ್ಲಿಂದ ದೇಶದ ನಾನಾ ಭಾಗಗಳಿಗೆ, ಭಾರತದ ರಾಜಧಾನಿ ದಿಲ್ಲಿಗೆ. ಒಮ್ಮೊಮ್ಮೆ ವಿದೇಶಗಳಲ್ಲಿರುವ ಭಕ್ತರಿಂದಲೂ ಆರ್ತ ಕರೆ.

....ಭಕ್ತಾದಿಗಳಿಗೆ ಪ್ರಸಾದ ನೀಡಿದ ಬಳಿಕ ಪುಟ್ಟವ್ವನಿಗೆ ಕರೆ ಬಂತು. ಚಿಕ್ಕ ಬ್ರೀಫ್‌ಕೇಸಿನೊಡನೆ ಆಕೆ ಬಾಬಾನ ಬಳಿಗೆ ಸಾಗಿದಳು.

"ಹಣ ? ಒಂದು ಲಕ್ಷ ?" ಎಂದರು ಬಾಬಾ. ಬ್ರೀಫ್‌ಕೇಸಿನತ್ತ ಬೊಟ್ಟು ಮಾಡಿ.

ಅಪ್ರತಿಭಳಾಗಿ ಪುಟ್ಟವ್ವ "ಹೌದು" ಎಂದಳು ; ಪಾದಗಳಿಗೆ ಎರಗಿದಳು.

"ಇಲ್ಲಿ ಕೋಟಿ ಹಣದ ಗಂಟು ಬಿದ್ದಿದ್ದರೂ ಚೋರರು ಬರುವುದಿಲ್ಲ, ಸೌದಾಮಿನಿ."

ಪುಟ್ಟವ್ವ ಚಕಿತಳಾದಳು. ಬಾಬಾಜಿ ಏನೆಂದು ಸಂಬೋಧಿಸಿದರು ತನ್ನನ್ನು– ಸೌದಾಮಿನಿ ಎಂದೆ ? ಈಗ ಏನು ಹೇಳಬೇಕು ತಾನು ? ಏನು ಮಾಡಬೇಕು ?

ಬಾಬಾಜಿಯೇ ಅಂದರು :

"ನೀನು ಅಗ್ನಿ, ನೀನು ಮಿಂಚು –ಸೌದಾಮಿನಿ. ಹಳೆಯ ಪುಟ್ಟವ್ವ ನನ್ನಲ್ಲಿ ಲೀನವಾಗಿದ್ದಾಳೆ. (ಅವಳ ತಲೆಯ ಮೇಲೆ ತನ್ನ ಹಸ್ತವಿರಿಸಿ) ಸೌದಾಮಿನಿಯನ್ನು ನಾನು ಸೃಷ್ಟಿಸಿದ್ದೇನೆ."

ಸಾದಾಮಿನಿಯನ್ನು ಬಾಬಾ ಹಿಡಿದು ನಿಲ್ಲಿಸಿದರು. ನೆಟ್ಟ ನೋಟದಿಂದ ಅವಳ ಕಣ್ಣುಗಳನ್ನು ನೋಡಿದರು. ಬಾಬಾನ ನೇತ್ರಗಳಿಂದ ಅತ್ಯಂತ ಪ್ರಖರ ಬೆಳಕು ತನ್ನ

ಕಣ್ಣುಗಳಿಗೆ ಹೊಕ್ಕಂತೆ ಕಿಷ್ಕಿಂಧೆಯ ಸಮಾಜ ಸೇವಿಕೆಗೆ ಅನಿಸಿತು. ಇದು ಮರ ಹುಟ್ಟು, ತಾನೀಗ ಹೊಸ ಜೀವ—ಎಂದು ಅವಳಿಗೆ ಭಾಸವಾಯಿತು.

"ಯಾವ ವಸನ ಈ ಸೌದಾಮಿನಿಗೆ ?"

"ಕೆಂಪು ಎನ್ನುತ್ತಿದ್ದೆವು. ಆದರೆ ನಿನ್ನ ಮುಂದಿರುವ ಗುರಿಯ ದೃಷ್ಟಿಯಿಂದ ಆ ಬಣ್ಣ ಸರಿಹೋಗದು. ಬಿಳಿ. ಬಿಳಿ ಇರಲಿ."

"ರಾಷ್ಟ್ರಪಕ್ಷದ ಜನ ಖಾದಿ ಉಡುವುದು ಕಡ್ಡಾಯ."

"ಬಲ್ಲೆವು....ನೀನು ಇಲ್ಲಿಗೆ ಮೊದಲೇ ಬರಬೇಕಾಗಿತ್ತು, ಮಗು."

"ಈಗಲಾದರೂ ಗುರುಕೃಪೆಗೆ ಪಾತ್ರನಾದೆನಲ್ಲ !"

"ಇನ್ನು ಆರು ತಿಂಗಳು ನಿನಗೆ ಕಾಯಕಲ್ಪ ಚಿಕಿತ್ಸೆ. ನಾಳೆಯಿಂದ ಯೋಗಾಸನ. ಲೇಹ್ಯ ಸೇವನೆ."

"ಇಲ್ಲಿ ಗ್ರಂಥಗಳಿವೆ ಅಂತ ಭಕ್ತರು ಅಂದರು."

"ಹ್ಞ. ಮಹಡಿಯ ಮೇಲೆ ಗ್ರಂಥ ಭಂಡಾರ ಇದೆ. ದಿನವೂ ಮಿತಭೋಜನ ವಾದ ಮೇಲೆ ಗ್ರಂಥಗಳನ್ನು ಮನನಮಾಡು. ದಿಲ್ಲಿಯ ಸ್ಟೇಟ್ಸ್‌ಮನ್ ಬರ್ತದೆ. ಕಲ್ಯಾಣನಗರದಿಂದ 'ಕಿಷ್ಕಿಂಧಾವಾಣಿ' ಕಳಿಸೋದಕ್ಕೆ ನಮ್ಮ ಆಶ್ರಮಕ್ಕೆ ಸೂಚಿಸ್ತೇನೆ. ದಿಲ್ಲಿಯಲ್ಲಿ ರಾಷ್ಟ್ರಪಕ್ಷದ ಮುಖಂಡರು ಹಲವರು ನಮ್ಮ ಭಕ್ತರು. ಬೇರೆ ಪಕ್ಷಗಳಲ್ಲೂ ನಮ್ಮ ಭಕ್ತಾದಿಗಳಿದ್ದಾರೆ. ಅಧಿಕಾರದಲ್ಲಿರುವ ಅಮಾತ್ಯರು ಮತ್ತಿತರರು ಬೇಕಾದವರೇ."

"ಹಿಡಿ ಕೂಳಿಗಾಗಿ ಒದ್ದಾಡುತ್ತಲಿದ್ದೆ. ರಸಗವಳದ ಪಾಕಶಾಲೆಗೇ ನನ್ನನ್ನು ತಳ್ಳಿದಿರಿ."

"ಕೌಮಾರ್ಯ ಬಂದಾಗ ಅದಕ್ಕೆ ಸೆರೆಮನೆ ವಾಸ. ಯೌವನ ಮೊದಲಾದೊಡನೆ ಅದಕ್ಕೆ ಸ್ವರ್ಣ ಸಂಕೋಲೆ. ಹಲವು ವರ್ಷ ಆ ಅವಸ್ಥೆಯಿಂದ ಬಿಡುಗಡೆ ಇಲ್ಲ. ಅರ್ಥವಾಯ್ತು, ಅಲ್ಲವೆ ?"

ಸೌದಾಮಿನಿಯ ಮುಖ ಕಪ್ಪಿಟ್ಟಿತು.

"ಆಯ್ತು. ಈ ವಿಷಯದಲ್ಲಿ ನಾನು ಸಾಕಷ್ಟು ಎಚ್ಚರ ವಹಿಸಲಿಲ್ಲ ಅಂತ ತೋರ್ತದೆ."

ಬಾಬಾಜಿ ನಕ್ಕರು.

"ಚಿಂತೆ ಬೇಡ. ಚಿಕಿತ್ಸೆ ಸಕಾಲದಲ್ಲಿ ಆರಂಭವಾಗ್ತಿದೆ. ಚಿಕಿತ್ಸೆ ಮುಗಿಯುವ ವೇಳೆಗೆ ನೀನು ಪುನಃ ಯೌವನಾವಸ್ಥೆ ತಲಪಿರ್ತೀಯಾ. ಆಗ ಅದನ್ನು ಬಂಧನದಲ್ಲಿಡು. ....ಇವತ್ತು ದಿಲ್ಲಿಗೆ, ರಾಷ್ಟ್ರಪಕ್ಷದ ಅಧ್ಯಕ್ಷರಿಗೆ, ಪತ್ರ ಬರೀತೇನೆ. ಕಿಷ್ಕಿಂಧೆಯ ನಾಯಿಕೆಯೊಬ್ಬಳು ನಮ್ಮಲ್ಲಿಗೆ ಬಂದಿರೋ ವಿಷಯ ತಿಳಿಸ್ತೇವೆ. ಪಕ್ಷದ ಮಹಾಕಾರ್ಯದರ್ಶಿ ಆರೆಂಟು ತಿಂಗಳಿಗೊಮ್ಮೆಯಾದರೂ ಇಲ್ಲಿಗೆ ಬರ್ತಾನೆ. ಎಲ್ಲ ಸರಿ ಹೋಗ್ತದೆ."

"ನನ್ನನ್ನು ಮುಂದೆ ದಿಲ್ಲಿಗೆ ಕಳಿಸಿ, ಅಲ್ಲಿಂದ ಕಿಷ್ಕಿಂಧೆಗೆ ಹೊತ್ತು ಹಾಕಿಸುತೀರಿ ಅಲ್ಲವಾ ಬಾಬಾಜಿ ?"

"ಬೇರೆ ಯಾರಾದರೂ ಆಗಿದ್ದರೆ, ಗುರುವಿನ ಜತೆ ಇಷ್ಟು ಸಲಿಗೆಯಿಂದ ಮಾತಾಡ್ಬೇಡ ಎನ್ನುತ್ತಿದ್ದೆವು."

"ತಪ್ಪಿದ್ದರೆ ಮನ್ನಿಸಿ ಗುರುವೆ."

ಮಾರನೆಯ ದಿನ ಹೊಸ ಯಾತ್ರಾರ್ಥಿಗಳು ಬಂದರು. ಹಿಂದಿನವರು ಬೇರೆ ಬೇರೆ ದಿಕ್ಕುಗಳಿಗೆ ಬಸ್ಸುಗಳನ್ನು ಹತ್ತಿದರು. ಮಾಜಿಯ ಜತೆ ಬಂದಿದ್ದ ಪುಣ್ಯಶಾಲಿಗಳು ತಾವು ಹೊರಡುವುದಕ್ಕೆ ಮುನ್ನ ಆಕೆಯ ಆಶೀರ್ವಾದ ಪಡೆದರು.

ದಿನ ಕಳೆದಂತೆ, ಧರ್ಮೇಂದರ್ ನಿಲಯದಲ್ಲಿ ಸೌದಾಮಿನಿದೇವಿ ಪ್ರತಿಷ್ಠಿತ ವ್ಯಕ್ತಿಯಾದಳು.

ನಸುಕಿನಲ್ಲಿ ಯೋಗಾಸನಗಳು. ಹಿರಿಯ ಯೋಗಿನಿಯ ಉಸ್ತುವಾರಿಯಲ್ಲಿ ಅಂಗ ಮರ್ದನ. ಪಥ್ಯ. ಆಹಾರದಲ್ಲಿ ಬದಲಾವಣೆ.

ಇಬ್ಬರೇ ಇದ್ದ ವೇಳೆ ಹಿರಿಯ ಯೋಗಿನಿ ಅಂದಳು :

"ನಾನು ಸಮಾಜಸೇವೆಯ ಅಥವಾ ರಾಷ್ಟ್ರಸೇವೆಯ ವಲಯದಿಂದ ಇಲ್ಲಿಗೆ ಬಂದವಳಲ್ಲ. ನಾಗಪುರದಲ್ಲಿ ಕೇಳಿದ್ದ ಕೆಲವು ಪ್ರವಚನಗಳು ನನ್ನ ತಲೆಕೆಡಿಸಿದ್ದುವು. ಆಧ್ಯಾತ್ಮಿಕ ಜೀವನಕ್ಕಾಗಿ ಹಂಬಲಿಸಿದೆ. ಸಂಸಾರವನ್ನು ತ್ಯಜಿಸಿ ಬಂದೆ. ಈಯೆಲ್ಲ ಶಿಸ್ತಿನ ಕವಚ ನಾನೂ ತೊಡಬೇಕಾಯಿತು. ನನಗಿಂತ ವಯಸ್ಸಾದವರು ನನಗೆ 'ಅಕ್ಕ' ಆದರು...."

"ನೀವು ಈಗ ನನಗೆ ಅಕ್ಕನಾಗಿರುವ ಹಾಗೆ—"

"ಒಂದೇ ಗಾಡಿಯಲ್ಲಿ ಪ್ರಯಾಣ. ಆದರೆ ಡಬ್ಬಿಗಳು ಬೇರೆ ಬೇರೆ. ಒಂದು ಕೇಳ್ತೀನೆ ಸೌದಾ. ದೇಹದ ಬಯಕೆ ಆಗೋದಿಲ್ಲವ ನಿನಗೆ ?"

"ನಾನು ಸಾಮಾನ್ಯ ಮನುಷ್ಯಳು ಅಕ್ಕಾಜಿ...."

"ಸಾಮಾನ್ಯಳಾಗಿದ್ದರೆ ಬಾಬಾ ಇಷ್ಟು ಮುತುವರ್ಜಿ ವಹಿಸ್ತಿರಲಿಲ್ಲ. ದೊಡ್ಡ ಗುರಿಸಾಧನೆಗೆ ನೀನೊಂದು ಬೆಲೆಬಾಳುವ ಉಪಕರಣ. ವಾಗ್ಮಿತೆಯಲ್ಲಿ ತರಬೇತಿ ನೀಡೋದಕ್ಕೆ ಆದೇಶವಿತ್ತಿದ್ದಾರೆ. ಆತ್ಮನಿಗ್ರಹ ಮಾಡ್ಕೊ, ಇನ್ನು ಆರು ತಿಂಗಳಲ್ಲಿ ನೀನು ಏನಾಗಿರ್‍ತೀಯ ಅನ್ನೋದು ನಿನಗೆ ತಿಳೀದು."

ಸ್ನಾನದ ಘಟ್ಟದ ಸಂವಾದದಲ್ಲಿ ಒಂದು ದಿನ 'ಅರ್ಥಶಾಸ್ತ್ರ' ಮಿಂಚಿತು.

"ಈ ಗ್ರಂಥ ಓದಿದೀಯ ?"

"ಇಲ್ಲ ಬಾಬಾಜಿ. ಗ್ರಂಥ ಭಂಡಾರದಲ್ಲಿ ನಿನ್ನೆ ನೋಡಿದ್ದೆ."

"ಎರಡು ಸಾವಿರದ ಮುನ್ನೂರು ವರ್ಷ ಹಿಂದಿನ ಗ್ರಂಥ. ಕೌಟಿಲ್ಯ ಬರೆದದ್ದು. ಕೌಟಿಲ್ಯ ಅಲ್ಲ 'ಕೌಟಲ್ಯ' ಅಂತ ವಾದವಿದೆ. ನಮಗೆ ಅದು ಅಮುಖ್ಯ. ಪ್ರತಿಯೊಬ್ಬ

ರಾಜಕಾರಿಣಿಯೂ ಅದನ್ನು ಅಭ್ಯಾಸ ಮಾಡಬೇಕು. ನಿನಗೆ ಅದು ಪಾರಾಯಣ ಗ್ರಂಥವಾಗಬೇಕು."

"ಆಗಲಿ, ಬಾಬಾಜಿ,"

"ಮಳೆ ಬರದೆ ಇದ್ರೆ ಅರಸನ ಮೇಲೆ ದೂರು. ಹುಡುಗಿಗೆ ವರ ಸಿಗದಿದ್ದರೆ ರಾಜ ಹೊಣೆ. ಹೋರಿ ಸತ್ತಾರೂ ಅವನೇ ಜವಾಬ್ದಾರ. ಅಂಥವರಿಗೆ ಏನು ಮಾಡಬೇಕು? ಸಮಾಜವನ್ನು, ಜನಸಮುದಾಯವನ್ನು, ರಾಷ್ಟ್ರವನ್ನು ಹತೋಟಿಯಲ್ಲಿಟ್ಟುಕೊಳ್ಳೋದಕ್ಕೆ ನೂರು ತಂತ್ರಗಳನ್ನು ಬಳಸುವುದಗತ್ಯ. ಮೂಢನಂಬಿಕೆಗಳು ಜನರಲ್ಲಿ ಹಾಸುಹೊಕ್ಕು. ಅಂಥ ನಂಬಿಕೆಗಳ ಬಲೆಯಲ್ಲೇ ಅವರನ್ನು ಕೆಡವಬೇಕು. ಇದಕ್ಕೆ ಗೂಢಚಾರರ ಪಡೆ ಬೇಕು. ರಾಜರ ಮೆರವಣಿಗೆ ರಾತ್ರೆ ಇಟ್ಕೊಳ್ತಿದ್ರು. ಎಡ ಬಲಗಳಲ್ಲಿ ಹಿಲಾಲು ಬೆಳಕು. ರಥಗಳಲ್ಲಿ ಅರಸನ ಆ ಕಡೆ ಈ ಕಡೆ ರೆಕ್ಕೆಕಟ್ಟಿಕೊಂಡಿರುವ ಸುಂದರ ತರುಣರು. ಗೂಢಚಾರರು ಜನಸಂದಣಿಯಲ್ಲಿ ನುಸುಳಿ, 'ಅವರು ದೇವಲೋಕದಿಂದ ಬಂದಿದಾರೆ' ಎಂದು ಸುದ್ದಿ ಹಬ್ಬಿಸಬೇಕು. ಪ್ರಜೆಗಳು ಮೋಡಿಗೆ ಒಳಗಾಗುತ್ತಾರೆ. ರಾಜಾ ಪ್ರತ್ಯಕ್ಷ ದೇವತಾಃ !"

"ಆ ಗ್ರಂಥದಲ್ಲಿ ಇಂಥದ್ದೆಲ್ಲ ಇದೆಯಾ ?"

"ಗೂಢಚಾರಿಕೆಗೆ ಯಾರನ್ನು ನೇಮಿಸಬೇಕು ಗೊತ್ತೆ ? ಬಡ ಬ್ರಾಹ್ಮಣರನ್ನು ಮತ್ತು ವೇಶ್ಯೆಯರನ್ನು !"

"ಓದ್ತೇನೆ. ಇವತ್ತೇ ಶುರುಮಾಡ್ತೇನೆ."

"........ನಾವು ಜಲಕ್ರೀಡೆ ಆಡಿದರೂ ಮನಸ್ಸು ವಿಚಲಿತವಾಗಬಾರದು, ತಿಳಿಯಿತೆ ?"

ದಿನವೂ ಉಷೆ ಬರುವುದಕ್ಕೆ ಮುನ್ನ ಬಾಬಾ ಮತ್ತು ಸೌದಾ ಕೆಲ ನಿಮಿಷ ಜಲಕ್ರೀಡೆಯಾಡಿದರು. ದಿನದಿಂದ ದಿನಕ್ಕೆ ನಿಮಿಷಗಳು ಹೆಚ್ಚಿದುವು. ಮೂರು ಹುಣ್ಣಿಮೆಗಳು ಕಳೆದುವು. ಮಳೆಗಾಲ ದಾಟಿತು. ಶಮಿ ಪೂಜೆಯೂ ಆಯಿತು. ಘಳಿಗೆ ಹೊತ್ತು ಜಲಕ್ರೀಡೆಯಾಡಿದರೂ ಇಂದ್ರಿಯಗಳೆಲ್ಲ ಪೂರ್ತಿ ತನ್ನ ಹತೋಟಿಯಲ್ಲಿರುವುದನ್ನು ಸೌದಾಮಿನಿ ಗಮನಿಸಿ, "ನಾನು ಗೆದ್ದೆ" ಎಂದು ಆನಂದಾಶ್ರು ಮಿಡಿದಳು.

'ಕಿಷ್ಕಿಂಧಾವಾಣಿ' ದಿನವೂ ಬರುತ್ತಿದ್ದುದರಿಂದ ಪ್ರತಿ ದಿವಸ ಕಿಷ್ಕಿಂಧೆಯ ಭಾವಕೋಶವನ್ನು ಹೊಗುತ್ತಿದ್ದಳು, ಹೊರಬರುತ್ತಿದ್ದಳು. ತಾನು ಏರಿದ್ದ ಎತ್ತರದಿಂದ ನೋಡಿದಾಗ ಕಿಷ್ಕಿಂಧೆಯ ಹೆಬ್ಬುಲಿಗಳು ಬೆಕ್ಕುಗಳಂತೆ ಕಂಡುವು. ಗ್ರಂಥ ಭಂಡಾರದಲ್ಲಿ ವ್ಯಾಸಂಗ ನಿರತಳಾಗಿ ಆಗಿ, ತನ್ನ ಬುದ್ಧಿ ವಿಕಾಸಗೊಂಡಂತೆ ಸೌದಾಮಿನಿಗೆ ಅನಿಸಿತು.

ಬೆಳಕಿನ ಹಬ್ಬ ಹತ್ತಿರ ಬಂತು.

"ಚಾತುರ್ವರ್ಣ್ಯ ರೂಪಿಸಿದ ಬುದ್ಧಿವಂತರು ಯೋಚಿಸಿದ ಭಾರೀ ಹಬ್ಬ ದೀಪಾವಳಿ. ನಮ್ಮ ಜನರು ಅದಕ್ಕೆ ಯಾವಾಗ ಆಕರ್ಷಿತರಾದರೋ ಖಚಿತವಾಗಿ ಹೇಳಲಾರೆ.

ಅವರು ನಮಗಿಂತ ಉತ್ತಮರು ಎಂಬ ದೀನತನ ನಮ್ಮವರನ್ನು ಕಾಡಿದ ಕ್ಷಣದಲ್ಲಿ ನರಕಾಸುರನ ವಧೆಗೆ ನಾವು ಹೊರಟೆವು; ನಮ್ಮ ರುಂಡವನ್ನು ನಾವೇ ಚೆಂಡಾಡಿದೆವು. ಈಗಲೋ ಬೆಳಕಿನ ಅಲಂಕಾರ ಎಲ್ಲರಿಗೂ ಬೇಕು."

ಆ ಮಾತುಗಳನ್ನು ಅರ್ಥಮಾಡಿಕೊಳ್ಳಲೆತ್ನಿಸುತ್ತ ಸೌದಾಮಿನಿ ಬಾಬಾಜಿಯ ಮುಖವನ್ನೆ ನೋಡಿದಳು.

"ನೆನಪಿಡು ಸೌದಾ, ದೀಪಾವಳಿಯ ರಾತ್ರಿ ರಕ್ತ ರಾತ್ರಿ."

ಸಾಮಾನ್ಯರಿಗಾದರೆ ಚಳಿನಡುಕ ಹುಟ್ಟಬೇಕು. ಆದರೆ ಈಗ ಈಕೆ ಸಾಮಾನ್ಯೆಯಲ್ಲ.

ಹಿರಿಯ ಯೋಗಿನಿಯನ್ನು ಸೌದಾ ಕೇಳಿದಳು :

"ರಕ್ತರಾತ್ರಿ ಅಂದರೇನು ?"

"ನಾನು ಹೇಳಬಾರದು. ನಿನಗೇ ಗೊತ್ತಾಗುತ್ತೆ."

"ಇಲ್ಲಿಗೆ ಬಂದಾಗ ನನ್ನ ತಲೆಗೂದಲು ಅಲ್ಲೊಂದು ಇಲ್ಲೊಂದು ನರೆತಿತ್ತು."

"ಈಗ ?"

"ಅವು ಕಪ್ಪಾಗಿವೆ, ಅಕ್ಕಾಜಿ."

"ಲೇಹ್ಯದ ಪ್ರಭಾವ. ಕಪ್ಪಾದದ್ದು ಹಾಗೆಯೇ ಇರ್ತದೆ. ಉಳಿದ ಕೂದಲು ಬಿಳಿಯಾಗೋದೆ ಇಲ್ಲ."

ಹೌದಾ ! ?—ಎಂದು ಸಂತೋಷದಿಂದ ಉದ್ಗರಿಸುವ ಆಸೆ. ಆ ಆಸೆಯನ್ನು ಸೌದಾಮಿನಿ ಅದುಮಿಹಿಡಿದಳು.

ದೀಪಾವಳಿ ಹತ್ತಿರ ಬಂದಂತೆ, ಕಲ್ಪಿಸಲು ತಾನು ಅಶಕ್ತಳಾದ ರಕ್ತರಾತ್ರಿಯ ನೆನಪಿನಿಂದ ಸೌದಾಮಿನಿಯ ಮೈ ಕಾವೇರಿತು.

ಆ ಇರುಳೆಲ್ಲ ಮಠ, ದೇಗುಲ, ಗೃಹ ಸಮುಚ್ಚಯ, ಮುಖಮಂಟಪ ಎಲ್ಲೆಲ್ಲೂ ಬಣ್ಣಬಣ್ಣದ ದೀಪಗಳು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತಾದಿಗಳು, ಭಜನಾವಳಿ.

ಬಾಬಾ ದೇಗುಲದ ಹೊರಗಿದ್ದರು. ಸೌದಾಮಿನಿ ಅತ್ತ ನಡೆದು, "ಇಂದ್ರನ ಅಮರಾಮತಿ ಇದನ್ನು ಮೀರಿಸೋದು ಸಾಧ್ಯವೆ ಬಾಬಾ ?" ಎಂದಳು.

ಮುಗುಳುನಗೆಯೊಂದೇ ಬಾಬಾ ನೀಡಿದ ಉತ್ತರ.

ಅತಿಥಿಗೃಹದಾಚೆಗೆ ಒಂದು ಸುಸಜ್ಜಿತ ಕೊಠಡಿ ಇತ್ತು. ಅಲ್ಲಿದ್ದ ದೀಪಗಳು ಆರಿದುವು. ಆ ದಿಕ್ಕಿಗೆ ಬಾಬಾ ನಡೆದರು. ಅದಮ್ಯ ಸೆಳೆತಕ್ಕೆ ಒಳಗಾದವಳಂತೆ ಸೌದಾಮಿನಿ ಅವರನ್ನು ಹಿಂಬಾಲಿಸಿದಳು,

ವಿಗ್ರಹಕ್ಕೂ ಉಕ್ಕಿನ ಬಲ ಪಡೆದಿದ್ದವಳಿಗೂ ಸೆಣಸಾಟ, ಮುಂಗೋಳಿ ಕೂಗುವವರೆಗೂ.

ಸೌದಾಮಿನಿ ಕುತೂಹಲದಿಂದ ತನ್ನ ಸೀರೆಯನ್ನು ನೋಡಿದಳು. 'ರಕ್ತರಾತ್ರಿ' ಎಂದರೇನೆಂಬುದು ಸ್ಪಷ್ಟವಾಯಿತು.

"ಪರೀಕ್ಷೆಯಲ್ಲಿ ಉತ್ತೀರ್ಣಳಾದೆನೆ ಬಾಬಾ ?"

"ರಾತ್ರಿ ಹೇಗೆ ಅನಿಸಿತು ?"

"ಅದು ಅಪೂರ್ವ ಅನುಭವ."

"ನಿನಗೆ ಗೊತ್ತಾ ಸೌದಾ ? ಕಿಷ್ಕಿಂಧೆಯ ಮೇಲೆ ದಂಡಯಾತ್ರೆ ನಡೆಸಲು ನೀನೀಗ ಶಕ್ತಳಾಗಿದೀಯ."

"ನನ್ನ ಬಾಬಾಜಿಗೆ ನಿರಾಸೆಯಾಗಲಿಲ್ಲವಲ್ಲ ಅಂತ ನಾನು ಸಂತುಷ್ಟೆ."

"ಸಿದ್ಧತೆಗೆ ಒಂದೆರಡು ತಿಂಗಳು ಬೇಕು. ದಿಲ್ಲಿಯ ಜತೆ ಸಂಪರ್ಕ ಬೆಳೆಸ್ತೇನೆ."

ಪತ್ರಿಕೆಗಳಿಂದ ಸೌದಾಮಿನಿ ಸಾಕಷ್ಟು ಅರ್ಥಮಾಡಿಕೊಂಡಿದ್ದಳು. ರಾಷ್ಟ್ರಪಕ್ಷದ ಆಡಳಿತ ಶಿಥಿಲವಾಗಿತ್ತು. ಪಕ್ಷದ ಪ್ರಾದೇಶಿಕ ನಾಯಕತ್ವ ಅಂತಃಕಲಹದಲ್ಲಿ ಮಗ್ನವಾಗಿತ್ತು. ತೇಪೆ ಹಾಕಲು ದಿಲ್ಲಿ ಯತ್ನಿಸಿತು. ಹೊಲಿಗೆ ನಾಲ್ಕು ದಿನ ಕೂಡ ಬಾಳಲಿಲ್ಲ.

....ವಿಶಾಖಪಟ್ಣಕ್ಕೆ ಬಂದ ರಾಷ್ಟ್ರಪಕ್ಷದ ಮಹಾ ಕಾರ್ಯದರ್ಶಿ ನಕುಲದೇವ್ ಧರ್ಮೇಂದರ್ ಬಾಬಾರನ್ನು ಕಾಣಲು ಆಗಮಿಸಿದರು.

"ಸಾರ್ವತ್ರಿಕ ಚುನಾವಣೆಗೆ ಇನ್ನು ಐದೇ ತಿಂಗಳು. ಲೋಕಸಭೆ ವಿಧಾನಸಭೆಗಳಿಗೆ ಒಟ್ಟಿಗೇ ಚುನಾವಣೆ."

ಮಠದಲ್ಲಿ ರಾಷ್ಟ್ರಪಕ್ಷದ ಗುಪ್ತನಿಧಿ ಇತ್ತು.

"ಪುಟ್ಟಗಂಟು ಯಾವಾಗ ಬೇಕು ?"

"ಕಿಷ್ಕಿಂಧೆಯ ವಿಷಯ ಬರೆದಿದ್ದಿರಲ್ಲ ? ಸೌದಾಮಿನಿ ಬರುವಂತಿದ್ದರೆ ಪುಟ್ಟಗಂಟಿನೊಂದಿಗೆ ದಿಲ್ಲಿಗೆ ಕರಕೊಂಡು ಹೋಗ್ತೇನೆ."

"ಜಾಣಪ್ಪನನ್ನು ನಂಬಿದರೆ ಕಿಷ್ಕಿಂಧೆ ಪಕ್ಷದ ಕೈ ಬಿಟ್ಟೀತು. ಸೌದಾಮಿನಿ ಸಿದ್ಧವಾಗಿದಾರೆ. ಅವರ ನೇತೃತ್ವದಲ್ಲೇ ಚುನಾವಣೆ ನಡೆಸೋದು ಶ್ರೇಯಸ್ಕರ."

"ಅಧ್ಯಕ್ಷರಿಗೂ ಪ್ರಧಾನಿಯವರಿಗೂ ಈ ವಿಷಯ ತಿಳಿಸ್ತೇನೆ."

........ಸೌದಾಮಿನಿಯನ್ನು ನೋಡಿದ ಪ್ರಧಾನ ಕಾರ್ಯದರ್ಶಿ ದಂಗಾದರು. ಬಾಬಾ ಹೇಳಿದ್ದರಲ್ಲಿ ಲವಲೇಶವೂ ಉತ್ಪ್ರೇಕ್ಷೆ ಇರಲಿಲ್ಲ.

ಅತಿಥಿಗೃಹಕ್ಕೆ ಬಂದು ಬಾಬಾಜಿ ಪಿಸು ನುಡಿದರು :

"ಈತ ಭಾರೀ ಕುಳ. ನಿನ್ನನ್ನು ಇಡಿಯೆ ನುಂಗಬಹುದು. ಹುಷಾರಾಗಿರು. ಚಿಕಿತ್ಸೆ ದೊಡ್ಡ ಪ್ರಮಾಣದಲ್ಲಿ ಮುಗಿದರೂ ಯೋಗಾಸನ, ಲೇಹ್ಯಸೇವನೆ ಬಿಡಬೇಡ."

"ಇಲ್ಲ. ಆರು ತಿಂಗಳಿಗೊಮ್ಮೆ ಲೇಹ್ಯ ದಯೆಪಾಲಿಸ್ಬೇಕು. ಯಾರನ್ನಾದರೂ ಕಳಿಸ್ತೇನೆ."

"ಕಿಷ್ಕಿಂಧೆಯ ಮುಖ್ಯಮಂತ್ರಿಯಾದ ದಿನ ಫೋನ್ ಮಾಡೋದಕ್ಕೆ ಮರೀಬೇಡ."

"ಮರೆತೇನಾ ?"

"ದೊಡ್ಡ ಕಾರಿನಲ್ಲಿ ಬಂದಿದ್ದಾನೆ. ಅದರಲ್ಲೇ ವಿಶಾಖಪಟ್ಣಕ್ಕೆ ಪ್ರವಾಸ. ಮುಂದೆ ವಿಮಾನದಲ್ಲಿ ದಿಲ್ಲಿಗೆ ಹಾರಾಟ."

ಸಾಷ್ಟಾಂಗ ಪ್ರಣಾಮ, ಮುಖಮಂಟಪದಲ್ಲಿ. ಅಲ್ಲಿ ಆಶೀರ್ವಚನ. ವಿನೀತ ಳಾಗಿ ಅವಳೆಂದಳು :

"ಇನ್ನು ಕಿಷ್ಕಿಂಧೆಯ ರಾಜ್ಯಲಕ್ಷ್ಮಿ ದಂತೇಶ್ವರಿ. ರಾಜಧಾನಿ ಕಲ್ಯಾಣ ನಗರವಲ್ಲ—ಜಗದಲಪುರ."

"ಹುಚ್ಚಮ್ಮ ! ನಿನಗೆ ಒಳ್ಳೆಯದಾಗಲಿ."

೭

ಮಧ್ಯಪ್ರದೇಶದಲ್ಲಿದ್ದು ಆದಿವಾಸಿಗಳ ಮೇಲೆ ಮಹಾತ್ಮರ ಅಹಿಂಸೆಯ ಮೋಡಿ ಬೀಸಿ ದಿಲ್ಲಿಗೆ ಬಂದಿರುವ ಕಿಷ್ಕಿಂಧೆಯ ಸೌದಾಮಿನಿಯನ್ನು ಕಾಣಲು, ದೇಶದ ನಾನಾ ಭಾಗಗಳ ರಾಷ್ಟ್ರಪಕ್ಷದ ಕಾರ್ಯಕರ್ತರೂ ಧುರೀಣರೂ ಧಾವಿಸಿಬಂದರು. ಎಲ್ಲ ಪತ್ರಿಕೆಗಳೂ ಸಾರಿದುವು: "ರಾಜಕೀಯ ರಂಗದಲ್ಲಿ ಹೊಸ ತಾರೆಯ ಉದಯ." ಸಂದರ್ಶನಗಳು ಪ್ರಕಟವಾದುವು. ಒಂದು ಪತ್ರಿಕೆ ನುಡಿಯಿತು: "ಯಾವ ಚಲನ ಚಿತ್ರ ತಾರೆಗೂ ಈಕೆ ಕಡಮೆ ಇಲ್ಲ." ದಿಲ್ಲಿಗಂತೂ ಎಲ್ಲ ರಾಜ್ಯಗಳ ರಾಷ್ಟ್ರಪಕ್ಷೀಯ ಪ್ರಭೃತಿಗಳು ಆಗಾಗ್ಗೆ ಬರುತ್ತಿದ್ದರು. ಅದು ಅವರಿಗೊಂದು ಚಟವಾಗಿತ್ತು. ಕಿಷ್ಕಿಂಧೆಯಿಂದಲೂ ಬಂದರು: ಮುಖ್ಯಮಂತ್ರಿ ಜಾಣಪ್ಪ, ಗೃಹಸಚಿವ ರಂಗಸ್ವಾಮಿ, ಅರ್ಥಸಚಿವ ನಾಯಕ.... ಅವರೂ ಏಕಾಂತಪ್ರಿಯೆಯಾಗಿದ್ದ ಸೌದಾಮಿನಿಯ ಬಳಿಗೆ ಬಂದು "ನಮಸ್ತೆ ಅಕ್ಕಾ ಅವರೆ" ಎಂದರು. ಮೊದಲು ದಿಗ್ಭ್ರಮೆ, ಬಳಿಕ ಶಂಕೆ. ಅವರಿಂದ ಪ್ರೇರಿತರಾಗಿ ಕೆಲ ಪತ್ರಿಕಾಕರ್ತರು "ನಿಮ್ಮ ಬಾಲ್ಯ?" "ನಿಮ್ಮ ಯೌವನ?" ಎಂದು ಕೆದಕುವ ಸಂದರ್ಶನಗಳಿಗೆ ಬಂದರು.

ಎಲ್ಲರಿಗೂ ಸೌದಾಮಿನಿ ಸಮರ್ಪಕ ಉತ್ತರ ಕೊಟ್ಟಳು :

"ಜನಸೇವೆಯಲ್ಲೇ ದಿನ ಕಳೆದಿದ್ದೇನೆ. ಆ ಸೇವೆಯಲ್ಲೇ ಶೇಷಾಯುಷ್ಯವನ್ನು ಕಳೆಯುತ್ತೇನೆ."

ಒಬ್ಬ ಲೆಕ್ಕ ಹಾಕಿದ :

"ಶೇಷಾಯುಷ್ಯ ಎಪ್ಪತ್ತು ವರ್ಷಗಳಾದರೂ ಇರಬಹುದು."

ರಂಗಸ್ವಾಮಿಯೂ ನಾಯಕರೂ ಇಳಿದನಿಯಲ್ಲಿ ಪರಸ್ಪರ ಸಮಾಲೋಚನೆ ನಡೆಸಿದರು.

ಇಬ್ಬರಲ್ಲೂ ಮೂಡಿದ್ದೊಂದೇ ಪ್ರಶ್ನೆ.

"ಆ ಲೌಡಿನೇನಾ ಇವಳು ?"

ಮಹಾ ಕಾರ್ಯದರ್ಶಿಗೆ ದೂರು ಹೋಯಿತು. ಆತ ಅವರನ್ನು ತರಾಟೆಗೆ ತೆಗೆದುಕೊಂಡ :

"ನಿಮಗೆ ಬುದ್ಧಿ ಇಲ್ಲವೇನ್ರಿ ? ಜಗದಲಪುರದ ಧರ್ಮೇಂದರ್‌ಬಾಬಾ ಈ ಕನ್ನಡಿತಿಯನ್ನು ಕಳಿಸಿದ್ದಾರೆ. ಮಾತಿನ ಓಘವೇನು ! ವಿಚಾರಗಳ ಝರಿ ಏನು ! ರಾಜನೀತಿಯನ್ನು ನೀವು ಅವರಿಂದ ಕಲೀಬೇಕು. ಪಕ್ಷದ ಅಧ್ಯಕ್ಷರು, ಪ್ರಧಾನಿ ಎಲ್ಲರೂ ಒಪ್ಪಿದ್ದಾರೆ. ಬರಲಿರುವ ಸಾರ್ವತ್ರಿಕ ಚುನಾವಣೆ ನಿಮ್ಮ ರಾಜ್ಯದಲ್ಲಿ

ನಡೆಯೋದು ಇವರ ಹಿರಿತನದಲ್ಲೇ. ಯುವತಿ, ಇವರಿಗೇನು ಗೊತ್ತು ?– ಅಂತ ತಕರಾರು ತೆಗೆದರೆ, ತಲೆಗಳು ಉರುಳ್ತವೆ..."

ಇದೊಂದು ಹೊಸ ಅದ್ಭುತ ಎಂದು ಕಿಷ್ಕಿಂಧಾ ಹೀರೆಮಣೆಗಳು ಸುಮ್ಮ ನಾದರು.

ಒಬ್ಬರೆಂದರು :

"ಊರಿಗೆ ಬಂದವಳು ನೀರಿಗೆ ಬರದೆ ಇರುತಾಳಾ ?"

ಊರಿಗೂ ಬಂದಳು, ನೀರಿಗೂ ಬಂದಳು.

ಒಂದು ಅಪರಾಹ್ನ ವಿಮಾನ ದಿಲ್ಲಿಯಿಂದ ಅವರನ್ನು ಹೊತ್ತು ತಂದಿತು. ಜತೆಯಲ್ಲಿ ಇದ್ದರು, ಭಾರತದ ರಾಷ್ಟ್ರಪಕ್ಷದ ಮಹಾ ಕಾರ್ಯದರ್ಶಿ. ಕಿಷ್ಕಿಂಧೆಯ ರಾಷ್ಟ್ರಪಕ್ಷಕ್ಕೆ ಇನ್ನು ಹೊಸ ನಾಯಕತ್ವವಂತೆ–ಎಂಬ ಸುದ್ದಿ ಪತ್ರಿಕೆಗಳಲ್ಲಿ ಬಂತು: "ಇನ್ನು ಹೊಸ ರಕ್ತ ! ಬಿಸಿ ರಕ್ತ !" ಸೌದಾಮಿನಿ ಪತ್ರಿಕೆಗಳಲ್ಲಿ ತನ್ನ ಭಾವಚಿತ್ರ ಗಳನ್ನು ನೋಡಿ ನೋಡಿ ದಣಿದಳು, ತಣಿದಳು.

—"ವಿನೋದನಿಗೀಗ ಹೇಗೆ ಅನಿಸುತ್ತಿದ್ದೀತು ?"

—"ಮೃದುಲಾ ಮೂಗಿನ ಮೇಲೆ ಬೆರಳಿಟ್ಟಿರಬಹುದು."

—"ಕರುಣಾ ತನ್ನ ಚಿತ್ರಗಳೊಡನೆ ನನ್ನದನ್ನು ಹೋಲಿಸಿರಬಹುದು."

—"ಬಾಬಾಜಿಗೆ ಸಮಾಧಾನವಾಗಿರ್ತದೆ."

ಇವೆಲ್ಲ ಸೌದಾಮಿನಿಯ ಮನಸ್ಸಿನಲ್ಲಿ ಹಾದುಹೋದ ವಿಚಾರಗಳು.

ಪಕ್ಷದ ಕಾರ್ಯಾಲಯದಲ್ಲೇ ಒಂದು ಕೊಠಡಿ ಇತ್ತು ವಾಸಯೋಗ್ಯವಾದದ್ದು. ಸೌದಾಮಿನಿ ಅಂದಳು :

"ನನಗಿದು ಸಾಕು, ನಾನಿಲ್ಲೇ ಇರ್ತೇನೆ."

ಸ್ಥಾನವನ್ನು ಬಿಟ್ಟುಕೊಟ್ಟ ಪ್ರಾಂತಸಮಿತಿಯ ಅಧ್ಯಕ್ಷನಿಗೆ ಹೇಗೂ ಸ್ವಂತದ ಮನೆ ಇತ್ತು. ಶಿಷ್ಟಾಚಾರದ ನಗೆ ಬೀರಿ ಆತನೆಂದ :

"ಊಟಕ್ಕೆಲ್ಲ ಅನುಕೂಲವಾಗಿರುತ್ತೆ. ನೀವು ನಮ್ಮ ಮನೆಗೆ ಬರಬಹುದಲ್ಲ."

"ಒಂದು ಸಣ್ಣ ಟಿಫಿನ್ ಕ್ಯಾರಿಯರ್ ಇದ್ದರಾಯ್ತು. ಇಪ್ಪತ್ತನಾಲ್ಕು ತಾಸು ಗಳ ದುಡಿಮೆಗೆ ಇಂಥ ಆಶ್ರಮವಾಸವೇ ಅನುಕೂಲ."

ಜಗದಲಪುರದಲ್ಲಿ ಆಗಲಿಲ್ಲ; ದಾರಿಯಲ್ಲಿ ಊಹುಂ; ದಿಲ್ಲಿ–'ಇಲ್ಲ' ; ಇಲ್ಲಿ ಬೀಳ್ಕೊಡುವುದಕ್ಕೆ ಮುನ್ನ ನೋಡಿಯೇ ಬಿಡುತ್ತೇನೆ—ಎಂದುಕೊಂಡಿದ್ದ ಅಖಿಲ ಭಾರತ ರಾಷ್ಟ್ರಪಕ್ಷದ ಮಹಾ ಕಾರ್ಯದರ್ಶಿ. ದಿನ ರಾತ್ರೆಗಳು ಕಳೆದಂತೆ ಆತ ಹತಾಶನಾದ. ಇಬ್ಬರೇ ಅಕ್ಕಪಕ್ಕದಲ್ಲಿ ಇದ್ದಾಗ ಭುಜಕ್ಕೆ ಭುಜ ತಗಲಿತು, ಮೊಣ ಕಾಲಿಗೆ ಮೊಣಕಾಲು. ಮುತ್ತಿನಂತಹ ಮುಗುಳುನಗೆ.

"ದಿಲ್ಲಿಗೆ ಆಗಾಗ್ಗೆ ಬರ್ತಿರ್ತೇನಲ್ಲ" ಎಂದಳು ಆಕೆ.

"ಬರ್ತೀರಿ, ಸರ್ಪಗಾವಲಿನಲ್ಲಿರ್ತೀರಿ. ನಮ್ಮ ಪಕ್ಷದ ಅಧ್ಯಕ್ಷರಂತೂ ಎಂಥ

ಸಂಪ್ರದಾಯಸ್ಥ ಅನ್ನೋದು ನಿಮಗೆ ಗೊತ್ತಿದೆ. ಚುನಾವಣೆ ಮಗೀಲಿ, ನಿಮ್ಮನ್ನ ಅಖಿಲ ಭಾರತ ರಾಷ್ಟ್ರಪಕ್ಷದ ಯುವವಿಭಾಗದ ನಾಯಿಕೆ ಮಾಡ್ತೀನಿ."

ಕೊಚ್ಚಿಕೊಳ್ಳುವಷ್ಟು ಬಲಾಢ್ಯನಲ್ಲ ಎಂಬುದನ್ನು ಸೌದಾಮಿನಿ ಬಲ್ಲಳು. ಅವಳ ಶಕ್ತಿಯ ಮೂಲ ದಂತೇಶ್ವರಿ ದೇಗುಲ, ಅಲ್ಲಿರುವ ನಿಧಿ, ಅಲ್ಲಿನ ಬಾಬಾ.

"ಈಗಲೇ ಮಹಿಳಾ ವಿಭಾಗದ ನಾಯಿಕೆ ಮಾಡೋದಿಲ್ವ ?"

ಒಂದು ಕ್ಷಣ ಮೌನವಾಗಿದ್ದು ಆತನೆಂದ :

"ನಿಮಗೆ ಅದು ಇಷ್ಟವೆಂದಾದರೆ ಆ ಸ್ಥಾನವನ್ನೇ ಕೊಡೋಣ."

ಕ್ಷಣ ಮೌನಕ್ಕೆ ಕಾರಣವಿತ್ತು, ಮಹಿಳಾ ವಿಭಾಗದ ನೇಮಕಕ್ಕೆಲ್ಲ ಇನ್ನೊಬ್ಬ ಧುರೀಣ ಗುತ್ತೇದಾರನಾಗಿದ್ದ. ಅದನ್ನು ಅರಿತಿದ್ದ ಸೌದಾಮಿನಿ ಗಂಭೀರವಾಗಿ ನಕ್ಕಳು.

"ಸದ್ಯಕ್ಕಂತೂ ಕಿಷ್ಕಿಂಧೇಲಿ ನನಗೆ ವಹಿಸಿಕೊಟ್ಟಿರೋ ಕೆಲಸ ಪೂರ್ತಿ ಮಾಡ್ತೀನಿ."

"ಈಗ ಪೀಡೆಯೋ ಹೊರಡು ದಿಲ್ಲಿಗೆ—ಎನ್ನುತ್ತೀರಾ ?"

"ಅಣ್ಣ, ದಿಲ್ಲಿ ತಲಪಿದೊಡನೆ ಇನ್ನೂರು ಜೀಪು ಕಳಿಸೋದಕ್ಕೆ ಏರ್ಪಾಟು ಮಾಡಿ. ಚುನಾವಣೆ ಲೆಕ್ಕದ್ದು."

"ಸರಿ. ಪ್ರಚಾರಕಾರ್ಯ ಮುಗಿದ್ಮೇಲೆ ಅವನ್ನು ಪಡೆಯೋದಕ್ಕೆ ಒಬ್ಬ ನನ್ನ ಕಳಿಸ್ತೀನಿ."

"ಪರಿಚಯಕ್ಕೆ ಅವನಲ್ಲಿ ಮುದ್ರೆಯುಂಗುರ ಇರಲಿ !"

"ಇದೇನು ಬೋಳು ಬೆರಳು ? ಈಚೆಗೆ ಚಾಚಿ ಕೈ."

ಅಖಿಲ ಭಾರತ ರಾಷ್ಟ್ರಪಕ್ಷದ ಮಹಾ ಕಾರ್ಯದರ್ಶಿಯ ರತ್ನಖಚಿತ ಉಂಗುರ ಕೋಮಲ ಬೆರಳಿಗೆ ಬಂತು.

* * *

'ಮಾಜಿ' ಕಿಷ್ಕಿಂಧೆಯ ಜಾಯಮಾನಕ್ಕೆ ಒಗ್ಗುವುದಿಲ್ಲವೆಂದು, 'ಅಕ್ಕಾವರು' 'ಅಮ್ಮಾವರು' ಕಳಪೆ ಎಂದು, ಸೌದಾಮಿನಿ 'ಮಾತಾಜಿ' ಆದಳು. ಪಕ್ಷದ ಕಾರ್ಯಾಲಯದ ಸಿಬ್ಬಂದಿ, ಸ್ವಯಂಸೇವಕರು, ಹಿರಿ–ಕಿರಿ–ಮರಿ ಧುರೀಣರು, ಜಿಲ್ಲೆಗಳಿಂದ ಬಂದ ಸಂದರ್ಶಕರು ಎಲ್ಲರೂ ಹೊಸ ನಾಯಿಕೆಯನ್ನು 'ಮಾತಾಜಿ' ಎಂದು ಕರೆದರು.

ಸೌದಾಮಿನಿ ಧರ್ಮಪೀಠಕ್ಕೆ ಹೋಗಿ, ಬಹಳ ಸೊರಗಿದ್ದ ಯತಿಗೆ ನಮಿಸಿದಳು. ಆಕೆಗೆ ಶುಭ ಹಾರೈಸಿ ಆತ ಅಂದರು :

"ನನಗೆ ಉತ್ಕಲದಲ್ಲಿರುವ ಮಠಕ್ಕೆ ವರ್ಗವಾಗಿದೆ. ಇಲ್ಲಿಗೆ ಚೆನ್ನೈಯವರು ಬರ್ತಾರೆ."

"ನನ್ನ ಪುನರ್ಜನ್ಮಕ್ಕೆ ತಾವು ಕಾರಣರಾದಿರಿ: ತಮ್ಮನ್ನೂ ಬಾಬಾಜಿಯನ್ನೂ ನಾನೆಂದೂ ಮರೆಯಲಾರೆ."

ಪ್ರಸಾದ ಪಡೆದು ಪಕ್ಷದ ಕಾರ್ಯಾಲಯಕ್ಕೆ ಮಾತಾಜಿ ಹಿಂತಿರುಗಿದಳು.

...ಮಾತಾಜಿ.

ಆಕೆಯ ಸನ್ನಿಧಿಗೆ ಹೋದೊಡನೆ ಪ್ರಭೆಯ ಮುಂದೆ ನಿಂತಂತಾಗುತ್ತಿತ್ತು. ಏನು ಇದರರ್ಥ ? ಈಕೆಗೆ ಅತಿಮಾನವ ಶಕ್ತಿ ಇದೆ ಎಂದೆ? ಪ್ರಸಾಧನ ಕಾರ್ಯದಲ್ಲಿ ನೆರವಾಗುವವರು ಯಾರು ಎಂದು ಗುಟ್ಟಾಗಿ ವಿಚಾರಿಸಿದರು. ಯಾರೂ ಇರಲಿಲ್ಲ. ಎಲಾ ! ನಿರಾಭರಣ ಸುಂದರಿ ! ಈ ಮೈ ಹೊಳಪು ಸಾಕಲ್ಲ ? ಸಹಸ್ರಗಟ್ಟಲೆ ಬುಟ್ಟಿಗಳಲ್ಲಿ ಲಕ್ಷಗಟ್ಟಲೆ ವೋಟುಗಳನ್ನು ಬಾಚಬಹುದು. ಸ್ಪರ್ಧಿಗಳು ವಿರೋಧಿಗಳು ಸ್ವಲ್ಪ ಸಮಯ ಬಾಲ ಮಡಚಿ ಇದ್ದರು. ಮಾತಾಜಿಯ ಮೃದು ಮಾತಿನ ಬಿಗಿಹಿಡಿತ ಅತಿಯಾಯಿತು ಎನಿಸಿದಾಗ, 'ಗುರ್' ಎಂದರು. ಇಬ್ಬರು ಅಂಗರಕ್ಷಕಭಟರು ಕಾಣಿಸಿಕೊಂಡರು. "ಈ ವ್ಯವಸ್ಥೆ ಮಾಡಿಕೋ" ಎಂಬುದು ದಿಲ್ಲಿಯಿಂದ ಬಂದಿದ್ದ ಸೂಚನೆ. ಅವರೂ ಅಲ್ಲಿಂದ ಬಂದಿದ್ದರು. ಈ ಹಿಂದೂಸ್ಥಾನಿ ಅಂಗರಕ್ಷಕರಿಗೆ ತಕ್ಕಮಟ್ಟಿನ ಕನ್ನಡವೂ ಬರುತ್ತಿತ್ತು.

ಹಲ್ಲೆ ಇತ್ಯಾದಿ ಸೇವಾಕಾರ್ಯಗಳಿಗೆ ಸದಾ ಸಿದ್ಧರಾಗಿರುತ್ತಿದ್ದ ಸ್ಥಳೀಯ ದಾದಾಗಳು ನಾಯಕರನ್ನು ಕೇಳಿದರು.

"ನಮಗಿನ್ನು ಕೆಲಸ ಇಲ್ಲವಾ ?"

"ಸ್ವಲ್ಪ ದಿನ ಸುಮ್ಮನಿರಿ."

ಎರಡು ವಾರ ಕಳೆಯುವುದಕ್ಕಿಲ್ಲ. ಸಮರ ಘೋಷಣೆಯಾಯಿತು.

"ದಿಲ್ಲಿ ನಮ್ಮ ಮೇಲೆ ಧುರೀಣರನ್ನು ಹೇರುವುದು ನಮಗೆ ಸಮ್ಮತವಿಲ್ಲ !"

"ಸೌದಾಮಿನಿ ದಿಲ್ಲಿಗೆ ಫೋನ್ ಮಾಡಿದಳು :

"ಶಿಸ್ತಿನ ಕ್ರಮ ಅಗತ್ಯವಾದೀತು."

ರಾಷ್ಟ್ರೀಯ ನಾಯಕತ್ವ ಹಸುರು ನಿಶಾನೆ ಬೀಸಿತು.

ಮೊದಲ ಕೊಡಲಿ ಏಟು ನಾಯಕರ ಬುಡಕ್ಕೆ. ಮರ ಉರುಳಿತು. "ಪಕ್ಷದಿಂದ ಹೊರ ಹಾಕಿದರು." ಸುದ್ದಿ ಕಾಳ್ಗಿಚ್ಚಾಗುತ್ತದೆ ಎಂದಿದ್ದರು ನಾಯಕರು, ಅವರ ನಿಷ್ಠಾವಂತ ಬೆಂಬಲಿಗರು. ಕಾಡು ತಣ್ಣಗೇ ಇತ್ತು.

ಪಕ್ಷದ ಎಲ್ಲ ಕಾರ್ಯಕರ್ತರ ಸಭೆ ಕರೆದಳು ಮಾತಾಜಿ.

ರಾಜಕೀಯದ ಒರೆಗಲ್ಲು ವಾಗ್ಮಿತೆ. "ಮೊದಲು ಮಾತು ಕೇಳೋಣ. ಆಮೇಲೆ ಮುಖಂಡತ್ವದ ಮೌಲ್ಯಮಾಪನ" ಎಂದರು ಕೆಲವರು. ಉಳಿದವರೆಂದರು : "ದಿಲ್ಲೀಶ್ವರರಿಗೆ ಅಷ್ಟು ತಿಳೀದು ಅಂದ್ಕೊಂಡಿರಾ ?"

ಕಿಕ್ಕಿರಿದ ಸಭೆ. ಉಗಮದಿಂದ ಮೆಲ್ಲಮೆಲ್ಲನೆ ಹರಿದಳು ಇಂದ್ರಾವತಿ(ಕಾವೇರಿ).

ಕಲ್ಲು ಬಂಡೆಗಳು ಬಂದಾಗ ಕುಪ್ಪಳಿಸಿದಳು. ಪ್ರಪಾತ ದೊರೆತಾಗ ಜಲಪಾತವಾದಳು. ಎಂಥ ಕರತಾಡನ ! ಎಂಥ ಜಯಕಾರ !

ಬಯಲಿನ ಅಂಚಿನಲ್ಲಿ ಕಾರುಗಳಲ್ಲಿ ಕುಳಿತು ಭಾಷಣ ಕೇಳಿದವರಲ್ಲಿ ಸುಲೋಚನಾ ಬಾಯಿಯೂ ಇದ್ದಳು. ಅನಾಥ ಬಾಲಕಾಶ್ರಮದ ಸಂಚಾಲಿಕೆ. ಹೊಸ ತಾರೆ ಯನ್ನು ಕುರಿತ ಕಿಂವದಂತಿ ಅವಳಿಗೂ ಮುಟ್ಟಿತ್ತು. ಮಗ್ಗುಲಲ್ಲಿದ್ದವಳಿಗೆ ಆಕೆ ಹೇಳಿದಳು :

"ಸಾಧ್ಯವೇ ಇಲ್ಲ. ಯಾವ ಹೋಲಿಕೆಯೂ ಇಲ್ಲ. ಈಕೆ ಜನ್ಮತಃ ನಾಯಿಕೆ. ಮಾತಾಜಿಯೇ ಸರಿ."

ಈ ಸಭೆಯ ಬಳಿಕ ರಾಷ್ಟ್ರಪಕ್ಷದ ಸದಸ್ಯತ್ವ ಹೆಚ್ಚಿತು. ನಾಯಕರಿಗೀಗ ಪ್ರತಿಷ್ಠೆಯ ಪ್ರಶ್ನೆ.

ಸುಮುಹೂರ್ತದಲ್ಲಿ ತಮ್ಮದೇ ಆದ ಪ್ರಜಾಪಕ್ಷವನ್ನು ಆರಂಭಿಸಿದರು.

"ಅವಸರವಿಲ್ಲ. ಚುನಾವಣೆಗೆ ಟಿಕೆಟು ಕೊಡುವ ಸಮಯ ಬರಲಿ. ನನ್ನ ಪಕ್ಷದ ಮುಂದೆ ಹೌಸ್‌ಫುಲ್ ಬೋರ್ಡ್ ಹಾಕಬೇಕಾದೀತು" ಎಂದು ಭಕ್ತರ ಎದುರು ನಾಯಕರು ಶಂಖ ಊದಿದರು.

ಪತ್ರಿಕೆಗಳನ್ನು ಕೊಳ್ಳುವವರ, ಓದುವವರ ಸಂಖ್ಯೆ ಹೆಚ್ಚಿತು.

ರಾಷ್ಟ್ರಪಕ್ಷ—ಪ್ರಜಾಪಕ್ಷಗಳ ಜಗಳದಿಂದ ಪ್ರಯೋಜನವಾಗುವುದು ತನಗೆ ಎಂದಿತು ಸಮತಾಪಕ್ಷ. ನೋಟೀಸು ಕೊಟ್ಟು ಮುಷ್ಕರ, ದಿಢೀರ್ ಮುಷ್ಕರ... ಪಕ್ಷದ ಕಾರ್ಯಕರ್ತರನ್ನು ಕ್ರಿಯಾಶೀಲರನ್ನಾಗಿ ಮಾಡಲು ಈ ತಂತ್ರ ಅಗತ್ಯವಾಗಿತ್ತು. ಉತ್ತರದಲ್ಲಿ ಹಾಸನೂರು, ಪೂರ್ವದಲ್ಲಿ ಚಿನ್ನದ ಬಯಲು, ಇವೆರಡರ ನಡುವೆ ಧರ್ಮಪುರಿ—ಈ ಮೂರು ಕ್ಷೇತ್ರಗಳು ತನ್ನ ವಶವಾಗಬೇಕೆಂದು ಸಮತಾಪಕ್ಷ ಸಮರ ತಂತ್ರ ರೂಪಿಸಿತು. ಒಂದು ಓಟು, ಒಂದು (ರೂಪಾಯಿ) ನೋಟು—ಇದು ಸಮತಾ ಪಕ್ಷದ ಘೋಷ. ಉದ್ದಿಮೆದಾರರು ಎಲ್ಲ ರಾಜಕೀಯ ಪಕ್ಷಗಳಿಗೂ ಪ್ರತಿಯೊಂದರ ಬಲಕ್ಕೆ ಅನುಗುಣವಾಗಿ ಹಣ ನೀಡಿದರು. ಅದು ಕಪ್ಪು ಹಣ ಎಂದು ಯಾರೂ ಬೇಸರಿಸಲಿಲ್ಲ.

ರಾಷ್ಟ್ರಪಕ್ಷದ ಕಾರ್ಯಾಲಯದಲ್ಲಿ ಚತುರಮತಿಗಳಿದ್ದರು. ಅನುಭವಿ ವೃದ್ಧ ರಿದ್ದರು. ಉತ್ಸಾಹೀ ಯುವಕರಿದ್ದರು. ಕಳೆದದ್ದೆಷ್ಟು, ಉಳಿದದ್ದೆಷ್ಟು ಎಂದು ಲೆಕ್ಕ ಹಾಕುವ ನಡುವಯಸ್ಸಿನವರಿದ್ದರು. ಒಬ್ಬಾತ_ಪರಶುರಾಮ_ಬೇರೆ ಯಾರೂ ಇಲ್ಲದಿದ್ದಾಗ ಸೌದಾಮಿನಿಯನ್ನು ಸಮೀಪಿಸಿ ಅಂದ ;

"ಮಾತಾಜಿ, ಒಂದು ವಿಷಯ ತಮ್ಮ ಗಮನಕ್ಕೆ ಬಂದಿದೆಯೊ ಇಲ್ಲವೊ ?"

"ಯಾವುದು ಪರಶುರಾಮ್ ?"

"ತಮ್ಮ ಮತ ಕ್ಷೇತ್ರ ಯಾವುದು ?"

"ಇನ್ನೂ ನಿರ್ಧರಿಸಿಲ್ಲ."

"ಮತದಾರರ ಪಟ್ಟಿ ಓದಿದೆ ; ತಮ್ಮ ಹೆಸರಿಲ್ಲ."

"ಮತದಾರರ ಗಣನೆ ಆದಾಗ ನಾನು ರಾಜ್ಯದಲ್ಲಿರಲಿಲ್ಲ."

"ಹಾಗೇಂತ ಅಂದ್ಕೊಂಡೆ."

"ಚುನಾವಣಾ ಅಧಿಕಾರಿಗೆ ತಿಳಿಸಿ ಈಗ ಸೇರಿಸಿದರಾಯಿತು. ಒಂದು ಅರ್ಜಿ ಫಾರ್ಮ್ ತನ್ನಿ."

"ತರ್ತೇನೆ. ಸ್ವಲ್ಪ ಖರ್ಚು ಮಾಡಿದರೆ ಸುಲಭವಾಗಿ ಆಗುತ್ತೆ."

"ಛೆ ! ಛೆ ! ಖರ್ಚಿನ ಪ್ರಶ್ನೆಯಲ್ಲ. ಇದು ತತ್ವಕ್ಕೆ ಸಂಬಂಧಿಸಿದ್ದು. ದಿಲ್ಲಿಗೆ ತಿಳಿಸ್ತೇನೆ."

ತಿಳಿಸಿದಾಗ ದಿಲ್ಲಿ ಹೇಳಿತು :

"ಚಿಂತೆ ಬೇಡ. ಚುನಾವಣಾ ಕಮಿಶನರ್ ನಾಳೆ ನಿಮ್ಮನ್ನು ಕಾಣ್ತಾನೆ."

ಆತ ಬಂದು ಭೇಟಿಯಾದ, ನಸುಕಿನಲ್ಲಿ, ಗೋಪ್ಯವಾಗಿ. ಪರಶುರಾಮನ ಕೆಲಸವನ್ನು ಆತನೇ ಮಾಡಿದ್ದ. ಸೌದಾಮಿನಿದೇವಿ ಅವಿವಾಹಿತೆ. ತಂದೆ ದಿವಂಗತ ಆನಂದವರ್ಧನ.....

"ವಿಳಾಸ ಯಾವುದು ಕೊಡೋಣ ?" ಆಕೆ ಕೇಳಿದಳು.

"ಕಾರ್ಯಾಲಯದ ಅನೆಕ್ಸ್ ಎಂದರೆ ಕಾನೂನುಬದ್ಧವಾಗಿರ್ತದೆ. ಅರ್ಜಿಗೆ ಸ್ವಲ್ಪ ಹಿಂದಿನ ತಾರೀಕು ಹಾಕ್ತೇನೆ. ಅಕ್ರಮವಾಗೋದಿಲ್ಲ."

"ಈ ಕೆಲಸ ಆಯ್ತೂಂತ ದಿಲ್ಲಿಗೆ ನಿಮ್ಮ ಚೀಫ್‌ಗೆ ಫೋನ್ ಮಾಡಿಬಿಡಿ. ನಮ್ಮ ಕಾರ್ಯಾಲಯಕ್ಕೆ ನಾನೂ ತಿಳಿಸ್ತೇನೆ."

"ತುಂಬಾ ಉಪಕೃತ, ಮಾತಾಜಿ."

ಪಕ್ಷದ ಒಳಗಿನ ಅಥವಾ ಹೊರಗಿನ ವಿರೋಧಿಗಳಿಗೆ ಸುಳಿವು ಸಿಗುವುದಕ್ಕೆ ಮೊದಲೇ ಸೌದಾಮಿನಿ ಪಾದಕ್ಕೆ ನೆಟ್ಟಿದ್ದ ಮುಳ್ಳನ್ನು ನೋವಾಗದಂತೆ ತೆಗೆದು ಬಿಟ್ಟಿದ್ದಳು.

ಒಂದು ರಾತ್ರಿ ಸೌದಾಮಿನಿಯದೇ (ಅಲ್ಲ, ಹಳೆಯ ಹೆಸರಿನ ಹೆಂಗಸು) ನೆನಪಾಗಿ ರಂಗಸ್ವಾಮಿ ಬೆಚ್ಚಿಬಿದ್ದರು. ದೀಪ ಹಚ್ಚಿ ಚುನಾವಣಾ ಮತದಾರರ ಪಟ್ಟಿಯನ್ನು ಎರಡೆರಡು ಸಲ ತಮ್ಮ ತೀಕ್ಷ್ಣದೃಷ್ಟಿಗೆ ಗುರಿಪಡಿಸಿದರು. ಇರುವ ಸಾಧ್ಯತೆ ಇದ್ದ ಎರಡು ಮೂರು ಡಿವಿಜನುಗಳಲ್ಲಿ ಪುಟ್ಟವ್ವ ಇರಲಿಲ್ಲ. ಅನುಬಂಧದಲ್ಲಿ ಸೌದಾಮಿನಿ ದೇವಿ ವಿರಾಜಮಾನಳಾಗಿದ್ದಳು.

ರಂಗಸ್ವಾಮಿ ಒಂದು ನಿದ್ದೆ ಮಾತ್ರೆ ನುಂಗಿ ಮಲಗಿದರು.

ಸೌದಾಮಿನಿ ತಮ್ಮ ಮಾಜಿ ಗೆಳತಿ ಎಂದಾದರೆ ವ್ಯಾಪಾರ ಬಿರುಸಾಗಿ ನಡೆದಿರಲೇ ಬೇಕು—ಇದು ನಾಯಕರ ಅಂಬೋಣ. ರಾಷ್ಟ್ರಪಕ್ಷದ ಕಾರ್ಯಾಲಯದ ಮೂಲೆ ಮೂಲೆಗಳನ್ನೂ ಅರಿತಿದ್ದ ನಾಯಕರು ಸತ್ಯಶೋಧನೆಗೆ ತೊಡಗಿದರು. ಒಬ್ಬ ಸ್ವಯಂ

ಸೇವಕನಿಗೆ ಟಿಕೆಟಿನ ಬೆಲ್ಲ ಹಚ್ಚಿದರು. ಆರೆಂಟು ದಿನ ಆ ಸೌದಾಮಿನಿ ಮೇಲೆ ಕಣ್ಣಿಡಲು ಆದೇಶವಿತ್ತರು.

"ಹಗಲು ಮಾತ್ರ ಸಾಕೊ ಕಾವಲು ?"

"ರಾತ್ರಿಯೂ ಮುಖ್ಯ ; ರಾತ್ರಿಯೇ ಮುಖ್ಯ."

"ನಿದ್ದೆ ಕೆಡಬೇಕಾಗ್ತದೆ."

"ಸುಮ್ಮನೆ ಬರ್ತದೊ ಶಾಸಕಪದವಿ ?"

"ಶಾಸಕನಾದ ಮೇಲೆ ಮಂತ್ರಿಸ್ಥಾನ...."

"ಆಗಲಪ್ಪ ಆಗಲಿ. ಬೇಕಾದರೆ ಹಗಲು ನಿದ್ರಿಸು. ರಾತ್ರಿ ಕಾರ್ಯಾಲಯದಲ್ಲಿ ಕಾವಲಿರುವವನ ಹಾಗೆ ನಟಿಸು. ಇದು ತಮಾಷೆಯಲ್ಲ: ತುಂಬಾ ಸೀರಿಯಸ್ಸು."

"ಯಾರಿಗೆ ?"

"ನಮ್ಮೆಲ್ಲರಿಗೂ. ಕತ್ತಲಾದ್ಮೇಲೆ ಬೆಳಗಾಗುವವರೆಗೂ ಅವಳೇನು ಮಾಡ್ತಾಳೇಂತ ಏಳು ರಾತ್ರಿಗಳ ವರದಿ ಕೊಡು."

"ಕಾವಲಿನವರಿಗೆ ಕುಡಿಸ್ಬೇಕಾಗುತ್ತೆ."

ನೂರರ ಎರಡು ನೋಟನ್ನು ನಾಯಕರು ಅವನಿಗೆ ಕೊಟ್ಟರು.

"ಅವನಿಗೆ ಕುಡಿಸೂ ಬದಲು ಎಲ್ಲಾದರೂ ನೀನೇ ಕುಡಿದು ಮಲಗಿದೆಯೋ ನೀನು ಎಂ.ಎಲ್.ಎ.ಯೂ ಆಗೋದಿಲ್ಲ, ಮಿನಿಸ್ಟರೂ ಆಗೋದಿಲ್ಲ."

"(ಹಾಡುತ್ತ) ಕೊಟ್ಟ ಮಾತಿಗೆ ಮೀರಲಾರೆನು, ಕೆಟ್ಟಯೋಚನೆ ಮಾಡಲಾರೆನು."

"ಹೀಗಿರಬೇಕು ನಮ್ಮ ಗೋವು."

ನಾಯಕರೆದ್ದು ಸ್ವಯಂ ಸೇವಕನ ಬೆನ್ನು ತಟ್ಟಿದರು.

ರಾತ್ರಿ ಎಂಟು ಗಂಟೆಗೆ ಕ್ಯಾರಿಯರ್ ಊಟ. ಮುಂದೆ ಹತ್ತು ಗಂಟೆಯವರೆಗೆ ಜಿಲ್ಲಾ ಪಕ್ಷ ಪ್ರಮುಖರ ಜತೆ ಪತ್ರವ್ಯವಹಾರ (9ಘಂಟೆಗೊಮ್ಮೆ ನ್ಯೂಸ್ ಶ್ರವಣ). ಹತ್ತರ ಬಳಿಕ ಸಂಜೆ ಬಂದ ಶೀಘ್ರಲಿಪಿಕಾರ ಟೈಪಿಸ್ಟ್‌ನಿಗೆ ಬಿಡುಗಡೆ. ಬಳಿಕ ಫೋನ್ ಕರೆಗಳು ಅಲ್ಲಿಗೆ, ಇಲ್ಲಿಗೆ. ಹನ್ನೊಂದಕ್ಕೆ ಟ್ರಂಕಿನಿಂದ ಜಾಡಿ ತೆಗೆದು ಚಮಚ ತುರುಕಿ ಏನೋ ಸೇವನೆ. ಮಂಚದ ಕೆಳಕ್ಕೆ ಟ್ರಂಕನ್ನು ತಳ್ಳುವುದು. ಕಾಲು ತೊಳೆಯುವ ಮಗ್ಗುಲು ಕೊಠಡಿಗೆ. ಹನ್ನೆರಡು ಘಂಟೆಗೆ ಸ್ವಿಚ್ ಆಫ್. ಬಾಗಿಲು ಒಳಗಡೆಯಿಂದ ಭದ್ರ. ನಿದ್ದೆಯ ಉಸಿರಾಟ: ಕಿಟಿಕಿಯ ದಂಡೆ ಏರಿ ತೆರೆದಿದ್ದ ಮೇಲ್ಭಾಗದಿಂದ ಇಣಕಿ ನೋಡಬೇಕು. ಮಸುಕು ಮಸುಕು. ಮಲಗಿದ್ದಾಳೆ. (ಇಲಿಯಾಗಿ ಒಳಹೊಕ್ಕು ಮತ್ತೆ ನಾನು ನಿಜವೇಷಧಾರಣೆ ಮಾಡುವುದು ಸಾಧ್ಯವಿದ್ದರೆ ! ಕೆಳಕ್ಕಿಳಿದ.) ಐದು ಘಂಟೆಗೆ ನೀರಿನ ಸದ್ದು. ಕಿಟಿಕಿ ಹತ್ತಿದ. ಅತ್ಯಂತ ಕಡಮೆ ಪೋಷಾಕು ಧರಿಸಿ ಯೋಗಾಸನ. ಆರು ಘಂಟೆಗೆ ಸ್ನಾನ (ಯೋಗಾಸವನ್ನು ಪೂರ್ತಿ ನೋಡಬೇಕೆನಿಸಿತ್ತು. ಆದರೆ ಕಿಟಿಕಿ ದಂಡೆಯ ಮೇಲೆ ಕೆಲ ನಿಮಿಷಗಳಿಗಿಂತ ಹೆಚ್ಚು ಇರಬಾರದು): ಬಾಗಿಲು ತೆರೆಯಿತು.

ಏಳು ರಾತ್ರಿಗಳ ವರದಿಯೂ ಇದೇ. ನಾಯಕರು ಯೋಚಿಸಿದರು : 'ಇದನ್ನು ನಂಬಲೆ ?'

ಸುಳ್ಳೇನಾದರೂ ಬರೆದಿದ್ದ ಎಂದರೆ, ಎಂ.ಎಲ್.ಎ. ಆಗಲು ಲಾಯಕ್ಕು. ನಿಜವೆಂದಾದರೆ, ಅವಳು ಯಾರೋ ಬೇರೆಯೇ. ಹಿಮಾಲಯದಲ್ಲಿ ತಪಸ್ಸು ಮಾಡಿ ಬಂದಿರೋ ಸನ್ಯಾಸಿನಿ.

"ಆಗಲಿ. ಹೋಗು."

ಅವನು ಹೋಗಲಿಲ್ಲ.

ನಾಯಕರು ಐದರ ಇಪ್ಪತ್ತು ನೋಟು ಕೊಟ್ಟರು.

"ಟಿಕೆಟ್ಟು ?"

"ಇನ್ನೂ ಸಮಯವಿದೆ. ಅಲ್ಲಿ ಏನಾದರೂ ವಿಶೇಷವಿದ್ದಾಗ ಬಂದು ಹೇಳು. ನೀನು ಇಲ್ಲಿಗೆ ಬರೋದು ಹೋಗೋದು ಯಾರಿಗೂ ಗೊತ್ತಾಗಬಾರದು."

"ಊಟ ಆಗಿಲ್ಲ."

"ಓಡು ಮನೆಗೆ. ಒಂದು ವಾರವಾಯ್ತು, ನಿನ್ನ ತಾಯಿ ತಂದೆ ತಮ್ಮ ಕುಮಾರ ಕಂಠೀರವನ ಮುಖ ನೋಡಿ."

....ಸೌದಾಮಿನಿಗೆ ಕೆಲವು ಖಚಿತ ಅಭಿಪ್ರಾಯಗಳಿದ್ದುವು.

"ಒಂದು ಹಾಡಿಗೆ ಸಮ ಹತ್ತು ಭಾಷಣ."

"ಒಂದು ನಾಟಕಕ್ಕೆ ಸಮಾನ ನೂರು ಹಾಡು."

ಅವಳು ಕರೆ ನೀಡಿದಳು, ಕಿಷ್ಕಿಂಧೆಯ ಯುವ ನಾಟಕಕಾರರಿಗೆ, ಕಲಾವಿದರಿಗೆ. ಚಿತ್ರಕಾರರು ಬಂದರು, ಭಿತ್ತಿಚಿತ್ರಗಳು–ಬ್ಯಾನರುಗಳ ರಚನೆಗೆ. ಬ್ಯಾಡ್ಜುಗಳನ್ನು ಹೊಲಿಯಲು ದರ್ಜಿಗಳು ಅಲ್ಲಿ ನೆರೆದರು. ಚುರುಕು ಲೇಖನಿಯ ಬರೆಹಗಾರರು ಆಗಮಿಸಿದರು, ಅಗೋಚರ ಸಾಧನೆಗಳನ್ನು ಬಣ್ಣಿಸಿ ಬರೆಯಲು ; ಮನಸ್ಸನ್ನು ಸೂರೆಗೊಳ್ಳುವ ಘೋಷವಾಕ್ಯಗಳನ್ನು ರೂಪಿಸಲು.

ಅವರನ್ನು ಉದ್ದೇಶಿಸಿ ಸೌದಾಮಿನಿ ಅಂದಳು.

"ರಾಷ್ಟ್ರಪಕ್ಷದ ಗುರಿ ಆರ್ತರ ಕಣ್ಣುಗಳಿಂದ ಕಂಬನಿ ಒರೆಸುವುದು. ನಮ್ಮ ಮತದಾರರಲ್ಲಿ ಹೆಚ್ಚಿನವರು ಗ್ರಾಮೀಣ ಜನ ಮತ್ತು ಪಟ್ಟಣದ ದರಿದ್ರರು. ನರ್ತನ ಗಾಯನ ಇದ್ದರೆ ಮಾತ್ರ ಅವರ ಹೃದಯದ ತಂತಿ ಮೀಟಬಹುದು."

"ಹೌದು ಮಾತಾಜಿ."

ಎಲ್ಲರೂ "ಹೌದು, ಹೌದು" ಎಂದು ಗೋಣು ಆಡಿಸುವವರೇ.

"ಕಿಷ್ಕಿಂಧೆಯ ಮೂರು ವಲಯಗಳಿಗೆ ಸ್ಪೆಷಲ್ ವ್ಯಾನುಗಳು. ಬಜೆಟ್ ಸಿದ್ಧಪಡಿಸಿ."

ಈ ಸುದ್ದಿ ತಿಳಿದ ನಾಯಕರು ಅಧೀರರಾದರು.

ತಮ್ಮ ಪಕ್ಷದ ಪ್ರಮುಖರೊಡನೆ ಆಪ್ತಾಲೋಚನೆ ನಡೆಸಿದರು. ಅವರಲ್ಲಿ

ಒಬ್ಬಿಬ್ಬರ ಬಂಧುಗಳು ಚಲನಚಿತ್ರೋದ್ಯಮದಲ್ಲಿದ್ದರು. ಪ್ರಚಾರದ ಕೊನೆಯ ವಾರದಲ್ಲಿ ಪರಿಚಿತ ನಟ ನಟಿಯರನ್ನೆಲ್ಲ ಅಖಾಡಕ್ಕಿಳಿಸಬೇಕು ; ಅಷ್ಟರ ತನಕ ಈ ಸುದ್ದಿ ಬಹಿರಂಗವಾಗಬಾರದು—ಎಂದು ತೀರ್ಮಾನ ಕೈಗೊಂಡರು.

ಆದರೆ ಮುಂದಿನ ಭಾನುವಾರವೇ 'ಕಿಷ್ಕಿಂಧಾವಾಣಿ'ಯ ಇಡೀ ಪುಟದಲ್ಲಿ ಕನ್ನಡದ ಪ್ರಮುಖ ತಾರಾಜೋಡಿಯ ಕರೆ ಬಂತು :

"ನೆನಪಿರಲಿ. ರಾಷ್ಟ್ರಪಕ್ಷಕ್ಕೇ ನಿಮ್ಮ ಘನಮತ."

"ಅದೇ ಪುಟದಲ್ಲಿ ಸೌದಾಮಿನಿಯ ಭಾವಚಿತ್ರವೂ ಇತ್ತು. ಅದು ಆ ವೇಳೆ ಗಾಗಲೇ ಕಿಷ್ಕಿಂಧೆಯ ಸಾಕ್ಷರರಿಗೆ ಪರಿಚಿತವಾಗಿದ್ದ ಸುಂದರವದನ.

ಊರುಗಳಲ್ಲಿ ಗೋಡೆಗಳಿಂದಲೂ ಮರಗಳಿಂದಲೂ ಸೌದಾಮಿನಿ ಮೋಹಕ ನಗೆ ಬೀರಿದಳು.

ಸಮತಾ ಪಕ್ಷ ಆರು ಕ್ಷೇತ್ರಗಳಲ್ಲಿ ಹೋರಾಡಲು ನಿರ್ಧರಿಸಿತು. ಮೂರರಲ್ಲಿ ಗೆಲ್ಲಬಹುದು. ಅಂದರೆ ಅರ್ಧಾಂಶ ಜಯಿಸಿದಂತಾಯಿತಲ್ಲ ! ಅವರ ಪುಟ್ಟ ಕಲಾತಂಡ ಹಗಲಿರುಳೆನ್ನದೆ ದುಡಿಯಿತು.

* * *

"ನಮ್ಮೂರಿಗೆ ಬನ್ನಿ. ನಮ್ಮಲ್ಲಿಗೆ ಬನ್ನಿ."

—ಹೀಗೆ ಕರೆ, ಮೊರೆ ಬಂದುವು ಉಮೇದುವಾರರ ಪಟ್ಟಿ ಪ್ರಕಟವಾದೊಡನೆ. ನಿಷ್ಣಾತರು ಸೌದಾಮಿನಿಯ ಪ್ರಚಾರ ಪ್ರವಾಸದ ನೀಲಿನಕಾಶೆ ರೂಪಿಸಿದರು.

ನಾಯಕರು ರಂಗಸ್ವಾಮಿಯನ್ನು ಒಂದು ರಾತ್ರೆ ಕಂಡರು.

"ಅಯ್ಯೋ ಹಳೆಯ ಗೆಳೆಯರೇ! ರಾಷ್ಟ್ರಪಕ್ಷ ಗೆದ್ದರೆ ನಿಮಗೆ ಸಚಿವಸ್ಥಾನ ಭದ್ರ ಅಂತ ತಿಳಕೊಬೇಡಿ."

"ಸೌದಾಮಿನಿಯವರಿಗೂ ನನಗೂ ಯಾವ ಜಗಳವೂ ಇಲ್ಲ. ಅವರು ರಾಷ್ಟ್ರ ಪಕ್ಷಕ್ಕೆ ಜೀವ ತುಂಬಿದಾರೆ."

"ಬೇಡಿ ರಂಗಸ್ವಾಮಿ. ಪ್ರಜಾಪಕ್ಷಕ್ಕೆ ಬನ್ನಿ. ಒಟ್ಟಿಗೆ ಹೋರಾಡಿ ಗೆದ್ದು ಬರೋಣ. ನಿಮ್ಮನ್ನೇ ಮುಖ್ಯಮಂತ್ರಿ ಮಾಡ್ತೀನಿ. ಟಿಕೆಟ್ ಟಿಕೆಟ್ ಅಂತ ಹೇಗೆ ಜನ ಕ್ಯೂ ನಿಂತಿದ್ದಾರೆ ಗೊತ್ತೆ ? ನಾಳೆ ಅವರನ್ನೆಲ್ಲ ಸ್ವಾಗತಿಸಬೇಕು."

"ಕ್ಷಮಿಸಿ ನಾಯಕರೇ. ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದೂ ದುಡಿದೂ ಆಯಾಸ ವಾಗಿದೆ. ಈ ಸಲದ್ದು ಅಂತಿಮ ಸಮರ. ಇದಾದ ಮೇಲೆ ಶಸ್ತ್ರತ್ಯಾಗ ಮಾಡ್ತೇನೆ."

"ಎಲ್ಲಾ ತ್ಯಜಿಸಿ ಸನ್ಯಾಸಿಯಾಗ್ಬೇಡಿ! ಆ ಸೌದಾಮಿನಿ ಯೋಗಾಸನ ಜಾತಿ ಯವಳಂತೆ. ರೂಪದಲ್ಲಿ ಅವಳನ್ನು ಮೀರಿಸುವ ಯುವತಿಯರು ಪ್ರಜಾಪಕ್ಷದಲ್ಲಿ ದ್ದಾರೆ."

ರಂಗಸ್ವಾಮಿ ನಕ್ಕರು. "ಗುಡ್‌ನೈಟ್" ಎಂದು ಕತ್ತಲಲ್ಲಿ ಕರಗಿದರು.

ಜಾಣಪ್ಪ ಸೌದಾಮಿನಿಯನ್ನು ಕರೆದು ತಮ್ಮ ಮೆಚ್ಚುಗೆ ಸೂಚಿಸಿದರು.

ಮುಪ್ಪಿನಲ್ಲಿ ಜಾಣಪ್ಪ ಫೇಲಾದ ಅಂತ ಯಾರೂ ಹೇಳೋ ಹಾಗಿಲ್ಲ. ರಾಜ್ಯದ ಬಹ್ವಂಶ ವಕೀಲರು ಗೆಲ್ಲುವ ಪಕ್ಷದ ಬೆಂಬಲಿಗರು. ನಾಮಪತ್ರ ಸಲ್ಲಿಕೆ ಇತ್ಯಾದಿ ಸೂಕ್ಷ್ಮ ಕೆಲಸಗಳಿಗೆ ಅವರನ್ನು ಸೇರಿಸಿಕೊಳ್ಳಿ."

"ಆ ಕೆಲಸ ನಿನ್ನೆಯಷ್ಟೆ ಮುಗಿಯಿತು."

"ಭೇಷ್ ! ಪೋಲೀಸ್ ಸಿಬ್ಬಂದಿಗೂ ಮತಗಟ್ಟೆ ದುಡಿಮೆಯ ಉಪಾಧ್ಯಾಯ ಸಮುದಾಯಕ್ಕೂ ಆದೇಶ ಹೋಗ್ತದೆ. ಮತದಾರರಿಗೆ ಕುರುಕೋದಕ್ಕೆ ಗಂಟಲು ತೇವ ಮಾಡಿಕೊಳ್ಳೋದಕ್ಕೆ—"

"ಅದಕ್ಕೋಸ್ಕರ ವಿಶೇಷ ಘಟಕ ರಚಿಸಿದ್ದೇನೆ."

"ಕೆಲಸ ಇನ್ನೇನೂ ಬಾಕಿ ಇಲ್ಲ.... ಹಣ ?"

"ಇನ್ನು ಒಂದು ಕೋಟಿ ಬೇಕಾಗಬಹುದು."

"ಏನು ಮಾಡ್ತೀರಿ ?"

"ನಾಳೆ ಒಬ್ಬರು ಬರ್ತಾರೆ, ಅರ್ಧ ತರ್ತಾರೆ. ಉಳಿದದ್ದನ್ನು ಇನ್ನು ಆರು ದಿನಗಳಲ್ಲಿ ನಾವೇ ಸಂಗ್ರಹಿಸಬೇಕು."

"ಆಗಲಿ. ಏರ್ಪಾಟು ಮಾಡ್ತೇನೆ.... ಅಂದ ಹಾಗೆ ಬಂಡಾಯ ಅಭ್ಯರ್ಥಿಗಳಿದ್ದರೆ ?"

"ನಮ್ಮ ನಿರ್ಧಾರದಲ್ಲಿ ಬದಲಾವಣೆಯಿಲ್ಲ. ಪಕ್ಷೇತರರ ಸಂಖ್ಯೆ ಹೆಚ್ಚಲಿ. ಇಡುಗಂಟು ಕಳಕೊಳ್ತಾರೆ."

"ನಿಮ್ಮ ಎದೆಗಾರಿಕೆಗೆ ಮೆಚ್ಚಿದೆ, ಮಾತಾಜಿ."

"ಎಲ್ಲ ನಿಮ್ಮ ಆಶೀರ್ವಾದ, ಜಾಣಪ್ಪಾಜಿ."

ಅಷ್ಟಾದರೂ ಹೇಳಿದಳಲ್ಲ ಎಂದು ಮುಖ್ಯಮಂತ್ರಿಗೆ ಸಮಾಧಾನ ಒಳಗಿಂದೊಳಗೆ. 'ನಾನು ಜಾಣಪ್ಪಾಜಿಯಲ್ಲ, ಕೋಣಪ್ಪಾಜಿ' ಎಂದು ತನ್ನ ಮೇಲೆಯೇ ಸಿಟ್ಟುಗೊಂಡರು.

* * *

"ಚುನಾವಣೆ ಎಂದರೆ ಮಧ್ಯಮ ವರ್ಗದವರಿಗೆ ಅಸಡ್ಡೆ : ಬುದ್ಧಿಜೀವಿಗಳಿಗೆ ತಾತ್ಸಾರ."

—ಈ ಮಾತನ್ನು ದಿಲ್ಲಿಯಲ್ಲಿ ಹಿರಿಯ ಮುತ್ಸದ್ದಿಗಳ ಬಾಯಿಯಿಂದ ಹಲವು ಸಾರಿ ಸೌದಾಮಿನಿ ಕೇಳಿದ್ದಳು. ಇವರದು ಅಲ್ಪ ಸಂಖ್ಯೆ. ಆದರೆ ತಕ್ಕಡಿಯನ್ನು ವಾಲಿಸಲು ಸಣ್ಣ ಸಂಖ್ಯೆಯೂ ಸಾಕು, ಅಲ್ಲವೆ ?

ಬುದ್ಧಿಜೀವಿಗಳದೊಂದು ಸಭೆಯನ್ನು ಸೌದಾಮಿನಿ ಏರ್ಪಡಿಸಿದಳು. 'ಅರ್ಥ ಶಾಸ್ತ್ರ'ದಿಂದ ಇಲ್ಲಿಯ ತನಕ ಪ್ರಜೆ ಆಳುವವರ ಕೈಯಲ್ಲಿ ಹೇಗೆ ಆಟಿಕೆಯಾಗಿದ್ದ ಎಂದು ಅಸ್ಖಲಿತ ವಾಣಿಯಲ್ಲಿ ಬಣ್ಣಿಸಿದಳು. ಪ್ರಾಚೀನ ಭಾರತದಲ್ಲಿ ಗ್ರಾಮಸಭೆಗಳಿದ್ದುವು, ಗಣರಾಜ್ಯಗಳಿದ್ದುವು. ಆ ಕಾಲಕ್ಕೆ ಅವು ಅರ್ಥಪೂರ್ಣವಾಗಿಯೇ ಇದ್ದುವು. ಇಂದಿನ ಪ್ರಜಾಪ್ರಭುತ್ವದಲ್ಲಿ ನಾವು ಚೈತನ್ಯ ತುಂಬಬೇಕು. ಇದು ಬುದ್ಧಿಜೀವಿಗಳಿಂದ ಆಗ ಬೇಕಾದ ಕೆಲಸ."

ಮಾರನೆಯ ದಿನದ ಪತ್ರಿಕೆಗಳಲ್ಲಿ ಬುದ್ಧಿಜೀವಿಗಳಿಗೆ ಪ್ರಥಮ ಪುಟ ದೊರೆಯಿತು. ಸಚಿತ್ರ ವರದಿ.

ನಾಯಕರು ತಮ್ಮ ಹಿಂಬಾಲಕರೊಡನೆ ಅಂದರು :

"ನಂಗೊತ್ತಿಲ್ವಾ? ಅಧಿಕಾರ ಇದ್ದವರ ಹಿಂದೆ 'ಬುದ್ಧಿ' 'ಬುದ್ಧಿ' ಅಂತ ಹಲ್ಲು ಗಿಂಜಿಕೊಂಡು ಓಡಾಡೋ ಜನ ಈ ಬುದ್ಧಿಜೀವಿಗಳು. ಮತದಾರರಿಗೆ ಚಾಲಕ ಶಕ್ತಿಗಳು—ಹಣ, ಹೆಂಡ, ಜಾತಿ.... ಲೇ ಕಾಣಿಸ್ತಿಲ್ವೇನ್ರೊ... ರಸ್ತೇಲಿ ಗಿರಿಯಪ್ಪ ತನ್ನ ಪಟಾಲಂ ಜತೆ ಹೋಗ್ತಾ ಅವನೆ. ಹಿಡಕೊಂಬನ್ನಿ ಅವರ್ನ...."

* * *

ಸೌದಾಮಿನಿ ತನ್ನ ಮತಕ್ಷೇತ್ರಕ್ಕೆ–ಶ್ರೀಕ್ಷೇತ್ರಕ್ಕೆ–ಒಮ್ಮೆ ಹೋದದ್ದು ಎಷ್ಟೋ ಅಷ್ಟೆ. ಕಲ್ಯಾಣನಗರದ ಹೆಚ್ಚಿನ ಕ್ಷೇತ್ರಗಳಲ್ಲಿ, ಇದು ತನ್ನ ಪ್ರತಿಷ್ಠೆಯ ಪ್ರಶ್ನೆ ಎನ್ನುವಂತೆ ಅವಳು ದುಡಿದಳು.

ಭಾರತದಲ್ಲಿ ಮಹಾಚುನಾವಣೆಯ ದಿನ ಸೂರ್ಯ ಮೂಡಿದ. ಅವನೇ ಕಿಷ್ಕಿಂಧೆಯಲ್ಲೂ ಕಾಣಿಸಿಕೊಂಡ. ಕೆಲವರು ಬೇಗನೆ ಕೆಲವರು ತಡವಾಗಿ ಮತಗಟ್ಟೆಗಳಿಗೆ ಹೋದರು. ಕಡೆಯ ಘಳಿಗೆಯವರೆಗೂ ರಜಾ ಸುಖ ಅನುಭವಿಸಿ, "ಹೋಗಲಿ, ಮುಂದಿನ ಸಲ ಬೇಗನೆ ವೋಟು ಮಾಡಿದರಾಯಿತು" ಎಂದವರೂ ಇದ್ದರು. ಅವರ ಹೆಸರಲ್ಲಿ ಇವರು, ಇವರ ಹೆಸರಲ್ಲಿ ಅವರು—ಇಂಥ ಮಾಮೂಲು ಸಂಗತಿಗಳಿಲ್ಲ ಇದ್ದುವೆನ್ನಿ.

ಅಂತೂ ಚುನಾವಣೆ ಮುಗಿಯಿತು.

೮

ಧರ್ಮೇಂದರ್ ಬಾಬಾರ ಮಠದಲ್ಲಿ ಫೋನ್ ಬಾರಿಸಿತು.

ಬಾಬಾ ರಿಸೀವರ್ ಎತ್ತಿದರು. 'ಹಲೋ' ಎನ್ನಲಿಲ್ಲ. ಆ ಪದವನ್ನು ಅವರು ಬಳಸಿದವರೇ ಅಲ್ಲ.

ಇದು ಮಿಂಚಿನ ಕರೆ. ಸ್ವರ ಸ್ಪಷ್ಟವಾಗಿತ್ತು.

"ಪ್ರಣಾಮ ಬಾಬಾ. ಫಲಿತಾಂಶ ಪ್ರಕಟಣೆ ಮುಗೀತಾ ಬಂತು. ಇನ್ನು ಕೆಲ ಕ್ಷೇತ್ರಗಳ ಎಣಿಕೆ ಮಾತ್ರ ಬಾಕಿ ಇದೆ. ಸೂರ್ಯೋದಯದ ಹೊತ್ತಿಗೆ ಅಂತಿಮ ಚಿತ್ರ ದೊರೆತೀತು."

"ನಿನ್ನ ದಂಡು ಮುಂದಿದೆ ಅನ್ನೋ ಸುದ್ದಿ ಮಧ್ಯಾಹ್ನವೇ ಬಂದಿತ್ತು ದಿಲ್ಲಿಯಿಂದ."

"ಅದು ವಾರ್ತಾ ಸಂಸ್ಥೆಗಳ ಸೇವೆ. ಮೂರನೇ ಎರಡಂಶ ನಮ್ಮ ಪಕ್ಷಕ್ಕೆ ಸಿಗ್ತದೆ ಅನ್ತಿದಾರೆ."

"ಆಗಲಿ ಮಗೂ. ಮುಂದಿನ ಕ್ರಮದ ಬಗ್ಗೆ ದಿಲ್ಲಿ ಧುರೀಣನಿಗೆ ಆಗಲೇ ಸೂಚನೆ ಕೊಟ್ಟಿದೇನೆ. ಇಗೋ, ಮುಂಚಿತವಾಗಿಯೇ ಅಭಿನಂದನೆ !"

ರಿಸೀವರ್ ಇಟ್ಟ ಸದ್ದು ಕೇಳಿಸಿತು.

ಯಾವುದಕ್ಕೆ ಅಭಿನಂದನೆ ? ಚುನಾವಣೆಯಲ್ಲಿ ಸಾಧಿಸಿದ ವಿಜಯಕ್ಕೆ ? ಅಥವಾ, ಇನ್ನೆರಡು ದಿನಗಳಲ್ಲಿ ಸಾಧ್ಯವಿರುವ...

ಸೌದಾಮಿನಿಯ ಕಂಕುಳು ಒದ್ದೆಯಾಯಿತು. ಮುಖ ರಂಗೇರತೊಡಗಿತು. ಶ್ರೀ ಕ್ಷೇತ್ರದಲ್ಲಿ ಅವಳು ಗೆದ್ದಿದ್ದಳು. ಅಲ್ಲಿ ಭಾರೀ ಸೋಲು ಅನುಭವಿಸಿದವರು ಪ್ರಜಾ ಮತ್ತು ಸಮತಾ ಪಕ್ಷಗಳ ಮಹಿಳಾ ಸ್ಪರ್ಧಿಗಳು ; ಕಣಕ್ಕಿಳಿದ ಎಂಟು ಜನ 'ಧೈರ್ಯಶಾಲಿ' ಯುವಕರು, ಸ್ವತಂತ್ರರು. ಎಲ್ಲರೂ ಠೇವಣಿ ಕಳೆದುಕೊಂಡಿದ್ದರು. ಫೋನ್ ಮೂಲಕ ಈ ವಾರ್ತೆ ಬಂದೊಡನೆ ಕಾರ್ಯಾಲಯದ ಛಾವಣಿ ಹಾರುವಷ್ಟು ಜೋರಾಗಿ ಜಯಘೋಷವಾಯಿತು :

"ಸೌದಾಮಿನಿ ಮಾತಾಜಿ ಜಿಂದಾಬಾದ್ !"

ಅದರದೇ ಪುನುರುಚ್ಚಾರ ಹಲವು ಸಲ.

ಮಾತಾಜಿಯೇ ಬಂದು, "ಸಾಕ್ರೀ, ದಯವಿಟ್ಟು ಸಾಕು. ಒಂದು ಸಲ ಸರಿ, ಎರಡು ಸಲ ಸರಿ. ಈ ರೀತಿ ! ?"

ತರಿಸಿಟ್ಟಿದ್ದ ಪೇಢೆ ತುಂಬಿದ ಬುಟ್ಟಿಗಳು ಹೊರಬಂದುವು.

....ನಿರೀಕ್ಷೆಗೂ ಮೀರಿ ಸ್ಫುಟವಾಗಿತ್ತು ಬೆಳಗ್ಗೆ ಕಾಣಿಸಿದ ಚಿತ್ರ.

ಬೆಳಗಾಗುತ್ತಿದ್ದಂತೆ ಬಂದ ಕರೆ ಮುಖ್ಯಮಂತ್ರಿಯ ಮನೆಯಿಂದ :

"ಸೌದಾಮಿನಿ ದೇವಿ, ಇದು ನಿಮ್ಮ ವಿಜಯ !"

"ನಾನು ಕೇವಲ ಕಾರ್ಯಕರ್ತೆ. ಇದು ಪಕ್ಷದ ವಿಜಯ."

"ಏನೇ ಅನ್ನಿ. ಇದು ಪವಾಡ. ರಾಜಿನಾಮೆ ಯಾವಾಗ ಕೊಡಲಿ ?"

"ಜಾಣಪ್ಪಾಜಿ, ಏನು ಹಾಗೆಂದರೆ ?"

"ನೀವು ಬಂದು ಕಿಷ್ಕಿಂಧೆಯ ರಾಜಕೀಯ ಸ್ವಚ್ಛವಾಯಿತು. ಪುನಃ ಕಲ್ಮಷ ಸೇರಿಕೊಳ್ಳದ ಹಾಗೆ ಹುಷಾರಾಗಿರ್ಬೇಕು. ರಾತ್ರೆ ಊಟಕ್ಕೆ ಬನ್ನಿ."

"ಸಂಜೆ ಏಳು ಗಂಟೆಗೆ ವಿಜಯೋತ್ಸವದ ಮೆರವಣಿಗೆ ಶುರುವಾಗ್ತದೆ. ನೀವು ಮೆರವಣಿಗೆಯ ಕೇಂದ್ರ ವ್ಯಕ್ತಿ. ತೆರೆದ ಜೀಪಿನಲ್ಲಿ. ಅದು ಮುಗಿದ ಮೇಲೆ ತುತ್ತು ಉಂಡರಾಯಿತು."

"ಪಚನ ಶಕ್ತಿ ಇಲ್ಲದ ನನಗೂ ತುತ್ತು. ಕಲ್ಲು ತಿಂದು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಇರುವ ನಿಮಗೂ ತುತ್ತು !"

"ಐದೂವರೆಗೆ ಕಾರ್ಯಾಲಯಕ್ಕೆ ಬನ್ನಿ. ಕಾರ್ಯಕರ್ತರಿಗೆ ಕಾಫಿ ತಿಂಡಿ ಆದ ಮೇಲೆ ನಿಮ್ಮ ಭಾಷಣ, ಅನಂತರದ ಕಾರ್ಯಕ್ರಮ ಮೆರವಣಿಗೆ."

"ಆಗಲಿ, ಮಾತಾಜಿ. ಅಪ್ಪಣೆ."

ಸೌದಾಮಿನಿ ನಕ್ಕಳು.

ಅಭೂತಪೂರ್ವವಾಗಿರಬೇಕು ಮೆರವಣಿಗೆ. ಸೇವಾದಳದ ಹುದ್ದರಿಗಳು, ವಿದ್ಯುಚ್ಛಕ್ತಿ ಎಂಜಿನಿಯರಿಂಗ್ ಪರಿಣತರು ಸಮಾಲೋಚನೆಗೆ ನೆರೆದರು. ಆ ಸಭೆಗೆ ಅಡ್ಡಿ ಉಂಟು ಮಾಡಿತು ಒಂದು ಪುಟ್ಟ ಗದ್ದಲ. ಇಷ್ಟು ದಿನ ಸದ್ದಿಲ್ಲದೆ ಬೆಂಬಲಿಸುತ್ತಿದ್ದವರು ಇಂದು ಕೂಗಾಡಿದರು :

"ಮುಖ್ಯಮಂತ್ರಿ ಮೆರವಣಿಗೆಯ ಕೇಂದ್ರ ವ್ಯಕ್ತಿ ಆಗುವುದು ಸಾಧ್ಯವಿಲ್ಲ."

"ಅವರು ಪಕ್ಷದ ಹಿರಿಯರು. ನಾವು ಗೌರವ ಸೂಚಿಸಬೇಕು," ಎಂದು ಸೌದಾಮಿನಿ ಸಂತೈಸಿದಳು.

"ತೆರೆದ ಜೀಪಿನಲ್ಲಿ ನೀವೊಬ್ಬರೇ. ಇದು ನಿಮ್ಮ ವಿಜಯೋತ್ಸವ !"

"ಕೈಮುಗಿದು ಕೇಳ್ಕೊತೇನೆ. ಈ ಹಟ ಬೇಡಿ. ಪಕ್ಷದ ವಿರೋಧಿಗಳು ಇದರ ಲಾಭ ಪಡೀತಾರೆ."

"ಹಾಗಾದರೆ ನೀವಿಬ್ಬರೂ ಅಲಂಕೃತ ಜೀಪಿನಲ್ಲಿ ಕೂತ್ಕೊಳ್ಳಿ."

ಸೌದಾಮಿನಿಗೆ ತಿಳಿಯದೆ ? ತಾನು ಕೇಂದ್ರಬಿಂದುವೆಂದು ಭಾವಿಸಿಯೇ ಮೆರವಣಿಗೆಯನ್ನು ಅವಳು ಯೋಜಿಸಿದ್ದಳು.

ಅಲ್ಲಿ ಕೆಲ ನಿಮಿಷಗಳಲ್ಲಿ ನಡೆದುದು ಜಾಣಪ್ಪನವರ ಕಿವಿಗೆ ಬಿತ್ತು, ಓಂದರ್ಧ ಗಂಟೆಯಲ್ಲಿ, ಅವರ ಕಟ್ಟಾ ಅನುಯಾಯಿಗಳ ಕೃಪೆಯಿಂದ. ಹಾಗಾಗಬಹುದೆಂದು ಸೌದಾಮಿನಿ ನಿರೀಕ್ಷಿಸಿದ್ದಳು. ಮುಖ್ಯಮಂತ್ರಿ ಫೋನ್ ಮಾಡಬಹುದು ಎಂದು ಕಾದಳು. ಬರಲಿಲ್ಲ.

ನಡೆದುದಿಷ್ಟು : ವಿವರ ತಿಳಿದಾಗ, ಮನಸ್ಸಿನಲ್ಲೇ ಗೊಣಗುತ್ತ ಅವಳನ್ನು ಜಾಲಾಡಿಸಿದರು. ಆದರೆ, 'ಮೆರವಣಿಗೆಗೆ ಬರೋದಿಲ್ಲ' ಎನ್ನಲಿಲ್ಲ. 'ದುಡಿದಿದಾಳೆ. ಜೀಪ್‌ನಲ್ಲಿ ಕೂತ್ಕೊಳ್ಳಿ, ಪಾಪ !' ಎಂದರು ಗಟ್ಟಿಯಾಗಿ. ಸಮಸ್ಯೆಯ ಅಲಗು ಮೊಂಡಾಯಿತು.

ಮೆರವಣಿಗೆಯ ಚೂಪು ಕಿಷ್ಕಿಂಧಾ ರಾಜೇಶ್ವರಿಯ ವರ್ಣಚಿತ್ರ. ಜೊತೆಯಲ್ಲಿ ಬಾಜಾ ಬಜಂತ್ರಿ. ಅವರ ಹಿಂದೆ ಸೇವಾದಳದವರ ಲೆಫ್ಟ್ ರೈಟ್ ನಡಿಗೆ. ಜಾನಪದ ನೃತ್ಯ, ಕಾರುಗಳು ನೂರು. ಪ್ರಮುಖರ ಪಾದಯಾತ್ರೆ. ಕಲಾಬಳಗದ ವ್ಯಾನುಗಳು. ಶ್ರೀಸಾಮಾನ್ಯರು. ಕಣ್ಣುಕುಕ್ಕುವ ಬೆಳಕಿನ ಸರಮಾಲೆ ಎಡದಲ್ಲೂ ಬಲದಲ್ಲೂ. ಜೀಪಿಗೆ ವಿಶೇಷ ದೀಪಾಲಂಕಾರ.

ಮುಖ್ಯಮಂತ್ರಿಯೂ ಹಲವಾರು ಮುಖಂಡರೂ ಬಂದರು.

'ಜ್ವರ, ಗಾಬರಿಗೆ ಕಾರಣವಿಲ್ಲ. ಆದರೆ ಮೆರವಣಿಗೆಯ ಶ್ರಮ ಬೇಡ ಎಂದಿದ್ದಾರೆ ಡಾಕ್ಟರು' ಎಂಬ ಚೀಟಿ ಬಂತು ರಂಗಸ್ವಾಮಿಯವರಿಂದ.

ತಿಂಡಿತಿನಿಸು ಭಾಷಣ ಮುಗಿದು, ಸುಡುಮದ್ದುಗಳ ಪೀಠಿಕೆಯೊಂದಿಗೆ ಮೆರವಣಿಗೆ.

ಜಾಣಪ್ಪನವರೇ ಅಂದರು :

"ಎಲ್ಲಿ ಸೌದಾಮಿನಿ ದೇವಿ ? ಕರಕೊಂಡು ಬನ್ನಿ. ಜೀಪ್ ಹತ್ತಿಸಿ."

"ನೀವು ಮೊದಲು ಹತ್ತಿ ಸಾರ್."

"ಅವರು ಮೊದಲು—"

"ಎಡದಿಂದ ಒಬ್ಬರು, ಬಲದಿಂದ ಒಬ್ಬರು—ಒಟ್ಟಿಗೇ."

ಅಂತೂ ಸೌದಾಮಿನಿ–ಜಾಣಪ್ಪ (ಜಾಣಪ್ಪ–ಸೌದಾಮಿನಿ) ಆಸೀನರಾದರು.

ಆ ದಿನ ಅದೆಷ್ಟೋ ಸಲ ನೆನಪಿಗೆ ಬಂದಿದ್ದ 'ಅರ್ಥಶಾಸ್ತ್ರ'ದ ನುಡಿ ಈಗ ಅವಳನ್ನು ಮತ್ತೊಮ್ಮೆ ಕಾಡಿತು. ಎಡದಲ್ಲೂ ಬಲದಲ್ಲೂ ರೆಕ್ಕೆ ಅಂಟಿಸಿಕೊಂಡ ಸುಂದರ ತರುಣರು. 'ದೇವಲೋಕದಿಂದ ಇಳಿದು ಬಂದವರು'—ಜನಸಮುದಾಯದ ಎಡೆಯಲ್ಲಿ ನುಸುಳುವ ಗೂಢಚಾರರ ಪಿಸುಮಾತು.

ಬಾಬಾ ಈ ಮೆರವಣಿಗೆಯನ್ನು ನೋಡುವುದು ಸಾಧ್ಯವಿದ್ದರೆ ! ಯಾರಿಗೆ

ಗೊತ್ತು ? ದಿವ್ಯಚಕ್ಷುವಿನಿಂದ ಈ ಮೆರವಣಿಗೆಯನ್ನು ಅವರೀಗ ನೋಡುತ್ತಿರಲೂ ಬಹುದು.

ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ಪಕ್ಷದ ಕಾರ್ಯಾಲಯಕ್ಕೆ ಮೆರವಣಿಗೆ ಮರಳಲು ಹಿಡಿದ ವೇಳೆ ಮೂರು ಘಂಟೆ. ಬಳಿಕ ಜಾಣಪ್ಪನವರ ಅಪೇಕ್ಷೆಯಂತೆ ಅವರ ಕಾರನ್ನೇರಿ, ಮುಖ್ಯಮಂತ್ರಿಯ ನಿವಾಸಕ್ಕೆ ಸೌದಾಮಿನಿ ಹೊರಟಳು.

ತುಂಟನೊಬ್ಬ ಅಂದ :

"ಒಳ್ಳೇ ಒಸ ವಧೂವರರ ಅಂಗೆ ಕುಂತಿದ್ರು. ಈಗ ಒಂಟೇ ಬಿಟ್ರಲ್ಲ !"

ಮಾತು ಮುಗಿಯುತ್ತಿದ್ದಂತೆ ಫಟೀರನೆ ಅವನ ಕೆನ್ನೆಗೆ ಏಟು ಬಿತ್ತು. ಬಾರಿಸಿದವನು ಸೌದಾಮಿನಿಯ ಅಂಗರಕ್ಷಕರಲ್ಲೊಬ್ಬ.

ಜಾಣಪ್ಪನವರಿಗೆ ಅವತ್ತಿನ ಮಟ್ಟಿಗೆ ಖುಶಿಯಾಗಿತ್ತು. ವಯೋವೃದ್ಧರು, ಜ್ಞಾನವೃದ್ಧರು—ನೀವೇ ಮುಖ್ಯಮಂತ್ರಿಯಾಗಿ ಯುವಕರಿಗೆ ಮಾರ್ಗದರ್ಶನ ನೀಡಬೇಕು ಎಂದು ದಿಲ್ಲೀಶ್ವರರು ಒತ್ತಾಯಿಸಿದರೆ ?

ಉಮೇದುವಾರರ ಪಟ್ಟಿಯ ಇತ್ಯರ್ಥಕ್ಕೆಂದು, ಇತ್ಯರ್ಥದ ನಾಟಕಕ್ಕೆಂದು, ಸೌದಾಮಿನಿ ಹಿಂದೆ ಎರಡು ಬಾರಿ ಈ ಮನೆಗೆ ಬಂದಿದ್ದಳು. ಆದರೆ ಊಟ ಇದೇ ಮೊದಲನೆಯದು.

ಫೋನ್ ಟ್ರಿಣ್‌ಗುಟ್ಟಿತು.

ಜಾಣಪ್ಪನವರ ಆಪ್ತ ಸಹಾಯಕ "ದಿಲ್ಲಿಯಿಂದ" ಎನ್ನುತ್ತ ಬಂದ. ಮುಖ್ಯಮಂತ್ರಿ ಕುಳಿತಿದ್ದಲ್ಲಿಂದ ಏಳತೊಡಗಿದರು. ಆಪ್ತ ಸಹಾಯಕ ಅವರ ಕಿವಿಯಲ್ಲಿ ಏನನ್ನೋ ಉಸುರಿದ. ಜಾಣಪ್ಪ ಮತ್ತೆ ಕುಳಿತು, ಸೌದಾಮಿನಿಯ ಕಡೆ ನೋಡಿ "ನಿಮಗೆ" ಎಂದರು. ವಿಜಯೋತ್ಸವದ ಉತ್ಕರ್ಷ ಇದು ಎನಿಸಿತು ಅವಳಿಗೆ. ಫೋನಿನ ಬಳಿ ಹೋದಳು. ಅವಳ ಮಾತು ಕೇಳಿಸುತ್ತಿತ್ತು : "ಹ್ಲೋ. ಸೌದಾಮಿನಿ. ನಮಸ್ತೆ. ವಿಜಯೋತ್ಸವದ ಮೆರವಣಿಗೆ ಈಗ ಮುಗೀತು. ಮಂತ್ರಿಮಂಡಲದ ಔಪಚಾರಿಕ ರಾಜಿನಾಮೆ.... ಹೇಳ್ತೇನೆ. ಆಯ್ಕೆಗೆ ನೂತನ ಶಾಸಕರ ಸಭೆ ಕರೆಯಲು ಶುಕ್ರವಾರ ಪ್ರಶಸ್ತ ಅನ್ತಾರೆ.... ಕಳಿಸ್ತೀರಾ.... ? ಕಾಯ್ತೇವೆ.... ಇಲ್ಲ.... ಇಲ್ಲ.... ಹೇಳ್ತೀನಿ.... ಅಣ್ಣಾಜಿಯವರಿಗೆ ನಮಸ್ತೆ ತಿಳಿಸಿಬಿಡಿ."

ಭೋಜನದ ಮೇಜಿನ ಬಳಿಗೆ ಬಂದ ಸೌದಾಮಿನಿ ಜಾಣಪ್ಪನವರ ಕಪ್ಪಿಟ್ಟ ಮುಖವನ್ನು ಕಂಡಳು.

"ಪಕ್ಷದ ಅಧ್ಯಕ್ಷರು ಜಾಣಪ್ಪನವರ ಸಲಹೆ ಪಡೆಯದೆ ಏನೂ ಮಾಡಬೇಡಿ— ಎಂದರು. 'ಇಲ್ಲ', 'ಇಲ್ಲ' ಎಂದೆ. (ವಾಸ್ತವವಾಗಿ ಆ ಅಧ್ಯಕ್ಷರು ಅಂದದ್ದು : 'ಜಾಣಪ್ಪನವರ ಮನಸ್ಸಿಗೆ ನೋವಾಗುವಂಥಾದ್ದೇನನ್ನೂ ಹೇಳಬೇಡಿ.') ಸಂಪುಟದ ರಾಜಿನಾಮೆ ವಿಷಯ ಕೇಳಿದ್ರು."

ಜಾಣಪ್ಪನವರು ತನ್ನ ವಿಜಯದ ಘಳಿಗೆ ಎಂದು ತೊಡೆ ತಟ್ಟಿದರು.

"ರಾಜ್ಯಪಾಲರನ್ನು ಮಧ್ಯಾಹ್ನವೇ ನೋಡಿ ಕಾಗದ ಕೊಟ್ಟೆ. ಊಟಕ್ಕೇಳಿ ಅಂದರು. ಒಪ್ಪಲಿಲ್ಲ. ಬಂದ್ಬಿಟ್ಟೆ."

"ಹೊಸ ಏರ್ಪಾಟು ಆಗೋ ತನಕ ನೀವೇ ಮುಂದುವರೀರಿ ಅಂದಿರ್ಬೇಕು."

"ಅದೆಲ್ಲ ಮಾಮೂಲು ಮಾತು."

ಅಡುಗೆ ಚೆನ್ನಾಗಿತ್ತು. ಆದರೆ ಜಾಣಪ್ಪನವರಿಗೆ ರುಚಿಸಲಿಲ್ಲ. ಅತಿಥಿಗೂ ಅಷ್ಟೆ.

ಜಾಣಪ್ಪನವರು ಸೌದಾಮಿನಿಯನ್ನು ಆಪಾದಮಸ್ತಕ ನಿಧಾನ ನೋಟದಿಂದ ಎರಡು ಸಲ ನೋಡಿ, ಅಂದರು :

"ಅಂತೂ ಸಭೆ ಶುಕ್ರವಾರ ಅಂತ ಗೊತ್ತು ಮಾಡಿದೀರಿ. ಶಾಸಕರಿಗೆ ಆಗಲೇ ಸಂದೇಶ ಹೋಗಿದೆಯೊ ?"

"ಇವತ್ತು ಮಧ್ಯಾಹ್ನದ ಹೊತ್ತಿಗೆ ತುರ್ತುತಂತಿ ಕಳಿಸುವ ಕೆಲಸ ಮುಗಿಯಿತು. ಹಲವರಲ್ಲಿ ಫೋನ್ ಇದೆ. ನಾಳೆ ಮಿಂಚಿನ ಕರೆ ಕೊಡ್ತೇನೆ."

"ಸೌದಾಮಿನಿ ಅಂದರೆ ಮಿಂಚು ಅಂತಲೂ ಅರ್ಥವಿದೆಯಂತಲ್ಲ? ಟೆಲಿಫೋನ್ಸ್‌ನವರು ಲೈಟ್ನಿಂಗ್ ಕಾಲ್‌ಗೆ ಸೌದಾಮಿನಿಕರೆ ಅಂತ ಹೊಸ ನಾಮಕರಣ ಮಾಡ ಬಹುದು. ಏನ್ಹೇಳ್ತೀರಾ ?"

"ಮಿನಿ ಅಂದರೂ ಆಯ್ತು."

"ಮಿನಿ–ಮೆಡಿ–ಮ್ಯಾಕ್ಸಿ ಏನೇನೋ ಫ್ಯಾಶನ್ ಬಂದಿದೆಯಂತಲ್ಲ ಈಗ ? ನಿಮಗೆ ಇಂಥದು ಯಾವುದರಲ್ಲೂ ಆಸಕ್ತಿ ಇಲ್ಲ. ಆ ಕಾರಣದಿಂದಲೇ ನಿಮ್ಮ ಬಗ್ಗೆ ನನಗೆ ಗೌರವ. ನಾಯಕನ ಆಯ್ಕೆಯ ಉಸ್ತುವಾರಿಗೆ ಯಾರು ಬರ್ತಾರೊ ?"

"ತಿಳೀದು. ಗೊತ್ತಾದೊಡನೆ ನಿಮಗೆ ಫೋನ್ ಮಾಡ್ತೇನೆ."

"ನಿಮಗೆ ಹಿಂದಿ ಚೆನ್ನಾಗಿ ಬರುತ್ತಂತೆ."

"ತಕ್ಕಮಟ್ಟಿಗೆ."

"ಒಳ್ಳೇ ಭಾಷೆ. ಅದರಲ್ಲಿ ತಾವು–ತಮ್ಮ ಜಾಸ್ತಿ. ಶಿಷ್ಟಬಳಕೆ."

"ತಾವು ಹೇಳೋದು ಸರಿ. ಆದರೆ ನೀವು–ನಿಮ್ಮ ಅಂದರೆ ಹೆಚ್ಚು ಆತ್ಮೀಯ ವಾಗಿರುತ್ತೆ."

"ಪಾರ್ವತಿ" ಎಂದು ಜಾಣಪ್ಪ ಪತ್ನಿಯನ್ನು ಕರೆದರು. ಮಕ್ಕಳನ್ನು ಅಳಿಯಂದಿರನ್ನು ಸೊಸೆಯರನ್ನು ಕರೆದುಕೊಂಡೇ ಆಕೆ ಬಂದರು. ಇಡಿಯ ಕುಟುಂಬದ ಪರಿಚಯವಾದಂತಾಯಿತು ಸೌದಾಮಿನಿಗೆ.

"ಸುಖೀ ಸಂಸಾರ" ಎಂದು ಸೌದಾಮಿನಿ ಪಾರ್ವತಿಯತ್ತ ನೋಡಿದಳು. ಮುಗುಳುನಗೆ ವಿನಿಮಯಕ್ಕೊಂದು ಅವಕಾಶ.

ಈ ಮನೆ ಬಿಟ್ಟು ಸಕುಟುಂಬ ಸಪರಿವಾರನಾಗಿ ಇನ್ನು ಪ್ರಾಯಶಃ ಊರಿಗೆ

ತೆರಳುತ್ತಾನೆ ಈತ ; ರಾಜಕೀಯ ಆಟದಲ್ಲಿ ಇದು ಅನಿವಾರ್ಯ—ಎಂದುಕೊಂಡಳು ಸೌದಾಮಿನಿ.

ಸೌದಾಮಿನಿ ಕಾರ್ಯಾಲಯಕ್ಕೆ ಹಿಂತಿರುಗಲು ಮುಖ್ಯಮಂತ್ರಿ ತಮ್ಮದೇ ಕಾರು ಕೊಟ್ಟರು.

"ಈ ಕಾರು ಇನ್ನು ನಿಮ್ಮದೇ ಅಂದರೂ ತಪ್ಪಾಗೋದಿಲ್ಲ."

"ಇಲ್ಲ ಇಲ್ಲ. ಇದು ತಮ್ಮದೇ—ನಿಮ್ಮದೇ. ಒಂದು ವಿಷಯ ನೀವು ಹೇಳಲಿಲ್ಲ."

"ಏನು ?"

"ಮೆರವಣಿಗೆ ಹೇಗಿತ್ತು ?"

"ಇಂಥದಕ್ಕೇ ಅನ್ನೋದು ಪ್ರಚಂಡ ಮೆರವಣಿಗೆ ಅಂತ."

"ಇದಕ್ಕೆ ಸ್ಫೂರ್ತಿ ಯಾವುದು ಗೊತ್ತೆ ?"

"ಯಾವುದು ?"

"ಕೌಟಿಲ್ಯನ ಅರ್ಥಶಾಸ್ತ್ರ."

"ಎಲಾ, ಹಾಗೋ ? ಇನ್ನು ಹೊರಡಿ. ಬಹಳ ಹೊತ್ತು ಓದಬೇಡಿ, ನಿದ್ದೆ ಮಾಡಿ. ಶುಭಾಶಯ."

ಕಾರು ಹೊರಡುವಾಗ ದಪ್ಪಕ್ಷರಗಳು ಕಣ್ಣಮುಂದೆ ಕುಣಿದಂತೆ ಭಾಸವಾಯಿತು: ರಾಷ್ಟ್ರದ ಪ್ರಥಮ ಮಹಿಳಾ ಮುಖ್ಯಮಂತ್ರಿ ! ದೇಶದ ಆಧುನಿಕ ರಾಜಕೀಯ ಇತಿಹಾಸದಲ್ಲೇ ನೂತನ ಅಧ್ಯಾಯ !

ಕಾರ್ಯಾಲಯ ಮುಖ್ಯ ನಟನಟಿಯರು ಚೆದರಿದ ಮದುವೆ ಮನೆಯಂತಿತ್ತು. ಮೆರವಣಿಗೆಯ ಸಾಮಗ್ರಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಕುಡಿದಿದ್ದ ದ್ವಾರ ಪಾಲಕರು ಹಾಡಲು ಯತ್ನಿಸುತ್ತಿದ್ದರು :

"ಭಾರತ ಮಾತೇ ! ಕರ್ನಾಟಕ ತನುಜಾತೆ !"

ಸ್ವಯಂ ಸೇವಕರೂ ಗುಂಡಿನ ಗುಂಗಿನಲ್ಲಿದ್ದರು.

ಕಾರನ್ನು ಹಿಂದಕ್ಕೆ ಕಳುಹಿಸಿ, ಸೌದಾಮಿನಿ ಕಿರಿಚಿದಳು :

"ಚುನಾವಣೆಯ ವಿಜಯದ ಅಮಲು ತಲೆಗೆ ಏರಿತೇನ್ರೊ ?"

"ತಪ್ಪಾಯ್ತು ಮಾತಾಜಿ. ಖುಶಿಯಾಗಿರೋವಾ ಅಂತ ಒಂದೀಟು..."

"ಇನ್ನೂ ಉಳಿದಿದ್ರೆ ಕುಡಿದ್ಬಿಟ್ಟು ಮಲಕ್ಕೊಳ್ಳಿ. ಕಾವಲಿಗೆ ಕೇಂದ್ರ ಪೋಲೀಸ್ನೋರ್ನ ಕರೆಸ್ತೀನಿ."

ಸೌದಾಮಿನಿಗೂ ನಿದ್ದೆ ಹೋಗುವ ಆಸೆ. ಅಷ್ಟರಲ್ಲಿ ಟೆಲಿಫೋನ್ ಕರೆಬಂತು, ದಿಲ್ಲಿಯಿಂದ, ಮಹಾ ಕಾರ್ಯದರ್ಶಿ ನಕುಲದೇವ್‌ಜಿಯಿಂದ.

"ಜಾಣಪ್ಪನಿಗೆ ಫೋನ್ ಮಾಡಿದ್ದೆ. ಶಿಷ್ಟಾಚಾರ. ಅಲ್ಲಿಂದ ನೀವು ಹೊರಟಿದೀರಿ ಅಂತ ತಿಳೀತು. ಇಲ್ಲಿ ವಿಜಯೋತ್ಸವ ಇನ್ನೂ ನಡೀತಿದೆ. ಲೋಕಸಭೇಲಿ

ಮೂರಾ ಎರಡಂಶ ಬಹುಮತ. ಒಂದು ರಾಜ್ಯ ಬಿಟ್ಟು ಬೇರೆ ಎಲ್ಲಾ ಕಡೆ ನಾವೇ ಅಧಿಕಾರಕ್ಕೆ ಬಂದಿದ್ದೇವೆ."

"ಜಯಗಳಿಸಿ ಪುರಪ್ರವೇಶ ಮಾಡಿದ ನನ್ನ ಸ್ವಯಂಸೇವಕ ದಂಡು ತೂಕಡಿಸ್ತಿದೆ. ನನಗೆ ನಿದ್ದೆ ? ಇಲ್ಲವಪ್ಪ. ಈ ಕ್ಷಣ ನೀವು ಇಲ್ಲಿ ಇದ್ದಿದ್ದರೆ...."

"ನಿಜವಾಗಿಯೂ ? ಮಾತಾಜಿ, ನಾಳೆ ಕೇಂದ್ರ ಮಂತ್ರಿಮಂಡಲ ರಚನೆ. ನಾಡದು ಬೆಳಗ್ಗಿನ ವಿಮಾನದಲ್ಲಿ ಹೊರಟುಬರ್ತೇನೆ."

"ನೃಪತುಂಗ ಹೊಟೆಲಿನಲ್ಲಿ ವಸತಿ. ಬಂದು ಒಂದು ದಿನ ಜನರಿಗೆ ತಮ್ಮ ಬಹಿರಂಗ ದರ್ಶನ ಬೇಡ..."

"ಅರ್ಥವಾಯ್ತು ಮುದ್ದು."

"ನಿಮಗೆ ನಾಚಿಕೆ ಇಲ್ಲ !"

"ನಿನಗೆ ಮಾತಾಜಿ ?"

"ಉತ್ತರ ಭೇಟಿಯಾದಾಗ...."

* * *

ಮಧ್ಯಾಹ್ನ ಸೌದಾಮಿನಿಯೊಬ್ಬಳೇ ಪುಟ್ಟ ಸೂಟ್‌ಕೇಸ್ ಸಹಿತ ವಿಮಾನ ನಿಲ್ದಾಣಕ್ಕೆ ಹೋದಳು. ಇಳಿದು ಬಂದ ಪಕ್ಷದ ಮಹಾ ಕಾರ್ಯದರ್ಶಿಯೊಡನೆ 'ನೃಪತುಂಗ' ತಲಪಿದಳು. ಕಾರಿನ ಚಾಲಕನಿಗೆ "ಕಚೇರಿಗೆ ಹೋಗು" ಎಂದಳು. "ದಿಲ್ಲಿಯಿಂದ ಶ್ರೀಯುತರು ಬಂದಿದ್ದಾರೆ. ಅವರ ಜತೆ ಸೌದಾಮಿನಿದೇವಿ ಚುನಾವಣೆಯ ಅನಂತರದ ಕ್ರಮಗಳನ್ನು ಕುರಿತು ರಹಸ್ಯ ಸಮಲೋಚನೆ ನಡೆಸುತ್ತಿದ್ದಾರೆ." ಸುದ್ದಿ ಮೆಲ್ಲನೆ ತೆವಳಿತು. ಯಾರಿಗೂ ತಿಳಿಯದು. ಗೊತ್ತಾದಾಗ 'ನೃಪತುಂಗ' ದಲ್ಲಿ ಅವರಿದ್ದ ಕೊಠಡಿಯ ಫೋನ್ ಕೆಟ್ಟಿತ್ತು.

ಮಹಾ ಕಾರ್ಯದರ್ಶಿಗೆ ಹಿಂದೆ ತಮ್ಮಿಂದ ಆಗಿದ್ದ ಉಪಕಾರ ಎಷ್ಟೊಂದು ! ಈಗ ತಮಗೆ ಈ ಬಗೆಯ ಅವಮಾನ !

ಒಮ್ಮೆಲೆ ಜಾಣಪ್ಪನವರಿಗೆ ಏನೋ ಹೊಳೆದಂತಾಗಿ ಕಣ್ಣಂಚಿನಲ್ಲಿ ನಗೆ ತುಳುಕಿತು.

ಅವರು ಅಂದುಕೊಂಡರು ; ಬಾಬಾಜಿ ಭಕ್ತೆ. ಮಹಾ ಪತಿವ್ರತೆ. ಸೆರಗು ಹಾಸಿದ್ದಾಳೆ. ಮುಖ್ಯಮಂತ್ರಿಯಾಗುವ ಅವಕಾಶಕ್ಕೆ ಇಷ್ಟು ಬೆಲೆ. ಇನ್ನೇನಾದರೂ ಮುಖ್ಯಮಂತ್ರಿ ಪದವಿ ಸಿಕ್ಕಿಯೇ ಬಿಟ್ಟರೆ, ಆಗ ಇವಳ ಪುಣ್ಯವೆಲ್ಲ ಖಂಡಿತ ಬರಿದಾಗ್ತದೆ.'

* * *

ಮೂರನೆಯ ಬೆಳಗೆ ಪಕ್ಷದ ಕಾರು ಉಪಾಹಾರ ಮುಗಿಸಿಕೊಂಡು ಬಾವುಟ ಹಾರಿಸುತ್ತ ಸಡಗರದಿಂದ 'ನೃಪತುಂಗ'ಕ್ಕೆ ಬಂತು. ಸೌದಾಮಿನಿಯೂ ದಿಲ್ಲಿ ರಾಯ ಭಾರಿಯೂ ವಾಹನವನ್ನೇರಿದರು. ಹೋಟೆಲಿನ ಯಜಮಾನ ಮುಖ ಮಂಟಪದಲ್ಲಿ ಪ್ರತ್ಯಕ್ಷನಾಗಿ "ನಮ್ಮ ಮೇಲೆ ಕೃಪೆ ಇರಲಿ" ಎಂದ. ಸೌದಾಮಿನಿ ನಸು ನಕ್ಕಳು.

ಸೇವಾದಳದ ಕಪ್ತಾನ ರಾಜದೂತ ಮೋಟರ್ ಸೈಕಲನ್ನೇರಿ ಮುಖ್ಯಮಂತ್ರಿ ಯನ್ನು ಕರೆಯಲು ಹೋದ. ಅವನ ಬಳಿ ಇತ್ತು, ಮಹಾ ಕಾರ್ಯದರ್ಶಿಯ ಲಿಖಿತ ಪತ್ರ.

ಜಾಣಪ್ಪ ಉಲ್ಲಸಿತರಾಗಿಯೆ ಆಗಮಿಸಿದರು.

"ದಿಲ್ಲಿಯ ಗಡಿಬಿಡಿ ಮುಗಿಸಿದಿರಾ ?"

—ನಮಸ್ತೆಗಳ ವಿನಿಮಯದ ಬಳಿಕ ಕೇಳಿದ ಪ್ರಶ್ನೆ.

"ತಲೆನೋವು ಬೇಕಾದರೆ ದಿಲ್ಲಿ. ನೆಮ್ಮದಿ ಬೇಕಾದರೆ ಕಲ್ಯಾಣನಗರ."

"ಅದಕ್ಕೇ ನಿನ್ನೆ ತಮಗೆ ತೊಂದರೆ ಕೊಡಲಿಲ್ಲ. ಪಾಪ, ವಿಶ್ರಾಂತಿ ತಗೊಳ ಲೀಂತ ಬಿಟ್ಟೆ."

"ಈ ಮಾನವೀಯ ಗುಣಗಳಿಗಾಗಿಯೇ ರಾಷ್ಟ್ರದಾದ್ಯಂತ ತಾವು ಮಾನ್ಯತೆ ಗಳಿಸಿದೀರಿ," ಎಂದ ನಕುಲದೇವ್.

"ಈಗ ಅನೌಪಚಾರಿಕವಾಗಿ ಮಾತನಾಡೋಣ. ಸಾಯಂಕಾಲ ಶಾಸಕರ ಸಭೆ ಆಯ್ಕೆಯ ನಿರ್ಧಾರವನ್ನು ರಾಜ್ಯಪಾಲರಿಗೆ ನಾನೇ ತಿಳಿಸ್ತೇನೆ," ಎಂದೂ ಹೇಳಿದ.

ಈಗ ಜಾಣಪ್ಪನವರಿಗೆ ಯಾವ ಸಂದೇಹವೂ ಉಳಿದಿರಲಿಲ್ಲ. ಬಿಗಿದಿದ್ದ ತುಟಿಗಳನ್ನು ತುಸು ಆಗಲಿಸಿ ಅವರೆಂದರು :

"ಹಾಗಾದರೆ ಇವತ್ತು ರಾತ್ರೆಯೇ ಮಂತ್ರಿಮಂಡಲದ ರಚನೆ,"

"ಶನಿವಾರ ಇಲ್ಲಿನವರು ಶುಭಕಾರ್ಯ ಮಾಡೋದಿಲ್ಲ. ಪ್ರತಿಜ್ಞಾಸ್ವೀಕಾರ ಭಾನುವಾರ. ಜನರಿಗೂ ಬಿಡುವಿರ್ತದೆ. ಪ್ರತಿಜ್ಞಾಸ್ವೀಕಾರ ನೋಡೋದಕ್ಕೆ ಬರ್ತಾರೆ. ಮುಖ್ಯಮಂತ್ರಿಯೊಬ್ಬರು ಮಾತ್ರ ಇವತ್ತೇ ಪ್ರಮಾಣವಚನ ಬೋಧನೆಗೆ ಒಳಗಾಗಲಿ."

ರಂಗಸ್ವಾಮಿ ಬಂದರು. ಮುಖ ಅರಳಿ ಬಿರಿದ ಗುಲಾಬಿಯಂತಿದ್ದ ಸೌದಾಮಿನಿ ಯನ್ನು ಕಂಡು ಅವರಿಗೆ ಕಣ್ಣು ಕತ್ತಲು ಬಂತು. "ಇವಳನ್ನು ನ್ಯಾಯಸ್ಥಾನ ಕ್ಕೆಳೆದು ಬೆತ್ತಲೆ ಮಾಡದಿದ್ದರೆ ನನ್ನ ಹೆಸರು ರಂಗಸ್ವಾಮಿಯಲ್ಲ—ಮಂಗಸ್ವಾಮಿ," ಎಂದುಕೊಂಡರು. "ಈಗಲೆ ಅಲ್ಲ, ನಿಧಾನವಾಗಿ....ನಿಧಾನವಾಗಿ." ಮತ್ತೂ ತಮ್ಮಷ್ಟಕ್ಕೆ ಗೊಣಗಿದರು : "ಸೀರೆ ಬಿಚ್ಚಿ, ಹೊಟ್ಟೆಯಲ್ಲಿ ಮಡಚುಗಳೆಷ್ಟಿವೆ ಅಂತ ಎಣಿಸಿದರೆ ಸಾಕು. ಪುರಾವೆ ಸಿದ್ಧ !" ಮಡಚು ಆರು, ಅವರ ಪ್ರಕಾರ. ಆದರೆ ಅಲ್ಲಿ ಒಂದು ಮಡಚೂ ಇರಲಿಲ್ಲ ಈಗ ; ಧರ್ಮೇಂದರ್ ಬಾಬಾಜಿಯ ಲೇಹ್ಯದ

ಮಹಿಮೆ. ಸೌದಾಮಿನಿ, "ಬನ್ನಿ ರಂಗಸ್ವಾಮಿಯವರೇ" ಎಂದು ಕರೆದಾಗ, ಈ ಸ್ವರ ಹಿಂದಿನದಲ್ಲವಲ್ಲ ಎನಿಸಿ, ರಂಗಸ್ವಾಮಿ ಮತ್ತೊಮ್ಮೆ ಶಂಕೆಗೀಡಾದರು.

ಒಂದೆಡೆ, ಆಯಾ ಕ್ಷೇತ್ರಗಳಲ್ಲಿ ಮತ ಎಣಿಸಿದ ಅಧಿಕಾರಿ ನೀಡಿದ ವಿಜಯದ ಪ್ರಮಾಣ ಪತ್ರದ ಪರಿಶೀಲನೆ. ಇನ್ನೊಂದೆಡೆ, ಆ ದಿನ ಪ್ರಕಟವಾದ ವಿಶೇಷ ರಾಜ್ಯ ಗಝೆಟ್ಟಿನಲ್ಲಿ ರಾಷ್ಟ್ರ ಪಕ್ಷದ ವಿಜಯಿಗಳ ಹೆಸರುಗಳಿಗಾಗಿ ಶೋಧೆ. ಕಟ್ಟಡದ ಎದುರು ಬಯಲಿನಲ್ಲಿದ್ದ ವಿಜಯೋತ್ಸವದ ಚಪ್ಪರಕ್ಕೆ ಹೊಸ ತಳಿರನ್ನು ಒಂದಿಷ್ಟು ತಗಲಿಸಿದರು. ಚಪ್ಪರ ಮೇಜುಕುರ್ಚಿಗಳ ಭೋಜನ ಶಾಲೆಯಾಯಿತು. ಬರ ತೊಡಗಿದ್ದ, ಬಂದು ತಲಪಿದ್ದ, ಬಂದೇ ಬಿಟ್ಟಿದ್ದ ರಾಷ್ಟ್ರ ಪಕ್ಷದ ಶಾಸಕರಿಗೂ ಇತರ ಗಣ್ಯರಿಗೂ ಕಾರ್ಯಕರ್ತರಿಗೂ ಪ್ರಜಾಭವನದ ಅಡುಗೆ ರುಚಿ.

ಬಿಸಿಲು ಬಾಡಿದೊಡನೆ ಕಾಫಿ, ಟೀ, ಮುಖ್ಯಮಂತ್ರಿಗೆ ರಾಜಭವನದಲ್ಲಿ ಪ್ರತಿಜ್ಞಾ ಸ್ವೀಕಾರ ಆದ ಬಳಿಕ ರಾತ್ರಿಯೂಟ ಮತ್ತು ವಸತಿ ಶಾಸಕರ ಭವನದಲ್ಲಿ– ಎಂದು ಧ್ವನಿವರ್ಧಕ ಅರಚಿತು.

ಜಾಣಪ್ಪನವರೊಂದಿಗೆ ದಿಲ್ಲಿಯವರ ಆಪ್ತಾಲೋಚನೆ.

"ಜಾಣಪ್ಪಾಜಿ, ತಮಗಿನ್ನು ರಾಜ್ಯಪಾಲ ಪದವಿ, ತಾವು ದೇಶದ ಅಮೂಲ್ಯ ಆಸ್ತಿ. ಮುಖ್ಯಮಂತ್ರಿ ಪದವಿಯ ಜಂಜಾಟ ನಿಮಗಿನ್ನು ಸಲ್ಲ."

"ನೂತನ ಶಾಸಕ ಪಕ್ಷದ ನಾಯಿಕೆಯಾಗಿ ಸೌದಾಮಿನಿ ದೇವಿಯವರ ಹೆಸರನ್ನು ನಾನು ಸೂಚಿಸಬೇಕು, ಅಷ್ಟೆ ತಾನೆ ?"

ಕಾರ್ಯದರ್ಶಿ "ಹೆಹ್ಹೆ" ಎಂದು ನಕ್ಕು, "ಅನುಮೋದನೆ ಲಕ್ಷ್ಮೀಪತಿಯವರು ಮಾಡಲಿ" ಎಂದ.

"ಸಂತೋಷದಿಂದ ಮಾಡ್ತಾನೆ,"

ಸೌದಾಮಿನಿ ಪಕ್ಷದ ಮಹಾ ಕಾರ್ಯದರ್ಶಿಯೊಡನೆ ಮೆಲ್ಲನೆ ಅಂದಳು :

"ಈಗ ಐದೂವರೆ. ಇನ್ನು ಐದು ಮಿನಿಟುಗಳಲ್ಲಿ ಮುಗಿದರೆ, ಸಂಜೆ ಆರು ಗಂಟೆಯ ರೇಡಿಯೋ ವಾರ್ತೆಯಲ್ಲಿ ಪ್ರಸಾರವಾಗ್ತದೆ. ನಿಮ್ಮ ನೇತೃತ್ವದಲ್ಲಿ ಆಯ್ಕೆ ನಡೆಯಿತು ಅಂತಲೂ."

"ನಿಮ್ಮ ಕಿವಿಯೊಳಗೊಂದು ಪುಟ್ಟ ಗಡಿಯಾರ ಇದೇಂತ ತೋರುತ್ತೆ !"

"ನೀವು ಪರಿಹಾಸ್ಯ ಶಿಖಾಮಣಿ !"

....ಸೌದಾಮಿನಿದೇವಿ ಕಿಷ್ಕಿಂಧೆಯ ಆಳುವ ಪಕ್ಷದ ನಾಯಿಕೆಯಾಗಿ ಸರ್ವಾನು ಮತದಿಂದ ಆಯ್ಕೆಯಾದರು. ಎಲ್ಲೆಲ್ಲಿಗೆ ಸಾಧ್ಯವೋ ಅಲ್ಲಿಗೆಲ್ಲ ಸುದ್ದಿ ಹಾರಾಡಿತು. ಛಾಯಾಗ್ರಾಹಕರು ಒಳಗೆ ಬಂದು ಫಿಲ್ಮ್ ತೀರುವವರೆಗೂ ಕ್ಲಿಕ್ ಮಾಡಿದರು.

ಭಾರತದ ರಾಷ್ಟ್ರ ಪಕ್ಷದ ಪ್ರಧಾನ ಕಾರ್ಯದರ್ಶಿ ಜಾಣಪ್ಪನವರೊಡಗೂಡಿ ಸೌದಾಮಿನಿ ದೇವಿಯನ್ನು ಒಳಗೊಂಡು ರಾಜಭವನಕ್ಕೆ ಹೋದರು. ಅವರಿಗೆ ಪತ್ರ

ನೀಡಿದರು. ಎಲ್ಲವೂ ಅವರಿಗೆ ಒಪ್ಪಿಗೆಯೇ. ಪಕ್ಷದ ಕಾರ್ಯದರ್ಶಿ ರಾಜಭವನ ದಿಂದಲೇ ರಾಷ್ಟ್ರಪತಿಗೆ, ಪ್ರಧಾನಿಗೆ ಸ್ಟೇಟ್ ಕಾಲ್ ಮಾಡಿದರು. ರಾಜ್ಯಪಾಲರೂ ಅವರ ಪತ್ನಿಯೂ ಸೌದಾಮಿನಿಯನ್ನು ಕುತೂಹಲದಿಂದ ಮತ್ತೆ ಮತ್ತೆ ನೋಡಿದರು.

ಪತ್ರಿಕೆಗಳ, ವಾರ್ತಾಸಂಸ್ಥೆಗಳ ಪ್ರತಿನಿಧಿಗಳಿಗೂ, ಛಾಯಾಚಿತ್ರಕಾರರಿಗೂ ಅವಸರದ ಕರೆ. ರಾಜಭವನದ ದರ್ಬಾರ್ ಹಾಲ್‌ನಲ್ಲಿ ಕಿಷ್ಕಿಂಧೆಯ ಮುಖ್ಯ ಮಂತ್ರಿಯಾಗಿ "ನಾನು ಸೌದಾಮಿನಿ ದೇವಿ" ಪ್ರತಿಜ್ಞೆ ಸ್ವೀಕರಿಸಿದರು.

ಒಂಭತ್ತು ಗಂಟೆಯ ವಾರ್ತಾಪ್ರಸಾರದಲ್ಲಿ ಆಕಾಶವಾಣಿ ಇದನ್ನು ಬಿತ್ತರಿಸಿತು.

"ಜಗದಲಪುರದಲ್ಲಿ ಹಿರಿಯ ಯೋಗಿನಿ ಬಾಬಾರ ಬಳಿ ಸಾರಿ ನುಡಿದರು :

"ವಾರ್ತೆ ಕೇಳಿದಿರಾ ?"

"ಹ್ಞ."

೬

ಸೌದಾಮಿನಿ ದೇವಿ ಮತ್ತು ಆರು ಜನ ಗಂಡಸರು. ಇದು ಕಿಷ್ಕಿಂಧೆಯ ನೂತನ ಮಂತ್ರಿಮಂಡಲ. ಆ ರಾಜ್ಯದ ಅಸಾಮಾನ್ಯ ದೈನಿಕ 'ಕಿಷ್ಕಿಂಧಾವಾಣಿ' ಮೊದಲ ಪುಟದ ಅಗಲಕ್ಕೆ ದೊಡ್ಡ ಅಕ್ಷರಗಳಲ್ಲಿ ಸಾರಿತ್ತು : ಕಿಷ್ಕಿಂಧೆ ಸಂಪುಟ—ಸಪ್ತರ್ಷಿ ಮಂಡಲ. ಕಿಕ್ಕಿರಿದಿದ್ದ ಪತ್ರಿಕಾಗೋಷ್ಠಿಯಲ್ಲಿ ಮೊದಲು ಹಂಚಿದ್ದು ನೂತನ ಮುಖ್ಯಮಂತ್ರಿಯ ಸಹಿಯಿದ್ದ ಘೋಷಣೆಯನ್ನು. 'ಭವ್ಯ ಭವಿಷ್ಯದ ಕಿಷ್ಕಿಂಧೆಗಾಗಿ ಸೌದಾಮಿನಿ ಪ್ರಣಾಳಿಕೆ' ಎಂದಿತ್ತು ಅದರ ಶೀರ್ಷಿಕೆ. ಜತೆಯಲ್ಲಿ ಕಾಫಿ ತಿಂಡಿ. ಗೋಷ್ಠಿ ನಡೆದದ್ದು ಮುಖ್ಯಮಂತ್ರಿಯವರ ಚೇಂಬರಿನಲ್ಲಿ.

ಒಬ್ಬನೆಂದ :

"ಏಳು ಒಳ್ಳೆಯ ಸಂಖ್ಯೆ, ಶುಭಸೂಚಕ."

ಇನ್ನೊಬ್ಬ :

"ಮಂಡಲದ ಗಾತ್ರ ಚಿಕ್ಕದಾಗಲಿಲ್ಲವೆ ?"

"ಮೈಬಗ್ಗಿ ದುಡಿದರೆ ಚಿಕ್ಕ ಗಾತ್ರ ಅನಿಸದು," ಎಂದರು ಮುಖ್ಯಮಂತ್ರಿ.

"ಹಿಂದಿನ ಸಂಪುಟದವರು ಮೈಬಗ್ಗಿ ದುಡೀಲಿಲ್ಲ ಅಂತಲೆ ?"

"ಛೆ ! ಛೆ ! ಹಾಗೆ ಹೇಳಲಾರೆ. ದುಡಿದೂ ದುಡಿದೂ ಅವರ ನಡು ಬಗ್ಗಿ ಹೋಯಿತು."

"ಅದು ವೃದ್ಧರ ಆರಾಧನೆ ; ಇದು ಯೌವನದ ಪೂಜೆ ಎನ್ನೋಣವೆ ?"

"ಪದ ಜೋಡಣೆ ಚೆನ್ನಾಗಿದೆ. ನೀವು ಯಾವ ಪತ್ರಿಕೆಯವರು ?"

"ಭಾರತ ವಾರ್ತಾ ಸಂಸ್ಥೆ."

"ನಿಮ್ಮ ನಿರ್ದೇಶಕರನ್ನು ಬಲ್ಲೆ. ದಿಲ್ಲಿಯಲ್ಲಿ ನಿಮ್ಮ ಕೇಂದ್ರದ ಕಟ್ಟಡಕ್ಕೆ ಹೋಗಿದ್ದೆ."

"ಸಂಪುಟದಲ್ಲಿ ಯಾವುದಕ್ಕೆ ಪ್ರಾತಿನಿಧ್ಯ ಕೊಟ್ಟಿದ್ದೀರಿ? —ಪ್ರದೇಶಗಳಿಗೊ? ಜಾತಿಗಳಿಗೊ ?" ಎಂದು ಇನ್ನೊಬ್ಬ ಕೇಳಿದ.

"ನಮಗೆ ಬೇಕಾಗಿರೋದು ಜಾತ್ಯತೀತ ಸಮಾಜ. ಆದರೂ ವಾಸ್ತವಾಂಶವನ್ನು ಮರೆಯೋಕಾಗುತ್ತ ? ಪ್ರದೇಶ, ಜಾತಿ ಎರಡನ್ನೂ ಗಮನದಲ್ಲಿಟ್ಕೊಂಡು ಸಂಪುಟ ರಚಿಸಿದ್ದೇನೆ."

"ಅನುಭವ ಹುಮ್ಮಸ್ಸು ಎರಡೂ ಬೇಕು ಅಂತ ಹಿಂದೆ ಹೇಳ್ತಿದ್ರು."

"ಅವೆರಡೂ ಇದ್ದ ಜಾಣಪ್ಪನವರ ಸಂಪುಟದ ಸಾಧನೆ ಏನು ?"

ಧ್ವನಿ ಏರಿತಲ್ಲ ? ಸಂಯಮ ಕಳೆದುಕೊಳ್ಳಬಾರದು—ಎಂದುಕೊಂಡಳು ಸೌದಾಮಿನಿ.

"ಸಪ್ತರ್ಷಿ ಮಂಡಲದಂತಿರೋ ತಮ್ಮ ಸಂಪುಟದಲ್ಲಿ ಮಹಾವ್ಯಾಧ ಯಾರು ?"

"ಅದು ಕೇಳಬೇಕಾದ ಪ್ರಶ್ನೆಯೇ ಅಲ್ಲ. ಮುಖ್ಯಮಂತ್ರಿಯೇ ಮಹಾವ್ಯಾಧ!"

"ಪುಲಹ, ಕ್ರತು, ಧ್ರುವ, ಲುಬ್ಧಕ, ಅಗಸ್ತ್ಯ, ಅಭಿಜಿತ್ ಈ ಹೆಸರುಗಳನ್ನು ಸಂಪುಟದಲ್ಲಿ ಯಾರು ಯಾರಿಗೆ ಅನ್ವಯಿಸಬಹುದು ?"

"ಅದನ್ನು ನಿಮಗೇ ಬಿಟ್ಟಿದ್ದೇನೆ. ನಮ್ಮ ಆಳ್ವಿಕೆಯಲ್ಲಿ ಪತ್ರಿಕೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರ್ತದೆ."

"ತಮ್ಮ ಪತ್ರಿಕಾ ವಾತ್ಸಲ್ಯಕ್ಕಾಗಿ ನಾವು ಋಣಿಗಳು."

"ನೀವು ? — —?"

"ಕಲ್ಯಾಣನಗರದ ಸುದ್ದಿಗಾರರ ಸಂಘದ ನೂತನ ಅಧ್ಯಕ್ಷ."

"ಬದಲಾವಣೆಯೇ ಬದುಕಿನ ಅಂತಃಸತ್ವ. ಬೇಕಾದರೆ ಬರಕೊಳ್ಳಿ."

"ಬದಲಾವಣೆಯೇ ರಾಜಕೀಯದ ಅಂತಃಸತ್ವ ಎನ್ನಬಹುದೆ ?"

"ಧಾರಾಳವಾಗಿ !"

"ನಾಡಿನ ಜನತೆಗೆ ನೂತನ ಮುಖ್ಯಮಂತ್ರಿಯಾಗಿ ನಿಮ್ಮ ಸಂದೇಶವೇನು ?"

"ಆಕಾಶವಾಣಿಯಲ್ಲಿ ಇವತ್ತು ರಾತ್ರೆ ನಮ್ಮ ಪ್ರಸಾರ ಭಾಷಣವಿದೆ. ಅದರ ಪ್ರತಿಗಳನ್ನು ನಮ್ಮ ವಾರ್ತಾ ಇಲಾಖೆ ಕೊಡ್ತದೆ. ಅದನ್ನು ನೀವೆಲ್ಲರೂ ಮುದ್ರಿಸಬಹುದು."

"ಅದು ವಿಸ್ತೃತ ಲೇಖನವಾಯಿತು. ದೇಶ ವಿದೇಶಗಳ ಜನರ ಮನಸ್ಸಿಗೂ ನಾಟುವಂತೆ ಚುಟುಕಾಗಿ ನಾಲ್ಕು ವಾಕ್ಯ ಹೇಳಿದರೆ ಚೆನ್ನಾಗಿರುತ್ತೆ."

"ಆಗಲಿ, ಅದಕ್ಕೇನು? ಆರಾಮ್ ಹರಾಮ್ ಹೈ! ಜೈ ಕಿಸಾನ್ ಜೈ ಜವಾನ್! ಸರಕಾರದ ಕೆಲಸ ದೇವರ ಕೆಲಸ! ಕೀರುತಿಗೆರಡು ಗಂಡು ಆರತಿಗೊಂದು ಹೆಣ್ಣು !"

ಒಬ್ಬ ನಡುವೆ ಬಾಯಿ ಹಾಕಿದ :

"—ಸರಕಾರ ಮುದ್ರಿಸಿರೋ ಭಿತ್ತಿ ಪತ್ರಗಳಲ್ಲಿ 'ಆರತಿಗೊಂದು ಕೀರುತಿಗೊಂದು' ಅಂತ ಮಾತ್ರ ಇದೆ."

"ಮುದ್ರಣದೋಷವಿದ್ದೀತು. ವಿಚಾರಿಸ್ತೇವೆ."

"ಆರತಿಗೆ ಕೀರುತಿಗೆ ಎರಡಕ್ಕೂ ಹೆಣ್ಣು ಸಲ್ಲುವುದಿಲ್ಲವೆ ? ತಮ್ಮ ದೃಷ್ಟಾಂತವನ್ನೇ ತಗೊಳ್ಳಿ."

"ಜನಸಾಮಾನ್ಯರಿಗೆ ನಮ್ಮನ್ನು ಹೋಲಿಸಬಾರದು."

"ತಪ್ಪಾಯ್ತು ಕ್ಷಮಿಸಿ."

ಮತ್ತೊಬ್ಬ ಕೇಳಿದ :

"ಮುಖ್ಯಮಂತ್ರಿಯಾಗಿ ತಮ್ಮ ವೈಯಕ್ತಿಕ ಹವ್ಯಾಸಗಳೇನು ?"

"ಒಂದನೇದು ಜನಸೇವೆ, ಎರಡನೇದು ಜನಸೇವೆ, ಮೂರನೇದೂ ಜನಸೇವೆ."

ಮೂವರು ನಾಲ್ವರು ಒಟ್ಟಿಗೆ ನಕ್ಕರು. ಮುಖ್ಯಮಂತ್ರಿಯೂ ನಕ್ಕರು.

"ಎಂದೂ ಇರದಿದ್ದ ಬಹುಮತ ಈ ಸಲ ರಾಷ್ಟ್ರಪಕ್ಷಕ್ಕೆ ದೊರೆತಿದೆ. ಬಂಡೆ ಬಹುಮತ !"

"ಬಂಡೆ ಬಹುಮತ ಪದಪ್ರಯೋಗ ಚೆನ್ನಾಗಿದೆ. ನಮ್ಮ ಪಕ್ಷದಿಂದ ದೂರ ಸರಿದು ಹೊಸ ಪಕ್ಷ ರೂಪಿಸಿದವರು ಹತಾಶರಾದರು. ಅವರಿಗೆ ದೊರೆತಿರೋದು ಐದು ಸ್ಥಾನ. ಸಮತಾದವರಿಗೆ ಒಂದೇ ಸ್ಥಾನ."

"ಇದು ನಿಮ್ಮ ವೈಯಕ್ತಿಕ ವಿಜಯ ಅಂತ ಎಲ್ಲರೂ ಅಭಿಪ್ರಾಯ ಪಡ್ತಾರೆ. ನಿಮ್ಮ ಪ್ರತಿಕ್ರಿಯೆ...."

"ಮೌನ."

"ಅಧಿಕಾರ ಸ್ವೀಕಾರದವರೆಗೂ ಮಾತಾಜಿ ಆಗಿದ್ದಿರಿ."

"ಇನ್ನೂ ಮಾತಾಜಿಯೇ. ನಿಸ್ಸಂಕೋಚವಾಗಿ ಎಲ್ಲರೂ ಹಾಗೆ ಕರೀಬಹುದು."

"ನಿಮಗೆ ವಿರೋಧ ಬರೋದಿದ್ದರೆ ಅದು ನಿಮ್ಮ ಪಕ್ಷದೊಳಗಿಂದ ಮಾತ್ರ."

"ಪತ್ರಿಕೆಗಳು ಪಕ್ಷದ ಆಂತರಿಕ ವಿಷಯದಲ್ಲಿ ಕೈ ಹಾಕಬಾರದು. ಎಲ್ಲೆಲ್ಲೂ ಶಾಂತಿ ಸಮಾಧಾನ ನೆಲೆಸುವಂತೆ ಆಡಳಿತಕ್ಕೆ ನೆರವಾಗಬೇಕು."

"ತಿಂಗಳಿಗೊಮ್ಮೆ ಪತ್ರಿಕಾಗೋಷ್ಠಿ ನಡೆಸಿದರೆ ಆದೀತು ಅಂತ ಒಂದು ಸಲಹೆ."

"ಆಗಬಹುದು. ಅದನ್ನು ಭೋಜನ ಪತ್ರಿಕಾಗೋಷ್ಠಿ ಅಂತ ಕರೆಯೋಣ !"

ಗೋಷ್ಠಿಯಲ್ಲಿ ನೆರೆದಿದ್ದ ಪತ್ರಿಕಾ ಪ್ರತಿನಿಧಿಗಳೆಲ್ಲ ಚಪ್ಪಾಳೆ ತಟ್ಟಿದರು.

ಮುಖ್ಯಮಂತ್ರಿ ಎದ್ದರು. ಗೋಷ್ಠಿ ಮುಗಿಯಿತೆನ್ನುವುದಕ್ಕೆ ಸೂಚನೆ.

* * *

ಖಾತೆಗಳ ಹಂಚಿಕೆಯನ್ನು ಕೈಗೆತ್ತಿಕೊಂಡಾಗ ಆರು ಇರುವೆಗಳು ಒಟ್ಟಿಗೆ ಕಚ್ಚಿದಂತಾಯಿತು ಸೌದಾಮಿನಿಗೆ.

ಆಕೆ ಅಂದಳು :

"ಪ್ರತಿಯೊಬ್ಬರಿಗೂ ಮೂರು ನಾಲ್ಕು ಖಾತೆಗಳು. ಸೌದಾಮಿನಿ ಸಂಪುಟದಲ್ಲಿ ಮಂತ್ರಿಗಳು ಕೆಲಸವಿಲ್ಲದೆ ನೊಣ ಹೊಡೀತಿದಾರೇಂತ ಆಗಬಾರದು. ದೇಶದಲ್ಲಿ ಬೇರೆ ಎಲ್ಲೂ ಇಲ್ಲದ ಸಪ್ತರ್ಷಿ ಮಂಡಲ ಇದು. ಪ್ರಧಾನಿ ಮೆಚ್ಚಿಕೊಂಡಿದ್ದಾರೆ. ಪಕ್ಷಾಧ್ಯಕ್ಷರು, ಮಹಾಕಾರ್ಯದರ್ಶಿ ತಮ್ಮ ಸಂತೋಷ ವ್ಯಕ್ತಪಡಿಸಿದ್ದಾರೆ."

ನೀರಾವರಿ ಸಚಿವರು ಇಳಿದನಿಯಲ್ಲಿ ನುಡಿದರು :

"ಸ್ಪಷ್ಟ ಪಡಿಸ್ತೀನಿ. ಮುಖ್ಯಮಂತ್ರಿಯವರು ಮಾಡಿರೋ ಹಂಚಿಕೆ ನನಗೆ ಒಪ್ಪಿಗೆ. ನೀರಾವರಿ, ಲೋಕೋಪಯೋಗಿ ಖಾತೆ, ಕೃಷಿ ಎಲ್ಲ ಪರಸ್ಪರ ಸಂಬಂಧಿಸಿದ್ದೇ."

ಗೃಹಖಾತೆಯನ್ನು ಸೌದಾಮಿನಿ ತನ್ನ ವಶ ಇಟ್ಟುಕೊಂಡಿದ್ದಳು. ಅವಳ ಉದ್ದೇಶ : ಪಕ್ಷದ—ಯಾಕೆ, ಇಡೀ ವಿಧಾನ ಸಭೆಯ—ಎಲ್ಲ ಸದಸ್ಯರ ಹಿಂದೆ ಗುಪ್ತ ಚಾರರನ್ನಿಡುವುದು. ಸಾಪ್ತಾಹಿಕ, ಕೆಲವರಿಗೆ ಸಂಬಂಧಿಸಿ ದೈನಿಕ, ವರದಿಗಳನ್ನು ತರಿಸಿಕೊಳ್ಳುವುದು. ಅರ್ಥಶಾಸ್ತ್ರದ ಬಡ ಬ್ರಾಹ್ಮಣರಾಗಲೀ ವೇಶ್ಯೆಯರಾಗಲೀ ಈಗ ಅನಗತ್ಯ. ಪೋಲೀಸ್ ಗುಪ್ತಚಾರ ಇಲಾಖೆ ಸರಿಯಾಗಿ ಕೆಲಸ ಮಾಡಬೇಕು. ಮಾಡದಿದ್ದರೆ ಚುರುಕು ಮುಟ್ಟಿಸುವುದು.

....ರಾಜ್ಯದ ಮುಖ್ಯ ಕಾರ್ಯದರ್ಶಿ ಹಳೇ ಐ. ಸಿ. ಎಸ್. ನ ಪಳೆಯುಳಿಕೆ; ಈತನನ್ನು ದಿಲ್ಲಿಗೆ ಸಾಗಹಾಕಿ, ದುಡಿಯುವ ಸಾಮರ್ಥ್ಯವಿರುವ ನಾಲ್ವತ್ತುನಾಲ್ವತ್ತೈದರ ಐ. ಎ. ಎಸ್ ಅಧಿಕಾರಿಯನ್ನು ಪಡೆಯಬೇಕು ಎಂಬ ನಿರ್ಧಾರಕ್ಕೆ ಸೌದಾಮಿನಿ ಬಂದಳು.

ವಿದ್ಯುಚ್ಛಕ್ತಿ, ಸೀಮೆ ಎಣ್ಣೆ ಸರಿಬರಾಜು, ವಸತಿ ಮತ್ತು ಹಂದಿ ಸಾಕಣೆಯ ಮಂತ್ರಿಯನ್ನು ಒಂದು ಪತ್ರಿಕೆ ಧ್ರುವ ಎಂದು ಕರೆಯಿತು.

ಒಂದು ಪೂರ್ವಾಹ್ನ ಧ್ರುವಬಿಂದು ಟ್ರಿಣ್‌ಟ್ರಿಣ್ ಬಾರಿಸಿತು.

ಆಪ್ತ ಕಾರ್ಯದರ್ಶಿ ರಿಸೀವರ್ ಎತ್ತಿ, "ಯೆಸ್ ?" ಎಂದ. ಆ ತುದಿಯಲ್ಲಿದ್ದವನು ಮುಖ್ಯಮಂತ್ರಿಯ ಆಪ್ತಸಹಾಯಕರಲ್ಲೊಬ್ಬ. ಆತನೆಂದ : "ಸಿ. ಎಂ. ನಿಮ್ಮ ಮಿನಿಸ್ಟರನ್ನ ಕರೀತಾರೆ."

ಒಸಗೆ ತಿಳಿದೊಡನೆ ಯುವಕ ರಂಗಧಾಮ ಗಡಿಬಿಡಿಯಿಂದ ಎದ್ದು ವಿಶ್ರಾಂತಿ ಕೊಠಡಿಗೆ ಹೋಗಿ, ಅಲ್ಲಿದ್ದ ಕನ್ನಡಿಯಲ್ಲಿ ಮುಖ ನೋಡಿಕೊಂಡು, ಕ್ರಾಪು ಬಾಚಿ, ಒಂದೆಳೆಯನ್ನು ಹಣೆಯ ಮೇಲೆ ಚೆಲ್ಲಾಡಲು ಬಿಟ್ಟು, ಆತ್ಮವಿಶ್ವಾಸದಿಂದ ಮಹಾವ್ಯಾಧರ ಸಮ್ಮುಖ ಸೇರಿದ.

"ಕೂತ್ಕೊಳ್ಳಿ. ನಿಮ್ಮನ್ನೋ ಪತ್ರಿಕೆಯವರು ಧ್ರುವ ಎಂದದ್ದು ? ಬರೆದವನು ಬುದ್ಧಿವಂತ. ನೀವು ಚಿತ್ರಾವತಿ ಕ್ಷೇತ್ರದವರಲ್ಲವೆ ?"

"ಹೌದು, ಮಾತಾಜಿ."

"ಜಾಣಪ್ಪನವರು ಯಾವಾಗ ನಿವಾಸ ಖಾಲಿ ಮಾಡ್ತಾರೋ ಗೊತ್ತಿಲ್ಲ. ಈಗಿನ ಮುಖ್ಯಮಂತ್ರಿಗೊಂದು, ಮನೆ ಬೇಕಲ್ಲ... ವಸತಿ ಮತ್ತು ಹೋಂ ಆಫೀಸು."

"ಸರಕಾರೀ ಅತಿಥಿ ಗೃಹದ ವಿಸ್ತರಣದಲ್ಲಿ ಒಂದು ದೊಡ್ಡ ಬಂಗಲೆ ಇದೆ."

"ಸುಣ್ಣ ಬಣ್ಣ ಅಲಂಕಾರಗಳಿಗೆಲ್ಲ ಎಷ್ಟು ಸಮಯ ಬೇಕು ?"

"ಎರಡು ಮೂರು ವಾರ."

"ಭೇಷ್ ! ನಿಮ್ಮ ಹವ್ಯಾಸವೇನು ?"

"ಬಿಡುವು ದೊರೆತರೆ ಸಂಜೆ ಟೆನ್ನಿಸ್ ಆಡ್ತೇನೆ."

"ನನಗೂ ಆ ಆಟ ಇಷ್ಟ. ಹೇಳಿಕೊಡ್ತೀರಾ ?"

"ತಮಗೆ ಬಿಡುವು ಸಿಗಬೇಕಲ್ಲ ಮಾತಾಜಿ...."

"ಸಿಕ್ಕಾಗ—"

"ಆಗಲಿ. ದೊಡ್ಡ ಜವಾಬ್ದಾರಿ. ನೆನೆಸಿಕೊಂಡರೇ ಬೆವರುತ್ತೆ."

"ಕರ್ಚೀಫ್ ಇದೆಯಾ ?"

"ಇದೆ."

"ಚೀಫ್ ಸೆಕ್ರೆಟರಿಗೆ ತಿಳಿಸಿಬಿಡಿ. ಕೆಲಸ ಶುರುವಾಗಲಿ. ನಿಮ್ಮ ಪರಿಚಯದ ಕಂಟ್ರಾಕ್ಟರ್ ಯಾರಾದರೂ ಇದ್ದರೆ ಅವರನ್ನೇ ನೇಮಿಸಿ."

ಸೌದಾಮಿನಿ ರಂಗಧಾಮನ ಮುಖವನ್ನು ತನ್ನ ದೃಷ್ಟಿಯಿಂದ ಮುದ್ದಿಸಿದಳು. ಯುವಮಂತ್ರಿಗೆ ಕಚಗುಳಿ ಇಟ್ಟಂತಾಯಿತು.

ನಸುನಕ್ಕು "ಹೋಗಬಹುದು" ಎನ್ನುವಂತೆ ಮುಖ್ಯಮಂತ್ರಿ ಸನ್ನೆ ಮಾಡಿದಳು.

* * *

ಕೇಂದ್ರ ಸಂಪುಟಕ್ಕೆ ಕಿಷ್ಕಿಂಧೆಯಿಂದ ಒಬ್ಬನನ್ನು ತೆಗೆದುಕೊಂಡಿದ್ದರು ಉಪ ಮಂತ್ರಿಯಾಗಿ. ಕೆಲ ಲೋಕಸಭಾ ಸದಸ್ಯರು ಸೌದಾಮಿನಿಯೊಡನೆ ಸಮಾಲೋಚನೆಗೆ ಬಂದರು.

"ಇದು ನಮ್ಮ ರಾಜ್ಯಕ್ಕೆ ಅವಮಾನ ಅಲ್ವೆ ಮಾತಾಜಿ ?"

"ನನಗೆ ಹಾಗೆ ಅನಿಸೋದಿಲ್ಲ. ಸದಸ್ಯರ ವೈಯುಕ್ತಿಕ ಸಾಮರ್ಥ್ಯ ಮಾಪನದಲ್ಲಿ ನಮ್ಮ ಪ್ರಧಾನಿ ಅಸಮಾನರು. ಮುಂದಿನ ವರ್ಷ ಸಂಪುಟ ಪುನರ್ರಚಿಸುವಾಗ ಸಂಪುಟ ದರ್ಜೆಗೆ ಒಬ್ಬರನ್ನು 'ರಾಜ್ಯ ಮಂತ್ರಿಯಾಗಿ' ಒಬ್ಬರನ್ನು ಖಂಡಿತ ತಗೊಳ್ತಾರೆ. ಅಲ್ಲಿ ಮಾತ್ರ ಕಿರಿಕಿರಿ ಮಾಡ್ಬೇಡಿ. ಪ್ರಧಾನಿಗೆ ಒಮ್ಮೆ ಸಿಟ್ಟು ಬಂತು ಅಂದರೆ ಎದುರಿಗಿದ್ದವರು ಸುಟ್ಟು ಬೂದಿಯಾಗ್ತಾರೆ."

"ಅವರ ಹಣೆಯಲ್ಲೊಂದು ಕಣ್ಣಿದೆಯಾ ?"

"ಹಾಗೆಲ್ಲ ಮಾತಾಡಬಾರದು. ತಪ್ಪಾಯ್ತು ಅನ್ನಿ."

"ತಪ್ಪಾಯ್ತು, ಮಾತಾಜಿ."

* * *

ರಂಗಧಾಮನ ಜತೆ ದಿನಕ್ಕೊಮ್ಮೆ ಸೌದಾಮಿನಿ ತನಗಾಗಿ ಹೊಸಯುಡುಗೆ ತೊಡುತ್ತಿದ್ದ ಬಂಗಲೆಗೆ ಭೇಟಿ ಇತ್ತಳು.

ಜಾಣಪ್ಪನವರಿಂದ ಪತ್ರ ಬಂತು, ಮುದ್ದಾಂ.

"ನನ್ನ ಪ್ರಿಯ ಮಾತಾಜಿ ಸೌದಾಮಿನಿ ದೇವಿ,

ನಿವಾಸದ ಬಗ್ಗೆ ನಿಮ್ಮ ಸೂಚನೆ ಬಂದೊಡನೆ ತೆರವು ಮಾಡಲು ಸಿದ್ಧನಿದ್ದೇನೆ. ರಾಜ್ಯಪಾಲ ಪದವಿಯನ್ನು ಕುರಿತು ದಿಲ್ಲಿಯಿಂದ ಏನೂ ಸಂದೇಶ ಬಂದಿಲ್ಲ. ನಿಮಗೆ ತೊಂದರೆಯಾಗಬಾರದು. ಒಂದು ಖಾಲಿ ಮನೆ ಬಾಡಿಗೆಗೆ ಕೊಡಿಸಿ. ಅಲ್ಲಿಗೆ ಹೋಗುತ್ತೇನೆ. ಮುಖ್ಯ ನಿಮಗೆ ತೊಂದರೆಯಾಗಲೇಬಾರದು.

ಶುಭಾಶಯಗಳು

ಇತಿ ವಿಶ್ವಾಸದ
ಜಾಣಪ್ಪ
ಮಾಜಿ ಮುಖ್ಯಮಂತ್ರಿ

ಕಟ್ಟಡದ ನವೀಕರಣ ಆಗುತ್ತಿರುವ ಸುದ್ದಿ ತಿಳಿದು ಮುದುಕ ಕಾಗದ ಬರೆದಿದ್ದಾನೆ—ಎಂದು ಸೌದಾಮಿನಿ ಸರಿಯಾಗಿಯೇ ಊಹಿಸಿದಳು. ಆಕೆಯಿಂದ ನಿರ್ದೇಶಿತನಾಗಿ ರಂಗಧಾಮ ಜಾಣಪ್ಪನವರ ನಿವಾಸಕ್ಕೆ ಹೋದ.

"ರಂಗಧಾಮ ಅಲ್ವೆ ? ಬಾಪ್ಪ" ಎಂದರು ಜಾಣಪ್ಪ.

"ನೂತನ ಮುಖ್ಯಮಂತ್ರಿ ಕಳಿಸಿದಾರೆ."

"ಮಾತಾಜಿ ಕಳಿಸಿದರೊ ? ಅವರಿಗೊಂದು ಕಾಗದ ಬರೆದಿದ್ದೆ."

"ಆ ವಿಷಯವೇ ಮಾತನಾಡಿ ಬಾ ಅಂದ್ರು, ತಾವು ಎಷ್ಟು ಕಾಲ ಬೇಕಾದರೂ ಇಲ್ಲಿಯೇ ಇರಬಹುದಂತೆ."

"ಅದು ಹ್ಯಾಗಾಗುತ್ತೆ ?"

"ತಮ್ಮ ವಸತಿ ಸೌಕರ್ಯ ಸರಕಾರದ ಜವಾಬುದಾರಿ ಅಂತೆ."

"ಹಿರಿಯರನ್ನ ಈ ರೀತಿ ಗೌರವದಿಂದ ಕಾಣೋದು ಸಂಸ್ಕೃತಿಯ ಲಕ್ಷಣ."

"ಬೇಕಾದರೆ, ತಮಗೆ ಇಷ್ಟವಾದ ವಿಸ್ತರಣದಲ್ಲಿ ದೊಡ್ಡ ನಿವೇಶನ ಮಂಜೂರು ಮಾಡ್ತಾರಂತೆ. ಮಕ್ಕಳ ಹೆಸರಿನಲ್ಲಿ ಬೇಕಾದರೂ ಅರ್ಜಿಗಳನ್ನ ಕಳಿಸಬಹುದಂತೆ."

"ಔದಾರ್ಯಕ್ಕಾಗಿ ಉಪಕೃತ."

"ರಾಜ್ಯಪಾಲರ ಹುದ್ದೆ ಗ್ಯಾರಂಟಿ. ಇನ್ನು ನಾಲ್ಕು ತಿಂಗಳಲ್ಲಿ ಎರಡು ಸ್ಥಾನ ಖಾಲಿಯಾಗುತ್ತಂತಲ್ಲ ? ಈ ಸಲ ದಿಲ್ಲಿಗೆ ಹೋದಾಗ ಪ್ರಧಾನಿಯವರ ಜತೆ ಮಾತಾಡ್ಕೊಂಡು ಬರ್ತಾರಂತೆ."

"ಮುಚ್ಚುಮರೆಯ ಮಾತು ನನಗೆ ಅಭ್ಯಾಸವಿಲ್ಲ, ರಂಗಧಾಮ. ಈಗ ದಿಲ್ಲಿಯಲ್ಲಿ ಮಾತನಾಡಿ ಆಗೋದು ಅಷ್ಟರಲ್ಲೇ ಇದೆ. ಚಾಡಿ ಹೇಳಿ ಅಡ್ಡಗಾಲಿಡದಿದ್ದರೆ ಅಷ್ಟೇ ಸಾಕು. ಸಪ್ತರ್ಷಿಗಳು—ಮಹಾವ್ಯಾಧ—ಇಲ್ಲಿ ನಿರಾಂತಕವಾಗಿ ಚಲಿಸ

ಬೇಕೂಂತ ದಿಲ್ಲಿ ಬಯಸೋದಾದರೆ ನನ್ನನ್ನು ಇಲ್ಲಿಂದ ಎತ್ತಿ ಹಾಕ್ತಾರೆ. ಇದು ರಾಜಕಾರಣ. ಅಲ್ವೇನಪ್ಪ ?"

"ಅಡ್ಡಗಾಲಿಡುವ ಕೆಲಸ ಮಾಡಲಾರರು ಅನಿಸುತ್ತೆ."

"ಅಂತೂ ಚೀಫ್‌ನ ವಹಿಸಿಕೊಂಡು ಮಾತನಾಡ್ತೀರಿ !"

"ತಮ್ಮನ್ನೂ ಮಾತಾಜಿಯನ್ನೂ ಎಲ್ಲರೂ ಆದರಿಸ್ತಾರೆ."

"ಆದರಕ್ಕೂ ಹಾದರಕ್ಕೂ ಅಂತರ ಕಮ್ಮಿ. ರಂಗಧಾಮ, ನಿಮಗಿನ್ನೂ ಚಿಕ್ಕ ವಯಸ್ಸು. ಸುಳೀಲಿ ಸಿಕ್ಕಿ ಹಾಕ್ಕೊಳ್ಬೇಡಿ. ಜೋಪಾನ !"

"ತಮ್ಮಂಥ ಹಿರಿಯರ ಆಶೀರ್ವಾದ ಬಲದಿಂದ, ಎಲ್ಲಾ ಅಪಾಯಗಳಿಂದಲೂ ಪಾರಾದೇನು."

"ನೀವು ಸದ್ಭಾವನೆಯ ದೂತ, ತಿಳೀತೇನಪ್ಪ ? ಆಯಮ್ಮನಿಗೆ ನಮ್ಮ ಸಂಭಾಷಣೆಯ ಪೂರ್ಣ ವಿವರ ಕೊಡಬೇಕಾಗಿಲ್ಲ. ಅವರ ಜತೆ ವೃಥಾ ವಿರಸ ಯಾಕೆ? ನಿಮಗೆ ಒಳ್ಳೇದಾಗಲಿ. ಹೋಗ್ಬನ್ನಿ."

ಜಾಣಪ್ಪ ಹೇಳಿದುದನ್ನೆಲ್ಲ ಅರ್ಥಮಾಡಿಕೊಳ್ಳುವುದು ಜಾಣ ರಂಗಧಾಮನಿಗೆ ಕಷ್ಟವಾಗಲಿಲ್ಲ. ಮರಳಿದವನು ನೇರವಾಗಿ ಮುಖ್ಯಮಂತ್ರಿಯ ಬಳಿ ಹೋಗಲಿಲ್ಲ. ತನ್ನ ಕೊಠಡಿಯಲ್ಲಿ (ಚೇಂಬರಿನಲ್ಲಿ) ಕುಳಿತು ಕಾಫಿ ತರಿಸಿ ಕುಡಿದ.

ಸೀಮೆ ಎಣ್ಣೆಯ ಮಾರಾಟದ ಗುತ್ತಿಗೆಯನ್ನು ಕಳೆದ ಕೆಲ ವರ್ಷಗಳಿಂದ ಒಬ್ಬನೇ ವ್ಯಕ್ತಿಗೆ ಕೊಡಲಾಗಿತ್ತು. ಸಂಪುಟ ಬದಲಾದ ಮೇಲೆ ಹೊಸ ಮಂತ್ರಿಯನ್ನು ಕಾಣಲು ಅವನು ಬಂದಿರಲಿಲ್ಲ. ಆ ಇಲಾಖೆಯ ಕಾರ್ಯದರ್ಶಿ ಬಂದು ನುಡಿದ :

"ಸೀಮೆ ಎಣ್ಣೆಯವನು ಬಂದಿದ್ದ. ಹಳೆಯ ಒಡಂಬಡಿಕೆಯ ಪ್ರಕಾರ ವಿತರಣೆ ಮುಂದುವರಿಸ್ತೇನೆ—ಅಂದ. ಹೊಸ ಒಡಂಬಡಿಕೆ ಅಗತ್ಯ, ಇಲ್ಲದೆ ಹೋದರೆ ಗುತ್ತಿಗೆ ಬೇರೆಯವರಿಗೆ ಕೊಡ್ತೇವೆ—ಅಂತ ಹೇಳ್ದೆ."

"ಕಲಬೆರಕೆ ದೂರು ಬಂದಿದೇಂತ ಹೆದರಿಸ್ಬೇಕಾಗಿತ್ತು."

"ಕಡೇ ಬಾಣ ಅಂತ ಆ ಅಸ್ತ್ರವನ್ನು ಉಳಿಸಿಕೊಂಡಿದೇನೆ. 'ಚೆನ್ನಾಗಿ ಯೋಚನೆ ಮಾಡಿ ನಾಳೆ ಬಂದು ತಿಳಿಸಿ'—ಅಂದಿದ್ದೇನೆ."

ಅಷ್ಟರಲ್ಲಿ ಮುಖ್ಯಮಂತ್ರಿಯಿಂದ ರಂಗಧಾಮನಿಗೆ ಕರೆಬಂತು.

ಅವನನ್ನು ಕಂಡೊಡನೆ ಸೌದಾಮಿನಿ ಕೇಳಿದಳು :

"ಯಾಕೆ ಇಷ್ಟು ತಡ ?"

"ಆಗಲೇ ಬಂದೆ, ಒಂದು ಅರ್ಜೆಂಟ್ ಫೈಲಿತ್ತು."

"ಸೀಮೆ ಎಣ್ಣೇದಾ ?"

ಯುವಮಂತ್ರಿ ನಗೆಬೀರಿದ.

"ಹೌದು."

"ಹಿಂದಿಗಿಂತ ಎರಡು ಪಟ್ಟು. ಪಟ್ಟು ಹಿಡೀರಿ. ಪಕ್ಷದ ಖಜಾನೆ ಬರಿದಾಗಿದೆ.

ಪಕ್ಷಕ್ಕೋಸ್ಕರ ನಿಧಿ ಕೂಡಿಸಬೇಕು. ಎಲ್ಲ ಮಂತ್ರಿಗಳಿಗೂ ಇದನ್ನು ತಿಳಿಸಿಬಿಡಿ. ಹಿರಿಬೆರಳು ದಿಲ್ಲಿಗೆ ಹೋಗ್ತದೆ; ಕಿರಿಬೆರಳು ರಾಜ್ಯಸಮಿತಿಗೆ",

ಉಳಿದ ಮೂರು ಬೆರಳು ಯಾರಿಗೇಂತ ಅವರು ಕೇಳಿದರೆ?"

"ಕೇಳಬಹುದು-ಅಲ್ಲವೆ? ನೀವು ಒಂದಿಷ್ಟು ರಾಜನೀತಿ ಅಭ್ಯಾಸ ಮಾಡಬೇಕು ರಂಗಧಾಮ್. ಆಪದ್ಧನ, ರಾಜಧನ, ರಹಸ್ಯನಿಧಿ ಅಂತ ಮೂರಿವೆ. ಈ ಲೆಕ್ಕ ನಾನು ಇಟ್ಟುಕೊಳ್ತೀನೆ."

ನೀಳವಾಗಿ ಉಸಿರೆಳೆದು ಬಿಟ್ಟು, ಧೈರ್ಯ ತಂದುಕೊಂಡು, ಯುವಮಂತ್ರಿ ಕೇಳಿದ :

"ಇಲಾಖೆಯ ಪಾಲು ಒಂದಿದೆ ಅನ್ತಾರೆ."

"ಅನ್ನದೆ ಇರ್ತಾರ? ಕೊಸರು ಹಾಕಿಸ್ಕೊಳ್ಳಿ-ಕೊಸರು! ಮಾಜಿ ಏನೆಂದ?"

"ಬಹಳ ಮೆತ್ತಗಾಗಿದಾರೆ. ರಾಜ್ಯಪಾಲ ಪದವಿ ಏನಿದ್ದರೂ ತಮ್ಮನ್ನೇ ಅವಲಂಬಿಸಿದೆಯಂತೆ."

"ಜಾಣಪ್ಪ ನಿಜವಾಗಿಯೂ ವಿವೇಕಿಯಾದಂತಿದೆಯಲ್ಲ! ಸೈಟ್ ಬೇಡವಂತೊ?"

"ಔದಾರ್ಯಕ್ಕಾಗಿ ಉಪಕೃತ ಅಂದ್ರು. ಬಹುಶಃ ಅರ್ಜಿ ಬರಬಹುದು."

"ಕೊಂಕು, ಟೀಕೆ, ಲೇವಡಿ ಏನೂ ಇಲ್ವೊ?"

"ನಾನು ದೂತನಾಗಿ ಹೋದವನು. ಎಷ್ಟು ಬೇಕೋ ಅಷ್ಟೇ ಮಾತಾಡಿದ್ರೂಂತ ತೋರುತ್ತೆ."

ಎರಡು ನಿಮಿಷ ನೆಟ್ಟ ನೋಟದಿಂದ ರಂಗಧಾಮನ ಮುಖವನ್ನು ಸೌದಾಮಿನಿ ನೋಡಿದಳು. ಯೌವನದ ಸೊಬಗಲ್ಲದೆ ಬೇರೇನೂ ಅಲ್ಲಿ ಕಾಣಿಸಲಿಲ್ಲ.

"ಪಕ್ಷನಿಧಿಗೆ ವಂತಿಗೆ ಸೀಮೆ ಎಣ್ಣೆಯಿಂದಲೇ ಶುರುಮಾಡಿ."

"ಆಗಲಿ ಮಾತಾಜಿ."

"ತಿಂಗಳ ಪತ್ರಿಕಾಗೋಷ್ಠಿ ಹೋಂ ಆಫೀಸಿನಲ್ಲಿ. ಭೋಜನಕ್ಕೆ ಮುಂಚೆ ಟೆನ್ನಿಸ್. ಕಲಿಯೋಕೆ ಒಂದು ವಾರ ಸಾಕಾ?"

ಆ ಆಟದಲ್ಲಿ ಸೋಲು ತನಗೇ ಎಂದು ತಿಳಿದಿದ್ದ ರಂಗಧಾಮನೆಂದ :

"ಧಾರಾಳ ಸಾಕು."

* * *

ಆ ಸಂಜೆ ಕೋಚಿಂಗ್ ಆರಂಭವಾಯಿತು, 'ನೃಪತುಂಗ' ಹೋಟೆಲಿನ ಲಾನ್‌ನಲ್ಲಿ. ತನಗೆ ತಿಳಿದಷ್ಟನ್ನು ರಂಗಧಾಮ ಹೇಳಿಕೊಟ್ಟ. ಬಳಿಕ ತುಸು ವಿಶ್ರಾಂತಿ, ಒಳಗಿನ ಕೊಠಡಿಯಲ್ಲಿ. ರಂಗಧಾಮನಿಗೆ ಗೊತ್ತಿರದೇ ಇದ್ದುದನ್ನು– 'ಆಟ'ದ ಸೂಕ್ಷ್ಮಗಳನ್ನು—ಸೌದಾಮಿನಿ ಹೇಳಿಕೊಟ್ಟಳು.

೧೦

ನೂತನ ಶಾಸಕರ ಪ್ರತಿಜ್ಞಾ ಸ್ವೀಕಾರಕ್ಕಾಗಿ ವಿಧಾನಮಂಡಲದ ಸಭೆ ಜರಗಿತು. ಲಕ್ಷ್ಮೀಪತಿ ವಿಧಾನಸಭಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ನಾಯಕರು ಪ್ರತಿಪಕ್ಷದ ನಾಯಕರಾದರು.

* * *

ಮುಖ್ಯಮಂತ್ರಿಯ ಗೃಹನಿವಾಸದ ನವೀಕರಣ ಕಾರ್ಯ ಮುಗಿಯುತ್ತ ಬಂತು. ಸೌದಾಮಿನಿ ರಂಗಧಾಮನನ್ನು ಕೇಳಿದಳು :

"ಒಳಗಿನ ಅಲಂಕರಣಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ರಂಗಧಾಮ್ ?"

"ಆ ಕೆಲಸವನ್ನ ಫಾರೀನ್ ರಿಟರ್ನ್ಡ್ ಇಂಟೀರಿಯರ್ ಡೆಕರೇಟರ್ ಒಬ್ಬರಿಗೆ ವಹಿಸಿಕೊಟ್ಟಿದೆ. ಸಮರ್ಥೆ. ಹೆಸರು ಶ್ಯಾಮಲಾ ಅಂತ."

"ಇವರು ಬಹಳ ಸಮಯದಿಂದ ನಿಮಗೆ ಗೊತ್ತೊ ?"

"ಅವರನ್ನು ನಾನಿನ್ನೂ ಕಂಡಿಲ್ಲ. ಅವರ ಕೆಲಸವನ್ನು ಮಾತ್ರ ಆರೇಳು ಜನ ಹೊಗಳೋದು ಕೇಳಿದೇನೆ."

"ಒಳ್ಳೇದು. ಚಿಲ್ಲರೆಯವರ ಜತೆ ನಾವು ಸಂಪರ್ಕ ಇಟ್ಟುಕೊಳ್ಳಬಾರದು. ಕಂಟ್ರಾಕ್ಟರರ ಮೂಲಕ ಮಾಡಿಸಬೇಕು."

'ಮತ್ಸರದ ಮೊಟ್ಟೆ' ಎಂದು ರಂಗಧಾಮ ಮನಸ್ಸಿನೊಳಗೆ ಗೊಣಗಿದ.

ಅವನ ತುಟಿಗಳ ಮೇಲೆ ಮೂಡಿದ ಕಿರುನಗೆಯನ್ನು ಗಮನಿಸದೆ ಸೌದಾಮಿನಿ ಅಂದಳು :

"ಹೊರಗಿನ ಅಲಂಕರಣಕ್ಕೆ ? ನಮ್ಮ ಕ್ರಿಕೆಟ್ ಲಾನ್ ?"

"ನಾಳೆ ಸಂಜೆ ಹೋಗೋಣ. ಗೋಡೆಗಳಿಗೆ ಬಣ್ಣ ಬಳಿದದ್ದಾಯ್ತು. ಲಾನ್ ಇಪ್ಪತ್ತೇಳು ಅಡಿ ಅಗಲ; ಎಪ್ಪತ್ತೆಂಟು ಅಡಿ ಉದ್ದ. ಹುಲ್ಲು ಕತ್ತರಿಸಿದರಾಯಿತು."

"ಮೋವರ್ ಇದೆಯ ?"

"ತೋಟಗಾರಿಕೆ ಇಲಾಖೆಯಿಂದ ಬರ್ತದೆ. ಹೂ–ಗಿಡ ಇರೋ ಕುಂಡಗಳನ್ನು ಜೋಡಿಸಿ ಪುಷ್ಪೋದ್ಯಾನ ರಚಿಸ್ತಾರೆ, ಮುಂದೆ ನೀಲಿ ನಕಾಶೆ ತಯಾರಿಸಿ ಖಾಯಂ ಹೂ ತೋಟ ಮಾಡ್ತಾರೆ."

"ನೀವು ನನ್ನನ್ನು ಟೆನ್ನಿಸ್‌ನಲ್ಲಿ ಸೋಲಿಸೋದು ಭ್ರಮೆ, ಧ್ರುವ. ಅವತ್ತು ಮಾತಾಜಿ ಅಮೃತಹಸ್ತದಿಂದ ಲಾನ್‌ನ ಉದ್ಘಾಟನೆ ಮಾತ್ರ. ಒಬ್ಬ ದರ್ಜಿ ಜತೆ ಶಾಸಕರ ಭವನದ ನನ್ನ ಕೊಠಡಿಗೆ ಸಂಜೆ ಬನ್ನಿ. ಫ್ರಾಕ್ ಚೆನ್ನಾಗಿರುತ್ತೆ. ಆದರೆ ಪತ್ರಿಕೆಯವರು ಎಷ್ಟು ರಗಳೆ ಮಾಡ್ತಾರೊ? ಇಬ್ಬರಿಗೂ ಟ್ರೌಸರ್ಸ್ ಮತ್ತು ಶರ್ಟುಗಳನ್ನು ಹೊಲಿಸೋಣ."

"ಆಗಬಹುದು. ಅಂತೂ ಶಿಷ್ಯೆಯ ಕೈಯಲ್ಲಿ ಗುರುವಿಗೆ ಪರಾಜಯ!"

"ಯಾರ್ರೀ ಶಿಷ್ಯೆ? ನಾನೇ ಅಲ್ವೇನ್ರಿ ನಿಮಗೆ ಹೇಳ್ಕೊಟ್ಟದ್ದು?"

"ಮರೆತೇಬಿಟ್ಟಿದ್ದೆ! ನನ್ನ ಗುರುವಿಗೆ ನಾನು ಕಾಣಿಕೆ ಸಲ್ಲಿಸೋದು ಬೇಡವ?"

* * *

ಮುಖ್ಯಮಂತ್ರಿಯವರಿಂದ ಟೆನ್ನಿಸ್ ಲಾನ್‌ನ ಉದ್ಘಾಟನೆ; ಬಳಿಕ ಗೃಹ ಕಾರ್ಯಾಲಯದ ಪ್ರವೇಶ. ಆಮಂತ್ರಣ ಪತ್ರಿಕೆ ಅಚ್ಚಿಗೆ ಹೋಯಿತು."

ಹೊಸದಾಗಿ ಮುಖ್ಯಮಂತ್ರಿಯವರ ಆಪ್ತ ಸಹಾಯಕರ ಬಣವನ್ನು ಸೇರಿದವನು ಪಕ್ಷದ ಕಾರ್ಯಾಲಯದಲ್ಲಿ ಮಾತಾಜಿಗೆ ನಿಷ್ಠೆ ತೋರುತ್ತಿದ್ದ ಪರಶುರಾಮ್.

ಆತನನ್ನು ಕರೆದು ಸೌದಾಮಿನಿ ಹೇಳಿದಳು :

"ನನ್ನ ಜತೆ ಈಗ ಇರುವವರೆಲ್ಲ ಹಳೆಯ ಹುಲಿಗಳು. ಹುಷಾರಾಗಿರಬೇಕು. ಅವರ ಮೇಲೆ ಕಣ್ಣಿಡಿ. ವಾಸ್ತವವಾಗಿ ನೀವೇ ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ. ಮುಂದಿನ ವಾರದಿಂದ ಹೊಸ ಕಟ್ಟಡದಲ್ಲಿ ನನ್ನ ವಾಸ. ಕಾರ್ಯಾಲಯವೂ ಅಲ್ಲಿಯೇ, ಅಂಗರಕ್ಷಕರ ಜತೆ ನೆರಳಾಗಿರಬೇಕು."

"ಇದು ನನ್ನ ಅದೃಷ್ಟ ಅಂತ ಭಾವಿಸ್ತೇನೆ, ಮಾತಾಜಿ."

"ಪಕ್ಷದ ಕಚೇರಿಯಲ್ಲಿ ನೀವು ತೋರಿಸ್ತಿದ್ದ ಶಿಸ್ತಿನ ವರ್ತನೆಗೆ ಇದು ಪ್ರತಿಫಲ. ನಮ್ಮ ವಿಜಯೋತ್ಸವ ಆದಮೇಲೆ, ಮೆಚ್ಚಿದ ಕಾರ್ಯಕರ್ತೆಯನ್ನು ನೀವು ಮದುವೆಯಾಗ್ತೀರಿ ಅಂದ್ಕೊಂಡಿದ್ದೆ."

"ನಮ್ಮದು ದೊಡ್ಡ ಕುಟುಂಬ. ನಾನು ಆರನೆಯವನು. ವನಗೆ ಒಬ್ಬಳು ಅವಿವಾಹಿತೆ ತಂಗಿ ಇದ್ದಾಳೆ. ಮೊದಲು ಅವಳದಾಗಬೇಕು."

"ಸರಿ. ಅದು ಬೇಗನೆ ಆಗಲಿ. ಅದಾದ ಮೇಲೆ ನಿಮ್ಮದು. ವಿವಾಹಿತ ಆಪ್ತಕಾರ್ಯದರ್ಶಿಯ ಸಕುಟುಂಬ ವಾಸಕ್ಕೇಂತ ಹೊಸ ಬಂಗಲೆಯ ಆವರಣದಲ್ಲಿ ಹೊರಮನೆ ಇದೆ."

"ದೈವಕೃಪೆಯಿಂದ ಹೊರಮನೆಗೆ ಬೇಗನೆ ಬಂದೇನು."

ವಾಸ್ತವ ಸಂಗತಿ ಎಂದರೆ ಪರಶುರಾಮನಿಗೆ ಮದುವೆಯಾಗಿತ್ತು. ಆದರೆ ಅವಳು ಅವಿದ್ಯಾವತಿ, ಕುರೂಪಿ, ಮಕ್ಕಳಾಗಿರಲಿಲ್ಲ ಸದ್ಯಃ! ಹುಡುಗಿಯ ತಂದೆ ವರದಕ್ಷಿಣೆ ಕೊಡಲು ಒಪ್ಪಿದ್ದ.

"ಬೇಗನೆ ಬಂದೇನು—ದೈವಕೃಪೆ ಎಂದೆಲ್ಲ ಹೇಳುತೀರಲ್ಲ ? ಸಮಸ್ಯೆಗಳೇನಾದರೂ ಇದ್ದರೆ ರಂಗಧಾಮರಿಂದ ಸಲಹೆ, ಸಹಾಯ ಪಡೀರಿ," ಎಂದಳು ಸೌದಾಮಿನಿ.

ಪರಶುರಾಮನ ಅತ್ತೆ-ಮಾವ ಧರ್ಮಪುರಿಯಾಚೆಗಿನ ಹಳ್ಳಿಯವರು. ಪೋಲೀಸ್ ಅಧಿಕಾರಿ ಅವರನ್ನು ಕರೆಸಿ, ಮಗಳನ್ನು ಮನೆಗೆ ವಾಪಸ್ಸು ಕರೆಸಿಕೊಳ್ಳಿ, ಡೈವೋರ್ಸ್ ಗಲಾಟೆ ಬೇಡ, ಆರ್ಥಿಕವಾಗಿ ನಿಮಗೆ ಅನುಕೂಲವಾಗ್ತದೆ, ಗಂಡ ಇನ್ನೊಂದು ಮದುವೆಯಾಗುವುದಕ್ಕೆ ಆಕ್ಷೇಪವಿಲ್ಲ ಅಂತ ಮಗಳ ಕೈಲಿ ಬರೆಸಿಕೊಡಿ, ಅದಕ್ಕೆ ನೀವೂ ಸಹಿ ಹಾಕಿ, ಪರಶುರಾಮ್ ಇನ್ನು ದೊಡ್ಡ ಸ್ಥಾನದಲ್ಲಿರ್ತಾರೆ, ಇಡೀ ಧರ್ಮಪುರಿಯನ್ನೇ ಗಿರಗಿರ ತಿರುಗಿಸೋ ಸಾಮರ್ಥ್ಯ ಅವರಿಗಿದೆ—ಎಂದು ಹಿತಬೋಧೆ ಮಾಡಿದ. ಪರಶುರಾಮ ಜಯಶೀಲನಾದ. ಆಗಲೇ ತಾನು ಹೊಸ ಬದುಕು ಆರಂಭಿಸಿದ್ದ ಒಬ್ಬಳೊಡನೆ ಹೊರಮನೆ ಪ್ರವೇಶಕ್ಕೆ ಸಿದ್ಧನಾದ, ಸಂಬಳ, ಉಳಿತಾಯಗಳನ್ನು ಲೆಕ್ಕ ಹಾಕಿದ. ಗಿಂಬಳ ಅಳತೆಗೆ ಸಿಕ್ಕಿರಲಿಲ್ಲ. ಮುಂದೆ ಸಿಕ್ಕೀತು ಎಂದುಕೊಂಡ.

ಗೃಹ ಕಾರ್ಯಾಲಯವನ್ನು ಮುಖ್ಯಮಂತ್ರಿ ಪ್ರವೇಶಿಸುವ ದಿನವನ್ನು ಸರಕಾರಿ ರಜಾ ದಿನವೆಂದು ಘೋಷಿಸಲಾಯಿತು. ಸಮಾರಂಭಕ್ಕೆ ಸಹಸ್ರಾರು ಜನ ಬರಬೇಕೆಂಬುದು ಮಾತಾಜಿಯ ಬಯಕೆಯಾಗಿತ್ತು. ಆದರೆ ಪೋಲೀಸ್ ಖಾತೆಯ ನಿರ್ದೇಶಕ "ಕ್ಷಮಿಸಬೇಕು, ಇದು ಸುರಕ್ಷಿತವಲ್ಲ" ಎಂದ. ಗೃಹಕಾರ್ಯದರ್ಶಿ ನೀಡಿದ ಅಭಿಪ್ರಾಯವೂ ಅದೇ.

ಪರಶುರಾಮ್ ಕಾಣಿಸಿಕೊಂಡ.

"ಇವತ್ತಿನಿಂದಲೇ ಡ್ಯೂಟಿಗೆ ರಿಪೋರ್ಟ್ ಮಾಡ್ಕೊಳ್ಳಪ್ಪ. ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಹೇಳಿದೀನಿ. ಈಗ ವಾರ್ತಾ ಇಲಾಖೆ ನಿರ್ದೇಶಕರಿಗೆ ಫೋನ್ ಮಾಡಿ, ಸಂಜೆ ಒಳಗಾಗಿ ಟೆನ್ನಿಸ್ ಆಟಕ್ಕೆ ಸಂಬಂಧಿಸಿ ಇನ್ನೂರು ಪದಗಳಷ್ಟು ಮಾಹಿತಿ ಬೇಕು, ಗೋಪ್ಯ"—ಅಂತ ತಿಳಿಸಿ.

ಆ ಕೆಲಸ ಮಾಡಿಬಂದ ಪರಶುರಾಮನೆಂದ :

"ಉದ್ಘಾಟನೆಯ ದಿನ ನಾನೂ ಹೊರಮನೆ ಸೇರ್ಕೊಳ್ತೀನಿ."

"ದೈವ ಕೃಪೆಗೆ ಪಾತ್ರರಾದಿರಿ ಅನ್ನಿ. ತಂಗಿ ಮದುವೆ ಮುಂದಕ್ಕೆ ಹಾಕಿದಿರಾ?"

"ಹಿ ಹ್ಹಿ ! ಪಕ್ಷದ ಕಾರ್ಯಾಲಯದಲ್ಲಿ ಇದ್ದಳಲ್ಲ—ಹರಿಣಾಕ್ಷಿ ? ಅವಳೂ ನಾನೂ ಸ್ವಲ್ಪ ಸಮಯದಿಂದ ಒಟ್ಟಿಗೆ ವಾಸವಾಗಿದೀವಿ."

"ಗಾಂಧರ್ವ ವಿವಾಹವೊ ?"

"ತಾವು ಅಧಿಕಾರ ಸ್ವೀಕಾರದ ಸಂಭ್ರಮದಲ್ಲಿದ್ದ ಸಮಯ. ತಮಗೆ ತಿಳಿಸೋದಕ್ಕೆ ಆಗಲಿಲ್ಲ."

"ಧ್ರುವ ಎಲ್ಲ ಹೇಳಿದ್ದಾರೆ. ಅಧಿಕಾರದ ಅಮಲಿನಲ್ಲಿ ಅದೂ ಇದೂ

ಮಾಡೋದಕ್ಕೆ ಹೋಗ್ಬೇಡಿ. ಮನೇಲೂ ಅಷ್ಟೆ. ಹಿತ ಸಂಸಾರ ಮಿತ ಸಂಸಾರ. ನಿಮಗೆ ಒಳ್ಳೆಯದಾಗಲಿ."

ಪುಲಕಗೊಂಡ ಪರಶುರಾಮ ವಾರ್ತಾ ಇಲಾಖೆಗೆ ಮತ್ತೊಮ್ಮೆ ಫೋನ್ ಮಾಡಿದ ? "ಆಯಿತೆ ? ಆಯಿತೆ ?"

"ಕಿಷ್ಕಿಂಧಾ ವಾಣಿಯ ಕ್ರೀಡಾ ಸಂಪಾದಕರನ್ನು ಕರೆ ತರೋದಕ್ಕೆ ಕಾರು ಹೋಗಿದೆ."

ಅಂತೂ ಟೆನ್ನಿಸನ್ನು ಕುರಿತ ಟಿಪ್ಪಣಿ ಹಾಳೆ ರಾತ್ರೆ ಮುಖ್ಯಮಂತ್ರಿಯ ಕೈ ಸೇರಿತು. ಓದಿದ ಅವರಿಗೆ ನಗು ಬಂತು. ಕೆಂಪು ಪೆನ್ಸಿಲಿನಿಂದ ಕೆಲ ವಾಕ್ಯಗಳ ಕೆಳಗೆ ಗೀಟು ಹಾಕಿದರೂ ಸಂಜೆ ಜತೆಗಿದ್ದರೂ ವಾರ್ತಾ ಇಲಾಖೆಯನ್ನು ಟೆನ್ನಿಸಿಗಾಗಿ ತಾನು ದುಡಿಸುತ್ತಿದ್ದ ವಿಷಯ ರಂಗಧಾಮನಿಗೆ ಸೌದಾಮಿನಿ ಹೇಳಿರಲಿಲ್ಲ.

ಗೃಹ ಕಾರ್ಯಾಲಯದ ಪ್ರವೇಶದ ದಿನ ಬೆಳಗ್ಗೆ ಹವನ ನಡೆಯಿತು: ದುಷ್ಟ ಶಕ್ತಿಗಳನ್ನು ದೂರವಿಡುವುದಕ್ಕೋಸ್ಕರ ಭವನಕ್ಕೆ ದಿಗ್ಬಂಧನವಾಯಿತು. ಮುಖ್ಯ ಮಂತ್ರಿಯ ಸೂಚನೆಯಂತೆ, ಅವರ ಶ್ರೇಯೋಭಿವೃದ್ಧಿಗಾಗಿ ಹಿಂದೂ ದೇವಾಲಯ ಮತ್ತಿತರ ಮಂದಿರಗಳಲ್ಲಿ, ಚರ್ಚುಗರ್ಜಿಗಳಲ್ಲಿ, ವಿಶೇಷ ಪ್ರಾರ್ಥನೆಗಳಾದುವು.

ಶಾಸಕರ ಭವನದ ವಿಶೇಷ ಕೋಣೆಯಲ್ಲೂ ಪಕ್ಷದ ಕಾರ್ಯಾಲಯದ ವಸತಿ ಕೊಠಡಿಯಲ್ಲೂ ಇದ್ದ ಸೌದಾಮಿನಿಯ ಸಾಮಾನುಗಳು ಗೃಹ ಕಾರ್ಯಾಲಯಕ್ಕೆ ಬಂದುವು. ಜಗದಲಪುರದಿಂದ ಹೊರಟಾಗ ಧರ್ಮೇಂದರ್‌ಬಾಬಾ ನೀಡಿದ ದಂತೇಶ್ವರಿಯ ಪುಟ್ಟಮೂರ್ತಿ ಗೃಹಕಾರ್ಯಾಲಯದ ದೇವರ ಕೋಣೆಯಲ್ಲಿ ವಿರಾಜ ಮಾನವಾಯಿತು.

ಟೆನ್ನಿಸ್ ಕ್ರೀಡಾಂಗಣದ ಉದ್ಘಾಟನೆ ಸಂಜೆ ಆರು ಗಂಟೆಗೆ ಎಂದು ಅಚ್ಚಾಗಿದ್ದರೂ ಪ್ರತಿಷ್ಠಿತರೂ ಪತ್ರಿಕಾ ಪ್ರತಿನಿಧಿಗಳೂ ಐದು ಗಂಟೆಯಿಂದಲೇ ಬರ ತೊಡಗಿದರು.

ದಿಲ್ಲಿಯಿಂದ ಹಿಂಬಾಲಿಸಿ ಬಂದಿದ್ದ ಅಂಗರಕ್ಷಕರಲ್ಲಿ ಒಬ್ಬನ ಪತ್ನಿ ಮಾತಾಜಿ ಯವರ ಪ್ರಸಾಧನ ಕಾರ್ಯಗಳಲ್ಲಿ ನೆರವಾಗುತ್ತಿದ್ದಳು. ಆದೇಶದಂತೆ ಸೌದಾಮಿನಿಯ ಕೇಶವನ್ನು ಆಕೆ ತುಸು ಮೇಲಕ್ಕೆ ಎತ್ತಿ ಕಟ್ಟಿದಳು. ಕ್ರೀಡೆಯ ದಿರಿಸು ಮಾತಾಜಿಗೆ ಮೆಚ್ಚುಗೆಯಾಯಿತು, ಶ್ವೇತ ಸುಂದರಿ. ಮಗ್ಗುಲು ಕೊಠಡಿ ಯಲ್ಲಿ ರಂಗಧಾಮ ಸಿದ್ಧನಾದ. ರ್‍ಯಾಕೆಟ್ ಕೈಯಲ್ಲಿ ಹಿಡಿದು ಅತ್ತಿತ್ತ ಬೀಸುತ್ತ ಸೌದಾಮಿನಿ ತನ್ನ ಎದುರಾಳಿಯ ಬಳಿಗೆ ಹೋಗಿ, ಶೂಸಿನಿಂದ ಕ್ರಾಪಿನ ತನಕ ಅವ ನನ್ನು ನೋಡಿದಳು.

"ನಾವು ಈಗ ಏನಾದರೂ ಹೇಳಿದರೆ ಅದು ಪರಸ್ಪರ ಪ್ರಶಂಸೆಯಾದೀತು, ಅಲ್ಲವ ಧ್ರುವ ?"

"ನಿಜ ಮಾತಾಜಿ."

"ಬನ್ನಿ ಪಾಮಿಯಾನಾಕ್ಕೆ ಹೋಗೋಣ."

ನಗರದ ಹಿರಿಯ ಟೆನ್ನಿಸ್ ಕ್ರೀಡಾಪಟು ಅಂಪಯರ್ ಆಗಿಲು ಒಪ್ಪಿದ್ದರು.

ಸ್ವಾಗತ ಗೀತೆಯಾದೊಡನೆ, 'ಟಾಸ್.'

"ಮಾತಾಜಿ, ನೀವು ಟಾಸ್ ಗೆದ್ದಿದ್ದೀರಿ; ಕಣ ಆರಿಸಿಕೊಳ್ಳಿ."

"ನಾನು ದಕ್ಷಿಣದಿಂದ ಉತ್ತರಕ್ಕೆ ಬಾರಿಸ್ತೀನಿ," ಎಂದಳು ಸೌದಾಮಿನಿ.

ಆಟಗಾರರು ಕಣಗಳಗೆ ಇಳಿದಂತೆ ಕರತಾಡನವಾಯಿತು.

'ಲವ್ ಆಲ್' ಸನ್ನಿವೇಶ. ಸೌದಾಮಿನಿಯ ಶರೀರ ತನ್ನೆಲ್ಲ ಬೆಡಗನ್ನು ಮೆರೆಯುತ್ತ ಶೂ ತುದಿಗಳ ಮೇಲೆ ಅತ್ತಿತ್ತ ಕುಪ್ಪಳಿಸಿತು. ಮೊದಲ ಸಾಲಿನಲ್ಲಿದ್ದ ಹಲವರೆಂದರು :

—"ಫ್ರಾಕ್ ಮತ್ತು ಶಾರ್ಟ್ಸ್ ಚೆನ್ನಾಗಿರ್‍ತಿತ್ತು."

—"ಇದೂ ಒಂದು ಹೊಸ ರೀತಿ."

ಸೂರ್ಯ ದೂರವಾದ. ದೀಪಗಳು ಬೆಳಗಿದುವು. ಗೃಹಕಾರ್ಯಾಲಯವೂ ಬಣ್ಣದ ಬಲ್ಬುಗಳಿಂದ ಝಗಝಗಿಸಿತು. ಶಿಳ್ಳು...

ಸೌದಾಮಿನಿಯ ಕೈಗೆ ಚೆಂಡನ್ನಿತ್ತರು. ಸರ್ವ್ ಮಾಡಬೇಕು ; ಆಟ ಆಡಬೇಕು.

ಮುಖ್ಯಮಂತ್ರಿಗೆ ಮುನಿಸು ತನ್ನ ಮೇಲೆಯೇ. ಇದೊಂದೂ ಬೇಕಾಗಿರಲಿಲ್ಲ. ಆ ರಂಗಧಾಮ ಕೈ ಕೊಟ್ಟರೆ ? ಕೊಟ್ಟು, ಜೀವದಿಂದ ಉಳಿದಾನ ? ಈ ಮುಂಡೇದು (ಚೆಂಡು) ನೆಟ್ ದಾಟದಿದ್ದರೆ ? ಚೆಂಡನ್ನು ರ್‍ಯಾಕೆಟ್‌ನಿಂದ ನೆಲಕ್ಕೆ ತಟ್ಟುತ್ತ ಸೌದಾಮಿನಿ ಬಾಬಾನನ್ನು ಸ್ಮರಿಸಿದಳು. "ನೀನೇ ಕಾಪಾಡಬೇಕು."

ಚೆಂಡು ರಂಗಧಾಮನನ್ನು ಹುಡುಕಿಕೊಂಡು ಎದುರು ಕಣಕ್ಕೆ ಹೋಯಿತು. ಅಷ್ಟು ಮಾಡಿ ಸೌದಾಮಿನಿ ಕಣದ ನಡುವಿಗೆ ಸಾಗಿ ನಿಂತಳು. ಅಲ್ಲಿಗೇ ಬಂತು ಎದುರಾಳಿ ಕಳುಹಿಸಿದ ಚೆಂಡು. ಬಾರಿಸಿದಳು. ರಂಗಧಾಮ ಎಚ್ಚರಿಕೆಯಿಂದ ಆಡಿ ಮತ್ತೆ ಮಾತಾಜಿಯ ಬಳಿಗೆ ಚೆಂಡನ್ನು ಕಳುಹಿಸಿದ. ಮರಳಿ ಬಂತು. ಚೆಂಡು ಗೆರೆಯಾಚೆ ಬಿದ್ದು ಔಟಾಗದಂತೆ ನೋಡಿಕೊಂಡ. ಆತನ ಅಂಗೈ ತುರಿಸುತ್ತಿತ್ತು. 'ಸ್ಮಾಶ್ ಮಾಡು' ಎನ್ನುತ್ತಿತ್ತು ಒಳಗಿನಿಂದೊಂದು ಧ್ವನಿ. 'ಪಿಶಾಚಿ ಸುಮ್ಮನಿರು !' ಎಂದು ತನಗೆ ತಾನೇ ಬಯ್ದ.

ಸಂದಣಿ ಚಪ್ಪಾಳೆ ತಟ್ಟುತ್ತಲೆ ಇತ್ತು. ಇದ್ದಕ್ಕಿದಂತೆ ಚಪ್ಪಾಳೆ ಘೋರ್ಗರೆಯಿತು.

ಮಾತಾಜಿ ಬಾರಿಸಿದ್ದ ಚೆಂಡು ರಂಗಧಾಮನ ಎದುರಲ್ಲಿ ಬಿದ್ದಿತ್ತು. ಎತ್ತಿ ಬಾರಿಸುವುದು ಸುಲಭವಾಗಿದ್ದರೂ ಆತ ಅದನ್ನು ಮುಟ್ಟಲಿಲ್ಲ.

"ಫಿಫ್ಟೀನ್–ಲವ್."

ಕರತಾಡನ ಮುಗಿಯುತ್ತಿದ್ದಂತೆ ಪ್ರೇಕ್ಷಕರು ಪ್ರೋತ್ಸಾಹಿಸಿದರು.

"ಅಪ್ ಸಿ.ಎಂ.! ಅಪ್ ಸಿ.ಎಂ.!"

ಶಿಳ್ಳು. ಮೊದಲ ಬಾರಿಗಿಂತ ಹೆಚ್ಚು ಆತ್ಮವಿಶ್ವಾಸದಿಂದ ಸೌದಾಮಿನಿ ಸರ್ವ್ ಮಾಡಲು ಸಿದ್ಧಳಾದಳು. ರಂಗಧಾಮ ಕಂಡುದು ತನ್ನತ್ತ ನೇರವಾಗಿ ಬರುತ್ತಿದ್ದ ಚೆಂಡನ್ನು. ರಕ್ಷಣೆಯ ಚಚ್ಚರ. ಧಾಳಿಯ ಉತ್ಸುಕತೆ. ಧ್ರುವ ಸಂಯಮ ಕಳೆದು ಕೊಳ್ಳಲಿಲ್ಲ. ನಿಧಾನವಾಗಿ ಎದುರಾಳಿಯತ್ತ ಚೆಂಡನ್ನು ಕಳಿಸಿದ. ಅದು ಮತ್ತೆ ಬಂತು. ಮತ್ತೆ ಮರಳಿಸಿದ. ನಿಮಿಷಗಳ ಸದ್ದು. ನಿಮಿಷಗಳು ಮಿನಿಟುಗಳಾಗು ತ್ತಿವೆ. ಟಕ್–ಟಕ್ ಟಕ್–ಟಕ್.... ಜಯಕಾರ. ರಂಗಧಾಮ ನೋಡಿದ. ಚೆಂಡು ಅವನ ಪಾದವನ್ನು ಅಣಕಿಸಿ ಮೆಲ್ಲನೆ ಉರಳಲು ನೋಡುತ್ತಿತ್ತು.

"ಥರ್ಟಿ ಲವ್."

ರಂಗಧಾಮನ ಮುಖ ಲಜ್ಜೆಯಿಂದ ಕೆಂಪಾಯಿತು. ಯಾಕೆ ಆಡಬೇಕು ತಾನು ? ತನ್ನ ಟೆನ್ನಿಸಿನ ಅವಸಾನ ಇವತ್ತು. ನಾಳೆ ಮಂತ್ರಿಪದವಿಗೆ ರಾಜಿನಾಮೆ ನೀಡಬೇಕು. ಆಗದೆ ಇದ್ದರೆ, ಆಜೀವ ಪರ್ಯಂತ ಆಟವಲ್ಲದ ಆಟವನ್ನು ಆಡಲು ತರಬೇತಿ ಪಡೆಯಬೇಕು. ಇಂಥ ಡಮ್ಮಿ ಆಟಕ್ಕೆ ತಾನೇ ಯಾಕೆ? ಪಕ್ಷದ ಕಾರ್ಯಕರ್ತ ರಲ್ಲಿ ದಿನಕ್ಕೊಬ್ಬನನ್ನು ಆರಿಸಬಹುದಲ್ಲ ? ಅಥವಾ ಯಾವನಾದರೂ ಸರಕಾರೀ ಉದ್ಯೋಗಿಯನ್ನು 'ಬಾ' ಎನ್ನಬಹುದಲ್ಲ ?

ಸೌದಾಮಿನಿ ಅಂದುಕೊಂಡಳು :

'ಇನ್ನೊಂದು ಸರ್ವಿಸ್. ಅದರಲ್ಲೊಂದು ಸ್ಮಾಶ್ ಮಾಡಿದೆನೆಂದರೆ ಗೆಲುವು ತನ್ನದು.'

'ಕಿಷ್ಕಿಂಧೆಯಲ್ಲಿ ತನಗೊಂದು ವಿಶಿಷ್ಟ ಸ್ಥಾನ ಲಭ್ಯ.'

ಶಿಳ್ಳು. ಅರ್ಧ ನಿಮಿಷ ಗುಂಡಿಗೆ ಬಡಿತ ನಿಂತಿತು. ಈ ಉತ್ಕಟ ಅವಸ್ಥೆಯಲ್ಲಿ ಕುಸಿದು ಬೀಳುವ ಸಂಭವ ? ಬಿದ್ದರೆ ಪ್ರಥಮ ಚಿಕಿತ್ಸೆಗೆಂದು ಓಡಿ ಬರುವವರ ಯಾರು ? ಶಿಳ್ಳಿನ ನಿರ್ದೇಶ ನಿರರ್ಥಕವಾಯಿತೆಂದು ಅಂಪಯರ್ ಗಟ್ಟಿಯಾಗಿ ಅಂದರು :

"ಪ್ಲೀಸ್ ಸರ್ವ್."

ಸರ್ವಿಸ್–ಸೇವೆ. ಸಹಸ್ರಾರು ಕಣ್ಣುಗಳು ತನ್ನನ್ನೆ ದಿಟ್ಟಿಸುತ್ತಿವೆ. ಜೀವನ ದುದ್ದಕ್ಕೂ ಸೇವೆಯೇ ಅಲ್ಲವೆ ತನ್ನ ಬೀಜಮಂತ್ರ ?

ಬಲಗೈಯ ರ್‍ಯಾಕೆಟಿಗೆ ಮುದ್ದಿಡುತ್ತಿರುವ ಎಡಗೈಯ ಚೆಂಡು. ಅದು ಗಗನ ಮುಖಿ ಕ್ಷಿಪಣಿಯಾಯಿತು. ದೃಷ್ಟಿಯಿಂದ ಮರೆಯಾಯಿತಲ್ಲ ? ರಂಗಧಾಮನ ಮೇಲ್ಗಡೆ ಇಳಿಯುತ್ತದೆ. ಆತ ಚಚ್ಚಿದರೆ ? ಆ ಧೈರ್ಯ ? ಊಹೂಂ. ಹಾಗೆ ಮಾಡಲಾರ.

ಯಾವಾಗ ಬಾರಿಸಿದ ? ತನ್ನ ಎದುರಿಗೆ ಬರುತ್ತಿದೆಯಲ್ಲ ? ಎತ್ತಿದ ಬಲಗೈ ಕಾರ್ಯೋನ್ಮುಖವಾಗಿದೆ. ಸ್ಮಾಶ್ !

"ಫಾರ್ಟಿ–ಲವ್."

ಮತ್ತೂ ಒಂದು ತೀರ್ಪು :

"ಲವ್ ಗೇಮ್."

ಜಯಕಾರವೇನು ! ಕರತಾಡನವೇನು !

ರಂಗಧಾಮ ನೆಟ್ಟನೆಡೆಗೆ ಬಂದ. ಸೌದಾಮಿನಿಯೂ ಅತ್ತ ಸರಿದಳು. ಅಪ್ಪಿಕೊಳ್ಳುವುದಕ್ಕೂ ಸಿದ್ಧ. ಆದರೆ ನಿಯಮಾನುಸಾರ (ಅಥವಾ ಪಾರಂಪರಿಕ ಶಿಷ್ಟಾಚಾರ) ಹಸ್ತಲಾಘವ ಮಾತ್ರ ಸಾಧ್ಯ.

ಮಂತ್ರಿಗಳೆಲ್ಲ ಬಂದು (ಧ್ರುವನನ್ನು ಹೊರತುಪಡಿಸಿ) ಕೈ ಜೋಡಿಸಿ ನಮಸ್ಕರಿಸಿ ಮಾತಾಜಿಗೆ ಅಂಭಿನಂದನೆ ಸಲ್ಲಿಸಿದರು. ಪತ್ರಿಕಾಪ್ರಪಂಚದ ಹಲವರು, ಗಣ್ಯರಲ್ಲಿ ಕೆಲವರು ಹಸ್ತಲಾಘವವನ್ನೇ ನೀಡಿದರು.

ಉದ್ಘಾಟಿತ ಲಾನ್‌ಟೆನ್ನಿಸಿನ ಪ್ರಥಮ ಆಟದ ಪಾತ್ರಧಾರಿಗಳು ತಮ್ಮ ತಮ್ಮ ಕೊಠಡಿಗಳಿಗೆ ಹೋಗಿ ಉಡುಪು ಬದಲಾಯಿಸಿದರು. ಶ್ವೇತಾಂಬರಿ ಸೌದಾಮಿನಿಯತ್ತ ಹೋಗಿ ರಂಗಧಾಮನೆಂದ :

"ಅದ್ಭುತವಾಗಿ ಆಡಿದಿರಿ."

"ನಿಮ್ಮ ಪ್ರಶಂಸೆ ನನ್ನ ಪಾಲಿಗೆ ಬಾದಾಮಿಹಾಲು."

'ನೃಪತುಂಗ' ಹೋಟೆಲಿನವರು ಚಪ್ಪರವನ್ನು ಮುಂದಿನ ಕಾರ್ಯಕ್ರಮಕ್ಕೆ ಅಣಿಗೊಳಿಸಿದರು.

ಹಿರಿಯ ಪತ್ರಿಕಾ ಪ್ರತಿನಿಧಿ ಅಂದ :

"ಗೋಷ್ಠಿ ಮುಗಿಸಿಯೇ ಭೋಜನಕೂಟ ಮೇಲಲ್ಲವೆ ?"

ಮುಖ್ಯಮಂತ್ರಿಯ ಒಪ್ಪಿಗೆ ದೊರೆತೊಡನೆ ಗೃಹ ಕಾರ್ಯಾಲಯದ ಕಿರಿಯ ಸಭಾಂಗಣ ಜೀವತಳೆಯಿತು.

ಸೌದಾಮಿನಿ "ಎಲ್ಲರಿಗೂ ನಮಸ್ಕಾರ" ಎನ್ನುತ್ತ ನಡೆದು ಬಂದು ಮುಖ್ಯಮಂತ್ರಿಯ ಪೀಠದಲ್ಲಿ ಕುಳಿತಳು.

"ಸರ್ವಿಸ್ ನಿಮ್ಮಿಂದಲೆ ಆರಂಭ" ಎಂದಳು.

ಪತ್ರಿಕಾ ಬಳಗದಿಂದ ಮೊದಲ ಪ್ರಶ್ನೆ :

"ವಿಂಬ್‌ಲ್‌ಡನ್‌ನಲ್ಲಿ ಪಟ್ಟಾಭಿಷಿಕ್ತೆಯಾಗುವ ಮಹತ್ವಾಕಾಂಕ್ಷೆ ತಮಗೆ ಉಂಟೆ?"

"ಇಲ್ಲ. ಕಿಷ್ಕಿಂಧೆಯ ಜನರ ಒಲವಿನ ಅಭಿಷೇಕ ನನಗೆ ಸಾಕು."

"ಬಹಳ ಅನುಭವಿಯಂತೆ ಆಡಿದಿರಿ. ಕೋಚ್ ಯಾರು ಅಂತ ಕೇಳಬಹುದೆ?"

"ಜಗದಲಪುರದ ಧರ್ಮೇಂದರ್‌ಬಾಬಾ ಎರಡು ವರ್ಷ ಹಿಂದೆ ನನ್ನ ಕೈಗೆ ಚೆಂಡು ಮತ್ತು ರ್‍ಯಾಕೆಟ್ ಕೊಟ್ಟರು."

ಅಷ್ಟು ಹೇಳಿ ಮುಖ್ಯಮಂತ್ರಿ ರೆಪ್ಪೆ ಮುಚ್ಚಿ ತೆರೆಯದೆ, ದೂರದಲ್ಲಿ ಇತರ ಮಂತ್ರಿಗಳ ಸಾಲಿನಲ್ಲಿ ಕುಳಿತಿದ್ದ ರಂಗಧಾಮನತ್ತ ನೋಡಿದಳು. ಅವನ ಬಾಯಿ ತೆರೆದುಕೊಂಡು ಹಾಗೆಯೇ ಇತ್ತು ಹಲವು ನಿಮಿಷ. ತನ್ನೆದುರು ಕ್ಯಾಮರಾಗಳು ಕಾಣಿಸಿದಂತಾಗಿ ರಂಗಧಾಮ ಬಾಯಿ ಮುಚ್ಚಿದ.

ಒಬ್ಬ ಪತ್ರಿಕಾ ಪ್ರತಿನಿಧಿ ಕೇಳಿದ :

ತಮ್ಮ ಹವ್ಯಾಸಗಳೇನು ? ಅಂತ "ಆ ದಿನ ಕೇಳಿದಾಗ ಸೇವೆ—ಸೇವೆ—ಸೇವೆ ಎಂದಿದ್ದಿರಿ. ಈ ದಿನ ನಿಮ್ಮ ಕ್ರೀಡಾ ಪ್ರತಿಭೆ ಕಂಡ ಮೇಲೆ, ವಿನಯ ಸಂಪನ್ನೆಯಾದ್ದರಿಂದ ನೀವು ಮುಚ್ಚು ಮರೆ ಮಾಡುತ್ತಿದ್ದೀರಿ ಅನಿಸ್ತಿದೆ. ಫುಟ್ ಬಾಲ್, ಕ್ರಿಕೆಟ್...?"

"ಇಲ್ಲ. ಟೆನ್ನಿಸ್ ವಿಷಯ ಏನು ಬೇಕಾದರೂ ಕೇಳಿ."

ಗೋಷ್ಠಿಯಲ್ಲಿ ಒಬ್ಬ ಕ್ರೀಡಾ ಸಂಪಾದಕನಿದ್ದ. ವಿಶೇಷ ಆಸಕ್ತಿಯಿಂದ ವಾರ್ತಾಗೋಷ್ಠಿಗೆ ಬಂದವನು. ಆತ ಕೇಳಿದ :

"ಲವ್ ಗೇಮ್ ಆಗಬೇಕಾದರೆ ಹದಿನೈದು, ಮೂವತ್ತು, ನಾಲ್ವತ್ತು ಯಾಕೆ ? ಒಂದು, ಎರಡು, ಮೂರು ಯಾಕಾಗಬಾರದು ?"

"ಟೆನ್ನಿಸ್ ಯೂರೋಪಿನಲ್ಲಿ ಆರಂಭವಾದಾಗ ಈ ಪ್ರಶ್ನೆಗೆ ಉತ್ತರವನ್ನು ದೊಡ್ಡ ಗಡಿಯಾರದ ದುಂಡು ಮುಖ ಕೊಟ್ಟಿತು. ದೊಡ್ಡ ಮುಳ್ಳು ಚಲಿಸುತ್ತ ೧೫–೩೦–೪೫ ಹೀಗೆ ಗುರುತಿಸುತಿದ್ದು. ಆ ತಜ್ಞರಿಗೆ ಇದೇ ಚೆನ್ನ ಅನಿಸಿತು. ೪೦ಕ್ಕೆ ನಿಲ್ಲಿಸಿದರು."

"ಹೀಯರ್ ! ಹೀಯರ್ !" ಎಂದು ಹಲವು ಸ್ವರಗಳು ಸುತ್ತಲಿಂದ ಕೇಳಿಸಿದುವು.

"ಈ ಚಂಡಿ ಪ್ರಚಂಡಿ !" ಎಂದುಕೊಂಡ ರಂಗಧಾಮ.

ವಾರ್ತಾ ಇಲಾಖೆಯ ನಿರ್ದೇಶಕ ಹೆಮ್ಮೆಯಿಂದ ಬೀಗಿದ.

ಮುಖ್ಯಮಂತ್ರಿ ಇನ್ನೂ ಅಂದರು :

"ಶುರುವಿನಲ್ಲಿ ಇದು ಹೆಂಗಸರ ಆಟ ಅಂತ ಮೂದಲಿಸ್ತಿದ್ರು. ರ್‍ಯಾಕೆಟ್ ಬರುವ ವರೆಗೆ ಇದಕ್ಕೆ ಅಂಗೈ ಆಟ ಅಂತ ಹೆಸರಿತ್ತು. ಫ್ರಾನ್ಸಿನಲ್ಲಿ ಹದಿನಾರನೇ ಶತ ಮಾನ ಟೆನ್ನಿಸಿನ ಸ್ವರ್ಣಯುಗ ಅನಿಸ್ಕೊಳ್ತು. ಆಲಿವರ್ ಕ್ರಾಮ್‌ವೆಲ್–ಚಾರ್ಲ್ಸ್ ದೊರೆಯ ರುಂಡ ಚೆಂಡಾಡಿದವನು—ಟೆನ್ನಿಸಿನ ತಲೆಗೆ ಮೊಟ್ಟಿದ. ಪುನಃ ಅರ ಸೊತ್ತಿಗೆ ಬಂದಮೇಲೆ ಟೆನ್ನಿಸ್ ಮೆರೆಯಿತು."

ಗೋಷ್ಠಿಯಲ್ಲಿದ್ದವರೂ ಇತರರೂ ಎದ್ದು ಒಂದೇ ಸಮನೆ ಚಪ್ಪಾಳೆ ತಟ್ಟಿದರು. ಎಲ್ಲರೂ ಎದ್ದುದನ್ನು ಕಂಡು ನಿಶ್ಚಲನಾಗಿದ್ದ ರಂಗಧಾಮನೂ ಎದ್ದುನಿಂತು ಕರ ತಾಡನ ಮಾಡಿದ.

ಬರಿಯ ಕ್ರೀಡಾಗೋಷ್ಠಿಗೆ ಬಂದಂತಾಯಿತೆಂದು ಸಿಡಿಮಿಡಿಗೊಳ್ಳುತ್ತಿದ್ದ ಒಬ್ಬ ವರದಿಗಾರ ಏರಿದ ಧ್ವನಿಯಲ್ಲಿ ಕೇಳಿದ:

"ಮುಂಗಡ ಪತ್ರ ಅಧಿವೇಶನ ಹತ್ತಿರ ಬಂತು."

"ಹೌದು. ಸದ್ಯದಲ್ಲೇ ದಿಲ್ಲಿಗೆ ಹೋಗಲಿದ್ದೇವೆ."

"ಕಿಷ್ಕಿಂಧೆಗೊಂದು ಮೇಲ್ಮನೆ ರೂಪಿಸುವ ವಿಚಾರ ಇದೆಯೆ?"

"ಮೇಲ್ಮನೆ ಬೇಕು ಅಂತ ಯಾರು ಕೇಳ್ತಿದ್ದಾರೆ? ಕೆಳಮನೆಯಲ್ಲಿಯೇ ಸಾಕಷ್ಟು ಸ್ಥಳ ಇನ್ನೂ ಖಾಲಿ ಇದೆಯಲ್ಲ ?"

"ಸರಕಾರದ ಕಚೇರಿಗಳಿಗಾಗಿ ಇನ್ನೊಂದು ಭವನ ಬೇಡವೆ ?"

"ಪರಿಶೀಲಿಸಬೇಕಾದ ಸಂಗತಿ. ನಿರ್ಮಾಣ ಅಗತ್ಯ ಎನಿಸಿದರೆ ಫ್ರಾನ್ಸಿನಿಂದ ಲೋಕವಿಖ್ಯಾತ ವಾಸ್ತು ಶಿಲ್ಪಿಯನ್ನು ಕರೆಸಬಹುದು."

'ಕೀಟಲೆ' ಎಂಬ ಅಡ್ಡ ಹೆಸರಿದ್ದ ಪತ್ರಿಕಾ ಪ್ರತಿನಿಧಿ ಪ್ರಶ್ನೆ ಮುಂದಿಟ್ಟ :

"ತಾಜಮಹಲ್‌ನ ನೀಲಿನಕಾಶೆ ಬರೆದ ವಾಸುಶಿಲ್ಪಿ ವಿದೇಶೀಯ ಎಂಬುದಕ್ಕೆ ದಾಖಲೆ ಇಲ್ಲ."

'ನೃಪತುಂಗ'ದ ಒಡೆಯರಿಂದ ಪ್ರೇರಿತರಾಗಿ ನೀರಾವರಿ ಸಚಿವ ಮುಖ್ಯ ಮಂತ್ರಿಯ ಕಿವಿಯಲ್ಲಿ ಉಸುರಿದ :

"ಭೋಜನ ಸಿದ್ಧವಾಗಿದೆ."

"ಸರಿ" ಎಂದಳು ಮುಖ್ಯಮಂತ್ರಿ. "ಕಡೇ ಪ್ರಶ್ನೆಗೆ ಉತ್ತರ ನೀಡಿದ ಮೇಲೆ ಗೋಷ್ಠಿ ಬರಖಾಸ್ತಾಗ್ತದೆ. ಏನು ಕೇಳಿದಿರಿ ? ತಾಜಮಹಲ್....ಈ ವ್ಯತ್ಯಾಸ ವನ್ನು ದಯವಿಟ್ಟು ಗಮನಿಸಿ : ಅದು ಪ್ರೇಮಸೌಧ. ನಮ್ಮದು ಕಾರ್ಯಭವನ. ಬನ್ನಿ. ಇನ್ನು ಊಟ !"

ಕೊನೆಯ ಸುತ್ತಿನ ಕೈ ಚಪ್ಪಾಳೆ. ಬಳಿಕ ಚಪ್ಪರಕ್ಕೆ ದೌಡು.

ಸಚಿವರೆಲ್ಲ ಸಪತ್ನೀಕರಾಗಿ ಬಂದಿದ್ದರು. ಆ ಮಂತ್ರಿಣಿಯರ ಕಣ್ಣೆಲ್ಲ ಸೌದಾ ಮಿನಿಯ ಮೇಲೆ. ನೀರಾವರಿ ಮಂತ್ರಿ ಸಂಪುಟದ ಮುಖ್ಯಸ್ಥೆಯನ್ನು ಅವರೆಲ್ಲ ಕುಳಿ ತಿದ್ದ ಕಡೆಗೆ ಕರೆದೊಯ್ದ. ಈಗ ಸೌದಾಮಿನಿಗೆ, ಕುಳಿತಲ್ಲಿಂದ ಎದ್ದು ವಂದನೆ ಸಲ್ಲಿಸಿ ದವರ ನಾಮಾವಳಿಯನ್ನು ಆಲಿಸಿ ದೃಷ್ಟಿ ತಕ್ಕಡಿಯಲ್ಲಿ ಒಬ್ಬೊಬ್ಬರನ್ನೂ ತೂಗುವ ಕೆಲಸ. "....ರಂಗಧಾಮರ ಪತ್ನಿ" ಎಂಬ ಮಾತು ಕಿವಿಗೆ ಬಿದ್ದಾಗ, ಸೌದಾಮಿನಿ ತನ್ನ ಕಣ್ಣುಗಳನ್ನು ಕಿರಿದುಗೊಳಿಸಿ ನೋಡಿದಳು. ರಂಗಧಾಮ ಹತ್ತಿರ ಎಲ್ಲೂ ಕಾಣಿಸಲಿಲ್ಲ. "ಧ್ರುವ ನಕ್ಷತ್ರಕ್ಕೆ ಪ್ರಾಕ್ಟೀಸು ಸಾಲದಲ್ಲ—ಯಾಕೆ ? ಅನಿಸ್ತು. ಈಗ ಕಾರಣ ಗೊತ್ತಾಯ್ತು. ನಿಮ್ಮ ಯಜಮಾನ್ರಿಗೆ ಟೆನ್ನಿಸ್ ಆಡೋದಕ್ಕೆ ಬಿಡೀಮ್ಮ. ಪ್ರಾಕ್ಟೀಸು ತಪ್ಪಬಾರ್ದು. ಎಲ್ರೂ ಕೂತ್ಕೊಳ್ಳಿ."

ಫೋನ್ ಕರೆ ತಲಪಿದೊಡನೆ ರಾಜ್ಯಪಾಲರೂ ಆಗಮಿಸಿದರು.

ಪರಶುರಾಮನಿಗೆ ಸೌದಾಮಿನಿ ಮೊದಲೇ ಸೂಚಿಸಿದ್ದಳು : ಊಟಕ್ಕೆ ಹಿನ್ನೆಲೆಯಾಗಿ ಇನಿ ದನಿಯಲ್ಲಿ ಲತಾಮಂಗೇಶ್‌ಕರಳ ಮೀರಾಭಜನ್ ಕೇಳಿಸಬೇಕು. ಈ ಯೋಜನೆ ಫಲಕಾರಿಯಾಯಿತು. ಮುಖ್ಯಮಂತ್ರಿಯ ಸದಭಿರುಚಿಯನ್ನು ಎಲ್ಲರೂ ಹಾಡಿ ಹೊಗಳುವವರೇ.

ಹೂದೋಟದ ಮಹಾದ್ವಾರದ ಬಳಿ ಸಶಸ್ತ್ರ ಪೋಲೀಸರು—ನಾಲ್ವರು. ಅವರೊಂದಿಗೆ ವೈಯಕ್ತಿಕ ಅಂಗ ರಕ್ಷಕರು ಇಬ್ಬರು. ಒಂಭತ್ತರ ಬಳಿಕ ನಿರ್ಗಮನಕ್ಕೆ ಆರಂಭ. ಮೊದಲು ರಾಜ್ಯಪಾಲರು ; ಬಳಿಕ ಚೀಫ್ ಸೆಕ್ರೆಟರಿ ; ಗಣ್ಯರು ಅವರ ಕಾರಿನಲ್ಲಿ ಇತರ ಕಾರಿನಲ್ಲಿ, ಸರಕಾರದ ಜೀಪುಗಳಲ್ಲಿ ಪತ್ರಿಕಾ ಪ್ರತಿನಿಧಿಗಳು. ಸೌದಾಮಿನಿ ಸೂಚನೆ ಇತ್ತ ಮೇಲೆ ಮಂತ್ರಿಗಳು, ತಮ್ಮ ಪರಿವಾರದೊಂದಿಗೆ.

ತನ್ನ ಕೊಠಡಿಯಲ್ಲಿ ಆಸೀನಳಾದಾಗ ಸೌದಾಮಿನಿಗೆ ಆಯಾಸವೆನಿಸಿತು. ಬಾಗಿಲ ಹೊರಗೆ ಆಪ್ತ ಕಾರ್ಯದರ್ಶಿಯನ್ನು ಕಂಡಂತಾಗಿ ಅವನನ್ನು ಕರೆದಳು :

"ಪರಶುರಾಮ್ ಇಲ್ಲಿಗ್ಬನ್ನಿ."

ಅವನು ಓಡಿಬಂದ.

"ಮಾತಾಜಿ. (ಅವನ ಕಂಠ ಗದ್ಗದವಾಯಿತು.) ತಾವು ನನ್ನನ್ನು ಹೋಗೊ ಬಾರೊ ಅಂತ ಕರೀಬೇಕು."

"ಅದು ಹ್ಯಾಗಾಗುತ್ತೆ ? ನೀವು ಸರಕಾರಿ ಎನ್. ಜಿ. ಒ....ನಾಳೆ ಗಜೆಟೆಡೂ ಆಗ್ತೀರಿ...."

ಆತ ಅತ್ತೇಬಿಟ್ಟ. ಉಮ್ಮಳ ಕಡಮೆಯಾದಮೇಲೆ ಅವನೆಂದ :

"ಅದು ಹ್ಯಾಗೂ ಇರ್ಲಿ. ನನ್ನ ಪಾಲಿಗೆ ತಾವು ಮಾತಾಜಿ ; ನಾನು ತಮ್ಮ ಚಾಕರ. ದಯವಿಟ್ಟು ನನ್ನ ಕೋರಿಕೆ ಈಡೇರಿಸಿ ಕೊಡಿ."

ಆತ ಮಾತಾಜಿಯ ಪಾದಗಳನ್ನು ಹಿಡಿದುಕೊಂಡ.

"ಸಾಕು. ನಿನ್ನಿಷ್ಟ. ಎಲ್ಲರೂ ಹೋದರಾ ?"

"ಪೋಲೀಸ್ ಅಧಿಕಾರಿಗಳು ಬಾಕಿ."

"ಅವರನ್ನು ಕರಿ."

ಬೂಟುಗಳ ಸಪ್ಪಳ ಹತ್ತಿರವಾದೊಡನೆ ಸೌದಾಮಿನಿ ನೇರವಾಗಿ ಕುಳಿತಳು.

"ತುಂಬ ಕಷ್ಟ ಪಟ್ಟಿರಿ. ಮೈ ಮೋಸ್ಟ್ ಸಿನ್ಸಿಯರ್ ಥ್ಯಾಂಕ್ಸ್. ಇವತ್ತಿನದು ಸ್ಮರಣೀಯ ಸಂಜೆ. ಗುಡ್‌ನೈಟ್."

ಅಧಿಕಾರಿಗಳು ಸೆಲ್ಯೂಟ್ ಕೊಡುತ್ತ "ಗುಡ್‌ನೈಟ್" ಅಂದರು.

ಮುಖ್ಯಮಂತ್ರಿ ಮೆಲ್ಲನೆದ್ದು ಬಲ ಬದಿಯ ಮಗ್ಗುಲು ಕೊಠಡಿಯತ್ತ ಸಾಗಿದಳು. ಅವಳ ಸಾಮಾನುಗಳಲ್ಲಿ ಬಹಳ ಮುಖ್ಯವಾದುದನ್ನು ಅಲ್ಲಿ ಒಪ್ಪವಾಗಿ ಜೋಡಿಸಿದ್ದರು. ಸುಸ್ತಿಗೆ ಕಾರಣ ಆಗಲೆ ಅವಳಿಗೆ ಹೊಳೆದಿತ್ತು. ಜಗದಲಪುರ ಬಿಟ್ಟ ಬಳಿಕ ಅಂದೇ ಮೊದಲ ಬಾರಿ ಲೇಹ್ಯ ತಿನ್ನಲು ಆಕೆ ಮರೆತಿದ್ದಳು. ಗೃಹ

ಕಾರ್ಯಾಲಯದ ಉದ್ಘಾಟನೆಯ ಮೊದಲ ದಿವಸವೆ ಹೀಗಾಯಿತಲ್ಲ ? ಆದರೂ ಸಮಾಧಾನ. ನಡುವಿರುಳು ದಾಟಿದ ಮೇಲಲ್ಲವೆ ನಾಳೆ ? ತಕ್ಷಣವೆ ಸೇವಿಸಿದ ರಾಯಿತು.

ಸೇವನೆ ಆದ ಮೇಲೆ ಮನಸ್ಸಿಗೆ ನೆಮ್ಮದಿ ಮರಳಿತು....

"ಪರಶು...."

ಹೊರಗಿನಿಂದ ಸ್ವರ :

"ಮಾತಾಜಿ...."

"ಆ ಪೋಲೀಸರ ಊಟ ಆಗಿಲ್ಲವೇನೊ. ಸ್ವಲ್ಪ ನೋಡು. ಬೆಳಗ್ಗೆ ಆರು ಘಂಟೆಗೆ ನನ್ನನ್ನು ಎಬ್ಬಿಸು."

ಬಾಗಿಲಿಗೆ ಅಗಣಿ ತಗಲಿಸಿ, ಬಲ ಮಗ್ಗುಲಲ್ಲಿದ್ದ ಶಯ್ಯಾಗೃಹವನ್ನು ಸೌದಾ ಮಿನಿ ಸೇರಿದಳು. ಮಲಗುವ ಮನೆಗೆ ಅಂಟಿಕೊಂಡಿತ್ತು ಸ್ನಾನದ ಕೊಠಡಿ.

...ಮೃದು ಹಾಸಿಗೆಯಲ್ಲಿ ಮೈ ಚಾಚಿದಾಗ ಸೌದಾಮಿನಿಗೆ ಒಂಟಿತನದ ಅನುಭವ ವಾಯಿತು. ಆ ರಂಗಧಾಮ ಜಂಭದ ಕೋಳಿ (ಹುಂಜ), ಆ ಕಪ್ಪು ಕ್ರಾಪೇ ಕೆಂಪು ಜುಟ್ಟು. ರ್‍ಯಾಕೆಟ್‌ನಿಂದ ಟಪಟಪ ಬಡಿಯಬೇಕು. ಅಂತೂ ಆಡಿಯೇ ಬಿಟ್ಟೆನಲ್ಲ ! ನಾಯಕ ರಂಗಸ್ವಾಮಿ ಸುಲೋಚನಾಬಾಯಿ ಕಮಲಮ್ಮ....ಅವರನ್ನೆಲ್ಲ ಕರೆಯಬೇಕಾಗಿತ್ತು...ಬಾಬಾಜಿಗೆ ಕಾಣಿಕೆ ಕಳಿಸಬೇಕು. ಲೇಹ್ಯ ತರಿಸಬೇಕು. ವಿಶ್ವಾಸಕ್ಕೆ ಅರ್ಹರಾದ, ಇನ್ನೂ ಒಬ್ಬಿಬ್ಬರು ದೂತರು ಬೇಕಲ್ಲ...

(ಮಂಪರು)

ಬಾಬಾ....

(ನಿದ್ದೆ.)

೧೧

ವಿಮಾನದ ಮೂತಿ ತಿರುಗುವ ಗಿರಿಗಿಟಿಯಾದಂತೆ ಈ ನಾಲ್ವರು ಬಿರುಸಿನ ಹೆಜ್ಜೆ ಇಡುತ್ತ ಏರುವ ಏಣಿಯತ್ತ ನಡೆದರು. ಸಿಬ್ಬಂದಿ ಮೊದಲೇ ಬಂದು ಬ್ಯಾಗೇಜ್, ಟಿಕೆಟ್ ಎಲ್ಲವನ್ನೂ ತೋರಿಸಿ ನೇರ್ಪಡಿಸಿದ್ದರು. ವೈಯಕ್ತಿಕ ಅಂಗ ರಕ್ಷಕ, ಮುಖ್ಯಮಂತ್ರಿ, ಆಪ್ತ ಸಹಾಯಕ, ಅವನ ಹಿಂದೆ ಇನ್ನೊಬ್ಬ ಅಂಗರಕ್ಷಕ. (ಈ ಅಂಗರಕ್ಷಕರು ಸೌದಾಮಿನಿಯ ಜತೆ ದಿಲ್ಲಿಯಿಂದ ಬಂದವರು, ಪುಟ್ಟ ಸಂಸಾರ ಗಳ ಸಮೇತರಾಗಿ. ಮುಖ್ಯಮಂತ್ರಿಯ ದಿಲ್ಲೀಯಾನದ ವೇಳೆ ಇವರಿಗೂ ಹಾರಾ ಟದ ಅವಕಾಶ. ಇದಂತೂ ಕಲ್ಯಾಣನಗರದಿಂದ ದಿಲ್ಲಿಗೆ ಮೊದಲ ಪ್ರವಾಸ) ವಿಮಾನದೊಳಗೆ ಸುದ್ದಿ ಹರಡಿತು : 'ಕಿಷ್ಕಿಂಧೆಯ ಮುಖ್ಯಮಂತ್ರಿಣಿ ಸೌದಾಮಿನಿ ದೇವಿ ದಿಲ್ಲಿಗೆ ಈ ಯಾನದಲ್ಲಿ ಸಿಮ್ಮೊಂದಿಗಿದ್ದಾರೆ.'

ಹೊರಟುದೇ ಸಂಜೆ. ಇನ್ನು ತನ್ನ ಪಾಲಿಗೆ ಹಗಲೆಂಬುದಿಲ್ಲ ಇರುಳೆಂಬುದಿಲ್ಲ. ಸದಾ ದುಡಿಮೆ. ನಡುರಾತ್ರಿ ಮುಂಚೆ ದಿಲ್ಲಿ ಸೇರಬಹುದು ಮುಂಜಾವಕ್ಕೆ ಮುಂಚೆ ನಿದ್ದೆ ಹೋಗಬಹುದು. ರಾಷ್ಟ್ರ ಪಕ್ಷದ ಮಹಾ ಕಾರ್ಯದರ್ಶಿಯ ಅತಿಥಿ ತಾನು, ಈ ಸಲ. ಹಿಂದಿನ ರಾತ್ರೆ ಫೋನ್ ಮಾಡಿದಾಗ "ವಿಮಾನ ನಿಲ್ದಾಣದಲ್ಲಿ ಇದಿರ್ಗೊಳ್ತೇನೆ" ಎಂದಿದ್ದ.

ರಾಷ್ಟ್ರದ ರಾಜಧಾನಿಯಲ್ಲಿದ್ದ ಕಿಷ್ಕಿಂಧಾ ಕುಟೀರದಿಂದ ಜೀಪು ಬಂದು ಕಾದಿತ್ತು, ಮುಖ್ಯಮಂತ್ರಿಯ ಸಿಬ್ಬಂದಿಗಾಗಿ. ರಾಷ್ಟ್ರಪಕ್ಷದ ಮಹಾ ಕಾರ್ಯ ದರ್ಶಿಯ ವಾಹನವೂ ಇತ್ತು.

"ನಾನೀಗ ಕಾರ್ಯದರ್ಶಿಯವರ ಮನೆಗೆ ಹೋಗ್ತೇನೆ. ನಾಳೆ ಬೆಳಗ್ಗೆ ಕುಟೀರಕ್ಕೆ ಬರ್ತ್ತೇನೆ," ಎಂದಳು ಪರಶುರಾಮನಿಗೆ.

"ಹೂಂ, ಮಾತಾಜಿ."

"ರಾಮ್‌ಧನ್, ಭೋಲಾನಾಥ್, ನಾನು ಬೆಳಗ್ಗೆ ಕುಟೀರಕ್ಕೆ ಬಂದಮೇಲೆ ನೀವು ನಿಮ್ಮ ಮನೆಗಳಿಗೆ ಹೋಗಿ ಬರುವಿರಂತೆ."

"ಜೀ ಮಾತಾಜಿ."

ಗುಡ್ಡ ಬೆಟ್ಟಗಳನ್ನು ಹಸುರು ಕಾಡು ಆವರಿಸಿದಂತಿತ್ತು. ಸೌದಾಮಿನಿ ಹೊದೆದುಕೊಂಡಿದ್ದ ಶಾಲು. ಸೂಟ್‌ಕೇಸ್ ಬಂದೊಡನೆ, ಜೀಪ್ ಹೊರಟೊಡನೆ, ಕಾರ್ಯದರ್ಶಿಯ ವಾಹನ ಬೇರೆ ದಾರಿ ಹಿಡಿಯಿತು.

"ದಿಲ್ಲಿಯ 'ನೃಪತುಂಗ'ಕ್ಕೊ ?"

ಮಹಾ ಕಾರ್ಯದರ್ಶಿ ಉತ್ತರಿಸಿದ:

"ನನ್ನ ಕೈಗಾರಿಕೋದ್ಯಮಿ ಮಿತ್ರನದೊಂದು ಅತಿಥಿ ಗೃಹ ಇದೆ. ಅಲ್ಲಿ ಅಡುಗೆ ಸಿದ್ಧವಾಗಿರ್‍ತದೆ."

"ನಾವಿಬ್ಬರೇ ?"

"ಆಳುಗಳಿರ್‍ತಾರೆ. ಅವರು ಲೆಕ್ಕಕ್ಕಿಲ್ಲ. ಅಲ್ಲ, ಸೌದಾ. ನೀನು ಟೆನ್ನಿಸ್ ತಾರೆ ಆದೆ ಅನ್ನೋ ಸುದ್ದಿ ಎಲ್ಲ ಪತ್ರಿಕೆಗಳಲ್ಲೂ ಇತ್ತಲ್ಲ ?"

"ರಾಜ್ಯದ ಜನರಿಗೆ ಖುಶಿಯೋ ಖುಶಿ. ಆದರೆ ನಿನ್ನೆ ಸಂಪುಟದ ಸಭೆಯಲ್ಲಿ–"

"ಏನಾಯ್ತು ?"

"ರಾಜ್ಯದ ಪ್ರತಿಯೊಂದು ಶಾಲೆಯಲ್ಲೂ ಟೆನ್ನಿಸ್ ಲಾನ್ ಇರಬೇಕು—ಅಂದೆ. ಒಬ್ಬನಿಂದ ವಿರೋಧ ಬಂತು."

"ಯಾರು ಆತ ?"

"ಆ ದಿನ ಟೆನ್ನಿಸ್ ಆಟದಲ್ಲಿ ನನ್ನ ಎದುರಾಳಿಯಾಗಿದ್ದು ಸೋತವನು."

"ಇನ್ನೂ ಹುಡುಗ. ತಲೆ ಸವರಿ ಸರಿಪಡಿಸು."

"ಅಧಿಕ ಪ್ರಸಂಗಿ...."

"ಯಾರು—ನಾನೊ ? ಅವನೊ ?"

ಸೌದಾಮಿನಿಯ ತಲೆ ಮಹಾ ಕಾರ್ಯದರ್ಶಿಯ ಭುಜದತ್ತ ಬಾಗಿತು.

"ಜಾಣಪ್ಪಗೊಂದು ರಾಜ್ಯಪಾಲ ಹುದ್ದೆ. ಐ. ಸಿ. ಎಸ್ ಚೀಫ್ ಸೆಕ್ರೆಟರಿಗೆ ಕಡ್ಡಾಯ ನಿವೃತ್ತಿ ಅಥವಾ ವರ್ಗಾವಣೆ."

"ಆಗಲೇ ನಿರ್ಧಾರವಾಗಿದೆ. ಜಾಣಪ್ಪ ಮುಂದಿನ ತಿಂಗಳು ಕೇರಳಕ್ಕೆ ಹೋಗ್ತಾರೆ. ಚೀಫ್ ಸೆಕ್ರೆಟರಿಯನ್ನು ಇಲ್ಲಿಗೆ ಕರೆಸಿದರಾಯ್ತು. ಕಡ್ಡಾಯ ನಿವೃತ್ತಿ ಅಂಥದೆಲ್ಲ ಬೇಡ. ದುಡುಕಬಾರದು ಸೌದಾ. ಕಿಷ್ಕಿಂಧೆ ಮೂಲದ ಹಿರಿಯ ಐ.ಎ.ಎಸ್. ಅಧಿಕಾರಿಗಳು ಮೂವರು ನಾಲ್ವರು ಇರಬೇಕು. ಒಳ್ಳೆಯವನನ್ನು ಆರಿಸಿಕೊಡ್ತೇನೆ."

"ಉಪಕೃತೆ."

"ತಿಂಗಳ ಕಾಣಿಕೆಗೆ ಏರ್ಪಾಟು ಮಾಡಿದೀಯಾ ?"

"ಓಹೋ ! ಹಿರಿಬೆರಳು ನಿಮಗೆ. ಕಿರುಬೆರಳು ರಾಜ್ಯ ಸಮಿತಿಗೆ...."

"ಪ್ರಧಾನಿಯ ಕಿವಿಗೆ ಈ ಬೆರಳು ಗಿರಳು ಸುದ್ದಿ ಬಿದ್ದರೆ ಸಿಟ್ಟಾಗ್ತಾರೆ."

"ಬೇರೆ ಯಾವ ವಿಧಾನ ಅನುಸರಿಸ್ಲಿ ?"

"ಹೊಸ ಸಲಹೆ ಕೊಟ್ಟಿದ್ದೇನೆ. ಒಂದೊಂದು ರಾಜ್ಯಕ್ಕೆ ಇಷ್ಟಿಷ್ಟು. ಹೆಚ್ಚಿನ ಹಣಕ್ಕೆ ಮುಖ್ಯಮಂತ್ರಿ ಕೋಶಾಧಿಕಾರಿ."

"ಇದೇ ಮೇಲು."

"ಎಲ್ಲ ರಾಜ್ಯಗಳಿಂದ ಹಣ ಯಾರಿಗೆ ಬರುತ್ತೆ ಗೊತ್ತೊ ?"

"ನಿಮಗಲ್ಲವ ದೊರೆ ?"

"ಬುದ್ಧಿವಂತೆ, ನನ್ನ ಪ್ರಾಣ."

* * *

ಮಹಾ ಕಾರ್ಯದರ್ಶಿ ಅಮೃತ ಸೇವಿಸಿದರು. "ದಿಲ್ಲಿಗೆ ಬಂದಾಗ ದಿಲ್ಲಿಯವರ ಹಾಗಿರಬೇಕು," ಎಂದು ಹೇಳಿ, ಸೌದಾಮಿನಿಯನ್ನೂ ಅಮೃತ ಪಾನಕ್ಕೆ ಒಪ್ಪಿಸಿದರು.

ಅಮೃತವನ್ನೂ ಒಳಗೊಂಡ ಲೇಹ್ಯ ಪಕ್ಷದವಳು ತಾನೆಂದು ಸೌದಾಮಿನಿ ಹೇಳಲಿಲ್ಲ. ಬದಲು, ಅವಳೆಂದಳು :

ಅಮೃತಕ್ಕೆ ಪರಮಾತ್ಮ ಅಂತಲೂ ಹೇಳ್ತಾರೆ, ಅಲ್ಲವೆ ?"

"ಓಹೋ. ಬೇಕಿದ್ದರೆ ಮಹಾತ್ಮ ಅಂತಲೂ ಹೇಳಬಹುದು."

"ಮಹಾತ್ಮನನ್ನು ದೇವರು ಅಂತ ಭಾವಿಸುವ ಭೋಳೇ ಜನರೂ ಇದ್ದಾರೆ."

"ಅವತಾರ ಪುರುಷ. ದೇಶದ ನಾಲ್ಕು ಮೂಲೆಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸಿ, ಗಾಂಧಿ ಮೂರ್ತಿ ಪ್ರತಿಷ್ಠಾಪಿಸಿ ನಿತ್ಯ ಪೂಜೆಗೆ ಏರ್ಪಾಟು ಮಾಡುವ ಯೋಚನೆಯೂ ಒಂದಿದೆ."

"ಎಷ್ಟನೇ ಪಂಚವಾರ್ಷಿಕ ಯೋಜನೇಲಿ ?"

"ಪಂಚಲೋಹದ ವಿಗ್ರಹ."

"ಮುಂದಿನ ಶತಮಾನದಲ್ಲಿ ವಿಗ್ರಹಚೋರರು ಮಹಾತ್ಮಭಕ್ತರಾಗಬಹುದು. ವಿದೇಶಗಳಿಗೆ ರವಾನೆ."

"ದೇವಸ್ಥಾನಗಳ ಸುತ್ತಲೂ ಎತ್ತರದ ಪ್ರಾಕಾರ. ಮಹಾದ್ವಾರಕ್ಕೆ ಅತ್ಯಾಧುನಿಕ ಬೀಗ ವ್ಯವಸ್ಥೆ."

"ಸತ್ತು ಅಮರನಾದ. ಪುನಃ ಸೆರೆಮನೆ ಸೇರಿ, ಪೂಜೆಗೊಂಡು, ಭಕ್ತಾದಿಗಳನ್ನು ಹರಸಿದ."

"ನೀನು ವಾಚಾಳಿಯಾಗಿಬಿಟ್ಟೆ."

"ನೀವೆ ಅಲ್ಲವ ಹೇಳಿಕೊಟ್ಟಿದ್ದು ರಾಜಕಾರಿಣಿಗೆ ಮಾತು ಮುಖ್ಯ ಅಂತ ?"

"ಯೋಗ ಭೋಗ ಎರಡರಲ್ಲೂ ಸಮನ್ವಯ ಸಾಧಿಸಿದವಳು ನೀನು. ಏಳು ಊಟಕ್ಕೆ."

ಭೋಜನ ಭರ್ಜರಿಯಾಗಿತ್ತು. ಅಡುಗೆಯವರನ್ನು ದಿಲ್ಲಿಗೆ ಕಳಿಸಿ ಒಂದಿಷ್ಟು ತರಬೇತಿ ಕೊಡಿಸೂಂತ 'ನೃಪತುಂಗ' ದವನಿಗೆ ಹೇಳಬೇಕು—ಎಂದುಕೊಂಡಳು ಸೌದಾಮಿನಿ.

ಊಟದ ಬಳಿಕ ಮಹಾ ಕಾರ್ಯದರ್ಶಿಯೂ ಸೌದಾಮಿನಿಯೂ ಉದ್ಯಾನದಲ್ಲಿ ನೂರು ಹೆಜ್ಜೆ ನಡೆದಾಡಿದರು.

ನಡೆಯುತ್ತ ಕಿಷ್ಕಿಂಧೆಯ ಮುಖ್ಯಮಂತ್ರಿ ಹಿತವಚನ ಕೇಳಬೇಕಾಯಿತು.

"ಹೊಟ್ಟೆ ತುಂಬಿದ ಮೇಲೆ ಸ್ವಲ್ಪ ಹೊತ್ತು ನಡೀಲೇಬೇಕು. ಒಂದರ್ಧ ಘಂಟೆಯಾದರೂ ಮೇಜಿನಿಂದಲೂ ಹಾಸಿಗೆಯಿಂದಲೂ ದೂರವಿರಬೇಕು."

"ಹಿತೋಕ್ತಿ ನುಡಿಯಲು ಚೆನ್ನ. ಅದರಂತೆ ಆಚರಣೆ ಕಷ್ಟ."

"ಹತ್ತು ಹದಿನೈದು ಮಿನಿಟು ಆದುವೇನೊ ಹೊರಗೆ ಬಂದು ? ಇವತ್ತಿಗೆ ಸಾಕು. ನಡೆ ಒಳಕ್ಕೆ."

ಶಯನಕ್ಕೆ ಮುನ್ನ ಆಟ, ಚುಟುಕು.

ಕರೆಯಬೇಕಾದ ಬಜೆಟ್ ಅಧಿವೇಶನದ ಬಗೆಗೆ ಸೌದಾಮಿನಿ ಮಾತನಾಡ ತೊಡಗಿದಳು. ಮಗ್ಗುಲಲ್ಲಿದ್ದಾತ ಒಂದೆರಡು ಸಲ ಹೂಂಗುಟ್ಟಿದ. ಅನಂತರ ಕೇಳಿಸಿದ್ದು ಗೊರಕೆ. ಸೌದಾಮಿನಿ ಪಕ್ಕಕ್ಕೆ ಹೊರಳಿದಳು: ತನಗೆ ಆತುಕೊಂಡು ರಂಗಧಾಮ ಇದ್ದಂತೆ ಕಲ್ಪಿಸಿಕೊಂಡಳು. ಮೈಯನ್ನು ಬಾಗಿಸಿ ಬಳುಕಿಸಿ ಇಲ್ಲದ ವ್ಯಕ್ತಿಯೊಡನೆ ಮುಟ್ಟಾಟವಾಡಿದಳು.

...ನಸುಬೆಳಕು ಕಿಟಕಿಯೊಳಗಿಂದ ತೂರಿಬರುವುದಕ್ಕೆ ಮೊದಲೆ ಮಹಾ ಕಾರ್ಯದರ್ಶಿ ಎದ್ದಿದ್ದ. ಭೋಜನ ಶಾಲೆಗೆ ತೆರಳಿ, ಅಲ್ಲಿದ್ದವರಿಗೆ, "ಬೆಡ್ ಟೀ ಸಾಕು, ಬ್ರೇಕ್‌ಫಾಸ್ಟ್ ಬೇಡ" ಎಂದ. ಮರಳಿ ಶಯ್ಯಾಗೃಹಕ್ಕೆ ಬಂದು ಸೌದಾಮಿನಿಯನ್ನು ಎಬ್ಬಿಸಿದ.

"ಸೌದಾ, ನಿನ್ನನ್ನು ಕುಟೀರದಲ್ಲಿ ಬಿಟ್ಟು, ಪಕ್ಷದ ಕಾರ್ಯಾಲಯಕ್ಕೆ ಹೋಗ್ತೇನೆ."

ಸೌದಾಮಿನಿ ಮಹಾ ಕಾರ್ಯದರ್ಶಿಯ ಮುಖ ನೋಡಿದಳು. ಉಲ್ಲಸಿತನಾಗಿಯೆ ಕಂಡ.

"ಮತ್ತೆ ಭೇಟಿ ?"

"ನಾಳೆ ನೀನು ಪಕ್ಷದ ಕಾರ್ಯಾಲಯಕ್ಕೆ ಬರಬೇಕು. ನಾಡದು ಹೋಟೆಲ್ ಅಶೋಕದಲ್ಲಿ ದಿಲ್ಲಿಯ ಪ್ರಮುಖ ಸಂಪಾದಕರನ್ನು ಲಂಚ್‌ಗೆ ಕರಿ: ಏರ್ಪಾಟು ಮಾಡೋದಕ್ಕೆ ನನ್ನ ಪಿ. ಎ. ಗೆ ಹೇಳ್ತೇನೆ."

"ಆಚೆ ನಾಡದು ಪ್ರಧಾನಿಯವರನ್ನು ಕಂಡು ನಾನು ಹೊರಡಬಹುದು...."

"ಬಜೆಟ್ ಅಧಿವೇಶನದ ಸಿದ್ಧತೆ ಇದೆಯಲ್ಲ ?"

"ಹೊಸ ಚೀಫ್ ಸೆಕ್ರೆಟರಿಯನ್ನು ನನ್ನ ಜತೆ ಕರೆದುಕೊಂಡು ಹೋಗಲೆ ?"

"ಬೇಡ. ಆತ ಒಂದು ದಿನ ಮುಂಚಿತವಾಗಿಯೆ ಹೋಗಿ ನಿನಗೋಸ್ಕರ ಕಾದಿರ್ಲಿ. ಇವತ್ತೆ ಏರ್ಪಾಟು ಮಾಡ್ತೇನಿ. ಶಿವಭಾವು ಚೌಗುಲೆ ಅಂತ."

"ಮುದುಕನೆ ?"

"ನಡುವಯಸ್ಸು: ನಮಗೆ ನಿಷ್ಠೆಯಿಂದಿದ್ದಾನೆ. ಭಾರತೀಯ ಪ್ರಜಾಪ್ರಭುತ್ವದ

ವಿಶಿಷ್ಟತೆಯನ್ನು ಮನಗಂಡಿರುವ ಮನುಷ್ಯ. ನೀನು ನಿನ್ನ ಆ ಚೀಫ್ ಸೆಕ್ರೆಟರಿಗೆ ಫೋನ್ ಮಾಡಿ, ಚೌಗುಲೆ ಬಂದ ತಕ್ಷಣ ಚಾರ್ಜ್‌ಕೊಟ್ಟು ದಿಲ್ಲಿಗೆ ಹೊರಡೋದಕ್ಕೆ ಆಜ್ಞೆ ಕೊಡು. ಅಂಥವರಿಗೆ ನಮ್ಮ ಕಾರ್ಯಸೌಧದಲ್ಲಿ ಬೇಕಾದಷ್ಟು ಕಸದ ಬುಟ್ಟಿ ಗಳಿವೆ."

ಕುಟೀರದ ಆವರಣಕ್ಕೆ ಕಾರು ನಿಧಾನವಾಗಿ ಚಲಿಸಿದೊಡನೆ, ಬೀಡಿ ಸೇದುತ್ತ ಮೆಟ್ಟಿಲ ಮೇಲೆ ಕುಳಿತಿದ್ದ ರಾಮ್‌ಧನ್ ಬೀಡಿಯನ್ನು ಹೂವಿನ ಕುಂಡಕ್ಕೆ ಚುರುಟಿ, ಚಟ್ಟನೆದ್ದು ಸೆಲ್ಯೂಟ್ ಕೊಟ್ಟು ಕಾರಿನ ಹಿಂಬಾಗಿಲು ತೆರೆದ. ಇಳಿದುದು ಸೌದಾಮಿನಿ ಒಬ್ಬಾಕೆಯೇ. ಡ್ರೈವರ್ ಸೂಟ್‌ಕೇಸ್ ಕೊಟ್ಟ. ಕಾರು ತುಸು ಹಿಂದಕ್ಕೆ ಚಲಿಸಿ ರಸ್ತೆಗಿಳಿಯಿತು. ಇಳಿದನಿಯಲ್ಲಿ ಸೌದಾಮಿನಿ ಗದರಿದಳು :

"ಕತ್ತೆ, ಅವರಿಗೆ ಸೆಲ್ಯೂಟ್ ಕೊಡೋ."

ಕಾರಿನಲ್ಲಿದ್ದ ನೇತಾರರಿಗೆ ರಾಮ್‌ಧನ್ ಸೆಲ್ಯೂಟ್ ಕೊಟ್ಟ.

ಕುಟೀರದ ಒಳಭಾಗದಲ್ಲಿ ಕಾಫಿ ಹೀರುತ್ತಿದ್ದ ಪರಶುರಾಮ್, ಮುಖ್ಯಮಂತ್ರಿ ಬಂದರೆಂದು ಬೋಲಾನಾಥನಿಂದ ತಿಳಿದು, ಕಪ್ಪಿನಲ್ಲಿದ್ದುದನ್ನು ಅವಸರದಲ್ಲಿ ಗುಟು ಕರಿಸಿ ದ್ವಾರದ ಬಳಿಗೆ ಬಂದ. ಅವನ ನಮಸ್ಕಾರ ಮತ್ತು ಬೋಲಾನಾಥನ ಸೆಲ್ಯೂಟ್ ಸೌದಾಮಿನಿಗೆ ಒಟ್ಟಿಗೇ ದೊರೆತುವು.

ಕುಟೀರದ ಅವ್ಯವಸ್ಥೆ ಕಂಡು ಸೌದಾಮಿನಿ ದಂಗಾದಳು. ಕಿಷ್ಕಿಂಧೆ ವಾರ್ತಾ ಕೇಂದ್ರದಲ್ಲಿ ಹಳೆಯ ಮೂರು ಪೇಪರುಗಳಷ್ಟೆ ಇದ್ದುವು. ಇದ್ದ ಮೂರು ಕೊಠಡಿ ಗಳಲ್ಲಿ ಕಿಷ್ಕಿಂಧೆಯ ಲೋಕಸಭಾ ಸದಸ್ಯರ ಶಿಫಾರಸು ಪತ್ರದೊಡನೆ ಕಲ್ಯಾಣನಗರ ದಿಂದ ಬಂದಿದ್ದ ಅಪರಿಚಿತರು ಠಿಕಾಣಿ ಹೂಡಿದ್ದರು. ಸೋಫಾಗಳು ಹರಿದಿದ್ದುವು. ಸೌದಾಮಿನಿಯ ಮೈ ಉರಿಯಿತು. ಅವಳು ಬುಸುಗುಟ್ಟುತ್ತ ಹೊರಬಂದಳು. ಕಿಷ್ಕಿಂಧೆಯ ರಾಜಧಾನಿಯ ಸುಪ್ರಸಿದ್ಧ ರೋಜಾ ಗಿಡಗಳು ಆರೈಕೆಯಿಲ್ಲದೆ ಸೊರಗಿದ್ದುವು.

ಫೋನಿನ ಕರೆಗಂಟೆ ಸದ್ದುಮಾಡಿತು. ಪರಶುರಾಮ್ ಅಭ್ಯಾಸಬಲದಿಂದ ಕೈಚಾಚಿದ.

"ಸದ್ಯಃ ಈ ಫೋನೊಂದು ಸತ್ತಿಲ್ಲವಲ್ಲ !" ಎಂದು ಮುಖ್ಯಮಂತ್ರಿ ಮೊದ ಲಿಕೆಯ ಉದ್ಗಾರ ತೆಗೆದಳು.

"ಕಿಷ್ಕಿಂಧಾ ಕುಟೀರ."

'ಪರಶುರಾಮ್‌ಜಿ, ಸಿ. ಎಂ. ಬಂದರಾ ?'

"ಹ್ಞ."

'ಓ ದೇವರೇ ! ಜೀಪ್ ಕೆಟ್ಟುಕೂತಿದೆ. ಗರಾಜಿನವನ ವಶಕ್ಕೆ ಕೊಟ್ಟು ಫಟ್ ಫಟಿಯಲ್ಲಿ ಬರ್‍ತೇನೆ. ನನ್ನ ಪರವಾಗಿ ಸಿ. ಎಂ. ಅವರಿಗೆ—'

"ಆದಷ್ಟು ಬೇಗನೆ ಬನ್ನಿ."

ಸೌದಾಮಿನಿ ಗುಡುಗಿದಳು :

"ಯಾರೊ ಆತ ?"

ಪರಶುರಾಮನೆಂದ :

"ಈ ಕುಟೀರದ ಉಸ್ತುವಾರಿ ಅಧಿಕಾರಿ."

"ಹತ್ತೂವರೆ ಘಂಟೆಗೆ ಬರೋ ಬಡಾಸಾಹೇಬ ಅಂತ ಕಾಣುತ್ತೆ. ಮುಖ್ಯ ಮಂತ್ರಿ ದಿಲ್ಲಿಯಲ್ಲಿ ಇರುವಾಗಲೇ ಇಂಥ ಅವಸ್ಥೆ !"

"ಜೀಪು ಕೆಟ್ಟಿದೆಯಂತೆ. ಫಟ್ ಫಟೀಲಿ ಬರ್‍ತಾನಂತೆ."

"ಒಂದು ಬಡಕಲು ಕುದುರೆ ಮತ್ತು ಜಟಕಾ ಕೊಡಬೇಕು ಈ ನನ್ಮಗನಿಗೆ !"

ಪರಶುರಾಮ ನಗೆ ತಡೆಯಲಾರದೆ, ಸರಕ್ಕನೆ ಪಕ್ಕಕ್ಕೆ ತಿರುಗಿದ.

"ನಡಿ, ಅಡುಗೆಮನೆ ಹ್ಯಾಗಿದೆ ನೋಡೋಣ."

ಅಡುಗೆಯಾತ ನಡುಬಾಗಿ ವಂದಿಸಿದ.

"ಜವಾನ ಎಲ್ಲಿ ?"

"ತರಕಾರಿ ತರೋದಕ್ಕೆ ಹೋಗಿದ್ದಾನೆ."

"ನಮ್ಮ ರಾಜ್ಯದವನೊ ?"

"ಅಲ್ಲ. ಬಿಹಾರಿನವನು."

ಪರಶುರಾಮ ಬಟ್ಟೆ ತುಂಡು ತಂದು ಸೋಫಾದ ಧೂಳು ಒರೆಸಿದ. ಮುಖ್ಯ ಮಂತ್ರಿ ಕುಳಿತಳು. ಅಂಗರಕ್ಷಕರನ್ನು ಕರೆದಳು.

"ನಿಮ್ಮ ಮನೆಗಳಿಗೆ ಹೋಗಿ ಬಂಧು ಬಳಗದ ಜತೆ ಸುಖವಾಗಿರಿ. ಇವತ್ತು ಚುಟ್ಟಿ. ನಾಳೆ ಬೆಳಗ್ಗೆ ಡ್ಯೂಟಿ ಮೇಲಿರಬೇಕು. (ಸೆಲ್ಯೂಟ್‌ಗಳಿಗೆ ಉತ್ತರವಾಗಿ) ಠೀಕ್."

ಸೌದಾಮಿನಿಯ ಹೊಟ್ಟೆ ಚುರುಚುರು ಎನ್ನುತ್ತಿತ್ತು. ಆ ಗೆಸ್ಟ್‌ಹೌಸ್‌ನಲ್ಲಿ ಬ್ರೇಕ್‌ಫಾಸ್ಟ್ ಮುಗಿಸಿ ಹೊರಟಿದ್ದರೆ ಆ ಪ್ರಧಾನ ಕಾರ್ಯದರ್ಶಿಯದೇನು ಕೊಳ್ಳೆ ಹೋಗ್ತಿತ್ತು ? ಈ ಅಡುಗೆಯವನು ಉಪಾಹಾರ ತಯಾರಿಸಿದಂತೆಯೇ ಇದೆ—ಎಂದು ಗೊಣಗಿ ಆಪ್ತಕಾರ್ಯದರ್ಶಿಗೆ ಅನುಜ್ಞೆ ಇತ್ತಳು :

"ಒಳಗಡೆ ಟಿಫಿನ್ ಕ್ಯಾರಿಯರ್, ಫ್ಲಾಸ್ಕ್ ಇದ್ದ ಹಾಗಿತ್ತು. ಹತ್ತಿರ ಒಳ್ಳೇ ಹೋಟೆಲು ಯಾವುದಿದೆ ಅಂತ ಕೇಳು, ಏನಾದರೂ ತಗೊಂಡ್ಬಾ. ಹಸಿವು. ಅಲ್ಲಿ ಉಪಾಹಾರಕ್ಕೆ ಕೂತ್ಬಿಟ್ಟೀಯೆ ಎಲ್ಲಾದರೂ! ನನಗೆ ತಂದ್ಕೊಟ್ಟು ಆಮೇಲೆ ನೀನು ಹೋಗು."

ಪರಶುರಾಮ ಕಾರ್ಯೋನ್ಮುಖನಾದ.

'ಟಿಫಿನ್' ಬರುವುದಕ್ಕೂ ಉಸ್ತುವಾರಿ ಅಧಿಕಾರಿ ಫೆರ್ನಾಂಡೀಸ್ ಆಗಮಿಸು ವುದಕ್ಕೂ ತಾಳೆ ಬಿತ್ತು.

"ಗುಡ್‌ಮಾರ್ನಿಂಗ್ ಸರ್—ಮದಾಮ್."

"ನಿಮಗೆ ಇಂಗ್ಲಿಷಲ್ಲದೆ ಬೇರೆ ಯಾವ ಭಾಷೆ ಬರುತ್ತಪ್ಪ ?"

"ಫ್ರೆಂಚ್ ಬರುತ್ತೆ, ಮದಾಮ್."

"ಫ್ರಾನ್ಸಿಗೆ ರಾಯಭಾರಿಯಾಗೋದಕ್ಕೆ ಲಾಯಕ್ಕು ನೀವು."

"ಕ್ಷಮಿಸಿ, ಮದಾಮ್. ನಾನು ಬಡವ. ನನಗೆ ಈ ಸ್ಥಾನ ಸಾಕು."

"ಎಲ್ಲಿ ನನ್ನ ಕೊಠಡಿ ?"

ಬೀಗದ ಕೈ ಆತನ ಕೋಟಿನ ಒಳ ಕಿಸೆಯಲ್ಲಿತ್ತು. ಅವನು ಬೀಗ ತಗಲಿಸಿದ್ದ ಕೊಠಡಿಯತ್ತ ಓಡಿದ. ಒಳಗೆ ಎಲ್ಲ ಸರಿಯಾಗಿದೆ ಎಂದು ಖಚಿತ ಮಾಡಿಕೊಂಡು, ಹಣೆಗೆಯಿಂದ ತನ್ನ ಕ್ರಾಪನ್ನೊಮ್ಮೆ ಬಾಚಿ, ಅಲ್ಲಿದ್ದ ನಿಲುವುಗನ್ನಡಿಯಲ್ಲಿ ಮುಖ ನೋಡಿ, ಕರವಸ್ತ್ರದಿಂದ ಬೆವರು ಒರೆಸಿ ಹಜಾರಕ್ಕೆ ಧಾವಿಸಿ, ಕ್ಯಾರಿಯರ್-ಫ್ಲಾಸ್ಕು ಗಳನ್ನು ತಾನೇ ಎತ್ತಿಕೊಂಡು, "ದಯವಿಟ್ಟು ಆಗಮಿಸಿ ಮದಾಮ್" ಎಂದ.

ಹಾಗೂ ಹೀಗೂ ಉಪಾಹಾರ ಮುಗಿಯಿತು. ಕೈ ತೊಳೆಯಲು ಸಿಂಕ್‌ನ ಬಳಿ ಹೋದರೆ ನಲ್ಲಿಯಲ್ಲಿ ನೀರಿರಲಿಲ್ಲ. ಫೆರ್ನಾಂಡೀಸ್ ಅಡುಗೆ ಮನೆಗೆ ಓಡಿ, ಪಿಂಗಾಣಿ ಬೌಲಿನಲ್ಲಿ ನೀರು ತಂದ. ಕಾಫಿ ಪರವಾಗಿರಲಿಲ್ಲ.

ಪರಶುರಾಮ ತನ್ನ ಉಪಾಹಾರಕ್ಕೆ ಹೋದ. ಅಡುಗೆಯವನು ಫೆರ್ನಾಂಡೀಸ ನನ್ನು ಬದಿಗೆ ಕರೆದು ಗೋಗರೆದ :

"ನನ್ನ ಮಾನ ಹೋಯ್ತು. ಇನ್ನು ಕೆಲಸವೂ ಹೋದೀತು. ಮುಖ್ಯಮಂತ್ರಿಣಿ ಯವರ ಎಲ್ಲ ಊಟೋಪಚಾರಗಳೂ ಇನ್ನು ಇಲ್ಲಿಯೇ ಆಗಬೇಕು. ಅವರು ಮಾತಾಜಿ ಅಂತೆ. ನೀವು ಸರ್ ಮದಾಮ್ ಅಂತೆಲ್ಲ ಕರೀಬೇಡಿ."

"ಪರಶುರಾಮ್ ಇನ್ನೇನು ಹೇಳಿದ್ರು ?"

"ಅವರ ರುಚಿ ವಿಷಯ ಎಲ್ಲ ಕೇಳಿ ತಿಳಿದಿದ್ದೇನೆ. ಮಾತಾಜಿಯವರಿಂದ ನಾನು ಸರ್ಟಿಫಿಕೇಟು ಪಡೀದಿದ್ರೆ ಹಾಳು ಬಾವಿಗೆ ಬಿದ್ದು ಸಾಯ್ತೀನೆ. ಖಂಡಿತ.... (ಸ್ವರ ತಗ್ಗಿಸಿ)....ಆ ಮೂವರನ್ನು ಹೊರಗೆ ಹಾಕಿ. ತಡ ಮಾಡ್ಬೇಡಿ."

ಲೋಕಸಭಾ ಸದಸ್ಯರ ಶಿಫಾರಸಿನ ಮೇಲೆ ಕುಟೀರವಾಸಿಗಳಾಗಿದ್ದವರು ಸದ್ದಿಲ್ಲದೆ ಹೊರಟುಹೋದರು.

ಅಡುಗೆಯವನ ವಿನಂತಿಯನ್ನು ಫೆರ್ನಾಂಡೀಸ್ ಮುಖ್ಯಮಂತ್ರಿಗೆ ತಿಳಿಸಿದ. ಫೆರ್ನಾಂಡೀಸನ ಮಾತಿಗೆ ಒಪ್ಪಿಗೆ ಮುದ್ರೆ ದೊರೆಯದೆ ಇದ್ದರೆ ಸ್ವತಃ ತಾನೇ ಮಾತಾಜಿಯವರಿಗೆ ಸಾಷ್ಟಾಂಗಪ್ರಣಾಮ ಮಾಡಬೇಕೆಂದು ಶ್ರೀಪಾದ ಮರೆಯಲ್ಲಿ ನಿಂತಿದ್ದ.

"ಎಲ್ಲಿ ಆತ ? ಕರೀರಿ."

ಅವನು ಅಂಗವಸ್ತ್ರ ಹೊದೆದುಕೊಂಡು ಬಂದಿದ್ದ, ವೃತ್ತಿ ಗೌರವಕ್ಕೆ ಚ್ಯುತಿ ಬರಬಾರದೆಂದು.

ಎದುರು ನಿಂತೊಡನೆ ಸೌದಾಮಿನಿ ಕೇಳಿದಳು :

"ನಿಮ್ಮ ಹೆಸರೇನು ?"

(ನಡು ಬಗ್ಗಿಸಿ) "ಮಾತಾಜಿಯವರು ಈ ಬಡವನನ್ನು ಬಹುವಚನದಿಂದ ಕರೆಯಬಾರದು. ನಾನು ಶ್ರೀಪಾದ."

"ಆಚಾರ್ಯನೊ ? ರಾಯನೊ ?"

"ಎರಡರ ಬಳಕೆಯೂ ಉಂಟು."

"ಒಳ್ಳೇದು. ಇವತ್ತು ಮಧ್ಯಾಹ್ನದ ಭೋಜನ ಇಲ್ಲಿಯೇ."

"ಬೆಳಗ್ಗೆ ತಮಗೆ ತೊಂದರೆಯಾಯ್ತು. ನಮ್ಮನ್ನೆಲ್ಲ ಕ್ಷಮಿಸ್ಬೇಕು."

"ಹೋಗಿ. ನಿಮ್ಮ ಕೆಲಸ ನೋಡಿ."

"ಮೇಲೆ ಟ್ಯಾಂಕಿಗೆ ನೀರು ತುಂಬಿಸ್ತಿದ್ದಾರೆ. ತಾವು ಸ್ನಾನಮಾಡಿ ತುಸು ವಿಶ್ರಾಂತಿ ತೆಗೆದುಕೊಳ್ಳಿ."

ಹೊರಗೆ ಬಂದ ಶ್ರೀಪಾದ ತನ್ನ ದ್ವೀಪಕ್ಕೆ ಲಂಘಿಸುತ್ತಿದ್ದಂತೆ ಫೆರ್ನಾಂಡೀಸ್ ಅವನ ಬೆನ್ನಿಗೆ ಗುದ್ದಿ ಮೆಚ್ಚುಗೆ ಸೂಚಿಸಿದ.

ಪರಶುರಾಮ ಬಂದೊಡನೆ ಸೌದಾಮಿನಿ ಕೇಳಿದಳು :

"ಈ ನಮ್ಮ ಕುಟೀರಕ್ಕೆ ದಿಲ್ಲಿಯ ಬೆಳಗ್ಗಿನ ಪತ್ರಿಕೆಗಳು ಬರೋದಿಲ್ವೊ ?"

ಬರುತ್ತಿದ್ದುವು, ಫೆರ್ನಾಂಡೀಸನ ಮನೆಯ ದಾರಿಯಾಗಿ. ಇವತ್ತು ಗಡಿಬಿಡಿಯಲ್ಲಿ ಪತ್ರಿಕೆಗಳನ್ನು ಮನೆಯಲ್ಲೆ ಮರೆತು ಬಂದಿದ್ದ. ಇದ್ದುದನ್ನು ಪರಶುರಾಮನಿಗೆ ಆತ ತಿಳಿಸಿ, "ನಿಮಿಷದಲ್ಲಿ ಬಂದ್ಬಿಟ್ಟೆ," ಎಂದ. ಹೊರಹೋದ. ಪರಶುರಾಮ ಅವನನ್ನು ಹಿಂಬಾಲಿಸಿ, "ಟೈಮ್ಸ್ ಅವರಿಗಿಷ್ಟ," ಎಂದ.

ನ್ಯೂಸ್ ಸ್ಟಾಲ್‌ನಲ್ಲಿ 'ಟೈಮ್ಸ್' ಇರಲಿಲ್ಲ. ಆದರೆ ಮೂಲೆಯ ಗೂಡಂಗಡಿಯವನು ಆ ಪತ್ರಿಕೆ ಕೊಳ್ಳುವುದು ಫೆರ್ನಾಂಡೀಸ್‌ಗೆ ಗೊತ್ತಿತ್ತು. ಓಡಿಬಂದವನನ್ನು ಕುರಿತು, "ಸಿಗರೇಟು ಕೊಡ್ಲೊ ?" ಎಂದ ಅಂಗಡಿಯವನು. ಅಷ್ಟು ಹೇಳಿ ಅವನೇ ಮುಂದುವರಿಸಿದ : "ಇವತ್ತು ನಿಮಗೆ ಸಿಗರೇಟು ಬೇಡ. ನಿಮ್ಮ ಚೀಫ್ ಮಿನಿಸ್ಟರ್ ಬಂದಿದಾರಂತಲ್ಲ ? ಬಹುಶಃ ಅಲ್ಲಿ ನೀವು ಸೇದುವ ಹಾಗಿಲ್ಲ."

"ಒಮ್ಮೆ ಇವತ್ತಿನದ್ದು ನಿನ್ನ 'ಟೈಮ್ಸ್' ಕೊಡು ದೊರೆ."

"ಎಲ್ಲಿ ನಿಮ್ಮ ಜೀಪ್ ಬಂದಂತಿಲ್ಲ ?"

"ಸ್ವಲ್ಪ ಚೆಕಪ್‌ಗೆ ಹೋಗಿದೆ."

"ಪೇಪರ್‌ಗಳೆಲ್ಲ ಅದರಲ್ಲಿರಬೇಕು. ಜೀಪ್ ಬಂದ್ಮೇಲೆ ನನ್ನದನ್ನು ವಾಪಸು ಮಾಡೀಪ್ಪ ಮಿಸ್ಟರ್ ಫೆರ್ನಾಂಡೀಸ್."

ಕುಟೀರದ ಅಧಿಕಾರಿ ಎರಡು ಮಿನಿಟುಗಳ ಮಟ್ಟಿಗೆ ಮಿಲ್ಖಾ ಸಿಂಗನಾದ. ಪರಶು ಮೂಲಕ ಮುಖ್ಯಮಂತ್ರಿಗೆ ಪತ್ರಿಕೆ ಮುಟ್ಟಿಸಿದ.

ಹತ್ತು ಘಂಟೆಗೆ ಜೀಪ್ ಬಂತು. ಅದರಲ್ಲಿದ್ದ 'ಟೈಮ್ಸ್'ನ ಪ್ರತಿ ಗೂಡಂಗಡಿ

ಸೇರಿತು. ಉಳಿದ ಪತ್ರಿಕೆಗಳನ್ನು ಪರಶುರಾಮ, ಸೌದಾಮಿನಿ ಸ್ನಾನದ ಮನೆಯಲ್ಲಿದ್ದಾಗ ಕೊಠಡಿಯಲ್ಲಿರಿಸಿದ.

ಆ ಪತ್ರಿಕೆಗಳ ಪುಟಗಳನ್ನೂ ಮುಖ್ಯಮಂತ್ರಿ ತಿರುವಿದಳು. ಒಂದು ಪತ್ರಿಕೆಯಲ್ಲಿ ನಗರಕ್ಕೆ ಬಂದ ಪ್ರತಿಷ್ಠಿತರ ಬಗೆಗೆ ಒಂದು ಅಂಕಣವಿತ್ತು, ಭಾವಚಿತ್ರ ಸಹಿತ. ಸೌದಾಮಿನಿಗೆ ಅನಿಸಿತು : ಈ ಫೆರ್ನಾಂಡೀಸ್‌ಗಿಂತ ಹೆಚ್ಚು ಬುದ್ಧಿವಂತರು ಇಲ್ಲಿ ಉಸ್ತುವಾರಿಗೆ ಇದ್ದಿದ್ದರೆ, ಕಿಷ್ಕಿಂಧೆಯ ಮುಖ್ಯಮಂತ್ರಿಯನ್ನು ಆ ಅಂಕಣದಲ್ಲಿ ಮೆರೆಸಬಹುದಾಗಿತ್ತು.

ಹೇಗೂ ನಾಳೆ ಸಂಪಾದಕರೊಂದಿಗೆ ಅಶೋಕ ಭೋಜನ ಇದೆಯಲ್ಲ ? ಆದರೆ ಅದು ಸುದ್ದಿಯಾಗುವುದಿಲ್ಲ. ಒಂದು ಬಗೆಯ ಉಪಯುಕ್ತ ಸಂವಾದ, ಅಷ್ಟೆ.

ಮಧ್ಯಾಹ್ನ ದಾಟಿದ ಮೇಲೆ ಒಬ್ಬಳು ತರುಣಿ ಬಂದಳು. ಅಂಗಸೌಷ್ಠವದ ನಿಲುವಿನಿಂದ ಸ್ಫುರದ್ರೂಪಿಣಿ ಎನ್ನಬಹುದು.

ಅವಳು ಮುಖ್ಯಮಂತ್ರಿಯ ಮುಂದೆ ನಿಂತಳು, ಹೆಚ್ಚಿನ ಅಳುಕಿಲ್ಲದೆ.

ವಂದನೆಗೆ ಪ್ರತಿಯಾಗಿ ಸೌದಾಮಿನಿ ಅಂದಳು :

"ಯಾರು ?"

ಫೆರ್ನಾಂಡೀಸ್ ವಿವರವಿತ್ತ ;

"ಸಿತಾರಾ. ನಮ್ಮ ಪಾರ್ಟ್‌ಟೈಮ್ ಟೈಪಿಸ್ಟ್."

"ಎಲ್ಲೋ ನೋಡಿದಂತಿದೆ."

"ಇರಲಾರದು ಮಾತಾಜಿ. ನಾನು ದಿಲ್ಲಿಗೆ ಹೊಸಬಳು. ಮುಂಬಯಿ ನನ್ನ ಊರು."

ಸೌದಾಮಿನಿ ಕಣ್ಣು ಮುಚ್ಚಿ ತೆರೆದಳು. ಮುಂಬಯಿಯ ಜನಸಾಗರದಲ್ಲಿ ಈ ಈ ಹನಿಯನ್ನು ಎಲ್ಲಿ ಕಂಡೆನೊ ?

"ಟೈಪ್‌ರೈಟರ್ ಕಾಣೆಸಲಿಲ್ಲ....?"

"ದಾಸ್ತಾನು ಕೊಠಡಿಯಲ್ಲಿದೆ."

"ಹೊರಗೆ ತರಿಸು. ಸಿತಾರಾಗೆ ಶೀಘ್ರಲಿಪಿಯೂ ಬರುತ್ತಲ್ಲವೆ ?"

ಫೆರ್ನಾಂಡೀಸನೆಂದ :

"ಟೈಪಿಂಗ್ ಶಾರ್ಟ್‌ಹ್ಯಾಂಡ್ ನನಗೂ ಬರ್‍ತದೆ. ನಾನು ಖಾಸಗಿವಲಯದಿಂದ ಬಂದ ಅಧಿಕಾರಿ."

"ಸಿತಾರಾ, ಕಿಷ್ಕಿಂಧೆ ಚೀಫ್ ಸೆಕ್ರೆಟರಿಗೆ ಲೈಟ್ನಿಂಗ್ ಕಾಲ್ ಬುಕ್ ಮಾಡು. ಸಿ. ಎಂ. ಮಾತನಾಡ್ತಾರೆ ಅನ್ನು."

ಕಲ್ಯಾಣ ನಗರದಿಂದ "ಹಲ್ಲೋ" ಕೇಳಿಸಿದೊಡನೆ ಸೌದಾಮಿನಿ ರಿಸೀವರ್‌ನ ಬಳಿ ಬಂದಳು.

"ನಮಸ್ಕಾರ. ನಾಳೆ ಶಿವಭಾವು ಚೌಗುಲೆ ಬರ್‍ತಾರೆ. ಅವರಿಗೆ ಚಾರ್ಜ್

ಕೊಡಿ. ನಿಮ್ಮ ಸೇವೆ ದಿಲ್ಲಿಗೆ ಬೇಕಂತೆ. ಎರಡೂ ಆಜ್ಞಾಪತ್ರಗಳನ್ನು ಚೌಗುಲೆ ತರ್ತ್ಾರೆ. ಅವರು ನಿಮಗೆ ಗೊತ್ತಾ ? ಒಳ್ಳೇದಾಯ್ತು."

ಆ ಕಡೆಯಿಂದ ಕ್ಷೀಣವಾಗಿ ಕೇಳಿಸಿತು :

"ಥ್ಯಾಂಕ್ಸ್. ಬಯ್ ಬಯ್." ('ಕಾಲ್ ಓವರ್.')

ಕೊಠಡಿಯಲ್ಲಿ ಇದ್ದವರನ್ನು ಉದ್ದೇಶಿಸಿ ಮುಖ್ಯಮಂತ್ರಿ ಅಂದಳು :

"ಫೋನ್ ಕರೆಗಳೆಂದರೆ ಹೀಗಿರಬೇಕು. ಚಟ್ ಚಟ್. ಸುಮ್ಮನೆ ಉದ್ದ ಎಳೆಯೋದರಲ್ಲಿ ಅರ್ಥವಿಲ್ಲ. ಫೋನನ್ನು ಹರಟೆಗೆ ಬಳಸಬಾರದು."

ಮುಖ್ಯಮಂತ್ರಿ ಮಾಡಿದ ಸಂಜ್ಞೆಯನ್ನು ಗಮನಿಸಿ ಸಿತಾರಾ ನೋಟ್‌ಬುಕ್ಕನ್ನು ಕೈಗೆತ್ತಿಕೊಂಡಳು,

"....ರಿಗೆ...ಚಾರ್ಜ್ ಕೊಡುವ ಬಗ್ಗೆ."

ಈ ಪತ್ರ ತರುವ ಶಿವಭಾವು ಚೌಗುಲೆ ಐ. ಎ. ಎಸ್. ಅವರಿಗೆ ಈ ಕ್ಷಣವೆ ಚಾರ್ಜ್ ಕೊಡಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ...."

ಫೆರ್ನಾಂಡೀಸ್ ಟೈಪ್‌ರೈಟರ್ ಹುಡುಕಿ ತಂದ. ಪರಶುರಾಮ್ ತನ್ನ ಬ್ಯಾಗಿನಿಂದ ಮುಖ್ಯಮಂತ್ರಿಯ ಲೆಟರ್‌ಹೆಡ್ ಪ್ಯಾಡ್ ಹೊರತೆಗೆದ.

ಶ್ರೀಪಾದ ಬಂದು ಪರಶುರಾಮನ ಮೂಲಕ ವರದಿ ಸಲ್ಲಿಸಿದ : "ಭೋಜನ ಸಿದ್ಧವಾಗಿದ್ಕೆ."

ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿಗೆ ಸೂಚನೆ ಇತ್ತಳು :

"ಎರಡು ಘಂಟೆಗೆ ನಾವು ರಾಷ್ಟ್ರಪಕ್ಷದ ಕಾರ್ಯಾಲಯದಲ್ಲಿರಬೇಕು. ಫೆರ್ನಾಂಡೀಸ್, ನೀವು ಇಲ್ಲೇ ಇರಿ. ಸಿತಾರಾ ಡ್ಯೂಟಿ ವೇಳೆ ಆದ್ಮೇಲೆ ಇವತ್ತು ಹೋಗಲಿ. (ಹೌದು. ನಾಳೆ—ನಾಳೆಗೆ ಬೇರೆ ವೇಳಾಪಟ್ಟಿ....)"

....ಭೋಜನ ಕೊಠಡಿಯಲ್ಲಿ ಮುಖ್ಯಮಂತ್ರಿ ಉಣ್ಣಲು ಕುಳಿತಳು. ನಿಮಿಷಗಳು ಕಳೆದಂತೆ, ತುತ್ತುಗಳು ಗಂಟಲಿನಿಂದ ಕೆಳಗಿಳಿದಂತೆ ಆಕೆಯ ಮುಖದಲ್ಲಿ ಕಂಡು ಬಂದ ಸಮಾಧಾನದ ಹರ್ಷದ ಅಲೆಗಳನ್ನು ಕಂಡು, ಶ್ರೀ ಪಾದನ ಕಣ್ಣುಗಳು ಹನಿಗೂಡಿದವು....

ಮುಖ್ಯಮಂತ್ರಿ ತನ್ನ ಕೋಣೆಗೆ ಮರಳಿದೊಡನೆ ಸಿತಾರಾ ಕೇಳಿದಳು :

"ನ್ಯೂಸ್ ಟೈಮ್. ರೇಡಿಯೊ ಹಾಕಲಾ ಮಾತಾಜಿ !"

"ಹಾಕು."

ಇವರದೇ ಸುದ್ದಿ. ಕಿಷ್ಕಿಂಧೆಯ ಮುಖ್ಯಮಂತ್ರಿ ಬಂದಿದ್ದಾರೆ ಎಂದು ಒಂದು ವಾಕ್ಯ ಹೇಳಿದರೆ ಇವರಿಗೇನು ನಷ್ಟ ? ನಾಡದು ಪೂರ್ವಾಹ್ನ ಪ್ರಧಾನಿಯನ್ನು ಕಾಣ್ತೇನೆ, ಅದು ಸುದ್ದಿಯಾಗ್ತದೆ. ಅಪರಾಹ್ನ ವಿಮಾನದಲ್ಲಿ ಕಲ್ಯಾಣನಗರದ ದಾರಿಯಲ್ಲಿರುವಾಗ ರೇಡಿಯೋ ವಾರ್ತಾ ಪ್ರಸಾರದಲ್ಲಿ ತನ್ನ ಹೆಸರು ಬರುತ್ತದೆ....

ಈ ಮಧ್ಯೆ ಪರಶುರಾಮ ಅವಸರದ ಊಟ ಮಾಡಿದ.

"ನನ್ನ ಸ್ನಾನ ಹಾಗೆಯೇ ಉಳಿಯಿತು. ರಾತ್ರೆ ಮಾಡ್ತೀನಿ. ನೀರಿರುತ್ತಾ ?" ಎಂದ ಪರಶುರಾಮ.

"ಓಹೋ."

...ಕಿಷ್ಕಿಂಧೆಯ ಮುಖ್ಯಮಂತ್ರಿ ಬಿಳಿಯ ಬೇರೆ ಸೀರೆಯುಟ್ಟು ಅಣಿಯಾದಳು.

"ಟ್ಯಾಕ್ಸಿ ಬಂತಾ ?"

ಫೆರ್ನಾಂಡೀಸ್ ಮತ್ತೊಮ್ಮೆ ಮಿಲ್ಖಾ ಸಿಂಗ್ ಆದ. ಅವನ ಪುಣ್ಯ. ಒಳ್ಳೆಯ ಟ್ಯಾಕ್ಸಿ ಸಿಕ್ಕಿತು. ಡ್ರೈವರಿಗೆ ವಿಳಾಸ ಗೊತ್ತಿತ್ತು. ಪರಶುರಾಮ ಮುಂದಿನ ಸೀಟಿನಲ್ಲಿ ಕುಳಿತ.

"ಶ್ರೀಪಾದ ಆಚಾರ್ಯ. ರಾತ್ರೆ ವಿಶೇಷವೇನೂ ಬೇಡಿ."

"ಸೆಕ್ರೆಟರಿ ಹೇಳಿದ್ದಾರೆ."

* * *

ರಾಷ್ಟ್ರಪಕ್ಷದ ಕೇಂದ್ರ ಕಾರ್ಯಾಲಯಕ್ಕೆ ಸೌದಾಮಿನಿ ಅಪರಿಚಿತೆಯಲ್ಲ. ಜಗದಲಪುರದಿಂದ ಬಂದು ಕೆಲ ತಿಂಗಳ ಕಾಲ ಆ ಕಟ್ಟಡದಲ್ಲೇ ದುಡಿಯುತ್ತಿದ್ದ ಧುರೀಣೆ. ಆಗ ಅಲ್ಲಿನ ಎಲ್ಲರಿಗೂ ಆಕೆ ಸೌದಾಮಿನಿ ಬಹೆನ್. ಮುಂದೆ ಆ ಬಹೆನ್‌ಜಿ ಕಿಷ್ಕಿಂಧೆಯಲ್ಲಿ ಪಕ್ಷದ ನಾಯಿಕೆಯಾದುದು, ಚುನಾವಣೆಯ ಬಳಿಕ ಮುಖ್ಯಮಂತ್ರಿಯಾದುದು ಸಹಜವಾಗಿಯೇ ಆ ಕಟ್ಟಡದಲ್ಲಿಯೂ ಸುದ್ದಿಯಾಗಿತ್ತು. ಆದರೆ ದ್ವಾರಪಾಲಕ "ನಮಸ್ತೆ ಸೌದಾಮಿನಿ ಬಹೆನ್‌ಜಿ" ಎಂದ. ವಿಶಿಷ್ಟ ಗೌರವ ತೋರಿಸುತ್ತಿದ್ದೇನೆ ಎಂಬ ದೃಢ ನಂಬುಗೆಯಿಂದ. ಪ್ರತಿವಂದನೆ ಎಂದು ಬಲಗೈಯನ್ನು ತುಸು ಎತ್ತಿ, ನಸುನಕ್ಕು, ಸೌದಾಮಿನಿ ಮಹಡಿಯ ಮೆಟ್ಟಲುಗಳನ್ನೇರಿದಳು.

ಪರಶುರಾಮ ಒಂದು ಹೆಜ್ಜೆ ಹಿಂದೆ ಉಳಿದು, "ಅವರು ಚೀಫ್ ಮಿನಿಸ್ಟರು. ಮಾತಾಜಿ ಅಂತ ಕರೀಬೇಕು" ಎಂದು ದ್ವಾರರಕ್ಷಕನಿಗೆ ಕಿವಿಮಾತು ಹೇಳಿದ.

"ತಪ್ಪಾಯ್ತು ಭಾಯಿಸಾಬ್. ತಾವು ಅವರ ಆಪ್ತ ಕಾರ್ಯದರ್ಶಿ ?"

"ಹೌದು."

"ನೀವೂ ಮೇಲೆ ಹೋಗಿ."

ನೂರಾರು ಧುರೀಣರ ಏಳು ಬೀಳುಗಳನ್ನು ಕಂಡಿದ್ದ ಹಳಬ ಬಾಗಿಲು ಕಾವಲಿನ ಶೇರ್‌ಸಿಂಗ್. ಮೇಲೆ ಹೋದವರ ಕಡೆ ನೋಡಿ ಆತನ ಬಿಳಿ ಮೀಸೆಯ ಅಂಚು ಕುಣಿಯಿತು.

ಪ್ರಧಾನ ಕಾರ್ಯದರ್ಶಿಯ ಕೊಠಡಿ ಭರ್ತಿಯಾಗಿತ್ತು. ಹಲಿಗೆಯ ಸೀಳುತೆರೆ ದ್ವಾರದ ವಕ್ಷಸ್ಥಲವನ್ನು ಮುಚ್ಚಿತ್ತು. ಹೊರಗೆ ಪೀಠದ ಮೇಲೆ ಕುಳಿತಿದ್ದ ಯುವಕ

ಜವಾನನೊಬ್ಬ ಏಳಬೇಕೊ ಬೇಡವೊ ಎಂದು ಯೋಚನೆಗೀಡಾದಂತೆ ಕಂಡಿತು. ಕಡೆಗೂ ಆತ ಎದ್ದ.

ಸೌದಾಮಿನಿ ಅಂದಳು :

"ನಕುಲ ದೇವ್‌ಜಿಯವರನ್ನು ಕಾಣಬೇಕು."

"ಮೊದಲೇ ಭೇಟಿ ಗೊತ್ತಾಗಿದೆಯಾ ?"

"ಹೌದು."

"ಕಾರ್ಡ್ ಕೊಡಿ."

ಪರಶುರಾಮ ಮುಖ್ಯಮಂತ್ರಿಯ ಕಾರ್ಡನ್ನು ತನ್ನ ಬ್ರೀಫ್ ಕೇಸಿನಿಂದ ತೆಗೆದು ಕೊಟ್ಟ. ಜವಾನ ಅದನ್ನೋದಿ, ನಿರ್ವಿಕಾರ ಭಾವದಿಂದ, ಭೇಟಿಗೆ ಬಂದವರಿಗೋಸ್ಕರವೇ ಹೊಸದಾಗಿ ಏರ್ಪಡಿಸಿದ್ದ ನೀಳ ಸೋಫಾಗಳತ್ತ ಬೊಟ್ಟು ಮಾಡಿ, "ಕೂತ್ಕೊಳ್ಳಿ" ಎಂದ ; ಕಾರ್ಡನ್ನು ಒಳಗೆ ಕೊಟ್ಟು ಬಂದ, ಎಲ್ಲ ಹೊಸ ವ್ಯವಸ್ಥೆ. ಹೊರ ಹಜಾರದ ಮೂಲೆಯಲ್ಲಿ ಟೆಲಿಫೋನ್ ಆಪರೇಟರ್ ಕುಳಿತಿದ್ದಳು. ಇಂಟರ್ ಕಾಮ್‌ನಲ್ಲಿ ಸದ್ದು, ಮಾತು, ಸಹಕಾರ್ಯದರ್ಶಿ ಎಂದು ಬಾಗಿಲ ಬಳಿ ಹೆಸರು ಹಲಗೆ ಇದ್ದ ಇನ್ನೊಂದು ಕೊಠಡಿಯಿಂದ ಕೇಳಿ ಬರುತ್ತಿದ್ದುವು. ನಕುಲದೇವ್ ಯಾವನೋ ಧುರೀಣನ ಮೇಲೆ ರೇಗಿ ಕೂಗಾಡುತ್ತಿದ್ದ. ಭೇಟಿಗೆ ಬಂದವನೂ ಏರು ದನಿಯಲ್ಲಿ ಮಾತನಾಡಲು ಯತ್ನಿಸಿದ. ನಕುಲದೇವ್ ಗರ್ಜಿಸಿದ :

"ಇದೇನು ನಿಮ್ಮ ಜುಜುಬಿ ರಾಜ್ಯದ ವಿಧಾನಮಂಡಲ ಅಂದ್ಕೊಂಡ್ರಾ ? ಸ್ವರ ತಗ್ಗಿಸಿ !"

ಎರಡು ನಿಮಿಷ ಮೌನ. ಬೇರೊಂದು ಸ್ವರ ಮೆಲುದನಿಯಲ್ಲಿ ಅಂದಿತು :

"ಅವರಿಗೆ ಇನ್ನೊಂದು ಅವಕಾಶ ಕೊಟ್ಟು ನೋಡಬಾರದೆ ?"

"ಇದು ಮೂರನೇ ಅವಕಾಶ. ನನಗೆ ನೇರ ಉತ್ತರಬೇಕು, ಸ್ಪಷ್ಟ ಉತ್ತರ ಬೇಕು. ಉಡಾಫೆ ಮಾತಿನಿಂದ ಪ್ರಯೋಜನವಿಲ್ಲ."

ಸಂಬಂಧಪಟ್ಟವನು ಕೂಗಾಡಿದ :

"ನೀವು ಹಟ ತೊಟ್ಟರೆ ಬಂಡಾಯ ಇದಿರಿಸ್ಬೇಕಾದೀತು."

"ಬಂಡಾಯ ! ಕಂಡಿದೀನಿ. ನೀವು ಹೊರಡಬಹುದು."

ಹೊರಬಂದವನು ಸೌದಾಮಿನಿಗೆ ಹೊಸಬ. 'ಜುಜುಬಿ ರಾಜ್ಯ' ಎಂದಿದ್ದರಲ್ಲ ನಕುಲದೇವ್? ನಡುವಯಸ್ಕ. ಚಹರೆಯಿಂದ, ಈಶಾನ್ಯ ಪ್ರಾಂತದವನಿರಬೇಕು ಎನಿಸಿತು ಕಿಷ್ಕಿಂಧೆಯ ಮುಖ್ಯಮಂತ್ರಿಗೆ.

ಒಬ್ಬೊಬ್ಬರಾಗಿ ಬೇರೆ ಮೂವರು ಬಂದರು. ಕಾರ್ಡುಗಳು ಒಳ ಹೋದುವು. ನಾಲ್ಕನೆಯ ವ್ಯಕ್ತಿ ಬಾಬ್ ಕತ್ತರಿಸಿದ ಲಲನೆ.

"ಒಂದೇ ನಿಮಿಷ, ಕೇವಲ ಒಂದು ನಿಮಿಷ" ಎಂದಳು ದ್ವಾರಪಾಲಕನೊಡನೆ. ಮುಖದ ಯಾವ ಸ್ನಾಯುವನ್ನೂ ಮಿಸುಕಿಸದೆ ಆತನೆಂದ :

"ಕ್ಷಮಿಸಿ. ಸಂಜೆ ಬನ್ನಿ."

ಆಕೆ ಬಂದ ದಾರಿ ಹಿಡಿದಳು.

ನಕುಲದೇವರ ಕೊಠಯಿಂದ ಈಗ ಬೇರೆ ಧ್ವನಿಗಳ ಸಂವಾದ.

ಅಧ್ಯಕ್ಷರ ಕೊಠಡಿಯೂ ಹೆಸರು ಹಲಗೆಯೂ ಸೌದಾಮಿನಿ ಕುಳಿತಲ್ಲಿಗೆ ಕಾಣಿ ಸುತ್ತಿದ್ದುವು. ಮುಚ್ಚಿದ ಬಾಗಿಲು—ಜವಾನನಿಲ್ಲ. ದ್ವಾರದ ಮೇಲ್ಗಡೆ ಗೋಡೆ ಯಲ್ಲಿ ಮೊಳೆಗಳನ್ನು ಆಧರಿಸಿ ನಿಂತಿತ್ತು ಗಾಂಧೀಜಿಯ ದೊಡ್ಡ ಚಿತ್ರ.

ಒಳಗಿನ ಸಂಭಾಷಣೆಯ ಮಧ್ಯೆ ಎರಡು ಮಿನಿಟುಗಳಿಗೊಂದರಂತೆ ಫೋನ್ ಫೂತ್ಕಾರ. ಪರಿಚಿತ "ಹಲ್ಲೋ."

ನಿನ್ನೆ ತನ್ನನ್ನು ಇದಿರ್ಗೊಂಡಿದ್ದ ವ್ಯಕ್ತಿಯನ್ನು ಕಾಣಲು ಕಾಯುವ ಸ್ಥಿತಿ ಬಂತೆ ತನಗೆ ?— ಎಂದು ಸೌದಾಮಿನಿಗೆ ವಿಸ್ಮಯ.

ಒಳಗಿನಿಂದ ಒಬ್ಬ ಹೊರ ಬಂದೊಡನೆ ಜವಾನ, 'ಇನ್ನ ನೀವು' ಎನ್ನುವಂತೆ ಸೌದಾಮಿನಿಯತ್ತ ಬೊಟ್ಟು ಮಾಡಿದ. ಸೌದಾಮಿನಿಯ ದಿಲ್ಲಿ ಪ್ರಭಾವದ ಬಗ್ಗೆ ಅದ್ಭುತ ಚಿತ್ರವನ್ನು ಕಲ್ಪಿಸಿಕೊಂಡಿದ್ದ ಪರಶುರಾಮ ಸ್ವಲ್ಪ ವಿಷಣ್ಣನಾಗಿ ಮುಖ್ಯ ಮಂತ್ರಿಯತ್ತ ನೋಡುತ್ತ ಎದ್ದು ನಿಂತ. "ನೀನು ಕೂತ್ಕೊ" ಎಂದಳು ಮುಖ್ಯ ಮಂತ್ರಿ, ಬ್ರೀಫ್‌ಕೇಸನ್ನು ಅವನಿಂದ ಪಡೆದು.

ಗರ್ಜಿಸಿದ ರೇಗಾಡಿದ ನಕುಲದೇವ್ ಒಳಗಿರಲಿಲ್ಲ. ಆತ ಚಂಗನೆದ್ದು ಕೈ ಕುಲುಕಿ ಸೌದಾಮಿನಿಯನ್ನು ತನ್ನ ಮಗ್ಗುಲು ಕೊಠಡಿಗೆ ಒಯ್ದ. ಇಂಟರ್‌ಕಾಮ್ ನಲ್ಲಿ "ಎರಡು ಕಾಫಿ" ಎಂದ.

"ನೋಡಿದಿಯಾ ಕಾರ್ಯಾಲಯ ಈಗ ಹೇಗೆ ಕಾಣಿಸ್ತಿದೆ ?"

"ಆಳುವ ಪಕ್ಷದ ಗುಂಡಿಗೆ ಎಂದರೆ ಹೀಗೆ ಕೆಲಸ ಮಾಡಬೇಕು!"

"ದೇವಿಯನ್ನು ಸ್ವಲ್ಪ ಕಾಯಿಸಿದೆ."

"ರುಬ್ಬುಗುಂಡು ಶಬ್ದ ಕೇಳಿಸ್ತಿತ್ತಲ್ಲ, ಮಜವಾಗಿತ್ತು."

"ಅಸ್ಸಾಂ ಪ್ರಾಂತ ಘಟಕದ ಕಾರ್ಯದರ್ಶಿ. ಶುದ್ಧ ನಾಲಾಯಕ್."

"ನನ್ನ ಹೆಸರು ಲಾಯಕ್ ಲಿಸ್ಟಿನಲ್ಲಿದೆಯೊ ?"

"ರಾಷ್ಟ್ರದಲ್ಲೀ ನೀನು ಮಾಣಿಕ್ಯ. ನೀನು ಯೋಗಾಸನ ಮಾಡೋದನ್ನ ನೋಡಬೇಕೂಂತಿತ್ತು. ಅದಕ್ಕೋಸ್ಕರವೆ ಬೆಳಗ್ಗೆ ನಾನು ಬೇಗನೆ ಎದ್ದೆ."

"ಆಸೆ ಬುರುಕ ! ನಿಜ ಎಂದರೆ, ಪೀಠಸ್ಥಳಾದ ಮೇಲೆ ಮೊದಲಿನಷ್ಟು ಕ್ರಮ ಬದ್ಧವಾಗಿ ಯೋಗಾಸನ ಆಗ್ತಿಲ್ಲ."

"ಛೆ ! ಛೆ ! ವೇಳಾಪಟ್ಟಿಗೆ ತಪ್ಪಬಾರದು—ಯಾವತ್ತೂ. ಅಲ್ದೆ, ಬಾಬಾಜಿ ಅಂದಿದ್ರು ನಿನ್ನ ರಹಸ್ಯ ಇರೋದು ಯೋಗಾಸನದಲ್ಲಿ ಅಂತ."

ಲೇಹ್ಯದ ವಿಷಯ ಇವನಿಗೆ ತಿಳಿಯದು ; ತಾನು ಬಾಯಿಬಿಡಬಾರದು

ಎಂದುಕೊಂಡು ಸೌದಾಮಿನಿ, ಬರಿದೆ ನಕ್ಕಳು. ಮೋಹಕವಾಗಿ. ನಕುಲದೇವ್ ಸೌದಾಮಿನಿಯ ಭುಜದ ಮೇಲೆ ಕೈ ಇರಿಸಿದ. ತುಟಿಗಳ ಮೋಹಕನಗೆ ಬಿರಿಯುವಂತೆ ಮಾಡಿದ.

ಹಲಗೆವಕ್ಷಸ್ಥಲಕ್ಕೆ ಟಕ್‌ಟಕ್ ಎಂದು ಬಡೆದು, ಅಪ್ಪಣೆ ದೊರೆತ ಬಳಿಕ, ಕಾಫಿ ಫ್ಲಾಸ್ಕ್ ತಂದ ಹುಡುಗನನ್ನು ಜವಾನ ಒಳಗೆ ಬಿಟ್ಟ.

"ಭಲೆ ಖಿಲಾಡಿ ನೀವು."

"ಹಿಂದಿಯಲ್ಲಿ ಖಿಲಾಡಿ ಅಂದರೆ ಕ್ರೀಡಾಪಟು."

"ನಮ್ಮದರಲ್ಲೂ ಧ್ವನಿ ಅದೇ. ಕ್ರೀಡೆ ಯಾವುದಾದರೇನು ?"

"ನೀನು ಟೆನ್ನಿಸ್ ಆಡೋದನ್ನು ನೋಡಬೇಕಲ್ಲ ?"

"ನೋಡಿಯೇ ನೋಡ್ತೀರಿ. ಮೊದಲು ದಿಲ್ಲಿಯಲ್ಲಿ ಕಿಷ್ಕಿಂಧೆಗೊಂದಿಷ್ಟು ಒಳ್ಳೆಯ ಜಾಗ ಕೊಡಿ. ದೊಡ್ಡ ಕಿಷ್ಕಿಂಧಾ ಭವನ ಕಟ್ಟಿಸ್ತೀನಿ. ಕಂಟ್ರಾಕ್ಟರನ್ನು ನೀವೇ ಗೊತ್ಮಾಡ್ಕೊಡಿ. ಈಗಿರುವ ಕುಟೀರ ನೋಡಿದೀರಲ್ಲ ? ಅವಮಾನ, ಅವಮಾನ !"

"ಅರ್ಜಿ ಕೊಟ್ಟು ಹೋಗು."

"ಹೂಂ."

"ಅಂದ ಹಾಗೆ ಮಿನಿ, ನಿನ್ನ ಪ್ರಾಂತದಲ್ಲಿ ಪಕ್ಷದ ಸಮಿತಿಯನ್ನು ಪುನಃ ರಚಿಸಬೇಕು. ಒಬ್ಬ ವ್ಯಕ್ತಿ ಎರಡೂ ಸ್ಥಾನಗಳಲ್ಲಿ ಇರಬಾರದು. ನಮಗೆ (ನಿನಗೆ+ನನಗೆ) ಅನುಕೂಲವಾಗಿರೋ ಒಬ್ಬ ಧುರೀಣನ ಹೆಸರು ಹೇಳು."

"ಯೋಚಿಸಿದೀನಿ. ಕೃಷ್ಣಪ್ರಸಾದ್ ಆ ಸ್ಥಾನಕ್ಕೆ ಯೋಗ್ಯ ಮನುಷ್ಯ."

"ನಿನ್ನ ಐ. ಸಿ. ಎಸ್. ನವನಿಗೆ ಕಾಗದ ಸಿದ್ಧ ಮಾಡಿದೀಯ ?"

"ಬ್ರೀಫ್ ಕೇಸಿನಲ್ಲಿದೆ."

"ಚೌಗುಲೆಯನ್ನ ಇಲ್ಲಿ ಇವತ್ತು ರಿಲೀವ್ ಮಾಡ್ತಾರೆ. ಬೆಳಗ್ಗೆಯೇ ಆ ಕೆಲಸ ಮಾಡಿದೆ."

"ಜಾಣಪ್ಪಗೊಂದು ಗವರ್ನರ್ ಪದವಿ ?"

"ಅಧ್ಯಕ್ಷರ ಜತೆ ಪ್ರಸ್ತಾಪ ಮಾಡು. ಮುಂದಿನ ವ್ಯವಸ್ಥೆ ನನ್ನ ಜವಾಬುದಾರಿ. ಇನ್ನೊಂದು ವಾರದಲ್ಲಿ ಅವನು ಕೇರಳದಲ್ಲಿರ್ತಾನೆ. ಭಿನ್ನಮತೀಯರು ಅಂಟಿಕೊಳ್ಳೋದಕ್ಕೆ ಆಮೇಲೆ ಯಾರೂ ಇರೋದಿಲ್ಲ...ಬಜೆಟ್ ಸಿದ್ಧಗೊಳಿಸೋದಕ್ಕೆ ಮುಂಚೆ ನಿನ್ನ ಅರ್ಥಮಂತ್ರಿಯನ್ನೂ ಅರ್ಥಕಾರ್ಯದರ್ಶಿಯನ್ನೂ ಇಲ್ಲಿಗೆ ಕಳಿಸು. ಯೋಜನಾ ಆಯೋಗದ ಜತೆ ಅವರು ಸಮಾಲೋಚನೆ ನಡೆಸಲಿ."

"ಚೌಗುಲೆಯ ಮೊದಲನೇ ಕೆಲಸವೇ ಅದು."

"ಅವನು ನಾಳೆ ಪೂರ್ವಾಹ್ನ ನಿನ್ನನ್ನು ಕುಟೀರದಲ್ಲಿ ಕಾಣ್ತಾನೆ. ಆಮೇಲೆ ವಿಮಾನ ಏರ್ತಾನೆ."

"ಐ.ಸಿ.ಎಸ್.ನವನಿಗೆ ಫೋನ್ ಮಾಡಿದಿಯಾ ?"

"ಬೆಳಗ್ಗೇನೆ ಮಾಡ್ದೆ."

"ಫೈನ್."

"ನೀವಲ್ಲವೆ ನನ್ನ ಗುರು ? ನಿಮ್ಮ ಗುಣದ ಸ್ವಲ್ಪ ಅಂಶವಾದರೂ ಶಿಷ್ಯೆಯಲ್ಲಿ ಇರಬೇಡವೆ ?"

"ಇವತ್ತು ಸಂಜೆ ಪ್ರಧಾನಿಯವರನ್ನ ಕಾಣ್ತೇನೆ."

"ನಾನು ಬಂದಿರೋ ವಿಷಯ—"

"ಹೇಳ್ತೇನೆ. ಪಕ್ಷದ ನಿಧಿಗೆ ನಿನ್ನ ರಾಜ್ಯದ ವಂತಿಗೆ ಎಷ್ಟು ಅನ್ನೋದನ್ನ ನೀನು ವಾಪಸಾಗೋದಕ್ಕೆ ಮುಂಚೆ ತಿಳಿಸ್ತೀನಿ."

ನಕುಲದೇವನೂ ಸೌದಾಮಿನಿಯೂ ಮುಂದುಗಡೆಯ ಕೊಠಡಿಗೆ ಬಂದಿದ್ದರು. ಆ ತನಕ ತಡೆಹಿಡಿದಿದ್ದ ಫೋನ್ ಕರೆಗಳು ಒಂದಾದ ಮೇಲೊಂದು ಬಂದುವು.

"ನೀವು ದುಡಿಯೋದನ್ನು ನೋಡೋದೇ ಒಂದು ಮಹಾನ್ ಅನುಭವ."

"ನಾಳೆ ಸಂಪಾದಕರ ಜತೆ ಯಾವ ಭಾಷೇಲಿ ಮಾತಾಡ್ತೀಯಾ ?"

"ಇಂಗ್ಲಿಷಾದರೆ ಇಂಗ್ಲಿಷು. ಹಿಂದೂಸ್ಥಾನಿಯಾದರೆ ಹಿಂದೂಸ್ಥಾನಿ."

"ಹತ್ತು ಜನ ಸಂಪಾದಕರನ್ನು ಕರೆಯೋದಕ್ಕೆ ಹೇಳಿದೇನೆ. (ಮೇಜಿನ ಮೇಲೆ ಅತ್ತಿತ್ತ ಹುಡುಕಿ)ತಗೋ ಪಟ್ಟಿ. ನಿನ್ನ ಕುಟೀರದ ಮನುಷ್ಯನೂ ನಾಳೆ ಬೆಳಗ್ಗೆ ಅವರಿಗೆ ಫೋನ್ ಮಾಡಲಿ."

ಅಧ್ಯಕ್ಷರು ಬಂದಿದಾರೆ–ಎಂದು ಇಂಟರ್‌ಕಾಮ್ ತಿಳಿಸಿತು. ನಕುಲದೇವ್ ಅವರೊಡನೆ ಮಾತನಾಡಿದ. "ಸೌದಾಮಿನಿ ಬಹೆನ್ ಭೇಟಿಗೆ ಬರ್ತಿದ್ದಾರೆ" ಎಂದ.

"ಯಾರಾದರೂ ಹೋಗಿ ಹಾಳು ಹರಟೆಗೆ ಕೂತ್ಕೊಳ್ಳೋದಕ್ಕೆ ಮೊದಲೇ ನೀನು ಅವರ ಮುಂದೆ ಪದ್ಮಾಸನ ಹಾಕು" ಎಂದು ನುಡಿದು ಸೌದಾಮಿನಿಯನ್ನು ಎಬ್ಬಿಸಿದ.

"ಚೌಗುಲೆಗೆ ಕಾಗದ ?"

"ಬೆಳಗ್ಗೆ ನೀನೇ ಕೊಡು."

"ಈ ಗಲಾಟೇಲಿ ನಿಮ್ಮನ್ನು ಇವತ್ತು ಪುನಃ ನೋಡೋದಕ್ಕೆ ಆಗುತ್ತೊ ಇಲ್ಲವೊ ?"

"ರಾತ್ರಿ ಕುಟೀರಕ್ಕೆ ಫೋನ್ ಮಾಡ್ತೇನೆ."

"ನಿನ್ನೆಯ ಆಯಾಸ ಪೂರ್ತಿ ಪರಿಹಾರವಾಗಿಲ್ಲ. ಇವತ್ತು ಬೇಗನೆ ಮಲಕೊಳ್ತೇನೆ."

ನಕುಲದೇವ್ ಪರೀಕ್ಷಕ ನೋಟದಿಂದ ಸೌದಾಮಿನಿಯ ಕಣ್ಣುಗಳನ್ನು ನೋಡಿದ. ಆ ಕ್ಷಣದಲ್ಲಿ ಅವು ಮುಚ್ಚಿದ್ದುವು.

ಹೊರಗೆ ಬಂದ ಸೌದಾಮಿನಿ ಕಿಕ್ಕಿರಿದು ನೆರೆದಿದ್ದ ಜನರನ್ನು ಕಂಡಳು.

ಪರಶುರಾಮನನ್ನು ಅಲ್ಲಿಯೇ ಕೂತಿರುವಂತೆ ಸನ್ನೆ ಮಾಡಿದಳು. ಆಗಲೇ ಇಬ್ಬರನ್ನು ಜವಾನ ಒಳಗೆ ಕಳಿಸಿದ್ದ. ಕಿಷ್ಕಿಂಧೆಯ ಮುಖ್ಯಮಂತ್ರಿಯತ್ತ ಅವನು ಲಕ್ಷ್ಯ ಹರಿಸಲೆ ಇಲ್ಲ.

ಇದು ತನ್ನದೇ ಮನೆ ಎನ್ನುವಂತೆ ಸೌದಾಮಿನಿ ಅಧ್ಯಕ್ಷರ ಸಮ್ಮುಖಕ್ಕೆ ತೇಲಿ ಹೋದಳು.

"ಬಾ" ಎಂದು ಅಧ್ಯಕ್ಷ ಕರೆಯುತ್ತಿದ್ದಂತೆ ಸೌದಾಮಿನಿ ಪಾದಗಳಿಗೆ ನಮಿಸಿದಳು. ಕೊಠಡಿಯ ನೆಲವನ್ನು ಆವರಿಸಿತ್ತು ದಪ್ಪನೆಯ ಹಾಸುಗೆ. ಗೋಡೆಗಳುದ್ದಕ್ಕೂ ಒರಗಲು, ದಿಂಬುಗಳು.

"ಏನು ಹೇಳ್ತಿದೆ ನಮ್ಮ ಕಿಷ್ಕಿಂಧೆ ? ಮಳೆ_ಬೆಳೆ ?"

"ತಜ್ಞರ ಪ್ರಕಾರ ಇದು ಸುಭಿಕ್ಷದ ವರ್ಷ."

"ತಜ್ಞರು ಇರಲಿ. ನೀನು ಪರಂಪರೇನ ಬಿಡಬೇಡ. ಜ್ಯೋತಿಷ್ಕರನ್ನೂ ಕೇಳು."

"ತಾವು ನನ್ನ ತಂದೆ ಸಮಾನ. ತಮ್ಮಲ್ಲಿ ಹೇಳದೆ ಇದ್ದೇನಾ ? ಆಗಲೇ ಜ್ಯೋತಿಷ್ಕರನ್ನು ಕೇಳಿದ್ದಾಯಿತು. ಸುಭಿಕ್ಷದ ವರ್ಷ ಅಂತ ಅವರೇ ಹೇಳಿದ್ರು."

"ಜಾಣಪ್ಪ ಚೆನ್ನಾಗಿದಾರಾ ?"

"ಇದಾರೆ. ಎರಡು ರಾಜ್ಯಪಾಲ ಹುದ್ದೆಗಳು ಖಾಲಿಯಾಗ್ತಿವೆ."

"ಹೌದು. ಕಾಶ್ಮೀರ ಮತ್ತು ಕೇರಳ."

"ಕಾಶ್ಮೀರದ ಚಳಿ ತಡಕೊಳ್ಳೋದು ಅವರಿಂದ ಆಗಲಾರದು. ಕೇರಳ ವಾಸಿ. ಅವರು ರಾಜ್ಯಪಾಲರಾಗಿ ಹೋಗೋದು ನಮ್ಮ ಪಕ್ಷದ ಹಿತದ ದೃಷ್ಟಿಯಿಂದ ಮುಖ್ಯ. ನಕುಲಧೇವ್‌ಜಿ ತಮಗೆಲ್ಲ ಹೇಳಿರಬಹುದು."

"ಹ್ಞ ಹ್ಞ ಹೇಳಿದಾರೆ. ಪ್ರಧಾನಿಯವರ ಜತೆ ಮಾತಾಡ್ತೇನೆ. ಅವರು ಒಪ್ತಾರೆ."

"ನನ್ನ ಎದೆಯ ಮೇಲಿಂದ ದೊಡ್ಡ ಭಾರ ಇಳಿಸಿದ ಹಾಗಾಯ್ತು."

"ಸೌದಾ ಬೇಟಿ, ಒಂದು ವಿಷಯ ನಿನಗೆ ಗೊತ್ತಿದೆಯೊ ಇಲ್ವೊ ? ಕಿಷ್ಕಿಂಧೆಗೆ ಪಕ್ಷದ ಮುಖ್ಯಸ್ಥೆಯಾಗಿ ನಿನ್ನನ್ನು ಕಳಿಸೋದಕ್ಕೆ ಕೆಲವರ ಪ್ರಬಲ ವಿರೋಧವಿತ್ತು. ಅವರಲ್ಲೊಬ್ಬ ನಿನ್ನ ನಕುಲದೇವ್. ಅವನಿಗೆ ತಿಳಿಯಿ ಹೇಳ್ದೆ. ಉಳಿದವರ ಬಾಯಿ ಮುಚ್ಚಿಸ್ದೆ. ನಿನ್ನ ಸಾಮರ್ಥ್ಯದ ವಿಷಯದಲ್ಲಿ ನನಗೆ ಸಂಪೂರ್ಣ ವಿಶ್ವಾಸವಿತ್ತು; ನನ್ನದು ಸರಿಯಾದ ತೀರ್ಮಾನ ಅನ್ನೋದು ಈಗಾಗಲೇ ಜಗಜ್ಜಾಹೀರಾಗಿದೆ."

"ತಮ್ಮ ಪಿತೃವಾತ್ಸಲ್ಯಕ್ಕಾಗಿ ನಾನು ಚಿರಋಣಿ."

"ಯಾವುದೇ ಸಂಘಟನೆಗಾಗಿ, ಮಹೋದ್ದೇಶಕ್ಕಾಗಿ, ಹಣ ಸಂಗ್ರಹಿಸೋದು ತಪ್ಪಲ್ಲ. ಮಹಾತ್ಮಾಜಿಯೂ ಅದನ್ನು ಮಾಡ್ತಿದ್ದರು. ಆದರೆ ನಾವು ಧನಪಿಶಾಚಿಗಳಾಗಬಾರದು. ಜನತೆ ನಮ್ಮ ಕೈಗಿತ್ತಿರುವ ಅಧಿಕಾರದ ದುರುಪಯೋಗ ಸಲ್ಲದು. ಸೇವೆ ಸ್ತುತ್ಯ. ಸೇವನೆ ಅನಾಚಾರ."

"ತಮ್ಮ ಪ್ರವಚನ ಕೇಳ್ತಾ ಇದ್ದರೆ, ಅಧಿಕಾರ ತ್ಯಜಿಸಿ ಇಲ್ಲಿಗೇ ಬಂದು ಬಿಡೋಣ ಅನಿಸ್ತದೆ."

"ಜನ ಹಿತವೇ ಪಕ್ಷದ ಹಿತ. ಪಕ್ಷಕ್ಕೆ ಒಳ್ಳೆಯದಾಗಲೀಂತ ನಿನ್ನನ್ನು ಅಲ್ಲಿಗೆ ಕಳಿಸಿದೆವು. ಅಧಿಕಾರ ಸೂತ್ರ ನಿನ್ನ ಕೈಗೆ ಬಂತು. ಈಗ ಪಕ್ಷದ ಹಿತ ಜನಹಿತ ಎರಡನ್ನೂ ನೀನು ಸಾಧಿಸಬೇಕು."

ಸೌದಾಮಿನಿಗೆ ಅನಿಸಿತು. ಈ ವಿಚಾರ ಸರಳವಲ್ಲ ; ಗಾಢ, ಗೂಢ. ಜಗ ದಲಪುರದ ಬಾಬಾಜಿಯ ಪ್ರಸ್ತಾಪ ಬಂದಿರಲಿಲ್ಲ. ಬಾಬಾಗೆ ಈ ಅಧ್ಯಕ್ಷನೂ ಬೇಕು ಮಹಾ ಕಾರ್ಯದರ್ಶಿಯೂ ಬೇಕು. ಬಾಲ್ಯದಲ್ಲಿ ಕಲಿತಿದ್ದ ಒಂದು ಹಾಡಿನ ಸಾಲು ನೆನಪಾಯಿತು : 'ಯಾರಿಗೆ ಯಾರುಂಟು ಅರಿವಿನ ಸಂಸಾರ ?' ಜತೆಯಲ್ಲೆ ಸ್ವರ ಪಡೆಯಲು ಚಡಪಡಿಸಿತು : 'ಯಾರು ಹಿತವರು ನಿನಗೆ ಈ ಮೂವರೊಳಗೆ ?' ಮುಖ್ಯಮಂತ್ರಿಯ ಒಳದನಿ ನುಡಿಯಿತು : ಪ್ರಧಾನಿಯನ್ನೂ ಸೇರಿಸಿದರೆ 'ಈ ನಾಲ್ವರೊಳಗೆ' ಆಗ್ತದೆ ಏನೇ ಇರಲಿ ; ಮಹದಾಸೆಯ ಕಡಲಿಗೆ ತನ್ನನ್ನು ತೇಲಿ ಬಿಟ್ಟವರು ಧರ್ಮೇಂದರ್ ಬಾಬಾ. ಅವರಿಗೆ ತನ್ನ ನಿಷ್ಠೆ ಅಚಲ.

ಅವಳ ಮೌನ ಅಧ್ಯಕ್ಷರಿಗೆ ಇಷ್ಟವಾಯಿತು.

"ಕಿಷ್ಕಿಂಧೆಯಲ್ಲಿ ಮದ್ಯಪಾನ ನಿಷಿದ್ಧ ಅಲ್ಲವೆ ?"

"ಈಗ ನಿಷಿದ್ಧ. ಆದರೆ ಇನ್ನು ಎಷ್ಟು ಕಾಲ ಹೀಗಿರುತ್ತೋ ಹೇಳಲಾರೆ. ನೆರೆಯ ಎರಡು ರಾಜ್ಯಗಳಲ್ಲಿ ಹೆಂಡ ಹರೀತಿರೋದರಿಂದ .."

"ನನಗೆ ಗೊತ್ತು. ನಮ್ಮ ಭೂಮಿಯಲ್ಲಿ ಇದು ಹಲವು ಸಹಸ್ರ ವರ್ಷ ಹಳೆಯ ಚಾಳಿ. ನಮ್ಮ ಪೂರ್ವಜರು ಕುಡೀತಿದ್ದ ಸೋಮರಸ ಏನು ಅಂದ್ಕೊಂಡೆ? ಯಜ್ಞ ಯಾಗಾದಿಗಳಲ್ಲಿ ದೇವ ದೇವತೆಗಳಿಗೂ ಸೋಮರಸ ಅರ್ಪಿಸ್ತಿದ್ದರು. ನಾವು ಹೋಗ್ತಿರೋದು ಮುಂದಕ್ಕೋ ಹಿಂದಕ್ಕೋ ಗೊತ್ತಾಗ್ತಿಲ್ಲ."

ಇಂಟರ್‌ಕಾಮ್ ಬಸ್ ಮಾಡಿತು.

"ಚಾಚಾಜಿ, ಚೌಧುರಿ ಸಾಹೆಬ್ ಬಂದಿದ್ದಾರೆ. ಕಳಿಸ್ಲಾ ?"

"ಹ್ಞ."

ಅಧ್ಯಕ್ಷರೆಂದರು :

"ಸರಿ, ಬೇಟಿ. ಮುಂದಿನ ಸಲ ನೀನು ದಿಲ್ಲಿಗೆ ಬಂದಾಗ ಭೇಟಿಯಾಗೋಣ. ಯಾವತ್ತಾದರೊಮ್ಮೆ ನಾನೇ ಕಿಷ್ಕಿಂಧೆಗೆ ಬಂದರೂ ಬಂದೆ."

"ಆ ದಿವಸ ನನ್ನ ಜೀವನದ ಮಹಾ ಸುದಿನವಾಗ್ತದೆ."

ನಮಸ್ಕರಿಸುತ್ತ ಅವಳೆದ್ದು ಹೊರಟಳು. ಚೌಧುರಿ ಬರುತ್ತಿದ್ದ. ಕುತೂ ಹಲದಿಂದ ನೋಡಿದ. ಆಕೆ ಯಾರು ಎಂಬುದನ್ನು ನಕುಲದೇವ್ ಅಗಲೆ ಹೇಳಿದ್ದ. ಹೋಗುವ ಗಂಟೇನು ?

"ನಮಸ್ತೆ" ಎಂದ.

ಮುಗುಳುನಗುತ್ತ ವಂದನೆ ಸ್ವೀಕರಿಸಿ, 'ಯಾರೋ ಉತ್ತರಪ್ರದೇಶದವನಿರ ಬೇಕು' ಎಂದುಕೊಳ್ಳುತ್ತ, ಸೌದಾಮಿನಿ ಮುಂದಕ್ಕೆ ಹೆಜ್ಜೆ ಇಟ್ಟಳು. ಕುಳಿತೋ ನಿಂತೋ ತಮ್ಮ ಸರದಿ ಕಾಯುತ್ತಿದ್ದವರು ಇನ್ನೂ ಇದ್ದರು. ಅವರೆಡೆಯಿಂದ ಪರಶುರಾಮ ಎದ್ದು ಬಂದು ಬ್ರೀಫ್‌ಕೇಸ್ ಪಡೆದುಕೊಂಡ.

ಕೆಳಗೆ ದ್ವಾರಪಾಲಕ "ಸೆಲ್ಯೂಟ್, ಮಾತಾಜಿ," ಎಂದ. ಸೌದಾಮಿನಿಯ ಮನಸ್ಸಿನಲ್ಲಿ 'ಜಾಣ ಮುದಿಯ' ಎಂಬ ಮೆಚ್ಚುಗೆಯ ಪದ ರೂಪುಗೊಂಡಿತು.

ಟ್ಯಾಕ್ಸಿಯವನಿಗೆ ಆಕೆ ಅಂದಳು :

"ಕನ್ನಾಟ್ ಪ್ಲೇಸಿಗೆ ಹೋಗು."

ಕೈಯಲ್ಲಿ ಕಾಸಿಲ್ಲದಿರುತ್ತಿದ್ದ ಹಳೆಯ ದಿನಗಳಲ್ಲೂ ಆ ಸ್ಥಳ ಸೌದಾಮಿನಿಗೆ ಇಷ್ಟವಾಗಿತ್ತು.

ಪರಶುರಾಮ ಬೆರಗುಗಣ್ಣಿನಿಂದ ದಿಲ್ಲಿ ವೈಭವದ ತುಣುಕನ್ನು ನೋಡಿದ.

ಸಂಜೆಯಾಗುತ್ತಿದ್ದಂತೆ ಟ್ಯಾಕ್ಸಿ ಕುಟೀರದ ಮುಂದೆ ನಿಂತಿತು. ಮಾನ್ಯ ಪ್ರವಾಸಿ ಒಳ ಹೋದೊಡನೆ ಫೆರ್ನಾಂಡೀಸ್ ಬಂದು ಎಷ್ಟನ್ನೋ ಬರೆಸಿದ. ಎಷ್ಟನ್ನೋ ಕೊಟ್ಟ. ವೃತ್ತಿ ಬಾಂಧವನ ಆ ಚಟುವಟಿಕೆಯಲ್ಲಿ ಪರಶುರಾಮ ತಲೆ ಹಾಕಲಿಲ್ಲ. ಫೆರ್ನಾಂಡೀಸ್ ಕಾಣೆಸಿದೊಡನೆ ಆತನಿಗೆ ಹೇಳಿ, ಸ್ನಾನದ ಮನೆ ಸೇರಿದ. "ಈಗಲೇ ಹೀಗೆ. ಕಡು ಬೇಸಗೆಯಲ್ಲಿ ಇಲ್ಲಿ ಜನ ಬೆಂದು ಹೋಗೋದೇ ಖಚಿತ," ಎಂದುಕೊಳ್ಳುತ್ತ.

* * *

ಪರಶುರಾಮ ಮೈಯಿಂದ ಇದ್ದ ಮತ್ತು ಇಲ್ಲದ ಕೊಳೆ ತೊಳೆಯುತ್ತಿದ್ದಂತೆ ಸೌದಾಮಿನಿ ಸ್ವಲ್ಪ ಅಡ್ಡಾದಳು. ಪಾದಗಳು ಜುಮು ಜುಮು ಎಂದುವು. ಕೆನ್ನೆಯ ಒಂದು ಬದಿ ಟಿಪಟಿಪನೆ ಸಿಡಿಯ ತೊಡಗಿತು. ಚಿಂತೆ ಅಡರಿತು. ಯಾಕೆ ಹೀಗೆ ? ಯಾರಾದರೂ ಡಾಕ್ಟರನ್ನು ಕರೆಸೋಣವೆ ? ಇಲ್ಲಿರುವವರು ಮಾತಾಡಿಕೊಳ್ಳುತ್ತಾರೆ. ವೈದ್ಯ ಪರೀಕ್ಷೆಗೆ ಸೌದಾಮಿನಿ ಒಳಗಾಗುವುದೆಂದರೇನು ? ತನ್ನ ಆರಾಧಕರು ವ್ಯಥಿತರಾಗಬಹುದು. ಆದರೆ ತನ್ನನ್ನು ಇಷ್ಟಪಡದವರು ? ಸುದ್ದಿಗೆ ಉಪ್ಪು ಖಾರ ಹಚ್ಚಬಹುದು.

'ಬಾಬಾಜಿ' 'ಬಾಬಾಜಿ' ಎಂದು ಸಣ್ಣನೆ ನರಳಿದಳು. ಅವರೆಂದಿದ್ದರು : "ಕಾಮನೆಗಳನ್ನು ಹತೋಟಿಯಲ್ಲಿಟ್ಟುಕೋ. ಇಲ್ಲದೆ ಹೋದರೆ, ಈ ವರ್ಷ ಇಲ್ಲಿ ನೀನು ಗಳಿಸಿದ್ದೆಲ್ಲ ವ್ಯರ್ಥವಾಗ್ತದೆ." ಬಹಳ ದಿನ ಆ ಎಚ್ಚರಿಕೆಯನ್ನು ತಾನು ಮರೆತಿರಲಿಲ್ಲ. ಆದರೆ, ಕ್ರಮೇಣ ? ಬಾಬಾಜಿ ತನಗೆ ಹೆದ್ದಾರಿ ಹಾಕಿ ಕೊಟ್ಟರು. ಆದರೆ ತಾನು ?

ಜವಾನ ಬಂದು ಕೇಳಿದ :

"ದೀಪ ಹಾಕಲಾ ಮಾತಾಜಿ ?"

"ಹೂಂ."

ದೀಪಗಳು ಕಣ್ಣನ್ನು ಚುಚ್ಚಲಿಲ್ಲ. ಆದರೂ ಎವೆ ಮುಚ್ಚಿಕೊಳ್ಳಬೇಕು ಎನಿಸಿತು. ಪರಶುರಾಮ ಸ್ನಾನ ಮುಗಿಸಿ ಬರುವುದರೊಳಗೆ ತಾನು ಎದ್ದು ಕುಳಿತಿರಬೇಕು. ಸಿತಾರಾ ? ಊಹೂಂ. ಸರಿಯಲ್ಲ. ಬಾ, ಪರೀಕ್ಷಿಸಿ ನೋಡುತ್ತೇನೆ ಎಂದರೆ ಪರಶುರಾಮ ಬೇಡ ಎನ್ನುತ್ತಾನೆಯೆ ? ಫೆರ್ನಾಂಡೀಸ್ ? ಛೆ ! ಛೆ ! ಹೀಗಾದರೆ ಇಲ್ಲಿರುವ ಎಲ್ಲರನ್ನೂ ನಾನು ತೂಗಲು ಹೊರಟೇನು.... ಇದು ಒಳ್ಳೆಯದಲ್ಲ. ತನಗೆ ಇದರಿಂದ ಒಳ್ಳೆಯದಾಗುವುದಿಲ್ಲ, ಅಲ್ಲ–ಕೆಡುಕಾಗುತ್ತದೆ.

ಆಕೆ ಮಂಚದಿಂದಿಳಿದು ಸೋಫಾದ ಮೇಲೆ ಕುಳಿತಳು. ಆರು ಗಂಟೆಯ ಸುದ್ದಿ ಪ್ರಸಾರ ತಪ್ಪಿಹೋಗಿತ್ತು. ಒಂಭತ್ತು ಗಂಟೆಯದನ್ನು ಮರೆಯದೆ ಕೇಳಬೇಕು. ನಾಳೆ ಬೆಳಗ್ಗೆ ಚೌಗುಲೆ ಬರಬಹುದು. ಮಧ್ಯಾಹ್ನ ಸಂವಾದ ಭೋಜನ, ಸಂಪಾದಕರೊಂದಿಗೆ. ಒಂದಿಷ್ಟು ಟಿಪ್ಪಣಿ ತಯಾರಿಸಬೇಕು. ಶುಚಿರ್ಭೂತನಾದ ಪರಶುರಾಮ ಬಂದ.

"ಪರಶು, ಫೆರ್ನಾಂಡೀಸ್‌ಗೆ ಆ ಸಂಪಾದಕರ ಪಟ್ಟಿ ಕೊಡು–ಬ್ರೀಫ್‌ಕೇಸಿನಲ್ಲಿದೆ. ಅವನನ್ನು ಒಳಗೆ ಕರಿ."

ಫೆರ್ನಾಂಡೀಸ್ ಬಂದು ವಿನೀತನಾಗಿ ನಿಂತ. ಸಂವಾದ ಭೋಜನ—ಅದೂ 'ಹೊಟೆಲ್ ಅಶೋಕ'ದಲ್ಲಿ—ವಿಷಯ ತಿಳಿದು, ಅವನಿಗೆ ಖುಶಿಯಾಯಿತು.

"ಆರೆಂಟು ಪತ್ರಕರ್ತರ ಪರಿಚಯ ನನಗಿದೆ, ಮಾತಾಜಿ."

"ಆ ಪಟ್ಟಿ ಓದಿ."

"ಇವರೆಲ್ಲ ಸಂಪಾದಕರು. ನನಗೆ ಅಪರಿಚಿತರು."

ಸೌದಾಮಿನಿ ನಕ್ಕಳು.

"ನಾವೆಲ್ಲ ಹನ್ನೆರಡು ಘಂಟೆಗೆ ಅಶೋಕದಲ್ಲಿರಬೇಕು. ಹತ್ತು ಘಂಟೆಗೆ ಆಮಂತ್ರಿತರ ಮನೆಗಳಿಗೆ ಫೋನ್ ಹಾಕಿ ಲಂಚ್ ನೆನಪು ಮಾಡಿ. ಪ್ರತಿಯೊಬ್ಬರ ಕಾರ್ಯಾಲಯಕ್ಕೆ ಒಂದು ಗಂಟೆಗೆ ಸರಿಯಾಗಿ ಟ್ಯಾಕ್ಸಿ. ಸ್ವಯಂಸೇವಕರು ಬೇಕಾಗಬಹುದು. ನಕುಲದೇವ್‌ರಿಗೆ ಫೋನ್‌ಮಾಡಿ ಸಹಾಯ ಕೇಳಿ. ಈಗ ಪಕ್ಷದ ಕಚೇರೀಲಿ ಇದ್ದಾರೆ."

ಫೆರ್ನಾಂಡೀಸ್ ಫೋನ್ ಮಾಡಿದ. ಉತ್ತರ ಬಂತು ;

"ನಿಮ್ಮ ಚೀಫ್ ಮಿನಿಸ್ಟರ್ ಅಲ್ಲಿಲ್ಲವಾ ?"

"ಇದಾರೆ."

"ಅವರನ್ನು ಕೊಡು."

ಸೌದಾಮಿನಿ ಎದ್ದು ಬಂದಳು.

"ಏನೂ ಪರವಾಗಿಲ್ಲ. ಹತ್ತು ಲಕ್ಷುರಿ ಟ್ಯಾಕ್ಸಿ ಕರೆತರೋದು ವಾಪಸು ಬಿಡೋದು ಎಲ್ಲ ನನ್ನ ಜವಾಬ್ದಾರಿ."

"ನೀವೂ ಬರ್ತೀರ ?"

"ನಾನು ಬಂದರೆ ಭಾರತವಾಗ್ತದೆ. ಸೌದಾಮಿನಿ ಒಬ್ಬರಿದ್ದರೆ ಮಾತ್ರ ಅದು ಕಿಷ್ಕಿಂಧೆ."

"ಥ್ಯಾಂಕ್ಸ್ ದೇವ್‌ಜಿ."

ಸೌದಾಮಿನಿ ಫೆರ್ನಾಂಡೀಸ್‌ಗೆ ಅಂದಳು ;

"ಸಿತಾರಾ ನಾಳೆಯೂ ಮಧ್ಯಾಹ್ನವೇ ಬರ್ತಾಳೊ ?"

"ಸಿ.ಎಂ. ಇಲ್ಲಿ ಇರೋವರೆಗೂ ಫುಲ್ ಟೈಮ್ ದುಡೀಬೇಕೂಂತ ಹೇಳಿದೀನಿ."

"ಬುದ್ಧಿ ಓಡಿಸಿದೀರಿ, ಪರವಾಗಿಲ್ಲ. ಈ ಒಂದಿಷ್ಟು ಟಿಪ್ಪಣಿ ಬರಕೊಳ್ಳಿ."

"ಭೋಜನ ಸಂವಾದಕ್ಕೆ ಟಿಪ್ಪಣಿ. ನಾಳೆಯ ದಿನಾಂಕ ಹಾಕಿ."

ಟಿಪ್ಪಣಿ ಪುಸ್ತಕದೊಡನೆ ಫೆರ್ನಾಂಡೀಸ್ ಸಿದ್ಧನಾದ.

"ಬರಕೊಳ್ಳಿ. ಆದಿಕವಿ ವಾಲ್ಮೀಕಿ ಅಮರಗೊಳಿಸಿರುವ ನಾಡು ಕಿಷ್ಕಿಂಧೆ. ದೇಶದಲ್ಲೇ ಅತಿ ದೊಡ್ಡದಾದ ಜಲವಿದ್ಯುತ್ ಸ್ಥಾವರ. ಕಾರ್ಮಿಕ ಗಲಾಟೆಗಳಿಲ್ಲ. ಔದ್ಯಮಿಕ ರಂಗದ ಶಾಂತಿ, ಹೇರಳ ನೀರು–ವಿದ್ಯುತ್ ಇವೆಲ್ಲ ಹೊಸ ಉದ್ಯಮ ಸ್ಥಾಪಿಸ ಬಯಸುವವರಿಗೆ ಸ್ವಾಗತ ಕೋರುತ್ತವೆ. ಚಿತ್ರಾವತಿಯ ಉಕ್ಕಿನ ಕಾರ್ಖಾನೆ ಜಗತ್ಪಸಿದ್ಧ. ರೇಷ್ಮೆ ಉತ್ಪಾದನೆಯಲ್ಲಿ ನಮಗೆ ಮೊದಲ ಸ್ಥಾನ."

ಬರೆದುಕೊಳ್ಳುತ್ತಿದ್ದ ಫೆರ್ನಾಂಡೀಸ್‌ಗೆ ಥಟ್ಟನೆ ನೆನಪಾಯಿತು.

"ಒಂದು ಸಂಗತಿ ನಾನು ನಿವೇದಿಸಬೇಕು."

"ಏನದು ?"

"ದೇಶೀಯ ವಿದೇಶೀಯ ಪ್ರವಾಸಿಗಳು ಬಂದರೆ ಕೊಡೋದಕ್ಕೇಂತ ಕಿಷ್ಕಿಂಧೆಯ ವಾರ್ತಾ ಇಲಾಖೆ ಒಂದು ಬ್ರೋಷೂರ್ ಮಾಡಿ ಕಳಿಸಿದೆ."

"ಅದೆಂಥಾ ಬ್ರೋಷೂರ್ ? ತಂದು ತೋರಿಸಿ."

ದಾಸ್ತಾನು ಕೊಠಡಿಯಲ್ಲಿ ಸೊಗಸಾದ ವರ್ಣಚಿತ್ರಗಳಿದ್ದ ಪುಸ್ತಿಕೆಗಳ ರಾಶಿಯೇ ಇತ್ತು. ಹತ್ತಿಪ್ಪತ್ತನ್ನು ಕೈಗೆತ್ತಿಕೊಂಡು ಉಳಿದ ರಾಶಿಗೆ ಅಲ್ಲೇ ಇದ್ದ ಗೋಣಿ ತಟ್ಟನ್ನು ಹೊದಿಸಿದ.

ಸೌದಾಮಿನಿ ಪುಟ ಮಗುಚಿದಳು. ಕಿಷ್ಕಿಂಧೆಯ ಮೊದಲ ವಾರ್ಷಿಕೋತ್ಸವದ ದಿನ ಪ್ರಕಟಿಸಿದ್ದು, ರಕ್ಷಾಕವಚದ ಮೇಲೆ ತನ್ನ ವರ್ಣಚಿತ್ರವಿದ್ದ ಇನ್ನೊಂದು ಬ್ರೋಷೂರ್ ಮಾಡಿಸಬೇಕು. ಸದ್ಯಕ್ಕೆ ಇದು ಸಾಕು.

"ಪರಶು, ನೋಡೊ ಸ್ವಲ್ಪ."

ಅವನು ನೋಡಿದ. ಅಭಿಪ್ರಾಯ ವ್ಯಕ್ತಪಡಿಸಲಿಲ್ಲ.

ಮುಖ್ಯಮಂತ್ರಿ ಕೇಳಿದರು :

"ಇಲ್ಲಿನ ಪತ್ರಿಕೆಗಳಿಗೆ ಇದರ ಹಂಚಿಕೆಯಾಗಿಲ್ಲ ತಾನೆ ?"

ಉತ್ತರವೀಯಲು ಫೆರ್ನಾಂಡೀಸ್ ಅನುಮಾನಿಸಿದ.

"ಹೇಳಿ. ನಿಮ್ಮನ್ನೇನೂ ಗಲ್ಲಿಗೆ ಹಾಕೋದಿಲ್ಲ."

"ಆ ಬಗ್ಗೆ ಇಲಾಖೆಯಿಂದ ನಿರ್ದೇಶ ಬಂದಿಲ್ಲ."

"ಒಳ್ಳೇದೇ ಆಯ್ತು. ನಾಳೆ ಆ ಸಂಪಾದಕ ಮಹಾಶಯರಿಗೆ ಇವನ್ನು ಹಂಚೋಣ. ದಿನಾಂಕ ಇದೆಯೊ ನೋಡಿ."

"ಇಲ್ಲ. ವಾರ್ಷಿಕೋತ್ಸವ ಎಂದಷ್ಟೆ ಅಚ್ಚಾಗಿದೆ."

"ಸರಿ. ನಾನು ಹೇಳಿದ ಟಿಪ್ಪಣಿ ಈಗ ಟೈಪ್ ಮಾಡ್ತೀರೊ? ನಾಳೆ ಸಿತಾರಾ ಬಂದ್ಮೇಲೆ ಟೈಪ್ ಮಾಡಿಸ್ತೀರೊ ?"

"ತಮಗೆ ಹೇಗೆ ಬೇಕೋ ಹಾಗೆ."

"ನಾಳೆ ಸಾಕು. ಇನ್ನು ನೀವು ಮನೆಗೆ ಹೋಗಿ. ಮಕ್ಕಳು ಮರಿ ಎಷ್ಟು ಜನ ?"

"ಒಂದೇ. ಹೆಣ್ಣು."

"ಇನ್ನೊಂದು ಗಂಡಾಗ್ತದೇಂತ ಆಸೆ ಪಟ್ಕೊಂಡು ಮೋಸ ಹೋಗ್ಬೇಡಿ."

ಪ್ರಯತ್ನ ಆಗಲೇ ನಡೆದಿತ್ತು. ಅದನ್ನು ತಿಳಿಸುವುದು ಹೇಗೆ ?

ಸೌದಾಮಿನಿಯೇ ಅಂದಳು :

"ಒಂದು ಸಂಸಾರಕ್ಕೆ ಒಂದೇ ಮಗುವಿರಬೇಕು. ಏನು ಹೇಳ್ತೀಯಾ ಪರಶು?"

ಅವನಿಗೆ ನಾಚಿಕೆ. ಸುಮ್ಮನಿದ್ದ.

"ಮಕ್ಕಳೇ ಇಲ್ಲದವರಿಗೆ ಫಸ್ಟ್ ಪ್ರೈಜ್ ; ಒಂದು ಹೆತ್ತವರಿಗೆ ಸೆಕೆಂಡ್ ಪ್ರೈಜ್. ಇಂಥದೊಂದು ಘೋಷಣೆ ಹೊರಡಿಸಬೇಕು."

ಅಷ್ಟು ಹೇಳಿ ಮುಖ್ಯಮಂತ್ರಿ ನಕ್ಕ ಮೇಲೆ ಉಳಿದವರೂ ಫಕಫಕ ಅಂದರು. ಇಣಿಕಿ ನೋಡಿದ ಶ್ರೀಪಾದ ವಿಷಯ ಸ್ಪಷ್ಟವಾಗದಿದ್ದರೂ ಸಣ್ಣನೆ ನಕ್ಕ.

"ಆಚಾರ್ರ ಕುಟುಂಬ ಎಷ್ಟು ದೊಡ್ಡದು ?"

ಫೆರ್ನಾಂಡೀಸ್ ಉತ್ತರವಿತ್ತ :

"ಐವರು ಮಕ್ಕಳು. ಎಲ್ಲ ಹುಡುಗೀರು ದೊಡ್ಡವಳಿಗೀಗ ಹದಿನೆಂಟು."

"ಆಚಾರ್, ಈಚೆಗೆ ಬನ್ನಿ."

ಶ್ರೀಪಾದ ಎರಡು ಹೆಜ್ಜೆ ಒಳಗೆ ಬಂದು ಕೈಮುಗಿದ. ಮುಖ್ಯಮಂತ್ರಿ ಅಂದರು :

"ನೀವೇನೂ ಯೋಚಿಸ್ಬೇಡಿ, ಎಲ್ಲರಿಗೂ ವಿದ್ಯಾಭ್ಯಾಸ ಕೊಡಿಸಿ, ಯಾರಾದರೂ ವರದಕ್ಷಿಣೆ ಬೇಕು ಅಂದರೆ ಪೋಲೀಸರಿಗೆ ದೂರು ಕೊಡಿ."

ಫೆರ್ನಾಂಡೀಸ್ ಕೈಗಡಿಯಾರ ನೋಡಿದ,

"ಟೈಮ್ ಎಷ್ಟಪ್ಪ ?" ಎಂದು ಕೇಳಿದರು ಮುಖ್ಯಮಂತ್ರಿ,

"ಎಂಟೂಕಾಲು."

"ನೀವಿನ್ನು ಹೊರಡಿ. ನಾಳೆ ನಿಮ್ಮ ಅತ್ಯುತ್ತಮ ಉಡುಪು ತೊಟ್ಕೊಂಡು ಬನ್ನಿ. ಎಲ್ಲಿ ಆಚಾರ್‍ರು ? ನಮ್ಮನ್ನು ಉಪವಾಸ ಕೆಡವಬೇಕೂಂತ ಮಾಡಿದೀರೋ ?"

"ಊಟ ರೆಡಿ ಅಂತ ಹೇಳೋದಕ್ಕೆ ಬಂದೆ."

ರಾತ್ರಿಗೆ ಸರಳ ಊಟ—ಎಂದು ತಿಳಿಸಿದ್ದ ಪರಶುರಾಮ.

ಸರಳವಾದರೂ ಅಚ್ಚುಕಟ್ಟಾಗಿತ್ತು.

"ಕುಡಿಯೋದಕ್ಕೆ ಬಾದಾಮಿ ಹಾಲು ಕೊಠಡಿಯಲ್ಲಿಟ್ಟಿದೀನಿ," ಎಂದ ಶ್ರೀಪಾದ.

* * *

ಕುಟೀರದಲ್ಲಿ ಬೆಳಕು ಹರಿಯಿತು. ಸೌದಾಮಿನಿ ಯೋಗಾಸನ ನಿರತಳಾದಳು. ಪತ್ರಿಕಾವಾಚನ. 'ನಾಳೆ ತನ್ನ ವಿಷಯ ಯಾರದರೂ ಒಂದಿಷ್ಟು ಬರೆಯಲೂ ಬಹುದು.' ಉಪಾಹಾರದ ಬಳಿಕ ಚೌಗುಲೆ ಫೋನ್ ಮೂಲಕ ಕೇಳಿದ :

"ಸಿ. ಎಂ. ರ ಭೇಟಿಗೆ ಬರಬಹುದೆ ?"

"ಬರಲಿ" ಎಂದಳು ಸೌದಾಮಿನಿ. "ಬರಬಹುದಂತೆ," ಎಂದು ತಿಳಿಸಿದ ಪರಶುರಾಮ.

ಬಂದವನು ಸೌಮ್ಯ ಮುಖಮುದ್ರೆಯ, ಆದರೆ ಗಡಸು ಹುಬ್ಬಿನ, ತೀಕ್ಷ್ಣ ನೋಟದ ದೃಢ ಕಾಯ. ಮುಖ್ಯಮಂತ್ರಿಯನ್ನು ನೆಟ್ಟ ದೃಷ್ಟಿಯಿಂದ ನೋಡಿದ. ಕಿಷ್ಕಿಂಧೆಯ ಸಿ. ಎಸ್. ಆಗಿ ತಾನು ನಿಯುಕ್ತನಾದ ದಾಖಲೆ ಪತ್ರ ತೋರಿಸಿದ. ಸೌದಾಮಿನಿ ಹಳಬನಿಗೆ ತಾನು ಬರೆದದ್ದನ್ನು ಹೊಸಬನಿಗೆ ಓದಲು ಕೊಟ್ಟಳು. "ಈ ಕಾಗದ ಐಸಿಎಸ್ ಗೆ ಕೊಡಿ," ಎಂದಳು.

"ಇಲ್ಲಿ ನನ್ನ ಅಗತ್ಯವಿಲ್ಲವಾದರೆ ಇವತ್ತೇ ಹೊರಡ್ತೇನೆ."

"ಆಗಲಿ. ವಿಮಾನ ನಿಲ್ದಾಣಕ್ಕೆ ಗೃಹ ಕಾರ್ಯದರ್ಶಿ ಬರ್‍ತಾರೆ," ಎಂದು ಹೇಳಿ, ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿಯತ್ತ ನೋಡಿದಳು. (ಕಲ್ಯಾಣ ನಗರಕ್ಕೆ ಫೋನ್ ಮಾಡಲು ಸೂಚನೆ.)

"ಇವತ್ತು ಸ್ಥಳೀಯ ಸಂಪಾದಕರ ಭೇಟಿ ; ನಾಳೆ ಬೆಳಗ್ಗೆ ಪ್ರಧಾನಿಯವರನ್ನು ಕಾಣ್ತೇನೆ."

"ನಕುಲದೇವ್‌ಜಿ ಹೇಳಿದಾರೆ."

"ನಾಳೆ ಸಂಜೆ ನಾನೂ ಕಲ್ಯಾಣನಗರದಲ್ಲಿರ್‍ತೇನೆ."

"ಹಾಗಾದರೆ ಬರಲಾ ?"

"ಅಲ್ ದಿ ಬೆಸ್ಟ್."

"ಥ್ಯಾಂಕ್ಯೂ."

* * *

ಸೌದಾಮಿನಿ ಅಶೋಕ ಹೋಟೆಲಿಗೆ ಸ್ವಲ್ಪ ಮಟ್ಟಿಗೆ ಮಾತ್ರ ಪರಿಚಿತೆ. ಪರಶುರಾಮ ದಿಲ್ಲಿ ವೈಭವದ ಇನ್ನೊಂದು ತುಣುಕನ್ನು ಅಲ್ಲಿ ಕಂಡು ದಂಗಾದ.

ಸಣ್ಣ ಔತಣ ಕೂಟಕ್ಕೆ ಹೇಳಿ ಮಾಡಿಸಿದಂತಿದ್ದ ವಿಶಾಲ ಕೊಠಡಿ.

ರಾಷ್ಟ್ರಪಕ್ಷದ ಮಹಾ ಕಾರ್ಯದರ್ಶಿ, ಅಭಾಸವಾಗಬಾರದೆಂದು ತನ್ನ ಪರಿಚಯದ ಪತ್ರಿಕಾಮಿತ್ರನೊಬ್ಬನನ್ನು ಕಳಿಸಿದ್ದ. ಆ ಯುವಕ ಫೆರ್ನಾಂಡೀಸ್ ಪರಶುರಾಮ್, ಸಿತಾರಾ ಜತೆ ಸೇರಿ ಬರ ತೊಡಗಿದ ಸಂಪಾದಕರನ್ನು ಸ್ವಾಗತಿಸಿದ. ಸೌದಾಮಿನಿ ಮತ್ತು ಸಂಪಾದಕರ ಪರಸ್ಪರ ಪರಿಚಯಕ್ಕೆ ಕೈಕುಲುಕಾಟಕ್ಕೆ ಕಾರಣನಾದ. ಆತನಿಂದ ಸೂಚನೆ ಬಂದೊಡನೆ 'ಬೇರಾ' ಗಳು ಪ್ರತಿಯೊಬ್ಬರ ಇಷ್ಟಕ್ಕನುಸಾರವಾಗಿ ಪಾನೀಯಗಳನ್ನು ತಂದರು. ನೆರವಾಗಲೆಂದು ಬಂದಿದ್ದ ಪತ್ರಕರ್ತನಿಗೆ ಸಂಪಾದಕರ ಸಾಲಿಗೆ ಭಡತಿ ದೊರೆಯಿತು.

ಸೌದಾಮಿನಿ ಕೋಕಾಕೋಲ ತರಿಸಿದಳು. ಇನ್ನು ಸಂವಾದ ಮುಗಿಯುವ ತನಕ ಸಿಬ್ಬಂದಿ ಗಪ್ ಚುಪ್. ಮುಕ್ಕಾಲು ಗಂಟೆ ಕಳೆದ ಮೇಲೆ ಮೇಲೆ ಭೋಜನ ಆರಂಭ.

ಸಂಪಾದಕರಿಗೆಲ್ಲ ನಿರಾಭರಣ ಸುಂದರಿಯಾದ ಮುಖ್ಯಮಂತ್ರಿ ಕೌತುಕದ ವ್ಯಕ್ತಿ. ಒಬ್ಬ ಯೋಚಿಸಿದ : ಸಮ್ರಾಟ ದೇವಾನಾಂಪ್ರಿಯ ಆ ಬಗೆಯ ಸಿರಿವಂತ ಭೋಜನ ಸವಿದಿರಬಹುದು. ಅಂಥವನು ಆತ್ಮ ರಕ್ಷಣೆಗಾಗಿ ಸೈನ್ಯವಿಟ್ಟುಕೊಂಡು, "ಇನ್ನು ಅಹಿಂಸೆ ! ಎಲ್ಲರೂ ಅಹಿಂಸೆ ಪಾಲಿಸಬೇಕು !" ಎಂದದ್ದು ಸಹಜವೇ.

ಇನ್ನೊಬ್ಬನಿಗೆ ಅನಿಸಿತು :

"ನೋಟಕ್ಕೆ ಯೋಗಿನಿಯ ಹಾಗಿದಾಳೆ. ಬೇಟಕ್ಕೆ ? ಅಂತೂ ಈಕೆಯೂ ದೇವಾನಾಂಪ್ರಿಯೆ ಯಾಕಾಗಬಾರದು ?"

ವಾರ್ತಾ ಛಾಯಾ ಚಿತ್ರಕಾರನೊಬ್ಬ ಬಂದು ಯಾರ ಅನುಮತಿಯನ್ನೂ ಪಡೆಯದೆ ಒಳನುಗ್ಗಿ ಹಲವು ಚಿತ್ರಗಳನ್ನು ತೆಗೆದ. "ಕುಡಿಯೋದಕ್ಕೆ ಏನಾದರೂ ?" ಎಂದು ಫೆರ್ನಾಂಡೀಸ್ ಕೇಳಿದ. "ಕ್ಷಮಿಸಿ. ಇನ್ನೊಂದು ದಿವಸ." ಎಂದು ಹೇಳಿ ಛಾಯಾಚಿತ್ರಕಾರ ಸ್ಕೂಟರ್ ಹತ್ತಿದ.

ಫೆರ್ನಾಂಡೀಸ್ ಪರಶುರಾಮನ ಸೂಚನೆಯಂತೆ ಕಿಷ್ಕಿಂಧೆ ಬ್ರೋಷೂರ್‌ಗಳನ್ನು

ವಿತರಣೆ ಮಾಡಿದ. ಊಟ ಮುಗಿಸಿದ್ದ ಕೆಲವರು ಕಣ್ಣು ಹಾಯಿಸಿದರು. ಬೇರೆ ಕೆಲವರು ಕೋಟಿನ ಜೇಬಿನೊಳಕ್ಕೆ ಅದನ್ನು ಇಳಿಬಿಟ್ಟರು,

"ಮುಖ್ಯಮಂತ್ರಿಜಿ, ನೋಡಿದರೇ ನಂಬಿಕೆ ಅಂತ ಮಾತಿದೆ. ಈಗ ನಿಮ್ಮನ್ನು ನೋಡಿದೆವು. ಕಿಷ್ಕಿಂಧೆಗೆ ಶಕ್ತಿಶಾಲಿನಿಯಾದ ಮುಖ್ಯಮಂತ್ರಿ ಇದ್ದಾರೆ ಎಂಬುದು ಖಚಿತವಾಯಿತು. ಕಿಷ್ಕಿಂಧೆಯನ್ನು ಒಮ್ಮೆ ನಾವು ಸಂದರ್ಶಿಸಿದರೆ ನಿಮ್ಮ ರಾಜ್ಯಕ್ಕೆ ಲಾಭ," ಎಂದ ಸಂಪಾದಕರಲ್ಲೊಬ್ಬ.

"ಎಲ್ಲ ಏರ್ಪಾಟೂ ಮಾಡ್ತೇವೆ. ನೀವೆಲ್ಲ ಒಂದು ತಂಡವಾಗಿ ಬಂದರೂ ಒಪ್ಪಿಗೆ. ಒಬ್ಬೊಬ್ಬರಾಗಿ ಸಕುಂಟುಬರಾಗಿ ಬಂದರೂ ಸರಿ,"

"ಪತ್ರಿಕೆಗಳ ಪರವಾಗಿ ಸ್ಟಾಫಿನವರು ತಂಡವಾಗಿ ಹೋಗೋದು ಮೇಲು."

"ಹಾಗೇ ಆಗಲಿ, ನಿಮಗೊಂದು ಸುದ್ದಿ ಇದೆ."

"ಹೇಳೋಣಾಗಲಿ."

"ದಿಲ್ಲಿಯಲ್ಲಿ ಕಿಷ್ಕಿಂಧಾ ಭವನ ನಿರ್ಮಾಣವಾಗಲಿದೆ. ನಿವೇಶನ ಕೇಳಲಿದ್ದೇವೆ,"

ಒಬ್ಬ ಸಂಪಾದಕನೆಂದ :

"ಆಮೇಲೆ ಸಂವಾದ ಭೋಜನಕ್ಕೆ ಹೋಟೆಲ್ ಅಶೋಕ ಬೇಕಾಗೋದಿಲ್ಲ !"

"ಅಶೋಕ ಮಹಾ ಸಮ್ರಾಟ. ಅವನಿಗೆ ಯಾವಾಗಲೂ ನಾವು ನಮಿಸ್ತೇವೆ."

"ನಿಮಗೆ ಅಧ್ಯಾತ್ಮದಲ್ಲಿ ಆಸಕ್ತಿ ಇದೆಯಂತೆ."

"ಅರ್ಥಶಾಸ್ತ್ರದಿಂದ ಅಧ್ಯಾತ್ಮದವರೆಗೆ."

"ನಿಮ್ಮ ಟೆನ್ನಿಸ್ ಪ್ರಾವೀಣ್ಯದ ಬಗ್ಗೆ ಓದಿದ್ದೇವೆ."

"ಈ ಮುಖ್ಯಮಂತ್ರಿಗೆ ಜಂಭ ಅಂತ ಭಾವಿಸಬೇಡಿ. ಟೆನ್ನಿಸ್, ಯೋಗಾಸನ ಎರಡೂ ನನಗಿಷ್ಟ."

ಸಿಗರೇಟುಗಳು, ಪೈಪುಗಳು ಪುಡ್ಡಿಂಗ್, ಐಸ್‌ಕ್ರೀಮ್....ಫೆರ್ನಾಂಡೀಸ್ ಪರಶುರಾಮ, ಸಿತಾರಾರಿಗೆ ಹಸಿವು. ಕೆಲ ಸಂಪಾದಕರಿಗೆ ಆ ಹುಡುಗಿಯ ಬಗೆಗೂ ಆಸಕ್ತಿ.

....ಕಿಷ್ಕಿಂಧೆಯ ಔದ್ಯೋಗೀಕರಣ, ನಿರ್ಯಾತ ಸಾಮಗ್ರಿಗಳ ಉತ್ಪಾದನೆ,....

ಸೌದಾಮಿನಿ : "ಕುಟುಂಬ ಯೋಜನೆ ಇದೆ: ಜನಸಂಖ್ಯಾಸ್ಫೋಟ ಇನ್ನೂ ಆಗಿಲ್ಲ,"

ಸಂಪಾದಕರಲೊಬ್ಬ : "ರಾಷ್ಟ್ರಪಕ್ಷ ಬಿಟ್ಟವರು ಉದ್ಧಾರವಾಗಲಿಲ್ಲ."

ಸೌದಾಮಿನಿ : "ಸಮತಾ ಪಕ್ಷವಂತೂ ಹೆಚ್ಚು ಕಮ್ಮಿ ನಿರ್ನಾಮವಾಗಿದೆ,"

ಇನ್ನೊಬ್ಬ : "ಪ್ರಧಾನಿಯನ್ನು ಕಂಡಿರಾ ?

ಸೌದಾಮಿನಿ ; "ನಾಳೆ ಬೆಳಗ್ಗೆ ಕಾಣ್ತೇನೆ,"

"ಬ್ರೇಕ್‌ಫಾಸ್ಟ್‌ಗೆ ಕರೆದಿದಾರಾ ?"

"ಅದು ಸ್ಟೇಟ್ ಸೀಕ್ರೆಟ್,"

ಅಲೆಅಲೆಯಾಗಿ ನಗೆ. ಅದರೊಡನೆ ಭೋಜನ ಸಂವಾದದ ಮುಕ್ತಾಯ.

ಸೌದಾಮಿನಿ ಆಮಂತ್ರಿತರನ್ನು ಕೈ ಕುಲುಕಿ ಬೀಳ್ಕೊಟ್ಟಳು. ಕಾರುಗಳು ಅದಲು ಬದಲಾದುವು. ಯಾರೂ ಆಕ್ಷೇಪಿಸಲಿಲ್ಲ.

ಸೌದಾಮಿನಿ ಫೆರ್ನಾಂಡೀಸ್‌ಗೆ ನಿರ್ದೇಶ ನೀಡಿದ್ದಳು: "ಡ್ರೈವರುಗಳು, ಸ್ವಯಂ ಸೇವಕರು, ಸಿಬ್ಬಂದಿ ಎಲ್ಲರೂ ಇಲ್ಲಿಯೇ ಉಣ್ಣಬೇಕು. ನಾನು ಕುಟೀರಕ್ಕೆ ಹೋಗಿ, ವಾಹನ ವಾಪಸು ಕಳಿಸ್ತೇನೆ. ಬಿಲ್ ಇಸಕೊ. ಚೆಕ್ ಬರ್‍ತದೆ–ಅನ್ನು." ಅವರೆಲ್ಲರ ಭೋಜನವೂ ವಿಜೃಂಭಣೆಯಿಂದಲೇ ನಡೆಯಿತು.

ಕಿಷ್ಕಿಂಧೆಯ ಮುಖ್ಯಮಂತ್ರಿ ಕುಟೀರ ತಲುಪಿದ ಕೆಲ ಮಿನಿಟುಗಳಲ್ಲೆ ನಕುಲ ದೇವರ ಫೋನ್ ಬಂತು.

"ಅಭಿನಂದನೆ. ಸಂವಾದ ಬಹಳ ಸೊಗಸಾಗಿ ನಡೆಯಿತಂತೆ."

"ಯಾರು ಹೇಳಿದರು ಅಣ್ಣ ?"

"ಒಬ್ಬ ಸಂಪಾದಕ. ರಾಜಕೀಯ ಸರೋವರದಲ್ಲಿ ನೀನು ರಾಣಿ ಹಂಸವಂತೆ."

"ನಿಮ್ಮ ಕೃಪೆ."

"ನಾಳೆ ಪ್ರಧಾನಿಯ ಭೇಟಿ ಅವರ ಚೇಂಬರಿನಲ್ಲಿ. ಸರಿಯಾಗಿ ಹನ್ನೊಂದು ಗಂಟೆಗೆ."

"ಆಗಲಿ. ನಾನು ನಾಳೆಯೇ ಹೊರಡ್ತೇನೆ."

"ಹಾಗಾದರೆ ಮುಖತಃ ಇತ್ಯಾದಿ ಮುಂದಿನ ಸಲ ನೀನು ಬಂದಾಗ."

"ಚ್ಯುಪ್."

"ಚ್ಯುಪ್,"

* * *

ಮಾರನೆಯ ಬೆಳಗಿನ ಅತಿ ಪ್ರಮುಖ ದೈನಿಕದ ಸಂಪಾದಕೀಯ ಟಿಪ್ಪಣಿ ವಿಭಾಗದಲ್ಲಿ ಕಿಷ್ಕಿಂಧೆ ಇತ್ತು. ಇನ್ನೊಂದು ಪತ್ರಿಕೆಯಲ್ಲಿ ಚೌಕಟ್ಟಿನೊಳಗೆ ಸೌದಾಮಿನಿಯೇ ಮುಖ್ಯ ವಿಷಯ. ಒಳ್ಳೆಯದೊಂದು ಚಿತ್ರವಿತ್ತು, ಆಕೆಯದು. ಇದು ಪ್ರಧಾನಿಯ ಕಣ್ಣಿಗೆ ಬಿದ್ದಿರಬಹುದೆ ? ನಕುಲದೇವ್ ಖಂಡಿತ ನೋಡಿರುತ್ತಾರೆ. ಸೌದಾಮಿನಿಗೆ ತೃಪ್ತಿಯಾಯಿತು.

ಫೆರ್ನಾಂಡೀಸ್ ಪ್ರಮುಖ ಹಿಂದಿ ಪತ್ರಿಕೆಯೊಂದರ ಪ್ರತಿ ತಂದ. ಇಂಗ್ಲಿಷ್–ಹಿಂದಿಗಳಲ್ಲಿ ಮುಖ್ಯಮಂತ್ರಿ ಹೇಳಿದ್ದ ವಿಷಯಗಳು, ಬ್ರೋಷೂರ್‌ನಲ್ಲಿದ್ದ ಮಾಹಿತಿ ಎಲ್ಲ ಸೇರಿ ಮೂರು ಕಾಲಮುಗಳ ದೊಡ್ಡ ಲೇಖನವಾಗಿತ್ತು. ಚಿತ್ರ ಚಿಕ್ಕದು. ಅಷ್ಟು ಚೆನ್ನಾಗಿಯೂ ಇರಲಿಲ್ಲ. ಈ ಸಂಗತಿ ಮಾತ್ರ ಸೌದಾಮಿನಿಗೆ ತುಸು ಬೇಸರ

ಉಂಟು ಮಾಡಿತು. ಆದರೆ ಫೆರ್ನಾಂಡೀಸ್ ಹೇಳಿದ್ದ : "ಇದು ಅತ್ಯಧಿಕ ಪ್ರಸಾರವುಳ್ಳ ಹಿಂದೀ ದೈನಿಕ."

ಧೈರ್ಯದಿಂದ ಮತ್ತೂ ಒಂದು ಮಾತು ಸೇರಿಸಿದ :

"ಉತ್ತರ ಪ್ರದೇಶದಲ್ಲಿ, ಬಿಹಾರಿನಲ್ಲಿ ಮಾತಾಜಿ ಇನ್ನು ಮನೆಮಾತು."

"ಮುಂಬಯಿ ಪತ್ರಿಕೆಗಳಲ್ಲೂ ಲೇಖನಗಳು ಬಂದಿರಬಹುದು."

"ಸಾಮಾನ್ಯವಾಗಿ ಮುಂಬಯಿ ಪತ್ರಿಕೆಗಳ ರಾಜಧಾನಿ ವರದಿಗಾರರು ಇಂಥಾದ್ದನ್ನೆಲ್ಲ ಅನಾಮತ್ತಾಗಿ ಎತ್ತಿ ಪುಕ್ಕ ಬಾಲ ಸೇರಿಸಿ ತಮ್ಮ ಹೆಸರಲ್ಲಿ ಕಳಿಸಿಬಿಡ್ತಾರೆ."

....ಪರಶುರಾಮ್ ತಗ್ಗಿದ ಸ್ವರದಲ್ಲಿ ಹೇಳಿದ :

"ಹತ್ತೂಕಾಲಾಯಿತು. ಟ್ಯಾಕ್ಸಿ ಬಂದಿದೆ. ಬಾಡಿಗೇದ್ದಲ್ಲ. ನಕುಲದೇವ್‌ಜಿ ಕಳಿಸಿದ್ದು."

"ಹತ್ತೂವರೆಗೆ ಹೊರಟರೆ ಸಾಕಲ್ಲ ?" ಎಂದು ನುಡಿದು ಸೌದಾಮಿನಿ ಒಳಕೊಠಡಿಗೆ ಹೋದಳು, ನಿಲುವುಗನ್ನಡಿಯ ಮುಂದೆ ಹತ್ತು ಮಿನಿಟು ಕಳೆಯಲು. ಸೌಂದರ್ಯೋಪಾಸಕ ಪ್ರಧಾನಿಯ ದೃಷ್ಟಿಯಲ್ಲಿ ತಾನು ಹೇಗೆ ಕಾಣಿಸಬಹುದು ಎಂದು ಲೆಕ್ಕ ಹಾಕಿದಳು, ರೇಷ್ಮೆ ಖಾದಿಯ ಬೇರೆ ಸೀರೆಯುಟ್ಟ ಬಳಿಕ.

ಟ್ಯಾಕ್ಸಿ ಹೊರಟಿತು.

* * *

...ಬರಲು ಸೂಚನೆ. ತೆರೆದ ಬಾಗಿಲಿನ ಮೂಲಕ ಒಳಕ್ಕೆ, ದೊಡ್ಡ ಮೇಜಿನ ಬಳಿಗೆ ನಡೆದು ಮುಖ್ಯಮಂತ್ರಿ ಅಂದಳು:

"ನಮಸ್ತೆ."

ಅವರು ಎದ್ದು (ಎಂಥ ಹಿರಿತನ !), "ನಮಸ್ತೆ, ಬನ್ನಿ" ಎಂದು ಹೇಳಿ, ಕುಳಿತುಕೊಳ್ಳಲು ಆಸನ ಸೂಚಿಸಿದರು. ತಾವೂ ಆಸೀನರಾದರು.

ಕಾಲ ಟಿಕ್ ಟಿಕ್ ಎನ್ನುತಿತ್ತು. ಬಂದವಳ ಮೌನ ಸಹನೆಯಾಗದೆ ಪ್ರಧಾನಿ ಅಂದರು :

"ಮೆಮೊರಾಂಡಂ ಏನಾದರೂ ಇದೆಯ ?"

"ಜಾಣಪ್ಪನವರ ಬಗ್ಗೆ...."

"ಅದನ್ನು ಬಗೆಹರಿಸಿ ಆಯಿತು. ಅವರು ರಾಜ್ಯಪಾಲರಾಗಿ ಕೇರಳಕ್ಕೆ ಹೋಗ್ತಾರೆ. ಬೇರೆ ಮುಖ್ಯ ಕಾರ್ಯದರ್ಶಿಯನ್ನೂ ಕೊಟ್ಟಿದ್ದೇವೆ. ಇನ್ನೇನಾದರೂ ?"

"ಸರಕಾರೀ ಕಚೇರಿಗಳಿಗಾಗಿ ಸ್ಥಳ ಸಾಲದು. ಒಂದು ಕಾರ್ಯಸೌಧ ಕಟ್ಟಿಸಬೇಕೂಂತಿದ್ದೇವೆ. ಅದರ ಶಂಕು ಸ್ಥಾಪನೆಗೆ ತಾವು ದಯವಿಟ್ಟು ಒಪ್ಪಬೇಕು."

"ಯಾವಾಗ ?"

"ಮಳೆಗಾಲ ಮುಗಿದ ಮೇಲೆ."

"ಬೇಕಾದಷ್ಟು ಸಮಯ ಇದೆ. ಆರು ತಿಂಗಳು ಬಿಟ್ಟು ನೆನಪಿನ ಓಲೆ ಕಳಿಸಿ."

"ಧನ್ಯವಾದ. ಕಿಷ್ಕಿಂಧೆಗೆ ತಾವು ಕೆಲವು ದಿನಗಳ ಅಧಿಕೃತ ಭೇಟಿ ನೀಡಬೇಕೂಂತ ಸಂಪುಟ ಬಯಸ್ತದೆ."

"ಶಂಕುಸ್ಥಾಪನೆಗೆ ಬಂದಾಗ ರಾಜ್ಯದಲ್ಲಿ ಪ್ರವಾಸವನ್ನೂ ಮಾಡ್ತೇನೆ."

ಮತ್ತೆ ಕಾಲನ ಟಿಕ್ ಟಿಕ್.

ಪ್ರಧಾನಿಯೇ ಅಂದರು :

"ಪಕ್ಷದ ಕೆಲಸ ರಾಜ್ಯಾಡಳಿತ ಎರಡೂ ಸುಲಲಿತವಾಗಿ ನಡೆಯಬೇಕು. ಪಕ್ಷದ ಅಧ್ಯಕ್ಷರನ್ನು ಕಂಡಿರಿ, ಅಲ್ಲವೆ ?"

"ಹೌದು."

"ಗುಡ್. ಇವತ್ತೇ ಹೊರಡ್ತೀರಾ ?"

"ಹೌದು."

"ಹೋಗ್ಬನ್ನಿ. ನನ್ನ ಶುಭಾಶಯ."

"ಧನ್ಯಳಾದೆ."

ಮುಖ್ಯಮಂತ್ರಿ ಹೊರಬಂದೊಡನೆ ಆಪ್ತ ಕಾರ್ಯದರ್ಶಿ ಬಾಲವಾದ.

"ಮಹತ್ವದ ಎರಡು ಯೋಜನೆಗಳಿಗೆ ಅಸ್ತು ಎಂದಿದ್ದಾರೆ. ಕಿಷ್ಕಿಂಧೆಯಲ್ಲಿ ಈಗ ತಲೆನೋವಿನ ಯಾವ ಸಮಸ್ಯೆಗಳೂ ಇಲ್ಲವೆಂದು ಪ್ರಧಾನಿಯವರಿಗೆ ಸಂತೋಷ. 'ದೇಶದಲ್ಲಿ ನೀವು ಪ್ರಪ್ರಥಮ ಮಹಿಳಾ ಮಂತ್ರಿ. ಎಲ್ಲ ಕಣ್ಣುಗಳೂ ನಿಮ್ಮ ಮೇಲಿವೆ,' ಎಂದರು."

ಹೊರಗಿನ ದ್ವಾರದ ಬಳಿ ಫೆರ್ನಾಂಡೀಸ್ ಇದ್ದ. ಪರಶುರಾಮನ ಅಗಲಿದ ಮುಖ, ಮುಖ್ಯಮಂತ್ರಿಯ ಶಾಂತವದನ ಫೆರ್ನಾಂಡೀಸ್‌ಗೆ ಇಷ್ಟವಾದುವು.

"ಕುಟೀರದಲ್ಲಿ ಒಂದು ತಾಸಿದ್ದು ನೇರವಾಗಿ ವಿಮಾನ ನಿಲ್ದಾಣಕ್ಕೆ," ಎಂದ, ಮೆಲ್ಲನೆ.

"ಸರಿ" ಎಂದಳು ಮುಖ್ಯಮಂತ್ರಿ. ಅವಳೂ ಆಪ್ತ ಕಾರ್ಯದರ್ಶಿಯೂ ಬೇಗನೆ ಉಂಡರು. ಈ ದಿನವೂ ಶ್ರೀಪಾದ ಪಾಸ್. ಹೊರಡಲು ಅಣಿಯಾಗುತ್ತಿದ್ದಂತೆ ಶ್ರೀಪಾದ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ.

ಐದು ಮಕ್ಕಳ ತಂದೆಯಿಂದ ಸಂಬಳ ಹೆಚ್ಚಳಕ್ಕೆ ಪ್ರಾರ್ಥನೆ.

"ಈಗ ಎಲ್ಲ ಸೇರಿ ೧೭೫ ಬರ್ತದೆ, ಮಾತಾಜಿ."

"ಈ ತಿಂಗಳಿನಿಂದ ಮೊದಲಾಗಿ ೨೫೦ ಮಾಡಿದೇನೆ."

ಪರಶುರಾಮನತ್ತ ಚಾಚಿದ ಕೈಗೆ ಪೆನ್ ಬಂತು. ಟೆಲಿಫೋನ್ ಇದ್ದ ಮೇಜಿನ

ಮೇಲೆ ಮನವಿಯನ್ನಿರಿಸಿ ಸೌದಾಮಿನಿ ಅನುಜ್ಞೆ ಬರೆದಳು. 'ಮನವಿಯನ್ನು ತಗೋ' ಎಂದು ಆಪ್ತ ಕಾರ್ಯದರ್ಶಿಗೆ ಸಂಜ್ಞೆ ಮಾಡಿದಳು. ಶ್ರೀಪಾದನ ಕಣ್ಣುಗಳು ಮಂಜಾದವು. ಅವನು ಮಾತಾಜಿಯ ಪಾದಗಳಿಗೆ ಎರಗಲು ಹೋದ. ಫರ್ನಾಂಡೀಸ್ ಮತ್ತು ಸಿತಾರಾರಿಗೂ ಅನಿಸಿತು, ತಾವೂ ಮನವಿ ಸಲ್ಲಿಸಬೇಕೆಂದು...ಸಿದ್ಧರಾಗಿದ್ದ ಅಂಗರಕ್ಷಕರು ಈ ದೃಶ್ಯಕ್ಕೆ ಸಾಕ್ಷಿಗಳಾದರು.

ನಿಲ್ದಾಣಕ್ಕೆ ನಕುಲದೇವರ ಫೋನ್ ಬಂತು. ಅವರು ಹೇಳಿದ್ದು ಇಷ್ಟೆ :

"ಶುಭ ಪ್ರಯಾಣ. ಕ್ವೋಟ ತಿಂಗಳಿಗೆ ಒಂದು ಕೋಟಿ."

"ಬೈ ಬೈ."

....ವಿಮಾನ ನಿಲ್ದಾಣದಲ್ಲಿ ವಿ. ಐ. ಪಿ. ಕೊಠಡಿಯಲ್ಲಿ ವಿರಮಿಸಲು ವೇಳೆ ಇರಲಿಲ್ಲ.

...ಕಲ್ಯಾಣನಗರದತ್ತ ಹಾರುತ್ತ ಸೌದಾಮಿನಿ ಯೋಚಿಸಿದಳು : ಒಂದು ಕೋಟಿ ಪ್ರತಿ ತಿಂಗಳೂ ಕಷ್ಟದ ಬಾಬು. ವಿಶ್ವಬ್ಯಾಂಕ್, ಅಂತರ ರಾಷ್ಟ್ರೀಯ ನಿಧಿ ಇವುಗಳಿಂದ ಹಣ ದೊರೆಯುವಂಥ ಭಾರೀ ಯೋಜನೆಗಳನ್ನು ರೂಪಿಸಬೇಕು. ಕೇಂದ್ರದಿಂದ ಬರುವ ಅನುದಾನದಲ್ಲಿ ಸ್ವಲ್ಪ ಭಾಗವನ್ನು ಇಲ್ಲಿನ ವಿಶೇಷ ವೆಚ್ಚಕ್ಕಾಗಿ ಉಳಿಸಿಕೊಳ್ಳುವುದಗತ್ಯ. ನಿಧಿ ಸಂಗ್ರಹ ಪ್ರತಿಯೊಬ್ಬ ಮಂತ್ರಿಯ ಪಾಲೂ ಇಷ್ಟಿಷ್ಟು ಎಂದು ಗೊತ್ತು ಪಡಿಸಿದರಾಯಿತು. ಯಾರಾದರೂ ಗೊಣಗಿದರೆ, ಮಂತ್ರಿ ಮಂಡಲವನ್ನು ಪುನರ್ ರಚಿಸುವುದೇ ಸರಿ !

ಲೋಕದ ಈ ಜಂಜಡದಲ್ಲಿ ಧರ್ಮಕಾರ್ಯ ಮರೆಯಬಾರದು. ಪ್ರಧಾನಿಯವರನ್ನೇನೋ ಪ್ರವಾಸಕ್ಕೆ ಕರೆದೆ. ಆದರೆ, ಬಾಬಾಜಿ ಕಲ್ಯಾಣನಗರಕ್ಕೆ ಬರುವುದು ಎಂದು ? ಪ್ರಧಾನಿಯ ಭೇಟಿಗೂ ಮುಂಚೆ ಅದನ್ನು ಏರ್ಪಡಿಸಬೇಕು. ನಸುಕಿನ ಯೋಗಾಸನದಿಂದ ರಾತ್ರಿಯ ಲೇಹ್ಯದವರೆಗೆ ಹದಿನಾರು ಗಂಟೆಗಳ ಅವಧಿಯಲ್ಲಿ ಎಷ್ಟು ಕೆಲಸ ತಾನು ಮಾಡಬಹುದು ? ದೇಶದ ಇತರ ರಾಜಕೀಯ ಮುಖಂಡರು ತನ್ನನ್ನು ನೋಡಿ ಕರುಬಬೇಕು. ದುಡಿಮೆ—ಎಡೆ ಬಿಡದ ದುಡಿಮೆ. 'ಸೌದಾಮಿನಿ'ಯ ಯ ವಿಸ್ತೃತಾರ್ಥವೇ ಪರಿಶ್ರಮದ ಪಾರಮ್ಯ. ನಿಘಂಟಿನಲ್ಲಿ ಇಲ್ಲದಿದ್ದರೇನು ? ಮುಂದಿನ ಆವೃತ್ತಿಯಲ್ಲಿ ಸೇರಿಸಬಹುದಲ್ಲ ?

ವಿಮಾನದೊಳಗೆ ಅತ್ತ ಬರುತ್ತಲೋ ಇತ್ತ ಬರುತ್ತಲೋ ತನಗೆ ವಂದಿಸುತ್ತಿರುವವರು ಬಹಳ. ಇದು ಗೃಹಯಾನ. ಅರ್ಧಕ್ಕರ್ಧ ಜನರಿಗೆ ತಾನು ಪರಿಚಿತೆ ; ತನ್ನ ಮುಖ ಪರಿಚಿತ,...ಚಂದ್ರ ಗ್ರಹಕ್ಕೆ ಪ್ರವಾಸ ಸಾಧ್ಯ ಎನ್ನುತ್ತಿದ್ದಾರೆ ಜಗತ್ತಿನ –ಮುಂದುವರಿದ ರಾಷ್ಟ್ರಗಳ ವಿಜ್ಞಾನಿಗಳು. ಚಂದ್ರಗ್ರಹಕ್ಕೆ ಹೋಗಬಹುದೆಂದ ಮೇಲೆ ಆಕಾಶಯಾನದ ವೇಗ ಯಾಕೆ ಹೆಚ್ಚಬಾರದು ? ದಂತೇಶ್ವರಿಯ ದಯೆ

ಯೊಂದಿದ್ದರೆ ವಿಜ್ಞಾನ ಸಾಧಿಸಲಾಗದ್ದು ಯಾವುದೂ ಇಲ್ಲ. ಕಲ್ಯಾಣನಗರ—ದಿಲ್ಲಿಗಳ ನಡುವಿನ ಪ್ರವಾಸ ಕೇವಲ ಒಂದು ಗಂಟೆಯ ಅವಧಿಯಲ್ಲಿ ಸಾಧ್ಯವಾಗಬೇಕು. ಅನತಿ ದೂರದಲ್ಲಿ ಒಂದು ದಿನ ಇದು ಖಂಡಿತ ಶಕ್ಯವಾದೀತು.

ಧ್ವನಿವರ್ಧಕದಲ್ಲಿ ಹೇಳುತ್ತಿದ್ದಾಳೆ ; ಕಲ್ಯಾಣನಗರ ಸಮೀಪಿಸಿದೆವಂತೆ. ಸೌದಾಮಿನಿ ಕಿಟಕಿಯಿಂದ ಇಣಕಿ ನೋಡಿದಳು. ಕೆಳಗಿತ್ತು ನಕ್ಷತ್ರ ಹಾಸಿದ ನೆಲ.

೧೨

ಸಂಪುಟದ ಆರು ಮಂತ್ರಿಗಳು. ಒಬ್ಬೊಬ್ಬರ ಕೈಯಲ್ಲೂ ಸುಗಂಧರಾಜ ಪುಷ್ಪ ಹಾರ. ಎಲ್ಲರೂ ಧಾವಿಸಿದರು ವಿಮಾನದಿಂದ ಇಳಿಯುವ ಮೆಟ್ಟಲುಗಳ ಬುಡಕ್ಕೆ. ಧಾವಿಸುತ್ತಿದ್ದವರ ಪಕ್ಕದಲ್ಲೇ ಇದ್ದರು ಪೋಲೀಸ್ ಮುಖ್ಯಸ್ಥರು, ಅವರ ಬದಿಯಲ್ಲಿ ನೂತನ ಮುಖ್ಯ ಕಾರ್ಯದರ್ಶಿ ಚೌಗುಲೆ. ಅವರ ಹಿಂದೆ ರಾಜ್ಯದ ಹಿರಿಯ ಅಧಿಕಾರಿಗಳು. ಬಹಳ ಮುಖ್ಯ ವ್ಯಕ್ತಿ (ವೆರಿ ಇಂಪಾರ್ಟೆಂಟ್ ಪರ್ಸನ್—ವಿ.ಐ.ಪಿ.)ಗಳು ವಿರಮಿಸುವ ಕೊಠಡಿಯಲ್ಲಿ ಪತ್ರಿಕಾ ಪ್ರತಿನಿಧಿಗಳು ನೆರೆದಿದ್ದರು, ವಿಮಾನದತ್ತ ಕೊಕ್ಕರೆಗಳಾಗಿ.

ಇಳಿದರು : ಅಂಗರಕ್ಷಕ, ಮುಖ್ಯಮಂತ್ರಿ, ಆಪ್ತ ಕಾರ್ಯದರ್ಶಿ, ಅಂಗರಕ್ಷಕ.

ಪೋಲೀಸರ ಮುಖ್ಯಸ್ಥ ಮುಖ್ಯಮಂತ್ರಿಯನ್ನು ಹತ್ತು ಹೆಜ್ಜೆ ಎಡಕ್ಕೆ ಕರೆದೊಯ್ದ, ಇಳಿಯುವ ಪ್ರಯಾಣಿಕರಿಗೆ ಅಡಚಣೆಯಾಗದಿರಲೆಂದು. ಮುಖ್ಯಮಂತ್ರಿ ಹೋಗಿ ನಿಂತೆಡೆಗೆ ನೂಕು ನುಗ್ಗಲು. ಮಂತ್ರಿಗಳು ಮಾಲಾರ್ಪಣೆ ಮಾಡಿದರು. ಚೌಗುಲೆ ಅಂದ :

"ವಿ. ಐ. ಪಿ. ಲೌಂಜಿಗೆ ಹೋಗೋಣ. ಪ್ರೆಸ್ಸಿನವರು ಕಾಯ್ತಿದ್ದಾರೆ."

"ಪ್ರೆಸ್ಸಿನವರು ? ಏನು ವಿಶೇಷ ?"

"ಪ್ರಧಾನಿಯವರನ್ನು ತಾವು ಭೇಟಿಯಾದಿರಿ ಅಂತ ಏಜೆನ್ಸಿ ನ್ಯೂಸ್ ಟೆಲಿಪ್ರಿಂಟರಿನ ಮೇಲೆ ಬಂದಿದೆ. ಅವರಿಗೇನೋ ಕುತೂಹಲ, ಆತುರ."

"ಸರಿ, ಸರಿ !"

ಲೌಂಜಿನಲ್ಲಿ ಸೌದಾಮಿನಿಯೊಬ್ಬಳೇ ಕುಳಿತಳು. ವಕ್ಷಸ್ಥಲಕ್ಕೆ ಹೊರೆಯಾಗಿದ್ದ ಹಾರಗಳನ್ನು ಒಂದೊಂದಾಗಿ ತೆಗೆದು ಅಂಗರಕ್ಷಕರಿಗಿತ್ತಳು. ಪತ್ರಿಕೆಯವರತ್ತ ದೃಷ್ಟಿ ಬೀರಿ ಅಂದಳು :

"ಕಾಲ ಟಿಕ್ ಟಿಕ್ ಅನ್ತಾ ಇದೆ. ಪ್ರಶ್ನೆ ಕೇಳಿ."

ಒಬ್ಬ ಕೇಳಿದ :

"ಪ್ರಧಾನಿ ತಮ್ಮನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳೋ ಬಯಕೆ ವ್ಯಕ್ತಪಡಿಸಿದಾರಂತೆ ; ಹೌದೆ ?"

ಸೌದಾಮಿನಿ ಚಕಿತಳಾದಳು.

"ಇದು ಊಹಾಪೋಹ. ಆಫ್ ದ ರೆಕಾರ್ಡ್ ಇಷ್ಟು ಹೇಳಬಲ್ಲೆ. ಕೇಂದ್ರ

ಸಚಿವ ಹುದ್ದೆ ನಾನು ಇಷ್ಟ ಪಟ್ಟಾಗ ಸ್ವೀಕರಿಸಬಹುದು. ಅದು ನನ್ನ ಹ್ಯಾಂಡ್ ಬ್ಯಾಗಿನಲ್ಲಿದೆ. ಇನ್ನು ಆನ್ ರೆಕಾರ್ಡ್. ನಮ್ಮ ಜಾಣಪ್ಪನವರಿಗಾಗಿ ಕಳೆದ ಒಂದು ತಿಂಗಳಿಂದ ನಾನು ಮಾಡುತ್ತಿದ್ದ ಯತ್ನ ಫಲಿಸಿದೆ."

"ವಾರ್ತೆ ಬಂದಿದೆ : ಕೇರಳಕ್ಕೆ ರಾಜ್ಯಪಾಲರಾಗಿ ಹೋಗ್ತಾರೆ—ಅಂತ."

"ಕಿಷ್ಕಿಂಧೆಯ ಆಡಳಿತದ ವಿಷಯದಲ್ಲಿ ಪ್ರಧಾನಿ ಪರಮ ಸಂತುಷ್ಟರಾಗಿದ್ದಾರೆ."

"ಕಿಷ್ಕಿಂಧೆಗೆ ಹೊಸ ಕಾರ್ಯಸೌಧ ?"

"ಹೌದು. ಶಂಕುಸ್ಥಾಪನೆಗೆ ಪ್ರಧಾನಿಯೇ ಬರ್ತಾರೆ."

"ಯಾವಾಗ ?"

"ಈ ವರ್ಷವೇ. ಆಗ ರಾಜ್ಯದಲ್ಲಿ ಪ್ರವಾಸವನ್ನೂ ಮಾಡ್ತಾರೆ."

"ಸಂಪುಟವನ್ನು ವಿಸ್ತರಿಸಲು ಪ್ರಧಾನಿ ಸೂಚಿಸಿದಾರಾ ?"

"ಸಪ್ತರ್ಷಿ ಮಂಡಲ ಬೀರುತ್ತಿರುವ ಪ್ರಭೆ ಸಾಲದೆ ?"

"ಸದ್ಯಕ್ಕೆ ಸಾಕು. ಸಪ್ತರ್ಷಿ ಮಂಡಲದ ಬದಲು ನವಗ್ರಹಗಳು ಬರುವ ಸಾಧ್ಯತೆ ಇದೆಯ ? ಅಂತ."

ಉತ್ತರ ಅನಗತ್ಯವೆಂಬಂತೆ ಸೌದಾಮಿನಿ ಅಂಗೈ ಆಡಿಸಿದಳು.

ಮುಖ್ಯಮಂತ್ರಿ ಕುಳಿತಲ್ಲಿಂದ ಎದ್ದೊಡನೆ, ನೆರೆದವರು ಚೆದರತೊಡಗಿದರು. ಸೌದಾಮಿನಿ ಸ್ವರವೇರಿಸಿ ಅಂದಳು :

"ಇನ್ನೊಂದು ಸಂಗತಿ. ದಿಲ್ಲಿಯಲ್ಲಿ ಕಿಷ್ಕಿಂಧಾ ಭವನ ನಿರ್ಮಾಣವಾಗಲಿದೆ.... ಇವರು ಯಾರು, ಪರಿಚಯ ಮಾಡಿಕೊಂಡಿರಾ ? ಶಿವಭಾವು ಚೌಗುಲೆ, ಹಿರಿಯ ಐ. ಎ. ಎಸ್. ಅಧಿಕಾರಿ, ನಮ್ಮ ನೂತನ ಮುಖ್ಯ ಕಾರ್ಯದರ್ಶಿ."

ಯಾರೋ ಒಬ್ಬಿಬ್ಬರೆಂದರು :

"ನಿಮಗೆ ಸ್ವಾಗತ ಮಿ. ಚೌಗುಲೆ."

ನಗರಕ್ಕೆ ಸೀಮಿತವಾದ ಪುಟ್ಟ ಪತ್ರಿಕೆಯ ಪುಟಾಣಿ ಪ್ರತಿನಿಧಿ ಚೌಗುಲೆಯನ್ನು ಸಮೀಪಿಸಿ, "ಕಲ್ಯಾಣನಗರ ನಿಮಗೆ ಹೇಗೆ ಅನಿಸ್ತಿದೆ ?" ಎಂದು ಕೇಳಿದ.

ನಗೆಯೊಡನೆ ಉತ್ತರ ಬಂತು :

"ಬಹಳ ಸುಂದರವಾಗಿದೆ."

—ಲೌಂಜ್ ಖಾಲಿಯಾಯಿತು.

* * *

ವಿಮಾನ ಬಂದ ಸದ್ದು ಜಾಣಪ್ಪನವರಿಗೆ ಕೇಳಿಸಿತ್ತು. ತಾವು ಅಧಿಕಾರದಲ್ಲಿದ್ದಾಗ, ದಿಲ್ಲಿಯಿಂದ ಮರಳಿದ ಸಂಜೆ ನಿವಾಸದಲ್ಲಿ ತಮ್ಮನ್ನು ಇದಿರ್ಗೊಳ್ಳುತ್ತಿದ್ದವರು ಪತ್ರಿಕೆಯವರು. ಇವತ್ತು ಪ್ರಾಯಶಃ ಮುಖ್ಯಮಂತ್ರಿಯ ಹೊಸ ನಿವಾಸದಲ್ಲಿ

ವಾರ್ತಾಗೋಷ್ಠಿ ನಡೆಯುತ್ತಿರಬಹುದು. ಪ್ರಧಾನಿ ಬೆಳಗ್ಗೆಯೇ ಫೋನ್ ಮೂಲಕ ಮಾತಾಡಿದ್ದರು. ಆದರೂ ಈ ಮಾತಾಜಿ ಔಪಚಾರಿಕವಾಗಿ ಬಂದು ಹೇಳಬೇಕು. ಬರುತ್ತಾಳೋ ಇಲ್ಲವೋ.

ಯಾನದಲ್ಲಿದ್ದಾಗಲೇ ಸೌದಾಮಿನಿ ಅದನ್ನು ಕುರಿತು ಯೋಚಿಸಿದ್ದಳು. ಜಾಣಪ್ಪನಿಗೆ ರಾಜ್ಯಪಾಲ ಹುದ್ದೆ ತನ್ನಿಂದಾಗಿಯೇ ದೊರೆಯಿತೆಂದು ಇತರ ನಕ್ಷತ್ರಗಳಿಗೆ ಖಚಿತವಾಗಬೇಕಾದರೆ ತಾನು ಜಾಣಪ್ಪನನ್ನು ಕಾಣಬೇಕು, ಕೆಲವೇ ಮಿನಿಟುಗಳ ಮಟ್ಟಿಗಾದರೂ.

ಕಾರು ಬಂತು. ('ಬಂದಳು')

"ನಮಸ್ತೆ ಜಾಣಪ್ಪಾಜಿ."

"ಬನ್ನಿ ಮಾತಾಜಿ."

"ವಿ ಐ ಪಿ ಲೌಂಜಿನಲ್ಲೇ ಪ್ರೆಸ್ಸಿನವರು ಕಾದಿದ್ದರು. ಹೀಗಾಗಿ ತಡವಾಯಿತು. ಕೇರಳ ರಾಜ್ಯಪಾಲರಿಗೆ ಅಭಿನಂದನೆ !"

"ಉಪಕೃತ. ಪ್ರಧಾನಿ ನಿನ್ನೆ ರಾತ್ರೆಯೇ ಫೋನ್ ಮಾಡಿದ್ರು."

ಒಣ ಶಿಷ್ಟಾಚಾರ. ಮಹತ್ವದ್ದಲ್ಲ ಎಂದೇ ತನಗೆ ಪ್ರಧಾನಿ ಹೇಳಿರಲಿಲ್ಲ— ಎಂದು ಸೌದಾಮಿನಿ ತನ್ನ ಅಹಮಿನ ಮುಂಗುರುಳು ಸವರಿದಳು.

"ರಾಷ್ಟ್ರ ಪಕ್ಷಾಧ್ಯಕ್ಷರು ನಿಮ್ಮ ಕುಶಲ ವಿಚಾರಿಸಿದರು. ನಕುಲದೇವ್‌ಜಿ 'ಪ್ರಣಾಮ ತಿಳಿಸಿ' ಅಂದರು."

"ಅವರೆಲ್ಲ ದೊಡ್ಡ ಮನುಷ್ಯರು."

"ಯಾವಾಗ ಹೊರಡ್ತೀರಿ ಜಾಣಪ್ಪಾಜಿ ? ನಾವೊಂದು ಭಾರೀ ಬೀಳ್ಕೊಡುಗೆ ಸಮಾರಂಭ ಏರ್ಪಡಿಸ್ತೇವೆ."

"ಯಾಕಮ್ಮ ಅದೆಲ್ಲ ?"

"ಛೆ ! ಛೆ ! ನಾಳೆ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸ್ತೇನೆ."

"ತಿಳಿವಳಿಕೆ ಇರೋ ಹೆಂಗಸು. ಆದರೆ ಸ್ವಲ್ಪ ದುಡುಕು. ಅದಕ್ಕಿಂತ ಹೆಚ್ಚು ಏನೂ ಹೇಳಲಾರೆ" ಎಂದರು ಜಾಣಪ್ಪ ತನ್ನ ಪತ್ನಿಯೊಡನೆ, ಕಾರು ಗೇಟು ದಾಟಿದ ಬಳಿಕ.

ಹೆಂಡತಿ ಬೇರೆಯೇ ವಿಷಯ ಎತ್ತಿದಳು :

"ನಮ್ಮ ಹಿರೇ ಅಳಿಯ ಹೇಳ್ತಿದ್ರು. ಕೇರಳ ಗಲಾಟೆ ರಾಜ್ಯ ಅಂತೆ."

"ಅವನೊಬ್ಬ. ಕಾನೂನು ಬದ್ಧವಾಗಿ ದುಡಿದರಾಯಿತು. ನಮ್ಮ ತಂಟೆಗೆ ಯಾರೂ ಬರೋದಿಲ್ಲ."

"ಮಕ್ಕಳಿಗಂತೂ ಇಲ್ಲಿ ಸೈಟುಗಳು ಸಿಕ್ಕಿವೆ. ಮನೆ ಕಟ್ಟಿಸಿಕೊಂಡು ಹಾಯಾಗಿರ್‍ತಾರೆ."

* * *

"ಬನ್ನಿ, ಚೌಗುಲೆ ಸಾಹಿಬ್. ರಾಜ್ಯಪಾಲರನ್ನು ಕಂಡಿರೊ?"

"ವಿದಾಯ ಹೇಳೋದಕ್ಕೆ ಹಳಬರು ನಿನ್ನೆ ಹೋದಾಗ ನಾನೂ ಜತೇಲಿದ್ದು ನಮಸ್ಕರಿಸಿ ಬಂದೆ."

"ಬಜೆಟ್ ಅಧಿವೇಶನಕ್ಕೆ ದಿನ ಗೊತ್ತುಮಾಡಿ. ಮುಂದಿನ ವಾರ ದಿಲ್ಲಿಗೆ ಹೋಗಿ, ಯೋಜನಾ ಆಯೋಗದವರನ್ನು ಭೇಟಿಯಾಗಿ ಬನ್ನಿ. ಇಲ್ಲಿಂದ ಅರ್ಥ ಕಾರ್ಯದರ್ಶಿಯನ್ನೂ ಕರೆದುಕೊಂಡು ಹೋಗಿ. ಯೋಜನಾ ವೆಚ್ಚ, ಯೋಜನೇತರ ವೆಚ್ಚ. ಇವೆರಡರ ನಿರ್ಬಂಧಗಳನ್ನೂ ಮೀರಿ ಏರುವ ವೆಚ್ಚ. ಅಂಕೆ ಸಂಖ್ಯೆಗಳ ಜತೆ ಆಟವಾಡುವವರನ್ನು ಕಂಡರೆ ನನಗಿಷ್ಟ. ಎಂ.ಎ. ಯಲ್ಲಿ ಯಾವ ವಿಷಯ ಅಭ್ಯಾಸ ಮಾಡಿದವರು ನೀವು ?"

"ಇತಿಹಾಸ."

"ಇತಿಹಾಸ ಮುಖ್ಯ. ಆದರೆ ನಿಮಗೇನಪ್ಪ ಐಎಎಸ್ ನವರಿಗೆ ಎಲ್ಲ ವಿಷಯ ಗಳೂ ಕರತಲಾಮಲಕ. ಐಸಿಎಸ್ ನೌಕರಶಾಹಿ ಇಂಗ್ಲಿಷರ ಪಾಲಿಗೆ ಕಬ್ಬಿಣದ ಚೌಕಟ್ಟು. ಸ್ವತಂತ್ರ ಭಾರತದ ಪ್ರಜಾಪ್ರಭುತ್ವಕ್ಕೆ ಹೇಳಿ ಮಾಡಿಸಿದ್ದು, ಸ್ಟೇನ್‌ಲೆಸ್ ಸ್ಟೀಲಿನ ಚೌಕಟ್ಟು—ಅದೇ ಭಾರತೀಯ ಆಡಳಿತ ಸೇವಾ ವ್ಯವಸ್ಥೆ. ಹಿಂದಿನವರನ್ನು ಇಂಡಿಯನ್ ಕುಕಿಂಗ್ ಸರ್ವಿಸ್ ಅಂತ ಗೇಲಿ ಮಾಡ್ತಿದ್ವಿ. ಈಗಿನವರನ್ನು ಲೇವಡಿ ಮಾಡುವಂತಿಲ್ಲ. ಅಪ್ಪಟ ಬಂಗಾರ."

....

"ಏನ್ಹೇಳ್ತೀರಾ ?"

"ಗಹನ ವಿಚಾರಗಳು. ಕಿಷ್ಕಿಂಧೆಗೆ ಬಂದು ಸಂಶೋಧಕ ವಿದ್ಯಾರ್ಥಿಯಾಗಿದ್ದೇನೆ."

"ಬಹಳ ಕಷ್ಟ ಪಡಬೇಡಿ. (ಜಾಣಪ್ಪ ನನಗೂ ಒಮ್ಮೆ ಅಂದಿದ್ದರು–ಜಾಸ್ತಿ ಓದಬೇಡ–ಅಂತ) ನೀವು ನಿವೃತ್ತರಾದಮೇಲೆ ಕಿಷ್ಕಿಂಧಾ ವಿಶ್ವವಿದ್ಯಾಲಯ ನಿಮಗೆ ಡಿಲಿಟ್ ಪದವಿ ಕೊಡ್ತದೆ. ಜಾತಿವಾದ ಮುರ್ದಾಬಾದ್; ಸರ್ವಧರ್ಮ ಸಮಭಾವ... ಇವು ಇಂದಿನ ಕಿರಿಯರಿಗೆ ನಾವು ಹೇಳಿಕೊಡಬೇಕಾದ ಸ್ಲೋಗನ್ಸ್."

"ದಿಲ್ಲಿಯಲ್ಲಿ ಸಂಪಾದಕರೊಂದಿಗೆ ಸಂವಾದ ಚೆನ್ನಾಗಿ ಆಯ್ತಂತೆ. ಪರಶುರಾಮ್ ತಂದ ಪತ್ರಿಕೆಗಳನ್ನೂ ನೋಡಿದೆ."

"ಸಂಪುಟ ಸಭಾ ಕೊಠಡಿಯ ಮೇಜಿನ ಮೇಲೆ ಆ ಪತ್ರಿಕೆಗಳಿರಲಿ. ಇವತ್ತು ಹನ್ನೆರಡು ಘಂಟೆಗೆ ಸಂಪುಟಸಭೆ ಕರೆದಿದ್ದೇನೆ. ಇವತ್ತು ಬೆಳಗ್ಗಿನ ಇಲ್ಲಿನ ಪತ್ರಿಕೆಗಳನ್ನ ನೋಡಿದ್ದೀರಿ, ಅಲ್ಲವೆ ?"

"ನೋಡಿದ್ದೇನೆ. ಪ್ರಧಾನಿ ಮತ್ತು ತಮ್ಮ ಭೇಟಿಯ ವರದಿ ವಿವರವಾಗಿ ಬಂದಿದೆ.

"ಚಿತ್ರಗಳಿಲ್ಲ. ಅದೇ ಕೊರತೆ."

"ಪ್ರಧಾನಿ ಕಿಷ್ಕಿಂಧೆಗೆ ಭೇಟಿ ನೀಡಿದಾಗ ಅಂಥ ಪ್ರಮಾದಗಳಾಗದ ಹಾಗೆ ನಮ್ಮ ವಾರ್ತಾ ಇಲಾಖೆಗೆ ನಿರ್ದೇಶ ಕೊಡಬೇಕು."

"ಇದೇ ಇವತ್ತು ಚೌಗುಲೆಯವರು ಮಾತನಾಡಿದ ಅತಿ ದೀರ್ಘ ವಾಕ್ಯ."

"ಹಹ್ಹ !"

* * *

ಸಂಪುಟದ ಇಬ್ಬರು ಸದಸ್ಯರು ಸಭೆಗೆ ತಡವಾಗಿ ಬಂದರು. ಶಿಷ್ಟಾಚಾರದ ವಂದನೆ ನೀಡಿದರಾದರೂ ಸಂಪುಟದ ಕೊಠಡಿಯ ಬಾಗಿಲು ತೆರೆದು ಅವರನ್ನು ಒಳ ಬಿಟ್ಟಾಗ ಅಶಿಸ್ತಿನ ಗಾಳಿ ತುಸು ಬೀಸಿದಂತಾಯಿತು.

"ಕಾಲ ಟಿಕ್‌ಟಿಕ್ ಅನ್ತಾಇದೆ. ಸಮಯದ ಬೆಲೆ ಎಲ್ಲರಿಗೂ ತಿಳಿದಿರಬೇಕು. ಎಚ್.ಎಮ್.ಟಿ. ವಾಚು ಈಗ ಚೆನ್ನಾಗಿ ಬರ್‍ತಿದೆಯಂತೆ. ಅದು ಸಾಲದೂಂತಾದರೆ ಪ್ರತಿಯೊಬ್ಬ ಮಂತ್ರಿಗೂ ಒಂದು ರೋಲೆಕ್ಸ್ ಕೊಡಿಸೋಣ."

ಒಬ್ಬರು ಚಪ್ಪಾಳೆ ತಟ್ಟಿದರು. ಮುಖ್ಯಮಂತ್ರಿ ಸಿಟ್ಟಿನಿಂದ ಅಂದರು :

"ಇದು ಸಾರ್ವಜನಿಕ ಸಭೆಯಲ್ಲ !"

ತಡವಾಗಿ ಬಂದವರಲ್ಲಿ ಒಬ್ಬನೆಂದ :

"ಇದು ಶಾಲೆಯೂ ಅಲ್ಲ ; ಮಾತಾಜಿ ಶಿಕ್ಷಕಿಯೂ ಅಲ್ಲ."

ಸ್ಫೋಟಿಸ ಬಯಸಿದ ಸಿಟ್ಟನ್ನು ಸೌದಾಮಿನಿ ಒಳಕ್ಕೆ ಅದುಮಿದಳು. ಮುಖ್ಯ ಕಾರ್ಯದರ್ಶಿ ಚೌಗುಲೆ ಸಪ್ತ ಮಂತ್ರಿಗಳೆಲ್ಲರನ್ನೂ ಎವೆ ಇಕ್ಕದೆ ನೋಡಿದ.

ಮುಖ್ಯಮಂತ್ರಿ ಹೇಳಿದಳು :

"ರಾಷ್ಟ್ರದ ರಾಜಧಾನಿಯಲ್ಲಿ ಕಿಷ್ಕಿಂಧೆಯ ಬಗ್ಗೆ ಎಷ್ಟು ಮೆಚ್ಚುಗೆ ಇದೆ ಎಂಬುದು ಈ ವೇಳೆಗೆ ನಿಮಗೆಲ್ಲ ಗೊತ್ತಾಗಿರಬಹುದು."

ತಡವಾಗಿ ಬಂದವರಲ್ಲಿ ಇನ್ನೊಬ್ಬನೆಂದ :

"ದಿಲ್ಲಿಗೆ ಹೋಗಿ ಪ್ರಧಾನಿಯವರನ್ನು ಕಾಣುವ ಅವಕಾಶ ನಮಗೂ ಸಿಗಬೇಕು."

"ಅವರಿಂದ ಕರೆಬಂದಾಗ ತಿಳಿಸಿ. ಖಂಡಿತ ಕಳಿಸಿಕೊಡ್ತೇನೆ. ಮಹಾರಾಯರಾಗಿ ಹೋಗಿ ಬನ್ನಿ."

"ಸಮಯ ಹಾಳು. ಇಂಥ ವಿಷಯಕ್ಕೆಲ್ಲ ಚರ್ಚೆ ಯಾಕೆ ?" ಎಂದ ಮಗದೊಬ್ಬ ಮಂತ್ರಿ.

ಮುಖ್ಯಮಂತ್ರಿಗನಿಸಿತು—ವಿಷಯಾಂತರ ಮೇಲು. ಆಕೆ ಅಂದಳು :

"ಜಾಣಪ್ಪನವರನ್ನು ನಾವು ಹಾರ್ದಿಕವಾಗಿ ಬೀಳ್ಕೊಡಬೇಕು. ಇವತ್ತಿನಿಂದ ಮೂರನೇ ದಿನ ಸಂಜೆ. ಜವಾಬ್ದಾರಿ ಯಾರು ವಹಿಸಿಕೊಳ್ತೀರಿ ?"

"ತಾವು ಹೇಳಿ."

ತಡವಾಗಿ ಬಂದ ಇಬ್ಬರನ್ನೂ ಮುಖ್ಯಮಂತ್ರಿ ಹೆಸರಿಸಿದಳು. ಇಬ್ಬರೂ ಒಟ್ಟಿಗೆ, "ಒಪ್ಪಿದ್ದೇವೆ" ಎಂದರು. ಈ ಚಾಕಚಕ್ಯ ಚೌಗುಲೆಗೆ ಇಷ್ಟವಾಯಿತು. ಆತ ಹುಟ್ಟಿ ಬೆಳೆದದ್ದು ಕಿಷ್ಕಿಂಧೆಯ ಗಡಿಯಾಚೆಗೆ. ಬಾಲ್ಯದಲ್ಲಿ ಕಿಷ್ಕಿಂಧೆಯ ಜನರ ಭಾಷೆ ಪದೇ ಪದೇ ಕಿವಿಯ ಮೇಲೆ ಬೀಳುತ್ತಿತ್ತು. ಪರಿಮಿತ ಭಾಷಾ ಜ್ಞಾನವಾದ ರೇನಂತೆ ? ಈಗ ಅದು ಉಪಯೋಗಕ್ಕೆ ಬಂದಿತ್ತು.

ಮುಖ್ಯಮಂತ್ರಿ :

"ವಿದಾಯ ಸಮಾರಂಭದ ಚಲಚ್ಚಿತ್ರ ತೆಗೆಸಬೇಕು. ವಾರ್ತಾ ಇಲಾಖೆಯಲ್ಲಿ ಒಂದು ಫಿಲ್ಮ್ ಯೂನಿಟ್ ಇದ್ದರೆ ಚೆನ್ನ. ವಾರ್ತಾ ಇಲಾಖೆಯ ನಿರ್ದೇಶಕರನ್ನು ಕರೆಸಿ, ಈ ಬಗ್ಗೆ ಚರ್ಚಿಸಿ ಚೌಗುಲೆ ಸಾಹಿಬ್."

"ಗುರುತು ಮಾಡ್ಕೊಂಡಿದೀನಿ ಮಾತಾಜಿ."

"ಬಸವನ ಹುಳದ ನಡಿಗೆಯ ವೇಗ ಎಷ್ಟೂಂತ ಯಾರು ಹೇಳ್ತೀರಿ ?"

ಯಾರಿಗೂ ಗೊತ್ತಿರಲಿಲ್ಲ.

"ನಾನೇ ಹೇಳ್ತೇನೆ. ನಮ್ಮ ನೌಕರಶಾಹಿಯ ನಡಿಗೆಯ ವೇಗ ಎಷ್ಟೋ ಅಷ್ಟೆ."

ಒಂದೆರಡು ನಿಮಿಷ ನಗೆಯ ಅಲೆಗಳಿಂದ ಕೊಠಡಿ ತುಂಬಿತು. ಅತಿ ಹೆಚ್ಚು ಗಟ್ಟಿಯಾಗಿ ನಕ್ಕ ವ್ಯಕ್ತಿ, ಮುಖ್ಯ ಕಾರ್ಯದರ್ಶಿ.

ಸಂಪುಟದ ಸಭೆಯಲ್ಲಿ ಸಪ್ಪೆ ಮೋರೆ ಹಾಕಿ ಕುಳಿತಿದ್ದ ರಂಗಧಾಮನೂ ಆ ಸನ್ನಿವೇಶದಲ್ಲಿ ನಕ್ಕ. ಸೌದಾಮಿನಿ ಅದನ್ನು ಗಮನಿಸಿದಳು.

"ಧ್ರುವ ರಂಗಧಾಮರ ಬಗ್ಗೆ—ಅಂದರೆ ಮುಖ್ಯವಾಗಿ ಅವರ ಇಲಾಖೆ ಬಗ್ಗೆ ಪ್ರಧಾನಿ ಬಹಳ ಕೇಳಿದರು. ಇಡೀ ದೇಶ ಇನ್ನು ಬೃಹತ್ ಕೈಗಾರಿಕೆಗಳಿಗೆ ಆತು ಕೊಳ್ತದೆ. ಒಂದೊಂದು ಕಾರಖಾನೆ ಒಂದೊಂದು ಬಕಾಸುರ. ಎಷ್ಟು ಸಾವಿರ ಟಂಡಿ ವಿದ್ಯುಚ್ಛಕ್ತಿ ಇದ್ದರೂ ಸಾಲದು. ಎಲ್ಲ ನದಿಗಳಿಗೂ ನಾವು ಸವಾಲು ಹಾಕ್ಬೇಕು. ಘಟಕಗಳಿಗೆ ಬೇಕಾದ ಯಂತ್ರೋಪಕರಣ ಪೂರೈಕೆ ವಿದೇಶಗಳಿಂದ ಆಗಬೇಕು. ರಂಗಧಾಮರೊಮ್ಮೆ ವಿದೇಶ ಪ್ರವಾಸ ಮಾಡಿ ಬರ್ಬೇಕು. ವಿಧಾನ ಸಭೆಯ ಬಜೆಟ್ ಅಧಿವೇಶನ ಆದಮೇಲೆ: ಜತೆಯಲ್ಲಿ ಯಂತ್ರ ತಜ್ಞರನ್ನೂ ಕರ ಕೊಂಡು ಹೋಗುವಿರಂತೆ."

ಈಗ ಧ್ರುವ ಪ್ರಭೆ ಬೀರಿದ.

"ಆಗಲಿ ಮಾತಾಜಿ," ಎಂದ.

ಮಂಡಲದ ಏಳು ನಕ್ಷತ್ರಗಳೂ ಎಲ್ಲಿರಬೇಕೊ ಅಲ್ಲಿವೆ—ಎಂದು ಈಗ ಸೌದಾ ಮಿನಿಗೆ ಅನಿಸಿತು. ಇವುಗಳ ಚಲನೆಯಲ್ಲಿ ಹೆಚ್ಚು ಕಡಮೆ ಆಗದ ಹಾಗೆ ಕಾಯುತ್ತಿರ ಬೇಕು, ಅಷ್ಟೆ—ಎಂದುಕೊಂಡಳು.

ಆಕೆ ಎದ್ದೊಡನೆ, ಸಭೆ ಮುಗಿಯಿತೆಂದು ಉಳಿದವರೂ ಎದ್ದರು. ನೀರಾವರಿ ಮಂತ್ರಿ ನಾರಣಪ್ಪ ಕೇಳಿದರು :

"ರೋಲೆಕ್ಸ್ ಯಾವಾಗ ತರಿಸ್ತೀರಿ ? ನೀರಿನಲ್ಲಿ ಅದ್ದಿದರೂ ಅದು ಹಾಳಾಗೋದಿಲ್ವಂತೆ."

"ಒಟ್ಟು ಏಳು ಬೇಕು. ಯಾವುದಕ್ಕೂ ಬಜೆಟ್ ಅಧಿವೇಶನ ಕಳೀಲಿ."

* * *

ಸಣ್ಣ ಪೇಟೆಯ ಜವಳಿ ಸಾಹುಕಾರ ಧನಂಜಯಕುಮಾರರ ಅಂಗಡಿಗೆ ಮೋಟರ್ ಸೈಕಲ್ ಸವಾರನೊಬ್ಬ ಬಂದು ಒಂದು ಪತ್ರವನ್ನಿತ್ತ. ಸರಕಾರಿ ಮೊಹರು ಇದ್ದ ಲಕೋಟೆ. ಅದನ್ನು ನೀಡಿ ದೂತ ಹೊರಟೇ ಬಿಟ್ಟ.

ದೇವರನ್ನು ಸ್ಮರಿಸಿ ಸಾಹುಕಾರ ಲಕೋಟೆ ಒಡೆದ. ಒಳಗೆ ಕಾಗದವಿತ್ತು. ರಾಜ್ಯದ ಮುಖ್ಯಮಂತ್ರಿಯಿಂದ. ಭೇಟಿಗೆ ಕರೆದಿದ್ದರು.

ಸೌದಾಮಿನಿದೇವಿ ಎಂಬಾಕೆ ಮುಖ್ಯಮಂತ್ರಿಯಾದ ಸುದ್ದಿ ಪತ್ರಿಕೆಗಳಲ್ಲಿ ಬಂದಿತ್ತು. ನಾಲ್ಕಾರು ಬಾರಿ ಸ್ಫುಟವಾಗಿದ್ದ ಚಿತ್ರಗಳು ಅಚ್ಚಾದಾಗ, ಈಯಮ್ಮನನ್ನು ಎಲ್ಲಿಯೋ ನೋಡಿದಂತಿದೆಯಲ್ಲ– ಎನಿಸಿತ್ತು. ಮುಖ್ಯಮಂತ್ರಿಯಲ್ಲಿ ತಾನೆಲ್ಲಿ ಎಂದುಕೊಂಡಿದ್ದ. ಈಗಲೋ ಈ ಕಾಗದ. 'ಮಹಾರಾಜರು ಬರ ಹೇಳಿದಾರೆ' ಎಂದ ಹಾಗೆ. ಪತ್ರಕ್ಕೆ ಸಹಿ ಹಾಕಿದ್ದವನು ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ ಜಿ. ಪಿ. ಪರಶುರಾಮ್. ಸ್ಥಳ ಗೃಹಕಾರ್ಯಾಲಯ. ವೇಳೆಯನ್ನೂ ನಮೂದಿಸಿತ್ತು. ಅದೇ ದಿನ ಅಪರಾಹ್ನ. 'ತಾವು ಮುಖ್ಯಮಂತ್ರಿಯವರ ಭೇಟಿಗೆ ಬರಬೇಕೆಂದು ಕೋರಲಾಗಿದೆ.'

ಧನಂಜಯಕುಮಾರ ಆರೇಳು ಬಾರಿ ಪತ್ರವನ್ನು ಓದಿದ. ಅವನಿಗೇ ಬಂದುದು. ಸಂದೇಹವಿರಲಿಲ್ಲ. ಮನೆಗೆ ಧಾವಿಸಿ, ಹೆಂಡತಿಗೆ ಹೇಳಿ, ಉಂಡು, ಒಳ್ಳೆಯ ಉಡುಪು ತೊಟ್ಟು, ಟೋಪಿ ಧರಿಸಿ, ಕೈ ಗಡಿಯಾರ ನೋಡಿ ನೋಡಿ ಬೇಸತ್ತು, ಆಟೋರಿಕ್ಷಾ ಹತ್ತಿದ. ಇಪ್ಪತ್ತು ಮಿನಿಟು ಮುಂಚಿತವಾಗಿ ಮುಖ್ಯಮಂತ್ರಿಯ ಗೃಹ ಕಾರ್ಯಾಲಯ ತಲಪಿದ. ಉದ್ಯಾನದಲ್ಲಿ ಹೊತ್ತು ಕಳೆದ. ಐದು ಮಿನಿಟು ಇದ್ದಂತೆ ಪರಶುರಾಮನ ಮೇಜಿನ ಮುಂದೆ ಹಾಜರಾಗಿ ಮುಖ್ಯಮಂತ್ರಿಯ ಪತ್ರ ಮುಂದಿಟ್ಟ.

ಪರಶುರಾಮ ಸಂದರ್ಶಕರ ಕೊಠಡಿ ತೋರಿಸಿ "ಅಲ್ಲಿ ಕೂತ್ಕೊಳ್ಳಿ ನಾನು ಬಂದು ಕರೀತೀನಿ," ಎಂದ. ಕೊಠಡಿಯಲ್ಲಿ ಎಲ್ಲ ಆಸನಗಳೂ ಭರ್ತಿಯಾಗಿದ್ದುವು. ಒಂದು ಬಡ ಬೆಂಚೂ ಅಲ್ಲಿತ್ತು. ಸ್ವಲ್ಪ ಖಾಲಿ ಸ್ಥಳವಿತ್ತು. ಅಲ್ಲಿ ಕುಳಿತುಕೊಂಡು, ಇವರದೆಲ್ಲ ಸಂದರ್ಶನ ಮುಗೀಬೇಕಾದರೆ ಸಂಜೆಯೇ ಆದೀತು ಎಂದು ಯೋಚಿಸುತ್ತ

ಸಾಹುಕಾರ ವ್ಯಾಕುಲಗೊಂಡ. ಎರಡು ಮೂರು ಮಿನಿಟು ಕಳೆಯುವುದಕ್ಕಿಲ್ಲ ಪರಶುರಾಮ್ ಬಂದ.

"ನೀವು ಬನ್ನಿ."

ನಾಲ್ವರು ಎದ್ದರು, ವಿದೇಶೀಯರಂತೆ ಉಡುಪು. ಅವರನ್ನು ನೋಡುವುದೇ ಒಂದು ಚೆಂದ. ಪರಶುರಾಮ ಮತ್ತೆ ಅಂದ :

"ನೀವಲ್ಲ ಧನಂಜಯಕುಮಾರರೆ, ನೀವು ಬನ್ನಿ."

ಸಾಹುಕಾರ ಎದ್ದ. ಚಳಿ ಚಳಿ ಎನಿಸಿತು. ಪರಶುರಾಮನನ್ನು ಹಿಂಬಾಲಿಸಿದ.

ಮುಖ್ಯಮಂತ್ರಿಯ ಕೊಠಡಿ. ಅರ್ಧ ಚಂದ್ರಾಕಾರವಾಗಿ ಮೆತ್ತೆ ಕುರ್ಚಿಗಳಿದ್ದುವು. ಸಾಹುಕಾರ ಕೈ ಜೋಡಿಸಿ ನಿಂತ. ಪರಶುರಾಮ ನಿರ್ಗಮಿಸಿದ್ದ. ಮುಖ ತಗ್ಗಿಸಿ ಫೈಲನ್ನು ನೋಡುತ್ತಿದ್ದ (ನೋಡುವಂತೆ ನಟಿಸುತ್ತಿದ್ದ) ಸೌದಾಮಿನಿ ತಲೆ ಎತ್ತಿದಳು.

"ಕೂತ್ಕೊಳ್ಳಿ."

ಎರಡನೇ ಸಾಲಿನ ಒಂದು ಕುರ್ಚಿಯ ಅಂಚಿನಲ್ಲಿ ಸಾಹುಕಾರ ಕುಳಿತ.

"ನಮ್ಮ ಪತ್ರ ಸಿಕ್ಕಿತಾ ?"

"ಹೌದು, ಹೌದು."

"ನಿಮ್ಮ ವಿಳಾಸ ನಮಗೆ ಹ್ಯಾಗೆ ಗೊತ್ತಾಯ್ತು ?

"........"

ಸೌದಾಮಿನಿ ಡ್ರಾಯರಿನಿಂದ ಕಿವಿ ಮಡಚಿದ್ದ ಒಂದು ವಿಸಿಟಿಂಗ್ ಕಾರ್ಡನ್ನು ಎತ್ತಿ ತೋರಿಸಿದಳು.

"ನೆನಪಾಯ್ತ ? ನಮ್ಮ ಗುರುತು ಸಿಕ್ತ ? ರೈಲು ಪ್ರಯಾಣ ಮುಗಿದಾಗ ಯಾರಿಗೋ ಈ ಕಾರ್ಡು ಕೊಟ್ಟಿರ್ಲಿಲ್ವ ?"

ಸಾಹುಕಾರ ಥಟ್ಟನೆದ್ದು ಕೈ ಜೋಡಿಸಿದ, ಗಟ್ಟಿಯಾಗಿ ಮತ್ತೊಮ್ಮೆ ಅಂದ:

"ನಮಸ್ಕಾರ, ಖಾವಂದಿರಿಗೆ ನಮಸ್ಕಾರ."

"ಖಾವಂದರಲ್ಲ, ಮಾತಾಜಿ. ಈಚೆಗೆ ಬನ್ನಿ, ಇಲ್ಲಿಗೆ."

ಸಾಹುಕಾರ ಮುಖ್ಯಮಂತ್ರಿಯ ಸಮೀಪಕ್ಕೆ ಸಾಗಿದ. ಆಕೆ ಬೊಟ್ಟು ಮಾಡಿದ ಹತ್ತಿರದ ಕುರ್ಚಿಯ ಮೇಲೆ ಕುಳಿತು, ಶ್ರೀಗಂಧದ ತೆಳು ಹಾಳೆಯ ಮೇಲೆ ಮುದ್ರಿಸಿದ್ದ ತನ್ನ ಹೊಸ ವಿಸಿಟಿಂಗ್ ಕಾರ್ಡನ್ನು ಕೋಟಿನ ಒಳ ಜೇಬಿನಿಂದ ತೆಗೆದು, ಸಣ್ಣನೆ ನಗುತ್ತ, ಅತಿ ವಿನಯದಿಂದ ಮುಖ್ಯಮಂತ್ರಿಯ ಮೇಜಿನ ಮೇಲಿರಿಸಿದ.

"ಹೀಗೆ ಮಾಡೂಂತ ತಾವು ಹೇಳಿದ್ದಿರಿ."

"ನೆನಪಿದೆ. ಹಳೇ ಕಾರ್ಡು ತಗೊಳ್ಳಿ. ಹೊಸದು ನಾವು ಇಟ್ಕೊಳ್ತೀವಿ. ಹಾಗೆಯೇ ಹಳೇ ಸಹ ಪ್ರಯಾಣವನ್ನು ನೀವು ಮರೆತ್ಬಿಡಿ, ಇವತ್ತಿನ ಈ ಸಂಬಂಧ

ನೆನಪಿಟ್ಕೊಳ್ಳಿ. ನಿಮಗೆ ಮುಖ್ಯಮಂತ್ರಿ ಹ್ಯಾಗೆ ಗೊತ್ತೂಂತ ಯಾರಾದರೂ ಕೇಳಿದರೆ, ತಲೆತಲಾಂತರದಿಂದ ಅವರು ನಮ್ಮ ಅಂಗ್ಡಿ ಗಿರಾಕಿಗ್ಳು ಅನ್ನಿ."

ಈ ಸಂಬಂಧದಿಂದ ಆಗಬಹುದಾದ ತನ್ನ ವ್ಯಾಪಾರದ ಅಭಿವೃದ್ಧಿಯನ್ನು ಚಿತ್ರಿಸಲು ಸಾಹುಕಾರನ ಮನಸ್ಸು ಹಾತೊರೆಯಿತು. ಅಸೂಯಾಪರರು ತೊಂದರೆ ಕೊಟ್ಟಾರು ; ರಹಸ್ಯ ಸದಾಕಾಲವೂ ರಹಸ್ಯವಾಗಿಯೇ ಇರಬೇಕು—ಎಂದುಕೊಂಡ ನಿವೇದಿಸಿದ :

"ಅಪ್ಪಣೆಯಾಗಲಿ. ಸೇವೆಗೆ ಸಿದ್ಧನಾಗಿದ್ದೇನೆ."

"ಜಾಣಪ್ಪನವರ ಹೆಸರು ಕೇಳಿದೀರಾ ?"

"ಈ ಮೊದಲು ಮುಖ್ಯಮಂತ್ರಿಯಾಗಿದ್ದೋರು."

"ರಾಜ್ಯಪಾಲರಾಗಿ ಕೇರಳಕ್ಕೆ ಹೋಗ್ತಿದ್ದಾರೆ. ನಾಳೆಯಲ್ಲ ನಾಡದು ಅವರಿಗೆ ಸನ್ಮಾನ ಇಟ್ಟುಕೊಂಡಿದ್ದೇವೆ. ಪುರಭವನದಲ್ಲಿ ಬಹಿರಂಗ ಸಭೆ. ಅಲ್ಲಿ ಅವರಿಗೂ ಜಾಣಮ್ಮನವರಿಗೂ ನೆನಪಿನ ಕಾಣಿಕೆ ಕೊಡಬೇಕು. ಆಯುಷ್ಯ ಪೂರ್ತಿ ತಮ್ಮ ಹತ್ತಿರ ಇಟ್ಟುಕೊಳ್ಳಲು ಯೋಗ್ಯವಾದ ಎರಡು ಹಾರ ಎರಡು ಶಾಲು. ಸಮಾರಂಭದ ಫಿಲ್ಮ್ ತೆಗೀತಾರೆ. ನೀವು ವೇದಿಕೆಯ ಮೇಲೆ ಇರಬೇಕು."

"ಛೆ ! ಛೆ ! ನಾನು ಬೇಡ. ಆ ಅಮ್ಮನವರಿಗೆ ಖಾದಿ ರೇಷ್ಮೆ ಸೀರೆ. ಅಪ್ಪನವರಿಗೆ ಅತ್ಯಂತ ನಾಜೂಕಿನ ಖಾದಿ ಸೂಟ್ ಬಟ್ಟೆ. ಬೆಳ್ಳಿ ಹೂ ಸುನೇರಿ ಇರುವ ಶ್ರೀಗಂಧದ ಹಾರ. ಕಾಶ್ಮೀರದ ಕೈ ಮಗ್ಗದ ಶಾಲು. ಪ್ರತಿಯೊಂದು ಅರ್ಧ ಡಜನ್ ಇಲ್ಲಿಗೆ ತರ್ತೇನೆ. ತಾವೇ ಆಯ್ಕೆ ಮಾಡಿ."

"ಅರ್ಧ ಡಜನ್ ಬೇಡಿ. ನೀವು ಆಯ್ಕೆ ಮಾಡಿದರೆ ನಾನು ಮಾಡಿದಂತೆಯೇ. ನಾಡದು ಬೆಳಗ್ಗೆ ಹತ್ತು ಘಂಟೆಗೆ ತರ್ತೀರಾ ? ಸಮಾರಂಭದ ಉಸ್ತುವಾರಿಗೆ ಇಬ್ಬರು ಮಂತ್ರಿಗಳನ್ನು ನೇಮಿಸಿದ್ದೇನೆ. ತಂದ ವಸ್ತುಗಳನ್ನು ನನ್ನ ಎದುರಲ್ಲೇ ಅವರಿಗೆ ಒಪ್ಪಿಸಿಬಿಡಿ."

"ದೊಡ್ಡ ಜವಾಬ್ದಾರಿ ಹೊರಿಸಿದೀರಿ. ದೈವ ಕೃಪೆಯಿಂದ ಇದನ್ನು ಯಶಸ್ವಿಯಾಗಿ ನಿರ್ವಹಿಸೇನು. ಇನ್ನು ಅಪ್ಪಣೆ ಕೊಡಿ, ಮಾ—ಮಾತಾಜಿ."

"ಹೋಗಿ ಬನ್ನಿ ಸಾಹುಕಾರರೆ."

ಹೊರಗೆ ಪರಶುರಾಮನಿಗೂ ವಂದಿಸಿ, ಧನಂಜಯಕುಮಾರ ಹೊರಬಿದ್ದ. ನಡೆದದ್ದೆಲ್ಲ ಅನಿರೀಕ್ಷಿತ ತಿರುವುಗಳ ಪತ್ತೇದಾರಿ ಕಥೆಯಂತಿತ್ತು. ಕಾಣಿಕೆಗಳ ಸಂಗ್ರಹಕ್ಕೆ ಮೂರು ನಾಲ್ಕು ಕಡೆ ಹೋಗುವುದು ಅಗತ್ಯವಿತ್ತು. ಹಣ ? ಮಾತಾಜಿಯಿಂದ ಖಂಡಿತ ತೆಗೆದುಕೊಳ್ಳಬಾರದು. ಮುಂದೆ ಏನಾದರೂ ದೊಡ್ಡ ಆರ್ಡರು ಕೊಡಿಸುತ್ತಾರೆ. ಖರೀದಿ ನಾಳೆ. ಈಗ ತನ್ನ ಅಂಗಡಿಗೆ. ರಾತ್ರೆಯ ವರೆಗಿನ ಬಿರುಸಿನ ವ್ಯಾಪಾರದ ವೇಳೆ ಅಲ್ಲಿರಲೇಬೇಕು.

ರಾತ್ರೆ ಹೆಂಡತಿಗೆ ಕಾಣಿಕೆಗಳ ವಿವರ ಹೇಳಿದುದಾಯಿತು. ಮುಖ್ಯಮಂತ್ರಿಯನ್ನು

ನೋಡಲು ಗಂಡ ಹೋಗುತ್ತಿದ್ದಾರೆಂದು ಹಲವಾರು ಗೆಳತಿಯರಿಗೆ ಆಕೆ ಆಗಲೆ ಫೋನ್ ಮಾಡಿದ್ದಳು. ಎಲ್ಲರೂ "ಹೌದಾ ? ಹೌದಾ ?" ಅಂತ ಕೇಳಿದ್ದರು. ಗಂಡನಿಗೆ ಅದನ್ನು ತಿಳಿಸಿದಾಗ ಆತ ಕುಪಿತನಾದ. "ಮುಖ್ಯಮಂತ್ರಿಯಿಂದ ಆಮಂತ್ರಣ ಬರೋದು ಗೌರವ ಅಲ್ಲವಾ ? ಬೇರೆಯವರಿಗೆ ಹೇಳದೆ ಇರುವಂಥ ವಿಷಯವಾ ಅದು ?" ಎಂದಳು. ಧನಂಜಯಕುಮಾರ ಎಚ್ಚರಗೊಂಡ. ವಾಣಿಜ್ಯ ವಲಯದಲ್ಲಿ ಮತ್ಸರಿಗಳಿಗೇನು ಅಭಾವ? "ಇದು ಬರೇ ವ್ಯವಹಾರ ಕಣೆ. ಸಾಮಗ್ರಿ ಕೊಡೋದು, ದುಡ್ಡು ಪಡೆಯೋದು."

"ಆಗಲಪ್ಪ ಆಗಲಿ. ನಾನು ಮೊದ್ದು. ಏನು ಗೊತ್ತಾಗುತ್ತೆ ?"

"ಮೊದ್ದು ಅಲ್ಲ, ಮುದ್ದು. ಹಸಿವಾಗ್ತಿದೆ."

* * *

ಮುಖ್ಯಮಂತ್ರಿಯ ಆದೇಶದಂತೆ ಚೇಂಬರಿಗೆ ಬಂದ ಸಚಿವರಾದ ಬಾಲಾಜಿ ಮತ್ತು ಸಂಗಪ್ಪ ಧನಂಜಯಕುಮಾರನನ್ನೂ ಕಾಣಿಕೆಗಳನ್ನೂ ನೋಡಿ "ಎಲಾ ಇವಳ !" ಎಂದುಕೊಂಡರು. ಉತ್ಕೃಷ್ಟವಾಗಿದ್ದುವು.

"ಪುರಸಭಾಭವನಕ್ಕೆ ತಳಿರು ಶೃಂಗಾರ ನಡೀತಿದೆ. ವಿದ್ಯಾ ಸಚಿವರ ಕೃಪೆಯಿಂದ ನೂರು ಹುಡುಗೀರು ಆರತಿ ಬೆಳಗ್ತಾರೆ. ಕಡಮೆ ವೆಚ್ಚದಲ್ಲಿ ಚಿತ್ರೀಕರಣಕ್ಕೆ ಖಾಸಗಿ ಯವರ ಸಹಾಯದಿಂದ ಏರ್ಪಾಟು ಮಾಡಿದ್ದೇವೆ. ಮಹಾಕವಿ ಮಾನಪತ್ರ ಬರೆದು ಕೊಟ್ಟಿದ್ದಾರೆ. ಬಂಗಾರದ ಹೊಳಪಿನ ಚೌಕಟ್ಟು ಹಾಕಿಸ್ತಿದ್ದೇವೆ" ಎಂದ ಬಾಲಾಜಿ.

ಸಂಗಪ್ಪ ನುಡಿದರು :

"ಬ್ಯಾಂಡ್, ವಾಹನ ಸಂಚಾರ, ಭದ್ರತಾಕ್ರಮ ಈ ಬಗ್ಗೆ ಐ.ಜಿ.ಪಿ. ಯವರಿಗೆ ಹೇಳಿದ್ದೇವೆ."

ಸೌದಾಮಿನಿ ಮಂತ್ರಿಗಳಿಗೆ "ಇವರು ಧನಂಜಯಕುಮಾರ್, ಸಣ್ಣಪೇಟೆಯ ದೊಡ್ಡ ಜವಳಿ ವ್ಯಾಪಾರಿ. ಸಾರ್ವಜನಿಕ ಚಟುವಟಿಕೆಗಳಲ್ಲಿ ಇವರಿಗೆ ಬಹಳ ಆಸಕ್ತಿ" ಎಂದು ಪರಿಚಯ ಮಾಡಿಕೊಟ್ಟರು.

...."ಅಧಿಕಾರ ಹೋದರೂ ಮಾನ ಹೋಗಲಿಲ್ಲ" ಎಂದು ಮನಸ್ಸಿನಲ್ಲಿ ಪದೇ ಪದೇ ಅಂದುಕೊಳ್ಳುತ್ತ ಜಾಣಪ್ಪನವರು ಬೀಳ್ಕೊಡುಗೆ ಸಮಾರಂಭಕ್ಕೆ ಸಿದ್ಧರಾದರು.

"ನೀವು ಏನೇ ಹೇಳಿ, ಅವಳು ಒಳ್ಳೆಯವಳೂಂದ್ರೆ" ಎಂದರು ಅವರ ಪತ್ನಿ.

ಚಿತ್ರೀಕರಣವಿದೆ ಎಂಬ ಸುದ್ದಿ ಪತ್ರಿಕೆಯಲ್ಲಿದ್ದುದರಿಂದ ಪುರಭವನದಲ್ಲೂ ಹೊರಗೂ ಸೇರಿತ್ತು ಜನಸಾಗರ. ಜಾಣಪ್ಪ ಸಕುಟುಂಬರಾಗಿ ಬಂದಾಗ ಮಹಾ ದ್ವಾರದಲ್ಲಿದ್ದವರು ಅವರೊಬ್ಬರನ್ನೂ ಒಳಗೆ ಬಿಡಲಿಲ್ಲ. ಮಹಾದ್ವಾರ ಮುಚ್ಚಿ ಕೊಂಡಿತು. ಒಳಗೂ ಪೋಲೀಸರು ಹೊರಗೂ ಪೋಲೀಸರು. ಜಾಣಪ್ಪನವರು

"ನಾನು ಜಾಣಪ್ಪ ಕಣ್ರೋ. ಬೆಪ್ಪ ನನ್ನ ಮಕ್ಕಳಾ" ಎಂದು ಒದರಾಡಿದರು. ಪೋಲೀಸನೊಬ್ಬ "ಯಾರೋ ನೀನು ? ಎಷ್ಟೋ ಪೊಗರು ?" ಎಂದು ಗದರಿಸಿ ಲಾಠಿ ಎತ್ತಿದ. ಸ್ವಾತಂತ್ರ್ಯ ಸಂಗ್ರಾಮದಲ್ಲೇ ತಲೆ ಉಳಿಸಿಕೊಂಡಿದ್ದ ಜಾಣಪ್ಪ ನವರು ಕ್ಷಣವೂ ತಡಮಾಡದೆ ಎಡಬದಿಯ ಸಂದಿಯಿಂದ ಹೆಂಡತಿಯನ್ನೆಳೆದುಕೊಂಡು ರಸ್ತೆಯ ಅಂಚಿಗಿಳಿದರು. ಆ ತಾಯಿಗೆ ಮಕ್ಕಳ, ಅಳಿಯಂದಿರ, ಮೊಮ್ಮಕ್ಕಳ ಚಿಂತೆ. "ಅಯ್ಯೋ ಅವರನ್ನು ಕರಕೊಳ್ಳೀಂದ್ರೆ...." ಎಂದು ಸಂಕಟದಿಂದ ನುಡಿದಳು. "ಸುಮ್ಕಿರು. ಚಿಕ್ಕೋರು ಹುಷಾರಾಗಿರ್ತಾರೆ" ಎಂದರು ಮಾಜಿ ಮುಖ್ಯಮಂತ್ರಿ.

ಅಷ್ಟರಲ್ಲಿ ರಸ್ತೆಯಲ್ಲಿ ಧ್ವನಿವರ್ಧಕ ತಗಲಿಸಿದ್ದ ಜೀಪ್ ಕಾಣಿಸಿತು. ಅದರ ಹಿಂದಿತ್ತು ಪೋಲೀಸ್ ವ್ಯಾನ್. ಜೀಪಿನೊಳಗಿಂದ ಅಧಿಕಾರಿ 'ಕೇಳಿರಿ ಕೇಳಿರಿ' ಮಾಡಿದ. (ವ್ಯಾನಿನಿಂದ ಪೋಲೀಸರ ದಂಡೇ ಇಳಿಯಿತು. ಅರ್ಧ ಜನರ ಕೈಯಲ್ಲಿ ಲಾಠಿ. ಉಳಿದವರ ಕೈಯಲ್ಲಿ ಬಂದೂಕು) "ಮಹಾಜನರಲ್ಲಿ ವಿನಂತಿ. ಪುರಭವನ ವನ್ನು ಸುತ್ತುವರಿದಿರುವ ಹೆಚ್ಚುವರಿ ಜನ ತಕ್ಷಣ ಚೆದರಬೇಕು. ಇಲ್ಲದಿದ್ದರೆ ಶಾಂತಿ ಪಾಲನೆಗಾಗಿ ಲಾಠಿ ಚಾರ್ಜು ಮಾಡಲಾಗುವುದು." ಕೆಲ ನಿಮಿಷಗಳ ಅಂತರದಲ್ಲಿ ಮತ್ತೆ ಅದೇ ಆದೇಶ. ಜನ ಕದಲಲಿಲ್ಲ. ಪೋಲೀಸರು ಲಾಠಿ ಚಾರ್ಜು ಮಾಡುತ್ತ ಪುರಭವನದ ಪಾವಟಿಗೆಗಳನ್ನೇರಿದರು. ಕೆಲವರಿಗೆ ಪೆಟ್ಟು ಬಿತ್ತು. ಸೌಮ್ಯ ಸ್ವರೂಪದ ಪ್ರಹಾರ-ಅಷ್ಟೇ ಸೌಮ್ಯವಾದ ನೋವು. ಶಾಂತಿಪ್ರಿಯರಾದ ಹೆಚ್ಚುವರಿ ಜನ ಹತ್ತಿರದ ಬಸ್‌ಸ್ಟಾಪ್‌ಗಳಿಗೆ ಓಡಿದರು, ಕ್ಯೂ ನಿಲ್ಲಲು.

ಒಬ್ಬ ಕಿರಿಯ ಪೋಲೀಸ್ ಅಧಿಕಾರಿ ಜಾಣಪ್ಪನವರ ಗುರುತು ಹಿಡಿದ. ಅವರಿಗೆ ಸೆಲ್ಯೂಟ್ ಕೊಟ್ಟ. ಕೈಬೆತ್ತ ಝುಳಪಿಸುತ್ತ ಪುರಭವನದೊಳಕ್ಕೆ ಧಾವಿಸಿದ. ಐ.ಜಿ.ಪಿ.ಯವರನ್ನು ಸಮೀಪಿಸಿ ಮತ್ತೆ ಸೆಲ್ಯೂಟ್ ಕೊಟ್ಟ.

"ಸಾರ್....! ಸಾರ್ !"

"ಕತ್ತೆ ನನ್ಮಕ್ಳು ಇನ್ನೂ ಅಲ್ಲೇ ನಿಂತಿದಾರೇನೊ ?"

"ಅವರಲ್ಲ ಸಾ—"

"ಮತ್ಯಾರೊ ?"

ವಿಷಯ ತಿಳಿದ ಅಧಿಕಾರಿ ವೇದಿಕೆಯನ್ನೇರಿ ಮುಖ್ಯಮಂತ್ರಿಯ ಕಿವಿಯಲ್ಲಿ ಉಸುರಿದ. ಆಕೆ ಕುರ್ಚಿಯಿಂದ ಚಂಗನೆದ್ದು "ಬಾಲಾಜಿ ! ಸಂಗಪ್ಪ ! ಬನ್ನಿ !" ಎಂದು, ಪಟಪಟನೆ ವೇದಿಕೆಯಿಂದ ಇಳಿದಳು. ಎದುರಲ್ಲಿ ಐ.ಜಿ.ಪಿ., ಹಿಂದೆ ಸಂಘಟಕ ಮಂತ್ರಿದ್ವಯರು. ಏನೋ ಆಗಿದೆ ಎಂದು ಏಳಲೆತ್ನಿಸಿದ ಕುತೂಹಲಿಗಳಿಗೆ ಸಭಿಕರ ಒಂದೊಂದು ಸಾಲಿಗೂ ಇಬ್ಬರಂತೆ ನಿಂತಿದ್ದ ಪೋಲೀಸರ ಬೆತ್ತ ಕಾಣಿಸಿತು.

ಏನಾಗಿತ್ತು? ರಸ್ತೆಯ ಅಂಚಿನಲ್ಲಿ ಜಾಣಪ್ಪ ದಂಪತಿ ಯಾಕಿದ್ದಾರೆ? ಎಂಬುದು ಯಾರಿಗೂ ತಿಳಿಯದು—ಅನುಭವಿಸಿದವರ ಹೊರತು.

ಸೌದಾಮಿನಿ ಅಂದಳು :

"ನಮಸ್ತೆ. ದಯಮಾಡಿಸ್ಬೇಕು. ಅಭೂತಪೂರ್ವ ಸಮಾರಂಭ. ಇಡೀ ಕಲ್ಯಾಣನಗರವೇ ಇಲ್ಲಿದೆ. ಮಾನ್ಯ ಜಾಣಪ್ಪನವರ ಜನಪ್ರಿಯತೆಗೆ ಇದು ಸಾಕ್ಷಿ. ಬನ್ನಿ ಜಾಣಪ್ಪಾಜಿ, ಬನ್ನಿ ಅವ್ವಾ. ಕಾಯಿಸಿದೆವು. ಕ್ಷಮಿಸಿ."

ಬ್ಯಾಂಡ್ ವಾದನ ಸ್ವಾಗತ ಬಯಸಿತು. ಜಾಣಪ್ಪನವರು ಸ್ತಿಮಿತ ಕಳೆದುಕೊಳ್ಳಲಿಲ್ಲ. ಅವರ ಪತ್ನಿ ಸೆರಗಿನ ತುದಿಯಿಂದ ಕಣ್ಣೀರೊರೆಸಿಕೊಂಡುದು ಯಾರಿಗೂ ಕಾಣಿಸಲಿಲ್ಲ. ಆರತಿ ಎತ್ತಬೇಕಾಗಿದ್ದ ನೂರು ಹುಡುಗಿಯರು ಗದ್ದಲದಲ್ಲಿ ಚೆದರಿ ಹೋಗಿದ್ದರು. ಆರತಿ ಸಾಮಗ್ರಿಗಳು ವೇದಿಕೆಯ ಪಕ್ಕದ ಪ್ರಸಾಧನ ಕೋಣೆಯಲ್ಲಿ ಪೋಲೀಸರ ಕಾವಲಿನಲ್ಲಿ ಸುರಕ್ಷಿತವಾಗಿದ್ದುವು. ಕಾಣಿಕೆಗಳ ರಕ್ಷಣೆಗೆ ಸ್ವತಃ ಧನಂಜಯ ಕುಮಾರನೇ ನಿಂತಿದ್ದ.

ಮಾನ್ಯ ಅತಿಥಿಗಳನ್ನು ವೇದಿಕೆಗೆ ಕರೆದೊಯ್ದಾಗ ಗಡಚಿಕ್ಕುವ ಕರತಾಡನ ವಾಯಿತು. ತುಂಬಿ ಹರಿವ ಸಭಾಂಗಣ ವೇದಿಕೆಯಲ್ಲಿ ನೆಲೆಯೂರಿದವರ ಪಾಲಿಗೆ ಟಾನಿಕ್. ಸಾಕ್ಷ್ಯವಿಲ್ಲ ಪುರಾವೆ ಇಲ್ಲ, ಮಹಾದ್ವಾರದ ಪ್ರಕರಣವನ್ನು ತಾನು ಮರೆತುಬಿಡಬೇಕು ಎಂದುಕೊಂಡರು ಜಾಣಪ್ಪ.

ಚಿತ್ರೀಕರಣ ತಂಡ ಕಾರ್ಯಪ್ರವೃತ್ತವಾಗಿತ್ತು. ಹಲವಾರು ಛಾಯಾಚಿತ್ರ ಕಾರರೂ ಅದರೊಡನೆ ಸೆಣಸಿದರು.

ಕಾರ್ಯಕ್ರಮ ಪಟ್ಟಿಗೆ ಅನುಗುಣವಾಗಿ, ಸಮಾರಂಭ ನಡೆಯಿತು.

ತಮ್ಮ ಮೇಲಿನ ಪ್ರೀತಿಯಿಂದ, ತಮ್ಮನ್ನು ಬೀಳ್ಕೊಡಲೆಂದೇ, ಈ ಜನಸಂದಣಿ ಯಾಕೆ ನೆರೆದಿರಬಾರದು ಎನಿಸಿತು ಜಾಣಪ್ಪನವರಿಗೆ. ಮತ್ತೆ ಮತ್ತೆ ಆ ವಿಚಾರ ಮೂಡಿ 'ಅದೇ ಸರಿ' ಎನಿಸಿತು.

ಜಾಣಪ್ಪ ಮುಕ್ಕಾಲು ಗಂಟೆ ಬಿಗಿದರು, ಮಾನಪತ್ರ ಸ್ವೀಕರಿಸಿದ ಬಳಿಕ.

"ನಿಮ್ಮ ಮುಖ್ಯಮಂತ್ರಿಯಾಗುವ ಭಾಗ್ಯ ನನ್ನದಾಗಿತ್ತು. ತಿಳಿದೂ ತಿಳಿದೂ ತಪ್ಪು ಮಾಡಿಲ್ಲ. ತಿಳಿಯದೆ ಏನಾದರೂ ತಪ್ಪಾಗಿದ್ದರೆ ಉಡಿಯಲ್ಲಿ ಹಾಕಿಕೊಳ್ಳಿ. ಮನ್ನಿಸಿ. ಕೇರಳಕ್ಕೆ ಹೋಗುತ್ತಿದ್ದೇನೆ. ಶಂಕರಾಚಾರ್ಯರು ಜನ್ಮವೆತ್ತಿದ ಪುಣ್ಯ ಭೂಮಿ. ಎಲ್ಲಿದ್ದರೇನು ? ಮಾಡೋದು ಜನಸೇವೆಯನ್ನೇ ಅಲ್ಲವೆ ?"

ಅಂತ್ಯದಲ್ಲಿ ಅವರೆಂದರು :

"ನಾನು ಕಿಷ್ಕಿಂಧೆಯ ಶಿಶು. ಇಲ್ಲಿ ಹುಟ್ಟಿ ಇಲ್ಲಿಯೇ ಬೆಳೆದವನು. ಕೊನೆಗಾಲ ಕಳೆಯುವುದಕ್ಕೆ ಇಲ್ಲಿಗೇ ಮರಳುತ್ತೇನೆ. ಇಲ್ಲಿಯೇ ಉಸಿರಾಡಿ ದೇಹವಿಡುತ್ತೇನೆ. ಆಗ ನನಗೊಂದು ಪುಟ್ಟ ಸೈಟು ಬೇಕು. ಮೂರಡಿ, ಆರಡಿ. ಕಿಷ್ಕಿಂಧೆಯ ನನ್ನ ಪ್ರೀತಿಯ ಜನತೆ ಅದನ್ನು ನನಗೆ ನೀಡುತ್ತಾರೆ ಎನ್ನುವ ನಂಬಿಕೆ ನನಗಿದೆ. ನನ್ನ ಮಮತೆಯ ಬಂಧುಗಳೇ, ನಾವು ಹೋಗಿ ಬರುತ್ತೇವೆ. ಜಯ್ ಹಿಂದ್ ! ಜಯ್ ಕಿಷ್ಕಿಂಧೆ !"

ಸನ್ಮಾನಿತರಿಗೆ ನೆನಪಿನ ಕಾಣಿಕೆಗಳು ಮೆಚ್ಚುಗೆಯಾದವು. ಹಾರಗಳು ಝಗ

ಝಗಿಸಿದವು. ಶಾಲುಗಳು ಮಿರಮಿರನೆ ಹೊಳೆದುವು. ಕಾಣಿಕೆನೀಡಿಕೆ ಮುಗಿಯು ವವರೆಗೂ ಧನಂಜಯಕುಮಾರ ಹೊಸ ಮುಖ್ಯಮಂತ್ರಿಯ ಮಗ್ಗುಲಲ್ಲೇ ಇದ್ದ.

ಅಧ್ಯಕ್ಷೆ ಸೌದಾಮಿನಿಯದು ಚುಟುಕು ಭಾಷಣ.

"ಕಂಠಮುಮ್ಮಳಿಸುಪು ದಶ್ರುಭರದಿಂದೆ ಜಡಮಾದುದು ದೃಷ್ಟಿ-ಅಂತ ಮಹಾಕವಿ ಕಾಳಿದಾಸ ಹೇಳಿರಲಿಲ್ಲವೇ? ಅಂಥ ಅವಸ್ಥೆ ನನಗೀಗ ಒದಗಿದೆ. ಈ ಬೀಳ್ಕೊಡುಗೆ ಕಿಷ್ಕಿಂಧೆಯ ಇತಿಹಾಸದಲ್ಲಿ ದಾಖಲೆಯಾಗುವ ಸಮಾರಂಭ. (ಮೊದಲ ಸಾಲಿನಲ್ಲಿದ್ದ ಶಿವುಭಾವು ಚೌಗುಲೆಯತ್ತ ನೋಡಿದಳು.) ಜನನಾಯಕ ಜಾಣಪ್ಪಾಜಿ, ಕಿಷ್ಕಿಂಧೆ ನಿಮ್ಮ ತಾಯಿನಾಡು. ನೀವು ಎಲ್ಲೇ ಇರಿ, ಎಂತೇ ಇರಿ. ನಮ್ಮನ್ನು ಮರೆಯದಿರಿ. (ಕರವಸ್ತ್ರವನ್ನು ಕಣ್ಣಿಗೆ ಮುಟ್ಟಿಸಿ) ಇನ್ನು ಹೆಚ್ಚು ಹೇಳಲಾರೆ. ಹೋಗಿಬನ್ನಿ ..ಸಂಗಪ್ಪ"

ಬಾಲಾಜಿ ಸ್ವಾಗತ ಭಾಷಣ ಮಾಡಿದ್ದ. ಸಂಗಪ್ಪನಿಂದ ವಂದನಾರ್ಪಣೆ. ಅದೂ ಒಂದು ಭಾಷಣವೇ. ಇನ್ನೇನು ಮುಗಿಸಬೇಕು. ಅಷ್ಟರಲ್ಲಿ, ಮುಖ್ಯಮಂತ್ರಿ ಹಿಂದೆಯೇ ಸೂಚಿಸಿದ್ದು ನೆನಪಾಯಿತು. ಅವನೆಂದ:

"ಕಾಣಿಕೆಗಳನ್ನು ನೋಡಿ ಸಂತೋಷಪಟ್ಟಿರಲ್ಲ? ಅದಕ್ಕೆಲ್ಲ ಕಾರಣರು ಸಣ್ಣ ಪೇಟೆ ಸಾಹುಕಾರ ಧನಂಜಯಕುಮಾರರು. (ಇಲ್ಲಿ ನಿಂತಿದ್ದಾರೆ ನೋಡಿ) ಇವರಿಗೆ ನಾವು ಅತ್ಯಂತ ಕೃತಜ್ಞರು."

ಸಮಾರಂಭ ಮುಗಿಯಿತೆಂದು ಜನ ಎದ್ದರು. ಬ್ಯಾಂಡು ಜನಗಣಮನ ಬಾರಿ ಸಿತು.

ಮೇಲಿನ ವರದಿಗೆ ಬಾಲಂಗೋಚಿ ಇಷ್ಟೆ:

ಮಾರನೆಯ ಮಧ್ಯಾಹ್ನ ಕಿಷ್ಕಿಂಧೆಯ ರಾಜ್ಯಪಾಲರು ಜಾಣಪ್ಪನವರ ಗೌರ ವಾರ್ಥ ಆತ್ಮೀಯ ಭೋಜನ ಕೂಟ ಏರ್ಪಡಿಸಿದರು. 'ಆಮಂತ್ರಿತ ಗಣ್ಯರಲ್ಲಿ ಧನಂಜಯಕುಮಾರ ಸಾಹುಕಾರರಿದ್ದರು' (ಪತ್ರಿಕಾವರದಿಯಿಂದ) ರಾತ್ರೆಯ ರೈಲಿ ನಲ್ಲಿ ಜಾಣಪ್ಪನವರು ತಿರುವನಂತಪುರಕ್ಕೆ ಹೊರಟರು. ಆಹಾರದ ಬಗ್ಗೆ ಹೆಚ್ಚು ಗಮನವಿಡಬೇಕಾದ ವಯಸ್ಸು. ತಮ್ಮ ಖಾಸಾ ಅಡುಗೆಯವನನ್ನೂ ಕರೆದೊಯ್ದರು. (ಉಸ್ತುವಾರಿಗೆ ಹೆಂಡತಿ).

"ಮಾತಾಜಿ, ಒಮ್ಮೆ ಕೇರಳಕ್ಕೆ ಬನ್ನಿ. ವಿದ್ಯುಚ್ಛಕ್ತಿ ವಿಷಯವೋ ಇನ್ನೇನೋ ಅಲ್ಲಿನ ಮುಖ್ಯಮಂತ್ರಿ ಜತೆ ಮಾತುಕತೆ ಇಟ್ಕೊಳ್ಳಿ."

"ಆಗಲಿ, ಆಗಲಿ."

೧೩

ರಂಗಧಾಮನನ್ನು ಕರೆದು ಸೌದಾಮಿನಿ ಹೇಳಿದಳು:

"ದಿಲ್ಲಿಯಲ್ಲಿ ನನಗೆಷ್ಟೇ ಪ್ರಭಾವ ಇದ್ದರೂ ನನ್ನ ಒಂದು ಯೋಜನೆ ಮಂಜೂರಾಗಲಿಲ್ಲ."

"ಯೋಜನೆ ಆಯೋಗದ ಭೇಟಿಗೆ ಚೌಗುಲೆಯವರೂ ವಿದ್ಯಾಧರರೂ ನಿನ್ನೆಯಷ್ಟೇ ಹೋದರು."

"ಅದಲ್ಲ ರಂಗಧಾಮ್. ಹೆಬ್ಬೆರಳು, ಕಿರುಬೆರಳು, ಮೂರು ಬೆರಳುಗಳ ವಿಷಯ ಹೇಳಿರಲಿಲ್ಲವೆ ?"

"ನಾನಿನ್ನೂ ಸಂಗ್ರಹ ಶುರು ಮಾಡಿಲ್ಲ. ಬೇಡವಂತೊ ?"

"ಬೇಡ !? ದಿಲ್ಲಿಯ ಪದಕೋಶದಲ್ಲಿ ಇರೋದೊಂದೇ ಪದ 'ಬೇಕು'."

"ಹಾಗಾದರೆ ನಿಮ್ಮ ಸಲಹೆ ಅವರಿಗೆ ಸ್ವೀಕೃತವಾಗಬೇಕಿತ್ತು."

"ಪ್ರತಿಯಾಗಿ ಸರಳ ಯೋಜನೆ ರೂಪಿಸಿದ್ದಾರೆ."

"ಹೇಳಿ, ಮಾತಾಜಿ."

"ತಿಂಗಳಿಗೆ ಒಂದು ಕೋಟಿ. ಅಷ್ಟು ಅವರಿಗೆ. ಹೆಚ್ಚಿಗೆ ಏನಾದರೂ ಇದ್ದರೆ ಪಕ್ಷದ ರಾಜ್ಯಸಮಿತಿಗೆ."

"ಸಂಗ್ರಹದ ಈ ಜವಾಬ್ದಾರಿ ನೀವೇ ವಹಿಸಿಕೊಳ್ಳಿ."

"ದಿಲ್ಲಿಯಲ್ಲಿ ನಿಮ್ಮನ್ನ ನೆನೆಸ್ಕೊಂಡೆ ರಂಗಧಾಮ್. ಕನಸಿನಲ್ಲೂ ನೀವು ಕಾಡ್ತೀರಿ, ನೆನಸಿನಲ್ಲೂ ಕಾಡ್ತೀರಿ !"

ಮಾತು ತಪ್ಪಿಸಿಕೊಂಡು ರಂಗಧಾಮನ ತುಟಿಗಳೆಡೆಯಿಂದ ಹೊರಬಿತ್ತು :

"ಮೋಹಿನಿ ಕಾಟ ಒಂದಿದೆ."

"ಮಹಾವ್ಯಾಧನನ್ನು ನೀವು ಮೋಹಿನಿಯಾಗಿ ಕಾಡ್ತೀರಿ, ಧ್ರುವ."

"ಮಾತಾಜಿ, ನೀವು ಅಪೇಕ್ಷಿಸೋದಾದರೆ ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಡ್ತೇನೆ."

"ಹುಚ್ಚಪ್ಪ ! ಮೊನ್ನೆ ತಾನೆ ವಿದೇಶ ಪ್ರವಾಸದ್ದು ಹೇಳ್ದೆ. ಅದು ತಮಾಷೆ ಅಲ್ಲ. ಕೋಟಿಗಟ್ಟಲೆ ವ್ಯವಹಾರ. ನಿಮ್ಮಲ್ಲಿ ನಾನಿಟ್ಟಿರೋ ವಿಶ್ವಾಸಕ್ಕೆ ರುಜುವಾತು. ಇವತ್ತು ಸಂಜೆ ಏಳು ಗಂಟೆಗೆ ನಮ್ಮ ನಿವಾಸದಲ್ಲಿ ಸಂಪುಟದ ಅನೌಪಚಾರಿಕ–

ಆದರೆ ಮಹತ್ವದ–ಸಭೆ ಇದೆಂತ ಬಾಯ್ದೆರೆಯಾಗಿ ಹೇಳಿ ಬನ್ನಿ. ನಾವು ಮತ್ತು ವಿದ್ಯಾಧರರನ್ನು ಬಿಟ್ಟರೆ ನಾಲ್ಕು ಜನ."

"ಸಂದೇಶ ಮುಟ್ಟಿಸ್ತೇನೆ, ಮಾತಾಜಿ."

....ಸಭೆ ಜರಗಿತು. ಮಾಸಿಕ ಕ್ವೋಟ ಒಂದು ಕೋಟಿಯಲ್ಲಿ ಯಾವ ಮಂತ್ರಿಯ ಪಂತಿಗೆ ಎಷ್ಟು ಎಂದು, ಸಂಪುಟದಲ್ಲಿ ಇಳಿದನಿಯಲ್ಲಿ, ಚರ್ಚೆ ನಡೆಯಿತು.

"ವಿದ್ಯಾಧರರೂ ಇದ್ದಿದ್ದರೆ ಚರ್ಚೆ ಪೂರ್ಣವಾಗ್ತಿತ್ತೇನೊ...." ಎಂದ ಬಾಲಾಜಿ.

"ವಿದ್ಯಾಧರರು ಅರ್ಥಾಶ್ವದ ಸವಾರ. ಖರ್ಚಿಗೆ ಕಡಿವಾಣ ಹಾಕೋದೇ ಅವರ ಕಸುಬು. ಆದರೂ ಅವರ ಜತೇನೂ ಮಾತಾಡ್ತೇನೆ, ದಿಲ್ಲಿಯಿಂದ ಅವರು ವಾಪಾಸಾದ್ಮೇಲೆ... ನಿಮ್ಮನ್ನೆಲ್ಲ ಕಂಡು ಹಣ ಕೇಳೋದಕ್ಕೆ ರಂಗಧಾಮರಿಗೆ ಸಂಕೋಚ. ಪ್ರತಿ ಮಂತ್ರಿಯೂ ನನ್ನ ಕೈಗೆ ಕೊಡಲಿ. ಆಗಬಹುದಾ ?"

"ಓಹೋ...."

"ಬ್ಯಾಂಕ್ ಲಾಕರುಗಳಲ್ಲಿ ಇಡೋದಕ್ಕೆ ಏರ್ಪಾಟು ಮಾಡ್ತೇನೆ. ದಿಲ್ಲಿಯಿಂದ ಪ್ರತಿ ತಿಂಗಳೂ ಬಂದು ಒಯ್ತಾರೆ. ನಮ್ಮ ರಾಜ್ಯದ್ದು ನಮ್ಮ ಹತ್ತಿರ ಇರುತ್ತೆ."

"ತಮ್ಮ ಹತ್ತಿರವೇ ಇರಲಿ, ಮಾತಾಜಿ."

"ಬಾಲಾಜಿ, ಸಂಗಪ್ಪ ಎಲ್ಲರೂ ಕಿವಿಗೊಟ್ಟು ಕೇಳಿ. ನಮ್ಮ ಗುಪ್ತಚಾರರಿಂದ ವರದಿ ಬಂದಿದೆ. ಸಮಾರಂಭದ ದಿವಸ ಜಾಣಪ್ಪನವರು ರಸ್ತೆಯಂಚಿನಲ್ಲಿ ಯಾಕೆ ನಿಂತಿದ್ರು ? ಹೇಳಿ ನೋಡೋಣ."

ಸಂಗಪ್ಪನೆಂದ :

"ನಮಗಾಗಿ ಕಾಯ್ತಿದ್ರೇನೊ ?"

"ನೂಕು ನುಗ್ಗಲಿನಲ್ಲಿ ಸಿಕ್ಕಿ ಹಾಕ್ಕೊಂಡ್ರು. ಒಬ್ಬ ಪೋಲೀಸ್ ಅವರನ್ನು ತಳ್ಳಿ, ಅವರ ತಲೆಗೆ ಲಾಟಿ ಬೀಸಿದ. ಜಾಣಪ್ಪ ತಪ್ಪಿಸ್ಕೊಂಡ್ರು. ಇಲ್ಲದೆ ಹೋಗಿದ್ರೆ ಎರಡು ಹೋಳಾದ ತಲೆ ಬುರುಡೇನ ಕೇರಳ ಸರಕಾರಕ್ಕೆ ಪಾರ್ಸೆಲು ಮಾಡಬೇಕಾಗ್ತಿತ್ತು."

"ಭಯಂಕರ! ಹೀಗೂ ಆಯ್ತೆ ? ಆ ಪೋಲೀಸನ ಮೇಲೆ ಕೇಸು ದಾಖಲಾಯ್ತಾ ?"

"ಬಹಿರಂಗ ಪಡಿಸಿದ್ರೆ ಸಂಗಪ್ಪ–ಬಾಲಾಜಿ ರಾಜಿನಾಮೆ ಕೊಡ್ಬೇಕಾಗುತ್ತೆ. ತ್ಯಾಗಪತ್ರ –ದಿಲ್ಲಿಯಲ್ಲಿ ಹೇಳೋ ಹಾಗೆ, ಜಾಣಪ್ಪನವರು ತುಟಿಪಿಟ್ಟೆನ್ನಲಿಲ್ಲವಲ್ಲ? ದೊಡ್ಡ ಮನುಷ್ಯ, ನಿಜವಾಗಿಯೂ."

"ಐ.ಜಿ.ಪಿ. ಏನ್ಹೇಳ್ತಾನೆ ?"

"ತಾಕೀತು ಮಾಡಿದೀನಿ. ದಕ್ಷ ಅಧಿಕಾರಿ. ಆದರೆ ಆ ಪಾಟಿ ಜನ ಮುಕರಿದರೆ ಏನು ಮಾಡೋಕಾಗ್ತದೆ ?"

ಚೌಗುಲೆಯೂ ವಿದ್ಯಾಧರನೂ ಬಜೆಟಿಗೆ ಅಂತಿಮ ರೂಪ ಕೊಡುತ್ತಿದ್ದಂತೆ ಪರಶುರಾಮ ಸಣ್ಣಪೇಟೆಗೆ ಹೋದ. ಧನಂಜಯಕುಮಾರನ ಅಂಗಡಿಯಲ್ಲಿ ಕಪಾಟಗಳನ್ನು ಅತ್ತಿತ್ತ ಸರಿಸಿದ್ದರು. ಅವುಗಳ ಗೋಡೆಯನ್ನು ಅಲಂಕರಿಸಿತ್ತು, ಗರಿಷ್ಠ ಪ್ರಮಾಣಕ್ಕೆ ವಿಸ್ತರಿಸಿದ್ದ ಒಂದು ಛಾಯಾ ಚಿತ್ರ. ಮುಗುಳ್ನಗುತ್ತಿದ್ದ ಸೌದಾಮಿನಿ ದೇವಿ ; ಅವರ ಹಿಂದೆ ಆತ್ಮವಿಶ್ವಾಸದಿಂದ ನಿಂತಿದ್ದ ಧನಂಜಯಕುಮಾರ್.

"ಭಾವಚಿತ್ರ ಚೆನ್ನಾಗಿದೆ," ಎಂದ ಪರಶುರಾಮ್.

"ನೂರಾರು ಚಿತ್ರಗಳಿಂದ ಇದನ್ನು ಆರಿಸಿ ಎನ್‌ಲಾರ್ಜ್ ಮಾಡಿಸ್ದೆ. ಸಮಾರಂಭದ ನೆನಪಿಗಿರಲಿ ಅಂತ."

"ನೀವೊಂದು ಬಿಲ್ ಕೊಡ್ಬೇಕಂತೆ."

"ತಮಾಷೆ ಮಾಡ್ತೀರಾ ಪರಶುರಾಮ್ ಸಾಹೆಬ್ ? ಅದು ನನ್ನ ಕಿಂಚಿತ್ ಸೇವೆ."

"ನೀವು ಹಾಗೆ ಹೇಳ್ತೀರಿ ಅಂತ ಮುಖ್ಯಮಂತ್ರಿನೇ ಅಂದ್ರು. ಆದರೂ ದಾಖಲೆಗೇಂತ—"

"ಒಂದಿನ್ನೂರು ರೂಪಾಯಿಗೆ ಕೊಡ್ಲಾ ?"

"ಛೆ ! ಇಪ್ಪತ್ತೈದು ಸಾವಿರಕ್ಕೆ ಕೊಡಿ."

ಅರಿವಿನ ಕಿಡಿ ಬೆಳಗಿದಂತಾಯಿತು ಸಾಹುಕಾರನಿಗೆ. ನಗೆಯ ಮುಖವಾಡವನ್ನು ಆತ ಬದಲಾಯಿಸಲಿಲ್ಲ. ಬಿಲ್ ಸಿದ್ಧವಾಯಿತು.

"ನಮ್ಮ ಮೇಲೆ ಕೃಪೆ ಇರಲಿ, ಖಾವಂದರೆ."

ಪರಶುರಾಮ್ ಸಾಹುಕಾರನ ಕಿವಿಯಲ್ಲಿ ಪಿಸುಗುಟ್ಟಿದ :

"ನಮ್ಮ ರಾಜ್ಯದಲ್ಲಿ ಸರಕಾರೀ ಕ್ಷೇತ್ರದಲ್ಲಿ ತಯಾರಾಗ್ತಿರೋ ರೇಷ್ಮೆ ಸೀರೆ ಬಟ್ಟೆ ಎಲ್ಲದರ ಮಾರಾಟದ ಗುತ್ತಿಗೆ ವಹಿಸ್ಕೊಳ್ಳಿ. ಇಂಥ ವ್ಯವಸ್ಥೆಗೆ ಅವಕಾಶ ಕೊಡೀಂತ ಮುಖ್ಯಮಂತ್ರಿಗೆ ಒಂದು ಅರ್ಜಿ ಬರೀರಿ."

"ಅದು ಹ್ಯಾಗೆ ಬರೀಬೇಕೂಂತ ಕೊಂಚ ನೀವೇ ಹೇಳ್ಕೊಟ್ರೆ..."

"ಇನ್ನೊಂದು ದಿವಸ ಬರ್ತೀನಿ. ಇವತ್ತು ಟೈಮಾಯ್ತು."

"ನಾನೇ ಬರಲಾ ?"

"ಅಪನಂಬಿಕೇನಾ ? ಖಂಡಿತ ಬರ್ತೀನಿ."

ಅಷ್ಟು ಹೇಳಿ ಪರಶುರಾಮ ಬೀದಿಗಿಳಿಯುತ್ತ ಗೋಡೆಯಲ್ಲಿದ್ದ ಛಾಯಾಚಿತ್ರವನ್ನು ಮತ್ತೊಮ್ಮೆ ನೋಡಿದ. ಮಾತಾಜಿಗೆ ತಿಳಿಸಬೇಕು ಎಂದು ಮನಸ್ಸಿನಲ್ಲೇ ಟಿಪ್ಪಣಿ ಹಾಕಿಕೊಂಡ.

ಸಾಹುಕಾರ ತಾನು ಮಾಡಿಸಿ ಬಿಳಿಯ ಕಟ್ಟು ಹಾಕಿಸಿದ್ದ ಚಿತ್ರವನ್ನು ಹೆಂಡತಿಗೆ

ತೋರಿಸಿದ್ದ. ಮೊದಲು ಅವಳಿಗೆ ಅರ್ಥವಾಗಲಿಲ್ಲ. ನೆಟ್ಟ ದೃಷ್ಟಿಯಿಂದ ಕೆಲ ನಿಮಿಷ ಅದನ್ನೆ ನೋಡಿದಳು.

ಗೊಗ್ಗರ ಧ್ವನಿಯಲ್ಲಿ ಕೇಳಿದಳು :

"ಯಾರು ಈಯಮ್ಮ ?"

"ಮುಖ್ಯಮಂತ್ರಿ ಕಣೆ. ಎಷ್ಟು ಸಾರಿ ಹೇಳಿದೀನಿ...."

"ಏನೇ ಇರಲಿ. ಈ ಚಿತ್ರ ಮನೇಲಿ ಬೇಡ."

"ಬೇಕು ಅಂದರೂ ಯಾರು ಇಲ್ಲಿ ತೂಗ ಹಾಕ್ತಾರೆ ? ಅದು ಅಂಗಡಿಗೆ. ಮುಖ್ಯಮಂತ್ರಿ ಜವಳಿ ಖರೀದಿಸುವ ಅಂಗಡೀಂತ ಬರೋ ಗಿರಾಕಿಗಳ ಸಂಖ್ಯೆ ಹೆಚ್ಚಾಗ್ತದೆ."

ಸಾಹುಕಾರನ ಪತ್ನಿ ಅಡುಗೆ ಮನೆಗೆ ಹೋಗಿ ಒಂದು ಲೋಟ ತಣ್ಣೀರು ಕುಡಿದಳು. ಮನೆ ದೇವರ ಮುಂದೆ ನಿಂತು, 'ಮಾಯಾವಿನಿಯರಿಂದ ನನ್ನ ಗಂಡನನ್ನು ರಕ್ಷಿಸು' ಎಂದು ಮೌನ ಪ್ರಾರ್ಥನೆ ಸಲ್ಲಿಸಿದಳು.

* * *

ಚೌಗುಲೆ ಮತ್ತು ವಿದ್ಯಾಧರ ಮುಖ್ಯಮಂತ್ರಿಯ ಭೇಟಿಗೆ ಬಂದರು.

ಮುಖ್ಯ ಕಾರ್ಯದರ್ಶಿ ಅಂದ :

"ಇದು ಗೋಪ್ಯ."

"ಬಾಗಿಲು ಎಳಕೋ ಅನ್ನಿ ಪರಶುರಾಮನಿಗೆ."

ಬಾಗಿಲು ಸದ್ದಿಲ್ಲದೆ ಮುಚ್ಚಿಕೊಂಡಿತು.

"೧೭೫ ಕೋಟಿ ಕೊರತೆ ಬಜೆಟ್."

"ಕೊರತೆ ಬಜೆಟ್ ? ಸಾಧ್ಯವೇ ಇಲ್ಲ !"

ಕಾರ್ಯದರ್ಶಿ ವಿವರಿಸಿದ :

"ಇದರಿಂದ ಪ್ರಯೋಜನವಿದೆ. ಕೇಂದ್ರದಿಂದ ವಿಶೇಷ ನೆರವು ಆಗಾಗ್ಗೆ ಪಡೀಬಹುದು. ಕೆಲ ತಿಂಗಳಾದ ಮೇಲೆ ತೆರಿಗೆ ಹೆಚ್ಚಿಸಬಹುದು. ಹೊಸ ತೆರಿಗೆ ಹಾಕಬಹುದು. ನಾವು ಸ್ಥಿತಿವಂತರೂಂತ ತೋರಿಸಿಕೊಳ್ಳದೆ ಇರೋದೇ ಜಾಣತನ."

"ಶಿವಭಾವು, ತಲೆ ಅಂದರೆ ನಿಮ್ಮದು ! ಅಲ್ಲವಾ ವಿದ್ಯಾಧರ್ ?"

"ಹೌದು ಮಾತಾಜಿ,"

"ಪೀಠಿಕೆಯನ್ನಿಷ್ಟು ಓದಿ."

ಅಲ್ಲಿತ್ತು, ಜಗತ್ತಿನಲ್ಲೇ ಬಲಿಯುತ್ತಿರುವ ಹಣಕಾಸಿನ ಮುಗ್ಗಟ್ಟು; ಅಭಿವೃದ್ಧಿ ಹೊಂದುತ್ತಿರುವ ನಮ್ಮ ರಾಷ್ಟ್ರದ ವಿಶಿಷ್ಟ ಸಮಸ್ಯೆಗಳು, ಆ ಹಿನ್ನೆಲೆಯಲ್ಲಿ ಕಿಷ್ಕಿಂಧೆಯ ಚಿತ್ರ.

"ರಾಜ್ಯದ ನಾಯಕತ್ವಕ್ಕೆ, ಪಕ್ಷ ಸಂಪಾದಿಸಿದ ಪ್ರಚಂಡ ವಿಜಯಕ್ಕೆ ಸಂಬಂಧಿಸಿ ಏನೂ ಇಲ್ವಲ್ಲ...."

"ಅದು ರಾಜ್ಯಪಾಲರ ಭಾಷಣದಲ್ಲಿ ಆಗಲೇ ಬಂದಿದೆ, ಮಾತಾಜಿ."

"ಹೌದು. ರಾತ್ರೆ ಓದಿ, ಬೆಳಗ್ಗೆ ಕೊಡ್ತೀನಿ."

ವಿದ್ಯಾಧರ ಹಾಳೆಗಳನ್ನು ಬ್ರೀಫ್ ಕೇಸಿನಲ್ಲಿರಿಸಿ, ಬೀಗ ತಗಲಿಸಿ, ಬೀಗದ ಕೈ ಸಹಿತ ಮುಖ್ಯಮಂತ್ರಿಯ ಮೇಜಿನ ಮೇಲಿರಿಸಿದ. ಯಾವ ಸ್ಪರ್ಶ ಸುಖವೂ ಲಭಿಸದೆ ಮರುದಿನ ಅವು ಮರಳಿದುವೆನ್ನಿ. ಮುಖ್ಯಮಂತ್ರಿ ಕೇಳಿದಳು :

"ಬಜೆಟ್ ಅಧಿವೇಶನದ ನೋಟೀಸು ಹೋಗಿದೆಯೊ ಖಾತರಿ ಮಾಡಿಕೊಳ್ಳಿ."

ಶಾಸಕರ ಭವನದಲ್ಲಿ ಗಿಜಿಬಿಜಿ. ನಗರದ ಹೊರಗಿನ ಶಾಸಕರ ಜತೆಗೆ ಊರಿನ ಬೆಂಬಲಿಗರು ಬಂದಿದ್ದರು. ಸರಕಾರೀ ಕಚೇರಿಯಲ್ಲಿ ಬೆಳಗಿನ ಹೊತ್ತು ಶಾಸಕರದೇ ಓಡಾಟ. ಮಧ್ಯಾಹ್ನದ ಅನಂತರ ವಿಧಾನಮಂಡಲದ ಅಧಿವೇಶನ.

ಇಂದು ಬಜೆಟ್ ಮಂಡನೆಯೆಂದು ವಿಶೇಷ ಗದ್ದಲ. ಪ್ರೇಕ್ಷಕರ ಗ್ಯಾಲರಿ, ಪ್ರೆಸ್ ಗ್ಯಾಲರಿ, ಅಧಿಕಾರಿಗಳ ಗ್ಯಾಲರಿ ಎಲ್ಲ ಭರ್ತಿ. ಸಭಾಧ್ಯಕ್ಷರನ್ನೂ ಒಳಗೊಂಡು ಸದಸ್ಯರ ಒಟ್ಟು ಸಂಖ್ಯೆ ೧೬೨. ಸಭಾಪತಿಯನ್ನು ಕಳೆದರೆ ೧೬೧. ಒಬ್ಬರದು ಸಮತಾಪಕ್ಷ. ಉಳಿದ ೧೬೦ ರಲ್ಲಿ ಐವರು ಪ್ರಜಾಪಕ್ಷದದರು. ೧೫೫ ಮಂದಿ ರಾಷ್ಟ್ರ ಪಕ್ಷದವರು. ಠೀಕೋ ಠಾಕ್ ದಿರಿಸಿನ ಶಾಸಕರು ಬರತೊಡಗಿದರು. ಶಾಸಕರ ಭವನದಲ್ಲಿ ವಸತಿ ಮಾಡಿದವರು ಕಾಲ್ನಡಿಗೆಯಲ್ಲಿ, ನಗರದಲ್ಲಿ ಮನೆಗಳಿದ್ದವರು ಕಾರುಗಳಲ್ಲಿ, ಎಲ್ಲೋ ಕೆಲವರು ಆಟೋರಿಕ್ಷಾಗಳಲ್ಲಿ.

ಮುಖ್ಯಮಂತ್ರಿಯ ಆಗಮನವಾಯಿತು. ಆಳುವ ಪಕ್ಷದವರು ಹರ್ಷೋದ್ಗಾರ ಮಾಡಿದರು. ಸಪ್ತರ್ಷಿಮಂಡಲ ಪೂರ್ಣವಾಯಿತು, ಕರಿಯ ಬ್ರೀಫ್‌ಕೇಸ್ ಹಿಡಿದು ವಿದ್ಯಾಧರ ಬಂದೊಡನೆ ಏಳು ನಕ್ಷತ್ರಗಳೂ ತಮ್ಮ ತಮ್ಮ ಸ್ಥಾನಗಳಲ್ಲಿ ಮಿನುಗಿದುವು. 'ನಂದಿಕೋಲಿ'ನ ಹಿಂದೆ ಸಭಾಪತಿ ಲಕ್ಷ್ಮೀಪತಯ್ಯ ತಮ್ಮ ಕೊಠಡಿಯಿಂದ ನಡೆದು ಬಂದರು, ಚಪ್ಪಾಳೆಗಳ ಸ್ವಾಗತ.

ಸಭಾಪತಿ, ಒಂದು ಗಂಟೆಗೆ ಸರಿಯಾಗಿ ಆಯವ್ಯಯ ಮುಂಗಡಪತ್ರ ಮಂಡಿಸಲು ಅರ್ಥಮಂತ್ರಿಯನ್ನು 'ಕರೆದರು.' ಪೀಠದಿಂದೆದ್ದು ನಿಂತು ವಾಚನ. ಎಲ್ಲ ಶಾಸಕರಿಗೂ ಮುದ್ರಿತ ಪ್ರತಿಗಳ ವಿತರಣೆಯಾಯಿತು.

ವಿದ್ಯಾಧರ ಓದಿದ, ಓದಿದ. ತನ್ನ ಮಾತಿನ ಓಘಕ್ಕೆ ತಾನೇ ಮಾರುಹೋದ. ಶಾಸಕರು ಐದು ನಿಮಿಷ ಕುತೂಹಲಿಗಳಾಗಿದ್ದರು. ಬಳಿಕ ಬೋರೆನಿಸಿತು. ಆಕಳಿಸಿದರು, ತೂಕಡಿಸಿದರು. ಅಲ್ಲಲ್ಲಿ ಕೆಲವರು ಪರಸ್ಪರ ಪಿಸುಮಾತನಾಡಿದರು.

ಅಂತೂ ಒಂದು ಗಂಟೆ ಕಾಲದ ಭೋರ್ಗರೆತದ ಬಳಿಕ–ಸ್ಪಷ್ಟವಾದದ್ದು ಇಷ್ಟು. ಕಿಷ್ಕಿಂಧೆ ರಾಜ್ಯದ್ದು ೧೭೫ ಕೋಟಿ ಕೊರತೆಯ ಬಜೆಟ್. ಆದರೆ ಹೊಸ ತೆರಿಗೆಗಳಿಲ್ಲ,

ಪ್ರತಿಕ್ರಿಯೆಗಳಿಗಾಗಿ ಪತ್ರಿಕಾಪ್ರತಿನಿಧಿಗಳು ಚುರುಕಾಗಿ ಚಲಿಸಿದರು.

ಒಂದು ಕಾಲದಲ್ಲಿ ಅರ್ಥಶಾಸ್ತ್ರದ ಪಾಠ ಹೇಳಿದ್ದ ಶಾಸಕ :

"ಅರ್ಥಮಂತ್ರಿ ಎಚ್ಚರಿಕೆಯ ಹೆಜ್ಜೆ ಇಟ್ಟಿದ್ದಾರೆ."

ಪ್ರತಿಪಕ್ಷದ ನಾಯಕ :

"ಸಪ್ಪೆ. ಅಭಿವೃದ್ಧಿಗಾಗಿ ಘೋಷಿಸಿರುವ ಸೌದಾಮಿನಿ ಪ್ರಣಾಳಿಕೆ ಅರ್ಥ–ಶೂನ್ಯ."

ಸಮತಾ ಶಾಸಕ ದಂಡಪಾಣಿ :

"ಇಲ್ಲಿ ಇಲ್ಲದ ತೆರಿಗೆಗಳು ಮುಂದೆ ಮುಖ ತೋರಿಸುವುದು ಖಂಡಿತ."

ಹಲವರು ಶಾಸಕರು ವಿದ್ಯಾಧರನ ಕೈ ಕುಲುಕಿದರು. ಅದನ್ನು ನೋಡಿಯೂ ನೋಡದಂತೆ ಸುಮ್ಮನಿದ್ದಳು ಸೌದಾಮಿನಿ.

ಕಾರ್ಯಕಲಾಪಗಳ ಸಮಿತಿ ಸಭೆ ಸೇರಿ ಅಧಿವೇಶನದ ವೇಳಾಪಟ್ಟಿಯನ್ನು ಗೊತ್ತುಮಾಡಿತು.

೧೪

ಮಂಗಡ ಪತ್ರದ ಮೇಲಣ ಚರ್ಚೆಯ ಆರಂಭದ ದಿನ ಸದನದಲ್ಲಿ ಶಾಶಕರ ಹಾಜರಿ ಅರ್ಧಕ್ಕೆ ಇಳಿಯಿತು. ದಿನಕಳೆದಂತೆ ಒಮ್ಮೆ ಒಬ್ಬಿಬ್ಬರು ಹೆಚ್ಚು, ಒಬ್ಬಿಬ್ಬರು ಕಮ್ಮಿ. ಒಮ್ಮೊಮ್ಮೆ ಕನಿಷ್ಠ ಸಂಖ್ಯೆಯೂ ಇಲ್ಲದೆ, ಕಲಾಪಗಳನ್ನು ಮುಂದಕ್ಕೆ ಹಾಕ ಬೇಕಾಗುತ್ತಿತ್ತು, ಹದಿನೈದು ಮಿನಿಟುಗಳ–ಅಥವಾ ಅರ್ಧ ಗಂಟೆಯ ಮಟ್ಟಿಗೆ. ಟೀಕೆ ಗೋಸ್ಕರ ಟೀಕೆ. ಸಮರ್ಥನೆಗೋಸ್ಕರ ಸಮರ್ಥನೆ. ಭರ್ತ್ಸನೆ ಅಥವಾ ಭಟ್ಟಂಗಿತನ.

ಸೌದಾಮಿನಿ ಶಾಸಕರ ಗೈರುಹಾಜರಿ ಕಂಡು ಸಿಟ್ಟಾದಳು. ಸಭಾಪತಿ ಲಕ್ಷ್ಮೀಪತಯ್ಯ ಇಳಿದನಿಯಲ್ಲಿ, ತಮ್ಮ ಕೊಠಡಿಯಲ್ಲಿ ಅಂದರು :

“ಮಾತಾಜಿ, ಶಾಸಕಾಂಗದ ಪಕ್ಷದ ಸಭೇಲಿ ಈ ವಿಷಯ ಎತ್ಕೊಂಡು ಚುರುಕು ಮುಟ್ಟಿಸಿ.”

“ಹಾಗೆ ಮಾಡೋದೇ ಸರಿ ಅಂತ ಇದೇ ಈಗ ನನಗೂ ಅನಿಸ್ತು.”

ಪ್ರತಿ ಸೋಮವಾರ ಶಾಸಕಾಂಗ ಪಕ್ಷದ ಸಭೆ. (ಐವರೇ ಇದ್ದರೇನಂತೆ, ಪ್ರಜಾ ಪಕ್ಷದ ಶಾಸಕರೂ ಸಭೆ ಸೇರುತ್ತಿದ್ದರು) ಸೌದಾಮಿನಿ ಎಚ್ಚರಿಸಿದಳು :

“ಪ್ರತಿಯೊಬ್ಬ ಶಾಸಕನ ವಿಷಯದಲ್ಲೂ ದಾಖಲೆ ಪುಸ್ತಕ ಇಡಬೇಕಾಗುತ್ತೆ. ಗೈರುಹಾಜರಿ ಅಪರಾಧ. ಸಹಿಹಾಕಿ ಹೊರಟುಬಿಡೋದು ಸರಿಯೇ ? ತೆರಿಗೆದಾರರ ಹಣದ ದುರ್ವಿನಿಯೋಗ ನಾನು ಸಹಿಸಲಾರೆ.”

ವೃದ್ಧ ಶಾಸಕನೊಬ್ಬ ಎದ್ದು ನಿಂತು ಅಂದ :

“ಬೇಡಿ ಮಾತಾಜಿ, ಬೇಡಿ. ಕಠಿನ ನಿರ್ಬಂಧ ಹೇರಬೇಡಿ. ಮನೆ ಮಠ. ಮಕ್ಕಳು ಮರಿ, ಕಾಹಿಲೆ ಕಸಾಲೆ. ನಾವು ಮನುಷ್ಯರಲ್ಲವಾ ? ಸ್ವಲ್ಪ ಹೆಚ್ಚು ಕಮ್ಮಿ ಆದರೇನಂತೆ ?”

ಮಕ್ಕಳು ಮರಿ ಎಂದು ಈ ಗೂಬೆ ತನ್ನನ್ನು ಲೇವಡಿ ಮಾಡುತ್ತಿಲ್ಲವಷ್ಟೆ– ಎಂದು ಸೌದಾಮಿನಿ ಹುಬ್ಬೇರಿಸಿದಳು. ಸಂಯಮ ತಂದುಕೊಂಡು ಅಂದಳು :

“ನೀವು ಹೇಳಿದ್ದರಲ್ಲಿ ನಿಜಾಂಶ ಇಲ್ಲ ಅನ್ನಲಾರೆ. ಆದರೆ, ರಾಜಕೀಯವೇ ನಮ್ಮ ಉಸಿರು ಅನ್ನೋದನ್ನು ನಾವು ಮರೀಬಾರದು. ಬಂಡೆ ಬಹುಮತ ಇದೆ ಅಂತ ಜನಸೇವೆ ಬಗ್ಗೆ ಅಲಕ್ಷ್ಯ ತೋರಿಸಿದರೆ ಮೊಸಳೆ ಬಂದೀತು, ನಿಜವಾದ ಮೊಸಳೆ !” (ಇಂದ್ರಾವತಿ ನದಿಯ ಸ್ನಾನಘಟ್ಟದ ಬಳಿ ಮೊಸಳೆ ಇರಲಿಲ್ಲ.)

ಮರುದಿನದಿಂದ ಹಾಜರಾತಿಯಲ್ಲಿ ಗಣನೀಯವಲ್ಲವಾದರೂ ಸ್ವಲ್ಪ ಮಟ್ಟಿನ ಏರಿಕೆ ಕಂಡು ಬಂತು.

....ಆ ರಾತ್ರಿ ಗುಪ್ತಚಾರದಳದ ಮುಖ್ಯಸ್ಥ ಕಾಣಲು ಬಂದ.

ಸಮತಾಪಕ್ಷದ ಅಧೀನದಲ್ಲಿದ್ದ ರೈತ–ಕಾರ್ಮಿಕ ಸಂಘಟನೆಗಳು ರಾಜ್ಯದ ಆದ್ಯಂತ ಹೋರಾಟದ ಮಾತು ಆಡಲು ತೊಡಗಿದ್ದುವಂತೆ. ಬೇಡಿಕೆ (ಆಗ್ರಹದ ಕೇಳಿಕೆ)ಗಳ ಪಟ್ಟಿ ಸಿದ್ಧವಾಗುತ್ತಿದೆಯಂತೆ. ವಿಧಾನಸಭೆಯ ಅಧಿವೇಶನ ನಡೆಯುತ್ತಿರುವಾಗಲೇ ಕಾರ್ಯಸೌಧ ಚಲೋ ಮಾಡ್ತಾರಂತೆ. ರಾಜ್ಯದ ವಿವಿಧ ಮೂಲೆಗಳಿಂದ ರೈಲು–ಬಸ್ಸು–ಲಾರಿಗಳಲ್ಲಿ ಬಂದು ರಾಜಧಾನಿಯಲ್ಲಿ ಜಮೆಯಾಗ್ತಾರಂತೆ.

"ಘೋಷಣೆಗಳೇನು ತಿಳಿಯಿತೆ ?" ಮುಖ್ಯಮಂತ್ರಿಯ ಪ್ರಶ್ನೆ.

ಅಧಿಕಾರಿಯ ವರದಿ :

"ಡೌನ್ ವಿದ್ ಮಾತಾಜಿ ! ರಾಷ್ಟ್ರಪಕ್ಷ ಮುರ್ದಾಬಾದ್ ! ಉಳುವವನಿಗೆ ಹೊಲ ! ಕೈಗಾರಿಕೆಗಳ ರಾಷ್ಟ್ರೀಕರಣ....!"

"ಸರಿ, ಸರಿ. ಮಾತಾಜಿ ವಿಚಾರ ಬಿಟ್ಟರೆ ಹೊಸದೇನೂ ಇಲ್ಲ. ಐಜಿಪಿಯವರಿಗೆ ತಿಳಿಸಿದಿರೊ ?"

"ಇಲ್ಲ. ಮೊದಲು ತಮಗೆ ವರದಿ ಒಪ್ಪಿಸಿ—"

"ಈಗಲೇ ಹೋಗಿ ಅವರನ್ನು ಭೇಟಿ ಮಾಡಿ. ನಾಳೆ—"

"ಭಾನುವಾರ."

"ಏನು ಭಾನುವಾರವಾದರೆ? ಬೆಳಗ್ಗೆ ಬಂದು ನನ್ನನ್ನು ಕಾಣಬೇಕೂಂತ ಹೇಳಿ."

"ಹೇಳ್ತೀನಿ, ಮಾತಾಜಿ."

ಮಾರನೆಯ ದಿನ ಬೆಳಗ್ಗೆ ಐಜಿಪಿ ಗೃಹಕಾರ್ಯಾಲಯಕ್ಕೆ ಬಂದರು.

"ರಾಜಕೀಯವಾಗಿ ಸಮತಾಪಕ್ಷ ಬರಿ ಸೊನ್ನೆ" ಎಂದಳು ಮುಖ್ಯಮಂತ್ರಿ.

"ಆದರೆ ಮಿಸ್ಚೀಫ್ ಪೊಟೆನ್ಷಿಯಲ್...."

"ಇದೆ, ಒಪ್ತೇನೆ."

"ಚಲೋ–ಯಾವತ್ತೂಂತ ತಿಳಿತೆ ?"

"ಗೋಪ್ಯವಾಗಿಟ್ಟಿದ್ದಾರೆ. ಆದರೆ ಗುಪ್ತಚಾರದಳದ ಮುಖ್ಯಸ್ಥರಿಗೆ ಇವತ್ತು ನಸುಕಿನಲ್ಲಿ ಬಂದಿರೋ ಸಂದೇಶದ ಪ್ರಕಾರ, ನಾಳೆ ಅಲ್ಲ—ಮೇಲಣ ಸೋಮವಾರ ಅಂತೆ."

"ಅದರ ಹಿಂದಿನ ಶನಿವಾರವೇ ಅಧಿವೇಶನ ಮುಕ್ತಾಯಗೊಳಿಸಿದರೆ ?"

"ಸರಕಾರ ಹೆದರ್ಬಿಡ್ತು ಅಂತ ಜನ ಭಾವಿಸಿಯಾರು."

"ತಮಾಷೆಗೆ ಹೇಳ್ದೆ. ಸೆಕ್ಷನ್ ೧೪೪ ತಾನೆ ? ಮುಂಜಾಗರೂಕತೆ ಕ್ರಮವಾಗಿ ಮುಖಂಡರನ್ನೆಲ್ಲ ದಸ್ತಗಿರಿ ಮಾಡ್ತೀರಿ, ಅಲ್ವೆ ?"

"ಕಾರ್ಯಸೌಧದ ಒಂದು ಮೈಲು ಸುತ್ತಳತೇಲಿ ನಿಷೇಧಾಜ್ಞೆ ಸಾಕು."

"ಲಾಠೀಪ್ರಹಾರ, ಅಶ್ರುವಾಯು, ಕಂಡಲ್ಲಿ ಗುಂಡು–ಯಾವುದಕ್ಕೂ ಹೆದರಬೇಡಿ ! ನನ್ನ ಪೂರ್ತಿ ಬೆಂಬಲ ನಿಮಗಿದೆ !"

"ಅಧಿವೇಶನ ಇರೋದರಿಂದ ಪ್ರತಿಪಕ್ಷದವರು ಗಲಾಟೆ ಮಾಡಬಹುದು."

"ಅದರ ಗೊಡವೆ ನಿಮಗ್ಯಾಕೆ ? ಸದನದಲ್ಲಿ ೧೪೪ನೇ ಸೆಕ್ಷನ್ ನನ್ನಿಂದ ಜಾರಿ ಆಗ್ತದೆ !"

"ನಾನು ಹೊರಡ್ಲಾ ?"

"ಕಾಫಿ ತಗೊಂಡು ಹೋಗಿ."

ಸಮತಾ ಪಕ್ಷಕ್ಕೆ ಅದು ಅಳಿವು ಉಳಿವಿನ ಪ್ರಶ್ನೆ. ಅಂಥ ಪ್ರಸಂಗಗಳಲ್ಲಿ ವೈರಿ (ಸರಕಾರ) ಕೈಗೊಳ್ಳುವ ಕ್ರಮ ಅವರಿಗೆ ತಿಳಿಯದ್ದಲ್ಲ. ಆದಷ್ಟು ಗುಟ್ಟಾಗಿ ಬೇರೆ ಬೇರೆಯಾಗಿ ಹೊರಟು, ಪ್ರದರ್ಶನದ ಹಿಂದಿನ ಸಂಜೆ ಸ್ವಾತಂತ್ರ್ಯೋದ್ಯಾನದಲ್ಲಿ ಒಟ್ಟಾಗಬೇಕು. ಸಣ್ಣ ಸಣ್ಣ ಗುಂಪುಗಳಲ್ಲಿ ನಗರದ ನಾನಾ ಮೂಲೆಗಳಿಂದ ಸ್ಥಳೀಯರು ಬರಬೇಕು, ಮೌನವಾಗಿ. ಬಳಿಕ ಮೆರವಣಿಗೆ. ಭಾರೀ ಪೋಲೀಸ್ ಪಡೆಯಾದರೆ ತಕ್ಷಣ ಚೆದರಿ, ಮಧ್ಯಾಹ್ನಕ್ಕೆ ಸರಿಯಾಗಿ ಕಾರ್ಯಸೌಧ ಶಾಸನ ಸೌಧಗಳ ಮಹಾದ್ವಾರ ಗಳಲ್ಲಿ ಇರಬೇಕು....

ಬಂಧನಕ್ಕೆ ಮುಖಂಡರು ಸಿಗಲಿಲ್ಲ. ರೈತರೂ ಕಾರ್ಮಿಕರೂ ಕಣ್ಣುಮುಚ್ಚಾಲೆ ಆಡಿದರು, ಪೋಲೀಸರ ಜತೆ. ಸಂಘಟನೆಗಳ ಬಾವುಟಗಳು ಹಾರಾಡಿದುವು. ಘೋಷಣೆಗಳು ಬಲಗೊಂಡುವು. ದಂಡಪಾಣಿ ಮೆಟ್ಟಲುಗಳ ಮೇಲೆ ನಿಂತು ಭಾಷಣ ಆರಂಭಿಸಿದ :

"ಸಂಗಾತಿಗಳೇ ! ಕಿಷ್ಕಿಂಧೆಯ ಶ್ರಮಜೀವಿಗಳ ಹೋರಾಟದ ಇತಿಹಾಸದಲ್ಲಿ ಇದು ಅವಿಸ್ಮರಣೀಯ ದಿನ."

ಮುಖ್ಯಮಂತ್ರಿ ಅಬ್ಬರಿಸಿದ್ದರೂ ಐ.ಜಿ.ಪಿ. ತುಸು ಸೌಮ್ಯವಾಗಿ ವರ್ತಿಸಿದ್ದ. ಮುಖ್ಯಮಂತ್ರಿಯ ಪ್ರೀತ್ಯರ್ಥ ಕೊನೆಯ ಹಂತದಲ್ಲಿ ಶಸ್ತ್ರ ಪ್ರಯೋಗಿಸಿದರಾಯಿತು ಎಂದು ಆತ ಜೀಪಿನಲ್ಲಿ ಮ್ಯಾಜಿಸ್ಟ್ರೇಟರ ಜತೆ ಕುಳಿತು, ನಡೆಯುತ್ತಿದ್ದುದನ್ನು ನೋಡಿದ.

"ಮುಖ್ಯಮಂತ್ರಿ ಸಿಟ್ಟಾಗಿದ್ದಾರೆ" ಎಂದು ಸುದ್ದಿ ಬಂತು.

ಮ್ಯಾಜಿಸ್ಟ್ರೇಟರು ಎಚ್ಚರಿಕೆಯ "ಕೇಳಿರಿ ! ಕೇಳಿರಿ !" ಗಂಟೆ ಬಾರಿಸಿದರು. ಬಾವುಟಗಳಾಗಲೀ ಭಿತ್ತಿಪತ್ರಗಳಾಗಲೀ ಜನರಾಗಲೀ ಕದಲಲಿಲ್ಲ. ಪೋಲೀಸರ ತುಕಡಿಯಿಂದ ಲಾಠಿ ಪ್ರಹಾರ ನಡೆಯಿತು. ದಂಡಪಾಣಿಯನ್ನು ಕೆಳಕ್ಕೆ ಎಳೆದು ತಂದರು, ಲಾಠಿಯಿಂದ ಹೊಡೆದರು. ಹಣೆಯಿಂದ ರಕ್ತ ಚಿಮ್ಮಿತು. ಬೀಸಾಡುತ್ತಿದ್ದ ಲಾಠಿಗಳಿಗೆ ಇದಿರಾಗಿ ಗಂಟಲುಗಳು ಮಾತಾಡಿದುವು :

—"ದುಷ್ಟ ಸರಕಾರ ನಾಶವಾಗಲಿ !"

—"ಡೌನ್ ವಿದ್ ಮಾತಾಜಿ !"

—"ಪೋಲೀಸ್ ದಬ್ಬಾಳಿಕೆಗೆ ಧಿಕ್ಕಾರ !"

ಶಾಸಕರು ಸದನಕ್ಕೆ ಹೋಗುವುದರ ಬದಲು ಹೊರಕ್ಕಿಳಿದರು. ಬಿದ್ದಿದ್ದ

ದಂಡಪಾಣಿಯನ್ನು ಸುತ್ತುವರಿದರು. ಪೋಲೀಸ್ ತುಕಡಿಯ ಮುಖ್ಯಸ್ಥ ಐಜಿಪಿ ಬಳಿಗೆ ಬಂದು, "ಅವರ ಮೇಲೂ ಛಾರ್ಜ್ ಮಾಡಲಾ ?" ಎಂದು ಕೇಳಿದ, ಶಾಸಕರ ಗುಂಪಿನತ್ತ ಬೊಟ್ಟು ಮಾಡಿ.

"ಶುದ್ಧ ಕತ್ತೆ ! ಅವರು ಶಾಸಕರು ! ಅಷ್ಟೂ ಗೊತ್ತಾಗೋದಿಲ್ವ ನಿನಗೆ ?"

ಓಡಿದವರನ್ನು ಸ್ವಲ್ಪ ದೂರ ಅಟ್ಟಿಸಿಕೊಂಡು ಹೋದರು. ಕೈಗೆ ಸಿಕ್ಕವರನ್ನು ವ್ಯಾನುಗಳಲ್ಲಿ ತುಂಬಿದರು. ಪ್ರಜಾಪಕ್ಷದ ಶಾಸಕರು–ರಾಷ್ಟ್ರಪಕ್ಷದ ಕೆಲ ಶಾಸಕರು ದಂಡಪಾಣಿಯನ್ನು ಕೂಡ ಸದನದತ್ತ ಎಳೆದರು. ಪೋಲೀಸರು ಅವನನ್ನು ವ್ಯಾನಿಗೆ ತಳ್ಳಿದರು. ಐಜಿಪಿ ಗುಂಪಿನ ಬಳಿ ಬಂದು ದಂಡಪಾಣಿಗೂ ಉಳಿದವರಿಗೂ "Sorry" ಹೇಳಿದರು.

ಶರಟಿನ ಮೇಲೆ ರಕ್ತಧಾರೆ ಹರಿದಿದ್ದ ದಂಡಪಾಣಿ ಸದನದಲ್ಲಿ ನೆಲದ ಮೇಲೆ ಸಭಾಪತಿಯ ಎದುರು ಕುಳಿತ. ಪ್ರಜಾಪಕ್ಷದವರೂ ಅವನ ಜತೆ ಸೇರಿದರು. ಹೊರಗೆ ಆರಂಭಿಸಿದ್ದ ಭಾಷಣವನ್ನು ದಂಡಪಾಣಿ ಅಲ್ಲಿ ಮುಂದುವರಿಸಿದ. ಸಭಾಪತಿ ಶುರುವಾಗದೆ ಇದ್ದ ಕಲಾಪಗಳನ್ನು ಅರ್ಧಗಂಟೆ ಮುಂದಕ್ಕೆ ಹಾಕಿ, ತಮ್ಮ ಕೊಠಡಿಗೆ ತೆರಳಿ ಐದು ಐದು ಐದು ಸೇದಿದರು.

ವಿಧಾನ ಮಂಡಲದಲ್ಲಿ ಇದ್ದ ಡಾಕ್ಟರು ಅಧಿಕೃತ ಆದೇಶ ಬಂದೊಡನೆ ಸದನವನ್ನು ಹೊಕ್ಕು ದಂಡಪಾಣಿಯ ಹಣೆಗೊಂದು ಪಟ್ಟಿ ಕಟ್ಟಿದರು. ಅವನನ್ನು ಆತನ ಆಸನಕ್ಕೆ ಯಾರೋ ಕೈಹಿಡಿದು ಕರೆದೊಯ್ದರು.

ಪ್ರಜಾಪಕ್ಷದ ಮುಖಂಡ ನಾಯಕರಿಗೀಗ ಎಲ್ಲಿಲ್ಲದ ಆವೇಶ ಬಂತು. ಪ್ರಶ್ನೋತ್ತರವಿಲ್ಲ ; ವಿದ್ಯಾ ಇಲಾಖೆಗೆ ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಚರ್ಚೆ ಇಲ್ಲ. ಈಗ ನಿಲುವಳಿ ಸೂಚನೆ ಒಂದೇ; ಸರ್ಕಾರವನ್ನು ಖಂಡಿಸುವ ನಿರ್ಣಯ ಮಂಡನೆ. ಇನ್ನೂ ಒಂದೈವತ್ತು ಜನರಾದರೂ ತನ್ನ ಪಕ್ಷದಲ್ಲಿ ಈಗ ಇದ್ದಿದ್ದರೆ ! ರಾಷ್ಟ್ರಪಕ್ಷದ ಅನೇಕ ಶಾಸಕರು ತನ್ನತ್ತ ಬರುತ್ತಿದ್ದರು. ಸೌದಾಮಿನಿ ಸರಕಾರ ಉರುಳುತ್ತಿತ್ತು. ತಾನು ಮುಖ್ಯಮಂತ್ರಿಯಾಗುತ್ತಿದ್ದೆ.

ಸಭಾಪತಿ ಬಂದರು.

ನಾಯಕ ತುದಿಗಾಲ ಮೇಲೆ ನಿಂತು ಉಚ್ಚ ಕಂಠದಲ್ಲಿ ಅರಚಿದರು :

"ಕಾರ್ಯಕಲಾಪಗಳ ಪಟ್ಟಿಯಲ್ಲಿರುವುದರ ಬದಲು ಒಂದು ಮಹತ್ವದ ವಿಷಯ ಈಗ ಚರ್ಚೆ ನಡೆಯಬೇಕಾಗಿದೆ. ಸದನದ ಮುಂದುಗಡೆ ನಿಶ್ಶಸ್ತ್ರ ಜನರ ಮೇಲೂ ಸಮತಾ ಶಾಸಕ ದಂಡಪಾಣಿಯವರ ಮೇಲೂ ಪೋಲೀಸರ ದೌರ್ಜನ್ಯ ನಡೆದಿದೆ."

ಸಭಾಪತಿ ದಂಡಪಾಣಿಯ ಕಡೆಗೊಮ್ಮೆ ದೃಷ್ಟಿ ಹಾಯಿಸಿ, ಒಂದಿಷ್ಟೂ ವಿಚಲಿತರಾಗದೆ ನಾಯಕರತ್ತ ನೋಡಿ ಅಂದರು :

"ನಿಮ್ಮದು ನಿಲುವಳಿ ಸೂಚನೆಯೊ ? ಗಮನ ಸೆಳೆಯುವ ಸೂಚನೆಯೊ ?"

"ಯಾವುದಾದರೂ ಸರಿ."

"ಸದನಕ್ಕೆ ಚಿರಪರಿಚಿತರಾದ ಮಾನ್ಯ ಸದಸ್ಯರು ಹೀಗೆ ಹೇಳಿದರೆ ಹೇಗೆ? ಪ್ರತಿಯೊಂದಕ್ಕೂ ನಿಯಮ ಇದೆ. ಈಗಾಗಲೇ ನೀವು ಸದನದ ಗಮನವನ್ನು ಸೆಳೆದಿರುವುದರಿಂದ—"

"ಗಮನ ಸೆಳೆಯುವ ಸೂಚನೆ ಎಂದೇ ಪರಿಗಣಿಸೋಣಾಗಲಿ. ಗೃಹಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿಯವರು ನಡೆದ ಘಟನೆಯ ಬಗ್ಗೆ ಹೇಳಿಕೆ ನೀಡಬೇಕು."

ಒಂದು ಹಾಳೆಯಾಗಲೇ ಸೌದಾಮಿನಿಯ ಕೈಸೇರಿತ್ತು. ಅದು ಘಟನೆಯ ಬಗ್ಗೆ ಐ.ಜಿ.ಪಿ. ನೀಡಿದ್ದ ಚುಟುಕು ವರದಿ. ಸೌದಾಮಿನಿ ಅದರ ಮೇಲೇನನ್ನೋ ಗೀಚಿದಳು. ಒಂದು ಕ್ಷಣ ಬಾಗಿಲಿನತ್ತ ಸಾಗಿ ಅಲ್ಲಿದ್ದ ಪೋಲೀಸ್ ಅಧಿಕಾರಿಗೆ ಅವಸರದ ಆದೇಶ ನೀಡಿದಳು.

ಸೌದಾಮಿನಿ ತನ್ನ ಸ್ಥಾನ ಸೇರಿ ನಿಂತಲ್ಲಿಂದಲೇ ಅಂದಳು :

"ಸಮತಾ ಪಕ್ಷದವರು ಒಂದು ವಾರವಿಡೀ ನಡೆಸಿದ ಕಾರಸ್ಥಾನದ ಪರಿಣಾಮವೇ ಇವತ್ತಿನ ಪ್ರದರ್ಶನ ಮತ್ತು ಘಟನೆ. ನನ್ನ ಪೋಲೀಸರು ಅತ್ಯಂತ ತಾಳ್ಮೆಯಿಂದ ವರ್ತಿಸಿದ್ದಾರೆ. ಕೋಲು ಬಡಿಗೆ ಇತ್ಯಾದಿಗಳನ್ನು ಹಿಡಿದುಕೊಂಡಿದ್ದುದರಿಂದ ಪ್ರದರ್ಶನಕಾರರನ್ನು ನಿಶ್ಶಸ್ತ್ರರು ಎನ್ನಲಾಗುವುದಿಲ್ಲ. ಮಾನ್ಯ ಶಾಸಕ ದಂಡಪಾಣಿಯವರು ಉದ್ರೇಕಪರ ಭಾಷಣ ಮಾಡದೇ ಇದ್ದಿದ್ದರೆ ಗಮನ ಸೆಳೆಯುವ ಸೂಚನೆಗೆ ವಿಷಯವೇ ಇರುತ್ತಿರಲಿಲ್ಲ. ನೂರನಲ್ವತ್ತು ಜನರನ್ನು ಬಂಧಿಸಲಾಯಿತು. ಲಾಕಪ್ಪಿನಿಂದ ಅವರನ್ನೆಲ್ಲ ಬಿಡಬೇಕೆಂದು ಅಜ್ಞಾಪಿಸಿದ್ದೇನೆ. ಈಗಾಗಲೇ ಅವರ ಬಿಡುಗಡೆಯಾಗಿದೆ. ಊಟೋಪಚಾರದ ಬಳಿಕ ಅವರನ್ನು ರೈಲು ಮತ್ತು ಬಸ್ ನಿಲ್ದಾಣಗಳಿಗೆ ವ್ಯಾನಿನಲ್ಲಿ ತಲಪಿಸಬೇಕೆಂದು ಸೂಚಿಸಿದ್ದೇನೆ. (ರಾಷ್ಟ್ರಪಕ್ಷದ ಶಾಸಕರಿಂದ "ಹೀಯರ್ ಹೀಯರ್") (ಅನುಕಂಪ ತುಂಬಿದ ಸ್ವರದಲ್ಲಿ) ಅದರೂ ನೋವು. ನೋವೇ. ನನ್ನದು ಅಹಿಂಸೆಯಲ್ಲಿ ಅಚಲ ವಿಶ್ವಾಸವಿರುವ ಸರಕಾರ. ಮಾನ್ಯ ಶಾಸಕ ದಂಡಪಾಣಿಯವರಿಗೆ ನನ್ನ ಹಾಗೂ ಸರಕಾರದ ಸಹಾನುತಾಪವನ್ನು ವ್ಯಕ್ತಪಡಿಸುತ್ತೇನೆ. (ಪ್ರಜಾಪಕ್ಷದ ಸಾಸಕರು : "ಮುಖ್ಯಮಂತ್ರಿ ಅವರ ಕ್ಷಮೆ ಕೋರಬೇಕು") ದಂಡಪಾಣಿಯವರ ಮಾತ್ರವಲ್ಲ ಈ ಊರಿಗೆ ಹೊಸಬರಾದ ಅವರ ಅಮಾಯಕ ಹಿಂಬಾಲಕರ ಮತ್ತು ನಗರದ ಕಾರ್ಮಿಕ ಬಾಂಧವರ ಕ್ಷಮೆಯನ್ನೂ ನಿಶ್ಶರ್ತವಾಗಿ ಕೋರುತ್ತೇನೆ. ಈ ಘಟನೆಯಿಂದ ಒಂದು ಸಂಗತಿ ಸಾಬೀತಾಗಿದೆ. ರೈತ–ಕಾರ್ಮಿಕರ ಹಿತಸಾಧಕ ಸರಕಾರ ಒಂದಿದ್ದರೆ ಅದು ನಮ್ಮದು–ನಮ್ಮದು.)"

(ಆಳುವ ಪಕ್ಷದಿಂದ ಕರತಾಡನ. ಸೌದಾಮಿನಿ ಕುಳಿತಳು.)

ನಾಯಕ : "ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ

ಹೇಳಿಕೆಯ ಕೊನೆಯ ವಾಕ್ಯ ದುರುದ್ದೇಶದಿಂದ ಕೂಡಿದೆ, ಅವಹೇಳನಕಾರಕವಾಗಿದೆ. ಆ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು."

ಆಳುವ ಪಕ್ಷದ ಶಾಸಕರು : "ಇಲ್ಲ, ಇಲ್ಲ."

ಪ್ರಜಾಪಕ್ಷದ ಇನ್ನೊಬ್ಬ ಶಾಸಕ : "ನ್ಯಾಯಾಂಗ ತನಿಖೆಗೆ ಮುಖ್ಯಮಂತ್ರಿ ಒಪ್ಪಬೇಕು."

ಆಳುವ ಪಕ್ಷದವರು : "ಇಲ್ಲ. ಅವರು ಒಪ್ಪುವುದಿಲ್ಲ."

ಸದನದಿಂದ ಹೊರನಡೆದು ಸುದ್ದಿಯಾಗುವುದೊಂದೇ ದಾರಿ – ಎಂದು ನಾಯಕರು ತಮ್ಮ ಹಿಂಬಾಲಕರಿಗೆ ಸನ್ನೆ ಮಾಡಿದರು. ಪ್ರಜಾಪಕ್ಷದ ಐವರೂ ದಂಡಪಾಣಿಯೂ ಸದನದಿಂದ ಹೊರಬಿದ್ದರು. ತಾನು ಭಾಷಣ ಮಾಡಿದ್ದ ಮೆಟ್ಟಿಲ ಮೇಲೆ ಎರಡು ನಿಮಿಷ ಸಮತಾಶಾಸಕ ನಿಂತ.

"ಇರೋದು ನೀವೊಬ್ಬರೇ. ಆದರೆ ಕೆಲಸ ಎಷ್ಟು ಚೆನ್ನಾಗಿ ಮಾಡ್ತೀರಪ್ಪ" ಎಂದು ನಾಯಕ ಮೆಚ್ಚುಗೆ ಸೂಚಿಸಿದ.

೧೫

ವಿಧಾನ ಮಂಡಲದ ಮುಂಗಡಪತ್ರ ಅಧಿವೇಶನ ಮುಗಿದ ಬಳಿಕ ಒಂದು ದಿನ.

ಮುಖ್ಯಮಂತ್ರಿಯಿಂದ ಆದೇಶಿತನಾಗಿ ಪರಶುರಾಮ ವಾರ್ತಾ ಇಲಾಖೆಯ ನಿರ್ದೇಶಕರಿಗೆ ಫೋನ್ ಮಾಡಿದ :

"ಸರಕಾರ ಜಾಹೀರಾತು ನೀಡುತ್ತಿರುವ ಎಲ್ಲ ಪತ್ರಿಕೆಗಳ ಪಟ್ಟಿ, ಅವರಿಗೆ ಪ್ರತಿ ವರ್ಷ ಸಂದಾಯವಾಗುತ್ತಿರುವ ಹಣ—ಈ ಎಲ್ಲ ವಿವರ ಸಿ.ಎಂ.ಗೆ ಬೇಕಂತೆ."

"ಬಜೆಟ್ ಪಾಸಾಯ್ತು, ಅಧಿವೇಶನ ಮುಗೀತು. ಇನ್ನು ಯಾಕೆ ವಿವರ ?"

"ಕಿಷ್ಕಿಂಧೆಗೆ ಸೌದಾಮಿನಿ ಪ್ರಣಾಳಿಕೆ—ಅಂತ ಜಾಹೀರಾತು ಕೊಡ್ತಿದೀರಲ್ಲ ? ಆ ಪ್ರಣಾಳಿಕೆಯಲ್ಲಿ ಮಿತವ್ಯಯ ಅಂತ ಒಂದು ಶಬ್ದ ಇದೆ. ಅದಕ್ಕೆ ಸಂಬಂಧಿಸಿ—"

"ಮಾತಾಜಿ ಹೇಳಿದರೊ ? ನಿಮ್ಮದೇ ತರ್ಕವೊ ?"

"ಹೇಗೆ ಬೇಕಾದರೂ ಭಾವಿಸಬಹುದು."

"ನಿಮ್ಮದೇ ಐಡಿಯ ಆದರೆ, ನೀವು ಬೇಗನೆ ವಾರ್ತಾ ಇಲಾಖೆಯ ನಿರ್ದೇಶಕ ರಾಗ್ತೀರಿ."

"ಯಾರಿಗೆ ಗೊತ್ತು ? ನೀವು ಕಮಿಷನರಾಗಿ ಭಡ್ತಿ ಹೊಂದಿದರೆ...."

"ತಮಾಷೆ ಸಾಕು. ಇನ್ನು ಎರಡು ದಿವಸಗಳಲ್ಲಿ ಎಲ್ಲ ವಿವರ ತಂದುಕೊಡ್ತೇನೆ."

"ಮಿತವ್ಯಯ ಅಂತ ಜವಾನರನ್ನೆಲ್ಲ ಮನೆಗೆ ಕಳಿಸಿದಿರಾ ?"

"ಆಗಲಪ್ಪ, ಜವಾನನೇ ತಂದ್ಕೊಡ್ತಾನೆ."

....ವಾರ್ತಾ ಇಲಾಖೆಯಿಂದ ಬಂದ ಕಟ್ಟನ್ನು ಸೌದಾಮಿನಿ ನಿವಾಸಕ್ಕೆ–ಗೃಹ ಕಾರ್ಯಾಲಯಕ್ಕೆ–ಒಯ್ದು, ತಾನೇ ಬಿಚ್ಚಿದಳು. ಕಣ್ಣುಗಳನ್ನು ಕಿರಿದುಗೊಳಿಸಿ ಪಟ್ಟಿ ಯನ್ನು–ಹಲವು ಹಾಳೆಗಳನ್ನು ಎರಡು ಬಾರಿ ಓದಿದಳು. (ಕಣ್ಣು ಕಿರಿದುಮಾಡಲು ದೃಷ್ಟಿ ತೊಂದರೆ. ಚಾಳೀಸ್ ? ದೈಹಿಕ ಸಂಪತ್ತು ಮೂವತ್ತು ಎನ್ನಬಹುದು. ಆದರೆ ಕಣ್ಣು ? 'ಮುಂದೆ ದಿಲ್ಲಿಗೆ ಹೋದಾಗ ಕಾಂಟಾಕ್ಟ್ ಲೆನ್ಸ್ ಹಾಕಿಸಿಕೊಳ್ಳ ಬೇಕು.') ಇರಲಿಲ್ಲ. 'ತುತೂರಿ' ಎಂಬ ಹೆಸರು ಆ ಪಟ್ಟಿಯಲ್ಲಿರಲಿಲ್ಲ. ಪತ್ರಿಕೆ ಗಳನ್ನು ನೋಡಿದಳು. ತನ್ನ ಭಾವಚಿತ್ರವೊ ಹೇಳಿಕೆಯೊ ಭಾಷಣವೊ ಅಚ್ಚಾಗಿದ್ದ ಸಂಚಿಕೆಗಳನ್ನೇ ಆರಿಸಿ ಕಳಿಸಿದ್ದ, ಆ ನಿರ್ದೇಶಕ. ಗುರುತು ಹಾಕಿದ ಆ ಭಾಗಗಳನ್ನೆಲ್ಲ ಮತ್ತೆ ನೋಡಿದಾಗ ಮನಸ್ಸಿಗೆ ಹಾಯೆನಿಸಿತು.

ಗುಪ್ತಚಾರ ದಳದ ಮುಖ್ಯಸ್ಥನಿಗೆ ಸೌದಾಮಿನಿ ಬರಹೇಳಿದಳು.

"ತುತೂರಿ ಅಂತ ಒಂದು ಪತ್ರಿಕೆ ಇತ್ತಂತಲ್ಲ—ಅದೀಗ ಪ್ರಕಟವಾಗ್ತಿಲ್ಲವೊ?"

"ಇಲ್ಲ, ಮಾತಾಜಿ. ಅದರ ಎಡಿಟರು ವಿಷಕಂಠ ಒಮ್ಮೆ ಒಂದು ಕೇಸಿನಲ್ಲಿ ಸಿಕ್ಕಿಹಾಕ್ಕೊಂಡ."

"ಏನು ಕೇಸು ?"

ಬಾರ್‌ನಲ್ಲಿ ಕುಡಿದು ದಾಂಧಲೆ ಮಾಡಿದ್ದು."

"ಅಷ್ಟೇನೊ ?"

"ಪೋಲೀಸರು ಅಲ್ಲಿಗೆ ಬಂದಾಗ ಒಬ್ಬ ಕಾನ್‌ಸ್ಟೇಬ್‌ಲ್ ಮೇಲೆ ಕೈಮಾಡ್ದ. ಲಾಕಪ್ಪಿಗೆ ಹಾಕಿದ್ರು. ಮಾರನೇ ದಿವಸ ಬಿಟ್ರು. ಅದರೆ ಅಲ್ಲಿ ಆತಿಥ್ಯ ಹೇಗಿತ್ತು ಅಂದರೆ, ಕಲ್ಯಾಣನಗರವನ್ನೇ ಬಿಟ್ಟು ಆತ ಓಡಿ ಹೋದ. ಈಗ ಚೆನ್ನೈಯಲ್ಲಿದ್ದಾನೆ ಅಂತ ಸುದ್ದಿ."

"ಪಾಪ ! ಮಜಮಜವಾಗಿ ಬರೀತಿದ್ದನಂತೆ."

"ತುತೂರಿ ಪೀತ ಪತ್ರಿಕೆ ಜಾತೀದ್ದು. ಈಗ ಅಂಥ ಬರವಣಿಗೆ ಕಮ್ಮಿ."

"ಸುಲೋಚನಾಬಾಯಿ ಎಂಬವರು ಕಾರ್ಯದರ್ಶಿನಿಯಾಗಿರೋ ಒಂದು ಅನಾಥ ಆಶ್ರಮ ಸಹಾಯಧನ ಕೇಳಿದೆ. ಅಲ್ಲಿ ಹಣ ಪೋಲಾಗ್ತಿದೇಂತ ಒಂದು ತಳ್ಳಿ ಅರ್ಜಿಯೂ ಬಂದಿದೆ. ಸ್ವಲ್ಪ ತನಿಖೆ ನಡೆಸಿ ವರದಿ ಕೊಡಿ. ಸುಮ್ಮಸುಮ್ಮನೆ ಸರಕಾರದ ಹಣ ನೀಡೋದು ನನಗಿಷ್ಟವಿಲ್ಲ."

ಅಧಿಕಾರಿ ಡಯರಿ ತೆಗೆದು ಏನನ್ನೊ ಗುರುತು ಮಾಡಿಕೊಂಡು, ವಂದಿಸಿ ಹೊರಬಂದ.

ಸಂಜೆ ಹರಟೆಯ ವೇಳೆ ವಿಷಯ ತಿಳಿದ ಐ.ಜಿ.ಪಿ. ಅಂದರು ;

"ಆ ಸುಲೋಚನಾಬಾಯಿನೂ ನನ್ನ ಮಿಸೆಸೂ ಸ್ನೇಹಿತ್ರು. ನಮ್ಮವರೂ ಆಶ್ರಮದ ಕಮಿಟಿಲಿದಾರೆ. ಹಿಂದೆ ಒಬ್ಬಳು ಆಶ್ರಮದ ಸಂಚಾಲಕಿ ಅಂತ ಮಜ ಮಾಡ್ತಿದ್ಲಂತೆ. ಆಶ್ರಮದಿಂದ ಅವಳನ್ನು ಹೊರಹಾಕಿ ಹೊಸ ವ್ಯವಸ್ಥೆ ಮಾಡಿದ್ರಂತೆ. ಸುಲೋಚನಾಬಾಯಿನ ಕಂಡರೆ ನಿಮ್ಮ ವರದಿಗೆ ಗ್ರಾಸ ಸಿಗುತ್ತೆ. ಒಂದು ಉಪಕಾರ ಮಾಡಿ. ನನ್ನ ಮಿಸೆಸ್‌ನ ಇದರಿಂದ ಬಿಟ್ಬಿಡಿ !"

ಅಲ್ಲಿಂದ ಸುಲೋಚನಾಬಾಯಿಯ ಮನೆಗೆ. ಆಶ್ರಮದಿಂದ ಆಗ ತಾನೆ ಮರಳಿದ್ದರು ಅಧ್ಯಕ್ಷೆ. ಆಕೆಯ ಪ್ರಾಧ್ಯಾಪಕಪತಿ ಹೊರಬಂದು ಏನು ಎತ್ತ ಎನ್ನಲಿಲ್ಲ.

"ಸರಕಾರದ ಸಹಾಯಧನ ಕೇಳಿದೀರಂತಲ್ಲ ? ಸ್ವಲ್ಪ ಮಾಹಿತಿ ಬೇಕಾಗಿತ್ತು. ನಾನು ಸ್ಪೆಶಲ್ ಬ್ರಾಂಚಿನವನು."

"ಅರ್ಜಿಯ ಜತೆಗೆ ನಮ್ಮ ವಾರ್ಷಿಕ ವರದಿ ಇಟ್ಟಿದೆ."

"ಅದು ಕಾರ್ಯಸೌಧದಲ್ಲಿರಬೇಕು. ನಿಮ್ಮಲ್ಲಿದ್ದರೆ ಒಂದು ಪ್ರತಿ ಕೊಡಿ."

ದೊರೆತ ಪ್ರತಿಯನ್ನು ಓದಿದ. ಮಂಡಲಿಯ ಸದಸ್ಯ ಸದಸ್ಯೆಯರ ಪಟ್ಟಿಯಲ್ಲಿ

ಐ.ಜಿ.ಪಿ.ಯವರ ಪತ್ನಿಯ ಹೆಸರಿತ್ತು. ಆದರೆ ಪತಿ ಯಾರು ಎಂದು ನಮೂದಿಸಿರಲಿಲ್ಲ. ಒಂದಿಷ್ಟು ಸಮಾಧಾನ ಅಧಿಕಾರಿಗೆ.

"ಹಿಂದೆ ಒಬ್ಬಾಕೆ ಸಂಚಾಲಕಿಯಾಗಿದ್ದುಕೊಂಡು ಅನಾಥಾಶ್ರಮವನ್ನ ಹಾಳು ಕೆಡವಿದಳಂತಲ್ಲ ?"

"ಹ್ಞ. ಪುಟ್ಟವ್ವ ಅಂತ. ಅವಳಿಗೆ ಹಿರಿಯ ಪುಢಾರಿಗಳ ಬೆಂಬಲ ಇತ್ತು. 'ತುತೂರಿ' ಅನ್ನೋ ಒಂದು ಪತ್ರಿಕೆ ಆಗ ಪ್ರಕಟವಾಗ್ತಿತ್ತು. ಅದರಲ್ಲಿ ಅವಳ ಕಥೆಯೆಲ್ಲ ಅಚ್ಚಾಗಿ ಅವಳು ಈ ಊರನ್ನೇ ಬಿಟ್ಲು. ಹಣ ಸಹಾಯ ಸಿಗಬಹುದು ಅಂತೀರಾ ? ನೀವೊಮ್ಮೆ ಆಶ್ರಮ ನೋಡಿದ್ದರೆ ಚೆನ್ನಾಗಿತ್ತು."

"ಏನೂ ಬೇಡಿ. ನಾನು ಬರೆಯೋದು ಅನುಕೂಲ ವರದಿ. ನನ್ನ ಕುತೂಹಲ ಕೋಸ್ಕರ ಒಂದು ಪ್ರಶ್ನೆ ಕೇಳಲೆ ?"

"ಕೇಳಿ."

"ಆ ಪುಢಾರಿಗಳು ಯಾರು ಹೇಳ್ತೀರಾ ? ಹಳೆಯ 'ತುತೂರಿ' ಪ್ರತಿಗಳು ಸಿಗೋದು ಕಷ್ಟ. ಹೀಗಾಗಿ—ಈ ಮಾಹಿತೀನ ನನ್ನ ವರದೀಲಿ ಸೇರಿಸೋದಿಲ್ಲ. ಮಾತುಕೊಡ್ತೀನಿ."

ಹೇಳಬೇಕೋ ಬೇಡವೋ ಎಂದು ಯೋಚಿಸಿ, ಮೌನವನ್ನು ಮುರಿದು, ಸುಲೋಚನಾಬಾಯಿ ಅಂದಳು :

"ಈಗ ಪ್ರತಿಪಕ್ಷದ ಮುಖಂಡರಾಗಿದ್ದಾರಲ್ಲ—ನಾಯಕ್, ಇನ್ನೊಬ್ಬರು ಮಾಜಿ ಶಾಸಕ ರಂಗಸ್ವಾಮಿ."

"ರಾಷ್ಟ್ರಪಕ್ಷದವರು."

"ಹೌದು. ... ಮಿಸೆಸ್ ಐ.ಜಿ.ಪಿ.ಕಮಿಟಿಲಿದಾರೆ. ನಾವು ಸಹಪಾಠಿಗಳಾಗಿದ್ವಿ."

"ಹೆಸರು ನೋಡಿದೆ. ಸಂತೋಷ. ನನ್ನ ವರದಿ ವಿಷಯ ಮರೆತ್ಬಿಡಿ. ಹಣ ಬೇಗನೆ ಬಿಡುಗಡೆಯಾಗ್ತದೆ."

"ನಿಮಗೆ ಉಪಕೃತೆ."

"ಬರ್ತೀನೆ. ನಿಮ್ಮ ಯಜಮಾನರಿಗೆ ವಿಷಯ ತಿಳಿಸಿಬಿಡಿ. ಆಲ್ ದ ಬೆಸ್ಟ್."

ಗುಪ್ತಚಾರ ದಳದ ಮುಖ್ಯಸ್ಥನ ವರದಿ ಓದಿ ಸೌದಾಮಿನಿ ತೃಪ್ತಳಾಗಲಿಲ್ಲ:

"ನಗರದ ಆ ಭಾಗದಲ್ಲಿ ಆಶ್ರಮ ಗೌರವದ ಸ್ಥಾನ ಪಡೆದಿದೆ, ಸುಮಾರು ಒಂದು ಲಕ್ಷವನ್ನಾದರೂ ಮಾನ್ಯ ಮುಖ್ಯಮಂತ್ರಿಯವರು ಮಂಜೂರು ಮಾಡಿದರೆ ತಮ್ಮ ಕೀರ್ತಿ ಅಜರಾಮರವಾಗ್ತದೆ. ಯಾವ ಚುನಾವಣೆಯಲ್ಲೇ ಆಗಲಿ ಆ ಕ್ಷೇತ್ರದಿಂದ ಮುಖ್ಯಮಂತ್ರಿಯ ಅಭ್ಯರ್ಥಿ ಆರಿಸಿಬರುವುದರಲ್ಲಿ ಸಂದೇಹವಿಲ್ಲ. ಸುತ್ತು ಮುತ್ತಲಿನ ಹಲವರಿಂದ ರಹಸ್ಯ ಸಾಕ್ಷ್ಯ ಸಂಗ್ರಹಿಸಿದ್ದೇನೆ..."

—ಇದು ವರದಿಯಲ್ಲಿದ್ದ ಮುಖ್ಯ ಭಾಗ. ದಂಡಿಸಿ ಸೇಡು ತೀರಿಸಿಕೊಳ್ಳುವುದು ಆಗದಿದ್ದರೆ, ಔದಾರ್ಯ ಪ್ರದರ್ಶನ ಮಾಡಿ ಕೀರ್ತಿ ಗಳಿಸೋಣ ಎಂದು ಯೋಚಿಸಿದಳು

ಸೌದಾಮಿನಿ. ಅಷ್ಟರ ಮೇಲೆ ಬ್ರಹ್ಮಾಸ್ತ್ರವಿಲ್ಲವೆ? ಸಮಯ ನೋಡಿ ಆ ಅನಾಥಾಶ್ರಮ ವನ್ನು ಸರಕಾರದ ವಶಕ್ಕೆ ತೆಗೆದುಕೊಂಡರಾಯಿತು...

"ಪರಶುರಾಮ್, ಎಲ್ಲಿದೆ ಸಹಾಯಧನ ಕೇಳಿ ಬಂದ ಅನಾಥಾಶ್ರಮದ ಆ ಅರ್ಜಿ ?"

ಆಪ್ತ ಕಾರ್ಯದರ್ಶಿ ಅದನ್ನು ಹುಡುಕಿಕೊಟ್ಟ. ಅಂಚಿನಲ್ಲಿ ಒಂದು ಲಕ್ಷ ರೂಪಾಯಿ ಮಂಜೂರು ಮಾಡಿ ಎಂದು ಸೂಚಿಸಿ, "ಸಮಾಜಕಲ್ಯಾಣ ಮಂತ್ರಿಗೆ ಈಗಲೇ ಕಳಿಸು. ಇವತ್ತು ಸಂಜೆಯೊಳಗೆ ಚೆಕ್ ಆಶ್ರಮದವರ ಕೈ ಸೇರಬೇಕು" ಎಂದಳು ಸೌದಾಮಿನಿ.

ಆ ರಾತ್ರಿ ಸುಲೋಚನಾಬಾಯಿ ಗಂಡನಿಗೆ ಸಿಹಿಯೂಟ ಬಡಿಸಿದಳು.

ಸರಕಾರಕ್ಕೆ, ವೈಯಕ್ತಿಕವಾಗಿ ಮುಖ್ಯಮಂತ್ರಿ ಸೌದಾಮಿನಿದೇವಿಗೆ, ಕೃತಜ್ಞತೆ ಸಲ್ಲಿಸುವ ಪತ್ರದೊಡನೆ (ಮತ್ತು ಒಂದು ಹಾರದೊಡನೆ) ಸುಲೋಚನಾಬಾಯಿ ಮತ್ತು ಆಡಳಿತ ಮಂಡಳಿಯ ಇಬ್ಬರು ಕಾರ್ಯಸೌಧಕ್ಕೆ ಹೋದರು.

ಮುಖ್ಯಮಂತ್ರಿ ಎದ್ದು ಹಾರ ಸ್ವೀಕರಿಸಿದಳು. ತಾನೂ ನಿಂತೇ ಇದ್ದ ಸುಲೋಚನಾಬಾಯಿ ಮೈಯೆಲ್ಲ ಕಣ್ಣಾಗಿ ಸೌದಾಮಿನಿಯನ್ನು ದಿಟ್ಟಿಸಿದಳು. ಅವಳೆ ಅಲ್ಲವಾದರೂ ಒಬ್ಬರ ಹಾಗೆ ಇನ್ನೊಬ್ಬರು ಇರಬಾರದೆ ? ಧ್ವನಿಯಲ್ಲೇನೂ ಸಾಮ್ಯವಿಲ್ಲ. ಈಕೆ ಮಾತಾಜಿ. ಕರುಣಾಮಯಿ. ಇಲ್ಲದೆ ಹೋದರೆ ಒಂದು ಲಕ್ಷ ಇಷ್ಟು ಬೇಗನೆ ಸಿಗುವುದೆಂದರೇನು ?

"ನಮ್ಮ ಕಟ್ಟಡ ಪೂರ್ತಿಯಾದಾಗ ತಾವು ಉದ್ಘಾಟನೆಗೆ ಬರಬೇಕು," ಎಂದು ಕೈಜೋಡಿಸಿ ಕೇಳಿದಳು ಸುಲೋಚನಾಬಾಯಿ.

"ಆಗಲಿ. ನಿಮ್ಮ ವಸತಿ ಶಾಲೆಯ ಅಭ್ಯುದಯವನ್ನು ಹೃತ್ಪೂರ್ವಕವಾಗಿ ಹಾರೈಸ್ತೀವಿ."

"ಒಂದು ಲಕ್ಷ ಸಹಾಯಧನ ಕೊಟ್ಟ ವಿಷಯ ಪತ್ರಿಕೆಗಳಿಗೆ—"

"ವಾರ್ತಾ ಇಲಾಖೆಯ ಮೂಲಕ ಆ ಸುದ್ದಿ ಹೋಗ್ತದೆ. ನಮಸ್ಕಾರ."

ಸೌದಾಮಿನಿ ಕುಳಿತು ಕೆಲವು ಕ್ಷಣ ಅಂತರ್ಮುಖಿಯಾದಳು. ಗುರುತು ಹಿಡಿದರೆ? ಇಲ್ಲ—ಇಲ್ಲ ! ಆ ಮಾಚಯ್ಯ ಏನಾದನೊ ? ಗಿರಿಜ ? ಆ ಪೋಲಿ ಪಟಾಲಂ? ಆ ಗತಕಾಲವನ್ನು ಸ್ಮರಿಸುವ ಅಗತ್ಯವಾದರೂ ಏನು ? ಇದು ಬೇರೆಯೇ ಶಕೆ, ಬೇರೆಯೇ ಯುಗ. ಆದರೆ ಆ ಮರ ? ಇರುಳಲ್ಲಿ ಅದರ ಹಾಸಿನ ಕೆಳಗೆ? ಅಲ್ಲಿಗೊಮ್ಮೆ ಹೋಗ ಬೇಕು, ಹೋಗಬೇಕು. ರಂಗಧಾಮನನ್ನು ಸರಿಪಡಿಸಬೇಕು.

ಹೊರಗೆ ಸಂದರ್ಶಕರು ಸರದಿಗಾಗಿ ಕಾದಿದ್ದರು. ಒಳಗೆ ಬಂದವನು ಮುಂಬಯಿ ವಿಳಾಸದ ಯುವ ಕೈಗಾರಿಕೋದ್ಯಮಿ. ವಿದ್ಯುನ್ಮಾಪಕಗಳನ್ನು ತಯಾರಿಸಿ ಕಿಷ್ಕಿಂಧೆ ಸರಕಾರಕ್ಕೂ ಇತರ ರಾಜ್ಯ ಸರಕಾರಗಳಿಗೂ ಮಾರುವ ಯೋಜನೆ. ಟಿಪ್ಪಣಿ

ಕಾರ್ಯವೆಲ್ಲ ಮುಗಿದಿತ್ತು. ಮುಖ್ಯಮಂತ್ರಿ ಒಪ್ಪಿದರೆ ಸಹಿ ಹಾಕ್ತೇನೆ. ಹೋಗಿ ನೋಡಿ," ಎಂದಿದ್ದ ಉದ್ಯಮಮಂತ್ರಿ.

ಸೌದಾಮಿನಿ : "ಪಕ್ಷಕ್ಕೆ ಹತ್ತು ಲಕ್ಷ."

ಆತ : "ಒಪ್ಪಿದೆ."

ಸೌದಾಮಿನಿ : ಸಂಜೆ ಗೃಹಕಾರ್ಯಾಲಯಕ್ಕೆ ಬನ್ನಿ."

ಆತ : "ಧನ್ಯವಾದ."

ಪರಶುರಾಮನತ್ತ ನೋಡಿ ಮುಖ್ಯಮಂತ್ರಿ ಅಂದಳು :

"ನೆಕ್ಸ್ಟ."

....

ತಿಂಗಳಿಗೊಮ್ಮೆ ನಕುಲದೇವ್‌ಜಿ ತಪ್ಪದೆ ಫೋನ್ ಮಾಡುತ್ತಿದ್ದರು. ಚುಟುಕು ಸಂದೇಶ : "ದೂತ ಬರ್‍ತಿದ್ದಾನೆ." ದೂತನ ಜತೆ ಒಬ್ಬ ಅಂಗರಕ್ಷಕ. ಇರಸಾಲು ಹೋದ ಬಳಿಕ ಸೌದಾಮಿನಿ ಮಂತ್ರಿಗಳಿಗೆ ತಿಳಿಸುತ್ತಿದ್ದಳು : "ಈ ಸಲದ್ದು ಹೋಯ್ತು." ಮುಂದಿನ ಸಲಕ್ಕಾಗಿ ಇಲ್ಲಿ ಜಮಾಬಂದಿ ಶುರುವಾಗಲಿ ಎಂದು ಅದರ ಅರ್ಥ. ಸೌದಾಮಿನಿ ಹೇಳಿದಂತೆ ರಂಗಧಾಮ ವಿದ್ಯಾಧರರಿಬ್ಬರೂ ಲೆಕ್ಕವಿಟ್ಟರು.

ಒಂದು ಸಲ ಸಂಪುಟಸಭೆ ಮುಗಿದೊಡನೆ ಸೌದಾಮಿನಿ ಕೇಳಿದಳು :

"ಕೊಸರನ್ನೆಲ್ಲ ಏನ್ಮಾಡ್ತೀರಾ ?"

ಆರು ಮಂತ್ರಿಗಳ ಸಿಟ್ಟಿಗೂ ತಾನೇ ಧ್ವನಿ ಎಂಬಂತೆ ಬಾಲಾಜಿ ಬಲ ಅಂಗೈ ಮುಷ್ಟಿ ಹಿಡಿದು ಬಗ್ಗಿಸಿ, "ಮಾಡ್ತೀವಿ ಇದು !" ಎಂದ.

ಸಿಟ್ಟು ಬೆಂಕಿಯಾಗಿ ಸೌದಾಮಿನಿ ಗುಡುಗಿದಳು :

"ಏನೆಂದಿರಿ ?"

ಸಂಗಪ್ಪ ಕೇಳಿದ :

"ನಾವು ದಿಲ್ಲಿಯ ಚಾಕರಿಗೆ ನಿಂತಿದೀವಾ ?"

ಪರಿಸ್ಥಿತಿ ವಿಕೋಪಕ್ಕೆ ಹೋಗಬಾರದು ಎಂದು ಮುಖ್ಯಮಂತ್ರಿ ತಕ್ಷಣ ತಣ್ಣೀರೆರಚಿದಳು :

"ಚುನಾವಣೆ ಸಮಯದಲ್ಲಿ ದಿಲ್ಲಿಯಲ್ಲವ ದುಡ್ಡು ಸುರಿಯೋದು ?"

ನಾರಣಪ್ಪನೆಂದ :

"ಮಳೆಗಾಲ ಚಳಿಗಾಲಕ್ಕೇಂತ ಪ್ರಾಣಿಪಕ್ಷಿಗಳೂ ಕೂಡಿಡ್ತವೆ. ಇವತ್ತಿನ ಹೊಸ ಎಕ್ಕಡ ನಾಳೆ ಸವೆದೀತು ಅನ್ನೋ ಯೋಚನೆ ಬೇಡವ ?"

"ಏನು ರಂಗಧಾಮ್ ಸುಮ್ಮನಿದೀರಲ್ಲ ? ಒಮ್ಮೊಮ್ಮೆ ಕೊಸರು ನಮ್ಮವರೆಗೂ ತಲಪಲಿ," ಎಂದು ಮುಖ್ಯಮಂತ್ರಿ ಆರಂಭದಲ್ಲಿ ತನಗೆ ಬಹಳ ಹತ್ತಿರದವನಾಗಿದ್ದ ಯುವ ಮಂತ್ರಿಯತ್ತ ನೋಡಿ ಅಂದಳು.

ಅವನು ಕ್ರಾಪಿನ ಮೇಲೆ ಕೈ ಓಡಿಸಿ ಅಂದ :

"ವಿವಾದ ಬೇಡ. ನೀವು ಹೇಗೆ ಹೇಳ್ತೀರೊ ಹಾಗೆ ಮಾಡ್ತೀವಿ ಮಾತಾಜಿ."

"ಆಗಲಪ್ಪ. ಕೊಸರು ನಿಮ್ಮಲ್ಲೇ ಇರಲಿ. ಏನಾದರೂ ಅಗತ್ಯ ಬಿದ್ದಾಗ ನಮ್ಮ ನಮ್ಮಲ್ಲೇ ವಂತಿಗೆ ಎತ್ತಿದರಾಯ್ತು."

ತೆರೆ ಬಿದ್ದಿತೆಂದು ಅವರೆಲ್ಲ ಎದ್ದರು.

೧೬

ಪ್ರೀತಿಯ ಬಹೆನ್‌ಜಿ,

ನೀವು ಮುಖ್ಯಮಂತ್ರಿಯಾದ ಮಾರನೆಯ ದಿನವೊ ಮೂರನೆಯ ದಿನವೊ ವಿನೋದ ಆರೆಂಟು ಪತ್ರಿಕೆಗಳನ್ನು ಹರಡಿ "ಇವರು ಯಾರು ? ಹೇಳಿ, ನೋಡೋಣ" ಎಂದ. "ಕಿಸ್–ಕಿಂಧೆಯ ಮುಖ್ಯಮಂತ್ರಿ" ಎಂದು ತಾನೇ ಸಮಸ್ಯೆ ಬಗೆಹರಿಸಿದವನಂತೆ ಹೇಳಿದ. ಹಾಗೇಂತ ಕೆಳಗೇ ಬರೆದಿತ್ತಲ್ಲ? ಮುದ್ದುಮುದ್ದಾಗಿದ್ದಿರಿ. "ನಮ್ಮ ಇವರು ಅಲ್ಲವಾ ?" ಎಂದೆ. ವಿನೋದ, ಕರುಣ, ಜುಮ್ಮಿ ಎಲ್ಲಾ ಒಪ್ಪಿದರು. ಸಂತೋಷದಿಂದ ಕುಣಿದಾಡಿದೆವು. ಅಂತೂ ರಾಷ್ಟ್ರದ ಪರಮಶ್ರೇಷ್ಠ ಬಾಬಾಜಿಯ ಕೃಪೆಗೆ ನೀವು ಪಾತ್ರರಾಗಿ ನಮ್ಮೆಲ್ಲರಿಗಿಂತ ಎತ್ತರದಲ್ಲಿದೀರಿ. ನಮ್ಮೆಲ್ಲರ ಶುಭಕಾಮನೆ. ದಯವಿಟ್ಟು ಸ್ವೀಕರಿಸಿ.

ಭಾರತಿ ಅನಾಥಾಶ್ರಮ ಪ್ರತಿಷ್ಠಾನದ ನಿಧಿ ಸಂಗ್ರಹಕಾರ್ಯ ತೃಪ್ತಿಕರವಾಗಿ ಸಾಗಿದೆ ಎಂದು ತಿಳಿಸಲು ಸಂತೋಷಪಡುತ್ತೇನೆ. ನಮ್ಮವರೇ ಆದ ನಿಮಗೂ ಸಂತೋಷವಾದೀತು. ನಿಮ್ಮ ರಾಜ್ಯಕ್ಕೆ ಯಾವಾಗ ಬರಬೇಕೆಂದು ನೀವೇ ತಿಳಿಸಿ. ನಿಮ್ಮ ಅನುಕೂಲ ನೋಡಿಕೊಂಡು ದಿನ ಗೊತ್ತು ಮಾಡಿ ಬರೆಯಿರಿ. ಇಪ್ಪತ್ತು ಜನ ಹುಡುಗಿಯರು. ನಾಲ್ವರು ಯುವಕರು. ನಾನು–ಕರುಣಾ ಮತ್ತು ಜುಮ್ಮಿ. ಹುಡುಗಿಯರು ಯುವಕರು ಒಟ್ಟಾಗಿ ಒಂದೊಂದು ತಾಸಿನ ಎರಡು ನೃತ್ಯರೂಪಕ ಅಭಿನಯಿಸುತ್ತಾರೆ. ಸ್ಥಳೀಯ ಆತಿಥ್ಯ ಸಮಿತಿ ರಚಿಸಿ ಟಿಕೆಟ್ ಮಾರಾಟ ಸಾಧ್ಯವಾ ? ಬೇರೆ ಕಡೆ ಹಾಗೆ ಮಾಡಿದೆವು. ಆ ರಾಜ್ಯಗಳ ಮುಖ್ಯಮಂತ್ರಿಗಳು ಕಾಣಿಕೆಯನ್ನು ಕೊಟ್ಟರು. ದಕ್ಷಿಣದ್ದೆಲ್ಲ ಆದ ಮೇಲೆ ಕೊನೆಯದಾಗಿ ಮುಂಬಯಿಯಲ್ಲಿ ಇಟ್ಟುಕೊಳ್ತೇವೆ. ಅದಾದ ಮೇಲೆ ಪ್ರತಿ ರಾಜ್ಯದ ಮುಖ್ಯ ನಗರದಲ್ಲೂ ಪ್ರತಿಷ್ಠಾನ ನಡೆಸುವ ಅನಾಥಾಶ್ರಮ ಕೇಂದ್ರಗಳ ಕಟ್ಟಡ ಕಾರ್ಯ ಶುರುವಾಗ್ತದೆ.

ನಿಮ್ಮ ಪತ್ರದ ದಾರಿ ನೋಡುತ್ತೇವೆ.

ನಿಮ್ಮವಳೇ ಆದ
ದೀದಿ

ಮೃದುಲಾಬೆನ್ ಬರೆದ ಕಾಗದವನ್ನೋದಿ ಸೌದಾಮಿನಿ ನಕ್ಕಳು. ಒಂದು ಕಾಲದಲ್ಲಿ ತಾನು ಇವಳ ಶಿಷ್ಯೆಯಾಗಿದ್ದೆ. ಈಗ? ಕಲ್ಯಾಣನಗರಕ್ಕೆ ದಿಲ್ಲಿಯಿಂದ ಬಂದು ಹೊಸದಾಗಿ ಮೂಡಿ ಬಲಿತ ರೆಕ್ಕೆಗಳ ಬಲದಿಂದ ರಾಷ್ಟ್ರಪಕ್ಷದ ಹುದ್ದೆರಿಯಾಗಿ ಹಾರಾಡುತ್ತಿದ್ದಾಗ 'ದೀದಿ'ಯ ನೆನಪಾಗಿತ್ತು. ಕಾಗದ ಬರೆಯಬೇಕು ಎಂತಲೂ ಅನಿಸಿತ್ತು. ಬಿಡುವಾಗಲಿಲ್ಲ. ಮುಖ್ಯಮಂತ್ರಿಯಾದ ಮೇಲಂತೂ ಎಲ್ಲಿಯ ಬಿಡುವು? ವಾಸ್ತವವಾಗಿ ಅವರಾಗಿಯೇ ಬರೆಯಲಿ, ಬರೆದೇ ಬರೆಯುತ್ತಾರೆ–ಎಂಬ ಧೋರಣೆಯೇ ಸೌದಾಮಿನಿ ತಳೆದ ಮೌನಕ್ಕೆ ಕಾರಣವಾಗಿತ್ತು. ಸರಕಾರದ ಅತಿಥಿಯಾಗಿ ವಿನೋದನನ್ನು ಕರೆಯಬೇಕು. ಲೇಖನಗಳನ್ನಂತೂ ಬರೆಯುತ್ತಾನೆ; ಒಂದು ಪುಸ್ತಕ ಬರೆದುಕೊಡಲೂ ಬಹುದು–ಎಂಬ ವಿಚಾರವೂ ಅವಳಲ್ಲಿ ಮೊಳೆತಿತ್ತು. ತಂಡವಾಗಿಯೋ ಒಬ್ಬೊಬ್ಬರಾಗಿಯೋ ದಿಲ್ಲಿಯವರನ್ನೂ ಕರೆಸಬೇಕೆನ್ನುವುದು ಆಗಾಗ್ಗೆ ಅವಳಿಗೆ ನೆನಪಾಗುತ್ತಿತ್ತು. ಸರಕಾರದ ಕೆಲಸ ದೇವರ ಕೆಲಸ. ಆ ದೇವರೊ ಯಾವಾಗಲೂ ನಿಧಾನಿ.

ಈಗಲೊ ಕಾಗದ ಬಂದಿದೆ. ಇನ್ನು ವಿಲಂಬ ಸಲ್ಲದು. ಇಂದೇ ಉತ್ತರ ಬರೆಯಬೇಕು. ಬನ್ನಿ ಎನ್ನಬೇಕು.

"ಪರಶುರಾಮ್, ಒಂದು ಕಾಗೂ ಬರಕೊ, ಇಂಗ್ಲಿಷಿನಲ್ಲಿ."

"ಸಿದ್ಧ, ಮಾತಾಜಿ."

"ಶ್ರೀಮತಿ ಮೃದುಲಾಬೆನ್, ಅಧ್ಯಕ್ಷೆ, ಭಾರತಿ ಅನಾಥ ಆಶ್ರಮ ಪ್ರತಿಷ್ಠಾನ ವಿಳಾಸ ಈ ಕಾಗದದಲ್ಲಿದೆ. ಮುಂದಕ್ಕೆ—

ಪ್ರಿಯ ದೀದಿಜಿ,

ಪತ್ರ ತಲಪಿ, ನಿಮ್ಮೆಲ್ಲರ ಕ್ಷೇಮ ಸಮಾಚಾರ ತಿಳಿದು, ಖುಶಿಯಾಯಿತು.

ಧರ್ಮೇಂದರ್ ಬಾಬಾರ ಮಠದಲ್ಲಿ ನಾನು ಮರುಹುಟ್ಟು ಪಡೆದೆ. ನಾನು ಈಗ ಉಪಾಸನೆ ಮಾಡುತ್ತಿರುವ ದೇವಿ ಜಗದಲಪುರದ ದಂತೇಶ್ವರಿ. ಎಲ್ಲ ಅವಳ ಕೃಪೆ ಎನ್ನಲೆ? ಮುಖ್ಯಮಂತ್ರಿಯದು ತಂತಿಯ ಮೇಲಿನ ನಡಿಗೆ. ವಿನೋದರನ್ನು ಕೇಳಿ. ಎಲ್ಲಾ ವಿವರ ತಿಳಿದೀತು. ಸೇವಾಕ್ಷೇತ್ರದ ವಿಸ್ತರಣೆ ಎಂಬ ಭಾವನೆಯಿಂದಲೇ ಈ ಅಧಿಕಾರ ಸ್ಥಾನ ಸ್ವೀಕರಿಸಿದ್ದೇನೆ. ತಂಡದೊಡನೆ ನೀವು ಬಂದು ಕಿಷ್ಕಿಂಧೆಯ ಕಿಂಚಿತ್‌ಸೇವೆ ಸ್ವೀಕರಿಸುತ್ತೀರೆಂದು ನನಗೆ ಆನಂದವಾಗಿದೆ.

ನಿಮಗೆ ಆತಿಥ್ಯ ನೀಡುವುದರಲ್ಲಿ ಈ ನಗರದ ಅನಾಥ ಆಶ್ರಮ ಪ್ರಮುಖ ಪಾತ್ರ ವಹಿಸಲಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಋತುಗಳು ಬದಲಾಗುತ್ತವೆ, ಕಾಲ ಬದಲಾಗುತ್ತದೆ. ಇತ್ತೀಚೆಗಷ್ಟೆ ಆ

ಅನಾಥಾಶ್ರಮಕ್ಕೆ ಒಂದು ಲಕ್ಷ ಸಹಾಯಧನ ಕೊಟ್ಟೆ. ಅಲ್ಲಿ ವಸತಿಶಾಲೆ ನಡೆಯುತ್ತದೆ, ಅನಾಥ ಮಕ್ಕಳಿಗಾಗಿ. ನಿಮ್ಮ ತಂಡದ ನೃತ್ಯ ರೂಪಕ ಕಾರ್ಯಕ್ರಮ ನಗರದ ನೂತನ ನಾಟ್ಯ ಮಂದಿರದಲ್ಲಿ ಏರ್ಪಡಿಸುತ್ತೇನೆ. ಸಾವಿರ ಸೀಟುಗಳಿವೆ. ಒಂದು ಟಿಕೆಟಿಗೆ ನೂರು ರೂಪಾಯಿ. ಸರಕಾರದ ಅಧಿಕಾರಿಗಳೇ ಮಾರುತ್ತಾರೆ, ನಿಮ್ಮ ಪ್ರತಿಷ್ಠಾನದ ವಿನಂತಿಯನ್ನು ಆಧರಿಸಿ ಇಲ್ಲಿ ಪತ್ರಿಕಾ ಪ್ರಚಾರ ನಡೆಯುತ್ತದೆ. ಕಾರ್ಯಕ್ರಮಕ್ಕೆ ರಾಜ್ಯಪಾಲರ ಅಧ್ಯಕ್ಷತೆ. ಮುಖ್ಯಮಂತ್ರಿಯಿಂದ ಉದ್ಘಾಟನೆ. ಸಾಕೆ ?

ಈ ತಿಂಗಳ ನಾಲ್ಕನೆಯ ಭಾನುವಾರ ಕಾರ್ಯಕ್ರಮ ಇಟ್ಟುಕೊಂಡರೆ ಅನುಕೂಲ. ಒಂದೆರಡು ದಿನ ಮುಂಚಿತವಾಗಿ ಬನ್ನಿ. ಒಪ್ಪಿಗೆ ಸೂಚಿಸಿ ಟೆಲಿಗ್ರಾಮ್ ಕೊಡಿ. ಫೋನ್ ಮಾಡಿದರೆ ಇನ್ನಷ್ಟು ಒಳ್ಳೆಯದು. ನಾನು ಸಿಗದಿದ್ದರೆ ನನ್ನ ಆಪ್ತಕಾರ್ಯದರ್ಶಿಗೆ ತಿಳಿಸಿಬಿಡಿ.

ಎಲ್ಲರಿಗೂ ಆದರದ ನಮಸ್ಕಾರ.

ವಿಶ್ವಾಸದ
ಸೌದಾಮಿನಿದೇವಿ
ಮುಖ್ಯಮಂತ್ರಿ, ಕಿಷ್ಕಿಂಧೆ

ಸೌದಾಮಿನಿ ಕೋರಿದ್ದಂತೆ ಟೆಲಿಗ್ರಾಮ್ ಬಂತು. 'ಒಪ್ಪಿಗೆ ವಿರಾಮ ಉಪಕೃತರು' ಫೋನ್ ಸಂದೇಶವನ್ನು ಮುಖ್ಯಮಂತ್ರಿಯ ಸೂಚನೆಯಂತೆ ಪರಶುರಾಮನೇ ಬರೆದುಕೊಂಡ. "ಮುಖ್ಯಮಂತ್ರಿಯವರ ಓಲೆಯಿಂದ ಉತ್ತೇಜಿತರಾಗಿದ್ದೇವೆ. ಮೂರು ದಿನ ಮುಂಚೆಯೇ ತಲಪುತ್ತೇವೆ. ಒಂದು ಕಂಪಾರ್ಟ್‌ಮೆಂಟನ್ನ ನಮಗಾಗಿ ರಿಸರ್ವ್ ಮಾಡಿಸುತ್ತೇವೆ. ಉಳಿದದ್ದೆಲ್ಲ ಸಮಕ್ಷಮ. ಸಹಸ್ರ ಸಹಸ್ರ ಧನ್ಯವಾದ."

ಓದಿ ಹೇಳಿದಾಗ, "ನಾನು ಫೋನ್ ಎತ್ತಿಕೊಂಡಿದ್ದರೆ ಅವಳು ಮೂರು ಆರು ಒಂಭತ್ತು ಮಿನಿಟುಗಳಾದರೂ ಎಳೀತಿದ್ಲು," ಎಂದು ಸೌದಾಮಿನಿ ಪ್ರತಿಕ್ರಿಯಿಸಿ, "ನಿಧಿ ಸಂಗ್ರಹ, ಮೇಲ್ವಿಚಾರಣೆ—ಇವೆಲ್ಲದಕ್ಕೆ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಬಹುದು. ರಾಮರಾಜು ಆಗಬಹುದಾ ? (ಆಗಬಹುದು ಎಂದು ಪರಶುರಾಮ ತಲೆಯಾಡಿಸಲು) ಅವನಿಗೊಂದು ನೋಟ್ ರೆಡಿ ಮಾಡು. ಸಂಜೆಯೊಳಗೆ ನನ್ನನ್ನು ನೋಡಬೇಕೂಂತ ಆ ಅನಾಥಾಶ್ರಮದ ಸುಲೋಚನಾಬಾಯಿಗೆ ಹೇಳಿ ಕಳಿಸು," ಎಂದಳು.

...ಸುಲೋಚನಾಬಾಯಿ ಬಂದೊಡನೆ ಭಾರತಿ ಅನಾಥಾಶ್ರಮ ಪ್ರತಿಷ್ಠಾನದ ಮನವಿಯನ್ನು ಮುಖ್ಯಮಂತ್ರಿ ಆಕೆಗೆ ಓದಲು ಕೊಟ್ಟಳು.

"ಭವ್ಯ ಯೋಜನೆ," ಎಂದಳು ಆಕೆ, ಓದಿದ ಬಳಿಕ.

ಮುಖ್ಯಮಂತ್ರಿ ಮಂದಹಾಸ ಸೂಸುತ್ತ, "ಇದಕ್ಕೆ ಪ್ರೇರಣೆ ನನ್ನದೇ.

ಮೃದುಲಾಬೆನ್‌ಗೆ ರಾಷ್ಟ್ರಪಕ್ಷದ ಕೃಪೆ ಇದೆ. ನಾವು ದಿಲ್ಲಿಯಲ್ಲಿದ್ದಾಗ ಅವರ ಪರಿಚಯ ವಾಯ್ತು. ಕರ್ತೃತ್ವಶಾಲಿ ಮಹಿಳೆ, ಕಲಾತಂಡದ ಜತೆ ಇಲ್ಲಿಗೆ ಬರ್‍ತಾರೆ, ಈ ತಿಂಗಳ ಕೊನೆಯ ವಾರ, ನಿಮ್ಮ ಸಹಕಾರ ಬೇಕಲ್ಲ ?"

ಕಾರ್ಯಕ್ರಮದ ವಿವರ ತಿಳಿದು ಸುಲೋಚನಾಬಾಯಿ ಅಂದಳು :

"ನೂರು ಟಿಕೆಟ್ ನಾವು ಮಾರ್‍ತೀವೆ. ಐ.ಜಿ.ಪಿ.ಯವರ ಪತ್ನಿ ಆಶ್ರಮದ ನಮ್ಮ ಕಮಿಟೀಲಿದಾರೆ."

"ಹಾಗೋ ! ಐ.ಜಿ.ಪಿ. ಜತೆ ಮಾತಾಡ್ತೇನೆ. ಐನೂರು ಟಿಕೆಟ್ ಅವರ ಜವಾಬ್ದಾರಿ. ಉಳಿದ ಐದು ನೂರು ಇತರ ಸರಕಾರೀ ಕಚೇರಿಗಳ ಮೂಲಕ ಮಾರಾಟವಾಗ್ತವೆ. ನೀವು ಮತ್ತು ಮಿಸೆಸ್ ಐ.ಜಿ.ಪಿ.—ಅವರ ಹೆಸರೇನು ?"

"ಸುಹಾಸಿನಿ ಪ್ರಭು."

"ನೀವು ಮತ್ತು ಅವರು ಆತಿಥೇಯರ ಸಮಿತಿಯಲ್ಲಿರಬೇಕು. ನೀವು ಸಂಚಾಲ ಕರು. ಆ ಭಾನುವಾರ ನಾಟ್ಯಮಂದಿರ ನಿಮ್ಮ ವಶದಲ್ಲಿರ್‍ತದೆ. ಏನು ಸಹಾಯ ಬೇಕಾ ದರೂ ಕೇಳಿ. ನಮ್ಮ ಆಪ್ತ ಕಾರ್ಯದರ್ಶಿಗೆ ಫೋನ್‌ಮಾಡಿದರೆ ಸಾಕು.... ಕಿಷ್ಕಿಂಧೆಯ ಮಟ್ಟಿಗೆ ನಿಮ್ಮ ಅನಾಥಾಶ್ರಮವನ್ನೇ ರಾಜ್ಯದ ಕೇಂದ್ರ ಘಟಕವಾಗಿ ಪ್ರತಿಷ್ಠಾನ ಸ್ವೀಕರಿಸಿಸಲಿ. ನಿಮಗೆ ಇನ್ನಷ್ಟು ಹಣ ಬರ್‍ತದೆ."

"ಕಮಿಟಿಯ ಮುಂದೆ ಈ ವಿಷಯ ಇಡ್ತೇನೆ."

"ನಿಬಂಧನೆಗಳ ವಿಚಾರ ತಾನೆ ? ತಿದ್ದುಪಾಟು ಮಾಡಿದರಾಯಿತು.... ಕಾರ್ಯ ಕ್ರಮಕ್ಕೆ ಸಂಬಂಧಿಸಿ ಜಾಹೀರಾತು ವಾರ್ತಾಇಲಾಖೆಯವರು ಪತ್ರಿಕೆಗಳಿಗೆ ಕೊಡ್ತಾರೆ. ಅದರಲ್ಲಿ ಸಂಚಾಲಕರು ಅಂತ ನಿಮ್ಮ ಮತ್ತು ಆ–ಆ–"

"ಸುಹಾಸಿನಿ ಪ್ರಭು."

"ಅವರ ಹೆಸರುಗಳಿರ್‍ತವೆ. ಭಿತ್ತಿಪತ್ರಗಳನ್ನೂ ಮಾಡಿಸೋಣ. ಪ್ರತಿಷ್ಠಾನದ ಕಿಷ್ಕಿಂಧೆ ಸಂದರ್ಶನ ಒಂದು ಐತಿಹಾಸಿಕ ಸಂಭವವಾಗ್ಬೇಕು."

"ಆಗಲಿ, ಮಾತಾಜಿ."

"ಇಷ್ಟರ ತನಕ ಒಂದು ಅನಾಥಾಶ್ರಮ ನಡೆಸ್ತಿದ್ದಿರಿ. ಇನ್ನು ಅಖಿಲ ಭಾರತ ವ್ಯಾಪ್ತಿಯಲ್ಲಿ ನಿಮ್ಮ ಚಟುವಟಿಕೆ. ಹ್ಯಾಗನಿಸುತ್ತೆ ನಿಮಗೆ ?"

"ತಮಗೆ ಧನ್ಯವಾದ ಅರ್ಪಿಸ್ತೇನೆ, ಅಷ್ಟೆ."

"ಆಶ್ರಮಕ್ಕೆ ಫೋನ್ ಇಲ್ಲ, ಅಲ್ಲವೆ ?"

"ಇಲ್ಲ. ಅದೊಂದು ತೊಂದರೆ."

"ಸರಿಯಾದ ವಿಳಾಸ, ವಿವರ, ಆಪ್ತ ಕಾರ್ಯದರ್ಶಿ ಹತ್ತಿರ ಕೊಟ್ಟು ಹೋಗಿ, ನಾಳೆ ಟೆಂಪರರಿ ಫೋನ್ ಬರ್‍ತದೆ. ಮುಂದೆ ಅದನ್ನೆ ಖಾಯಂ ಮಾಡಿಸಿದರಾಯ್ತು."

"ತಮ್ಮಿಂದ ಬಹಳ ಉಪಕಾರವಾಯ್ತು."

* * *

ಅರ್ಜಿ ಕೊಟ್ಟು ಸಾಕಷ್ಟು ಕಾಲವಾಗಿತ್ತು. ಧನಂಜಯಕುಮಾರನಿಗೆ ಸಂದೇಹ; ವಿಷಯ ಗೊತ್ತಾಗಿ ಬೇರೆ ವರ್ತಕರು ಅರ್ಜಿ ಹಾಕಿದ್ದರೆ ? ಅಂಥದೇನೂ ಆಗಿರಲಿಲ್ಲ. ಅರ್ಜಿಯ ಮೇಲೆ ಗುಮಾಸ್ತೆಯೊಬ್ಬ ಬೆಚ್ಚಗೆ ಕುಳಿತಿದ್ದ. ಬರಬೇಕಾದದ್ದು ಬಂದಿರಲಿಲ್ಲ.

ಪರಶುರಾಮನಿಂದ ಗುಮಾಸ್ತೆಗೆ ಪ್ರಶ್ನೆ ಬಂತು.

"ಅರ್ಜಿ ಏನಾಯ್ತು ? ಮಾತಾಜಿ ಕೇಳ್ತಿದಾರೆ."

ನ್ಯಾಯವಾಗಿ ತನಗೆ ಬರಬೇಕಾದ್ದನ್ನು ಈ ಆಪ್ತ ಕಾರ್ಯದರ್ಶಿಯೇ ಎಲ್ಲಿ ಗುಳುಂ ಮಾಡುತ್ತಿದಾನೋ ಎಂಬ ಸಂದೇಹ ಗುಮಾಸ್ತೆಗೆ. ತಾನೇ ಪರಶುರಾಮನ ಬಳಿಗೆ ಹೋದ.

ರಾಗವೆಳೆದ : "ರೇಷ್ಮೆ ನಿಗಮದ ಅಧ್ಯಕ್ಷರು ಅರ್ಜೀನ ಪರಿಶೀಲಿಸ್ಬೇಕಲ್ಲ ?"

ಆಪ್ತ ಕಾರ್ಯದರ್ಶಿ ಕನಲಿದ.

"ಎಷ್ಟ್ರೀ ಕೊಬ್ಬು ನಿಮಗೆ ? ಅಧ್ಯಕ್ಷರಿಗೆ ನಾವು ಕಳಿಸ್ತೀವಿ. ಇನ್ನು ಕಾಲು ಗಂಟೇಲಿ, ಇದು ಪರಿಶೀಲನಾರ್ಹ ಯೋಜನೆ—ಅಂತ ನೋಟ್ ಹಾಕಿ ಫೈಲ್ ನನಗೆ ಕಳಿಸಿಕೊಡಿ."

(ಪರಶುರಾಮನಿಗೆ ವೈಯಕ್ತಿಕ ಕಾಣಿಕೆಯನ್ನು ಸಾಹುಕಾರ ಸಲ್ಲಿಸಿ ಆಗಿತ್ತು. ನಗದಿನ ಜತೆಗೆ ಒಂದು ಸೀರೆ ಕೂಡ. ಹರಿಣಾಕ್ಷಿಗೆ ಇಷ್ಟವಾಗಿತ್ತು. "ಈಗ ನಿಮ್ಮನ್ನೊಬ್ಬ ಅಧಿಕಾರಿ ಅಂತ ಕರೀಬಹುದು." ಎಂದಿದ್ದಳು. 'ಗೃಹಕಾರ್ಯಾಲಯ ಅಂತ ಮಾತಾಜಿ ಜತೆ ತನ್ನ ಗಂಡ ಬಹಳ ಹೊತ್ತು ಇರುತ್ತಾನೆ' ಎಂಬ ಅವಳ ಸಂಕಟ ಮಾತ್ರ ಶಮನವಾಗಲಿಲ್ಲ.)

"ಇವತ್ತು ಬರಲಾ ?" ಎಂದು ಧನಂಜಯಕುಮಾರ ಫೋನ್ ಮಾಡಿದ್ದ.

"ಅಪರಾಹ್ನ ಬನ್ನಿ." ಎಂದಿದ್ದ ಪರಶುರಾಮ.

ಈಗ ಕಾರ್ಯಸೌಧದ ಮೆಟ್ಟಲೇರಿದೊಡನೆ ಧನಂಜಯನ ನಡಿಗೆಗೊಂದು ಠೀವಿ ಬರುತ್ತಿತ್ತು.

ಒಳನುಗ್ಗಲು ಕಾದಿದ್ದವರನ್ನು ಅಲ್ಲಿಯೇ ಇರಹೇಳಿ, ಧನಂಜಯಕುಮಾರ ನೊಡನೆ ಪರಶುರಾಮ ಮುಖ್ಯಮಂತ್ರಿಯ ಚೇಂಬರನ್ನು ಪ್ರವೇಶಿಸಿದ. ಅವನ ಕೈಯಲ್ಲಿತ್ತು ಗುಮಾಸ್ತೆ ಒಪ್ಪಿಸಿದ್ದ ಫೈಲು.

ಅದರಲ್ಲಿ ರೇಷ್ಮೆ ನಿಗಮದ ಅಧ್ಯಕ್ಷರಿಗೆ ಸೌದಾಮಿನಿ ತನ್ನ ಅನುಜ್ಞೆ ಬರೆದಳು :

"ಅರ್ಜಿ ಮಂಜೂರಾಗಿದೆ. ಸೂಕ್ತಕ್ರಮ ಕೈಗೊಳ್ಳಿ. ಆಜ್ಞೆ ಹೊರಡಿಸಿ ನನಗೆ ತಿಳಿಸಿಬಿಡಿ."

ಕುಳಿತುಕೊಳ್ಳಲು ಮುಖ್ಯಮಂತ್ರಿ ಹೇಳಿರಲಿಲ್ಲ. ಆದರೂ ಅವರ ಹತ್ತಿರವೇ ನಿಂತಿದ್ದ ಸಾಹುಕಾರ.

ಆತ್ಮೀಯ ಧ್ವನಿಯಲ್ಲಿ ಅವಳೆಂದಳು :

"ಭಾರೀ ಫೋಟೋ ಅಂಗಡೀಲಿ ಹಾಕಿದೀರಂತೆ !"

ಧನಂಜಯ "ಇಹ್ಹಿ" ಎಂದು ನಕ್ಕ.

"ಇದು ಕೋಟಿಗಟ್ಟಲೆ ವ್ಯವಹಾರ. ಆದಷ್ಟು ಬೇಗನೆ ಐವತ್ತುಲಕ್ಷ ನಮ್ಮ ಪಕ್ಷಕ್ಕೆ ಸಂದಾಯವಾಗಬೇಕು."

"ಅಪ್ಪಣೆ....ತಾವೊಮ್ಮೆ ನಮ ಅಂಗಡಿಗೆ ಭೇಟಿ...."

"ಆಗಲಿ, ಆಗಲಿ. ಬರ್ತೀವೆ... ಪರಶುರಾಮ್, ಈ ಫೈಲನ್ನು ಈಗಲೇ ನಿಗಮದ ಅಧ್ಯಕ್ಷರಿಗೆ ಕಳಿಸಿಕೊಡು. ಅವರ ಆರ್ಡರಿನ ಪ್ರತಿ ನಾಳೆ ನನಗೆ ಬೇಕು."

"ಹ್ಞ. ಮಾತಾಜಿ."

ವಂದಿಸುತ್ತಿದ್ದ ಸಾಹುಕಾರನಿಗೆ ಸೌದಾಮಿನಿ ಅಂದಳು :

"ಧನಂಜಯ್, ಹೋಗಿಬನ್ನಿ. ನಮಸ್ಕಾರ."

....ರಂಗಧಾಮ್ ಬಿರುಸಿನಿಂದ ನಡೆದು ಬಂದಾಗ, ಆತನ ಪರಿಚಯವಿದ್ದ ಕೆಲ ಸಂದರ್ಶಕರು ಎದ್ದು ನಿಂತರು. ಪರಶುರಾಮನ ಹತ್ತಿರ ಸೇರಿದಂತೆ ರಂಗಧಾಮನ ಚಲನೆಯ ಗತಿ ನಿಧಾನವಾಯಿತು.

"ಒಂದು ನಿಮಿಷ ಕಾಣಬೇಕಲ್ಲ ? ಅರ್ಜೆಂಟು."

ಒಳಕ್ಕೆ ಹೋಗೆಂದು ಕೈಸನ್ನೆ ಮಾಡಿದ್ದ ವ್ಯಕ್ತಿಯನ್ನು ಪುನಃ ಕೂತಿರಲು ಸೂಚಿಸಿ, "ಬನ್ನಿ ಸಾರ್" ಎನ್ನುತ್ತ ಪರಶುರಾಮ ರಂಗಧಾಮನೊಡನೆ ಒಳನಡೆದ. ಆತನ ಕೈಯಲ್ಲೂ ಇತ್ತು ಒಂದು ಫೈಲು.

ಹತ್ತಿರದ ಪೀಠಕ್ಕೆ ಕರೆದು ಸೌದಾಮಿನಿ ಅಂದಳು :

"ಫ್ರಾಂಕ್‌ಫರ್ಟ್ ಪ್ರವಾಸಕ್ಕೆ ಸಂಬಂಧಿಸಿದ್ದಾ ?"

"ಹೌದು, ಮಾತಾಜಿ. ವಿದ್ಯುಚ್ಛಕ್ತಿ ನಿಗಮದ ಅಧ್ಯಕ್ಷರನ್ನೂ ಕರಕೊಂಡು ಹೋಗ್ತೀನಿ."

"ಎಷ್ಟು ಟರ್ಬೈನುಗಳು ಬೇಕಂತೆ ?"

"ಹತ್ತು."

"ಅರ್ಥಇಲಾಖೆ ಏನು ಹೇಳ್ತದೆ ?"

"ವಿಶ್ವಬ್ಯಾಂಕ್ ಸಾಲ ಮಂಜೂರಾಗಿದೆ. ಆದರೆ, ಕೇಂದ್ರದ ತಾಂತ್ರಿಕ ಸಮಿತಿಯ ಒಪ್ಪಿಗೆ ಬೇಕಂತೆ."

"ದಿಲ್ಲಿಗೆ, ನಕುಲ್‌ದೇವ್‌ಜಿಗೆ, ಫೋನ್ ಮಾಡ್ತೇನೆ. ಮೊದಲು ನೀವು ಅಲ್ಲಿಗೆ ಹೋಗಿ. ಯಾವತ್ತು ವಿದೇಶಯಾತ್ರೆ ?"

"ತಿಂಗಳ ಕೊನೇ ವಾರ. ಓಪನ್ ಟಿಕೆಟ್ ತಗೋಳ್ತೀವೆ."

"ಏರ್‌ಇಂಡಿಯಾದಲ್ಲೇ ಹೋಗಿ. ದೇಶಾಭಿಮಾನದಲ್ಲಿ ಕಡಮೆ ಆಗಬಾರದು."

"ಏರ್‌ಇಂಡಿಯಾದಲ್ಲೇ ಲಂಡನಿಗೆ ಹೋಗಿ, ಅಲ್ಲಿಂದ ರೋಮ್‌ಮಾರ್ಗವಾಗಿ ವಾಪಸು ಬರಬೌದಾ ?"

"ಇದೇನು ಪ್ರಶ್ನೆ ? ಪ್ಯಾರಿಸ್‌ಗೂ ಹೋಗ್ಬನ್ನಿ...ಯಾವುದಾದರೂ ಟೆನ್ನಿಸ್ ಟೂರ್ನಮೆಂಟ್ ಇದ್ದರೆ ನೋಡಿ ಬನ್ನಿ."

"ವಿಚಾರಿಸಿದೇನೆ. ಆ ವೇಳೆಯಲ್ಲಿ ಯಾವುದೂ ಇಲ್ಲ !"

"So sorry. ಹೊರಡೋದಕ್ಕೆ ಮುಂಚೆ ನೀವೂ ನಿಗಮದ ಅಧ್ಯಕ್ಷರೂ ಒಮ್ಮೆ ಬನ್ನಿ....ಅಂದಹಾಗೆ ನಿಮ್ಮ ಅಂಬಾಸಡರ್ ಯಾವಾಗ ತಗೊಳ್ತೀರಾ ?"

"ಇವತ್ತೇ..."

"ಇವತ್ತು ನನಗೆ ಬಿಡುವಿಲ್ಲ. ನಾಳೆ ಡೆಲಿವರಿ ತಗೊಂಡು ಸಾಯಂಕಾಲ ನಮ್ಮ ನಿವಾಸಕ್ಕೆ ಬನ್ನಿ. ನಿಮ್ಮ ಹೊಸ ಕಾರಿನಲ್ಲಿ ನನಗೊಂದು ರೈಡ್ ಕೊಡೊಲ್ವ ?"

"ಕೊಡ್ತೀನಿ, ಮಾತಾಜಿ."

* * *

ಹೊಸ ಅಂಬಾಸಡರ್ ಕಾರ್ಯಸೌಧಕ್ಕೇ ಬಂತು. ಡ್ರೈವರನಿಗೆ ಬಿಡುಗಡೆ ನೀಡಿ ರಂಗಧಾಮ ತಾನೇ ಚಾಲಕನಾಗಿ ಮುಖ್ಯಮಂತ್ರಿಯ ನಿವಾಸವನ್ನು ತಲಪಿದ. ಊಟಕ್ಕೆ ಇರಬೇಕಾಯಿತು.

ಸೌದಾಮಿನಿ ಕೇಳಿದಳು :

"ಶ್ರೀಮತಿಯವರನ್ನು ತವರಿಗೆ ಕಳಿಸಿದಿರಾ ?"

"ಮುಂದಿನ ವಾರ ಬಂದು ಕರಕೊಂಡು ಹೋಗ್ತಾರೆ."

"ಐರೋಪ್ಯ ಪ್ರವಾಸ ಮುಗಿಸಿ ಬರುವಾಗ ರಾಜಕುಮಾರ ಸ್ವಾಗತಿಸ್ತಾನೆ !"

"ರಾಜಕುಮಾರ–ಕುಮಾರಿ ಎಲ್ಲಾ ಒಂದೇ."

"ಈಗ ಶ್ರೀಮತಿಯವರಿಗೆ ವಿಶ್ರಾಂತಿ. ನೋಡ್ಕೊಳ್ಳೋಕೆ ಯಾರಿದ್ದಾರೆ ?"

"ವಯಸ್ಸಾದ ನನ್ನ ಸೋದರತ್ತೆ ಒಬ್ಬರಿದ್ದಾರೆ."

"ಹ್ಯಾಗಿದೆ ಕಾರು ?"

"ಸೊಗಸಾಗಿದೆ."

"ನನಗೆ ಪ್ಯಾರಿಸಿನಿಂದ ಏನು ತರ್ತೀರಿ ?"

"ಹೇಳಿ. ಏನು ತರಲಿ ?"

"ಒಂದು ಪುಟ್ಟ ಸೆಂಟ್‌ಬಾಟಲ್."

"ಆಗಲಿ, ಮಾತಾಜಿ."

ಸೌದಾಮಿನಿ ಒಳಹೋಗಿ ಸುಗಂಧ ದ್ರವ್ಯವನ್ನಿಷ್ಟು ಪೂಸಿ, ಶಾಲು ಹೊದೆದು ಕೊಂಡು ಬಂದಳು.

"ನಗರದ ದಕ್ಷಿಣ ವಲಯದಲ್ಲಿ ಹೆದ್ದಾರಿಯ ಹತ್ತಿರ ಭೀಮಗಾತ್ರದ ಒಂದು ಹುಣಸೇಮರ ಇದೆ. ನನಗೆ ಬಹಳ ಇಷ್ಟವಾದದ್ದು. ನಿಮ್ಮ ಕಾರಿನಲ್ಲಿ ಕುಳಿತು ಅಲ್ಲಿ ತನಕ ಹೋಗಿ ಬರೋಣ."

ಸುವಾಸನೆ ಹಜಾರವನ್ನು ವ್ಯಾಪಿಸಿತು. ರಂಗಧಾಮನ ಮೂಗಿನ ಹೊಳ್ಳೆಗಳಿಗೆ ಅಪ್ಪಳಿಸಿತು. ಬೆಳಗ್ಗೆಯೇ ಮೂಡಿದ್ದ ಸಂದೇಹ ದಟ್ಟವಾಯಿತು.

ರಾಮ್‌ಧನ್, ಬೋಲಾನಾಥ್ ಬಂದರು ; ಸರಕಾರೀ ಪೋಲೀಸ್ ಪೇದೆಗಳೂ ಬಂದರು.

ಮುಖ್ಯಮಂತ್ರಿ ಅಂದಳು :

"ಇಲ್ಲೇ ಇರಿ. ಮಿನಿಸ್ಟರ ಮನೇಲಿ ಶ್ರೀಮತಿಯವರಿಗೆ ತುಸು ಅನಾರೋಗ್ಯ. ನೋಡಿ ಬರ್ತೇನೆ."

ಅಂಗರಕ್ಷಕರೂ ಪೋಲೀಸರೂ ಸುಮ್ಮನಾದರು. ಕಾರು ಹೊರಟೊಡನೆ ಪರಸ್ಪರರ ಮುಖಗಳನ್ನು ಮಿಕಿಮಿಕಿ ನೋಡಿದರು. ಸುಮ್ಮನಾದರು.

ಟೋಲ್‌ಗೇಟನ್ನು ಹಿಂದಿಕ್ಕಿ ಸಾಲು ಮರಗಳ ಮಧ್ಯೆ ಕಾರು ಓಡತೊಡಗಿದ ಮೇಲೆ ಸೌದಾಮಿನಿ ಚಾಲಕನತ್ತ ಸರಿದು ಕುಳಿತಳು. "ಸ್ಟೀಯರಿಂಗ್ ವ್ಹೀಲಿಗೆ ಒಂದು ಕೈ ಸಾಲದಾ ?" ಎಂದಳು. ಅವನ ಇನ್ನೊಂದು ಕೈ ಆಕೆಯ ಕತ್ತನ್ನು ಬಳಸಿ, ಸಿಕ್ಕಿದುದನ್ನು ತಡವಿತು. "ಕೈ ಹಾಗೇ ಇರಲಿ," ಎಂದಳಾಕೆ.

ಟೆನ್ನಿಸ್ ಆಟದಲ್ಲಿ ಮುಖ್ಯಮಂತ್ರಿಯನ್ನು ವಿಜಯಿಯಾಗಿ ಮಾಡಿದ ಮೇಲೆ "ಇನ್ನು ಬೇರೆ ಆಟ ಇಲ್ಲ" ಎನಿಸಿತ್ತು ರಂಗಧಾಮನಿಗೆ. ಈಗ ಮತ್ತೆ ಅದೇ ಬೆಂಕಿಯ ಸಮೀಪದಲ್ಲಿದ್ದೇನೆ. ಮೈ ಕಾಯಿಸುತ್ತೇನೋ, ಉರಿದು ಹೋಗುತ್ತೇನೋ.

"ಹತ್ತು ಹದಿನೈದು ಮೈಲು ಬಂದೆವಲ್ಲ ?"

"ಹ್ಞ. ಇನ್ನೆಷ್ಟು ದೂರ ?"

"ವೇಗ ಕಮ್ಮಿ ಮಾಡಿ.... ಎಡಕ್ಕೊಂದು ದಾರಿ ಕಾಣ್ತದೆ. ಅದರಲ್ಲಿ ಫರ್ಲಾಂಗು ಹೋದರಾಯ್ತು."

ದಾರಿ ಅಸ್ಪಷ್ಟವಾಗಿ ಕಾಣಿಸಿತು.

"ಆ ಮರವಾ ?"

"ಅದೇ, ಅದೇ !"

"ಇಲ್ಲಿಗೆ ಈ ಮೊದಲು ನೀವು ಬಂದಿದೀರಾ ?"

"ಹೋದ ಜನ್ಮದಲ್ಲಿ ಕೆಲವು ಸಾರೆ, ಕನಸಿನಲ್ಲಿ ಅನೇಕ ಸಲ."

"........"

"ನಿಲ್ಲಿಸಿ."

ಬೆಲ್ಲ ವಿನಿಮಯ: ಬಾಗಿಲು ತೆರೆದರು, ಇಳಿದರು. ಬಾಗಿಲು ತೆರೆದರು, ಹತ್ತಿದರು.

ಸೌದಾಮಿನಿ ಅಂದಳು :

"ಮುಖ್ಯಮಂತ್ರಿಯಾಗಿ ದಿಲ್ಲಿಗೆ ಹೋದ ಮೊದಲ್ನೇ ಸಲ ರಾತ್ರೆ ನಿದ್ದೆ ಬರ್ಲಿಲ್ಲ. ಕಡೆಗೆ, ನೀನು ಪಕ್ಕದಲ್ಲಿ ಇದ್ದೀಯ ಅಂತ ಕಲ್ಪಿಸಿಕೊಂಡು ಮಲಗಿದೆ."

"ಇದು ಕಲ್ಪನೆಯಲ್ಲ, ವಾಸ್ತವತೆ."

"ಬಾ."

"ಬಾ."

೧೭

ಚೆನ್ನೈಯಿಂದ ಸ್ವಾಮೀಜಿ ಬಂದು ಕಲ್ಯಾಣನಗರದ ಧರ್ಮಪೀಠದ ಅಧಿಪತಿಯಾದರು. ಅವರೆಂದುಕೊಂಡರು: ಮುಖ್ಯಮಂತ್ರಿ ಮಠದ ಭಕ್ತೆ ಎಂದ ಮೇಲೆ, ಒಂದು ವರ್ಷ ಹಿಡಿಯುವುದನ್ನು ಒಂದು ತಿಂಗಳಲ್ಲಿ ಸಾಧಿಸಬಹುದು. ಅವರು ಚೆನ್ನೈಯಿಂದ ಬರುತ್ತ ಹದಿನೆಂಟರ ಹರೆಯದ ಶಿಷ್ಯನನ್ನು ಕರೆತಂದಿದ್ದರು. ಅವನೂ ಅವರಂತೆಯೇ ಸ್ಫುರದ್ರೂಪಿ.

"ಮರಿಸ್ವಾಮಿ, ಮುಖ್ಯಮಂತ್ರಿ ಇದ್ದಲ್ಲಿಗೆ ಹೋಗಿ ನಾವು ಬಂದಿದ್ದೇವೆ ಅಂತ ತಿಳಿಸಿ ಬರ್‍ತೀಯಾ ?"

"ಅಪ್ಪಣೆ, ಸ್ವಾಮೀಜಿ."

ಊರಿಗೆ ಹೊಸಬರು. ಮಠದ ಚಾಕರ ಗೃಹಕಾರ್ಯಾಲಯವನ್ನು ದೂರದಿಂದ ನೋಡಿದ್ದ.

ಅವನ ಜತೆಯಲ್ಲಿ ಮರಿಸ್ವಾಮಿ ಆಟೋರಿಕ್ಷಾ ಏರಿ ಕಿಷ್ಕಿಂಧೆಯ ರಾಜಧಾನಿಯ ಹೆದ್ದಾರಿಗಳಲ್ಲಿ ಕಿರುದಾರಿಗಳಲ್ಲಿ ಸಾಗಿದ.

"ಆಟೊ ಒಳಗೆ ಬಿಡಾಕಿಲ್ಲ. ನೋಡಿ ಅಲ್ಲಿ, ಬಂದೂಕು ಹಿಡಿದು ಪೋಲೀಸ್ ಪೇದೆ ನಿಂತವ್ನೆ."

ಆಟೋದವನನ್ನು ಅಲ್ಲಿಯೆ ಬೀಳ್ಕೊಟ್ಟು, ಮರಿಸ್ವಾಮಿ ಚಾಕರನೊಂದಿಗೆ ಮಹಾದ್ವಾರದತ್ತ ಹೆಜ್ಜೆ ಇಟ್ಟ. ಕಾವಿ ನಿಲುವಂಗಿಯ ಯುವಕ. ಪೋಲೀಸನಿಂದ ನಮಸ್ಕಾರ ದೊರೆಯಿತು.

"ಧರ್ಮಮಠದಿಂದ ಬಂದಿದ್ದೇವೆ. ಮುಖ್ಯಮಂತ್ರಿಯವರಿಗೆ ಒಂದು ಸಂದೇಶ ತಂದಿದ್ದೇವೆ. ಅವರನ್ನು ಒಂದು ನಿಮಿಷ ಕಾಣಬೇಕು."

ರಕ್ಷಣಾ ಪೋಲೀಸ್ ಪೇದೆ ಕಣ್ಣಿಗೆ ಬಿದ್ದ ಗೃಹ ಜವಾನನೊಬ್ಬನನ್ನು ಸನ್ನೆ ಮಾಡಿ ಕರೆದು, ವಿಷಯ ತಿಳಿಸಿ, "ಪ್ರೈವೆಟ್ ಸೆಕ್ರೆಟರಿ ಸಾಹೇಬರಿಗೆ ತಿಳಿಸು," ಎಂದ.

ಪರಶುರಾಮ ಸ್ನಾನ ಮಾಡುತ್ತಿದ್ದ. ಗೃಹ ಜವಾನ ಮರಿಸ್ವಾಮಿಯ ಕಾಷಾಯದುಡುಗೆಗೆ ಗೌರವವಿತ್ತು ಹಜಾರದಲ್ಲಿದ್ದ ಒಂದು ಕುರ್ಚಿಯತ್ತ ಅವನನ್ನು ಒಯ್ದ.

ಯೋಗಾಸನ ಮುಗಿಸಿ, ಮೇಲಂಗಿ ತೊಟ್ಟು, ಕಿಟಿಕಿಯ ಬಳಿ ಸ್ವಚ್ಛಗಾಳಿಯನ್ನು

ಪುಷ್ಪಸಕ್ಕೆ ತುಂಬಿಕೊಳ್ಳುತ್ತಿದ್ದ ಸೌದಾಮಿನಿ ಇತ್ತ ಬಂದಾಗ ಕಾವಿಯನ್ನು ಕಂಡಳು. ಹಜಾರಕ್ಕೆ ಬಂದು "ಯಾರು ?" ಎಂದಳು.

ಮರಿಸ್ವಾಮಿ ಕುಳಿತಲ್ಲಿಂದಲೇ "ಮುಖ್ಯಮಂತ್ರಿಯವರನ್ನು ಕಾಣಬೇಕಾಗಿತ್ತು." ಎಂದ.

"ನಾನೇ ಮುಖ್ಯಮಂತ್ರಿ. ಏನಾಗಬೇಕು ?"

ಎದ್ದು ನಿಂತು ಮರಿಸ್ವಾಮಿ ಕೈಜೋಡಿಸಿದ. ಓಡಿ ಬಂದ ಪರಶುರಾಮನೂ ಅಲ್ಲಿ ನಿಂತ. ಅಷ್ಟರಲ್ಲಿ ಫೋನ್ ಟ್ರಿಣ್‌ಗುಟ್ಟಿತು.

ಪರಶುರಾಮ ರಿಸೀವರನ್ನೆತ್ತಿ "ಸಿ.ಎಂ. ರ ಗೃಹಕಾರ್ಯಾಲಯ" ಎಂದ. "ಮಾತಾಜಿ, ದಿಲ್ಲಿಯಿಂದ." ಎಂದೂ ಹೇಳಿದ.

"ಒಂದು ನಿಮಿಷ" ಎಂದು ಮರಿಸ್ವಾಮಿಗೆ ಹೇಳಿ ಸೌದಾಮಿನಿ ಫೋನಿನ ಬಳಿ ಬಂದಳು.

ಆ ಕೊನೆಯಲ್ಲಿದ್ದುದು ನಕುಲದೇವ್.

"ಯೋಗಾಸನ ಆಯ್ತಾ ಮಿನಿ ?"

"ಆಯ್ತು, ಅಣ್ಣ."

"ಟರ್ಬೈನ್ ವ್ಯವಹಾರದ್ದು ಏರ್ಪಾಟಾಗಿದೆ. ಆ ಸಂಸ್ಥೆಯ ಏಜೆಂಟ್ ಇಲ್ಲಿ ದಾನೆ. ರಂಗಧಾಮ್ ಮತ್ತು ನಿಗಮದ ಅಧ್ಯಕ್ಷ ಪ್ರವಾಸ ಹೊರಡಬಹುದು. ಇಲ್ಲಿಗೆ ಬಂದು ನನ್ನನ್ನು ಕಾಣಲಿ."

"ಸರಿ."

"ಶುಭಕಾಮನೆ."

"ಧನ್ಯವಾದ."

ಕಲ್ಯಾಣನಗರದ ಧರ್ಮಮಠ ಈಗ ತಬ್ಬಲಿಯಲ್ಲ, ಚೆನ್ನೈಯಿಂದ ಸ್ವಾಮೀಜಿ ಬಂದಿದ್ದಾರೆ ಎಂದು ಸೌದಾಮಿನಿ ಸಂತುಷ್ಟಳಾದಳು.

"ಸ್ವಾಮೀಜಿಗೆ ನಮ್ಮ ಪ್ರಣಾಮ ತಿಳಿಸಬೇಕು. ಇನ್ನು ಒಂದೆರಡು ವಾರಗಳಲ್ಲಿ ಬಂದು ಕಾಣ್ತೇವೆ. ನಮಗೆ ನೆನಪಿರುವ ಪ್ರಕಾರ ಮಠದ ಸುತ್ತಲೂ ಉದ್ಯಾನವಿಲ್ಲ. ದಂತೇಶ್ವರಿಯ ಪೂಜೆಗೆ ಹೂ ಕೂಡ ಇಲ್ಲ."

"ಹೌದು."

"ಸರಕಾರದ ತೋಟಗಾರಿಕೆ ಇಲಾಖೆಯ ಮುಖ್ಯಸ್ಥ ಇವತ್ತೇ ಬಂದು ಸ್ವಾಮೀಜಿಯನ್ನು ಭೇಟಿಯಾಗ್ತಾರೆ. ಅವರ ಜತೆ ಇವರು, ನಮ್ಮ ಆಪ್ತ ಕಾರ್ಯದರ್ಶಿ, ಬರ್ತಾರೆ. ಸ್ವಾಮೀಜಿ ನಿರ್ದೇಶ ನೀಡಲಿ. ಎರಡು ಮೂರು ದಿವಸಗಳಲ್ಲಿ ಮಠಕ್ಕೆ ಪತ್ರ–ಪುಷ್ಪ ಕಳೆ ಬರ್ತದೆ. ಒಬ್ಬ ಮಾಲಿ ನಿತ್ಯವೂ ಬಂದು ಆರೈಕೆ ಮಾಡ್ತಾನೆ. ಗಾರೆ ಚೌಕಟ್ಟಿನ ತಾವರೆ ಕೊಳ, ಕಾರಂಜಿ, ಮಲ್ಲಿಗೆ ಚಪ್ಪರ, ಸಂಪಿಗೆ–ಪಾರಿಜಾತ ಗಿಡಗಳು, ರಸ್ತೆಗೆ ಕಾಣಿಸದಂತೆ ಹಸುರು ಪ್ರಾಕಾರ. ಸ್ವಾಮೀಜಿ ಬಂದಿರುವ ಸುದ್ದಿ

ಪತ್ರಿಕೆಗಳಲ್ಲಿ ಪ್ರಕಟವಾಗುವ ಹಾಗೆ ಮಾಡ್ತೇನೆ. ಸಂದರ್ಶನಕ್ಕೆ ಭಕ್ತಾದಿಗಳು ಭಾರಿ ಸಂಖ್ಯೆಯಲ್ಲಿ ಜಮಾಯಿಸ್ತಾರೆ. ಕೃಷ್ಣಾಜಿನ, ರತ್ನಗಂಬಳಿ, ಪೀಠೋಪಕರಣ– ಮಠಕ್ಕೆ ಅದೇನೇನು ಬೇಕೊ ಪಟ್ಟಿಮಾಡಿ ಇವರ ಕೈಗೆ ಕೊಡಿ. ದವಸಧಾನ್ಯ, ಹಾಲು, ಜೇನು ಎಲ್ಲದರ ಪೂರೈಕೆಗೂ ಇವರು ಏರ್ಪಾಟು ಮಾಡ್ತಾರೆ. ತಿಳಿಯಿತಾ ಪರಶುರಾಮ್ ? ನಮಸ್ಕಾರ. ಮಠಕ್ಕೆ ಬಂದಾಗ ಭೇಟಿಯಾಗೋಣ."

ಮರಿಸ್ವಾಮಿ ಮೌನವಾಗಿ ನಮಸ್ಕರಿಸಿದ. ಮುಖ್ಯಮಂತ್ರಿಯ ಔದಾರ್ಯಕ್ಕೆ ಪ್ರತಿಯಾಗಿ ಏನು ಹೇಳಬೇಕೊ ತೋಚಲಿಲ್ಲ. ಧರ್ಮಮಠದ ಬಗ್ಗೆ ಸೌದಾಮಿನಿಯ ಒಲವು ಪರಶುರಾಮನಿಗೆ ತಿಳಿದಿತ್ತು. ಆಜ್ಞಪ್ತನಾಗದೆ ಇದ್ದರೂ ಮರಿಸ್ವಾಮಿ ಯನ್ನೂ ಹೊರಗೆ ನಿಂತಿದ್ದ ಚಾಕರನನ್ನೂ ಕಾರಿನಲ್ಲಿ ಮಠಕ್ಕೆ ಕೊಟ್ಟು ಕಳುಹಿದ.

ಕಾರಿನಿಂದಿಳಿದ ಮೇಲೆ ಚಾಕರ "ನನಗೆ ಮುಖ್ಯಮಂತ್ರಿಯೋರು ನೋಡೋಕೆ ಸಿಗಲೇ ಇಲ್ಲ" ಎಂದ.

"ಇನ್ನೆರಡು ವಾರಗಳಲ್ಲಿ ಇಲ್ಲಿಗೆ ದಯಮಾಡಿಸ್ತಾರೆ" ಎಂದು ಸಂತೈಸಿದ ಮರಿಸ್ವಾಮಿ. ಹಿತ್ತಿಲ ಬಾಗಿಲಲ್ಲಿ, ಹಿಂದಿನ ದಿನ ಉಳಿದದ್ದು ದೊರೆಯಿತು. ಕಸಬರಿಕೆ ಹಿಡಿದು ಚಾಕರ ಗುಡಿಸತೊಡಗಿದ. ಹನ್ನೊಂದು ಗಂಟೆಗೆ ತೋಟಗಾರಿಕೆ ಇಲಾಖೆ ಮುಖ್ಯಸ್ಥನೂ ಪರಶುರಾಮನೂ ಬಂದರು. ಮುಖ್ಯಮಂತ್ರಿ ಕಳಿಸಿದವರು ಎಂದು ಮಠದ ಚಾಕರನಿಗೆ ಗೌರವ. ಅವರಿಬ್ಬರೂ ಸ್ವಾಮೀಜಿಯೊಡನೆ ಮಾತನಾಡಿದರು. ತಮಗೆ ಬೇಕಾದ ಮಾಹಿತಿಯನ್ನೆಲ್ಲ ಟಿಪ್ಪಣಿ ಮಾಡಿದರು. (ಮರಿಸ್ವಾಮಿ ಮಠಕ್ಕೆ ಹೊಟ್ಟೆಪಾಡಿಗೆ ಬೇಕಾದ ಸಾಮಗ್ರಿಗಳ ಪಟ್ಟಿಯನ್ನು ಪರಶುರಾಮನ ಕೈಯಲ್ಲಿಟ್ಟ.

ಸಂಜೆ ನಾಲ್ಕು ಗಂಟೆಗೆ ನಾಲ್ಕು ಲಾರಿಗಳಲ್ಲಿ ಪುಷ್ಪೋದ್ಯಾನವೇ ಬಂದಿಳಿ ಯಿತು. ತಜ್ಞ ಮಾಲಿಗಳು ಕುಂಡಗಳಲ್ಲಿದ್ದ ಹೂಗಿಡ–ಬಳ್ಳಿಗಳಿಗೆ ವಿಶಿಷ್ಟ ಆಕಾರ ನೀಡಿದರು. ಮಠದ ಚಾಕರ ಮೂಕನಾದ. "ಇನ್ನೂ ಹತ್ತು ದಿವಸದ ಕೆಲಸ ಐತೆ" ಎಂದು ಬಂದಿದ್ದ ಮಾಲಿಗಳಲೊಬ್ಬ ನುಡಿದಾಗ ಇವನು ಬಾಯಿತೆರೆದು, "ಔದಾ ?" ಎಂದು ನುಡಿದು, ಮತ್ತೆ ಬಾಯಿ ಮುಚ್ಚಿದ. ಬೇರೊಂದು ಲಾರಿ ಪೀಠೋಪಕರಣ ಗಳನ್ನು ತಂದಿತು. ಟೆಂಪೋಗಾಡಿ ದವಸ ಧಾನ್ಯ ಇತ್ಯಾದಿಗಳನ್ನು ತಂದು ಇಳಿಸಿತು.

ಹಿಂದಿನ ಸ್ವಾಮೀಜಿ ಉತ್ಕಲಕ್ಕೆ ಹೋದೊಡನೆ ಆಗ ಇದ್ದ ಅಡುಗೆಯವನು ಯಾವುದೋ ಹೋಟೆಲಿನಲ್ಲಿ ಉದ್ಯೋಗಿಯಾದ. ಈಗ ಮರಿಸ್ವಾಮಿಯೇ ಅಡುಗೆಯ ಹೊಣೆ ಹೊತ್ತಿದ್ದ. ಇಲ್ಲಿನ ವ್ಯವಹಾರಕ್ಕೆ ನಳರಾಯ ಬೇಕೇ ಬೇಕು ಎನಿಸಿತು ಸ್ವಾಮೀಜಿಗೆ. ದಿನಸು ತಂದೊಪ್ಪಿಸಿದವನು ಒಳ್ಳೆಯ ಬಾಣಸಿಗನನ್ನು ಗೊತ್ತು ಮಾಡಿ ಕೊಡ್ತೇನೆ ಎಂದ. ರಾತ್ರಿಯ ಊಟ ಮುಗಿಸಿ, ಭೀಮಾಚಾರ್ ಎಂಬವನು ಬಂದು ಹಾಜರಾದ. ದೊಡ್ಡ ಸ್ವಾಮೀಜಿಗೆ ಉದ್ದಂಡ ಪ್ರಣಾಮ ಮಾಡಿದ. "ನಾನು ನಾಳೆ ಬೆಳಗ್ಗಿನಿಂದ ಚಾರ್ಜ್ ತಗೊಳ್ತೇನೆ" ಎಂದ.

ಮಾರನೆಯ ಬೆಳಗ್ಗೆ ತೋಟಗಾರಿಕೆ ಮುಖ್ಯಸ್ಥ ಉದ್ಯಾನ ತಜ್ಞೆಯೊಡನೆ

ಬಂದ. ಆಕೆ ತನ್ನ ನೀಲಿ ನಕಾಶೆಗನುಗುಣವಾಗಿ ತನಗೆ ನೀಡಿದ ಸ್ಥಾನವನ್ನು ಆಯಾ ಪುಷ್ಪಕುಂಡ ಸ್ವೀಕರಿಸಿತು.

ಚೆನ್ನೈ ಧರ್ಮಮಠಾಧೀಶರು ಕಲ್ಯಾಣನಗರಕ್ಕೆ ಬಂದು ಧರ್ಮಮಠದ ಅಧಿಕಾರ ವಹಿಸಿಕೊಂಡುದು ದಿನ ಪತ್ರಿಕೆಗಳಲ್ಲಿ ಸುದ್ದಿಯಾಯಿತು. ಮುಖ್ಯಮಂತ್ರಿ ಅದು ಪ್ರಕಟವಾದ ಸಂಜೆಯೇ ಮಠಕ್ಕೆ ಹೋಗಿ ಸ್ವಾಮೀಜಿಯ ಶುಭಾಶೀರ್ವಾದ ಪಡೆದು ಬಂದರೆನ್ನುವುದು ಮತ್ತೆ ಅಚ್ಚಿನ ರೂಪ ತಳೆಯಿತು. ಆ ವಾರ್ತೆ ಓದಿದ ಗಣ್ಯರು ಮಠಕ್ಕೆ ಬರತೊಡಗಿದರು. ಸಾಪ್ತಾಹಿಕಗಳಲ್ಲಿ ಸ್ವಾಮೀಜಿ ಮತ್ತು ಮಠದ ಬಗ್ಗೆ ಸಚಿತ್ರ ಲೇಖನಗಳು ಬಂದುವು. ಒಂದರಲ್ಲಿ ಮರಿಸ್ವಾಮಿಯ ಚಿತ್ರವೂ ಇತ್ತು. ಮಹಾಜನತೆಗೆ ಹಸಿರು ನಿಶಾನೆಯಾಯಿತು ಈ ಪ್ರಚಾರ. ಅವರು ನೂರುಗಟ್ಟಲೆಯಲ್ಲಿ ಸಾವಿರಗಟ್ಟಲೆಯಲ್ಲಿ ಬಂದರು ದರ್ಶನಕ್ಕಾಗಿ. ಮಠದ ಎದುರುಗಡೆ ರಸ್ತೆಯಾಚೆಗೆ ಒಂದು ಖಾಲಿ ನಿವೇಶನವಿತ್ತು. ಬಂಗ್ಲೆ ಸೈಟು. ಯಾರ ಪಾಲಿಗೋ ಬಂದದ್ದು. ಕಟ್ಟಡ ಎದ್ದಿರಲಿಲ್ಲ. ಅಲ್ಲಿ ಷಾಮಿಯಾನ ಸಿದ್ಧವಾಯಿತು. ಮಳೆ ಬಂದರೂ ಹೆಚ್ಚು ತೊಂದರೆಯಾಗದಷ್ಟು ಭದ್ರವಾದದ್ದು. ಪ್ರತಿ ಸಂಜೆ ಅಲ್ಲಿ ಸ್ವಾಮೀಜಿಯ ಪ್ರವಚನ. ಅವರೆಡೆಗೆ ಬಂದ ವರ್ತಕರಲ್ಲಿ ಪ್ರಮುಖ, ಧನಂಜಯಕುಮಾರ.

ಮಠದ ಚಾಕರನಿಗೆ ವಯಸ್ಸು ಎಪ್ಪತ್ತು ಸಮೀಪಿಸಿದ್ದರೂ ಸುತ್ತಲೂ ನಡೆಯುತ್ತಿದ್ದುದೆಲ್ಲ ಯೌವನದ ಹುಮ್ಮಸ್ಸು ನೀಡಿತು. ಮುಖ್ಯಮಂತ್ರಿ ಬಂದಾಗ ಅವರ ಪಾದರಕ್ಷೆಗಳನ್ನು ಎತ್ತಿ ಸುರಕ್ಷಿತ ಸ್ಥಳದಲ್ಲಿ ಇರಿಸಿದ್ದ. ನಿದ್ದೆ ಹೋದ ಮೇಲೆ ಮಾತ್ರ ಏನೋ ಸಂದೇಹ. ಹಿಂದಿನ ಸ್ವಾಮೀಜಿ ಇದ್ದಾಗ ಈಯಮ್ಮಣ್ಣಿ ಒಮ್ಮೆ ಬಂದಿದ್ದರು. ಅದಕ್ಕೂ ಹತ್ತಾರು ತಿಂಗಳು—ವರ್ಷಕ್ಕಿಂತ ಹೆಚ್ಚು—ಹಿಂದೆ ಒಬ್ಬರು ಅವ್ವ ಬಂದು ಮೂರು ನಾಲ್ಕು ತಿಂಗಳಿದ್ದರು. 'ಮುಖ್ಯಮಂತ್ರಿಯವರಿಗೂ ಆಕೆಗೂ ಸ್ವಲ್ಪ ಹೋಲಿಕೆ ಇಲ್ಲವಾ ?' 'ಮುದುಕಪ್ಪ, ಇದು ಮಾಯೆ. ಸ್ವಾಮಿಯೋರು ಅನ್ನೋದಿಲ್ವ ಅಂಥ ಮಾಯೆ. ಇನ್ನೂ ಯೋಚ್ನೆ ಮಾಡಿದ್ರೆ ಉಚ್ಚು ಹಿಡಿದಾತು. ಮನಿಕೊ....' ಎಂದು ತನಗೆ ತಾನೇ ಹಿತವಚನ ನುಡಿದ.

ಮಂಡಲದ ಎಲ್ಲ ನಕ್ಷತ್ರಗಳೂ ಮಠದಲ್ಲಿ ಚಕಚಕಿಸಿದ ಮೇಲೆ ಪ್ರತಿಪಕ್ಷದ ಹಿರೇಮಣಿ ಮೊದಲಾದವರು ಬಂದರು. ಅತ್ತ ತಲೆ ಹಾಕದವನು ಸಮತಾಪಕ್ಷದ ದಂಡಪಾಣಿ. "ಬಂಡವಾಳಶಾಹಿ ವ್ಯವಸ್ಥೆ ಕುಸೀತಿದೆ. ಆಸರೆಗಾಗಿ ಅದು ಸ್ವಾಮಿಗಳಿಗೆ ಬಾಬಾಗಳಿಗೆ ಆತುಕೊಳ್ತಿದೆ. ಮಂತ್ರಿಗಳೆಲ್ಲ ಅಲ್ಲಿಗೆ ಹೋಗೋದರ ಗುಟ್ಟೇನು? ವಿಧಾನಮಂಡಲದ ಮುಂದಿನ ಅಧಿವೇಶನದಲ್ಲಿ ಈ ಪ್ರಶ್ನೆ ಎತ್ತಬೇಕು," ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ.

ಮಠಕ್ಕೆ ತಿಜೋರಿ ಬಂತು. ಕಬ್ಬಿಣದ ಕಪಾಟುಗಳು ಬಂದುವು. ಹಗಲೊಬ್ಬ ರಾತ್ರಿಯೊಬ್ಬ ಪೋಲೀಸ್ ಪೇದೆ ಅಲ್ಲಿ ಕಾವಲು ಕೆಲಸ ಮಾಡಿದ.

ರಂಗಧಾಮ್ ಸಿಕ್ಕಿದಾಗ ಸೌದಾಮಿನಿ ಕೇಳಿದಳು :

"ಏನಂದರು ಸ್ವಾಮೀಜಿ ?"

"ವಿದೇಶ ಪ್ರವಾಸ ಹೋಗ್ತಿದ್ದೇನೆ ಅಂದೆ. 'ಕಾರ್ಯ ಫಲಿಸ್ತದೆ; ಹೋಗಿ ಬನ್ನಿ' ಅಂದ್ರು."

"ಸಮಾಜದ ಆರೋಗ್ಯಕ್ಕೆ ಮಂದಿರ ಮಸೀದಿ ಇಗರ್ಜಿ ಗುರುದ್ವಾರ ಹೇಗೆ ಅಗತ್ಯವೋ ಹಾಗೆಯೇ ಮಠ. ಸ್ವಾಮೀಜಿ ಹೇಳಿದ ಮಾತು ಸುಳ್ಳಾಗುವದಿಲ್ಲ. ವಿಜಯಶ್ರೀ ನಿಮ್ಮ ಕೊರಳಿಗೆ ಮಾಲೆ ಹಾಕ್ತಾಳೆ."

"ಥ್ಯಾಂಕ್ಸ್, ಮಾತಾಜಿ."

"ನೀವು ವಿದೇಶದಲ್ಲಿರುವಾಗ ನಾಟ್ಯಮಂದಿರದಲ್ಲಿ ಒಂದು ಭಾರೀ ಕಾರ್ಯಕ್ರಮ ನಡೀತದೆ. ಹುಡುಗಿಯರ ದೊಡ್ಡ ತಂಡವೇ ಬರ್ತದೆ."

"ಪತ್ರಿಕೆಯಲ್ಲಿ ವಿವರ ಬಂದಿತ್ತು."

"ಭಾರತಿ ಅನಾಥಾಶ್ರಮ ಪ್ರತಿಷ್ಠಾನದವರು ಬರ್ತಾರೆ."

"ಅಲ್ಲಿಯೂ ಇರಬೇಕು ಇಲ್ಲಿಯೂ ಇರಬೇಕು ಅಂದರೆ ಹ್ಯಾಗಾಗುತ್ತೆ ? ನನಗೆ ಅದೃಷ್ಟವಿಲ್ಲ."

"ನಿಮ್ಮಂಥ ಅದೃಷ್ಟವಂತ ಬೇರೆ ಯಾರಿದ್ದಾರೆ ರಂಗಧಾಮ್ ?"

ಮುಖ್ಯಮಂತ್ರಿಯ ದೃಷ್ಟಿ ಅವನ ಮೇಲೆಲ್ಲ ಹರಿದಾಡತೊಡಗಿತ್ತು. ಆತ ಅಲ್ಲಿಂದ ಎದ್ದ.

* * *

ರಂಗಧಾಮ್ ವಿದ್ಯುಚ್ಛಕ್ತಿ ನಿಗಮದ ಅಧ್ಯಕ್ಷನನ್ನು ಕರೆದುಕೊಂಡು ದಿಲ್ಲಿಗೆ ಹೊರಟ. ಅಲ್ಲಿಂದ ಫ್ರಾಂಕ್‌ಫರ್ಟಿಗೆ.

ಅವರಿಬ್ಬರು ಕಲ್ಯಾಣನಗರ ಬಿಟ್ಟ ದಿನ, ಮೃದುಲಾಬೆನ್ ತಂಡ ಬಂದಿಳಿಯಿತು. ಸಂಜೆ ರೈಲು ನಿಲ್ದಾಣದಲ್ಲಿ ಮುಖ್ಯಮಂತ್ರಿಯ ನೇತೃತ್ವದಲ್ಲಿ ಸ್ವಾಗತ. ಸೌದಾಮಿನಿ ಮತ್ತು ಪ್ರತಿಷ್ಠಾನದ ಅಧ್ಯಕ್ಷೆ ಪರಸ್ಪರ ತಬ್ಬಿಕೊಂಡ ಚಿತ್ರ ಪತ್ರಿಕೆಗಳ ಮುಖಪುಟಕ್ಕೆ ಅಲಂಕಾರವಾಯಿತು. ಶಾಸಕರ ಭವನದ ಹದಿನೈದು ಕೊಠಡಿಗಳು ಕಲಾತಂಡವನ್ನು ಬರಮಾಡಿಕೊಂಡುವು. ಕಾರ್ಯದರ್ಶಿನಿ ಕರುಣಾ ತಂಡದ ಜತೆಯಲ್ಲಿ ಉಳಿದಳು. ಮೃದುಲಾಬೆನ್ ಜುಮ್ಕಿಯೊಂದಿಗೆ ಸೌದಾಮಿನಿ ನಿವಾಸದ ಅತಿಥಿಯಾದಳು. ಓಡಾಟದ ವಾಸ್ತವ್ಯದ ಮೇಲುಸ್ತುವಾರಿಯನ್ನು ವಿಶೇಷಾಧಿಕಾರಿ ರಾಮರಾಜು ನಿರ್ವಹಿಸಿದ.

ಮುಖ್ಯಮಂತ್ರಿಯ ಖಾಸಾ ಕೊಠಡಿಯಲ್ಲಿ ಸುಖಾಸೀನಳಾದ ಮೃದುಲಾ ಬಿಸಿ ಕಾಫಿ ಕುಡಿದಳು. ಬೆರಗುಗಣ್ಣುಗಳು ಅತ್ತಿತ್ತ ಓಡಾಡಿದುವು. ಮಾತೇ ಇಲ್ಲವಲ್ಲ

ಎಂದು ಸೌದಾಮಿನಿ ವಿಸ್ಮಿತೆ. ಹಲವು ಮಿನಿಟುಗಳ ಮೌನದ ಬಳಿಕ ಮೃದುಲಾ ಕೇಳಿದಳು ; "ಅಲ್ಲ ಪುಟ್—ಕ್ಷಮಿಸು—ಸೌದಾ....ಇದು ಕನಸೋ ? ಎಚ್ಚರವೊ?"

"ಚಿವುಟಿ ನೋಡಿಕೊಂಡಿರಾ ದೀದಿಜಿ? ಒಮ್ಮೊಮ್ಮೆ ನನಗೂ ಅನಿಸೋದುಂಟು ಇದೆಲ್ಲ ನಿಜ ತಾನೆ ?—ಅಂತ."

ಎಲ್ಲೋ ಫೋನ್ ಧ್ವನಿಸುತ್ತಿತ್ತು. ಪರಶುರಾಮ ಚುಟುಕು ಉತ್ತರವಿತ್ತು ಆ ಉಪಕರಣಕ್ಕೆ ವಿರಾಮ ನೀಡುತ್ತಿದ್ದ. ಇಂಟರ್‌ಕಾಮ್‌ನಲ್ಲಿ ಮುಖ್ಯಮಂತ್ರಿ ಆದೇಶವಿತ್ತಳು :

"ಪರಶುರಾಮ್, ರಾಮರಾಜು ಜತೆ ನೀನೂ ಇರು. ಡಿಲಕ್ಸ್ ಕೋಚ್ ಸಿದ್ಧ ಮಾಡಿದೀಯಲ್ಲ ? ನಾಳೆ ಪೂರ್ವಾಹ್ನ ನಾಟ್ಯಮಂದಿರ ತೋರಿಸು. ನಾಲ್ಕು ಗಂಟೆಗೆ ಮಠಕ್ಕೆ ಕರಕೊಂಡು ಹೋಗು. ಅಷ್ಟು ಹೊತ್ತಿಗೆ ಸ್ವಾಮಿಜಿ ನಿದ್ದೆಯಿಂದ ಎದ್ದಿರ್ತಾರೆ. ಆಶೀರ್ವಚನ ಪಡಕೊಂಡು ಅನಾಥಾಶ್ರಮಕ್ಕೆ ಭೇಟಿ. ಕಾರ್ಯಕ್ರಮವಾದ ಮರುದಿನ ನಗರದ ಸುತ್ತುಮುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಸಂದರ್ಶನ: ಆ ರಾತ್ರಿ ಮರುಪ್ರಯಾಣ. ಕಂಪಾರ್ಟ್‌ಮೆಂಟ್ ರಿಸರ್ವ್ ಮಾಡಿಸು."

"ಇದೇ ಬಂದಿದ್ದೇವೆ. ಆಗಲೇ ಹೊರಡಿಸೋ ಯೋಚನೇನೂ ಮಾಡ್ತಿದೀಯಾ ?"

"ಈ ಮೂರು ದಿನ ನಿಮಗೋಸ್ಕರ. ಬೇರೆ ಯಾವ ಕೆಲಸವನ್ನೂ ಮಾಡೋದಿಲ್ಲ. ದಿಲ್ಲಿಯಿಂದ ಪ್ರಧಾನಿಯವರ ಕರೆ ಬಂದಿತ್ತು. ಮುಂದಿನ ತಿಂಗಳು ಬರ್‍ತೀನೆ—ಅಂತ ಹೇಳಿಬಿಟ್ಟೆ. ರಾಜಕಾರ್ಯ. ಪ್ರತಿ ದಿನವೂ ಪ್ರತಿ ಕ್ಷಣವೂ ಸಾವಿರ ವಿಷಯಗಳ ಮೇಲೆ ಕಣ್ಣಿಟ್ಟಿರ್ಬೇಕು."

"ಗೊತ್ತು, ಸೌದಾ."

"ಮುಂದೆ ಯಾವತ್ತಾದರೂ ಬಂದು ಒಂದೆರಡು ವಾರ ಇದ್ದು ಹೋಗುವಿರಂತೆ. ಇದು ನಿಮ್ಮದೇ ಮನೆ ಇದ್ದ ಹಾಗೆ. ಆದರೆ ನೀವು ಪ್ರತಿಷ್ಠಾನದ ದೊಡ್ಡ ಭಾರ ಹೊತ್ತುಕೊಂಡಿದೀರಿ. ನಿಮಗಾದರೂ ಬಿಡುವು ಎಲ್ಲಿ ಸಿಗುತ್ತೆ ?"

"ಇನ್ನೊಂದು ವರ್ಷದೊಳಗಾದರೂ ಸಂಗ್ರಹಕಾರ್ಯ ಪೂರ್ತಿಯಾಗ್ಬೇಕು. ಆಮೇಲೆ ಕೇಂದ್ರಗಳ ಸಂಘಟನೆ."

"ನಾಳೆ ನನ್ನ ಅನಾಥಾಶ್ರಮ ನೋಡುವಿರಂತೆ. ಕಿಷ್ಕಿಂಧೆಯ ಮಟ್ಟಿಗೆ ಅದನ್ನೇ ಪ್ರತಿಷ್ಠಾನದ ಅಧೀನ ಸಂಸ್ಥೆ ಮಾಡ್ಕೊಳ್ಳಿ."

ಕಿಷ್ಕಿಂಧೆಯ ಕಾಣಿಕೆ ಎಷ್ಟು ಎಂದು ಕೇಳಲು ಬಾಯಿ ತೆರೆದ ಮೃದುಲಾಬೆನ್, ಇದು ಈಗ ಕೇಳುವ ಪ್ರಶ್ನೆಯಲ್ಲ—ಎಂದು ಸುಮ್ಮನಾದಳು.

"ಒಂದು ಪುಟ್ಟ ಸ್ನಾನ ಮಾಡಿ. ಪ್ರಯಾಣದ ಆಯಾಸ ಪರಿಹಾರವಾಗುತ್ತೆ."

"ಹ್ಞ."

ಆಪ್ತ ಕಾರ್ಯದರ್ಶಿಗೆ ಆಕೆ ಅಂದಳು :

"ಶಾಸಕರ ಭವನದಲ್ಲಿ ತಂಡದ ಮುಖ್ಯಸ್ಥೆ ಕರುಣಾಬೆನ್ ಕನೆಕ್ಷನ್‌ಕೊಡಿ. ಮೃದುಲಾಬೆನ್ ಮಾತಾಡ್ತಾರೆ—ಅಂತ ತಿಳಿಸಿ. (ದೀದಿಜಿಗೆ) ಎಲ್ಲ ಅನುಕೂಲ ವಾಗಿದೆಯೆ ? ಅಂತ ಒಂದ್ಸಲ ಕೇಳಿ ಬಿಡಿ."

"ಈ ಕ್ಷಣ ನಾನೂ ಅದೇ ಯೋಚನೆ ಮಾಡ್ತಿದ್ದೆ."

ಒಂದೆರಡು ಮಿನಿಟುಗಳ ಬಳಿಕ ಶಾಸಕರ ಭವನ ಸಿಕ್ಕಿತು. ದೀದಿಜಿಯ ಪ್ರಶ್ನೆಗೆ ಕರುಣಾ ಉತ್ತರವಿತ್ತಳು :

"ದೀದಿಜಿ, ಹುಡುಗಿಯರಿಗೆಲ್ಲ ಖುಶಿಯಾಗಿದೆ. ಸ್ನಾನ, ಊಟ ಎಲ್ಲದಕ್ಕೂ ಅನುಕೂಲವಾಗಿದೆ. ನಾವು ಹೋದಲ್ಲೆಲ್ಲ ಒಬ್ಬ ಕ್ಯಾಮರಾಮನ್ ಬೇಕು, ದೀದಿಜಿ, ಬೇರೆ ರಾಜಧಾನಿಗಳಲ್ಲಿ ಮಾಡಿದ ಹಾಗೆ."

"ಊಟ ಆದಮೇಲೆ ಚೆನ್ನಾಗಿ ನಿದ್ದೆ ಮಾಡಿ. ಮುಖ್ಯಮಂತ್ರಿ—ಸೌದಾಮಿನಿದೇವಿ ನಿಮಗೆಲ್ಲ ಗುಡ್‌ನೈಟ್ ಹೇಳಿದ್ದಾರೆ. ನಾನೂ ಹೇಳ್ತೀನಿ—ಗುಡ್‌ನೈಟ್ ಕರುಣಾ."

"ಗುಡ್‌ನೈಟ್ ದೀದಿಜಿ."

ಕ್ಯಾಮರಾಮನ್ ಬಗ್ಗೆ ಮೃದುಲಾ ಹೇಳಿದಾಗ ಮುಖ್ಯಮಂತ್ರಿ ಹೇಳಿದಳು :

"ಒಬ್ಬನಲ್ಲ ಇಬ್ಬರನ್ನು ಕೊಡ್ತೀನಿ."

ಆಗಲೆ ಸ್ನಾನ ಮುಗಿಸಿದ್ದ ಜುಮ್ಕಿ ಮುಖ ತೋರಿಸಿದಳು. "ನೀರು ಹದ ವಾಗಿದೆ" ಎಂದು ಹೇಳಿ ತನ್ನ ಮಾಜಿಯನ್ನು ಕರೆದೊಯ್ದಳು.

ಮೃದುಲಾ ಸ್ನಾನಮಗ್ನಳಾದ ಮೇಲೆ ಸೌದಾಮಿನಿ ಜುಮ್ಕಿಯನ್ನು ಕರೆದಳು.

"ಬಾ ಕೂತ್ಕೊ.... ಅಲ್ಲಿ ಅಲ್ಲ. ನನ್ನ ಪಕ್ಕದಲ್ಲಿ."

"ನೀವು ಚೀಫ್ ಮಿನಿಸ್ಟರು. ಭಯವಾಗುತ್ತೆ."

"ಕಳ್ಳಿ ! ನಗ್ತಾ ಇದೀಯ. ಭಯವಂತೆ. ಬಾ."

"ಜುಮ್ಕಿ ಕುಳಿತಮೇಲೆ ಬರಸೆಳೆದು ಸೌದಾಮಿನಿ ಆಲಿಂಗಿಸಿದಳು. ಮಗುತನ ಹಿಂದೆ ಉಳಿಯಿತು. ಹದಿಹರೆಯದ ಸೊಕ್ಕು ಪುಟಿಯುತ್ತಿದೆ ಅಂಗಾಂಗಗಳಿಂದ.

"ವಿನೋದ ಚೆನ್ನಾಗಿದಾನಾ ಜುಮ್ಕಿ ?"

"ಇದಾನೆ. ಅವನಿಗೇನಾಗಿದೆ ?"

"ಮನೆಗೆ ಆಗಾಗ ಬರ್ತಾನಾ ?"

"ಬರದೆ ? ಇದಾರಲ್ಲ ಕರುಣಾಬೆನ್ ?"

"ನಿನಗೆ ಅವನು ಇಷ್ಟ ಇಲ್ಲವಾ ?"

"ಖಂಡಿತ ಇಲ್ಲ. ಅವನನ್ನು ಕಂಡರಾಗೋದಿಲ್ಲ ನನಗೆ."

"........"

"ನೀವು ಬೇಕಾದರೆ ವಿಮಾನದಲ್ಲಿ ಮುಂಬಯಿಗೆ ಬರಬಹುದಂತೆ."

"ಹೌದು. ನಿನ್ನ ಮದುವೆಗೆ ಬರ್ತೀನೆ ಅಂದಿದ್ದೆ. ವರ ಗೊತ್ತಾಯ್ತೆ ?"

"ನನಗೆಲ್ಲಿಯ ಮದುವೆ ? ನಾನು ಹೋದರೆ ಮಾಜಿಯ ಸೇವೆಗೆ ಯಾರಿದ್ದಾರೆ? ಅಲ್ಲದೆ, ಈಗ ನನಗೂ ಪಾರ್ಟಿದೆ. ಡ್ಯಾನ್ಸ್ ಹೇಳ್ಕೊಟ್ಟಿದ್ದಾರೆ."

"ನನ್ನ ಜುಮ್ಕಿ."

"ನಾನು ಇಲ್ಲೇ ಇರಲಾ, ಬಹೆನ್‌ಜಿ ? ನೀವು ಕೇಳಿದರೆ ದೀದಿಜಿ ಒಪ್ಪಲೂ ಬಹುದು."

"ಅವರ ಸೇವೆಗೆ ?"

"ಬೇರೆ ಯಾರಾದರೂ ಬರ್ತಾರೆ."

"ಪಾಪ ! ಮುದ್ದು. ನಿನಗೆ ಒಬ್ಬ ಗಂಡನನ್ನು ಹುಡುಕಲೇಬೇಕು."

"ಅಂಥ ಮದುವೆ ಇದ್ದರೆ ನೀವು ವಿಮಾನದಲ್ಲಿ ಒಂದೇ ಬರ್ತೀರಿ ಅಲ್ಲವಾ ?"

"ಬರ್ತೇನೆ, ಜುಮ್ಕಿ. ನಿನ್ನ ಮಾಜಿಯ ಸ್ನಾನ ಆಯ್ತೋನೋ, ನೋಡು. ಬಟ್ಟೆ ಗಿಟ್ಟೆ ತಗೊಂಡು ಹೋಗಿ ಕೊಡು."

"ಹೂಂ.... ಮಾತಾಜಿ ಅಂತ ನಿಮ್ಮನ್ನ ಕರೀಬೇಕು ಅಲ್ವಾ ? ಕಾರ್ಯದರ್ಶಿಯವರು ಹಾಗೇಂತ ನಿಮ್ಮನ್ನ ಕರೆಯೋದು ಕೇಳ್ದೆ."

"ಅವನಿಗೆ ಮದುವೆಯಾಗಿದೆ. ಸ್ನಾನದ ಮನೆ ಕಡೆ ಗಮನ ಇಡು. ನೀರು ಸುರೀತಾ ಇದ್ರೆ ಕರೆದದ್ದೂ ಕೇಳಿಸೋದಿಲ್ಲ."

"ಹೂಂ ಮಾತಾಜಿ. ನನಗೊಂದು ಕಥೆ ನೆನಪಾಗ್ತದೆ. ಏಳು ಸುತ್ತಿನ ಕೋಟೆ. ಅದರೊಳಗೊಬ್ಬ ರಾಜಕುಮಾರಿ. ಸುಂದರಿ, ನಿಮ್ಮ ಹಾಗೆ."

ಸಂತೋಷವನ್ನು ತೋರ್ಪಡಿಸದೆ ಸೌದಾಮಿನಿ ಹುಡುಗಿಯ ಕೆನ್ನೆ ಚಿವುಟಿ ಅಂದಳು :

"ನೀನು ಶುದ್ಧ ತಲೆಹರಟೆ. ಹೋಗು ಸ್ನಾನದ ಮನೆ ಹತ್ತಿರ ಇರು."

....ಮೃದುಲಾಬೆನ್‌ಗೆ ಸೌದಾಮಿನಿ-ಚಿಪ್ಪನ್ನು ತೆರೆದು ನೋಡುವ ಆಸೆ. ಊಟದ ವೇಳೆಯಲ್ಲಿ ಅವಕಾಶ ಸಿಗಲಿಲ್ಲ. ಮುಖ್ಯಮಂತ್ರಿಯ ಮಿತಾಹಾರ ಸೇವನೆಯನ್ನು ಅವಳು ಗಮನಿಸಿದಳು. ತಾನೂ ಆ ಮೇಲ್ಪಂಗ್ತಿಯನ್ನು ಅನುಸರಿಸಬೇಕು ಅನಿಸಿತು.

...ಜುಮ್ಕಿ ನಿದ್ದೆ ಹೋದಳು. ಪರಶುರಾಮ ಮನೆಗೆ ತೆರಳಿದ. ಉರಿಯುವ ದೀಪಗಳ ಸಂಖ್ಯೆ ಕಮ್ಮಿಯಾಯಿತು. ನೆಳಲುಬೆಳಕುಗಳ ಮಧ್ಯೆ ಕಾವಲಿನವರ ಅಸ್ಪಷ್ಟ ಚಲನೆ ಕಾಣಿಸುತ್ತಿತ್ತು. ಅವರ ಬೀಡಿ ಸಿಗರೇಟುಗಳು ಮಿಣುಕುಹುಳಗಳಾದುವು.

ಅತಿಥಿಗಳ ಕೊಠಡಿಗೆ ಹೋಗುವ ದಾರಿಯಲ್ಲಿ ಆಳೆತ್ತರದ ಕಪ್ಪುಬಿಳಿ ಚಿತ್ರ ಎದುರು ಗೋಡೆಯ ಮೇಲಿತ್ತು. ಪ್ಯಾಂಟ್ ಶರಟು, ಟೆನ್ನಿಸ್ ರ್‍ಯಾಕೆಟ್.

ಮೃದುಲಾ ಉದ್ಗರಿಸಿದಳು ;

"ವಿನೋದ ಒಮ್ಮೆ 'ಟೈಮ್ಸ್'ನ ಒಂದು ಪ್ರತಿ ತಂದಿದ್ದ. ಅದರಲ್ಲಿ ಈ ಚಿತ್ರ ಇತ್ತು."

"ನಾನೂ ಆ ಸಂಚಿಕೆ ಇಲ್ಲಿ ನೋಡಿದ್ದೇನೆ."

ಕೊಠಡಿ ತನಕ ಬಂದ ಸೌದಾಮಿನಿ ಸ್ವಲ್ಪ ಹೊತ್ತು ಕುಳಿತಳು. ಮೃದುಲಾಗೆ ಅನಿಸಿತು : ಇದು ಏಕಾಂತ. ಮಾತನಾಡಬೇಕು.

"ಪುಟ್ಟಾ–ತಪ್ಪಿದೆ–ಸೌದಾ..."

"ಮಿನಿ ಅನ್ನಿ ಸಾಕು."

"ಮಿನಿ.... ಮರು ಹುಟ್ಟು ಪಡೆದು ಇಲ್ಲಿಗೆ ವಾಪಾಸಾದಾಗ ತೊಂದರೆಯಾಗ ಲಿಲ್ವೆ ? ಹಿಂದಿನ ಗೆಳೆಯರು, ವೈರಿಗಳು, ಯಾರೂ ಗುರುತು ಹಿಡೀಲಿಲ್ವೆ ?"

ಮುಖ್ಯಮಂತ್ರಿ ನಕ್ಕಳು.

"ಒಬ್ಬರ ಹಾಗೆ ಇನ್ನೊಬ್ಬರು ಇರೋದಿಲ್ವ? ತದ್ರೂಪವೂ ಅಲ್ಲ. ಆಕೆಗಿಂತ ವಯಸ್ಸಿನಲ್ಲಿ ನಾನು ಚಿಕ್ಕವಳು. ಹೇಗೆ ಕಾಣಿಸ್ತೀನಿ ?"

"ಅದು ಒಪ್ದೆ. ಇದು ಪವಾಡವೇ ಸರಿ. ಕೂದಲಿಗೆ ಬಣ್ಣ ಹಚ್ಚಿಕೊಂಡಿದ್ಯಾ?"

"ಇಲ್ಲ. ಮುಟ್ಟಿ ನೋಡಿ."

ಮೃದುಲಾಬೆನ್ ಮುಟ್ಟಿದಳು, ನೋಡಿದಳು. ಕೈಗೆ ಏನೂ ಅಂಟಲಿಲ್ಲ.

"ಧರ್ಮೇಂದರ್ ಬಾಬಾರ ಕೃಪೆ."

"ಅವತಾರ ಪುರುಷ. ಸಂದೇಹವಿಲ್ಲ. ಮಿನಿದೇವಿ, ಒಂದು ಪರಿಚಯ ಪತ್ರ ಕೊಡಿ."

"ಇದೇನು ಬಹುವಚನ ? ನೀವು ನನ್ನ ಗುರುದೇವಿ. ಮರೆಯಬೇಡಿ."

"ನನ್ನ ಜೀವ. ಈ ಚಿಕಿತ್ಸೆಗೆ ವಯೋಮಿತಿ ಏನೂ ಇಲ್ಲವಲ್ಲ ?"

"ಗೊತ್ತಿಲ್ಲ ದೀದಿಜಿ. ಪ್ರತಿಷ್ಠಾನದ ಧ್ಯೇಯೋದ್ದೇಶಗಳನ್ನ ಕರುಣಾ ಈಡೇ ರಿಸೋ ಹಾಗಿದ್ದರೆ ನೀವು ಜಗದಲಪುರಕ್ಕೆ ಆದಷ್ಟು ಬೇಗ ಹೋಗಿ. ಅಲ್ಲಿನ ಹಿರಿಯ ಯೋಗಿನಿ ಹೇಳ್ತಿದ್ರು–ಇದರಲ್ಲಿ ಅದೃಷ್ಟದ ಆಟವೂ ಇದೆ ಅಂತ."

"ಕರುಣಾ ಒಬ್ಬಳಿಂದಲೇ ಸಾಧ್ಯವಾದೀತೊ ಇಲ್ವೊ ? ನಿಧಿಸಂಗ್ರಹ ಪೂರ್ತಿ ಯಾಗೋವರೆಗೂ ನಾನಿರಬೇಕು. ಆಮೇಲೆ ಮರುಹುಟ್ಟು– ಭಗವದನುಗ್ರಹ ಇದ್ದರೆ ಆಗುತ್ತೆ."

"ನಿಮ್ಮ ಶಿಷ್ಯೆಯಾಗಿ ಸಾರ್ವಜನಿಕ ಕ್ಷೇತ್ರ ಪ್ರವೇಶಿಸಿದವಳನ್ನು ಈದಿನ ಎಲ್ಲರೂ ಗೌರವದಿಂದ ಮಾತಾಜಿ ಅಂತ ಕರೀತಾರೆ."

"ನಿನ್ನ ಹಿರಿಯ ಯೋಗಿನಿ ಹೇಳಿದ್ದು ನಿಜ. ಎಲ್ಲವೂ ವಿಧಿಸಂಕಲ್ಪ. ನೀನೇ ಯೋಚಿಸು. ಕಷ್ಟದ ಘಳಿಗೆಯಲ್ಲಿ ಮುಂಬಯಿಗೆ ಬಂದೆ. ಅನಾಥಾಶ್ರಮದ ಚಟುವಟಿಕೆಯನ್ನ ಇಡೀ ದೇಶಕ್ಕೆ ವಿಸ್ತರಿಸುವ ಮಾತು ಬಂತು. ನನಗೆ ಅದು ಇಷ್ಟ ವಾಯಿತು. ಪರಿಣಾಮವಾಗಿ ಹುಟ್ಟಿತು ಪ್ರತಿಷ್ಠಾನ. ನನ್ನ ಜತೆ ಇರಬೇಕಾಗಿದ್ದ ನೀನು ಬೇರೆಯೇ ದಾರಿ ಹಿಡಿದೆ."

ಇದ್ದಕ್ಕಿದ್ದಂತೆ ಮೃದುಲಾಬೆನ್‌ಳ ಕಣ್ಣುಗಳಿಂದ ನೀರು ಹರಿಯತೊಡಗಿತು.

ದುಃಖಾಶ್ರುವೊ ? ಆನಂದಾಶ್ರುವೊ ? ಊಹಿಸುವ ತರ್ಕಿಸುವ ಗೊಡವೆಗೆ ಹೋಗದೆ ಸೌದಾಮಿನಿ ಮೌನವಾಗಿ ಕುಳಿತಳು. ಕಂಬನಿಯ ಒರತೆ ನಿಂತಿತು.

"ಇದು ಸಂತೋಷದ ಮಹಾಪೂರ, ಮಿನಿ. ದಂಡೆ ದಾಟಿ ಆಚೆ ಈಚೆ ಹರಿಯಿತು, ಅಷ್ಟೆ. ನಾನು ಮಲಕೊಳ್ತೀನಿ ಇನ್ನು."

"ಜುಮ್ಮಿಗೆ ಆಗಲೆ ನಿದ್ದೆ ಬಂದಿದೆ."

ಮಲಗಿದ ಮೃದುಲಾಗೆ ಸೌದಾಮಿನಿ ರಗ್ ಹೊದಿಸಿದಳು.

ರಗ್‌ನ ಸಂದಿಯಿಂದ ಮಾತು ಕೇಳಿಸಿತು :

"ನೀನು ಸಾಕ್ಷಾತ್ ಯೋಗಿನಿಯೇ ಆಗಿದೀಯೆ. ಆತ್ಮ ಸಂಯಮವೇ ನಿನಗೆ ಶ್ರೀರಕ್ಷೆ. ಶುಭರಾತ್ರಿ !"

"ಗುಡ್‌ನೈಟ್."

* * *

ಪತ್ರಿಕೆಗಳಲ್ಲಿ ಅನಾಥಾಶ್ರಮ ಪ್ರತಿಷ್ಠಾನ ಎಂದೆಲ್ಲ ಓದಿದ ಮೇಲೆ ಪ್ರತಿಪಕ್ಷದ ಮುಖಂಡ ಶ್ರೀಮಾನ್ ನಾಯಕರಿಗೆ ಮೈ ಪರಚಿಕೊಳ್ಳಬೇಕೆನಿಸಿತು. "ಈ ಮುಖ್ಯ ಮಂತ್ರಿಯ ಪೂರ್ವಜನ್ಮದ ವಾಸನೆ ಬಡೀತಿದೆಯಲ್ಲ" ಎಂದುಕೊಂಡರು. ಸಂಜೆ ರಂಗಸ್ವಾಮಿ ಕ್ಲಬ್ಬಿನಲ್ಲಿ ಸಿಕ್ಕಿದಾಗ ವಿಷಯ ಮತ್ತೆ ಉಸಿರಾಡಿತು.

"ಪೇಪರ್ ನೋಡಿದ್ರಾ ರಂಗಸ್ವಾಮಿ ?"

"ಭಾರತಿ ಅನಾಥಾಶ್ರಮ ಪ್ರತಿಷ್ಠಾನ ! ಮಠ ! ಮಾತಾಜಿ ! ನೀವು ಪ್ರತಿಪಕ್ಷದ ಮುಖಂಡರು. ನಿಮ್ಮ ಆರ್ಭಟವೆಲ್ಲ ವಿಧಾನಮಂಡಲದಲ್ಲಿ. ನಾನು ಬೇಕಾದರೆ ಸಾರ್ವಜನಿಕರ ಪರವಾಗಿ ಕೋರ್ಟಿಗೆ ಹೋಗ್ತೇನೆ."

"ಗುಟ್ಟು, ಹತ್ತಿರ ಬನ್ನಿ. ತುತೂರಿ ಅನ್ನೋ ಪತ್ರಿಕೆ ಈಗ ಪ್ರಕಟವಾಗ್ತಿದೆಯೊ ?–ಅಂತ ಮುಖ್ಯಮಂತ್ರಿ ವಿಚಾರಿಸಿದರಂತೆ. ಅದರ ಸಂಪಾದಕ ಎಲ್ಲಿದ್ದಾನೆ? ಅಂತಲೂ ಕೇಳಿದರಂತೆ."

"ಇನ್ನೂ ಗಂಭೀರವಾದ್ದು ಏನೂ ನಡೀತಾ ಇಲ್ಲವೆ ?"

"ನಾನು ಪಾರ್ಟಿ ಬಿಟ್ಟವನು. ನೀವು ಅಲ್ಲೇ ಇದೀರಾ. ಸ್ವಲ್ಪ ಕಾರ್ಯಸೌಧದಲ್ಲಿ ಓಡಾಡಿ ಅವರಿವರಿಗೆ ಹಲ್ಲೋ ಅನ್ನಿ. ನಿಮ್ಮ ಈ ನಿರಾಸಕ್ತಿಯೋಗ ಸರಿಯಲ್ಲ."

"ಆಗಲಿ, ಭಾವೀ ಮುಖ್ಯಮಂತ್ರಿಗಳೆ."

"ಏನಾದರೂ ಬೇಗನೆ ಮಾಡದಿದ್ದರೆ ಬಾವಿನೇ ಗತಿ."

"ಸಂಪುಟದಲ್ಲಿ ಕೊಳ್ಳೆಗೆ ಸಂಬಂಧಿಸಿ ಭಿನ್ನಾಭಿಪ್ರಾಯ ಇದೆಯಂತಲ್ಲ ?"

"ಸಣ್ಣಗೆ ಪಿಸಿಪಿಸಿ ಇದೆ. ತಿದಿ ಊದ್ಬೇಕು. ರಂಗಧಾಮ ಬಂಡಾಯ ಏಳ

ಬಹುದೂಂತ ಆಸೆ ಇಟ್ಕೊಂಡಿದ್ದೆ. ಅದು ಹುಸಿಯಾಯ್ತು. ಅವನೀಗ ಅವಳ ಕಂಕುಳ ಕೂಸು."

"ನನಗೂ ಒಂದು ಫಾರೀನ್ ಟ್ರಿಪ್ ಏರ್ಪಾಟು ಮಾಡಿದ್ರೆ ನಾನೂ ಕೂಸಾಗ್ತೀನಿ. ನನ್ನನ್ನೂ ಅವಳು ಎತ್ಕೋಬಹುದು."

"ನಮ್ಮನ್ನು ಅವಳು ಹೊತ್ಕೊಳ್ಳೋ ಕಾಲ ಕಳೀತು."

ಧ್ವನಿ ಕುಗ್ಗಿಸಿ ರಂಗಸ್ವಾಮಿ ಕೇಳಿದರು :

"ಇವಳು ಅವಳೇ ಅನ್ನೋದರಲ್ಲಿ ನಿಮಗೆ ಸಂಶಯವಿಲ್ಲ ಅನ್ನಿ."

"ಇದೆಯಪ್ಪ, ಇನ್ನೂ ಇದೆ....ನಾವು ರಾಜಕೀಯ ನೆಲೆಯಲ್ಲಿ ಹೋರಾಡ್ಬೇಕು. ಅವಳನ್ನು ಪಟ್ಟದಿಂದ ಇಳಿಸಿ ಜೈಲಿಗೋ ಮಠಕ್ಕೋ ಕಳಿಸ್ಬೇಕು,"

"ಅವಳಿಗೆ ದಿಲ್ಲಿ ಬೆಂಬಲ ಇರೋವರೆಗೂ ಇದೊಂದೂ ಆಗೋದಿಲ್ಲ."

"ಅವರಿಗೆ ಬೇಕಾದ್ದೇನು ? ರಾಜ್ಯದಲ್ಲಿ ಸುಭದ್ರ ಸರಕಾರ. ಕಾಲಕಾಲಕ್ಕೆ ಕಪ್ಪ. ಈ ಸೂತ್ರದ ಆಧಾರದ ಮೇಲೆ ಕೆಲಸ ನಡೀಬೇಕು."

ಇವತ್ತು ನಮ್ಮ ಸ್ನೇಹದ ಪುನರುದ್ದೀಪನ. ಆದರ ನೆನಪಿಗಾಗಿ ಒಂದೊಂದು ಚೋಟಾ ಪೆಗ್."

"ಸರಿ !"

* * *

ಧನಂಜಯಕುಮಾರ ನಿಗಮದ ಹತ್ತು ಗುದಾಮುಗಳನ್ನು ಖಾಲಿ ಮಾಡಿದ್ದ. ಅರ್ಧಕ್ಕರ್ಧ ರಿಜೆಕ್ಟ್ಸ್ ಎಂದು ಬರೆಸಿದ್ದರಿಂದ ಬಿಲ್ ಕಿರಿದಾಗಿತ್ತು. ಅಂಗಡಿ ಸಣ್ಣ ಪೇಟೆಯಲ್ಲೇ ಇದ್ದರೂ ಎಷ್ಟು ಎತ್ತರಕ್ಕೆ ಏರಿದ್ದ ಆತ! ಕೊಡಬೇಕಾದವರಿಗೆಲ್ಲ ಕೊಡುತ್ತಿದ್ದ, ತಪ್ಪದೆ. ಹೇಳಿದ ಅವಧಿಯೊಳಗೆ ಲೆಕ್ಕ ಚುಕ್ತಾ.

ಸೌದಾಮಿನಿಯ ಎದುರು ಅವನು ತೋಡಿಕೊಂಡಿದ್ದ :

"ನನಗೆ ಹಣ ಮುಖ್ಯ ಅಲ್ಲ ಮಾತಾಜಿ. ಅತ್ಯಂತ ಶ್ರೇಷ್ಠವಾದದ್ದು ತಮ್ಮ ವಿಶ್ವಾಸ."

ಆ ವಿಶ್ವಾಸದ ಫಲವಾಗಿಯೇ ನಗರದ ರಾಜಬೀದಿಯಲ್ಲಿ ದೊಡ್ಡ ಕಟ್ಟಡ ಸಿಕ್ಕಿತು. ಅಂಗಡಿ ಅಲ್ಲಿಗೆ ಸ್ಥಳಾಂತರಿಗೊಂಡಿತು. ಸಣ್ಣ ಪೇಟೆಯಲ್ಲಿದ್ದ ಸೌದಾಮಿನಿ ಚಿತ್ರ ಇಲ್ಲಿ ಬಂಗಾರದ ಒಪ್ಪವಿಟ್ಟ ಚೌಕಟ್ಟಿನಲ್ಲಿ ಬಂದಿಯಾಯಿತು.

ನೃತ್ಯ ಕಾರ್ಯಕ್ರಮದ ವಿಷಯ ಅವನಿಗೆ ಗೊತ್ತಾದದ್ದು ಪತ್ರಿಕೆಗಳ ಮೂಲಕ. ನೇರವಾಗಿ ಮುಖ್ಯಮಂತ್ರಿಯ ನಿವಾಸಕ್ಕೆ—ಗೃಹಕಾರ್ಯಾಲಯಕ್ಕೆ ಬಂದ.

ಪರಶುರಾಮ್‌ನನ್ನು ಕೇಳಿದ :

"ಪ್ರತಿಷ್ಠಾನದವರು ಬಂದಿದ್ದಾರಂತಲ್ಲ, ನಮ್ಮ ಸೇವೆ ಬೇಡವೆ ?"

ಧನಂಜಯನನ್ನು ಒಳಕ್ಕೆ ಕರೆದು ಸೌದಾಮಿನಿ ಅಂದಳು :

"ನೃತ್ಯ ಕಾರ್ಯಕ್ರಮಕ್ಕೆ ಸಂಸಾರ ಸಮೇತ ಬನ್ನಿ."

"ಹತ್ತು ಟಿಕೆಟ್ ತಗೊಂಡಿದೇನೆ."

"ಸಂತೋಷ. ವ್ಯವಹಾರ ಚೆನ್ನಾಗಿ ಆಗ್ತಿದೆ ತಾನೆ ?"

"ತಮ್ಮ ಆಶೀರ್ವಾದ ಮಾತಾಜಿ."

"ಶಾಸಕರಭವನಕ್ಕೆ ಹೋಗಿ ಅಲ್ಲಿರುವ ಪ್ರತಿಷ್ಠಾನ ಕಲಾತಂಡದ ಹುಡುಗಿಯರಿಗೆ ಯಾವ ಯಾವ ಬಣ್ಣ ಇಷ್ಟ ಅಂತ ಬರೆಸ್ಕೊಳ್ಳಿ, ಅವರವರ ಹೆಸರು ಸಹಿತ. ಅಷ್ಟು ಸೀರೆ ಬೇಕು. ವ್ಯವಸ್ಥಿತವಾದ ವಿತರಣೆ. ಆಗ ನೀವೂ ವೇದಿಕೆಯ ಮೇಲಿರ್ತೀರಿ. ಯುವಕರಿಗೆಲ್ಲ ಎರಡೆರಡು ಮೀಟರ್ ಸಿಲ್ಕ್ ಬಟ್ಟೆ ಕೊಡಿ—ಶರ್ಟ್ ಹೊಲಿಸ್ಕೊಳ್ಳಿ."

"ಪ್ರತಿಷ್ಠಾನದ ಅಧ್ಯಕ್ಷೆಯವರಿಗೆ ?"

"ಕಾರ್ಯಕ್ರಮದ ಮಾರನೇ ದಿನ ಬೆಳಗ್ಗೆ ಹತ್ತು ಸೀರೆ ಕಳಿಸ್ಕೊಡಿ. ಅವರೇ ಒಂದೆರಡು ಆರಿಸ್ಕೊಳ್ತಾರೆ."

"ನನ್ನ ಹೊಸ ಅಂಗಡಿಗೆ..."

"ನಮ್ಮ ಭೇಟಿ. ಖಂಡಿತ ಬರ್ತೀವೆ. ಮುಂದಿನ ತಿಂಗಳು."

"ಎಕ್ಸ್‌ಪೋರ್ಟ್ ವಿಭಾಗ ಆರಂಭಿಸಿದ್ದೇನೆ."

"ಭೇಷ್ !"

* * *

ಟಿಕೆಟ್ ಪ್ಲೀಸ್.... 13–10 ಬನ್ನಿ ಸಾರ್ ಕರಕೊಂಡು ಹೋಗಪ್ಪ. ಕೌಂಟರ್ ಎಲ್ಲಿದೆ ? ಮಿಸ್ಟರ್. ಆಲ್ ಟಿಕೆಟ್ಸ್ ಸೋಲ್ಡ್ ಔಟ್. 'ಒಳಗೆ ಸೀಟುಗಳು ಖಾಲಿ ಇದ್ದ ಹಾಗಿದೇ....' ಬಂದ್ಬಿಡ್ತಾರೆ. ಎಲ್ರೂ ಬರ್ತಾರೆ. ನೂರು ರೂಪಾಯಿ ಕೊಟ್ಟು ಟಿಕೆಟ್ ಕೊಂಡವರು ಬರದೆ ಇರ್ತಾರಾ?' 'ಅಂಥವರು ಊರಲ್ಲಿ ಇಲ್ಲದೇ ಹೋದರೆ?' 'ಸಂಬಂಧಿಕರೋ ಗೆಳೆಯರೋ ಬರ್ತಾರೆ.' ನಿರಾಶೆ ! ನಿರಾಶೆ ! ನೂರು ರೂಪಾಯಿ ಸಾಲ ಪಡೆದು ಬಂದರೂ ಟಿಕೆಟಿಲ್ಲ. A–20 ಬನ್ನಿ, ಬನ್ನಿ,.... 'ಫಸ್ಟ್ ರೋಗೆ ಕರಕೊಂಡು ಹೋಗಪ್ಪ. ಯಾರೋ ವಿ.ಐ.ಪಿ. ಸೀಟುಗಳಲ್ಲಿ ಕೂತಿದ್ದಾರೆ. ಅವರ್ನ ಸ್ವಲ್ಪ ವಿಚಾರಿಸ್ಕೋಪ್ಪ. ಗೌರವ ಕೊಟ್ಟು ಮಾತನಾಡಿಸು.' 'ಇದು ಬಾಲ್ಕನಿ ಸೀಟು. ಮೇಲಕ್ಕೆ ಹೋಗಿ.' ಆರ್ಥರೈಟಿಸ್. ಮೆಟ್ಟಲು ಹತ್ತೋಕೆ ಆಗೊಲ್ವಲ್ಲ....' 'ಯಾರದಾದರೂ ಸಹಾಯ ತಗೊಳ್ಳಿ. ಐ ಆ್ಯಮ್ ಸೋ ಸಾರಿ.' 'ನಮಸ್ಕಾರ ಸಾರ್. ಪ್ರೆಸ್ ಗ್ಯಾಲರಿ. ಕರಕೊಂಡು ಹೋಗಪ್ಪ,' 'ದಾರಿ ಗೊತ್ತು. ಸೀಟು ಹಿಡೀತೀವಿ.' M–17.... ಬಾಲ್ಕನಿಗೆ.

ಗದ್ದಲವಿಲ್ಲ. ಬಹ್ವಂಶ ಪ್ರೇಕ್ಷಕರು ಶಿಷ್ಟರು.

ಗ್ರೀನ್ ರೂಮಿನಲ್ಲಿ ಕೊನೆಯ ಒಪ್ಪ ಮುಗಿಯಿತು. ಪಕ್ಕವಾದ್ಯ ಸ್ಥಳೀಯ ನಿಷ್ಣಾತರ ಹೊಣೆ. ರಾಮರಾಜು ಅವರನ್ನು ಕಲೆ ಹಾಕಿದ್ದ. ರಿಹರ್ಸಲ್‌ನಲ್ಲಿ ಪ್ರತಿಷ್ಠಾನದ ಕಲಾವಿದರು ತೃಪ್ತರಾಗಿದ್ದರು.

ನೀಳ ಮುಳ್ಳುಗಳು ಓಡುತ್ತಿವೆ. ನಿಮಿಷ–ಮಿನಿಟು. ಗುಸುಗುಸು ಸದ್ದಾಯಿತು. ರಂಗಸ್ಥಲದಲ್ಲಿ ಎಲ್ಲೋ ಅವಿತುಕೊಂಡಿದ್ದ ಸಿರಿಕಂಠ ಧ್ವನಿವರ್ಧಕಗಳ ಮೂಲಕ ಹೇಳಿತು :

"ಮಾನ್ಯ ರಾಜ್ಯಪಾಲರೂ ಮಾನ್ಯ ಮುಖ್ಯಮಂತ್ರಿಯೂ ಆಗಮಿಸುತ್ತಿದ್ದಾರೆ. ಸಭಿಕರು ಚಪ್ಪಾಳೆ ತಟ್ಟಬೇಕಾಗಿ ಕೋರಿಕೆ."

ಸದ್ಯಃ ಎದ್ದು ನಿಲ್ಲಬೇಕು ಎಂದು ಪ್ರಾರ್ಥಿಸಲಿಲ್ಲವಲ್ಲ ! ಪ್ರಚಂಡ ಕರತಾಡನವಾಯಿತು.

ಸೌದಾಮಿನಿಯ ಜತೆ ಮೃದುಲಾಬೆನ್. ರಾಜ್ಯಪಾಲರೊಂದಿಗೆ ಅವರ ಪತ್ನಿ. ವಿ.ಐ.ಪಿ. ಪೀಠಗಳು ಭರ್ತಿಯಾದುವು. ಬಾಗಿಲುಗಳನ್ನು ಮುಚ್ಚಿದರು. ಹೊರಗೆ ಇನ್ನು ಪೋಲೀಸರ ಡ್ಯೂಟಿ.

ಮೃದುಲಾ ಅಂದಿದ್ದಳು ; 'ಲೀಲಾಲೋಲ ಕೃಷ್ಣ' ಐದು ಮಿನಿಟು ವಿರಾಮ 'ಕಾಮ ದಹನ'. ಎರಡನೇ ರೂಪಕದಲ್ಲಿ ಕಾಮದೇವ ಪುನಃ ಜೀವ ತಳೆಯುವ ದೃಶ್ಯ ಅಂತಿಮವಾಗಿ ಬರೋದಕ್ಕೆ ಮುಂಚೆ ಮಾನ್ಯ ಅತಿಥಿಗಳ ಭಾಷಣ ಇತ್ಯಾದಿ.

ಧನಂಜಯ ಮೊದಲ ಸಾಲಿನಲ್ಲೇ ಇದ್ದ. ಉಡುಗೊರೆ ಪೆಟ್ಟಿಗೆಗಳನ್ನು ಆತನ ಎದುರಲ್ಲೇ ಕೆಳಗೆ ಜೋಡಿಸಲಾಗಿತ್ತು. ದಟ್ಟ ಜನಸಂದಣಿಯಲ್ಲಿ, ಎಲ್ಲರೂ ಸಂಪನ್ನರೇ ಆದರೂ ಅಚಾತುರ್ಯ ಅಸಂಭವವಲ್ಲ ಎಂಬುದನ್ನು ಆತ ತಿಳಿದಿದ್ದ. ಅವನ ಪತ್ನಿಯೂ ಮೂವರು ಮಕ್ಕಳೂ ಆತನ ಎಡಕ್ಕೆ ಅದೇ ಸಾಲಿನಲ್ಲಿ ಕುಳಿತಿದ್ದರು.

ಕಾಮದೇವನ ಪಾತ್ರಧಾರಿ ನರ್ತಕ—ತಂಡದ ಮುಖ್ಯಸ್ಥ —ತೆರೆಯ ಹಿಂದೆಯೇ ಬೆನಕನಿಗೆ ಅಡ್ಡ ಬಿದ್ದ. ನಾಲ್ಕೇ ಸಾಲುಗಳ ಸ್ತುತಿ, ಸಂಸ್ಕೃತದಲ್ಲಿ. ಹಿಮ್ಮೇಳ ಹಸುರಾಯಿತು. ಕೊಳಲು ಅಗ್ರಗಾಮಿ. ಜತೆ ಉಸಿರಾಟ ಇತರ ವಾದ್ಯಗಳಿಂದ. ಗಾಯಿಕೆ ನಂದಗೋಕುಲದ ಬಣ್ಣನೆಗೆ ತೊಡಗಿದಳು. ತೆರೆ ಸರಿಯಿತು.

ತಂಡದ ಇನ್ನೊಬ್ಬ ನೃತ್ಯ ಪ್ರವೀಣ ಮುದ್ದುಕೃಷ್ಣ ತುಂಟ ಕೃಷ್ಣ ಕಳ್ಳ ಕೃಷ್ಣ (ಬೆಣ್ಣೆ, ಸೀರೆ) ಎಲ್ಲವೂ. ಅವನು ರಂಗಸ್ಥಲದ ಮಧ್ಯಕ್ಕೆ ಬಂದ. ಸುತ್ತಲೂ ಗೋಪಿಕಾ ಸ್ತ್ರೀಯರು (ಹತ್ತರ ಸಂಖ್ಯೆಯೊಳಗೆ). ವೃತ್ತಾಕಾರವಾಗಿ ಚಲನೆ (ರಿಂಗಾ ರಿಂಗಾ ರೋಜೆಸ್, ಪಾಕೆಟ್ ಫುಲ್ ಆಫ್ ಪೋಜೆಸ್.) ವಿವಿಧ ಬಣ್ಣಗಳಲ್ಲಿ ಬೆಳಕೂ ಲಾಸ್ಯವಾಡಿತು.

(ಗೋಕುಲದ ಬಣ್ಣನೆ ಆದಿಶೇಷನಿಗೂ ಅಸದಳ ಎಂದ ಮೇಲೆ ಈ ಯಾಸನಿಂದ ಆದಾತಾ ?)

ಕೃಷ್ಣನ ಲೀಲೆಗಳು ಮುಗಿಯಲು ಐವತ್ತು ಮಿನಿಟು ತಗಲಿತು. ಚಪ್ಪಾಳೆಯೋ

ಚಪ್ಪಾಳೆ. ಒಳತೆರೆ ಅಡ್ಡವಾಯಿತು. ತೆರೆಯೊಳಗಿನ ಗಂಟಲು "ಇನ್ನು ಕಾಮ ದಹನ" ಎಂದೊಡನೆ ತೆರೆ ಸರಿಯಿತು. ಕುಸುಮ ಶರ ಕಾಮಣ್ಣ ಹುಚ್ಚಾಟಕ್ಕಿಳಿದ, ಶಿವನನ್ನು ಕೆಣಕಿದ. ಬೂದಿಬಡಕ ಮುಕ್ಕಣ್ಣ ಸಿಟ್ಟಾದ.... ಈ ದೇಶದಲ್ಲಿ ಯಾರಿಗೆ ಗೊತ್ತಿಲ್ಲ ಈ ಕಥೆ ? ಈಗ ಹಿಮ್ಮೇಳದವರಿಗೆ ಮೇಲುಗೈ. ಯಾರು ಹಾಕಿದರೊ ಫಾಲನೇತ್ರದ ಸ್ವಿಚ್ಚನ್ನು. ಕಾಮಣ್ಣ ಉರಿದು ಹೋದ. ಇನ್ನು ರತಿದೇವಿಯ ಪ್ರಾರ್ಥನೆ, ಅವಳ ಗಂಡ ಫೀನಿಕ್ಸ್ ಆಗಬೇಕು. ತಾಳಿ, ಈ ಉಪಸಂಹಾರಕ್ಕೆ ಮೊದಲು ಭಾಷಣಗಳು ಇತ್ಯಾದಿ. ಒಳತೆರೆ ರಂಗಸ್ಥಲದ ಬಹ್ವಂಶವನ್ನು ಮರೆಮಾಡಿತು.

ಸುಲೋಚನಾಬಾಯಿ ರಾಜ್ಯಪಾಲರನ್ನೂ ಮುಖ್ಯಮಂತ್ರಿಯನ್ನೂ ಕರೆದೊಯ್ದಳು. ಮೃದುಲಾ ಹಿಂಬಾಲಿಸಿ ಬಂದಳು. "ಪೀಠಗಳು ಬೇಡ. ನಿಂತು ಮಾತಾಡೋಣ," ಎಂದರು ರಾಜ್ಯಪಾಲರು.

ಮೆಚ್ಚುಗೆ, ಪ್ರಶಂಸೆ. ಪ್ರತಿಷ್ಠಾನದ ಹಿರಿಯ ಉದ್ದೇಶ ಕೈಗೂಡಲೆಂಬ ಶುಭಾಶಯ. ಟಿಕೆಟ್ ಮಾರಾಟದಿಂದ ಸಂಗ್ರಹವಾದ ಒಂದು ಲಕ್ಷ ರೂಪಾಯಿ ಅರ್ಪಣೆ ಮೃದುಲಾಬೆನ್‌ಗೆ. ಮುಖ್ಯಮಂತ್ರಿ ಎರಡು ಮಾತು ಹೇಳಿ, ನೇಪಥ್ಯದಲ್ಲಿದ್ದ ಪರಶುರಾಮನಿಗೆ ಸನ್ನೆ ಮಾಡಿದಳು. ಆತ ಶ್ರೀಗಂಧದ ಕರಂಡಕದೊಡನೆ ಬಂದ. ಸೌದಾಮಿನಿ ಅದನ್ನು ಮೃದುಲಾಗೆ ಒಪ್ಪಿಸಿದಳು.

ಕಲಾವಿದರಿಗೆ ಕಿರುಕಾಣಿಕೆ. "ಧನಂಜಯಕುಮಾರರನ್ನು ಕರೀರಿ."

ಆತ ಆಗಲೇ ರಂಗಸ್ಥಲವನ್ನೇರುವ ಪಾವಟಿಗೆಗಳ ಮೇಲಿದ್ದ. ಮೂವರು ಮಕ್ಕಳಿಗೆ "ಬನ್ರೋ" ಎಂದ. ಕಿರಿಯರು ರಟ್ಟಿನ ಪೆಟ್ಟಿಗೆಗಳನ್ನು ರಂಗಸ್ಥಲಕ್ಕೆ ಒಯ್ದರು.

"ಪ್ರತಿಷ್ಠಾನದ ಕಲಾವಿದೆಯರಿಗೆ ಕಲಾವಿದರಿಗೆ ಕಿಷ್ಕಿಂಧೆಯ ಕಿರುಕಾಣಿಕೆ. ರೇಷ್ಮೆ ಸೀರೆ, ಬಟ್ಟೆ !"

ರಾಜ್ಯಪಾಲರು 'ಪೀಠಗಳು ಬೇಡ' ಎಂದದ್ದು ತಪ್ಪಾಯಿತೆಂದು, ಬರತೊಡಗಿದ ತಂಡದವರಿಗೆ "ನಮಸ್ತೆ" ಎಂದು, ಮೆಲ್ಲನೆ ಕೆಳಕ್ಕಿಳಿದು ಪತ್ನಿಯ ಪಕ್ಕದಲ್ಲಿ ಕುಳಿತರು.

(ಮೃದುಲಾ ಕರುಣಾಬೆನ್‌ಳನ್ನು ನೇಪಥ್ಯದಿಂದೀಚೆಗೆ ಬರ ಹೇಳಿ ತನ್ನ ಕೈಯಲ್ಲಿದ್ದ ಕರಂಡಕವನ್ನು ಕೊಟ್ಟಳು.)

ಧನಂಜಯ ಕೊಟ್ಟ ಒಂದೊಂದೇ ಪ್ಯಾಕೆಟನ್ನು ಸೌದಾಮಿನಿ ಆಯಾ ಕಲಾವಿದರ ಹೆಸರು ಹಿಡಿದು ಕರೆದುಕೊಟ್ಟಳು.

ಮೃದುಲಾಬೆನ್ ಹಿಂದಿಯಲ್ಲಿ ಮಾತನಾಡಿ "ಧನ್ಯವಾದ ಸಲ್ಲಿಸಿದಳು—ರಾಜ್ಯಪಾಲರಿಗೆ, ಮುಖ್ಯಮಂತ್ರಿಗೆ, ಕಲ್ಯಾಣನಗರದ ಮಹಾಜನತೆಗೆ, ನೆರವು ನೀಡಿದ ಸಂಗೀತಗಾರರಿಗೆ, ವಾದಕರಿಗೆ, ಉಳಿದೆಲ್ಲರಿಗೆ...... "ಈ ದಿನವನ್ನು ನಾವೆಂದೂ ಮರೆಯುವುದಿಲ್ಲ."

ಛಾಯಾಚಿತ್ರಕಾರರು ಕಾರ್ಯಕ್ರಮದ ಆರಂಭದಿಂದ ಅಂತ್ಯದವರೆಗೂ ಸೇವಾ ನಿರತರಾಗಿದ್ದರು.

ಜನ ಬಂದುದು ವ್ಯವಸ್ಥಿತವಾಗಿ. ಚೆದರಿದ್ದೂ ಹಾಗೆಯೇ. ಬಯಲಿನ ಒಂದು ಮೂಲೆಯಲ್ಲಿದ್ದುವು ರಂಗಸ್ವಾಮಿ ಮತ್ತು ನಾಯಕರ ಕಾರುಗಳು.

ನಾಯಕ್ ಕೇಳಿದರು :

"ಹೋದ ಶತಮಾನದಲ್ಲಿ ಪುಟ್ಟವ್ವನ್ನ ಕರಕೊಂಡ್ಬಂದಾಗ ಏನು ಹೇಳಿದ್ದಿರಿ?"

"ಮರೆತಿದ್ದೇನೆ."

"ಇವಳು ಗುಜರಾಥಿ ಸಮಾಜ ಸೇವಿಕೆಯ ಶಿಷ್ಯೆ ಅಂತ ಹೇಳಿರ್ಲಿಲ್ವಾ ?"

"ನಿಮ್ಮ ಜ್ಞಾಪಕ ಶಕ್ತಿಗೆ ಮೆಚ್ಚಿದೆ."

"ಆ ಮೃದುಲಾ ಅಮ್ಮನೇ ಗುರು. ಏನಂತೀರಾ ?"

"ಆದರೆ ಪುಟ್ಟನ ಹೊಸ ಯೌವನ ?"

"ಅದೆಲ್ಲ ಔಷಧಿ ಪ್ರಭಾವ. ಒಮ್ಮೆ ನನ್ನ ಕೈಗೆ ಸಿಗಲಿ...."

"ಅದು ಹುತ್ತ. ದುಡುಕ್ಬೇಡಿ ನಾಯಕ್. ನ್ಯಾಯಸ್ಥಾನಕ್ಕೆಳೆದು ಬುದ್ಧಿ ಕಲಿಸೋದೆ ಸರಿ."

...ನಿವಾಸದಲ್ಲಿ ಮುಖ್ಯಮಂತ್ರಿಯ ಖಾಸಾ ಕೊಠಡಿಯಲ್ಲಿದ್ದಾಗ ಮೃದುಲಾ ಕೇಳಿದಳು :

"ಕರಂಡಕದ ಕೆತ್ತನೆ ಕೆಲಸ ಎಷ್ಟು ಸೂಕ್ಷ್ಮ ! ಇದರೊಳಗೆ ಏನಿದೆಯೊ ?"

"ತೆರೀರಿ."

ಮೃದುಲಾ ಮುಚ್ಚಳವನ್ನೆತ್ತಿದಳು : ಒಂದು ಚೀಟಿ :

'ಗುರುದಕ್ಷಿಣೆ. ಶಿಷ್ಯೆಯಿಂದ.' ಜತೆಯಲ್ಲೊಂದು ಅಂಟಿಸದೇ ಇದ್ದ ಲಕೋಟೆ. ಅದನ್ನೂ ತೆರೆದಳು. ಮೃದುಲಾಬೆನ್ ಹೆಸರಿಗೆ ಹತ್ತು ಲಕ್ಷಕ್ಕೊಂದು ಸರಕಾರೀ ಚೆಕ್ಕು.

"ಮಿನಿ ! ನನ್ನ ಚಿನ್ನ ! ಏನಿದು ?"

"ಆಕ್ಷೇಪಗಳಿಗೆ ಅಪೀಲಿಗೆ ಅವಕಾಶವಿಲ್ಲ."

"ಧರ್ಮೇಂದರ್‌ಬಾಬಾರಲ್ಲಿಗೆ ಸದ್ಯಕ್ಕೆ ಹೋಗೋದಿಲ್ಲ, ಅಲ್ಲವೆ ?"

"ಈ ಹಣ ಪ್ರತಿಷ್ಠಾನಕ್ಕೊ ? ಅಲ್ಲ..."

"ನಿಮ್ಮೊಬ್ಬರ ಹೆಸರೇ ಬರೆದಿದ್ದೇನೆ. ಪ್ರತಿಷ್ಠಾನದ ಕೆಲಸ ಖಂಡಿತ ನಡೆಯುತ್ತೆ. ಕರುಣಾನಿಗೆ ತರಬೇತಿ ಕೊಡಿ."

"ಅವಳಿಗೆ ವಿನೋದನ ಮೇಲೆ ಕಣ್ಣು."

"ಮಾಡ್ಕೊಳ್ಲಿ ಬಿಡಿ. ವಿವಾಹಿತೆಯರು ಪ್ರತಿಷ್ಠಾನದ ಪಟ್ಟಕ್ಕೆ ಬರಬಾರದೂಂತ ಇದೆಯೇನು ?"

"ಸರಿ."

"ಮೊದಲು ನಿಮ್ಮ ನೆಲೆ ಭದ್ರ ಮಾಡ್ಕೊಳ್ಳಿ. ಆಮೇಲೆ ಸೇವಾಕಾರ್ಯ

ನಿರಂತರವಾಗಿ ಸಾಗಲಿ. ನಿಮಗೆ ಭಾರತರತ್ನ ಬಿರುದು ಕೊಡಿಸೋದಕ್ಕೆ ಪ್ರಯತ್ನಿಸ್ತೀನಿ."

"ಅದಕ್ಕೆ ಎಷ್ಟು ಲಕ್ಷ ಖರ್ಚಾಗಬಹುದು ?"

"ತೋಬಾ ತೋಬಾ ! ಬಿಡ್ತು ಅನ್ನಿ. ಅದು ದಿಲ್ಲಿ ಮರ್ಜೀನ ಅವಲಂಬಿಸಿರ್ತದೆ. ನಾನು ನಿಮಗೆ ಹೇಳಲೇಬಾರದಿತ್ತು. ಮರ್ತು ಬಿಡಿ."

"ಅದೇನು ಮಾಡ್ತಿಯೋ ಮಾಡು. ನಾನು ಮರೆತೇ ಬಿಟ್ಟೆ."

* * *

ಪ್ರತಿಷ್ಠಾನ ಕಲಾತಂಡ ಮರಳುವ ಪೂರ್ವಾಹ್ನ ನಗರದ, ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ. ಜತೆಗೊಬ್ಬ ಛಾಯಾಚಿತ್ರಗಾರ. ರಾಮರಾಜುಗೆ ತಂಡದ ಒಬ್ಬಳು ಬಹಳ ಮೆಚ್ಚುಗೆಯಾಗಿದ್ದಳು. ಬಸ್ಸಿನಿಂದ ಇಳಿಯುವಾಗ ಹತ್ತುವಾಗ ಅವಳಿಗೇ ಅಂಟಿಕೊಂಡಿರುತ್ತಿದ್ದ. ಉದ್ಯಾನದಲ್ಲಿದ್ದಾಗ ಸಮಯ ಸಾಧಿಸಿ ಅವಳಿಗೊಂದು ಪುಟ್ಟ ಪ್ಯಾಕೆಟ್ ಕೊಟ್ಟ. "ಶ್ರೀಗಂಧದೆಣ್ಣೆ" ಎಂದ. "ಪ್ರಿಯತಮ ನೀಡುವ ಸೆಂಟ್" ಎಂದು ಮಾತು ಸೇರಿಸಿದ.

"ಸ್ವಲ್ಪ ಹೊತ್ತು ಒಟ್ಟಿಗಿರೋಣವಾ ?" ಎಂದು ಕೇಳಿದ.

"ಎಲ್ಲಿ ?"

"ತಲೆನೋವು—ಶಾಸಕರಭವನಕ್ಕೆ ಹೋಗ್ತೇನೆ, ಅನ್ನಿ. ಅಲ್ಲಿ ವೈದ್ಯರಿದ್ದಾರೆ. ಅಲ್ಲಿ—"

ತಂಡದ ಮುಖ್ಯಸ್ಥ—ಶಿವ ಪಾತ್ರಧಾರಿ—ಹದ್ದಾಗಿ ಹತ್ತಿರ ಹಾರಾಡಿದ.

"ಮಿಸ್ಟರ್ ರಾಮಾರಾಜು, ಮುಖ್ಯಮಂತ್ರಿ ನಿವಾಸದಲ್ಲಿ ಭೋಜನ ಅಲ್ಲವಾ?"

"ಇನ್ನೂ ಟೈಮಿದೆ."

"ಗೊತ್ತು. ಕಲಾ, ಮೈಥಿಲಿಗೆ ತಲೆನೋವಂತೆ. ಅವಳ ಜತೆ ಇರು."

"ಹ್ಞ ಹ್ಞ."

ಅವನು ಬಸ್ಸಿನತ್ತ ತೆರಳಿದೊಡನೆ ಕಲಾ ರಾಮರಾಜುಗೆ ಅಂದಳು :

"ರಾಜು. ಮುಂಬಯಿಗೆ ಬನ್ನಿ. ಅಲ್ಲಿ ಭೇಟಿಯಾಗೋಣ. ಬೈ-ಬೈ."

"ಬೈ-ಬೈ," (ಕ್ಷೀಣ ಸ್ವರ.) ಆ ಹಣೆಗಣ್ಣನ ಟೊಂಕ ಮುರಿಯಬೇಕು ಎನ್ನುವ ಸಿಟ್ಟು.

....ಗೃಹ ಕಾರ್ಯಾಲಯದಲ್ಲಿ ಸಂಜೆಯ ವರೆಗೆ ಪರಶುರಾಮನಿಗೆ ಬಿಡುವಿಲ್ಲದ ಚಟುವಟಿಕೆ. ಮುಖ್ಯ ಕಾರ್ಯದರ್ಶಿ ಚೌಗುಲೆ ಬಂದು ಹೋದರು. ಕೆಲ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಅಧಿಕಾರಿಗಳ ದಿಢೀರ್ ವರ್ಗಾವಣೆಗೆ ಆಗ್ರಹಿಸಿದ್ದರು. ವಿದೇಶ ಯಾತ್ರೆಯಲ್ಲಿದ್ದ ರಂಗಧಾಮ್‌ಗೆ ಫೋನ್‌ಮಾಡಿ "ಪತ್ರಗಳಲ್ಲಿ ಏನೂ ಬರೀಬೇಡಿ"

ಎಂದು ಎಚ್ಚರಿಸಬೇಕಾಗಿತ್ತು. "ವರ್ಗಾವಣೆ ವಿಷಯ ನಿಮಗೇ ಬಿಟ್ಟಿದ್ದೀನಿ. ಸರಿ ತೋರಿದರೆ ಯೆಸ್. ತಪ್ಪೆಂದಾದರೆ ನೋ. ರಂಗಧಾಮ್ ಎಲ್ಲಿದಾರೇಂತ ವಿಚಾರಿಸಿ ನೀವೇ ಒಂದು ಸಲ ಫೋನ್ ಮಾಡಿಬಿಡಿ."

"ಮುಖ್ಯಮಂತ್ರಿಯವರು ಇವತ್ತು ಚೇಂಬರಿಗೆ ಬರೋದಿಲ್ಲ." ಎಂದು ಎಷ್ಟು ಖಡಾಖಂಡಿತವಾಗಿ ಹೇಳಿದರೂ ಕೆಲ ಕುಳಗಳು ಬಾಗಿಲು ಕಾಯಲು ಬಂದರು. ಅವರು ಪೋಲೀಸರಿಂದ "ಗಾಡಿಬಿಡಿ" ಅನ್ನಿಸಿಕೊಳ್ಳಬೇಕಾಯಿತು.

ಫೋನ್ ಕರೆಗಳಿಗೆ ವಿರಾಮವಿರಲಿಲ್ಲ. ಒಂದು ಕರೆ ಪರಶುರಾಮನನ್ನು ಸ್ವಲ್ಪ ಗೊಂದಲಕ್ಕೀಡುಮಾಡಿತು.

ಈತ "ಮುಖ್ಯಮಂತ್ರಿ ಗೃಹಕಾರ್ಯಾಲಯ" ಎಂದೊಡನೆ, "ಯಾರು ಪರಶು ರಾಮ್‌ನಾ ?" ಎಂದಿತು ಧ್ವನಿ ಆಕಡೆಯಿಂದ.

"ಯಾರು ನೀವು ?"

"ಪ್ರತಿ ಪಕ್ಷದ ಮುಖಂಡ. ಆ ಗುಜರಾಥಿ ಹೆಂಗಸು ಹೋದ್ಲಾ ?"

"ಅವರು ಯಾರೂಂತ ಗೊತ್ತಾಗ್ಲಿಲ್ವೆ ?"

"ಗೊತ್ತಾಗುತ್ತೆ. ಗೊತ್ತಾಗುತ್ತೆ."

ಮಾತಾಜಿಯ ಸನ್ನಿಧಿಗೆ ತೆರಳಿ, ಸಂಭಾಷಣೆಯನ್ನು ಅವಳ ಕಿವಿಯಲ್ಲಿ ಉಸುರಿದ. ಸೌದಾಮಿನಿಯ ಮುಖ ಕಪ್ಪಿಟ್ಟಿತು. ಆಪ್ತ ಕಾರ್ಯದರ್ಶಿಯ ಗಮನಕ್ಕೆ ಬರಬಾರದೆಂದು, ತನ್ನ ತುಟಿಗಳ ಮೇಲೆ ನಗೆ ಅರಳಿಸಿದಳು.

ಆಲ್ಬಮುಗಳ ರಾಶಿಯೇ ಅಲ್ಲಿತ್ತು. ಸೌದಾಮಿನಿಯ ವೈಭವದ ಚಿತ್ರರಾಶಿ. "ಇದು ಯಾರು? ಇದು ಯಾರು ?" ಎಂದು ಕೇಳಿ ಮೃದುಲಾ ಬೇಸತ್ತಳು. ಉತ್ತರ ಕೊಟ್ಟು ಮಾತಾಜಿ ಬಳಲಿದಳು.

ಬಯಲಲ್ಲಿ ಬೆಳಗ್ಗೆಯೇ ಷಾಮಿಯಾನ ಎದ್ದಿತ್ತು. ಟೇಬ್‌ಲ್ ಮೇಜುಗಳನ್ನು ಹೊತ್ತು ಲಾರಿ ಬಂತು. ಸಿದ್ಧ ಅಡುಗೆಯ ವ್ಯಾನ್ ಹಾಜರಿ ಹಾಕಿತು. ಕಲಾ ತಂಡವನ್ನು ಒಯ್ದಿದ್ದ ಕೋಚ್ ಕೂಡ ಬಂತು.

"ಎಲ್ಲ ಚೆನ್ನಾಗಿ ಆಯ್ತು" ಎಂದು ರಾಮರಾಜು ಬಂದು ಮುಖ್ಯಮಂತ್ರಿಗೆ ವರದಿ ಸಲ್ಲಿಸಿದ.

"ನಿಮ್ಮದು ಸುಂದರ ನಗರ" ಎಂದಳು ಕರುಣಾಬೆನ್.

"ಚಟುವಟಿಕೆ ಸಾಲದು. ಪಿಂಚಣಿದಾರರ ಸ್ವರ್ಗ—ಅಂತ ಮೊನ್ನೆ ಮೊನ್ನೆ ವರೆಗೂ ಈ ಊರನ್ನೂ ಕರೀತಿದ್ರು. ನಮಗೆ ಹೆಚ್ಚು ಹೆಚ್ಚಾಗಿ ಬೇಕಾದ್ದು ಕಲೆ ಮತ್ತು ಕೈಗಾರಿಕೋದ್ಯಮ," ಎಂದಳು ಸೌದಾಮಿನಿ.

ಆತ್ಮೀಯ ಭೋಜನಕ್ಕೆ ಹಿಮ್ಮೇಳವಾಯಿತು ಮೀರಾಭಜನ್.

"ಎಲಾ !" ಎಂದು ಉದ್ಗರಿಸಿದಳು ಮೃದುಲಾ.

ಮಾತಾಜಿ ಅಂದಳು :

"ಇದು ಮಂಗೇಶ್‌ಕರ್‌ದು ಅಲ್ಲ ; ಸುಬ್ಬಲಕ್ಷ್ಮೀದು."

"ಸುಬ್ಬಲಕ್ಷ್ಮಿ! ಹಿಂದೀಲಿ!"

"ಹ್ದ! ಆಶ್ಚರ್ಯವಾಯ್ತಾ?"

ಮೃದುಲಾ ಕಿವಿಗೊಟ್ಟು ಆಲಿಸಿದಳು.

"ಕೋಯೆಲಿಯಾ, ಕೋಯೆಲಿಯಾ, ಕೋಯೆಲಿಯಾ ..."

—ಈ ಸಾಲು ಬಂದೊಡನೆ ಮೃದುಲಾಬೆನ್ ಮೇಜನ್ನು ತಟ್ಟಿದಳು. ನೀರಿನ ಲೋಟ ಉರುಳಿ ನೆಲ ಒದ್ದೆಯಾಯಿತು. ಬೇರೊಂದು ಲೋಟ ನೀರು ಬಂತು.

ಪರಶುರಾಮ ಹಿಂದಿನ ದಿನವೇ ಪತ್ನಿಗೆ ಊಟದ ವಿಷಯ ತಿಳಿಸಿದ್ದ. ನಿವಾಸದಲ್ಲಿ ಭೋಜನವಿರುವ ದಿನ ಹರಿಣಾಕ್ಷಿ ಅಡುಗೆ ಮಾಡಬೇಕಾಗಿರಲಿಲ್ಲ. ಅಂಗರಕ್ಷಕರ ಮನೆಗಳಲ್ಲೂ ಅಷ್ಟೆ. ಊಟದ ಮಟ್ಟಿಗೆ ಪೋಲೀಸರೂ ಆಮಂತ್ರಿತರೇ. ಅವರದು ಎರಡನೆಯ ಪಂಕ್ತಿ, ಅಷ್ಟೆ.

* * *

ಕಲಾ ವಿಮರ್ಶಕರು ಕಾರ್ಯಕ್ರಮವನ್ನು ಪತ್ರಿಕೆಗಳಲ್ಲಿ ಮುಕ್ತಕಂಠದಿಂದ ಅಲ್ಲವಾದರೂ ತಕ್ಕಮಟ್ಟಿನ ಔದಾರ್ಯ ತೋರಿಸಿ ಹೊಗಳಿದ್ದರು. ಚಿತ್ರಗಳನ್ನು ಧಾರಾಳವಾಗಿ ಬಳಸಿದ್ದರು.

ಮರು ಪ್ರಯಾಣಕ್ಕೆ ಮೃದುಲಾಬೆನ್‌ಗೂ ಆಪ್ತ ಸಹಾಯಕಿ ಜುಮ್ಕಿಗೂ ಒಂದು ಫಸ್ ಕ್ಲಾಸ್ಟ್ ಕೂಪೆ ಸಿಕ್ಕಿತು. ಕೆಳಗಿನ ತರಗತಿಯಾದರೂ ಸ್ವತಂತ್ರವಾಗಿದ್ದ ಕಂಪಾರ್ಟ್‌ಮೆಂಟ್, ತಂಡದವರಿಗೆ. ಅವರಲ್ಲಿದ್ದ ಲಕ್ಷ ಬೆಲೆಯ ಒಂದು ಸೂಟ್‌ಕೇಸನ್ನು ಕಾಯಲು ಸಾದಾ ದಿರಿಸಿನಲ್ಲಿದ್ದ ಇಬ್ಬರು ಪೋಲೀಸರು. (ಬೆಂಗಾವಲು ಮುಂಬಯಿವರೆಗೆ.)

ಕೋಚ್ ಬಂತು, ಮೃದುಲಾಬೆನ್, ಜುಮ್ಕಿ, ಪರಶುರಾಮರೊಂದಿಗೆ ಮುಖ್ಯಮಂತ್ರಿ ತನ್ನ ಕಾರಿನಲ್ಲಿ ಬಂದಳು. ರಾಮರಾಜು ಅನುಭವಿಸಿದ ಸಂಕಟ ಆಗಲೇ ಪರಶುರಾಮನ ಅರಿವಿಗೆ ಬಂದಿತ್ತು. ವೃಥಾ ಕೆಲಸ ಕಳೆದುಕೊಳ್ಳುತ್ತಾನೆ—ಎಂದು ಕೆಡುಕೆನಿಸಿತು, ಆ ಕಂಪಾರ್ಟ್‌ಮೆಂಟಿನ ಬಳಿ ರಾಮರಾಜುವನ್ನು ಕರೆದು ಹಿತವಚನ ಹೇಳಿದ :

"ಆ ಪ್ರತಿಷ್ಠಾನದ ಮಾಜಿ ನಮ್ಮ ಮಾತಾಜಿಗೆ ಇಲ್ಲಿ ಒಂದು ಮಾತು ಹೇಳಿದರೂ ಸರಿ, ಮುಂಬಯಿಗೆ ಹೋಗಿ ಒಂದು ಕಾಗದ ಬರೆದರೂ ಸರಿ—ನೀನು ಡಿಸ್‌ಮಿಸ್ ಆಗ್ತೀಯ, ಹುಷಾರ್! ಸ್ನೇಹಿತ ಅಂತ ಇದನ್ನು ಹೇಳಿದ್ದೇನೆ."

ರಾಮರಾಜು ಕಂಪಾರ್ಟ್‌ಮೆಂಟಿನಿಂದ ದೂರ ಸರಿದ. ಮುಖ್ಯಮಂತ್ರಿಯ ಬೆನ್ನ ಹಿಂದೆ ನಿಂತುಕೊಂಡ. ಮೃದುಲಾಬೆನ್‌ಳ ದೃಷ್ಟಿ ತನ್ನತ್ತ ಸರಿದಾಗಲೆಲ್ಲ ಕೈ ಮುಗಿದ.

ಕಲ್ಯಾಣನಗರದ ಅನಾಥಾಶ್ರಮದ ಅಧ್ಯಕ್ಷೆ ಸುಲೋಚನಾಬಾಯಿ ಆಡಳಿತ ಮಂಡಲದ ಮಿಸೆಸ್ ಐ.ಜಿ.ಪಿ. ಮತ್ತಿತರರೊಡನೆ ಬಂದು, ಮುಖ್ಯಮಂತ್ರಿಗೆ ವಂದಿಸಿದರು. ಮೃದುಲಾಬೆನ್‌ಗೆ ನಮಸ್ಕರಿಸಿ ತಾವು ತಂದಿದ್ದ ಹೂ ಹಣ್ಣುಗಳ ಪೊಟ್ಟಣವನ್ನು ಸುಲೋಚನಾಬಾಯಿ ಅವರ ಕೈಗಿತ್ತಳು. ಮೃದುಲಾ ಅಂದಳು :

"ಸುಲೋಚನಾ ಬಹೆನ್, ನೀವು ಪ್ರತಿಷ್ಠಾನದ ಧರ್ಮದರ್ಶಿ ಮಂಡಲದಲ್ಲಿರಬೇಕು. ಮುಂದಿನ ಸಭೆಯಲ್ಲಿ ಕೋಆಪ್ಟ್ ಮಾಡ್ಕೊಳ್ತೀವೆ. ನಿಮ್ಮ ಮುಖ್ಯಮಂತ್ರಿ ಇದಕ್ಕೆ ಖಂಡಿತ ಒಪ್ಪಿಯಾರು,"

"ಸಂತೋಷದಿಂದ," ಎಂದಳು ಸೌದಾಮಿನಿ.

ವಾರ್ತಾ ಇಲಾಖೆಯ ನಿರ್ದೇಶಕ ಭಾರದ ಆಲ್ಬಮನ್ನು ಎದೆಗವಚಿಕೊಂಡು ಬಂದು, ಅದನ್ನು ಮುಖ್ಯಮಂತ್ರಿಗೆ ಒಪ್ಪಿಸಿ ತಾನು ಸರಾಗವಾಗಿ ಉಸಿರಾಡಿ ನಿವೇದಿಸಿದ :

"ಪ್ರತಿಷ್ಠಾನದವರು ಕಲ್ಯಾಣನಗರಕ್ಕೆ ಆಗಮಿಸಿದ್ದ ಕ್ಷಣದಿಂದ ಇವತ್ತಿನ ವಿದಾಯ ಭೋಜನದವರೆಗೆ ಎಲ್ಲ ಚಿತ್ರಗಳಿವೆ."

"ವೆರಿ ಗುಡ್. ಇಲಾಖೆಯ ಸೀಲು ಹಾಕಿದೀರೊ ?"

"ಹಾಕಿದೇನೆ. 'ಮುಖ್ಯಮಂತ್ರಿಯ ಶುಭಾಶಯಗಳೊಂದಿಗೆ' ಅಂತ ಟೈಪ್ ಮಾಡಿ ಅಂಟಿಸಿದ್ದೇನೆ."

"ಫೈನ್. ದೀದಿಜಿ, ಕೊನೆಯದಾಗಿ ಇದೊಂದು ಕಾಣಿಕೆ ತಗೊಳ್ಳಿ."

ಮೃದುಲಾಬೆನ್ ಆಲ್ಬಮನ್ನು ತೆರೆದು, ನೋಡಿ, ಮುಚ್ಚಿದಳು. "ರಾತ್ರಿಯೇ ಎಲ್ಲ ಚಿತ್ರ ನೋಡಿ, ನಾಳೆ ಬೆಳಗ್ಗೆ ಮಕ್ಕಳಿಗೆ ಕೊಡ್ತೇನೆ. ನೋಡಿ ಸಂತೋಷಪಡ್ತಾರೆ ಎಂದಳು."

ಕ್ಯಾಮರಾಮನ್ ಇರಲಿಲ್ಲ. (ಅವನ ಡ್ಯೂಟಿ ಮುಗಿದಿತ್ತು) ದೀಪಗಳು ಬೆಳಗಿದುವು. ರೈಲು ಎಂಜಿನ್ ಕೂ ಎಂದಿತು. ಸೌದಾಮಿನಿ ಮೃದುಲಾಬೆನ್‌ಳ ಕೈ ಕುಲುಕಿದಳು. ಜುಮ್ಮಿಗೆ "ಟಾಟಾ" ಎಂದಳು.

ತಾನು ಹೊರಿಸಿದ ಋಣಭಾರದಿಂದ ಮೃದುಲಾ ಕೊನೆಯ ಕ್ಷಣ ಜಗ್ಗಬಹುದು ಎಂದು ಭಾವಿಸಿದ್ದಳು ಸೌದಾಮಿನಿ ದೇವಿ. ಹಾಗೇನೂ ಆಗಲಿಲ್ಲ. ಅವಳ ಮುಖದ ಉದ್ವೇಗಲವನ್ನು ಹರ್ಷೋಲ್ಲಾಸ ವ್ಯಾಪಿಸಿತ್ತು.

೧೮

ಇಷ್ಟರೊಳಗೆ ರಂಗಧಾಮ ಸ್ವದೇಶಕ್ಕೆ ಮರಳ ಬೇಕಾಗಿತ್ತು, ಸುಳಿವು ಇಲ್ಲವಲ್ಲ ಎಂದು ಸೌದಾಮಿನಿ ಚಿಂತೆಗೀಡಾದಳು. ಎಳೆಗರುವಿನ ಕಿವಿಗೆ ಗಾಳಿ ಹೊಕ್ಕರೆ ಕುಣಿದಾಡುತ್ತಲ್ಲ, ಹಾಗೆ ಮಾಡಿರಬೇಕು ಈತ ಎಂದು, ಒಂದು ಸಾಲು ಹಲ್ಲನ್ನು ಇನ್ನೊಂದು ಸಾಲಿನಿಂದ ಸವರಿದಳು. ಟರ್ಬೈನುಗಳನ್ನು ಹೇರಿಕೊಂಡು ಹಡಗು ಹೊರಟಿರಬಹುದು: ಆದರೆ ಉಳಿದ ವ್ಯವಹಾರ ? ಮಂಗನಿಗೊಬ್ಬ ಸಿಂಗ. ವಿದ್ಯುಚ್ಛಕ್ತಿ ನಿಗಮದ ಅಧ್ಯಕ್ಷನಿಗಾದರೂ ಜವಾಬ್ದಾರಿ ಬೇಡವೆ ? ಕತ್ತೆ ನನ್ಮಗ ! ದಿಲ್ಲಿಯಲ್ಲಿರುವ ಏಜಂಟ ಆ ಭೂಪತಿಗಳಿಗೇ ಕೊಟ್ಟು ಕೈ ಮುಗಿದರೆ ?

ಆ ರಾತ್ರೆ ನಕುಲದೇವ್‌ಜಿಯವರ ಫೋನ್ ಬಂತು :

"ರಂಗಧಾಮ್ ಇಲ್ಲಿದಾನೆ. ನಿನ್ನ ಕುಟೀರದಲ್ಲಿ. ನಿವೇಶನ ಮಂಜೂರಾಗಿದೆ. ಭವನದ ನಿರ್ಮಾಣ ಮುಂದೆ ಹೋಗ್ತಿದೆಯಲ್ಲ ? ಏಜೆಂಟ್ ಕೊಟ್ಟ ಒಂದು ಕೈ ಇಲ್ಲಿಯೇ ಇಟ್ಟುಕೊಂಡಿದ್ದೇನೆ. ಇದರಿಂದ ಮುಂದಿನ ಐದು ತಿಂಗಳ ಕ್ವೋಟಾ ಜಮಾ ಆಯ್ತೂಂತ ತಿಳಕೋಬೇಡ. ಒಂದು ತಿಂಗಳಿನದು ಮಾತ್ರ ಕಳಿಸೋದು ಅಗತ್ಯವಿಲ್ಲ. ಅಷ್ಟೇ ನಿಮ್ಮ ಪಾಲು. ರಂಗಧಾಮ ನಿನ್ನ ಮೆಚ್ಚಿನ ಮಂತ್ರಿ ಅಲ್ಲವಾ ? ಸಹಜ, ಸಹಜ !"

"ನಕುಲ್‌ದೇವ್‌ಜಿ, ಹೀಗೆ ಯಾಕೆ ಮಾಡಿದಿರಿ ? ಇಲ್ಲಿ ಕಷ್ಟವಾಗುತ್ತೆ. ಕೈಗಾರಿಕೋದ್ಯಮಗಳನ್ನ ಶುರುಮಾಡೋದಕ್ಕೆ ಇಲ್ಲಿಗೆ ಒಂದು ಹತ್ತಿಪ್ಪತ್ತು ಜನರನ್ನು ಕಳಿಸಿ. ಕಿಷ್ಕಿಂಧೆ ಬಡ ರಾಜ್ಯ. ಸಂಪದಭಿವೃದ್ಧಿಗೆ ಅವಕಾಶ ಕೊಡಿ. ಆದರೆ, ವ್ಯವಹಾರ ಅಲ್ಲಿಯೇ ಕುದುರಿಸಿ ಬರೇ ಹೆಬ್ಬೆಟ್ಟು ಒತ್ತೋದಕ್ಕೆ ಇಲ್ಲಿಗೆ ದಾಟಿಸ್ಬೇಡಿ ಪ್ಲೀಸ್ !"

"ತಾಳ್ಮೆ ತಪ್ಪಬಾರದು, ಮಾತಾಜಿ. ನಾನು ಯಾವಾಗಲೂ ನಿಮ್ಮ ಹಿತೈಷಿ. ಮರೀಬೇಡಿ."

....ಕೆಲ ದಿನಗಳ ಬಳಿಕ ರಂಗಧಾಮ ಕಲ್ಯಾಣನಗರ ತಲಪಿ, ಕೆಲ ಮಿನಿಟುಗಳಲ್ಲಿ ಮಾತಾಜಿಯ ಸನ್ನಿಧಿಯಲ್ಲಿ ಹಾಜರಾದ.

"ಒಂದು ಯುಗವಾಯ್ತೇನೊ ನಿಮ್ಮನ್ನ ನೋಡಿ," ಎಂದು ಸಲಿಗೆಯ ಮಾತನ್ನಾಡುತ್ತ, ರಂಗಧಾಮ ಮೇಜಿನ ಬಳಿಗೆ ಬಂದ.

"ಫಾರೀನ್‌ನಲ್ಲಿ ಏನೇನು ಮುಟ್ಟಿದೀರೊ ಏನೊ....ಆದರೆ, ಸ್ನಾನ ಆಗಿದೆ ಅಲ್ವೆ ? ಕೈ ಜೋಡಿಸೋದಕ್ಕೇನು ಧಾಡಿ ?"

"ಕ್ಷಮಿಸಿ. ನಮಸ್ತೆ."

"ಬರಿಗೈಲಿ ಬಂದಿರಿ !"

"ದಿಲ್ಲಿಯಲ್ಲಿ ದೋಚಿದ್ರು."

"ಸೆಂಟ್ ಬಾಟ್ಲ್ ?"

"ಅದನ್ನೂ—"

ರಾಷ್ಟ್ರಪಕ್ಷದ ಅಧ್ಯಕ್ಷರು ರಂಗಧಾಮನಿಗೆ ಹೇಳಿದ್ದರು :

"ನಿನಗಿನ್ನೂ ಚಿಕ್ಕ ವಯಸ್ಸು. ಒಂದು ದಿವಸ ಕಿಷ್ಕಿಂಧೆಯ ಮುಖ್ಯಮಂತ್ರಿಯಾಗಿಯೇ ಆಗ್ತೀಯಾ. ನಿನ್ನ ಪ್ರಗತಿಯ ದಾಖಲೆಯನ್ನು ಕುತೂಹಲದಿಂದ ಓದ್ತಿರ್ತೀನಿ. ಈ ದೇಶ ಉಳಿದಿರೋದು ರಾಷ್ಟ್ರಪಕ್ಷದಿಂದಾಗಿ. ಎಲ್ಲಕ್ಕಿಂತ ದೊಡ್ಡದು ಪಕ್ಷ. ನನ್ನ ಪೂರ್ಣ ಆಶೀರ್ವಾದ ನಿನಗಿದೆ."

ಇಂದಿನ ಅವನ ಸಲಿಗೆಯ ಮಾತಿಗೂ ನಸುನಗೆಗೂ ಹಿನ್ನೆಲೆ, ರಾಷ್ಟ್ರಪಕ್ಷದ ಅಧ್ಯಕ್ಷರು ಆಡಿದ್ದ ಮಾತು.

"ನಿಮ್ಮ ಮಾವನ ಮನೆಯಿಂದ ಸುದ್ದಿ ಇಲ್ಲವೊ ?"

"ಇಲ್ಲ."

"ಜರ್ಮನಿಯಿಂದ ಟರ್ಬೈನ್ ಬಂದ ಮೇಲೆಯೇ ತಾಯ್ತನ ಅಂತ ನಿಮ್ಮ ರಮಣಿ ಕಾದಿರ್ಬೇಕು. ಚಿತ್ರಾವತಿಗೆ ಯಾವಾಗ ಹೊರಡ್ತೀರಾ ?"

"ಮುಖ್ಯಮಂತ್ರಿಯವರು ಅನುಮತಿ—"

"ಮಾತಾಜಿ ಮರೆತಿರಾ ?"

"ಮಾತಾಜಿ ಅನುಮತಿ ಕೊಡೋದಾದ್ರೆ ಈಗಲೇ."

"ಈಗಲೇ ಹೊರಡಬಹುದು. ನಿಕಾಲೆಯಾಗಬೇಕಾದ ಫೈಲುಗಳು, ಟಪಾಲು ರಾಶಿ ಇಷ್ಟನ್ನು ನೀವು ಒಯ್ಬೇಕು. ಜತೆಗೆ ನಿಮ್ಮ ಪಿ.ಎ.ಯನ್ನೂ ಕರೆದುಕೊಂಡು ಹೋಗಿ."

"ಬರ್ತೀನಿ. ನಮಸ್ಕಾರ."

ಸಿಟ್ಟಿನಿಂದ ಕೆಂಪಡರಿದ್ದ ಸೌದಾಮಿನಿ ನಿರ್ಗಮಿಸುತ್ತಿದ್ದ ರಂಗಧಾಮನನ್ನು ನೋಡಿದಳು.

....ಗುಪ್ತಚಾರ ದಳದ ಮುಖ್ಯಸ್ಥ ಭೇಟಿಗೆ ಬಂದ.

ಕುರ್ನಿಸು ಮಾಡಿ, ಆಜ್ಞಪ್ತನಾದ ಬಳಿಕ ಕುಳಿತು, ಅವನೆಂದ :

"ಕೇಂದ್ರ ಸರಕಾರದ ಗೂಢಚಾರ ದಳದ ಒಂದು ತಂಡ ದಕ್ಷಿಣದ ರಾಜ್ಯಗಳ ಪ್ರವಾಸ ಕೈ ಗೊಂಡಿದೆ."

ಸೌದಾಮಿನಿಯ ವಕ್ಷಸ್ಥಲ ಮುದುಡಿತು.

"ಪಕ್ಷದ ಗೂಢಚಾರರೂ ಒಬ್ಬಿಬ್ಬರು ಈ ತಂಡದಲ್ಲಿರಬಹುದೊ ?"

"ಇರುವುದು ಸಾಧ್ಯ. ಇದ್ದರೆ, ಕೇಂದ್ರಕ್ಕೆ ಅವರು ಬೇರೆ ಬೇರೆ ವರದಿ ಸಲ್ಲಿಸ್ತಾರೆ."

"ಇದು ಒಳ್ಳೆಯ ವ್ಯವಸ್ಥೆ. ಎಲ್ಲಿಯೂ ಯಾರೂ ಶಿಸ್ತು ಮೀರಿ ವರ್ತಿಸೋದಿಲ್ಲ : ಸರಕಾರದ ಶಿಸ್ತು, ಪಕ್ಷದ ಶಿಸ್ತು."

"ವಿಶ್ವಂಭರ—"

"ಯಾರು ? ನಮ್ಮ ಪಕ್ಷದವನು ? ಕಡಲು ಕ್ಷೇತ್ರದ ಶಾಸಕ? ಸೊಗಸುಗಾರ?"

"ಹ್ಞ, ಅವನ ಮನೇಲಿ ಈ ಕೆಲ ದಿನಗಳಿಂದ ಪಕ್ಷದ ಬೇರೆ ಬೇರೆ ಶಾಸಕರು ಜಮೆಯಾಗ್ತಿದಾರೆ."

"ಹೌದೆ? ಅವನಲ್ಲೇನಿದೆ? ಮುಟ್ಟಿದರೆ ಮುನಿ ಥರ ಮುಚ್ಕೊಂಡೇ ಇರ್ತಿದ್ದ...."

"ಹಳೆಯ ತುತೂರಿ ಸಂಚಿಕೆಗಳು ಅವನಿಗೆ ಸಿಕ್ಕಿವೆ."

"ಕಿಷ್ಕಿಂಧೆಯ ಗುಪ್ತಚಾರದಳಕ್ಕೆ ಅವನನ್ನು ಮುಖ್ಯಸ್ಥ ಮಾಡಬೇಕಾಗಿತ್ತು."

"ಮಾತಾಜಿ, ಕ್ಷಮಿಸಿ. ನನ್ನಿಂದ ಏನೂ ತಪ್ಪಾಗದಂತೆ ನಾನು ಯಾವಾಗಲೂ ಎಚ್ಚರವಾಗಿರ್ತೀನಿ. ವಿಶ್ವಂಭರ ಗುಪ್ತಚಾರದಳದಲ್ಲಿ ಇರ್ತಿದ್ದರೆ ಅವನನ್ನು ಕುರಿತ ಮಹತ್ವದ ಈ ಮಾಹಿತಿ ತಮಗೆ ಸಿಗ್ತಿರಲಿಲ್ಲ."

"ಕ್ಷಮಿಸಿ ಅನ್ನಬೇಕಾದ್ದು ನಾನು. ನೀವು ನನ್ನ ವಿಶ್ವಾಸಾರ್ಹ ಅಧಿಕಾರಿ."

ಫೋನಿನ ಸದ್ದು. ಇಂಟರ್‌ಕಾಮ್ ಜಿನುಗಿದಾಗ ಸೌದಾಮಿನಿ ಅಂದಳು :

"ನಾನು ಮೀಟಿಂಗಿನಲ್ಲಿದೀನಿ. ಇನ್ನರ್ಧ ಘಂಟೆ ಸಿಗೋದಿಲ್ಲ...."

"ಪ್ರತಿಪಕ್ಷದ ಐವರೇನು ಹೇಳ್ತಾರೆ ಅನ್ನೋದೂ ಮುಖ್ಯ" ಎಂದ ಅಧಿಕಾರಿ.

"ತುತೂರಿ ವಿಷಯ ಹೇಳಿದಿರಲ್ಲ. ವಿಶ್ವಂಭರ—"

"ಆತ ಅದರಲ್ಲಿದ್ದ ಲೇಖನಗಳನ್ನು ಪುನರ್ಮುದ್ರಿಸುತ್ತಿದ್ದಾನೆ, ಗೋಪ್ಯದಲ್ಲಿ. 'ಸವಾಲ್' ಅಂತ ತಮ್ಮ ಬಗ್ಗೆ ಒಂದು ದಾಖಲೆ ತಯಾರು ಮಾಡುತ್ತಿದ್ದಾನಂತೆ."

"ಸಪ್ತರ್ಷಿ ಮಂಡಲ ಭದ್ರವಾಗಿದೆಯಷ್ಟೆ?"

"ರಂಗಧಾಮ್ ಊರಲ್ಲಿಲ್ಲ. ಬೇರೆಯವರು ಒಬ್ಬೊಬ್ಬರನ್ನೇ ವಿಶ್ವಂಭರ ಭೇಟಿಯಾಗ್ತಿದಾನೆ. ಕಾಫಿ ಪಾರ್ಟಿ, ಚಹಾ ಪಾರ್ಟಿ, ಗುಂಡು ಪಾರ್ಟಿ ಎಲ್ಲಾ ಆಗ್ತಿವೆ."

"ಮಹಾವ್ಯಾಧ ನಾನೊಬ್ಬಳೇ ಅಚಲ."

"ರಾಜಕಾರಣದಲ್ಲಿ ಈ ಕಿರಿಕಿರಿ ಸ್ವಾಭಾವಿಕ ಅಲ್ಲವಾ ಮಾತಾಜಿ ? ಆಗಾಗ್ಗೆ ಚಟಪಟ ಅನ್ನುದೆ. ಜೋರಾದ ಮಳೆ ಬಂದರೆ ಎಲ್ಲ ಕೊಚ್ಕೊಂಡು ಹೋಗ್ತದೆ."

"ತಮಾಷೆಗೆ ಹೇಳ್ತಿಲ್ಲ. ಮುಂದಿನ ಚುನಾವಣೆಗೆ ಮುಂಚೆ ನೀವು ಕೆಲಸಕ್ಕೆ ರಾಜಿನಾಮೆ ಕೊಡಿ. ನಮ್ಮ ಪಕ್ಷ ಸೇರ್ಕೊಳ್ಳಿ. ಮಂತ್ರಿಯಾಗ್ತೀರಿ ಕಣ್ರೆ ನೀವು. ಗೃಹಶಾಖೆ ನಿಮಗೇ ಕೊಡ್ತೇನೆ."

"ನನ್ನನ್ನು ಲೇವಡಿ ಮಾಡ್ತಿದೀರಿ."

"ಖಂಡಿತ ಇಲ್ಲ.... ನಾಯಕ್ ಏನಂತೆ ?"

"ಪ್ರಜಾಪಕ್ಷ ರಾಷ್ಟ್ರಪತಿಗೆ ಮಾತಾಜಿ ಮೇಲಿನ ಆರೋಪಗಳ ಪಟ್ಟಿ ಸಲ್ಲಿಸ್ತ ದಂತೆ."

"ಎಷ್ಟು ಆರೋಪಗಳು ?"

"ಅದು ತಿಳೀದು."

"ನೂರು ಇಲ್ಲವಾದ್ದರಿಂದ ನೂರ ಒಂದನೇದು ಊಹೂಂ. ಆದ್ದರಿಂದ ಶಿಶು ಪಾಲವಧೆ ಆಗೋದಿಲ್ಲ !"

"ಜ್ಯೋತಿಷಿ ವಿಷ್ಣುಮೂರ್ತಿ ಮನೆ ಮುಂದೆ ಈಗ ರಾಜಕಾರಣಿಗಳ ಕ್ಯೂ. ಶಾಸಕರು, ಶಾಸಕರಲ್ಲದವರು, ಎಲ್ಲ ಬಗೆಯವರು."

"ಅವರದೊಂದು ಪಟ್ಟಿ ಬೇಕು."

"ಆ ಕೆಲಸಕ್ಕೋಸ್ಕರ ನಮ್ಮವರನ್ನ ಬಿಡ್ತೀನಿ."

"ಇವತ್ತಿಗೆ ಇಷ್ಟು ಸಾಲದಾ? ನಾಳೆ ಮತ್ತೆ ಬನ್ನಿ. ಪ್ರತಿ ದಿನ ಬೆಳಗ್ಗೆ. ನಮಸ್ಕಾರ.''

ಗುಪ್ತಚಾರದಳದ ಮುಖ್ಯಸ್ಥ ಹೋದೊಡನೆ, ಇಂಟರ್‌ಕಾಮ್‌ನಲ್ಲಿ ಸೌದಾ ಮಿನಿ ಪರಶುರಾಮನನ್ನು ಕರೆದಳು.

"ಸಾರಿಡಾನ್ ಮತ್ತು ನೀರು."

ಆತ ತಂದೊಡನೆ ನೀರಿನ ನೆರವಿನಿಂದ ಮಾತ್ರೆಯನ್ನು ಒಳಕ್ಕೆ ತಳ್ಳಿದಳು.

"ಡಾಕ್ಟರನ್ನು ಕರೀಲಾ ?"

"ನನಗೇನೂ ಆಗಿಲ್ಲ. ಆ ಮುಖ್ಯಸ್ಥ ಬೇಕೂಫ ಯಾವುದೋ ಜಾಲದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ. ಇಷ್ಟು ಹೊತ್ತು ಕಥೆ ಹೇಳಿ, 'ನನ್ನನ್ನು ಕಾಪಾಡಿ' ಅಂತ ಗೋಗರೆದ."

* * *

ಚಿತ್ರಾವತಿಯಿಂದ ಫೋನ್.

"ಪರಶುರಾಮ್, ಸಿ ಎಂ ಲೈನ್ ಮೇಲೆ ಸಿಗ್ತಾರಾ ?"

"ತಾಳಿ, ನೋಡ್ತೇನೆ."

ಸೌದಾಮಿನಿ ರಿಸೀವರ್ ಎತ್ತಿಕೊಂಡಳು:

"ನಮಸ್ತೆ ಮಾತಾಜಿ. ಹೆರಿಗೆ ಆಯ್ತು, ಗಂಡು ಮಗು.''

"ಪಟ್ಟಕ್ಕೆ ವಾರಸುದಾರ ಬಂದ ಹಾಗಾಯ್ತು. ಹೆಸರು ಏನಿಡಬೇಕೂಂತ ಮಾಡಿದೀರಾ ?"

"ಆಶೀರ್ವಾದ."

"ಅದು ಇದ್ದೇ ಇದೆ.'

"ಅಲ್ಲ, ಹೆಸರು ಆಶೀರ್ವಾದ ಅಂತ."

"ಗುಡ್. ಸಪ್ತರ್ಷಿ ಮಂಡಲಕ್ಕೆ ಇಲ್ಲಿ ಶಾಪ ಇಡ್ತಿದ್ದಾರೆ. ನೀವು ತೊಟ್ಟಿಲು ತೂಗ್ತಾ ಅಲ್ಲಿ ಇರ್ಬೇಡಿ. ಇವತ್ತೇ ಹೊರಟು ಬನ್ನಿ."

ಸಂಜೆ ಸೌದಾಮಿನಿ ಧರ್ಮಮಠಕ್ಕೆ ಹೋಗಿ ಪ್ರವಚನ ನಿರತರಾಗಿದ್ದ ಸ್ವಾಮೀಜಿಗಾಗಿ ಕಾದು ಕುಳಿತಳು. ಮುಖ್ಯಮಂತ್ರಿಯ ಕಾರು ಬಂದುದನ್ನು ದೂರದಿಂದಲೇ ಕಂಡಿದ್ದ ಸ್ವಾಮೀಜಿ ಪ್ರವಚನ ಮೊಟಕುಗೊಳಿಸಿ ಮಠದತ್ತ ಹೆಜ್ಜೆ ಇಟ್ಟರು.

ಮಾನಸಿಕ ಪರಿತಾಪ ಮುಖದ ಮೇಲೆ ಮುದ್ರೆ ಮೂಡಿಸಿತ್ತು.

ಪಕ್ಷದೊಳಗೆ ಬಂಡಾಯದ ಪ್ರಯತ್ನಗಳಾಗುತ್ತಿವೆ ಎಂದು ಸೌದಾಮಿನಿ ಅಳಲು ತೋಡಿಕೊಂಡಳು.

"ವೃಥಾ ಚಿಂತಿಸಬೇಡಿ. ನಾನು ಇವತ್ತೇ ವೈರಿನಾಶಕ್ಕಾಗಿ ಹೋಮಮಾಡ್ತೇವೆ. ನೀವು ರಾತ್ರಿ ಬಾಬಾಜಿಯನ್ನು ಸ್ಮರಿಸಿ ಒಂದು ಗಂಟೆ ಧ್ಯಾನ ನಿರತರಾಗಿ."

"ಧನಂಜಯರ ಮೂಲಕ ಬೆಳಗಿನ ಜಾವ ಒಂದೆರಡು ಸೂಟ್‌ಕೇಸ್ ಕಳಿಸ್ತೇನೆ."

"ಆಗಲಿ, ಜೋಪಾನ ಮಾಡ್ತೇವೆ."

"ಬಾಬಾಜಿಗೆ ಫೋನ್ ಮಾಡಿ, ಸ್ವಲ್ಪ ನೋಡ್ಕೊಳ್ಳೋದಕ್ಕೆ ನಕುಲದೇವ್‌ಜಿಗೆ ತಿಳಿಸೋದಕ್ಕೆ ಹೇಳ್ತೀರಾ ?"

ಹೇಳ್ತೇವಿ."

"ಬಾಬಾಜಿಯ ದರ್ಶನಕ್ಕೆ ತಾವು ಯಾವಾಗ ಹೋಗ್ತೀರಾ ?"

"ಮುಂದಿನ ತಿಂಗಳು ಹೋಗೋಣಾಂತ ಇದೀವಿ."

"ಆಗ, ಬಾಬಾಜಿಗೆ ಮುಟ್ಟಿಸೋದಕ್ಕೆ ಒಂದು ದೊಡ್ಡ ಕಾಣಿಕೆ ಕೊಡ್ತೇನೆ."

"ಆಗಲಿ. ದಂತೇಶ್ವರಿಯ ಅನುಗ್ರಹ ನಿಮ್ಮ ಮೇಲಿರಲಿ."

....ಮಾತಾಜಿಯ ಆದೇಶವನ್ನು ಧನಂಜಯ ಪಾಲಿಸಿದ. ಸ್ವಾಮೀಜಿ ಹೋಮದ ಬಳಿಕ ನಿದ್ದೆ ಹೋಗಿದ್ದರೂ ಮತ್ತೆ ಉಷಃಕಾಲದಲ್ಲೆ ಎದ್ದಿದ್ದರು: ಪ್ರಸಾದವನ್ನಿತ್ತು, "ಇದನ್ನು ಮುಖ್ಯಮಂತ್ರಿಗೆ ತಲಪಿಸಿ" ಎಂದರು.

ಧನಂಜಯ ಸೌದಾಮಿನಿಯ ನಿವಾಸಕ್ಕೆ ಬಂದಾಗ ಆಕೆ ಯೋಗಾವಸ್ಥೆಯಲ್ಲಿದ್ದಳು. ಪರಶುರಾಮ ಬಂದು ಧನಂಜಯನ ಜತೆಯಲ್ಲಿ ಕುಳಿತ. ಮಾತಾಜಿ ಯೋಗಾಸನಗಳನ್ನು ಹೇಗೆ ಮಾಡ್ತಾರೊ ? ಪರಶುರಾಮನನ್ನು ಕೇಳಿದ :

"ನೋಡಬಹುದೊ ?"

"ಯೋಗಾಸನ ಮುಗಿಸಿ ಮೇಲಂಗಿ ಹಾಕಿಕೊಂಡು ಬರ್ತಾರೆ. ಆಗ ನೋಡಿ."

ಆಗ ನೋಡಿದ. ಮಠದಿಂದ ತಂದ ಪ್ರಸಾದವನ್ನಿತ್ತ. ಅದನ್ನು ಸೌದಾಮಿನಿ ಭಕ್ತಿಯಿಂದ ಸ್ವೀಕರಿಸಿದಳು.

"ಹೊತ್ತಲ್ಲದ ಹೊತ್ತು ನಿಮಗೆ ತೊಂದರೆ ಕೊಟ್ಟೆ."

"ಎಲ್ಲಿಯ ತೊಂದರೆ, ಮಾತಾಜಿ ? ಇದು ಸೇವೆ, ಕರ್ತವ್ಯ."

ಪರಶುರಾಮನೆಂದ :

"ರಾತ್ರೆ ಹೇಳಿದ್ರು. ಇವರದೊಂದು ಸಣ್ಣ ಸಮಸ್ಯೆ ಇದೆ."

"ಏನು ?"

"ಈ ವರ್ಷ ಆದ್ಮೇಲೆ ರೇಷ್ಮೆ ಗುತ್ತಿಗೆ ಮುಂದುವರಿಸೋದಿಲ್ಲಾಂತ ಇಲಾಖೆ ಮಂತ್ರಿ ಹೇಳಿದರಂತೆ ನಿಗಮದ ಅಧ್ಯಕ್ಷರ ಜತೆ."

"ಅಷ್ಟೆ ತಾನೆ ? ಆರ್ಡರು ತನ್ನಿ. ಅದನ್ನು ಮೂರು ವರ್ಷಗಳ ಗುತ್ತಿಗೆ ಮಾಡ್ತೀನಿ. ಮುಖ್ಯ ಕಾರ್ಯದರ್ಶಿ ಎಂಡೋರ್ಸ್ ಮಾಡಿ ಸಹಿ ಹಾಕ್ತಾರೆ."

ಇನ್ನೂ ಸ್ವಲ್ಪ ಹೊತ್ತು ಅಲ್ಲಿರಲು ಧನಂಜಯ ಸಿದ್ಧನಿದ್ದ. ಆದರೆ ಮುಖ್ಯ ಮಂತ್ರಿ ಸ್ನಾನಕ್ಕೆ ಹೋದಳು. ತನ್ನ ಮನೆಯ ಕಡೆಗೆ ಸ್ವಂತದ ಫಿಯೆಟನ್ನು ಸಾಹುಕಾರ ಓಡಿಸಿದ. ಸೂಟ್‌ಕೇಸ್‌ಗಳಲ್ಲಿ ಎಷ್ಟು ಇದ್ದಿರಬಹುದು ? 'ಆ ವಿಷಯ ನಿನಗೆ ಯಾಕೊ ? ನಿನ್ನದನ್ನು ನೋಡ್ಕೊಂಡು ತೆಪ್ಪಗಿರು,' ಎಂದು ತನ್ನನ್ನೇ ಗದರಿಸಿ, ಸುಮ್ಮನಾದ.

ಸ್ವಲ್ಪ ಹೊತ್ತಿನಲ್ಲೆ ಗುಪ್ತಚಾರ ದಳದ ಮುಖ್ಯಸ್ಥ ಬಂದ, ಯಾಕೋ ಬಂದಿಲ್ಲದಲ್ಲ—ಫೋನ್ ಮಾಡೋದು ವಾಸಿ ಎಂದು ಸೌದಾಮಿನಿ ಯೋಚಿಸು ತ್ತಿದ್ದಾಗಲೆ.

"ನಿನ್ನೆ ನೀವು ಬರಲಿಲ್ಲ."

"ಮೊನ್ನೆ ರಾತ್ರಿ ಇಡೀ ಡ್ಯೂಟಿ ಮೇಲಿದ್ದೆ."

"ಏಳೋದು ತಡವಾಯ್ತು ಅನ್ನಿ."

"ಹ್ಞ, ಅದಕ್ಕಿಂತಲೂ ಮುಖ್ಯ ಸಹಾಯಕರ ವರದಿಗಳು ಬಂದಿರಲಿಲ್ಲ. ನಿನ್ನೆ ಎಲ್ಲಾ ಅದನ್ನು ಪರಿಶೀಲಿಸಿದೆ. ಬೆಳಗ್ಗೆ ಬರ ಹೇಳಿದ್ದಿರಿ. ಹೀಗಾಗಿ."

ಕಾಫಿ ಬಂತು.

"ತಗೊಳ್ಳಿ, ನನ್ನದೂ ಆಗಿಲ್ಲ."

ಅಧಿಕಾರಿ ತನ್ನ ಕಪ್ಪನ್ನು ಬೇಗನೆ ಬರಿದುಗೊಳಿಸಿದ. ಸೌದಾಮಿನಿ ತಾನು ನಿಧಾನವಾಗಿ ಹೀರುತ್ತ ಮುಖ್ಯಸ್ಥನ ಮಾತಿಗೆ ಕಿವಿಗೊಟ್ಟಳು.

"ಪ್ರಜಾಪಕ್ಷದ ಮನವಿ ರಾಷ್ಟ್ರಪತಿಗೆ ಹೋಗಿದೆ. ಕಾನೂನು ಶಿಸ್ತು ಮುರಿದು ಬಿದ್ದಿದೆಯಂತೆ."

"ಎಲ್ಲಿ ? ಗೋಳಿಬಾರಾಯ್ತೆ ? ನಿಮಗೆ ಗೊತ್ತಿರಬೇಕಲ್ಲ ?"

"ಸುಮ್ಮನೆ ಹೇಳೋದಕ್ಕೇನು ?"

"ಇವರು ಹೇಳಿದ ಮಾತ್ರಕ್ಕೆ ಆಗಿ ಹೋಯ್ತೆ ? ರಾಜ್ಯಪಾಲರ ವರದಿ ಆಧಾರದ ಮೇಲಲ್ಲವೆ ರಾಜ್ಯದ ವಿರುದ್ಧ ಕ್ರಮ ತಗೊಳ್ಳೋದು ?"

"ಆಖೈರು ತೀರ್ಮಾನ ಕೇಂದ್ರ ಮಂತ್ರಿಮಂಡಲದ್ದು. ರಾಷ್ಟ್ರಪಕ್ಷದ ಪ್ರಮುಖರದ್ದು."

"ಈ ಮೂರ್ಖರಿಗೆ ಅದು ಗೊತ್ತಿಲ್ಲ ಅಂತೀರ ?"

"ಗೊತ್ತಿದ್ದರೇನು ? ಪಟಾಕಿ ಹಾರಿಸೋದರ ಮೇಲೆ ಪ್ರತಿಬಂಧಕಾಜ್ಞೆ ಇಲ್ವಲ್ಲ !"

"ವಿಶ್ವಂಭರರಾಗಲೀ ಅವರ ಮಿತ್ರರಾಗಲೀ ನಾಯಕ ಪಾರ್ಟಿಯ ಮನವಿಗೆ ಬೆಲೆ ಕೊಟ್ಟಿಲ್ಲ. ಅವರದು ಬೇರೆ ವಿಧಾನ. ಬಹಳ ಯೋಚಿಸಿ ದಾಳ ಸರಿಸ್ತಾರೆ. 'ಮುಖ್ಯಮಂತ್ರಿದು ಟೆನ್ನಿಸ್, ನಮ್ಮದು ಚೆಸ್' ಅನ್ನಾರಂತೆ. ನಿಮ್ಮ ಮೇಲೆ ವಿಶ್ವಾಸ ಇಲ್ಲಾಂತ ರುಜುವಾತು ಮಾಡ್ತಾರಂತೆ."

"ವಿಶ್ವಂಭರನ ಮುಂಡ ಮೋಚ್ತು. ಅವನು ವಕೀಲಿ ಓದಿದಾನೇಂತ ಕೇಳಿದೀನಿ."

"ಜತೆಗೆ ರಾಜಕೀಯ ವಿಜ್ಞಾನದಲ್ಲಿ ಎಂ.ಎ. ಪದವೀಧರ."

"ಬಹಳ ಅಂದರೆ ಕಾನೂನು ಮತ್ತು ಶಾಸಕಾಂಗ ವ್ಯವಹಾರಗಳ ಮಂತ್ರಿ ಸ್ಥಾನ ಕೊಡಬಹುದು."

"ಮುಖ್ಯಮಂತ್ರಿ ಸಂಪುಟ ಬದಲಾವಣೆ ಬಗ್ಗೆ ಯೋಚಿಸ್ತಿದಾರೆ ಅಂತ ವದಂತಿ ಹಬ್ಬಿಸಿದರೆ ಈ ಬಂಡಾಯದ ಕಿತಾಪತಿ ಠುಸ್ಸಾಗಬಹುದು."

"ಒಳ್ಳೇ ಸಲಹೆ. ನಿಮಗೆ ಶಾಸಕ ಮಿತ್ರರು ಇದ್ದೇ ಇರ್ತಾರೆ. ಅವರ ಮೂಲಕ ಈ ಬುರುಡೆ ಉರುಳಿಸಿ."

"ಆಗಲಿ, ಮಾತಾಜಿ."

* * *

ರಾಜ್ಯಪಾಲರು ತಮ್ಮ ಭವನದ ಉದ್ಯಾನದಲ್ಲಿ ವಾಯುಸೇವನೆ ನಡೆಸುತ್ತಿದ್ದ ಸಂಜೆ ಹೊತ್ತು. ಕತ್ತಲಿನ ಛಾಯೆ ಹಬ್ಬಿ ದೀಪಗಳು ಬೆಳಗಿದಂತೆ ಸೌದಾಮಿನಿಯ ಕಾರು ಒಳಗೆ ಬಂತು. ಇಳಿದ ಸೌದಾಮಿನಿಯನ್ನು ನೋಡಿ ರಾಜ್ಯಪಾಲರು ಆತ್ಮೀಯ ನಗೆ ಬೀರಿದರು. ಜತೆಯಾಗಿ ಇಬ್ಬರೂ ನೂರು ಹೆಜ್ಜೆ ನಡೆದರು :

ಒಳಗಿನಿಂದ ರಾಜಭವನದ ಚಾಕರ ಬಂದು ರಾಜ್ಯಪಾಲರಿಗೆ ನಿವೇದಿಸಿದ :

"ಮೆಮ್‌ಸಾಬ್ ತಮ್ಮನ್ನು ಕರೀತಿದ್ದಾರೆ. ಈ ಕ್ಷಣವೆ ಬರಬೇಕಂತೆ."

"ಚೀಫ್ ಮಿನಿಸ್ಟರ್ ಬಂದಿದಾರೇಂತ ಹೇಳು. (ಸೌದಾಮಿನಿಯ ಕಡೆ ತಿರುಗಿ) ನೋಡಿದಿರಾ ನಿಮ್ಮ ರಾಜ್ಯಪಾಲರಿಗೆ ಇರೋ ಸ್ವಾತಂತ್ರ್ಯ ?"

"ಅರ್ಥಮಾಡಿಕೊಂಡೆ," ಎಂದಳು ಸೌದಾಮಿನಿ.

ಇನ್ನೂ ಹತ್ತು ಹೆಜ್ಜೆ ನಡೆಯುವುದರೊಳಗೆ ಚಾಕರ ಮತ್ತೆ ಬಂದ.

"ಈ ಹೊತ್ತಿನಲ್ಲಿ ರಾಜಕಾರ್ಯ ಬೇಡ—ಚೀಫ್ ಮಿನಿಸ್ಟರು ನಾಳೆ ಹಗಲು ಬರಲಿ—ಅಂದ್ರು, ಮೆಮ್‌ಸಾಬ್."

"ಸರಿಯಪ್ಪ, ನೀವೇನೂ ಚಿಂತಿಸ್ಬೇಡಿ. ನಾಳೆ ಮಾತಾಡೋಣ," ಎಂದು ಹೇಳಿ ರಾಜ್ಯಪಾಲರು ಒಳಕ್ಕೆ ನಡೆದೇ ಬಿಟ್ಟರು.

*   *   *

ತನ್ನ ನಿವಾಸದಲ್ಲಿ ಆ ರಾತ್ರಿ ಬೇಸರದ ಊಟ ಮುಗಿಸಿ, "ಫೋನಿನ ತಂಟೆಗೆ ಹೋಗ್ಬೇಡ" ಎಂದು ಪರಶುರಾಮನಿಗೆ ಸೌದಾಮಿನಿ ನಿರ್ದೇಶವೀಯುತ್ತಿದ್ದಂತೆ, ಒಂದು ಅಂಬಾಸಡ್ ಕಾರು ಬಂತು. ಇಳಿದು ಧಡಧಡನೆ ಮೆಟ್ಟಿಲೇರಿದ ವ್ಯಕ್ತಿಯನ್ನು ಅಂಗರಕ್ಷಕರಾದ ರಾಮ್‌ಧನ್—ಬೋಲಾನಾಥ್ ತಡೆದರು. ಬಂದವರು ನಾಯಕ್. ಪರಶುರಾಮ ಮುಖ್ಯಮಂತ್ರಿಯ ಕಡೆ ನೋಡಿದ. "ಬರಲಿ" ಎಂದಳು ಸೌದಾಮಿನಿ.

ಇಲ್ಲಿಂದಲೇ ಹೊರದಬ್ಬಲೆ ? ಒಳಗೆ ಕರೆದು ಮಾತನಾಡಿಸಲೆ ? ನಿಮಿಷದ ನಿರ್ಧಾರ.

"ಒಳಗೆ ಬನ್ನಿ ಪ್ರತಿಪಕ್ಷದ ನಾಯಕರೆ. ಆರೋಪಗಳ ಪಟ್ಟಿ ಗೋಡೆಗೆ ಅಂಟಿಸೋಣ ಅಂತ ಬಂದಿರಾ ?"

"ಪುಟ್ಟಾ !"

"ಏನಂದಿರಿ ? ಕುಡಿದ ಅಮಲಿನಲ್ಲಿದೀರಾ ?"

"ಆರೋಪದ ಪಟ್ಟಿ ವಾಪಸು ತಗೋತೀನಿ. ಒಂದೇ ಶರತ. ಒಳಗಿನ ಕೊಠಡಿಗೆ ನಡಿ."

"ನಾಲಿಗೆ ಬಿಗಿ ಹಿಡೀರಿ."

ಉದ್ವೇಗದಿಂದ ವಕ್ಷಸ್ಥಲ ಏರಿಳಿಯುತ್ತಿತ್ತು. ಒಮ್ಮೆಲೆ ನಾಯಕ ಅವಳನ್ನು ಹಿಡಿದ.

"ಬಾರೇ !"

ಮುಖ್ಯಮಂತ್ರಿಯ ಕರೆ ಕೇಳಿಸಿತು :

"ರಾಮ್‌ಧನ್, ಬೋಲಾನಾಥ್ !"

ಅವರು ಮಾತಾಜಿಯ ಕಡೆಗೆ ಧಾವಿಸಿದರು. (ನಾಯಕರಾಗಲೇ ಸೌದಾಮಿನಿಯ ತೋಳನ್ನು ಬಿಟ್ಟಿದ್ದರು.)

"ಇವರನ್ನು ಗೌರವದಿಂದ ಅವರ ಕಾರಿನಲ್ಲಿ ಕೂಡ್ರಿಸಿ."

"ಹ್ಞ ಮಾತಾಜಿ. ಬನ್ರಿ ಸಾಹೇಬರೇ," ಎಂದರು ಅಂಗರಕ್ಷಕರು.

೧೯

ಐ.ಜಿ.ಪಿ. ಹೇಳಿದರು :

"ನಿಮ್ಮ ಸಲಹೆ ಕೇಳೋಣಾಂತ ಕರೆದೆ, ದೊರೆ."

"ನಾನಾಗಿಯೇ, ಈ ಮೊದಲೇ, ಬರಬೇಕಾಗಿತ್ತು," ಎಂದ ಗುಪ್ತಚಾರ ದಳದ ಮುಖ್ಯಸ್ಥ.

"ಪೋಲೀಸರು ನೊಣ ಹೊಡೀತಿದ್ದಾರೆ, ನಿಮ್ಮವರಿಗೆ ಮಾತ್ರ ತುರಿಸೋಕೆ ಪುರಸೊತ್ತಿಲ್ಲ."

"ಒಂದು ರೀತಿಯಿಂದ ನೀವು ಹೇಳೋದು ಸರಿ. ಈಗ ನಾಟಕದ ಹೊಸ ಅಂಕ ಶುರುವಾಗಿದೆ."

"ನನ್ನ ಅವಸ್ಥೆ ಕೇಳಿ. ಸಿ.ಎಂ. ಎಂಟು ಜನ ಭಿನ್ನಮತೀಯರ ಹೆಸರು ಹೇಳಿದ್ದಾರೆ. ಹಳೇ ದಾಖಲೆಗಳನ್ನೆಲ್ಲ ಶೋಧಿಸಿ ಅವರ ಮೇಲೆ ಕೇಸ್ ದಾಖಲ್ಮಾಡಿ ಅವರೆಲ್ಲ ಕಂಬಿ ಎಣಿಸೋ ಹಾಗೆ ಮಾಡ್ಬೇಕಂತೆ. ಇದರ ಮಧ್ಯೆ ವಿಶ್ವಂಭರ—"

"ಗೊತ್ತು. ರಾಜಕೀಯದಲ್ಲಿ ಪೋಲೀಸರು ತಟಸ್ಥ ಪಾತ್ರ ವಹಿಸಬೇಕೊಂತ ಸೂಕ್ಷ್ಮ ಎಚ್ಚರಿಕೆ ನೀಡಿದ್ದಾನೆ."

"ನಮಗಂತೂ ತಂತಿ ಕಸರತ್ತೇ ಯಾವಾಗಲೂ !"

"ದಾಖಲೆಗಳನ್ನ ನೋಡಿಸಿದಿರಾ ?''

"ವಿದ್ಯಾರ್ಥಿ ದೆಶೆಯಲ್ಲಿ ಟೈಂ ಪೀಸು ಲಪಟಾಯಿಸಿದ್ದು. ರಾತ್ರಿ ಕಬ್ಬನ್‌ಪಾರ್ಕಿನಲ್ಲಿ ಕಾರು ನಿಲ್ಲಿಸಿ ತಲೆ ಹಿಡುಕನ ಜತೆ ಮಾತನಾಡಿದ್ದು, ಕೆಲಸದ ಹುಡುಗಿ ಕಳವು ಮಾಡಿದಳೊಂತ ಸುಳ್ಳು ಕಂಪ್ಲೇಂಟು ಕೊಟ್ಟದ್ದು, ಓವರ್‌ಸ್ಪೀಡಿಂಗ್. ಶಾಸಕರ ಭವನಕ್ಕೆ ಮ್ಹಾಲು ತರಿಸಿದ್ದು (ಇಬ್ಬರು). ಶಾಲೆ ನಡೆಸುತ್ತಿರೋ ಒಬ್ಬನಿಂದ ಸ್ಟಾಫಿಗೆ ಅರ್ಧ ಸಂಬಳ ಪಾವತಿ. ಒಬ್ಬಳು ಟೀಚರನ್ನು ಶಾಲೆಯ ಅಧ್ಯಕ್ಷ ತನ್ನ ಮನೆಗೆ ಕರೆಸಿದ್ದು.''

"ನನ್ನ ಡಯರಿಗಳಲ್ಲಿ ಇನ್ನೂ ಹೆಚ್ಚು ಸಾರಸ್ಯದ ಮಾಹಿತಿಗಳು ಸಿಗ್ತವೆ. ಕಳವು ಕೊಲೆ ಆರೋಪ !"

"ನಿಮ್ಮದು ಗೋಪ್ಯ. ದಾಖಲೆ ಅಂತ ಪರಿಗಣಿಸೋದಕ್ಕಾಗೋದಿಲ್ಲ. What a pity !"

"ಅಲ್ದೆ, ಈ ಶಾಸಕರೆಲ್ಲ ಮುಖ್ಯಮಂತ್ರಿ ಬೆಂಬಲಿಗರು !"

"ನಿನ್ನೆ ಸಂಜೆಗತ್ತಲಲ್ಲಿ ಮಿಸೆಸ್ ರಾಜ್ಯಪಾಲರಿಗೂ ಮುಖ್ಯಮಂತ್ರಿಗೂ ವಿರಸ ಆಯ್ತು."

"ಹೌದೆ ? ಹೇಳೀಪ್ಪಾ. ಡಯರೀಲಿರ್ಲಿ."

"ಏನವಸರ ? ಹೇಳ್ತೀನಿ."

"ಅನಂತರ, ರಾತ್ರೆ ಪ್ರತಿಪಕ್ಷದ ಮುಖಂಡನನ್ನು ಮುಖ್ಯಮಂತ್ರಿ ತಮ್ಮ ನಿವಾಸ ದಿಂದ ಹೊರಗೆ ದಬ್ಬಿಸಿದ್ದು......"

"ನಿಜವೇ ?! ಏನಾದರೂ ಮಾಡಿದನೊ ?"

"ನಿಮಗೇನು ಪ್ರಯೋಜನ ? ಆತ ಹಿಟ್‌ಲಿಸ್ಟಿನಲ್ಲಿ ಇಲ್ಲ."

"ನಿಮ್ಮ ಸಲಹೆ ಏನು ?

"ನಿಮಗೆ ತಿಳಿಯದ್ದೆ ಸಾರ್ ? ಇಬ್ಬರು ಮೂವರನ್ನು ಸ್ಟೇಷನ್ನಿಗೆ ಕರೆಸಿ. ಸಾಕು. ಮುಖ್ಯಮಂತ್ರೀದು ಈಗ ಅರಗಿನ ಮನೆ. ನಾವೆಲ್ಲ ಹುಷಾರಾಗಿರ್ಬೇಕು."

"ವಿಶ್ವಂಭರನ ಸೌದಾ–ದಸ್ತಾವೇಜು ತಯಾರಾಯ್ತೆ?"

"ಬಿಸಿದೋಸೆಯ ಹಾಗೆ ಖರ್ಚಾಗ್ತಿದೆ. ಒಂದು ಸೆಟ್ಟಿಗೆ ಐವತ್ತು ರೂಪಾಯಿ ಮುದ್ರಿತ ಬೆಲೆ. ಸಿಗೋದಿಲ್ಲ. ಕಾಳಸಂತೇಲಿ ಮೂರು ಪಟ್ಟು."

"ನಾನು ಪುಸ್ತಕ ಗಿಸ್ತಕ ಕೊಂಡವನಲ್ಲ. ಮಾರುವವರ ಅಂಗಡಿ ಮೇಲೆ ಧಾಳಿ ನಡೆಸಿ, ಒಂದು ಪ್ರತಿ ಪಡೀತೇನೆ."

"ಅಧ್ಯಕ್ಷತೆ ಖಾಲಿ ಇರೋ ನಿಗಮಗಳು ಯಾವುವು ಅಂತ ತಮಗೆ ತಿಳಿಸೋದಕ್ಕೆ ಮುಖ್ಯ ಕಾಯದರ್ಶಿ ಚೌಗುಲೆಗೆ ಸೂಚನೆ ಹೋಗಿದೆಯಂತೆ."

"ಮಾತಾಜಿ ಪರವಾಗಿಲ್ಲ. ಅಧ್ಯಕ್ಷತೆ, ಕಾರು, ಬಂಗಲೆ, ಸಂಬಳ, ಗಿಂಬಳ.... ಮಾತಾಜಿ ಭಂಡಾರದಲ್ಲಿ ನಗದು ಎಷ್ಟಿದೆಯೊ ?"

"ನಿಖರವಾಗಿ ಹೇಳೋದು ಕಷ್ಟ."

"ನಿಷ್ಠೆೀನ ಕೊಂಡುಕೋ ಬಹುದು, ನೋಡಿ. ವಿಶ್ವಂಭರನದು ಬರಿ ಮಾತಿನ ಬಡಾಯಿ ಆದರೆ ಪ್ರಯೋಜನವಿಲ್ಲ."

"ಹಾಗೇನಿಲ್ಲ. ಅವನ ಗುಂಪಿನಲ್ಲೂ ನಿಧಿ ಸಂಗ್ರಹ ಸಮರ್ಥರು ಇದ್ದಾರೆ. ವಾಗ್ದಾನಗಳನ್ನು ಮಾಡಿದರಾಯ್ತು."

"ಮಾತಾಜಿಯ ಪಾಲಿಗೆ ಈ ನಾಟಕ ದುಃಖಾಂತವಾಗುತ್ತೊ ? ಸುಖಾಂತ ವಾಗುತ್ತೊ ?"

"ಅದು ದಿಲ್ಲೀಶ್ವರರನ್ನು ಅವಲಂಬಿಸಿದೆ."

"ಅಂತೂ ಇಬ್ಬರು ಮೂವರಿಗೆ ನಾನು ಆತಿಥ್ಯ ನೀಡಲೇಬೇಕು. ಇವತ್ತು ರಾತ್ರೆ ಹಿಡಕೊಂಡು ಬರ್ತೀನಿ."

* * *

ರಾಜ್ಯಪಾಲರು ಪೈಪ್ ಚೀಪಿದರು, ಚೀಪಿದರು. ಅದರಲ್ಲಿ ತಂಬಾಕು ಇರಲಿಲ್ಲ. ಬರಲಿಲ್ಲವಲ್ಲ ಈ ಮಾತಾಜಿ? ತಮ್ಮ ಆಪ್ತ ಕಾರ್ಯದರ್ಶಿಯನ್ನು ಕರೆದು ಹೇಳಿದರು:

"ರಾಜ್ಯಪಾಲರು ಕಾಯ್ತಿದಾರೇಂತ ಸಿ ಎಂ ಗೆ ಫೋನ್ ಮಾಡು."

ಮುಖ್ಯಮಂತ್ರಿ ಕಾರ್ಯಸೌಧದಿಂದ ಹೊರಟಿದ್ದಾರೆ—ಎಂದು ಬಂತು ಉತ್ತರ.

ಆಗಮನವಾಯಿತು. ರಾಜ್ಯಪಾಲರು ಎದ್ದು ನಿಂತು ಕೈಕುಲುಕಿದರು.

"ಏನು ತಗೊಳ್ತೀರಿ ?"

"ನೀವು ನನ್ನ ವೈರಿಯಾದರೆ ವಿಷ ಕೊಡಿ ; ಸ್ನೇಹಿತನಾದರೆ ಅಮೃತ ಇರಲಿ."

"ನನ್ನಲ್ಲಿ ಎರಡೂ ಇಲ್ಲ."

"ಹಾಗಾದರೆ ಏನೂ ಬೇಡ."

"ನಿನ್ನೆ ಸಂಜೆ ಏನೋ ಹೇಳಲು ಬಂದಿರಿ, ಅಲ್ಲವ ?"

"ಅಂಥಾದ್ದೇನೂ ಇಲ್ಲ. ನಮ್ಮ ಶಾಸನಸಭಾ ಪಕ್ಷದಲ್ಲಿ ಅಪಶ್ರುತಿ ಇದೆ ಅಂತ ಯಾವನಾದರೂ ಮುಟ್ಠಾಳ ಬಂದು ಚಾಡಿ ಹೇಳಿದರೆ, ನೀವದಕ್ಕೆ ಗಮನ ಕೊಡ ಬಾರದೂಂತ ತಿಳಿಸೋದಕ್ಕೆ ಬಂದೆ."

"ಸಾಮಾನ್ಯವಾಗಿ ಭಿನ್ನಮತೀಯರ ಗುಂಪು ಎಲ್ಲ ರಾಜ್ಯಗಳಲ್ಲೂ ಇದೆ. ದಿಲ್ಲಿ ಅದಕ್ಕೆ ಹೆಚ್ಚಿನ ಮಹತ್ವ ಕೊಡೋದಿಲ್ಲ."

"ವರದಿ ಬರೆಯುವಾಗ ಈಗ ಹೇಳಿದ್ದನ್ನು ಮರೀಬೇಡಿ."

"ಪ್ರಜಾಪಕ್ಷದ ಆರೋಪಪಟ್ಟಿಗೆ ಒಂದು ನಯಾಪೈಸೆ ಬೆಲೆಯೂ ಇಲ್ಲ. ಅವರು ತಂದುಕೊಟ್ಟರೆ ಸುಮ್ಮನೆ ರಾಷ್ಟ್ರಪತಿಗೆ ಒಂದು ಪ್ರತಿ ಪೋಸ್ಟ್ ಮಾಡ್ತೇನೆ. ಅಲ್ಲಿಗೆ ನನ್ನ ಕೆಲಸ ಆಯ್ತು. ನನ್ನಿಂದ ನಿಮಗೆ ಬೇರೇನಾದರೂ ಸಹಾಯ ಆಗ಼್ಬೇಕೆ ?"

"ಸಭಾಧ್ಯಕ್ಷ ಲಕ್ಷ್ಮೀಪತಿಯನ್ನು ಮುಂದಿಟ್ಕೊಂಡು ವಿಶ್ವಂಭರ ಆಟ ಆಡ್ತಿದ್ದಾನೆ. ಅವರಿಬ್ಬರನ್ನೂ ಕರೆಸಿ ಒಂದಿಷ್ಟು ಬುದ್ಧಿ ಹೇಳ್ತೀರಾ ?"

"ವಿಶ್ವಂಭರರಿಗೆ ಹನ್ನೆರಡು ಗಂಟೆಗೆ ಟೈಮ್ ಕೊಟ್ಟಿದೆ. ಸಂತೋಷದಿಂದ ಮಾತಾಡ್ತೇನೆ."

"ವಿಶ್ವಂಭರನಿಗೆ ಯೋಗ್ಯತೆ ಇದೆ. ಮುಂದೆ ಆತನಿಗೆ ಸಂಪುಟದಲ್ಲಿ ಸ್ಥಾನ ಕೊಡೋದಕ್ಕೆ ನಾನು ಸಿದ್ಧ."

"ಈ ವಿಷಯ ಅವರಿಗೆ ಹೇಳ್ತೀನಿ."

"ಬರಲಾ ಹಾಗಾದರೆ ?" ಎಂದು ಹೇಳಿ, ಸೌದಾಮಿನಿ ಏಳುತ್ತಿದ್ದಂತೆ, ರಾಜ್ಯಪಾಲರೆಂದರು :

"ನಿನ್ನೆ ನಿಮಗೆ ಬೇಸರವಾಯ್ತೇನೊ ? ನನ್ನ ಮಿಸೆಸ್ ನಿಮಗೆ ಗೊತ್ತಲ್ಲ...."

"ಗೊತ್ತು, ಗೊತ್ತು."

ಕಾರನ್ನು ಏರುತ್ತಿದ್ದಂತೆ ಸೌದಾಮಿನಿಗೆ ರಾಜಭವನದ ಒಂದು ಕಿಟಿಕಿಯಲ್ಲಿ ರಾಜ್ಯಪಾಲರ ಪತ್ನಿಯ ಮುಖ ಕಂಡಂತಾಯಿತು. 'ಥುತ್ತೆರಿ !' ಎನ್ನುವ ಪದ ಮುಖ್ಯಮಂತ್ರಿಯ ನಾಲಗೆಯ ಮೇಲೆ ಆಡಿತು.

*　*　*

ವಿಶ್ವಂಭರ ರಾಜ್ಯಪಾಲರಲ್ಲಿಗೆ ಲಕ್ಷ್ಮೀಪತಯ್ಯನನ್ನೂ ಕರೆದುಕೊಂಡು ಬಂದಿದ್ದ. ವಿಧಾನಸಭಾಪತಿಯಾಗಿ ಲಕ್ಷ್ಮೀಪತಯ್ಯ ರಾಜ್ಯಪಾಲರಿಗೆ ಹೆಚ್ಚು ಪರಿಚಿತ. ವಿಶ್ವಂಭರನ ಮುಖ ಪರಿಚಯವಷ್ಟೇ ರಾಜ್ಯಪಾಲರಿಗಿತ್ತು.

"ಅನುಮತಿ ಇಲ್ಲದೆಯೇ ಸ್ಪೀಕರ್‌ರನ್ನು ಕರತಂದಿದ್ದೇನೆ" ಎಂದ ವಿಶ್ವಂಭರ. ರಾಜ್ಯಪಾಲರೆಂದರು :

"ನೀವು ಮಾಡಿದ್ದು ಕ್ರಮಬದ್ಧವಾಗಿದೇಂತ ರೂಲಿಂಗ್ ಕೊಡ್ತೇನೆ."

ಎಲ್ಲರೂ ನಕ್ಕರು.

ವಿಶ್ವಂಭರ ದೂರು ಕೊಟ್ಟ.

"ನನ್ನ ಕ್ಷೇತ್ರಕ್ಕೆ ರಾಜ್ಯಪಾಲರು ಬಂದೇ ಇಲ್ಲ."

"ದೀಪಾವಳಿ ಆದ್ಮೇಲೆ ಖಂಡಿತ ಬರ್ತೀನಿ."

"ದೀಪಾವಳಿಯನ್ನು ಕಿಷ್ಕಿಂಧೆ ಈ ಸಲ ಹೇಗೆ ಆಚರಿಸುತ್ತೋ ನೋಡಬೇಕು."

"ಆನೆ ಪಟಾಕಿ ಆಟಂ ಬಾಂಬ್ ಬಹಳ ಸಂಗ್ರಹಿಸ್ತಾ ಇದೀರಂತೆ."

ಭೇಟಿಗೆ ಬಂದವರ ನಗೆ ಮುಕ್ತಾಯವಾದ ಬಳಿಕ ರಾಜ್ಯಪಾಲರು ಮಾತನಾಡಿದರು :

"ವಿಶ್ವಂಭರ್, ನಿಜಸ್ಥಿತಿ ಏನೂಂತ ತಿಳಿಸಿ. ನೀವೇನೂ ಯೋಚಿಸೋದು ಬೇಡ–ರಹಸ್ಯ ಪಾಲನೆಯಲ್ಲಿ ನಾನು ನಿಸ್ಸೀಮ !"

"ತಾವು ಒಪ್ತೀರೋ ಇಲ್ಲವೊ. ಈ ಸೌದಾಮಿನಿ ಕುರಿಯ ತುಪ್ಪಳ ಹೊದ್ದುಕೊಂಡಿರೋ ಹೆಣ್ಣು ತೋಳ. ಕಿಷ್ಕಿಂಧೆಗೆ ಅಂಟಿರೋ ಪಿಡುಗು. ಒಂದು ದಾಖಲೆ ತಯಾರಿಸಿದೇವೆ. ಪರಾಂಬರಿಸಬೇಕು" ಎಂದು ಹೇಳಿ ವಿಶ್ವಂಭರ ಬ್ರೀಫ್‌ಕೇಸಿನಿಂದ ಒಂದು ಪುಸ್ತಕವನ್ನು ಹೊರತೆಗೆದು ರಾಜ್ಯಪಾಲರ ಮುಂದಿಟ್ಟ. 'ಗ್ರಂಥಕರ್ತ ವಿಶ್ವಂಭರ' ಎಂದಿತ್ತು. ರಾಜ್ಯಪಾಲರು ಹಾಳೆಗಳನ್ನು ತಿರುವಿದರು.

"ನೂರ ಅರವತ್ತೆಂಟು ಪುಟ ! ಬೆಲೆ ಇಟ್ಟಿದೀರಿ. ಶಾಸಕರಿಗೆ ಉಚಿತ ಅಂತ ತೋರ್ತದೆ !"

"ಅದು ತಮ್ಮ ಪ್ರತಿ. ನನ್ನ ಶುಭಾಶಯಗಳೊಂದಿಗೆ."

"ನಿಮಗೆ ಬೆಂಬಲ ಕೊಡುವವರು ಎಷ್ಟು ಮಂದಿ ಇದ್ದಾರೆ ?"

"ಈಗಿನ ಮುಖ್ಯಮಂತ್ರಿಯಲ್ಲಿ ಅವಿಶ್ವಾಸ ಸೂಚಿಸುವ ಪತ್ರಕ್ಕೆ ನಲ್ವತ್ತೈದು ಶಾಸಕರು ಸಹಿ ಮಾಡಿದ್ದಾರೆ. ದಿನವೂ ಐದಾರು ಜನ ನಮ್ಮ ಕಡೆ ಸೇರ್ತಿದ್ದಾರೆ. ಇದು ಮನೆ ಜಗಳ. ರಾಷ್ಟ್ರಪಕ್ಷಕ್ಕೆ ಇದರಿಂದ ಯಾವ ಹಾನಿಯೂ ಆಗಬಾರದು."

"ಹಾನಿಯಾಗೋದಿಲ್ಲ," ಎಂದ ಲಕ್ಷ್ಮೀಪತಯ್ಯ.

"ಹೆಚ್ಚಿನ ಶಾಸಕರು ಸ್ವಂತ ಊರುಗಳಿಗೆ ಹೋಗಿರಬೇಕಲ್ಲ ?"

"ಅದಕ್ಕೇ ತಡವಾಗಿದೆ. ಮೊದಲು ಈ ಪುಸ್ತಕ ಹೋಗ್ತದೆ. ಆಮೇಲೆ ಪತ್ರ. ಇಲ್ಲಿಗೆ ಬಂದು ಸಹಿ ಮಾಡ್ತಾರೆ. ಭಿನ್ನಮತೀಯರು ಅಂದ್ರೆ ಬಂಡಾಯ

ಗಾರರಲ್ಲ. ನಾವು ರಾಷ್ಟ್ರಪಕ್ಷದ ನರನಾಡಿ. ಶರೀರದೊಳಕ್ಕೆ ಸೇರಿಕೊಂಡಿರೋ ಬಾಹ್ಯ ಕಸವನ್ನು ಸಣ್ಣ ಸರ್ಜರಿಯಿಂದ ತೆಗೆದು ಹಾಕಿದರಾಯಿತು. ಈ ವಿಷಯ ವನ್ನು ದಿಲ್ಲಿಗೆ ಈಗಾಗಲೇ ತಾವು ತಿಳಿಸಬೇಕು. ಸಹಿಸಂಗ್ರಹ ಮುಗಿದ ಕೂಡಲೆ—"

"ಎರಡು ವಾರ ಹಿಡಿದೀತಾ ?"

ಉತ್ತರ ಲಕ್ಷ್ಮೀಪತಯ್ಯ ಕೊಟ್ಟ :

"ಹೊ, ಎರಡು ವಾರ ಸಾಕು."

"ನೂರು ಜನ ಸಹಿ ಮಾಡಿಯಾರು ಅಂತೀರಾ ?"

"ಎಂಬತ್ತೈದು ಗ್ಯಾರಂಟಿ. ಆಗ ನಿಚ್ಚಳ ಬಹುಮತ ನಮ್ಮದಾಗ್ತದೆ. ವಿಧಾನ ಮಂಡಲದ ವಿಶೇಷಾಧಿವೇಶನ ಕರೀಬೇಕೂಂತ ಕೇಳ್ತೀವಿ," ಎಂದು ವಿಶ್ವಂಭರ ಉತ್ತರವಿತ್ತ.

"ನಾನು ವಂಗದಲ್ಲಿದ್ದಾಗ ಇಂಥದೇ ನಡೆದಿತ್ತು. ನಾಯಕತ್ವದಲ್ಲಿ ದಿಲ್ಲಿ ಬದಲಾವಣೆ ಬಯಸ್ತದೆ ಅಂತ ಗೊತ್ತಾದ ತಕ್ಷಣ ಮೀನ ಮೇಷ ಎಣಿಸ್ತಿದ್ದವರೆಲ್ಲ ಕ್ಯೂ ನಿಂತ್ಕೊಂಡು ಹೊಸ ಶಿಬಿರಕ್ಕೆ ಬಂದ್ರು."

"ಇಲ್ಲಿಯೂ ಹಾಗೇ ಆಗ್ತದೆ," ಎಂದ ವಿಶ್ವಂಭರ.

"ಈ ಸಂಪುಟದಲ್ಲೇ ನಿಮ್ಮಲ್ಲಿ ಕೆಲವರಿಗೆ ಸ್ಥಾನ ಸಿಗೋ ಹಾಗಿದ್ರೆ ?"

"ನಾವು ಒಪ್ಪೋದಿಲ್ಲ. ಇದು ತತ್ವದ ಪ್ರಶ್ನೆ. ರಾಷ್ಟ್ರಪಕ್ಷದ ಪ್ರತಿಷ್ಠೆಗೆ ಸಂಬಂಧಿಸಿದ್ದು."

ರಾಜ್ಯಪಾಲರು ಎದ್ದು ಅತ್ತಿತ್ತ ನಡೆದರು. ಮಾತುಕತೆ ನಿಂತಿತೆಂದು ವಿಶ್ವಂಭರ ಎರಡು ಬಾರಿ ರಾಜ್ಯಪಾಲರ ಕಡೆ ನೋಡಿದ. ಅವರೆಂದರು :

"ವಿಶ್ ಯೂ ದ ಬೆಸ್ಟ್ ಆಫ್ ಲಕ್."

ಇವರು ಎದ್ದರು :

"ಎಂಭತ್ತೈದು ಆದೊಡನೆ ದಿಲ್ಲಿಗೆ ಹೋಗ್ತೀವಿ," ಎಂದರು.

* * *

ವಿಶ್ವಂಭರ ಮತ್ತು ಲಕ್ಷ್ಮೀಪತಯ್ಯ ಪತ್ರಿಕಾಗೋಷ್ಠಿ ಕರೆದರು. ಹಿಂದಿನ ರಾತ್ರಿಯಷ್ಟೆ ಮೂವರು ಶಾಸಕರ ಬಂಧನವಾಗಿತ್ತು. ಪತ್ರಿಕೆಗಳಿಗೆ ಸುದ್ದಿಯ ಸುಗ್ಗಿ.

ವಿಶ್ವಂಭರನೆಂದ :

"ಆ ಮೂವರೂ ಅವಿಶ್ವಾಸ ಸೂಚನೆಗೆ ಸಹಿ ಹಾಕಿರುವ ಭಿನ್ನಮತೀಯರು. ಇದು ಧಮುಕಿ ಹಾಕುವ ತಂತ್ರ. ನಾವು ಇದಕ್ಕೆಲ್ಲ ಹೆದರೋದಿಲ್ಲ. ಸೌದಾಮಿನಿಯೇ ರಾಷ್ಟ್ರಪಕ್ಷದ ವಿರೋಧಿ ನಂಬರ್ ಒನ್. ಸಹಮತ ಇಲ್ಲದವರನ್ನು ಬಗ್ಗು ಬಡೆಯಲು ರಾಜ್ಯಯಂತ್ರ ಬಳಸುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಎಡೆಯಿಲ್ಲ. ಕೇಂದ್ರ ತನಿಖಾ ದಳದವರು ರಹಸ್ಯವಾಗಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ."

ಒಬ್ಬ ಸುದ್ದಿಗಾರ ವಿಶ್ವಂಭರನ ಪುಸ್ತಕ ಪ್ರತಿಯನ್ನು ಎತ್ತಿ ತೋರಿಸಿ, "ಆ ತನಿಖಾದಳಕ್ಕೆ ಸಹಾಯವಾಗಲೀಂತ ಇದನ್ನು ಸಿದ್ಧಗೊಳಿಸಿದ್ದೀರಾ ?"

"ಸತ್ಯದ ಶೋಧನೆ ಮಹಾತ್ಮರ ಕಾಲದಿಂದ ನಡೆದು ಬಂದಿರುವ ಯಜ್ಞ. ಅದರಲ್ಲಿ ಯಾರೇ ತೊಡಗಲಿ ಅವರಿಗೆ ನೆರವಾಗುವುದು ಪುಣ್ಯದ ಕೆಲಸ."

"ಸೌದಾಮಿನಿ ಸಂಪುಟವನ್ನು ಉರುಳಿಸಿದ ತರುವಾಯ ನೀವು ರಚಿಸುವ ಸಂಪುಟದಲ್ಲಿ ಮುಖ್ಯಮಂತ್ರಿ ಯಾರಾಗ್ತಾರೆ ?" ಎಂದು ಕೇಳಿದನೊಬ್ಬ.

ಸ್ಪೀಕರ್ ಅಂದರು :

"ಈ ಪ್ರಶ್ನೆಗೆ ನನ್ನ ಅನುಮತಿ ಇಲ್ಲ."

ವಿಶ್ವಂಭರ ನಕ್ಕ. ವರದಿಗಾರ ತಂಡವೂ ನಕ್ಕಿತು.

ಅಷ್ಟರಲ್ಲಿ ಸುದ್ದಿ ಬಂತು :

"ಬಂಧಿತ ಶಾಸಕರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಾರಂತೆ."

ಲಕ್ಷ್ಮೀಪತಯ್ಯ ಕೆರಳಿ ನುಡಿದ :

"ಇದು ಗಾಯದ ಮೇಲೆ ಬರೆ ! ಕೋರ್ಟಿಗೆ ನೂರಾರು ಸಲ ಎಡತಾಕಿಸೋ ಹೂಟ."

* * *

ಪ್ರಜಾಪಕ್ಷದ ನಾಯಕರು ತಮ್ಮ ಆರೋಪಗಳ ಪಟ್ಟಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದರು. ಅದು ಎಂಟು ಹತ್ತು ಸಾಲುಗಳ ಸಂಕ್ಷಿಪ್ತ ಸುದ್ದಿಯಾಯಿತು.

"ನನ್ನ ಪಕ್ಷ ಚಿಕ್ಕದು ಅಂತ ಇವರಿಗೆ ತಾತ್ಸಾರ. ಇರಲಿ, ನೋಡೋಣ," ಎಂದು ನಾಯಕ್ ಕೂಗಾಡಿದರು.

ತಾನು ಪ್ರಜಾಪಕ್ಷದ ಸಹಸದಸ್ಯರೊಡನೆ ವಿಶ್ವಂಭರನನ್ನು ಸೇರಿಕೊಂಡರೆ ಹೇಗೆ ?—ಎಂಬ ಯೋಚನೆ ಬಂತು. ಮಿತ್ರರೊಬ್ಬರ ಮೂಲಕ ರಾಯಭಾರ ನಡೆಯಿತು. ಮತದಾರರು ನಿರಾಕರಿಸಿದ್ದ ಪಕ್ಷದ ಬೆಂಬಲ ವಿಶ್ವಂಭರನಿಗೆ ಬೇಕಿರಲಿಲ್ಲ. "ಸಮಯ ಪಕ್ವವಾದಾಗ ಈ ಬಗ್ಗೆ ನಿರ್ಧರಿಸೋಣ" ಎಂದು ಹೇಳಿ, ಅಡ್ಡಗೋಡೆಯ ಮೇಲೆ ದೀಪ ಇಟ್ಟ....

...ರಂಗಸ್ವಾಮಿ "ಹೈಕೋರ್ಟಿಗೆ ಹೋಗುವುದೇ ಸರಿ," ಎಂದರು, ಸೌದಾಮಿನಿಯ ಹೆಸರು ಸೌದಾಮಿನಿಯಲ್ಲ—ಸುಳ್ಳು ಹೆಸರಿನವನೊಬ್ಬಳು ಮುಖ್ಯಮಂತ್ರಿಯಾಗಿರುವುದು ಅಸಿಂಧು".

ಹೈಕೋರ್ಟು ದೂರನ್ನು ಸ್ವೀಕರಿಸಿತು. ಆದರೆ ಕಾನೂನು ಕತ್ತೆ. ಹಲವು ಸಹಸ್ರ ಮೊಕದ್ದಮೆಗಳ ಹೇರು ಅದರ ಮೇಲೆ. ತತ್ಪರಿಣಾಮವಾಗಿ ನಡಿಗೆ ಕುಂಟು,

ನ್ಯಾಯಸ್ಥಾನದಲ್ಲಿ ಸೌದಾಮಿನಿಯನ್ನು ಬೆತ್ತಲೆ ಮಾಡಲು ವರ್ಷಗಳೇ ಹಿಡಿಯ ಬಹುದು ಎನಿಸಿತು ರಂಗಸ್ವಾಮಿಗೆ.

* * *

ಸೌದಾಮಿನಿ ಸಂಪುಟದ ತುರ್ತುಸಭೆ ಕರೆದಳು, ತನ್ನ ನಿವಾಸದಲ್ಲಿ. ಮುಖ್ಯ ಕಾರ್ಯದರ್ಶಿ ಚೌಗುಲೆಗೆ ತಿಳಿಸಿರಲಿಲ್ಲ.

ಸಭೆಯಲ್ಲಿ ಸೌದಾಮಿನಿ ಕೆರಳಿದ ದಂತೇಶ್ವರಿಯಾದಳು :

"ಕಿಷ್ಕಿಂಧೆಗೆ ಕಿಚ್ಚು ಇಕ್ಕುವ ಪ್ರಯತ್ನ ನಡೀತಿದೆ. ನಿಮ್ಮ ಮೌನ ಸರಿಯಲ್ಲ. ಸೌದಾಮಿನಿ ಸಂಪುಟದಲ್ಲಿ ನಮಗೆ ಪೂರ್ಣ ವಿಶ್ವಾಸವಿದೆ; ಅಪಪ್ರಚಾರದ ಕಂತೆಗಳಿಗೆ ರಾಷ್ಟ್ರಪಕ್ಷದ ಶಾಸಕರಾಗಲೀ ಜನರಾಗಲೀ ಕಿವಿ ಕೊಡಬಾರದು ; ಸರಕಾರ ಸುಭದ್ರ ವಾಗಿದೆ... ಈ ನಿರ್ಣಯಕ್ಕೆ ಬಾಲಾಜಿ–ಸಂಗಪ್ಪ ನೀವಿಬ್ಬರೂ ನಮ್ಮ ಶಾಸಕರ ಸಹಿ ಸಂಗ್ರಹಿಸಿ, ನೋಡೋಣ."

"ಸಹಿ ಹಾಕುವವರು ಅಂಗೈ ಮುಂದಕ್ಕೆ ಚಾಚಿದರೆ ?"

"ನಾಯಿಕೆಯಲ್ಲಿ ಪಕ್ಷದಲ್ಲಿ ನಿಷ್ಠೆ ತೋರಿಸೋದಕ್ಕೆ ಲಂಚ ಕೊಡಬೇಕೇನ್ರಿ? ಸಹಿ ಹಾಕದೇ ಇರೋದು ಶಿಸ್ತಿನ ಉಲ್ಲಂಘನೆಯಾಗ್ತದೆ. ಶಿಸ್ತು ಉಲ್ಲಂಘಿಸಿದವರಿಗೆ ಏನು ಶಾಸ್ತಿ ಅನ್ನೋದು ಗೊತ್ತಿದೆ ತಾನೆ ?"

ನಾರಣಪ್ಪ ಅಂದರು :

"ಈ ಪದಗಳಿಗೆ ಗಾಂಧಿ ಬದುಕಿದ್ದಾಗಲೇ ಅರ್ಥ ಇರಲಿಲ್ಲ. ಈಗ ಅರ್ಥದ ಅರ್ಥ ಅರ್ಥವೇ. ದುಡ್ಡು ದುಗ್ಗಾಣಿ. ಚೀಲ ಬಿಚ್ಚಿ. ಕೆಲಸ ಆಗ್ತದೆ. ವಿಶ್ವಂಭರವ ಕಡೆಯವರು ಹಣ ನೀರಿನಂತೆ ಖರ್ಚು ಮಾಡ್ತಿದಾರೆ."

"ನೀರಾವರಿ ಮಂತ್ರಿ ನೀವೊ ? ವಿಶ್ವಂಭರನೊ ?"

"ಯಾರೂ ಅಲ್ಲ, ಮಾತಾಜಿ. ನೀವೇ. ಎಲ್ಲ ಕಂಟ್ರಾಕ್ಟುದಾರರೂ ಬರೋದು ನಿಮ್ಮಲ್ಲಿಗೆ. ಅಲ್ಲವಾ ?"

"ನಾನೇ ! ನಾನೇ ! ನಮ್ಮ ಪ್ರತಿಯೊಬ್ಬ ಶಾಸಕನನ್ನೂ ಇಲ್ಲಿಗೆ ಕರೆಸಿ ಸಹಿ ಪಡಿತೇನೆ !"

"ದಿಲ್ಲಿಗೆ ಹೋಗೋದಿಲ್ವ, ಮಾತಾಜಿ ?" ಎಂದು ಕೇಳಿದ ವಿದ್ಯಾಧರ.

ಸಿಡುಕು ಜಾಸ್ತಿಯಾಯಿತೆಂದು ಸೌದಾಮಿನಿ ನಗೆ ಬೀರಿದಳು.

"ನಿವೇಶನ ಕೊಟ್ಟಿದ್ದಾರೆ. ಪ್ರಧಾನಿ ಕೈಯಿಂದ ಕಿಷ್ಕಿಂಧೆ ಭವನದ ಶಂಕುಸ್ಥಾಪನೆ ಮಾಡಿಸೋಣ. ಒಂದು ಸಂಪುಟ ಸಭೇನ ಅಲ್ಲೇ ಇಟ್ಕೊಂಡರಾಯಿತು."

ಯಾರೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಮೌನ ನೆಲೆಸಿತು. ಸಹೋದ್ಯೋಗಿಗಳು

ನೆಟ್ಟ ದೃಷ್ಟಿಯಿಂದ ಮುಖ್ಯಮಂತ್ರಿಯನ್ನು ನೋಡಿದರು. ಆಕೆ ಬಿಳಿಹಾಳೆಯನ್ನು ಮುಂದಕ್ಕೆ ತಳ್ಳಿ ಅಂದರು :

"ವಿದ್ಯಾಧರ್, ಆಗ ಹೇಳಿದೆನಲ್ಲ ? ಅದನ್ನು ಬರೆದು ಬಿಡಿ. ಸಹಿ ಸಂಗ್ರಹ ಇಲ್ಲಿಂದಲೇ ಶುರುವಾಗಲಿ. ಅಂದ ಹಾಗೆ ನಮ್ಮ ಬೆಂಬಲಿಗರಿಂದ ಸಹಿ ಸಂಗ್ರಹಿಸುವುದು ನಿಮ್ಮದೇ ಹೊಣೆ."

* * *

ಆ ರಾತ್ರೆ ವಿಶ್ವಂಭರನ ಮನೆಯ ಮೇಲೆ ಕಲ್ಲುಗಳು ಬಿದ್ದುವು.

ವಿಶ್ವಂಭರನ ಫೋನ್ ಐ.ಜಿ.ಪಿ.ಯನ್ನು ಎಬ್ಬಿಸಿತು.

"ಕಿಟಕಿ ಗಾಜು ಒಡೆದಿದೆ."

"ಪೋಲೀಸ್ ರಕ್ಷಣೆ ಬೇಕೂಂತ ನಾಳೆ ಕಮಿಷನರಿಗೆ ಒಂದು ಕಾಗದ ಬರೆದು ಬಿಡಿ. ಪೋಲೀಸರನ್ನು ಬೇಕಾದರೆ ಈಗಲೇ ಕಳಿಸ್ತೇನೆ."

"ಥ್ಯಾಂಕ್ಸ್."

ಸೋಜಿಗವೆಂದರೆ ಅದೇ ರಾತ್ರೆ ಮುಖ್ಯಮಂತ್ರಿಯ ನಿವಾಸ (ಗೃಹ ಕಾರ್ಯಾಲಯ)ದ ಮೇಲೂ ಕಲ್ಲುಗಳು ಬಿದ್ದುವು.

ಫೋನ್ ಬಂದಾಗ ಐ.ಜಿ.ಪಿ.ಯ ನಿದ್ದೆ ಪೂರ್ತಿ ಕರಗಿತು. ಮುಖ್ಯಮಂತ್ರಿಯ ಸ್ವರ.

"ಕಲ್ಯಾಣನಗರದಲ್ಲಿ ಇನ್ನು ಬದುಕೋದು ಹ್ಯಾಗ್ರಿ ? ಯಾರದು ಈ ಪುಂಡಾಟಿಕೆ ? ಇವರು ಯಾರು ಅನ್ನೋದು ನಿಮಗೆ ಗೊತ್ತಿದೆ. ಬೆಳಗಾಗೋದರೊಳಗೆ ಅವರನ್ನು ಬಂಧಿಸಿ ಲಾಕಪ್ಪಿನಲ್ಲಿಟ್ಟು ವಿಚಾರಣೆ ನಡೆಸಿ. ಇದು ಕಟ್ಟಪ್ಪಣೆ."

"ಏನು ? ಏನಾಯಿತು ?" ಎಂದು ಕೇಳುತ್ತ ಐ.ಜಿ.ಪಿ.ಯ ಪತ್ನಿ ಗಡಬಡಿಸಿ ಎದ್ದರು.

"ಮೋಹಿನಿಕಾಟ ! ಮೋಹಿನಿಕಾಟ !" ಎನ್ನುತ್ತ ಐ.ಜಿ.ಪಿ ಕಮಿಷನರಿಗೆ ಫೋನ್ ಮಾಡಿ, ರೌಡಿಗಳ ಒಂದು ತಂಡವನ್ನು ಹಿಡಿದು ಕೇಂದ್ರ ಸ್ಟೇಷನಿನ ಲಾಕಪ್ಪಿನಲ್ಲಿಡಲು ಹೇಳಿದರು.

ಬೆಳಗಾಯಿತು. ಐ.ಜಿ.ಪಿ.ಗೆ ವರದಿ ಬಂತು :

"ಎರಡೂ ಕಡೆ ಕಲ್ಲೆಸೆದದ್ದು ಒಂದೇ ರೌಡಿ ತಂಡ. ಎರಡು ಕಡೆಗಳಿಂದಲೂ ಅವರು ಹಣ ಪಡೆದಿದ್ದಾರೆ."

"ಎಚ್ಚರಿಕೆ ಕೊಟ್ಟು ಬಿಟ್ಬಿಡಿ."

ವಿಶ್ವಂಭರರ ಮನೆಯ ಮೇಲೆ ಬಿದ್ದ ಕಲ್ಲುಗಳಿಗೂ ಮುಖ್ಯಮಂತ್ರಿಯ ನಿವಾಸದ ಮೇಲೆ ಬಿದ್ದ ಕಲ್ಲುಗಳಿಗೂ ಸಂಬಂಧವಿದೆಯೆ ? ಅವೆಲ್ಲ ಒಂದೇ ಬಂಡೆಯ ಮಕ್ಕಳೆ ? ಎಂಬ ಜಿಜ್ಞಾಸೆ ಆ ದಿನ ಪತ್ರಿಕಾ ವಾಚಕರಲ್ಲಿ ನಡೆಯಿತು.

ಐ.ಜಿ.ಪಿ. ಮುಖ್ಯಮಂತ್ರಿ ನಿವಾಸಕ್ಕೆ ಹೋಗಬೇಕಾಯಿತು. ಕಾವಲು ಸಿಬ್ಬಂದಿ ಹತ್ತು ಹನ್ನೆರಡು ಕಲ್ಲು ಆರಿಸಿ ಇಟ್ಟಿದ್ದರು.

ಮುಖ್ಯಮಂತ್ರಿ : "ಏನಾದರೂ ಗೊತ್ತಾಯಿತೇನ್ರಿ ?"

ಐಜಿಪಿ : "ಒಂದು ತಂಡವನ್ನು ಹಿಡಿದು ತೀವ್ರ ತನಿಖೆ ನಡೆಸಿದ್ದೇವೆ, ಮಾತಾಜಿ."

ಮುಖ್ಯಮಂತ್ರಿ ; "ಬಿಡಬೇಡಿ. ತನಿಖೆ ಮುಂದುವರಿಸಿ."

ಐಜಿಪಿ : "ನಾನೊಂದು ಸಲಹೆ ನೀಡಬಹುದೆ?"

ಮುಖ್ಯಮಂತ್ರಿ : "ಏನದು ?"

ಐಜಿಪಿ : "ಅವತ್ತು ಮೂವರು ಶಾಸಕರನ್ನು ಹಿಡಿದು ಜಾಮೀನಿನ ಮೇಲೆ ಬಿಟ್ಟೆವಲ್ಲ ? (ಎಲ್ಲ ಚಿಲ್ಲರೆ ಅಪಾದನೆ.) ಕೇಸ್‌ಗಳನ್ನು ವಾಪಸು ತೆಗೆದುಕೊಳ್ಳಲು ತಾವು ಆದೇಶವಿತ್ತರೆ, ಮುಖ್ಯಮಂತ್ರಿಯ ಬಗ್ಗೆ ಶಾಸಕರ ಮತ್ತು ಜನರ ಗೌರವ ಹೆಚ್ತದೆ."

ಮುಖ್ಯಮಂತ್ರಿ : "ಹಾಗೆಯೇ ಮಾಡಿ. ನನ್ನ ಹೃದಯ ಎಷ್ಟು ವಿಶಾಲ ಅನ್ನೋದು ಎಲ್ಲರಿಗೂ ಗೊತ್ತಾಗಲಿ."

....ಮಾರನೆಯ ಬೆಳಗ್ಗೆ ಗುಪ್ತಚಾರ ದಳದ ಮುಖ್ಯಸ್ಥ ಬಂದ.

"ನಿಮ್ಮ ದಾರಿಯನ್ನೇ ನೋಡ್ತಿದ್ದೆ...." ಎಂದಳು ಮುಖ್ಯಮಂತ್ರಿ.

"ಸಿ.ಬಿ.ಐ. ಬೇಹುಗಾರಿಕೆ ಪೂರ್ತಿಯಾಗಲೀಂತ ಎರಡು ದಿನ ತಡಮಾಡಿದೆ."

"ಆಯ್ತಾ ? ಅವರ ವರದಿ ಹೇಗಿರುತ್ತೊ ?"

"ಅಸ್ಥಿರತೆ ಇದೆ. ಅಲುಗಾಡುವ ಸ್ಥಿತಿಗೆ ಇನ್ನೂ ಮುಟ್ಟಿಲ್ಲ."

"ಅಸ್ಥಿರತೆ ತಲೆಕಾಯಿ."

"ಆದರೂ ಮಾತಾಜಿ, ತಾವೊಮ್ಮೆ ದಿಲ್ಲಿಗೆ ಹೋಗಿ ಬರೋದು ಮೇಲು ಅಂತ ತೋರ್ತದೆ."

ಸೌದಾಮಿನಿ ಸುಮ್ಮನಿದ್ದಳು. ಆದರೆ ಆ ಸಂಜೆಯೇ ದಿಲ್ಲಿಗೆ ಹಾರಲು ನಿರ್ಧರಿಸಿದಳು. ಹಿಂದಿನ ಹಾಗೆಯೇ. ರಾಮ್‌ಧನ್, ಅವಳು, ಪರಶುರಾಮ, ಬೋಲಾನಾಥ್. 'ಏನೂ ಬದಲಾಗಿಲ್ಲ—ಏನೂ' ವಾರ್ತಾ ಇಲಾಖೆ ಹೊರಡಿಸಿದ ಪತ್ರಿಕಾ ಟಿಪ್ಪಣಿಯಲ್ಲಿತ್ತು :

"ರಾಷ್ಟ್ರದ ಪ್ರಧಾನಿಯ ಕರೆ ಬಂದುದರಿಂದ ಮುಖ್ಯಮಂತ್ರಿ ದಿಲ್ಲಿಗೆ ಹೋಗಿದ್ದಾರೆ. ಇದು ಮಾಮೂಲು ಭೇಟಿ. ಇದಕ್ಕೆ ರಾಜಕೀಯ ಮಹತ್ವವಿಲ್ಲ."

ವಿದ್ಯಾಧರನಿಗೆ ಫೋನ್ ಮಾಡಿ ಮುಖ್ಯಮಂತ್ರಿ ಅಂದಳು :

"ನಿಮ್ಮ ಸಹಿ ಸಂಗ್ರಹ ಕೆಲಸ ಮುಂದುವರೀಲಿ. ಎಲ್ಲ ಶಾಸಕರಿಗೂ ಫೋನ್ ಮಾಡಿ ಕಲ್ಯಾಣನಗರಿಗೆ ಕರೆಸಿ."

೧೦

ದಿಲ್ಲಿಯಲ್ಲಿ ವಿಮಾನನಿಲ್ದಾಣಕ್ಕೆ ಫೆರ್ನಾಂಡೀಸ್ ಜೀಪ್ ತಂದಿದ್ದ. ಎರಡು ಬ್ರೀಫ್‌ಕೇಸುಗಳು ಅಂಗರಕ್ಷಕರ ವಶ ಇದ್ದುದರಿಂದ ನಿಲ್ದಾಣದಿಂದ ಹೊರಡುವುದು ತಡವಾಗಲಿಲ್ಲ.

ಕಿಷ್ಕಿಂಧೆಯ ಕುಟೀರದಲ್ಲಿ ಅಡುಗೆಯ ಶ್ರೀಪಾದ, ಟೈಪಿಸ್ಟ್ ಸಿತಾರಾ, ಜವಾನ ಮುಖ್ಯಮಂತ್ರಿಗೆ ಸ್ವಾಗತ ಬಯಸಿದರು.

ಸೌದಾಮಿನಿಯನ್ನು ಕಾಡುತ್ತಿದ್ದುದೊಂದೇ ಚಿಂತೆ: ಈಗ ತನ್ನ ಬಗ್ಗೆ ದಿಲ್ಲಿಯ ವಿವಿಧ ಪ್ರಮುಖರ ನಿಲುವೇನು ? ಸಿ ಬಿ ಐ ಅಧಿಕಾರಿಗಳು ಏನು ವರದಿ ಕೊಟ್ಟಿರುವರೊ ? ಇಲ್ಲಿನ ಎರಡು ಪತ್ರಿಕೆಗಳಲ್ಲಿ ಕಳೆದ ಎರಡು ವಾರಗಳಲ್ಲಿ ತನ್ನ ಬಗ್ಗೆ ಅಷ್ಟೊಂದು ಅನುಕೂಲಕರವಲ್ಲದ ವಾರ್ತಾಪತ್ರಗಳು ಪ್ರಕಟವಾಗಿದ್ದುವು. 'ಕಿಷ್ಕಿಂಧೆಯಲ್ಲಿ ಭಿನ್ನಮತೀಯರ ಸವಾಲು.' 'ನಾಯಕತ್ವದಲ್ಲಿ ಬದಲಾವಣೆ ಸಂಭವ?'.... ಒಂದು ಪತ್ರಿಕೆಯಲ್ಲಿ ಹೀಗೆ. ಇನ್ನೊಂದರಲ್ಲಿ ಇದೇ ಸರಣಿಯಲ್ಲಿ ಮತ್ತಿಷ್ಟು. ಜೀಪಿನಲ್ಲಿ ಕುಟೀರದತ್ತ ಬರುತ್ತಿದ್ದಾಗ ತಪ್ತವಾಗಿದ್ದ ಮೆದುಳು ಸ್ವಾಗತಿಸಿದವರನ್ನು ಕಂಡೊಡನೆ ಕರ್ತವ್ಯದ ನೆನಪು ಮಾಡಿಕೊಟ್ಟಿತು.

—"ಶ್ರೀಪಾದ ಆಚಾರ್ರು, ಚೆನ್ನಾಗಿದ್ದೀರಾ ?"

—"ಸಿತಾರಾ, ಇನ್ನೂ ಹೋಗಿಲ್ಲವೇನಮ್ಮ ಮನೆಗೆ ?"

ರೇಗುವ, ಕೂಗುವ ಅಗತ್ಯವಿಲ್ಲ, ಇಲ್ಲಿ. ಮುಗುಳುನಗೆಯ ಮುಖವಾಡವೇ ಸರಿ.

ಫೆರ್ನಾಂಡೀಸ್‌ಗೂ ಸಿತಾರಾಗೂ ಗೊತ್ತು, ಕಿಷ್ಕಿಂಧೆಯಲ್ಲೇನೋ ಕರಾಮತ್ತಿನ ರಾಜಕೀಯ ನಡೆದಿದೆ ಎಂದು. ಅದರ ಸುಳಿವು ನಾಳೆ ಸಿಗಬಹುದು.

"ಊಟ ಸಿದ್ಧವಾಗಿದೆ"ಎಂದು ಶ್ರೀಪಾದ ಫೆರ್ನಾಂಡೀಸ್‌ಗೆ ತಿಳಿಸಿದ. ಆತನಿಂದ ಪರಶುರಾಮನಿಗೆ ಸಂದೇಶ. ಆತ ಮುಖ್ಯಮಂತ್ರಿಗೆ ಬಿತ್ತರಿಸಿದ.

"ನಾನು ಕೊಂಚಡೀಲೇ ಊಟ ಮಾಡ್ತೇನೆ. ಸ್ವಲ್ಪ ಸಾಕೂಂತ ಹೇಳು."

ಫೆರ್ನಾಂಡೀಸ್‌ಗೆ ಅವಳೆಂದಳು :

"ತಡವಾಯ್ತು, ಜೀಪ್ ತಗೊಂಡು ಹೋಗಿ. ಸಿತಾರಾಗೆ ಡ್ರಾಪ್ ಕೊಡಿ, ನಾಳೆ ಬೆಳಗ್ಗೆ ಎಂಟು ಗಂಟೆಗೆ ಬಂದ್ಬಿಡಿ,"

"ಹೂಂ, ಗುಡ್‌ನೈಟ್, ಮಾತಾಜಿ,"

ಅಂಗರಕ್ಷಕರನ್ನು ಸೌದಾಮಿನಿ ಕರೆದಳು :

"ಈ ಸಲ ಬಂದ ಕೆಲಸ ನಾಳೆ ಮುಗೀತದೆ. ನಾಡದು ಸಂಜೆ ವಾಪಸು. ನೀವು ಬೆಳಗ್ಗೆ ಪರಶುರಾಮ ಸಾಹೇಬರಿಗೆ ತಿಳಿಸಿ ನಿಮ್ಮ ಮನೆಗೆ ಹೋಗಿ. ನಾಡದು ಬೆಳಗ್ಗೆ ಡ್ಯೂಟಿಗೆ ಬಂದ್ಬಿಡಿ. ಈಗ ಊಟ ಮಾಡಿ ಮಲಗಿ."

ಮಲಗಿದ ಸೌದಾಮಿನಿಗೆ ನಡುವಿರುಳು ದಾಟಿದರೂ ನಿದ್ದೆ ಬರಲಿಲ್ಲ. ನಾಳೆ ಫೋನಿನ ಬಳಿಕೆ. ನಕುಲದೇವ್‌ಜಿ ಇಲ್ಲಿಗೆ ಬರಬಹುದು. ಪ್ರಧಾನಿಯನ್ನು ಕಾಣಲೇ ಬೇಕು. ಆ! ಲೇಹ್ಯ ಮರೆತೆ....

ಎದ್ದಳು. ದೀಪ ಹಾಕಿ ಲೇಹ್ಯ ತಿಂದು, ಗುಟುಕು ನೀರು ಕುಡಿದು ಮತ್ತೆ ಹಾಸಿಗೆ ಸೇರಿದಳು.

ನಿಧಾನವಾಗಿ, ಬಹಳ ನಿಧಾನವಾಗಿ, ನಿದ್ದೆ ಬಂತು.

ಬೆಳಗ್ಗೆ ಎದ್ದವಳೇ ಮುಖಕ್ಕಿಷ್ಟು ನೀರು ಹನಿಸಿ ನಕುಲದೇವ್‌ಜಿಗೆ ತಾನೇ ಫೋನ್ ಮಾಡಿದಳು.

"ನಮಸ್ತೆ, ಅಣ್ಣ."

"ಎಲಾ! ಯಾವಾಗ ಬರೋಣವಾಯ್ತು?"

"ನಿನ್ನೆ ಸಂಜೆ ಫ್ಲೈಟಿನಲ್ಲಿ."

"ತಿಳಿಸದೆ ಬಂದಿರಲ್ಲ?"

"ಯಾಕೆ ಈ ಬಹುವಚನ?"

"ಬೇರೆ ಮುಖ್ಯಮಂತ್ರಿಗಳನ್ನು ಹೀಗೆ ಮಾತನಾಡಿಸಿ ಮಾತನಾಡಿಸಿ ರೂಢಿಯಾಗಿದೆ."

"ನಿಮ್ಮಿಷ್ಟ. ಯಾವಾಗ ಸಿಗ್ತೀರಾ? ಅಲ್ಪ ಕಾಣಿಕೆ ತಂದಿದ್ದೇನೆ. ವೈಯಕ್ತಿಕ: ನನ್ನಿಂದ ನಿಮಗೆ:"

"ನಾನೀಗ ಶ್ರೀನಗರಕ್ಕೆ ಹೊರಟಿದ್ದೇನೆ."

"ನೀನೂ ಬಾ ಅಂತ ಹೇಳೊಲ್ವ?"

"ಈ ಪ್ರವಾಸ ಪ್ರಧಾನಿಯ ಪರವಾಗಿ. ನಾನೊಬ್ಬನೇ ಮಾಡಬೇಕಾದ್ದು.... ಒಂದು ಕೆಲಸ ಮಾಡ್ತೀನಿ. ಇನ್ನು ಸ್ವಲ್ಪ ಹೊತ್ತಿನಲ್ಲಿ ಕುಟೀರಕ್ಕೆ ಬರ್ತೀನಿ."

"ಇಲ್ಲಿ ಉಪಾಹಾರ ತಗೊಳ್ಳಿ."

"ಕ್ಷಮಿಸಬೇಕು, ನಾನು ಬರ್ತಿರೋದು ಮುಖದರ್ಶನಕ್ಕೆ, ಕಾಣಿಕೆ ಸ್ವೀಕರಿಸೋದಕ್ಕೆ. ಅಷ್ಟೆ."

"ನಿಮ್ಜತೆ ಮಾತಾಡಬೇಕಲ್ಲ...."

"ನನಗೆ ಎಲ್ಲ ಗೊತ್ತಿದೆ, ಮಿನಿ. ನೀನು ಚಿಂತಿಸ್ಬೇಡ. ಎಲ್ಲ ಸರಿಹೋಗುತ್ತೆ."

"ಮಿನಿ ಅಂತಾದರೂ ಕರೆದಿರಲ್ಲ....ನೀವು ಕಾಶ್ಮೀರದಿಂದ ವಾಪಸಾಗೋದು?"

"ಎರಡು ಮೂರು ದಿನ ಬಿಟ್ಕೊಂಡು."

"ಬಾಬಾಜಿಗೆ ಈಚೆಗೆ ಫೋನ್ ಮಾಡಿದ್ದಿರಾ ?"

"ಇಲ್ಲ. ಮುಂದಿನ ತಿಂಗಳು ಅಲ್ಲಿಗೆ ಹೋಗಬೇಕೂಂತಿದೀನಿ... ಬಂದ್ಬಿಟ್ಟೆ— ಅಲ್ಲೇ ಕಾದಿರು."

ಕುಟೀರದ ಜವಾನ ಬಾಗಿಲು ತೆರೆದ. ಪರಶುರಾಮ ತನ್ನ ಲೆಕ್ಕಾಚಾರವನ್ನು ಮಾತಾಜಿಗೆ ತಿಳಿಸಿದ :

"ತಕ್ಷಣ ಹೊರಟರೆ ಇಪ್ಪತ್ತು ಮಿನಿಟು ಸಾಕು. ಈಗ ಟ್ರಾಫಿಕ್ ಇಲ್ಲ."

ಅವನ ತರ್ಕ ಸರಿಯಾಗಿತ್ತು. ಇಪ್ಪತ್ತು ಮಿನಿಟು ದಾಟುವುದರೊಳಗೇ ನಕುಲದೇವ್‌ಜಿಯ ಕಾರು ಬಂತು. ಅವರೇ ಎಡಬಾಗಿಲು ತೆರೆದು, ತಾನು ಸೀಟಿನ ಮಧ್ಯಕ್ಕೆ ಸರಿದು, ನಮಸ್ಕರಿಸುತ್ತಿದ್ದ ಸೌದಾಮಿನಿಗೆ ಒಳ ಬರಹೇಳಿದರು. ಆಕೆ ಕಾರು ಹತ್ತಿದಳು.

"ಇಷ್ಟು ಸಾಮಿಪ್ಯದ ಭಾಗ್ಯವಾದರೂ ಸಿಕ್ಕಿತಲ್ಲ.... (ಆಪ್ತ ಕಾರ್ಯದರ್ಶಿಗೆ) ಕಪ್ಪು ಸೂಟ್‌ಕೇಸ್ ತಗೊಂಡು ಬಾ."

ಅದು ಬಂತು. ಡ್ರೈವರ್ ಇಳಿದು ಹಿಂದಿನ ಬಲ ಬಾಗಿಲು ತೆರೆದ. ಸೂಟ್ ಕೇಸನ್ನು ನಕುಲದೇವ್‌ಜಿಯ ಪಾದದ ಬಳಿ ಇಟ್ಟ.

"ನೀವು ಲಾಕೋ ಮೆ ಏಕ್ ಇಸ್ತ್ರೀ," ಎಂದ ನಕುಲದೇವ್.

"ಲಾಕ್ ಅಲ್ಲ. ಕರೋಡ್ ಇದೆ ಅದರಲ್ಲಿ. ರಂಗಧಾಮನನ್ನು ಇಲ್ಲಿಂದ ಬರಿಗೈಯಲ್ಲಿ ಕಳಿಸಿ ನನಗೆ ಅನ್ಯಾಯ ಮಾಡಿದ್ರಿ."

"ಏರ್ಪಾಟು ಇರೋದೆ ಹಾಗೆ. ಎಲ್ಲ ರಾಜ್ಯಗಳಿಂದ ಖರೀದಿ ವ್ಯವಹಾರ ನಡೆಯೋದು ದಿಲ್ಲಿಯ ಮೂಲಕವೇ. ರಂಗಧಾಮ ಹೇಳಲಿಲ್ಲವ ? ನಾನು ತಿಳಿಸೋದಕ್ಕೆ ಮರೆತೆ ಅಂತ ತೋರ್ತದೆ."

ಏರ್ಪಾಟೇ ಹಾಗೆ ಎಂದಾದರೆ ಅಪಚಾರವೇನೂ ನಡೆದಿಲ್ಲ— ಎಂದು ಸೌದಾಮಿನಿಗೆ ಒಂದು ಬಗೆಯ ಸಮಾಧಾನ.

"ಪ್ರಧಾನಿಯವರನ್ನ ನಾನು ನೋಡೋದಕ್ಕೆ ವೇಳೆ ಗೊತ್ಮಾಡ್ಕೊಡಿ."

"ಸಾಧ್ಯವೇ ಇಲ್ಲ, ಎರಡು ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಎರಡು ವಾರಗಳಿಂದ ಸಂದರ್ಶನಕ್ಕಾಗಿ ಕಾದಿದ್ದಾರೆ. ಲೋಕಸಭೆಯ ಮುಂದಿನ ಅಧಿವೇಶನಕ್ಕೆ ಮುಂಚೆ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರಿಯಬೇಕು—ಅಂತ ಹೇಳ್ತಾ ಇದ್ರು."

"ಕಿಷ್ಕಿಂಧಾ ಭವನದ ಶಂಕುಸ್ಥಾಪನೆ, ಪ್ರಧಾನಿಯ ಕಿಷ್ಕಿಂಧಾ ಪ್ರವಾಸ ಎಲ್ಲ ಮುಂದಕ್ಕೆ ಬಿದ್ದ ಹಾಗೆ."

"ನಿಮ್ಮ ರಾಜ್ಯದ ವಿಷಯದಲ್ಲಿ ಸಿ.ಬಿ.ಐ. ವರದಿ ಬಂದಿದೆ. ಅದು ಪ್ರಧಾನಿ ಕೈಯಲ್ಲಿದೆ. ಬೇರೆ ವರದಿಗಳೂ ಬಂದಿವೆ. ಪ್ರತಿಪಕ್ಷ ಸಲ್ಲಿಸಿದ ಆರೋಪಗಳ ಪಟ್ಟಿಯನ್ನು ಕೆಳ ಹಂತದಲ್ಲೇ ನಾನು ಮೊಟ್ಟಿದೆ. ಆದರೆ, ನಮ್ಮ ಪಕ್ಷದವರಿಂದಲೇ ದೂರು ಬಂದರೆ, ಒಂದಿಷ್ಟು ಗಮನ ಕೊಡದೆ ಇರೋದಕ್ಕಾಗೊಲ್ಲ."

"ಪ್ರಧಾನಿಯ ಆಪ್ತ ಕಾರ್ಯದರ್ಶಿಯ ಕೈಯಲ್ಲಿ ನನ್ನದೊಂದು ಮನವಿ ಕೊಟ್ಟು ಹೋಗ್ತೇನೆ."

"ನಿನ್ನಿಷ್ಟ."

"ರಾಷ್ಟ್ರಪಕ್ಷದ ಅಧ್ಯಕ್ಷರನ್ನು ಭೇಟಿಯಾಗಲಾ ?"

"ಬೇಡ. ಅವರಿಗೂ ಪ್ರಧಾನಿಗೂ ವಿರಸ. ನೀನು ಮುದುಕನನ್ನು ಭೇಟಿಯಾದದ್ದು ಗೊತ್ತಾದರೆ ಪ್ರಧಾನಿ ಕೆಂಡವಾಗ್ತಾರೆ."

"ನೀವೊಬ್ಬರೇ ನನ್ನ ಹಿತೈಷಿ. ನನಗೆ ಏನು ಸಲಹೆ ಕೊಡ್ತೀರಿ ?"

ನಕುಲದೇವ್ ಕೈಗಡಿಯಾರ ನೋಡಿದ.

"ನಿಮ್ಮ ಸ್ಥಾನ ಭದ್ರ ಪಡಿಸಿಕೊಳ್ಳಿ. ಶಾಸಕರಲ್ಲಿ ಬಹುಸಂಖ್ಯಾಕರು ನಿಮ್ಮ ಕಡೆ ಇರುವಂತೆ ನೋಡಿಕೊಳ್ಳಿ. ಅದಕ್ಕೆ ಏನೇನು ಕ್ರಮ ಅಗತ್ಯವೋ ಆ ಕ್ರಮ ತೆಗೆದುಕೊಳ್ಳಿ."

"ನೀವು ಕಾಶ್ಮೀರದಿಂದ ಬಂದ ಮೇಲೆ ಪ್ರಧಾನಿಗೆ ನನ್ನ ಪರವಾಗಿ ಒಂದು ಮಾತು ಹೇಳಿ."

"ಹೇಳದೆ ಇರ್ತೀನಾ ?"

"ಕಿಷ್ಕಿಂಧೆ ರಾಜ್ಯಪಾಲರಿಗೂ ಫೋನ್ ಮಾಡಿ. ಚೌಗುಲೆಯಿಂದಂತೂ ನಾನು ಪೂರ್ಣ ಸಹಾಯ ನಿರೀಕ್ಷಿಸ್ತೇನೆ. ಆತನಿಗೂ ನೀವೊಮ್ಮೆ ಫೋನ್ ಮಾಡಿದರೆ ಕೃತಜ್ಞಳಾಗ್ತೇನೆ."

"ಭಿನ್ನಮತೀಯರ ಕಿರಿಚಾಟದಿಂದ ಗಾಬರಿಯಾದೆಯ ? ರಾಜಕೀಯದಲ್ಲಿ ಇದೆಲ್ಲ ಸಾಮಾನ್ಯ, ಮಿನಿ."

"ನನಗಿದೆಲ್ಲ ಹೊಸದು."

"ಹೊತ್ತಾಯ್ತು, ಹೋಗ್ತೀನಿ. ಕಾಣಿಕೆಗಾಗಿ ಥ್ಯಾಂಕ್ಸ್. ನನ್ನ ಮರುಕಾಣಿಕೇನ ಮುಖ್ಯಮಂತ್ರಿಗಳ ಸಭೆಗೆ ನೀವು ಬಂದಾಗ ಸಲ್ಲಿಸ್ತೀನಿ."

ಸೌದಾಮಿನಿ ಇಳಿದಳು. ಬಾಗಿಲು ಮುಚ್ಚಿಕೊಂಡಿತು. ಅದರಲ್ಲಿ ಕಿಟಕಿ ಗಾಜು ಭದ್ರವಾಗಿತ್ತು. ಮಾತನಾಡಿಯೂ ಪ್ರಯೋಜನವಿಲ್ಲ. ಆ ಮಾತು ಒಳಗಿನವರಿಗೆ ಕೇಳಿಸುವುದಿಲ್ಲ. ಮೋಹಕ ನಗೆ ಬೀರಲು ಯತ್ನಿಸುತ್ತ ಕೈ ಜೋಡಿಸಿದಳು. ಆತ ಅಂಗೈಯ ಬೆರಳು ತುದಿಗಳನ್ನು ತುಟಿಗೆ ಮುಟ್ಟಿಸಿದ.

* * *

ನಕುಲದೇವ ಹೋದ ಸ್ವಲ್ಪ ಹೊತ್ತಿನಲ್ಲಿ ಫೆರ್ನಾಂಡೀಸ್ ಮತ್ತು ಸಿತಾರಾ ಬಂದರು. ರಾಷ್ಟ್ರಪಕ್ಷದ ಕಾರ್ಯದರ್ಶಿ ಬಂದು ಹೋದರೆಂದು ತಿಳಿದಾಗ, ಕಿಷ್ಕಿಂಧೆಯ ಮೇಲೆ ಕವಿದಿರುವ ಮೋಡಗಳು ಚೆದರಿ ಹೋಗಲೂಬಹುದು,' ಎಂದುಕೊಂಡರು.

ರಂಗಧಾಮ ಜರ್ಮನಿಗೆ ಹೋಗುವುದಕ್ಕೆ ಮುಂಚೆ ಮತ್ತು ಮರಳಿದ ಮೇಲೆ ಕುಟೀರದಲ್ಲಿ ವಸತಿ ಮಾಡಿದ ದಿನಗಳನ್ನು, ಆತ ಸೆಂಟ್ ನೀಡಿದುದನ್ನು, ಸಿತಾರಾ ಮರೆಯುವಂತಿರಲಿಲ್ಲ. ಆ ಯುವ ಮಂತ್ರಿಗೆ ಅವಳು ಎಷ್ಟು ಇಷ್ಟವಾದಳೆಂದರೆ, ಎರಡನೆಯ ದಿನವೇ "ಸಿತಾರಾ, ನಿನ್ನನ್ನು ಬಿಟ್ಟಿರಲಾರೆ" ಎಂದಿದ್ದ ಆತ. "ಫುಲ್ ಟೈಮ್ ಉದ್ಯೋಗ ನೀಡಿ ಖಾಯಂ ಮಾಡುವಂತೆ ಏರ್ಪಡಿಸ್ತೀನೆ. ಆಮೇಲೆ ಕಲ್ಯಾಣ ನಗರದ ಕಾರ್ಯಸೌಧಕ್ಕೆ ವರ್ಗಮಾಡಿಸಿಕೊಂಡರಾಯ್ತು" ಎಂದು ಪ್ರೀತಿಯಿಂದ ನುಡಿದಿದ್ದ.

"ನೀವು ಮಾತಾಜಿಯ ಅಚ್ಚು ಮೆಚ್ಚಿನವರಲ್ಲವೆ?" ಎಂದು ಮೆಲುದನಿಯಲ್ಲಿ ಕೇಳಿದ್ದಳು.

"ಛೆ! ಛೆ! ನನ್ನನ್ನು ಕಂಡರಾಗೋದಿಲ್ಲ ಆ ತಾಯಿಗೆ."

"ಕಿಷ್ಕಿಂಧೆಯ ಎಂ ಎಲ್ ಎ ಗಳು ಬಂದರೆ ನಿನಗೆ ತೊಂದರೆ ಕೊಡ್ತಾರೊ ?"

"ಇಷ್ಟರ ತನಕ ಅಂಥದೇನೂ ಇಲ್ಲ. ಅವರ ಜತೆ ಪತ್ನಿಯರೋ ಗೆಳತಿಯರೋ ಇದ್ದೇ ಇರ್ತಾರೆ. (ನೀವು ಮುಟ್ಟುವ ತನಕ ನಾನು ಕನ್ಯೆಯಾಗಿಯೇ ಇದ್ದೆ.)"

ಫೆರ್ನಾಂಡೀಸ್ ಸಾಕಷ್ಟು ಜೀವನಾನುಭವಿ. ರಂಗಧಾಮನೊಂದಿಗೆ ಆದ ಸಂಭಾಷಣೆಯನ್ನು ಸಿತಾರಾ ತಿಳಿಸಿದಾಗ, "ವರ್ಗ ಗಿರ್ಗ ಬೇಡ. ಇಲ್ಲಿಯೇ ಫುಲ್ ಟೈಮ್ ಆಗಿರು" ಎಂದಿದ್ದ.

ಇವತ್ತು ಬರುತ್ತ ಹೇಳಿದ್ದ :

"ಫುಲ್‌ಟೈಮ್ ಉದ್ಯೋಗದ ವಿಷಯ ನೀನೊಂದು ಅರ್ಜಿ ಕೊಡು. ಎರಡು ಭಡ್ತಿ ನೀಡಿ ಸಂಪರ್ಕಾಧಿಕಾರಿ ಮಾಡಿ ಅಂತ ನಾನೊಂದು ಅರ್ಜಿ ಕೊಡ್ತೇನೆ. ನಮ್ಮ ಅದೃಷ್ಟ ಚೆನ್ನಾಗಿದ್ದರೆ ಇಬ್ಬರದಕ್ಕೂ ಹೆಬ್ಬೆಟ್ಟು ಒತ್ತುತ್ತಾರೆ. ಪರಶುರಾಮ ಹೇಗೂ ನನ್ನ ಸ್ನೇಹಿತ. ಅರ್ಜಿಗಳನ್ನು ಕಲ್ಯಾಣನಗರಕ್ಕೆ ತಗೊಂಡು ಹೋಗ್ತಾನೆ."

ರಾತ್ರೆ ನಿದ್ದೆ ಕೈಗೊಟ್ಟುದರಿಂದ ಬೆಳಗ್ಗೆ ಯೋಗಾಭ್ಯಾಸ ಸಾಧ್ಯವಾಗಿರಲಿಲ್ಲ. ಈಗ ಬಿಸಿನೀರಿನಲ್ಲಿ ಸೌದಾಮಿನಿ ಸ್ನಾನ ಮಾಡಿದಳು. ಹಿತವೆನಿಸಿತು.

"ಪತ್ರಿಕೆಗಳನ್ನು ತಂದಿದೇನೆ" ಎಂದ ಫೆರ್ನಾಂಡೀಸ್.

"ಇಟ್ಟಿರು. ಆಮೇಲೆ ಓದ್ತೀನಿ. ಈಗ ಒಂದು ಅರ್ಜೆಂಟ್ ಕೆಲಸ ಇದೆ. ನೀನು, ಸಿತಾರಾ ಮತ್ತು ಪರಶುರಾಮ್ ಬನ್ನಿ."

ಅವರು ಬಂದರು. ಕುಳಿತುಕೊಳ್ಳಲು ಹೇಳಿ ಸೌದಾಮಿನಿ ಅಂದಳು :

"ಬೆಳಗ್ಗೆ ನಕುಲದೇವ್‌ಜಿ ಪ್ರಧಾನಿಯಿಂದ ಒಂದು ಸಂದೇಶ ತಂದ್ರು. ಕಿಷ್ಕಿಂಧೆಯ ಈಗಿನ ಪರಿಸ್ಥಿತಿ ಮೇಲೆ ಒಂದು ವರದಿ ಬೇಕಂತೆ. ಇವತ್ತು ಸಂಜೆ ಐದರೊಳಗೆ ಅವರ ಕೈ ಸೇರಬೇಕಂತೆ. ಆಪ್ತ ಕಾರ್ಯದರ್ಶಿಗೆ ತಲಪಿಸೋಕೆ ಹೇಳಿದ್ದಾರೆ. ಪ್ರಧಾನಿಗೆ ಇವತ್ತು–ನಾಳೆ ಬಿಡುವಿಲ್ಲ. ನಾನೋ ನಾಳೆ ಸಂಜೆಯೇ ದಿಲ್ಲಿ ಬಿಡಬೇಕು.

ನಾಳೆ ರಾತ್ರಿ ಕಲ್ಯಾಣನಗರದಲ್ಲಿ ಸಂಪುಟದ ಸಭೆಯಿದೆ. ಟಿಪ್ಪಣಿ ಕೊಡ್ತೇನೆ. ಅದರ ಆಧಾರದ ಮೇಲೆ ಒಂದು ಮನವಿ ಡ್ರಾಫ್ಟ್ ಹಾಕಿ ನನಗೆ ತೋರಿಸಿ."

"ಸರಿ, ಮಾತಾಜಿ" ಎಂದ ಫೆರ್ನಾಂಡೀಸ್.

"ಸಿತಾರಾ ನೀನು ಶೀಘ್ರಲಿಪೀಲಿ ಬರಕೊ."

"ಹೂಂ, ಮಾತಾಜಿ."

'ರಾಷ್ಟ್ರದ ಪ್ರಧಾನಿಯವರ ಸನ್ನಿಧಿಗೆ ವಿಜ್ಞಾಪನೆಗಳು ಇತ್ಯಾದಿ....ಇಂಥವರಿಂದ ನೊಂದ ಮನಸ್ಸಿನಿಂದ ಈ ಮನವಿ ಪತ್ರ ಬರೆಯುತ್ತಿದ್ದೇನೆ. ತಮಗೆ ಬಿಡುವಿಲ್ಲದ ಕಾರಣ ಈ ಲಿಖಿತ ಮನವಿ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಪ್ಯಾರಾ: ಕಿಷ್ಕಿಂಧೆಯಲ್ಲಿ ಈ ಕೆಲ ಸಮಯದಿಂದ ಆಗಿರುವ ಘಟನಾವಳಿಯನ್ನು ಹೀಗೆ ನಿರೂಪಿಸಬೇಕು. ಪ್ಯಾರಾ ಒಂದು (ಅಂಕೆಯಲ್ಲಿ) : ಕಿಷ್ಕಿಂಧೆಯಲ್ಲಿ ಮಹಾಚುನಾವಣೆಯಲ್ಲಿ ನಮ್ಮ ಪಕ್ಷ ಗಳಿಸಿದ ಪ್ರಚಂಡ ವಿಜಯ. ತಮ್ಮ ಆಶೀರ್ವಾದವೂ ನನ್ನ ಅಸಂಖ್ಯ ಹಿಂಬಾಲಕರ ಅವಿಶ್ರಾಂತ ದುಡಿಮೆಯೂ ಅಂಥ ವಿಜಯವನ್ನು ಸಾಧ್ಯಗೊಳಿಸಿದುವು. ಪ್ಯಾರಾ ಎರಡು : ನಾಯಿಕೆಯಾಗಿ ನನ್ನ ಸರ್ವಾನುಮತದ ಆಯ್ಕೆ. ಪ್ಯಾರಾ ಮೂರು : ಸಂಪುಟದ ರಚನೆ. ಪ್ಯಾರಾ ನಾಲ್ಕು : ಕಿಷ್ಕಿಂಧೆಯ ಸರ್ವಾಂಗೀಣ ಉನ್ನತಿಗಾಗಿ ಸೌದಾಮಿನಿ ಪ್ರಣಾಳಿಕೆಯನ್ನು ರೂಪಿಸಿದ್ದು. ಪ್ಯಾರಾ ರಾಷ್ಟ್ರೀಯ ಭಾವೈಕ್ಯ.... ಮತೀಯ ಸೌಹಾರ್ದ.... ಹಿಂದುಳಿದವರ ಉನ್ನತಿಗಾಗಿ ಕರೆ... ಲಾಭ ಬಡಕರನ್ನೂ ಕಳ್ಳ ಸಂತೆಯವರನ್ನೂ ಬಗ್ಗುಬಡಿಯುವ ಆಶ್ವಾಸನೆ.... ನಿಮ್ಮಲ್ಲಿ ಸೌದಾಮಿನಿ ಪ್ರಣಾಳಿಕೆಯ ಪ್ರತಿ ಇದೆ ಅಲ್ಲವೆ ? (ಫೆರ್ನಾಂಡೀಸ್ : "ಇದೆ") ಆದರಿಂದ ವಾಕ್ಯಗಳನ್ನು ಎತ್ತಿಕೊಳ್ಳಿ. ಪ್ಯಾರಾ : ಬಜೆಟ್ ಅಧಿವೇಶನ. ಪ್ಯಾರಾ: ಕೊರತೆಯದಾದರೂ ಪ್ರಗತಿಪರವಾದ ಮುಂಗಡ ಪತ್ರ. ಪ್ಯಾರಾ: ಪಕ್ಷದ ಕಾರ್ಯಮಾಡದೆ ಬರಿಯ ಅಧಿಕಾರವನ್ನು ಕೆಲವರು ಬಯಸಿದರು. ನಾವು ಇಡಿಯ ರಾಷ್ಟ್ರದ ಪಕ್ಷಕ್ಕಾಗಿ ಪ್ಯಾರಾ : ನಿಧಿ ಸಂಗ್ರಹಿಸಿ ಪ್ರತಿ ತಿಂಗಳೂ ಸಂದಾಯ ಮಾಡುತ್ತಿರುವುದು ತಮಗೆ ತಿಳಿದಿದೆ. ಪ್ಯಾರಾ: ಮನುಷ್ಯ ಸಹಜವಾದ ದುರಾಶೆಯಿಂದ ಕೆಲ ಮಂತ್ರಿಗಳಿಂದ ಕರ್ತವ್ಯಲೋಪ ನಡೆಯಿತು. ಸ್ವಂತಕ್ಕಾಗಿ ಹಣ ಸಂಗ್ರಹಿಸುವುದು: ತಮ್ಮ ಬೆಂಬಲಿಗರ ಬಣ ಕಟ್ಟುವುದು ಇಂಥ ಮಾಮೂಲೀ ಚಿಲ್ಲರೆ ಕೆಲಸಗಳು ಶುರುವಾದುವು. ವಿಶ್ವಂಭರ ಎಂಬ ಅತ್ಯಂತ ಮಹತ್ವಾಕಾಂಕ್ಷಿ ಪಕ್ಷದ ಶಿಸ್ತನ್ನು ಉಲ್ಲಂಘಿಸಿದ. ಪ್ಯಾರಾ: ವಿಧಾನ ಸಭಾಪತಿ ಲಕ್ಷ್ಮೀಪತಿಗೆ ಆಮಿಷ ಒಡ್ಡಿದ.... ಬೇಜಾರು... ಪರಶುರಾಮ್ ನಿನಗೆ ಗೊತ್ತಲ್ಲಪ್ಪ ಈ ದಾರುಣ ಕಥೆ. ಯಾವ ರಂಜನೆಯೂ ಇಲ್ಲದೆ ನೇರ ಪದಗಳಲ್ಲಿ ಭಿನ್ನಮತೀಯರೆಂದು ಕರೆದುಕೊಂಡಿರುವ ಸ್ವಾರ್ಥಿಗಳ ಚಟುವಟಿಕೆಯ ವಿಷಯ ಬರೆ. ಅದಾದ ಮೇಲೆ, ಜಲವಿದ್ಯುತ್ ಯೋಜನೆ, ಕೈಗಾರಿಕೋದ್ಯಮಗಳ ಸ್ಥಾಪನೆ, ನೀರಾವರಿ ಈ ದಿಕ್ಕಿನಲ್ಲಿ ನಡೆದಿರುವ ಕೆಲಸಗಳನ್ನು ವಿವರವಾಗಿ ತಿಳಿಸು. ಪ್ಯಾರಾ: ಅಂತ್ಯದಲ್ಲಿ :

ಕಳಕಳಿಯ ಮನವಿ. ಪಕ್ಷದ ಮತ್ತು ಸರಕಾರದ ವೈರಿಗಳ ಚಟುವಟಿಕೆಯನ್ನು ಕಡೆ ಗಣಿಸುವಂತಿಲ್ಲ. ಕಟ್ಟುನಿಟ್ಟಾದ ಶಿಸ್ತುಪಾಲನೆ ಇಲ್ಲದಿದ್ದರೆ ಪಕ್ಷಕ್ಕೆ ಧಕ್ಕೆಯುಂಟಾಗುತ್ತದೆ. ಶಿಸ್ತು ಉಲ್ಲಂಘಿಸಿದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ತಮ್ಮ ಅನುಮತಿ ಬೇಕು. ತಾವು ನನ್ನ ಧುರೀಣರು. ಈ ಜೀವದಲ್ಲಿ ಉಸಿರು ಇರುವವರೆಗೂ ತಮಗೆ ನಿಷ್ಠೆಯಿಂದ ಇರುತ್ತೇನೆ. ತಮ್ಮ ಬೂಟಿನ ಲೇಸ್ ಕಟ್ಟುವುದಕ್ಕೂ ಬಿಚ್ಚುವುದಕ್ಕೂ ನಾನು ಸಿದ್ಧ. ತಮ್ಮ ಪಾದ ಧೂಳಿ ನನ್ನ ಶಿರಸ್ಸಿನ ಮೇಲಿರಲಿ. ತಮ್ಮಿಂದ ಉತ್ತರವನ್ನಾಗಲೀ ಫೋನ್ ಕರೆಯನ್ನಾಗಲೀ ಇದಿರು ನೋಡುತ್ತೇನೆ. ಇತಿ ತಮ್ಮ ಇತ್ಯಾದಿ ಇತ್ಯಾದಿ. ಪಿ.ಎಸ್ : ನಾಳೆ ಸಂಜೆಯ ಫ್ಲೈಟಿನಲ್ಲಿ ಕಲ್ಯಾಣನಗರಕ್ಕೆ ವಾಪಸಾಗುತ್ತೇನೆ.... ಮಧ್ಯೆ ಮಧ್ಯೆ ವಿವರ ಸೇರಿಸಿಕೊಳ್ಳಿ. ಪತ್ರ ತೀರಾ ಚಿಕ್ಕದಾಗಲೂ ಬಾರದು, ತೀರಾ ದೊಡ್ಡದಾಗಲೂ ಬಾರದು... ಇನ್ನು ಎರಡು ಗಂಟೆಯೊಳಗೆ ಡ್ರಾಫ್ಟ್ ನನ್ನ ಕೈ ಸೇರಬೇಕು. ಫೋನ್ ಬಂದರೆ ನಾನೇ ಎತ್ಕೊಳ್ತೀನಿ."

ಫೆರ್ನಾಂಡೀಸ್ ; "ಈಗ ತಮ್ಮ ಕೊಠಡಿಯಲ್ಲೇ ಪ್ಲಗ್ ಇದೆ. ಫೋನ್ ಅಲ್ಲಿಯೇ ಇಡ್ತೇನೆ."

ಸೌದಾಮಿನಿ : "ಪ್ಲಗ್ ಹಾಕಿಸಿದೀರಾ ? ಫೈನ್ ನೀವು ಶುರುಮಾಡಿ ಡ್ರಾಫ್ಟಿಂಗ್ ಸಿತಾರಾ. ಫೆರ್ನಾಂಡೀಸ್, ಫೋನ್ ಅಲ್ಲೇ ಇರಲಿ. ಯಾವುದಾದರೂ ಪತ್ರಿಕೆಯವರಿಂದ ಫೋನ್ ಬಂದರೆ ಸ್ವತಃ ನಾನು ಉತ್ತರಿಸೋದು ಸರಿಯಲ್ಲ. ಯಾರು ಕೇಳಿದರೂ ಕಿಷ್ಕಿಂಧೆಯ ಮುಖ್ಯಮಂತ್ರಿ ಸೌದಾಮಿನಿ ದೇವಿ ಇಲ್ಲಿಗಿನ್ನೂ ಬಂದಿಲ್ಲ—ಅನ್ನಿ. ಸಂದೇಶ ಇದ್ದರೆ ಬರಕೊಳ್ಳಿ.

ತನ್ನ ಕೊಠಡಿಯ ಬಾಗಿಲು ಮುಚ್ಚಿ, ಸೌದಾಮಿನಿ ಪತ್ರಿಕೆಗಳನ್ನು ತೆರೆದಳು. ಕಿಷ್ಕಿಂಧೆಯ ಮುಖ್ಯಮಂತ್ರಿ ದಿಲ್ಲಿಗೆ ಪ್ರಯಾಣ ಬೆಳೆಸಿದರು. ಪ್ರಧಾನಿಯನ್ನು ಭೇಟಿ ಮಾಡುವ ಕಾರ್ಯಕ್ರಮವಿದೆ—ಎಂಬ ಒಂದು ವಾರ್ತೆ ಸಿಕ್ಕಿತು. ಗೋವಾದಲ್ಲಿ ಚಲೇ ಜಾವ್ ಚಳವಳಿ....

ಓದಲು ಬೇಸರ. ಕಲ್ಯಾಣನಗರದ ಸುದ್ದಿ ಏನಾದರೂ ಇದೆಯೆ ಎಂದು ಹುಡುಕಿದಳು. ಅಷ್ಟೆ.

ಕಿಷ್ಕಿಂಧಾ ಸಾಹಿತ್ಯ ಲೋಕದ ಒಂದು ದಿಗ್ಗಜ ಉರುಳಿತ್ತು. ತುಂಬಲಾಗದ ನಷ್ಟ. ಮುಖ್ಯಮಂತ್ರಿ ಸಂತಾಪ ವ್ಯಕ್ತಪಡಿಸಬೇಕು. ವಾರ್ತಾ ಇಲಾಖೆಗೆ ಫೋನ್ ಮಾಡಿದರಾಯಿತು. ಅವರು ಪತ್ರಿಕೆಗಳಿಗೆ ಮುಖ್ಯಮಂತ್ರಿಯ ಹೇಳಿಕೆ ನೀಡುತ್ತಾರೆ.

* * *

....ಮನವಿ ಪತ್ರದ ಕರಡು ಪ್ರತಿ ಬಂತು. ಸೌದಾಮಿನಿಗೆ ಅದು ಮೆಚ್ಚುಗೆಯಾಯಿತು.

"ನಿಮ್ಮಲ್ಲಿ ಸೊಗಸಾಗಿ ಟೈಪ್ ಮಾಡುವವರು ಯಾರು ?"

"ಸಿತಾರಾ," ಎಂದ ಫೆರ್ನಾಂಡೀಸ್.

"ಮೂರು ಪ್ರತಿ ಮಾಡಮ್ಮ. ನೀವು ಫೆರ್ನಾಡೀಸ್, ಕಲ್ಯಾಣನಗರಕ್ಕೆ ಒಂದು ಲೈಟ್ನಿಂಗ್ ಕಾಲ್ ಹಾಕಿ—ವಾರ್ತಾ ಇಲಾಖೆಯ ನಿರ್ದೇಶಕನಿಗೆ. ಇಲ್ಲಿದೆ ನೋಡಿ, ಒಬ್ಬ ಸಾಹಿತಿ ಸತ್ತ ಸುದ್ದಿ. ಮುಖ್ಯಮಂತ್ರಿಯ ಸಂತಾಪ ವ್ಯಕ್ತ ಪಡಿಸಿ ಒಂದು ಪ್ರತಿಕಾ ಪ್ರಕಟಣೆ ಹೊರಡಿಸಲಿ."

ಪರಶುರಾಮ ಮುಖ್ಯಮಂತ್ರಿಯ ಇನ್ನೊಂದು ಸೂಟ್‌ಕೇಸಿನಿಂದ ಲೆಟರ್ ಪ್ಯಾಡ್ ತೆಗೆದು, ಸಿತಾರಾಗೆ ಕೊಟ್ಟ. ಆಕೆ ಟೈಪ್‌ರೈಟರ್ ಬಳಿಗೂ ಫೆರ್ನಾಂಡೀಸ್ ಟೆಲಿಫೋನಿನ ಹತ್ತಿರಕ್ಕೂ ಸರಿದರು.

ಪ್ರಧಾನಿಯ ಕಾರ್ಯಾಲಯಕ್ಕೆ ಹೋಗಬೇಕಾದ ಲಕೋಟೆ ಸಿದ್ಧವಾದ ಮೇಲೆ ಮುಖ್ಯಮಂತ್ರಿ ಊಟಕ್ಕೆ ಕುಳಿತಳು. ಶ್ರೀಪಾದನೇ ಬಂದು ಹೇಳಿದ್ದ :

"ಮಾತಾಜಿ ಭೋಜನಕ್ಕೆ ದಯಮಾಡಿಸಬೇಕು."

'ರುಚಿಕರ ಅಡುಗೆ. ಒಂದು ತುತ್ತು ಹೆಚ್ಚು ಉಂಡರೇನು ? ಇನ್ನು ನಾನು ಟೆನ್ನಿಸ್ ಆಡುವುದು ಅಷ್ಟರಲ್ಲೇ ಇದೆ. ಇನ್ನು ಇರೋದು ಹೋರಾಟಃ ಕೈ ಕಾಲು ಗಳಲ್ಲಿ ಒಂದಿಷ್ಟು ಶಕ್ತಿ ಇದ್ದರಲ್ಲವೆ ಮೇಲು?' ಎಂದು ಸೌದಾಮಿನಿ ಯೋಚಿಸಿದಳು. 'ಇಷ್ಟು ಬೇಗ ಸೋಲು ಒಪ್ಕೊಳ್ತೀಯಾ ?' ಎಂದು ಒಳದನಿ ಕುಟುಕಿತು. 'ಇವತ್ತು ರಾತ್ರಿ ಬಾಬಾಜಿಗೆ ಫೋನ್ ಮಾಡಬೇಕು' ಎಂದುಕೊಂಡಳು.

ಸಿಬ್ಬಂದಿಯ ಊಟವೂ ಆದ ಮೇಲೆ ಫೆರ್ನಾಂಡೀಸ್‌ನನ್ನು ಸೌದಾಮಿನಿ ಕರೆದಳು.

"ಕಿಷ್ಕಿಂಧೆಗೆ ನಿಮ್ಮಿಂದೊಂದು ಸೇವೆ ಸಲ್ಲಬೇಕಲ್ಲ ?"

"ನಾನು ಇರೋದೇ ಅದಕ್ಕಲ್ಲವ? ಹೇಳಿ, ಮಾತಾಜಿ."

"ಹೋದ ಸಲ್ಲ ಬಂದಾಗ ಅಶೋಕದಲ್ಲಿ ಸಂಪಾದಕರೊಡನೆ ಸಂವಾದ ಮಾಡಿದ್ದೆ ವಲ್ಲ ?"

"ಈ ಸಲವೂ ಒಂದು ?"

"ಬೇಡ. ಅವರೊಡನೆ ಮಾತುಕತೆಗೆ ಇದು ಸರಿಯಾದ ಸಮಯವಲ್ಲ...."

"......"

"ಆ ದಿನ ನಿಮ್ಮ ಗೆಳೆಯ ಪತ್ರಕರ್ತ ಒಬ್ಬ ಬಂದಿದ್ದ...."

"ಹೌದು."

"ಸಾಯಂಕಾಲ ಈ ಲಕೋಟೆ ಕೊಟ್ಬಾದ ಮೇಲೆ ಅವನನ್ನು ಕರಕೊಂಡು ಬರ್ತೀರಾ ? ನಾಳೆ ಬೆಳಗ್ಗಿನ ಯಾವುದಾದರೂ ಪತ್ರಿಕೇಲಿ ಕಿಷ್ಕಿಂಧೆ ವಿಷಯ ಒಂದು ಲೇಖನ ಪ್ರಕಟವಾಗಬೇಕು. 'ಸೌದಾಮಿನಿಯ ಪಟ್ಟು! ಭಿನ್ನಮತೀಯರಿಗೆ ಆಘಾತ!'

ಅವನ ಹತ್ತಿರ ನಮ್ಮ ಮಾತುಕತೆ ಸೂಕ್ಷ್ಮತಮ ರಾಯಭಾರ. ಐದು ಸಾವಿರ ಸಂಭಾವನೆ ಕೊಡೋಣ. ನಾಳೆಯೇ. ಆದರೆ ಈ ಸಂಗತಿ ಅತ್ಯಂತ ರಹಸ್ಯವಾಗಿರ ಬೇಕು. ನೀನೆಲ್ಲಾದರೂ ಡಿಂಗಾಗಿ, ಬಾಯಿ ಬಿಟ್ಟರೋ ಕೆಟ್ಟೆವು. ಈ ವ್ಯವಹಾರ ಕುದುರಿಸಿದಿರೋ ನಿಮ್ಮನ್ನು ದಿಲ್ಲಿಯಲ್ಲಿ ಕಿಷ್ಕಿಂಧೆಯ ಸಂಪರ್ಕಾಧಿಕಾರಿ ಮಾಡ್ತೇವೆ."

ರೋಗಿ ಬಯಸುವುದೇನು! ವೈದ್ಯ ನೀಡುವುದೇನು! ಗೆದ್ದೆ ಎನಿಸಿತು ಫೆರ್ನಾಂಡೀಸ್‌ಗೆ. ಇವತ್ತು ಬೆಳಗ್ಗೆ ಯಾರ ಮುಖ ನೋಡಿ ಎದ್ದೆ? ಹೆಂಡತೀದು. ಇನ್ನು ಯಾರದು? ಆ ಮಿತ್ರ ಒಳ್ಳೆಯವನು. ಒಂದು ಸಾವಿರ ನನಗೆ ಕೊಟ್ಟಾನು. ಆ ಸೂಟ್‌ಕೇಸಿನಲ್ಲಿ ನಗದು ಎಷ್ಟಿದೆಯೊ? ಎಷ್ಟಿದ್ದರೇನು? ಐದು ಸಾವಿರ ಇದ್ದೇ ಇರ್ತದೆ. ಆ ಮಿತ್ರನಿಗೆ ಫೋನ್ ಮಾಡಬೇಕು.

ಆ ವಾರ ಅವನಿಗೆ ಹಗಲು ಪಾಳಿ. ಸಿಕ್ಕಿದ :

"ಆರು ಘಂಟೆಗೆ ಬರ್ತೀನಿ. ಹೊರಗೆ ಬಾಗಿಲ ಹತ್ತಿರ ಕಾಯ್ತಿರು. ಒಂದು ಸ್ಕೂಪಿದೆ. ಈಗಲೇ ಯಾರಿಗೂ ಏನೂ ಹೇಳಬೇಡ."

ಮುಖ್ಯಮಂತ್ರಿಯ ಬಳಿ ಹೋಗಿ ಫೆರ್ನಾಂಡೀಸ್ ಅಂದ :

"ವಿಕಾಸ್ ಸಿಕ್ಕಿದ. ಅವತ್ತು ಬಂದಿದ್ದ ಗೆಳೆಯ. ಆರೂವರೆ ಗಂಟೆಗೆ ಕರ ಕೊಂಡು ಬರ್ತಾನೆ. ಒಂದು ಸ್ಕೂಪ್ ಇದೆ ಅಂತಷ್ಟೇ ಹೇಳಿದೆ."

"ಒಳ್ಳೇದು. ಅವರ ಪತ್ರಿಕೆ ಯಾವುದು?"

"ಹಿಂದೂಸ್ಥಾನ್ ಹೆರಾಲ್ಡ್. ಪ್ರಧಾನಿ ಓದುವ ದೈನಿಕ."

....ಲಕೋಟೆ ತಲಪಿಸಿದ ಮೇಲೆ ಫೆರ್ನಾಂಡೀಸ್ ಹಿಂದೂಸ್ಥಾನ್ ಹೆರಾಲ್ಡ್ ಕಾರ್ಯಾಲಯಕ್ಕೆ ಹೋದ. ಪರಶುರಾಮ ಫಟ್‌ಫಟಿ ಹಿಡಿದು ಕುಟೀರ ತಲಪಿದ.

....ವಿಕಾಸ್ ಸೌದಾಮಿನಿಯ ಎದುರು ಕುಳಿತ.

"ಹೋದ ಸಲ ನಿಮ್ಮಿಂದಾಗಿ ಕಾರ್ಯಕ್ರಮ ಯಶಸ್ವಿಯಾಯ್ತು. ಈ ಸಲದ್ದು ಅವಸರದ ಭೇಟಿ. ಆದರೂ ನಿಮ್ಮನ್ನಿಷ್ಟು ನೋಡಿ ಹೋಗೋಣ ಅನಿಸ್ತು. ನೀವು ಬಂದಿರಿ, ಸಂತೋಷ."

"ಇತ್ತೀಚೆಗೆ ಕಿಷ್ಕಿಂಧೆ ವಾರ್ತೆಗಳನ್ನ ಸ್ವಲ್ಪ ಕಾತರದಿಂದ ಓದ್ತಾ ಇದ್ದೇನೆ."

"ರಾಷ್ಟ್ರದ್ರೋಹಿಗಳು ವಾತಾವರಣವನ್ನ ಕಲುಷಿತಗೊಳಿಸಿದ್ದಾರೆ. ಫೆರ್ನಾಂಡೀಸ್ ಎಲ್ಲ ಹೇಳಿರಬೇಕು, ಅಲ್ಲವೆ?"

"ಹೇಳಿದ್ದಾನೆ."

"ಪರಶುರಾಮ್, ಪ್ರಧಾನಿಗೆ ಬರೆದ ಪತ್ರದ ಒಂದು ಪ್ರತಿ ಕೊಡಿ. ನಮ್ಮ ಮಿತ್ರರು ಓದಿ ನೋಡಲಿ."

ಪ್ರತಿ ಬಂತು. ವಿಕಾಸ್ ಓದಿದ.

"ಟಿಪ್ಪಣಿ ಮಾಡ್ಕೊಳ್ಲಾ?" ಎಂದು ಕೇಳಿದ.

"ಅವಶ್ಯ ಮಾಡ್ಕೊಳ್ಳಿ."

ಟಿಪ್ಪಣಿ ಕೆಲಸ ಮುಗಿದ ಬಳಿಕ ವಿಕಾಸ್ ಕೇಳಿದ :

"ನಾನು ತಮ್ಮನ್ನು ಕಂಡೆ ಅಂತ ಮುದ್ರಿಸೋದು ಬೇಡ ಅಲ್ಲವಾ ?"

"ಬೇಡ. ತಿಳಿದು ಬಂದಿದೆ ಅಂತ ಬರೀರಿ."

ಪರಶುರಾಮ ಬಂದು, "ಕಾಫಿ ತರಿಸಲೆ ?" ಎಂದ.

"ಬೇಡ, ನಾನು ತಕ್ಷಣ ಕಾರ್ಯಾಲಯಕ್ಕೆ ಹೋಗ್ಬೇಕು. ಈ ವಿಷಯ ಬರೆದು ಮುಗಿಸಬೇಕು. ಸ್ವಲ್ಪ ಜೀಪ್—"

"ಫೆರ್ನಾಂಡೀಸ್ ಬಿಟ್ಟು ಬರ್‍ತಾನೆ. ನಿಮ್ಮ ಪತ್ರಿಕಾಲಯ ನಾನು ನೋಡ ಬೇಕು. ಇವತ್ತಲ್ಲ, ಮುಂದಿನ ಸಲ."

"ಒಂದು ಪ್ರಶ್ನೆ : ಈ ಐಕ್ಯ ಭಂಜಕರಿಗೆ ಪರಾಭವ ಶತಸ್ಸಿದ್ಧ ಅಂತ ನೀವು ಖಡಾಖಂಡಿತವಾಗಿ ಹೇಳ್ತೀರಾ ?"

"ಭಾರತ ಮಾತೆಯ ಹೆಸರಲ್ಲಿ ಆಣೆ ಮಾಡಿ ಹೇಳ್ತೀನೆ. ಐಕ್ಯ ಭಂಜಕರ ಪರಾಭವ ಶತಸ್ಸಿದ್ಧ—ಶತಸ್ಸಿದ್ಧ !"

"...."

"ನಾಳೆ ಬೆಳಗ್ಗೆ ಉಪಾಹಾರಕ್ಕೆ ಇಲ್ಲಿಗೇ ಬನ್ನಿ. ಫೆರ್ನಾಂಡೀಸ್ ಕರ ಕೊಂಡ್ಬರ್‍ತಾನೆ."

"ನಾಳೆ ಆರೂವರೆಗೆ ಬಂದು ಪತ್ರಿಕೆಯ ಪ್ರತಿ ಕೊಟ್ಟು ಹೊರಟ್ಬಿಡ್ತೀನೆ. Story ನೋಡಿದ ತಕ್ಷಣ ಬೇರೆ ಪತ್ರಿಕೆಯವರು ಇಲ್ಲಿಗೆ ಫೋನ್ ಮಾಡಬಹುದು, ಬರಬಹುದು. ಕಾಫಿ ಉಪಾಹಾರವೆಲ್ಲ ಇನ್ನೊಮ್ಮೆ. ಬರಲಾ ?"

"ಹೋಗಿ ಬನ್ನಿ. ಈ ಉಪಕಾರವನ್ನ ಮರೆಯೋದಿಲ್ಲ."

* * *

ರಾತ್ರೆ ಬಾಬಾಜಿಗೆ, ಜಗದಲಪುರಕ್ಕೆ, ಫೋನ್ ಮಾಡುವ ಯತ್ನ ವಿಫಲ ವಾಗಲಿಲ್ಲ.

ಸೌದಾಮಿನಿಯ ಧ್ವನಿ ಕೇಳಿ ಬಾಬಾಜಿ ಅಂದರು :

"ಕಲ್ಯಾಣನಗರದಿಂದ ಮಾತಾಡ್ತಿದೀಯ ? ಕರೆ ದಿಲ್ಲಿಯಿಂದ ಅಂತ ಅಂದ್ರಲ್ಲ...."

"ದಿಲ್ಲಿಯಲ್ಲೇ ಇದ್ದೇನೆ ನಿನ್ನೆ ರಾತ್ರೆಯಿಂದ. ಕಿಷ್ಕಿಂಧೆಯಲ್ಲಿ ಶಾಸಕ ಪಕ್ಷ ದೊಳಗೆ ಸ್ವಲ್ಪ ತೊಂದರೆಯಾಗಿದೆ. ಚೆನ್ನೈಯಿಂದ ಸ್ವಾಮೀಜಿ ಬಂದಿದ್ದಾರೆ, ನಮ್ಮ ರಾಜಧಾನಿಯ ಧರ್ಮಮಠದ ಪ್ರಗತಿಯ ಬಗ್ಗೆ ಅವರು ಬರೆದಿರಬೇಕು. ಹಲೋ, ಕೇಳಿಸ್ತಿದೆಯೊ ಬಾಬಾಜಿ ? ನೀವು ನನಗೆ ಮರು ಹುಟ್ಟು ನೀಡಿದಿರಿ. ಈಗ ಬೆಳೆಯೋದಕ್ಕೆ—ಹಲ್ಲೋ—ಸ್ವಲ್ಪ ಸಹಾಯ ಮಾಡಿ."

"ಅಲ್ಲಿ ನಕುಲದೇವ್ ಇದ್ದಾರಾ ?"

"ಇಲ್ಲ. ಕಾಶ್ಮೀರಕ್ಕೆ ಹೋಗಿದ್ದಾರೆ. ವಾರಾಂತ್ಯದಲ್ಲಿ ವಾಪಸಾಗ್ತಾರೆ. ದಯವಿಟ್ಟು ಅವರಿಗೆ ಫೋನ್ ಮಾಡಿ, ಬಾಬಾಜಿ."

"ಮಾಡ್ತೇನೆ."

"ಈ ವರ್ಷಾಂತ್ಯದೊಳಗೆ ನಿಮ್ಮ ಕಿಷ್ಕಿಂಧಾ ಯಾತ್ರೆಯ ಯೋಜನೆ ರೂಪಿಸಿದ್ದೇನೆ. ಕಲ್ಯಾಣನಗರದ ಹೊಸ ಸ್ವಾಮೀಜಿ ನಿಮ್ಮ ದರ್ಶನಕ್ಕೆ ಬರ್ತಾರೆ. ಕಿಷ್ಕಿಂಧೆ ಜನರ ಕಾಣಿಕೆ ಕಳಿಸ್ತಾರೆ. ದಯವಿಟ್ಟು ಸ್ವೀಕರಿಸಿ, ಅನುಗ್ರಹಿಸಿ. ನಿನಗೆ ಒಳ್ಳೇದಾಗಲಿ—ಕೆಡಕಾಗದಿರಲಿ—ಅಂತ ಆಶೀರ್ವದಿಸಿ, ಬಾಬಾಜಿ."

"ನಿನಗೆ ಒಳ್ಳೇದಾಗಲಿ—ಕೆಡುಕಾಗದಿರಲಿ."

ಫೋನ್ ಮಾತುಕತೆ ಕಡಿಯಿತು. ಹೇಳಬೇಕಾದ್ದು ಬಾಬಾಜಿಗೆ ಕೇಳಿಸಿದೆ ಎಂದು ಮುಖ್ಯಮಂತ್ರಿಗೆ ಸ್ವಲ್ಪ ಸಮಾಧಾನ.

* * *

ಅಂಗರಕ್ಷಕರಾದ ರಾಮಧನ್ ಬೋಲಾನಾಥ್ ಬೆಳಗಾಗುವುದರೊಳಗೆ ಬಂದರು.

ಕುಟೀರಕ್ಕೆ ಬಂದ ವಿಕಾಸ್‌ನನ್ನು ಅವರು ತಡೆದರು. ಆ ಹೊತ್ತಿಗೆ ಸರಿಯಾಗಿ ಪರಶುರಾಮ ಹೊರಗೆ ಬಂದುದರಿಂದ ಸಮಸ್ಯೆ ಬಗೆಹರಿಯಿತು.

ಈ ಮುಂಜಾನೆಯೂ ಯೋಗಾಸನ ಮಾಡದೆ ಮೇಲಂಗಿಯಲ್ಲೇ ಇದ್ದ ಸೌದಾಮಿನಿಯ ಕೊಠಡಿಗೆ ವಿಕಾಸ ಬಂದ. ಕೈಯಲ್ಲಿದ್ದ ಪತ್ರಿಕೆ ತೆರೆದು ಎರಡು ಕಾಲಮುಗಳ ಅಗಲಕ್ಕೆ ವಿಸ್ತರಿಸಿದ್ದ ಲೇಖನವನ್ನು ತೋರಿಸಿದ. 'ವಿಶೇಷ ಪ್ರತಿನಿಧಿಯಿಂದ' 'ಬರೆದು ಬಂದದು' ಕಲ್ಯಾಣನಗರ. ಎರಡು ದಿನ ಹಿಂದಿನ ದಿನಾಂಕ. ವಿಕಾಸನೆಂದ :

"ಕಾಫಿ ಕುಡೀತೇನೆ ಮಾತಾಜಿ. ಕಲ್ಯಾಣನಗರದ ಬದಲು ದಿಲ್ಲಿ ಅಂತ ಇದ್ದಿದ್ದರೆ, ಇಷ್ಟು ಹೊತ್ತಿಗೆ ಇಲ್ಲಿ ಸುದ್ದಿಗಾರರ ಗುಂಪು ನೆರೆದು, ಪೋಲೀಸರ ನೆರವು ಬೇಕಾಗ್ತಿತ್ತು. ಇನ್ನೇನು ಓಕೆ ಕೊಡಬೇಕು ಎನ್ನುವಾಗ ಇದು ಹೊಳೆಯಿತು. ತಿದ್ದುಪಡಿ ಸಾಧ್ಯವಾಯಿತು."

ಕಾಫಿ ಬಂತು. ಪರಶುರಾಮ ಬಂದ. ಸಂಜ್ಞೆ ಮಾಡಿದೊಡನೆ ತನ್ನ ಕೊಠಡಿಯಿಂದ ಒಂದು ಬಿಳಿ ಹಾಳೆಯ ಪ್ಯಾಕೆಟ್ ತಂದು ವಿಕಾಸನ ಕೈಗಿತ್ತ.

"ಥ್ಯಾಂಕ್ಯೂ. ಸಂಜೆ ಹೊರಡ್ತೀರಿ, ಅಲ್ಲವ ? ನೀವು ಗೆಲ್ತೀರಿ. ಸಂದೇಹ ಬೇಡ."

ಲೇಖನದ ಶೀರ್ಷಿಕೆ ಹೀಗಿತ್ತು :

'ಕಿಷ್ಕಿಂಧೆಯಲ್ಲಿ ಐಕ್ಯ ಭಂಜಕರ ಪರಾಭವ ಶತಸ್ಸಿದ್ಧ.' ಎರಡನೇ ಸಾಲು :

'ಸೌದಾಮಿನಿ ಸವಾಲು.'

ಮುಖ್ಯಮಂತ್ರಿ ವಿಕಾಸನ ಕೈಕುಲುಕಿ "ಥ್ಯಾಂಕ್ಯೂ ಹೇಳಬೇಕಾದವಳು ನಾನು" ಎಂದಳು.

* * *

ಫೆರ್ನಾಂಡೀಸ್ ಪತ್ರಿಕೆಗಳೊಡನೆ ಬಂದ. ಸಿತಾರಾ ಅವನ ಜತೆಯಲ್ಲೇ ಬಂದಿ ದ್ದಳು.

ಪರಶುರಾಮನಿಂದ ವಿವರ ತಿಳಿದು ಫೆರ್ನಾಂಡೀಸ್ ತೃಪ್ತನಾದ. ಮುಖ್ಯ ಮಂತ್ರಿಯನ್ನು ವಿಮಾನ ಹತ್ತಿಸಿ, ವಿಕಾಸನನ್ನು ಕಾಣಬೇಕು ಎಂದುಕೊಂಡ.

ಫೆರ್ನಾಂಡೀಸ್ ಮತ್ತು ಸಿತಾರಾ ತಮ್ಮ ಅರ್ಜಿಗಳನ್ನು ರಾತ್ರಿಯೇ ಬೇರೆ ಕಡೆ ಟೈಪ್ ಮಾಡಿಸಿ ಸಿದ್ಧಗೊಳಿಸಿ ತಂದಿದ್ದರು.

ನಿಧಾನವಾಗಿ ಸ್ನಾನ ಉಪಾಹಾರ ಮುಗಿಸಿದ ಸೌದಾಮಿನಿ ತನ್ನ ಕೊಠಡಿಯಲ್ಲಿ ದ್ದಾಗ ಪರಶುರಾಮ ರಾಯಭಾರಿಯಾದ:

"ಸಿತಾರಾ ಫೆರ್ನಾಂಡೀಸರು ತಮ್ಮ ಜತೆ ಎರಡು ನಿಮಿಷ—"

"ಬರಲಿ."

ಎರಡು ಅರ್ಜಿಗಳು, ಮುಂದಿಟ್ಟು ಹೊರಹೋದರು. ಸೌದಾಮಿನಿ ಓದಿ ದಳು. ಮರುಮಾತಿಲ್ಲದೆ, ಪೆನ್ ಕೊಡುವಂತೆ ಸನ್ನೆ ಮಾಡಿದರು. ಪರಶುರಾಮ ಪೆನ್ ಮುಂದಕ್ಕೆ ಚಾಚಿದೊಡನೆ, ಅದನ್ನೆತ್ತಿಕೊಂಡು, ಎರಡು ಅರ್ಜಿಗಳ ಅಂಚಿನಲ್ಲೂ ಒಪ್ಪಿಗೆ—ಮುಂದಿನ ಕ್ರಮಕ್ಕಾಗಿ ಮುಖ್ಯ ಕಾರ್ಯದರ್ಶಿಗೆ—ಎಂದು ಬರೆದು ಚಿಕ್ಕ ಸಹಿ ಹಾಕಿ, ಅರ್ಜಿಗಳನ್ನು ಪರಶುರಾಮನಿಗೆ ಕೊಟ್ಟಳು.

ಆತ ಮತ್ತೆ ಕಾಣಿಸಿದಾಗ, "ಖುಶಿಯಿಂದ ಒಬ್ಬರನ್ನೊಬ್ಬರು ತಬ್ಬಿಕೊಂಡು ಕುಣೀತಿದಾರೊ ?" ಎಂದು ಸೌದಾಮಿನಿ ಸರಸೋಕ್ತಿಯಾಡಿದಳು.

ಜವಾನ ತಾನೂ ಏನಾದರೂ ಕೇಳಬೇಕಾಗಿತ್ತೇನೊ ಎಂದು ಯೋಚಿಸಲೆತ್ನಿಸಿ, ಅರ್ಥವಾಗದೆ, ತಲೆ ತುರಿಸಿಕೊಂಡ.

ಫೋನ್ ಒಮ್ಮೆ ಸದ್ದು ಮಾಡಿತು. ಕಲ್ಯಾಣನಗರದಿಂದ ಚೌಗುಲೆ. ಮುಖ್ಯ ಮಂತ್ರಿಯೇ ಮಾತನಾಡಿದಳು.

"ನಮಸ್ತೆ, ಮಾತಾಜಿ."

"ನಮಸ್ತೆ ಚೌಗುಲ್ ಸಾಹೆಬ್. ಖೀ ಖಬರ್ ?"

"ವಿಶ್ವಂಭರ ಇದೀಗ ಪತ್ರಿಕಾಗೋಷ್ಠಿಯಲ್ಲಿ ಅವಿಶ್ವಾಸ ಸೂಚನೆಗೆ ಎಪ್ಪತ್ತ ಮೂರು ಸಹಿ ಸಂಗ್ರಹವಾಗಿದೆ ಅಂತ ಹೇಳಿದ."

"ಹೇಳಲಿ. ಆ ಎಪ್ಪತ್ತಮೂರರಲ್ಲಿ ಮೂವತ್ತೇಳು ಜನ ಸಹಿ ವಾಪಸು ತಗೊಳ್ತಾರೆ. ಪ್ರಧಾನಿ ಖಚಿತ ನಿಲುವು ತಳೆದಿದ್ದಾರೆ. ಪಕ್ಷವೂ ಅಷ್ಟೆ. ನಿಶ್ಚಿಂತೆ ಯಿಂದಿರಿ."

"ಬೇಗನೆ ಬನ್ನಿ."

"ಇವತ್ತು ರಾತ್ರೆಯೇ ಅಲ್ಲಿರ್ತೇನೆ. ಏರ್‌ಪೋರ್ಟಿಗೆ ಯಾರೂ ಬರೋದು ಬೇಡ. ಕಾರು ಕಳಿಸಿ, ಸಾಕು."

* * *

....ಸಂಜೆ ಜೀಪು ಪಾಲಂ ವಿಮಾನ ನಿಲ್ದಾಣ ತಲಪಿ ಮುಖ್ಯಮಂತ್ರಿ ಮತ್ತಿತರರು ಇಳಿದಾಗ, ಯಾರೋ ಒಬ್ಬ ಮಧ್ಯ ವಯಸ್ಕ ಫೆರ್ನಾಂಡೀಸ್‌ನನ್ನು ಸಮೀಪಿಸಿ ಕೇಳಿದ :

"ಅವರು ಕಿಷ್ಕಿಂಧೆಯ ಸಿ.ಎಂ. ಅಲ್ವೆ ? ನಾನು ಮುದ್ದುಕೃಷ್ಣ ಐ.ಎ.ಎಸ್. ಗಣಿ ಇಲಾಖೆ ಜಂಟಿಕಾರ್ಯದರ್ಶಿ. ಒಂದು ನಿಮಿಷ ಅವರ ಜತೆ ಮಾತಾಡಬಹುದೆ ?"

ಸೌದಾಮಿನಿ ಒಪ್ಪಿದಳು. ಅವನೆಂದ :

"ನನಗೆ ನನ್ನ ಮಾತೃರಾಜ್ಯಕ್ಕೆ ಬರುವ ಆಸೆ. ನನ್ನ ಬಂಧುಗಳೆಲ್ಲ ಅಲ್ಲಿಯೇ ಇದ್ದಾರೆ. ಚೌಗುಲೆಯವರು ನನಗೆ ಗೊತ್ತು. ಅವರ ಕೆಳಗೆ ಸೂಕ್ತ ಜಾಗಕ್ಕೆ ನನ್ನನ್ನು ಕರೆಸಿಕೊಂಡರೆ ತಮ್ಮ ಸೇವೆ ಮಾಡಿ ಧನ್ಯನಾಗ್ತೇನೆ."

"ಆಗಲಿ, ನೋಡೋಣ."

"ಇನ್ನೊಂದು ಸಣ್ಣ ವಿಷಯ. ಹೋದ ತಿಂಗಳು, ಒಂದು ಸೈಟು ದಯೆಪಾಲಿಸಬೇಕೂಂತ ಅರ್ಜಿ ಹಾಕಿದ್ದೆ."

"ಆಗಲಿ, ನೋಡೋಣ."

೨೧

ವಿಮಾನ ದಿಲ್ಲಿ ಬಿಟ್ಟುದು ಒಂದು ಗಂಟೆ ತಡವಾಗಿ. ಕಲ್ಯಾಣನಗರದಲ್ಲಿಳಿದುದೂ ಹೆಚ್ಚು ಕಡಮೆ ಅಷ್ಟೇ ತಡವಾಗಿ.

ನಿವಾಸ ತಲಪಿದೊಡನೆ ಸೌದಾಮಿನಿ ಸ್ನಾನಮಾಡಿ, ದಂತೇಶ್ವರಿಯ ಎದುರು ನಿಂತು, ಕೈ ಜೋಡಿಸಿ, ಕಣ್ಣು ಮುಚ್ಚಿ ಪ್ರಾರ್ಥಿಸಿದಳು :

"ಉಪಾಸಕಿಯನ್ನು ಕೈಬಿಡಬೇಡವಮ್ಮ."

ಪರಶುರಾಮ ಶಾಸಕರ ಭವನದೊಡನೆ ಸಂಪರ್ಕ ಬೆಳೆಸಿದ: ನೂರಿಪ್ಪತ್ತು ಮಂದಿ ಬಂದಿದ್ದರು. ಅವರಲ್ಲಿ ಅರ್ಧದಷ್ಟು ಜನ ಕೊಠಡಿಗೆ ಬೀಗ ತಗಲಿಸಿ ಅಲ್ಲಿಗೆ ಇಲ್ಲಿಗೆ ಹೋಗಿದ್ದರು. ಅವರಿಗೆ, ಮಂತ್ರಿಗಳಿಗೆ, ಕಲ್ಯಾಣನಗರದ ನಿವಾಸಿಗಳಾದ ಶಾಸಕರಿಗೆ ತುರ್ತು ಆಹ್ವಾನ ಬೆಳಗ್ಗೆ ಮುಖ್ಯಮಂತ್ರಿಯ ನಿವಾಸಕ್ಕೆ ಉಪಾಹಾರಕ್ಕೆ ಬರಲು. ನೃಪತುಂಗ ಹೋಟೆಲಿಗೆ ತಿಳಿಸಿದ್ದೂ ಆಯಿತು.

ವಿದ್ಯಾಧರ ಮನೆಯಲ್ಲಿದ್ದ.

"ನಮಸ್ಕಾರ ಮಾತಾಜಿ."

"ಎಷ್ಟು ಸ್ಕೋರು ?"

"ಸಂಪುಟದ ಆರು ಜನರದೂ ಸೇರಿಸಿ ಇವತ್ತು ಸಂಜೆವರೆಗೆ ನನ್ನ ಹಾಳೆಗಳಲ್ಲಿ ಮೂವತ್ತಾರು."

"ಬೆಳಗ್ಗೆ ಉಪಾಹಾರ ಮುಗಿಯುವಾಗ ಸಂಖ್ಯೆ ಅರುವತ್ತಮೂರಾಗ್ತದೆ."

"ಆಗಬಹುದು."

"ಉಳಿದ ಶಾಸಕರು ಬಂದ ತಕ್ಷಣ ಎಂಬತ್ತಮೂರು. ನೂರು ಆದಾಗ, ಸೌದಾಮಿನಿ ಸೆಂಚುರಿ ಬಾರಿಸಿದ್ರು ಅನ್ನಬಹುದು, ಅವರದೆಷ್ಟು ?"

"ಬೆಳಗ್ಗೆ ಎಪ್ಪತ್ತಮೂರು ಆಗಿತ್ತಂತೆ."

"ಹಳೇ ಸುದ್ದಿ. ಅದು ನನಗೆ ದಿಲ್ಲಿಯಲ್ಲಿದ್ದಾಗಲೇ ತಿಳಿದಿತ್ತು."

"ಹಿಂದೂಸ್ಥಾನ್ ಹೆರಾಲ್ಡ್ ಲೇಖನ ಚೆನ್ನಾಗಿತ್ತು. ವಾರ್ತಾ ಇಲಾಖೆ ನಿರ್ದೇಶಕ ಅದನ್ನು ಪ್ರತಿಮಾಡಿಸಿ ಎಲ್ಲ ಶಾಸಕರಿಗೂ ಕಳಿಸ್ತಿದಾನೆ."

"ಗುಡ್. ದಿಲ್ಲಿ ಅವರ ಪರ ಇಲ್ಲ. ಪ್ರಧಾನಿ ಆಶ್ವಾಸನೆ ಕೊಟ್ಟಿದ್ದಾರೆ. ಇದನ್ನು ಎಲ್ಲರಿಗೂ ತಿಳಿಸಿಬಿಡಿ."

....ಬೆಳಗ್ಗೆ ಕಣ್ಣುಬಿಟ್ಟಾಗ ಸೌದಾಮಿನಿ ಕಂಡುದೇನು ? ತನ್ನ ನಿವಾಸದೆದುರು

ಬಣ್ಣ ಬಣ್ಣದ ಷಾಮಿಯಾನ. ಪೀಠೋಪಕರಣಗಳು ಬಂದಿದ್ದುವು. ನೃಪತುಂಗದ ಒಡೆಯನಲ್ಲಿ ಅಲ್ಲಾವುದ್ದೀನನ ಅದ್ಭುತ ದೀಪ ಒಂದಿರಲೇ ಬೇಕು !

ಚುನಾವಣೆಯ ಕಾಲದಲ್ಲಿ ಕಂಡು ಬಂದ ಸಂಭ್ರಮವೇ ಈಗಲೂ !

ಶಾಸಕರು ಬರತೊಡಗಿದರು, ಮಾತಾಜಿಗೆ ಬಾಗಿ ಬಾಗಿ ನಮಿಸುತ್ತ. ಬಂದವರ ಸಂಖ್ಯೆ ನೂರಐವತ್ತನ್ನು ದಾಟಿತು. ಸೌದಾಮಿನಿಗೆ ಸೋಜಿಗ! 'ಇಷ್ಟು ಜನವೂ ಸಹಿ ಹಾಕಬಹುದೆ?' ಊಟ ಕೌರವರಲ್ಲಿ ಪಕ್ಷ ಪಾಂಡವರಲ್ಲಿ ಥರದವರೂ ಇದ್ದರೆ? (ಅಲ್ಲಿ ಸಲ್ಲುವವರು ಇಲ್ಲಿಯೂ ಸಲ್ಲುವರಯ್ಯ !) ನೋಡೋಣ. ಸಹಿಗಳಲ್ಲಿ ಖೋಟಾ ಎಷ್ಟೊ ? ಸಾಚಾ ಎಷ್ಟೊ ?

ಭಿನ್ನಮತೀಯರ ಪ್ರಮುಖರು ವಿಶ್ವಂಭರ ಲಕ್ಷ್ಮೀಪತಯ್ಯ ಮತ್ತಿತರರು ಉಪಾಹಾರಕ್ಕೆ ಬಂದಿರಲಿಲ್ಲ.

ಉಪಾಹಾರ ಮುಗಿಯುತ್ತಿದ್ದಂತೆ ಸುಂಯ್ ಸುಂಯ್ ಸುದ್ದಿ ಹಬ್ಬಿತು. ಲಕ್ಷ್ಮೀಪತಯ್ಯನ ಮನೆ ಮುಂದಿನ ಬಯಲಿನಲ್ಲಿ ಸಂಜೆ ಟೀ ಪಾರ್ಟಿ. ಕಾಫಿಗೇ ಪ್ರಾಧಾನ್ಯವಿದ್ದರೂ ಬಳಕೆಯ ಹೆಸರು ಟೀ ಪಾರ್ಟಿ.

ಧ್ವನಿವರ್ಧಕ ಬಂತು.

ಒಬ್ಬ ಶಾಸಕ ಎದ್ದು ನಿಂತು ಕಿರಿಚಿದ :

"ಮಾನ್ಯ ಮುಖ್ಯಮಂತ್ರಿ ಅಮ್ಮಣ್ಣಿ ! ಉದ್ದದ ಭಾಷಣ ಬೇಡಿ !"

ಸೌದಾಮಿನಿ ಕನಲಿದಳು.

"ನಾಯಕಿಯ ಮಾತು ಕೇಳುವ ತಾಳ್ಮೆ ಯಾರಿಗೆ ಇಲ್ಲವೋ ಅವರು ಇಲ್ಲಿಂದ ಹೊರಡಬಹುದು."

ಅವಳು ಗುಡುಗಿದೊಡನೆ ಹತ್ತಿಪ್ಪತ್ತು ಜನ ಎದ್ದು ನಡೆದೇಬಿಟ್ಟರು. ಮಾತಾಜಿಯ ಶರೀರದ ಯಾವುದೋ ಕೀಲಿ ಕಟಕಟ ಎಂದಿತು. ಅವಳು ಕುಳಿತುಬಿಟ್ಟಳು.

ಅಷ್ಟಾಗಿ ಮಾತನಾಡದ ಒಬ್ಬ ಶಾಸಕ ಎದ್ದು, ವಂದಿಸಿ, ನುಡಿದ :

"ಮಾತಾಜಿ ಹೇಳಬೇಕು, ನಾವು ಕೇಳ್ತೇವಿ. ಏಳಿ ಮಾತಾಜಿ, ವಿನಯದಿಂದ ಪ್ರಾರ್ಥಿಸ್ತೇನೆ."

"ಹೌದು, ಹೌದು, ಹೌದು," ಎಂದು ಪದಗಳು ಅತ್ತಿತ್ತ ಕುಂಟಬಿಲ್ಲೆ ಆಡಿದ ಮೇಲೆ ಮುಖ್ಯಮಂತ್ರಿ ಎದ್ದಳು.

"ನನ್ನ ವಿಶ್ವಾಸದ ಶಾಸಕ ಬಂಧುಗಳೇ ! ನಿಜ ಹೇಳಬೇಕೆಂದರೆ, ಯಾಕೆ ಈ ಗಲಿಬಿಲಿ ಅನ್ನೋದೇ ನನಗೆ ಅರ್ಥವಾಗ್ತಿಲ್ಲ. ಈ ಸಹಿ ಚಟುವಟಿಕೆ ಶುರು ಮಾಡಿದವರು ಯಾರು? ಅವರು. ಈಗ ಅನ್ಯ ಮಾರ್ಗವಿಲ್ಲದೆ ನಾವೂ ಬಲಪ್ರದರ್ಶನ ಮಾಡಬೇಕಾಗಿದೆ. ಅದು ದೊಡ್ಡ ಸಂಗತಿಯಲ್ಲ. ಆಳುವ ಪಕ್ಷದವರೇ ಆದ ಅವರು ಪರಿಹಾಸ್ಯಕ್ಕೆ ಗುರಿಯಾಗ್ತಾರಲ್ಲ ಅಂತ ನನಗೆ ದುಃಖವಾಗ್ತಿದೆ. ಇದು ಕಿಡಿಗೇಡಿತನ.

ಇದನ್ನು ಹತ್ತಿಕ್ಕೋದು ನಿಮಿಷದ ಕೆಲಸ. ಆದರೆ, ಪ್ರಜಾಪ್ರಭುತ್ವಕ್ಕೆ ನಾವು ಅಪಚಾರ ಮಾಡ್ತಿದೇವೆ ಅಂತ ಯಾರೂ ಭಾವಿಸಬಾರದಲ್ಲ ?...."

ಇದೇ ಸರಣಿಯಲ್ಲಿ ಮಾತು ಮುಂದುವರಿಯಿತು. ಮಧ್ಯೆ ವಿದ್ಯಾಧರ ಎದ್ದು ಬಂದು ಸೌದಾಮಿನಿಯ ಕಿವಿಯಲ್ಲಿ ಪಿಸುನುಡಿ ಆಡಿದ.

ಮುಖ್ಯಮಂತ್ರಿ :

"ವಿದ್ಯಾಧರರು ಹೇಳಿದ ಗುಟ್ಟಿನ ಮಾತನ್ನು ಈಗ ರಟ್ಟು ಮಾಡ್ತೇನೆ. ಕೇಳಿ ! ನಮ್ಮ ಜತೆ ಈಗ ನೂರೈದು ಜನ ಇದ್ದಾರೆ. ಪರ ಊರುಗಳಿಂದ ಇನ್ನೂ ಇಪ್ಪತ್ತೈದು ಶಾಸಕರು ಬರಬೇಕಾಗಿದೆ. ಅವರೂ ಸೇರಿಕೊಂಡಾಗ ನಮ್ಮ ಬಲ ಎಷ್ಟಾಗ್ತದೆ ಅನ್ನೋದನ್ನು ನೀವೇ ಲೆಕ್ಕ ಹಾಕ್ಕೊಳ್ಳಿ. ಕುತಂತ್ರದಿಂದ ಸಂಪುಟ ಉರುಳಿಸೋದಕ್ಕೆ ಆಗೋದಿಲ್ಲ. ತಿಪ್ಪರಲಾಗ ಹಾಕಿದರೂ ಆಗೋದಿಲ್ಲ. ಇದು ಪಕ್ಷದ್ರೋಹ. ತಕ್ಕ ಫಲವನ್ನು ಅವರು ಅನುಭವಿಸಿಯೇ ಅನುಭವಿಸ್ತಾರೆ."

ನೆರೆದಿದ್ದವರು ಚಪ್ಪಾಳೆ ತಟ್ಟಿದರು.

ವಿಶ್ವಂಭರನ ಉಪಾಹಾರ (ಚಪ್ಪರ, ಹೂವಿನಕುಚ್ಚು, ಎಲ್ಲ) 'ಅರಿಕೇಸರಿ' ಹೋಟೆಲಿನದು.

ಸ್ಪೀಕರ್ ಇಲ್ಲಿಯೂ ಮಾತನಾಡದ ಅಧ್ಯಕ್ಷರಾದರು. ವಿಶ್ವಂಭರ ಧ್ವನಿವರ್ಧಕ ವನ್ನು ಚಾಕಚಕ್ಯದಿಂದ ಬಳಸಿದ. ಸೌದಾಮಿನಿ ಪುರಾಣ ಶ್ರೋತೃಗಳಿಗೆ ರಂಜನೆ ನೀಡಿತು. ಆಗಾಗ್ಗೆ ಚಪ್ಪಾಳೆಗಳು ಬಿದ್ದುವು.

ಆತನೆಂದ :

"ಇನ್ನು ಗಣಿತಕ್ಕೆ ಬರೋಣ. ವಿಧಾನಸಭಾಪತಿ ಪೀಠದಲ್ಲಿ ಕುಳಿತಾಗ ಅವರು ಸ್ಪೀಕರ್. ಆಗ ಅವರು ಅಗತ್ಯ ಬಿದ್ದಾಗ ತಮ್ಮ ಮತ ಕೂಡ ಚಲಾಯಿಸಬಹುದು. ಈಗ ಮಾನ್ಯ ಶಾಸಕರಾಗಿ ಹಿರಿಯ ರಾಜಕೀಯ ಮುತ್ಸದ್ದಿಯಾಗಿ ನಮ್ಮ ಲೆಕ್ಕ ಕ್ಕಿದ್ದಾರೆ. ಸೌದಾಮಿನಿ ಯಾನೆ ಮಾತಾಜಿ ಯಾನೆ ಬೇರೆ ಬೇರೆ ಹೆಸರುಗಳಿರುವ ಮುಖ್ಯಮಂತ್ರಿಯಲ್ಲಿ, ಅವರ ನಾಯಕತ್ವದಲ್ಲಿ ತಮಗೆ ವಿಶ್ವಾಸವಿಲ್ಲಾಂತ ಒಟ್ಟು ಎಂಬತ್ತು ಶಾಸಕರು ಇಗೋ ಈ ಹಾಳೆಗಳಲ್ಲಿ ಸಹಿ ಹಾಕಿದ್ದಾರೆ. ಎಲ್ಲ ಪಕ್ಷಗಳವರೂ ಸೇರಿ ಕಿಷ್ಕಿಂಧೆಯಲ್ಲಿ ಚುನಾಯಿತ ಪ್ರತಿನಿಧಿಗಳ ಒಟ್ಟು ಸಂಖ್ಯೆ ೧೬೧. ಅವರಲ್ಲಿ ಒಬ್ಬರು ಸಮತಾಪಕ್ಷದವರು, ಐವರು ಪ್ರಜಾಪಕ್ಷದವರು. ಉಳಿದವರೆಲ್ಲ ರಾಷ್ಟ್ರ ಪಕ್ಷದವರು. ೧೬೧ ರಿಂದ ೬ ಹೋದರೆ ಉಳಿದವರು ೧೫೫. ಅವರಿಂದ ೮೦ ಸಹಿ ಕಾರರನ್ನು ಇತ್ತ ಇಡಿ. ಮುಖ್ಯಮಂತ್ರಿಯವರ ಕಡೆ ಉಳಿಯುವವರು ಎಪ್ಪತ್ತೈದೇ ಜನ. ಪ್ರತಿಪಕ್ಷೀಯರನ್ನು ಬಿಡಿ ; ಆಡಳಿತ ಪಕ್ಷದಲ್ಲಿ ಈಗ ಮಾತಾಜಿಗೆ ಬಹುಮತ ವಿಲ್ಲ. ಅವರು ರಾಜಿನಾಮೆ ಕೊಡಬೇಕು. ಇಲ್ಲವೆ ಬರ್ತರ್ಫ್ ಮಾಡಿಸಿಕೊಳ್ಳಲು ಸೆರಗು ಬಿಗಿದುಕೊಳ್ಳಬೇಕು. ("ಹೀಯರ್ !" "ಹೀಯರ್ !")

ಲಕ್ಷ್ಮೀಪತಯ್ಯ ಅಂದರು :

"ನಾಳೆ ಬೆಳಗ್ಗೆ ಹನ್ನೊಂದು ಗಂಟೆಗೆ ಮಹಾಜನತೆ ಮೆರವಣಿಗೆಯಲ್ಲಿ ರಾಜ ಭವನಕ್ಕೆ ತೆರಳಿ ಮನವಿ ಸಲ್ಲಿಸಬೇಕು."

"ವಿಶ್ವಂಭರನೆಂದ ;

ಅವರು ಕೇಂದ್ರಕ್ಕೆ ವರದಿ ಕಳಿಸಿಯೇ ಕಳಿಸ್ತಾರೆ. ಆದರೆ ನಮ್ಮ ಒಂದು ನಿಯೋಗವೂ ದಿಲ್ಲಿಗೆ ಹೋಗಿ ವರಿಷ್ಠರನ್ನು ಕಾಣಬೇಕು."

ಹತ್ತಾರು ಸ್ವರಗಳು ಕೇಳಿಸಿದುವು :

"ನೀವಿಬ್ಬರೇ ಸಾಕು. ನಾಳೆ ಸಂಜೆಯ ವಿಮಾನದಲ್ಲೇ ಹೋಗಿ."

ಉಪಾಹಾರ ಸಭೆಯ ವಿವರವನ್ನು ಒಬ್ಬ ಬೇಹುಗಾರ ತಂದ.

"ಈ ಅಂಕೆ ಸಂಖ್ಯೆಗಳನ್ನು ನಾನು ನಂಬೋದಿಲ್ಲ. ಚಿತ್ರ ನಾಳೆ ಬದಲಾಗ್ತದೆ. ಮೆರವಣಿಗೆ ಏನು ಮಹಾ ? ಹುಶ್ ಎಂದರೆ ಸಾಕು. ಜನ ಜಮಾಯಿಸ್ತಾರೆ," ಎಂದು ಸೌದಾಮಿನಿ ತಣ್ಣನೆ ನುಡಿದಳು. ಒಳಗೆ ಮಾತ್ರ ಕಾವು ಏರುತ್ತಿತ್ತು. ಅಲ್ಲಿ ಪರಿಸರ ಕಮರುತ್ತಿತ್ತು.

ಆಪ್ತ ಕಾರ್ಯದರ್ಶಿಯನ್ನು ಕರೆದು ಅವಳೆಂದಳು :

"ಇವತ್ತು ರಾತ್ರೆ ಆ ವಿಶ್ವಂಭರನನ್ನು ಕಾಣಬೇಕು, ಪರಶು."

"ಅವರಿಗೆ ಫೋನ್ ಮಾಡ್ಲಾ ?"

"ದಿಢೀರ್ ಪ್ರತ್ಯಕ್ಷ. ಹತ್ತು ಗಂಟೆಗೆ ರಕ್ಷಣಾ ಪೋಲೀಸರೂ ಇಲ್ಲದೆ, ಅಂಗ ರಕ್ಷಕರೂ ಇಲ್ಲದೆ. ಅಡ್ರೆಸ್ ಸರಿಯಾಗಿ ಬರೆದಿಟ್ಕೊ."

"ಅಲ್ಲಿ ಬೇರೆಯವರು ಇದ್ದರೆ ?"

"ಶಿಬಿರ ಅಂದ್ಮೇಲೆ ಯಾರಾದರೂ ಇದ್ದೇ ಇರ್ತಾರೆ. ದೊಡ್ಡದಲ್ಲ."

* * *

ಬಾಗಿಲು ತೆರೆದಿತ್ತು. ಶಿಬಿರವಾಗಿ ಮಾರ್ಪಟ್ಟಿದ್ದ ಮನೆ. ಸೌದಾಮಿನಿ ಬಿರುಗಾಳಿಯಂತೆ ಶಿಬಿರಕ್ಕೆ ನುಗ್ಗಿದಳು. ನೆರೆದಿದ್ದವರು ಅವಾಕ್ಕಾದರು. ಎಲಾ ! ಹೀಗೂ ಉಂಟೆ ?

ನೆಲೆಸಿದ ಮೌನದಲ್ಲಿ ವಿಶ್ವಂಭರನೂ ಒಂದು ನಿಮಿಷ ಕಕ್ಕಾವಿಕ್ಕಿಯಾದ. ಸಾವರಿಸಿಕೊಂಡು ಎದ್ದು ನಿಂತು ನಸು ನಕ್ಕು "ಸ್ವಾಗತ" ಅಂದ.

"ನನ್ನ ಸಹಿಯೂ ಒಂದಿರಲಿ. ಎಂಬತ್ತೊಂದಾಗ್ತದೆ, ಗಣಿತ ಪ್ರಾಧ್ಯಾಪಕರೇ."

"ಪೆನ್ ಕೊಡಲೆ ?"

"ಎಲ್ಲಿ ನಿಮ್ಮ ಸ್ಟಡೀ ತೋರಿಸಿ."

"ಖಾಸಗಿ ಮಾತು ?"

"ಹ್ಞ."

ತೆರೆ ಸರಿಸಿ ಒಳ ಕೊಠಡಿಗೆ ಪ್ರವೇಶ.

"ಒಪ್ಪ ಓರಣ ಶಿಸ್ತು ನಿಮ್ಮಿಂದ ಕಲೀಬೇಕು. ಅಭಿನಂದನೆ ಯಾರಿಗೆ ಸಲ್ಲಿಸಬೇಕು ? ನಿಮಗೊ ? ಶ್ರೀಮತಿಯವರಿಗೊ ?"

"ಹೊರಗೆ ಜನ ಇದಾರೆ. ವಿಷಯಕ್ಕೆ ಬನ್ನಿ."

"ಅಂಗೈ ಚಾಚಿ."

ವಿಶ್ವಂಭರ ಬಲ ಅಂಗೈಯನ್ನು ಮುಂದಕ್ಕೆ ಚಾಚಿದ. ಅದಕ್ಕೆ ಸೌದಾಮಿನಿ ತನ್ನ ಅಂಗೈಯಿಂದ ಬಡೆದಳು, ಮೆಲ್ಲನೆ.

"ಇದು ವಾಗ್ದಾನ. ಸಂಪುಟವನ್ನು ಪುನರ್ ರಚಿಸ್ತೇನೆ. ನೀವು ಉಪಮುಖ್ಯಮಂತ್ರಿ. ಎಲ್ಲ ತಣ್ಣಗಾದ ಮೇಲೆ ನಾನು ಸನ್ಯಾಸ ತಗೊಳ್ತೇನೆ. ಆಮೇಲೆ ನೀವೆ—"

"ಮುಖ್ಯಮಂತ್ರಿ ! ಎಷ್ಟು ಸರಳ ! ಈಗ ಈ ಸಹಿ ಸಂಗ್ರಹ ಇತ್ಯಾದಿ ಬಿಟ್ಬಿಡ್ಬೇಕು ಅಲ್ವೆ ?"

"ಒಪ್ಪಿಗೆ ಅನ್ನಿ."

"Sorry, ಮಾತಾಜಿ."

"ಹಾಗಾದರೆ ನಾನು ಇಲ್ಲಿಗೆ ಬಂದೂ ಇಲ್ಲ, ನಿಮ್ಜತೆ ಮಾತಾಡಿಯೂ ಇಲ್ಲ."

"ಸರಿ."

ಹೊರಟ ಸೌದಾಮಿನಿಯನ್ನು ಬೀಳ್ಕೊಡಲು ವಿಶ್ವಂಭರ ಅಂಗಳಕ್ಕಿಳಿದ. ಅಲ್ಲಿ ಅಂದ :

"ಬಾಡಿಗಾರ್ಡ್ ಇಲ್ಲದೆ ಬಂದಿದ್ದೀರಿ !"

"ಇದು ಸ್ನೇಹದ ಮನೆ ವಿಶ್ವಂಭರ, ವೈರಿ ಶಿಬಿರ ಅಲ್ಲ."

"ದಾರಿಯಲ್ಲಿ ದುರ್ಜನರಿರ್ತಾರೆ. ಏನಾದರೂ ಆದರೆ ?"

"ನನ್ನ ಕೂದಲು ಕೊಂಕಿದರೂ ಸಾಕು. ಅದಕ್ಕೆ ನೀವೇ ಕಾರಣ ಅಂತ ನಾಳೆ ಕಲ್ಯಾಣನಗರ ವಿಚಾರಿಸ್ಕೊಳ್ತದೆ."

"ಮೆಚ್ಚಿದೆ."

"ಮೆಚ್ಚಿದರೂ ಏನು ಪ್ರಯೋಜನ ? ಬರೀ ಮಾತಾಯಿತು, ಅಷ್ಟೆ."

ಕಾರು ಹೊರಟಿತು. ವಿಶ್ವಂಭರನ ಮನೆಯಲ್ಲಿನ ನಗೆಯ ಭೋರ್ಗರೆತ ಕಾರನ್ನು ಹಿಂಬಾಲಿಸಿತು.

ಕಾರಿನಲ್ಲಿ ಸೌದಾಮಿನಿ ತನ್ನ ಖಿನ್ನತೆಯನ್ನು ಮರೆಮಾಡುತ್ತ ಕೇಳಿದಳು :

"ಪರಶು, ನಾಯಕ್ ಮನೆಯ ವಿಳಾಸ ನೆನಪಿದೆಯಾ ?"

"ಇದೆ. ಹಿಂದೆ ರಾಷ್ಟ್ರಪಕ್ಷದ ಕಾರ್ಯಾಲಯದಿಂದ ಅಲ್ಲಿಗೆ ಹೋಗ್ತಿದ್ದೆ."

"ಡ್ರೈವರಿಗೆ ದಾರಿ ತೋರಿಸು...."

....ನಾಯಕ್ ಮಲಗುವ ಸಿದ್ಧತೆಯಲ್ಲಿದ್ದರು. ಹೊರಗೆ ಬಂದವರನ್ನು ಹಿಂದಿನ ಸೀಟಿಗೆ ಕರೆದುಕೊಂಡಳು.

"ಇವತ್ತು ನನ್ನನ್ನು ದಬ್ಬೋಕೆ ಅಂಗರಕ್ಷಕರಿಲ್ಲವ ?"

"ದಬ್ಬೋ ಕೆಲಸ ತಬ್ಬೋ ಕೆಲಸ ನೀವೇ ಮಾಡಿ."

"ಅವತ್ತು ನಾನು ಬಂದಾಗ ಈ ಬುದ್ಧಿ ಎಲ್ಲಿ ಹೋಗಿತ್ತು ?"

"ತಪ್ಪು ಮಾಡ್ದೆ. ಈಗ ಯಾಚಕಿಯಾಗಿ ಬಂದಿದ್ದೇನೆ."

"ನನ್ನ ಗುಂಡಿಗೆ ಬಗೆದು ಕೊಡಲೊ ?"

ಸೌದಾಮಿನಿ ನಾಯಕರ ತೊಡೆಯ ಮೇಲೆ ತನ್ನ ಅಂಗೈ ಇಟ್ಟಳು. ಒಲಿಸುವ ಓಲೈಸುವ ಧ್ವನಿಯಲ್ಲಿ ಅವಳೆಂದಳು :

"ರಾಷ್ಟ್ರಪಕ್ಷಕ್ಕೆ ವಾಪಸು ಬನ್ನಿ."

"ಐದು ಜನ. ಆಮೇಲೆ ಅಪ್ಪಚ್ಚಿ ಮಾಡೋಣ ಅಂತಲೊ ?"

"ಅಷ್ಟು ಸಂದೇಹವಿದ್ದರೆ ರಾಷ್ಟ್ರಪಕ್ಷ–ಪ್ರಜಾಪಕ್ಷ ಸಂಯುಕ್ತರಂಗ ಮಾಡೋಣ."

"ಏನು ಕೊಡ್ತೀಯಾ ?"

"ನನ್ನನ್ನೇ."

"ಅದು ವೈಯಕ್ತಿಕ ವಿಷಯ. ಈಗ ಬೇಡ."

"ಹೊಸ ಸರ್ಕಾರದ ರಚನೆ ಅಗತ್ಯ, ಅನಿವಾರ್ಯ. ಲಕ್ಷ್ಮೀಪತಿ ಅತ್ತ ಹೋದ ನಲ್ಲ. ಈಗ ನೀವೇ ಹಿರಿಯ ಮುತ್ಸದ್ದಿ. ಸ್ಪೀಕರ್ ಆಗಿ."

"ಸ್ಪೀಕರ್ ? ಅಲ್ಲಿ ಆಕಳಿಸ್ತಾ ಕೂತ್ಕೊಳ್ಳಾ ? ಮುಖ್ಯಮಂತ್ರಿ ಸ್ಥಾನ ಬಿಟ್ಕೊಡ್ತೀಯೂ ಹೇಳು."

"ಬೇರೆ ಏನಾದರೂ ಕೇಳಿ."

"ಒಳ್ಳೇ ವರಮಹಾಲಕ್ಷ್ಮಿ ನೀನು."

"ಅವಸರದ ತೀರ್ಮಾನ ಬೇಡ. ಇದು ನಿಮ್ಮ ರಾಜಕೀಯ ಭವಿಷ್ಯತ್ತಿನ ಪ್ರಶ್ನೆ. ರಾತ್ರಿ ಚೆನ್ನಾಗಿ ಯೋಚಿಸಿ, ಬೆಳಗ್ಗೆ ಫೋನ್ ಮಾಡಿ."

"ಹಾಗಾದರೆ ಈಗ ಹೊರಟ್ಹೋಗ್ತಿಯ ಅನ್ನು."

"ವೈಯಕ್ತಿಕ ವಿಷಯ ಈಗ ಬೇಡ—ಅಂದಿರಲ್ಲ ?"

"ಹೌದು, ಮಹಾತಾಯಿ. ನೀನು ದೊಡ್ಡವಳು, ಕರಗ್ತಿರೋ ಮಂಜು ಬೆಟ್ಟದ ಮೇಲೆ ಕೂತಿದೀಯಾ ! ನಾನಿರೋದು ಐದು ದಿಂಡುಕಲ್ಲುಗಳ ಮೇಲೆ,"

"ಪ್ರಜಾಪಕ್ಷದ ಐವರ ಬೆಂಬಲ ಸೌದಾಮಿನಿ ಸಂಪುಟಕ್ಕೆ ಇದೆ ಅಂತ ರಾಜ್ಯ ಪಾಲರಿಗೆ ಬರಕೊಡಿ, ಸಾಕು."

"ನಿನ್ನ ವಿಷಯದಲ್ಲಿ ನನಗೆ ಕನಿಕರ, ಪುಟ್ಟವ್ವ."

"ಸೌದಾಮಿನಿ ಮೇಲೆ ನಿಮಗೆ ಸಿಟ್ಟು. ಪುಟ್ಟನಿಗೋಸ್ಕರವಾದರೂ ಮೆತ್ತ ಗಾಗಿ, ನಾಳೆ ಬೆಳಗ್ಗೆ ತಿಳಿಸಿ."

"ನಾನು ನಿವಾಸಕ್ಕೆ ಬಂದರೆ ಹಾರ ಹಾಕಿ ಸ್ವಾಗತಿಸ್ತೀಯಾ ?"

"ಸಭಾಪತಿಗೆ ಹಾರ ಹಾಕದೆ ಇರ್ತೀನಾ ? ಈಗ ಅಪ್ಪಣೆ ಕೊಡಿ."

"ಆಗಲಮ್ಮ. ಹಾರ್ನ್ ಒತ್ತು. ನಮ್ಮ ಮಾತಿಗೆ ಕೃತಿಗೆ ಅಡ್ಡಿಯಾಗೋದು ಬೇಡ ಅಂತ ದೂರ ಹೋಗಿದ್ದಾರೆ !"

ನಾಯಕ್ ಇಳಿದರು. ಪರಶುರಾಮ ಮತ್ತು ಡ್ರೈವರ್ ಓಡಿ ಬಂದರು. ಪರಶುರಾಮ ನಾಯಕರಿಗೆ ಗುಡ್‌ನೈಟ್ ಹೇಳಿದ. ಅವನೂ ಎಣಿಸುತ್ತ ಇದ್ದ. ೭೫ ಮತ್ತು ೫ = ೮೦. ಇನ್ನು ಒಂದಾದರಾಯಿತು.

"ಪರಶು, ಆ ದಂಡಪಾಣೀನ ಕಾಣಬೇಕಲ್ಲಪ್ಪ......"

"ಸಮತಾ ಪಕ್ಷದ ಕಚೇರಿಲಿ ಕೇಳಿದರೆ ಹೇಳ್ತಾರೆ, ಕಚೇರಿ ಸನ್ನಿಧಿ ರಸ್ತೇಲಿದೆ."

ಕಾರು ಅತ್ತ ಹೊರಟಿತು. ಅಲ್ಲಿ ಮರುದಿನದ ಮೆರವಣಿಗೇಲಿ ಭಾಗವಹಿಸಬೇಕೊ ಬೇಡವೊ ಎಂದು ಚರ್ಚೆ ನಡೆದಿತ್ತು. ದಂಡಪಾಣಿಯೂ ಅಲ್ಲಿದ್ದ. ಕೆಳಗಿಳಿದು ಬಂದ. ಮುಖ್ಯಮಂತ್ರಿಯ ಗುರುತು ಹಿಡಿದು, ಕಾರಿನ ಒಳ ಸೇರಿದ.

"ಸ್ವಲ್ಪ ಮುಂದೆ ಹೋಗಿ ಆ ತಿರುವಿನಲ್ಲಿ ನಿಲ್ಲಿಸಪ್ಪ."

ಕಾರು ತಿರುವಿನಲ್ಲಿ ನಿಂತಿತು. ಸೌದಾಮಿನಿ ಅಂದಳು :

"ನಿಮ್ಮ ಜೀವನದಲ್ಲಿ ಇದೊಂದು ತಿರುವು ದಂಡಪಾಣಿ."

"ನಾಯಕ್ ಬೆಂಬಲಿಸ್ತಾರಾ ?"

"ಓಹೋ ! ಇನ್ನೂ ಕೆಲವರು ಬರ್ತಾರೆ. ನೀವು ನನಗೆ ಬೆಂಬಲ ನೀಡ್ಬೇಕು."

"ಇದು ರಾಜಕೀಯ ಪ್ರಶ್ನೆ. ಕೇಂದ್ರ ಸಮಿತಿಯನ್ನು ಕೇಳಬೇಕು."

"ಅದೆಲ್ಲಿದೆ ?"

"ದಿಲ್ಲಿಯಲ್ಲಿ."

"ಫೋನ್ ಮಾಡಿದರಾಯಿತು. ನಿಮಗೆ ಎಷ್ಟು ದುಡ್ಡು ಬೇಕು, ಹೇಳಿ."

"ಫೋನ್ ಖರ್ಚಿಗಾ ?"

"ಗೇಲಿ ಮಾಡ್ತೀರಾ ? ಹಣ ಯಾವಾಗಲೂ ಪಕ್ಷಕ್ಕೆ."

"ಸ್ಥಾನವೂ ಬೇಕು, ಹಣವೂ ಬೇಕು."

"........"

"ಮಾತಾಜಿ. ನನಗೆ ಗೊತ್ತಿದೆ. ನಿಮಗೆ ಬಹುಮತ ಸಿಗೋದು ನನ್ನ ಏಕ ಮತದ ಬೆಂಬಲದಿಂದಲೇ."

"ಹಾಗೇ ತಿಳಕೊಳ್ಳಿ. ಡಿಮಾಂಡ್ಸ್ ಏನು ?"

"ಮುಖ್ಯಮಂತ್ರಿ ಸ್ಥಾನ ಮತ್ತು ಒಂದು ಕೋಟಿ."

"ಮುಖ್ಯಮಂತ್ರಿಯಾದರೆ ಲಾಠಿ ಚಾರ್ಜು, ಅಶ್ರುವಾಯು, ಗುಂಡಿನೇಟು ಇವೆಲ್ಲ ಪ್ರಯೋಗಿಸಬೇಕಾಗ್ತದೆ. ದುಡ್ಡೇ ಆದರೆ ?"

"ನನಗೆ ಗೊತ್ತಿಲ್ಲ. ನಾನು ಒಬ್ಬನೇ ಮಾತುಕತೆ ನಡೆಸಲಾರೆ."

"ನಿಮ್ಮ ಕಾರ್ಯದರ್ಶಿಗೂ ಹೇಳಿ. ನಾಳೆ ಬೆಳಗ್ಗೆ ನನಗೆ ಫೋನ್ ಮಾಡಿದರೆ ಸಾಕು."

"ಹಣ ಎಷ್ಟು ಅನ್ನಲಿ ?"

"ನೀವೇ ಹೇಳಿದಿರಲ್ಲ ?"

"ಊಹೂಂ. ಎರಡು ಕೊಡ್ತಾರಂತೆ ಅನ್ತೀನಿ."

"ಕೋಟಿ ಅನ್ನೋದರ ಕಲ್ಪನೆ ನಿಮಗಿದೆಯ ದಂಡಪಾಣಿ ?"

"ಇದರ ಸ್ಪಷ್ಟ ಕಲ್ಪನೆಯ ಆಧಾರದ ಮೇಲೆಯೇ ಸಮತಾಪಕ್ಷ ತನ್ನ ಸಿದ್ಧಾಂತ ರೂಪಿಸಿದೆ."

"ಯಾವುದಾದರೂ ನಿಗಮದ ಅಧ್ಯಕ್ಷತೆಗೆ ಒಪ್ತೀರಾ ? ಬೆಳಗ್ಗೆ ಉತ್ತರ ತಿಳಿಸ್ತೀರಾ ? ಫೋನ್ ಮಾಡಿ, ಮರೀದೆ. ವಾಪಸು ಪಕ್ಷದ ಕಚೇರಿ ಹತ್ತಿರ ಬಿಡೋಣವಾ ?"

"ಬೇಡ. ನಡಕೊಂಡು ಹೋಗ್ತೀನಿ. ನೀವು ಮುಂದೆ ಹೋಗಿ ಬಲಕ್ಕೆ ತಿರುಗಿ. ಹೆದ್ದಾರಿ ಸಿಗ್ತದೆ."

* * *

ಅಧ್ಯಕ್ಷತೆ ಖಾಲಿ ಇರುವ ನಿಗಮಗಳ ಪಟ್ಟಿಯ ಫೈಲು ಮುಖ್ಯಮಂತ್ರಿಯ ಮೇಜಿನ ಮೇಲೆಯೆ ಇತ್ತು. ಹೇಳಿದ ದಿನವೇ ಪಟ್ಟಿ ತಯಾರಿಸಿ ಕಳಿಸಿರಬೇಕು.... ಏನೇ ಆಗಲಿ, ಇದೊಳ್ಳೇ ಸಿಕ್ಕುಗಂಟಾಯಿತಲ್ಲ. ಪಾರಾಗಬೇಕು. ಮೊಸಳೆಗಳಿಂದ ಪಾರಾಗಿ ಆಚೆ ದಡ ಸೇರಬೇಕು....ನಿದ್ದೆ. ಎಲ್ಲಿಯ ನಿದ್ದೆ ? ಲೇಹ್ಯ ಸರಿ. ನಿದ್ದೆ ಮಾತ್ರೆಯನ್ನೂ ನುಂಗಬೇಕು.

೨೨

ಇನ್ನೂ ಕಲ್ಯಾಣನಗರ ಸೇರಬೇಕಾಗಿದ್ದ ಶಾಸಕರಿಗೆ ರೈಲುನಿಲ್ದಾಣದಲ್ಲಿ ಬಸ್ ನಿಲ್ದಾಣದಲ್ಲಿ ಪರಿಚಿತರಿಂದ ಸ್ವಾಗತ ದೊರೆಯಿತು. ಆದರೆ ಹೆಚ್ಚಿನವರು ಮುಖ್ಯ ಮಂತ್ರಿಯ ನಿವಾಸಕ್ಕೇ ಕಾರು ಹತ್ತಿದರು. ಆದರೂ ವಿಶ್ವಂಭರನ ಪಟ್ಟಿಯ ಎಂಭತ್ತು ಹೆಸರುಗಳಿಗೆ ಧಕ್ಕೆ ತಟ್ಟಲಿಲ್ಲ. ಕೆಲವರು ತಂತಿ ಮೂಲಕ ಸಹಿ ಕಳಿಸಿದ್ದರು, ಕೆಲವರು ಫೋನ್ ಮೂಲಕ, ಮತ್ತೆ ಕೆಲವರದು ಎರಡೆರಡು ಸಹಿಗಳಿದ್ದುವು.

ವಿದ್ಯಾಧರನ ಪಟ್ಟಿಯಲ್ಲೂ ಅದೇ ಅವಸ್ಥೆ. ಅಂತೂ ಪ್ರಚಾರದ ಭರಾಟೆ ಯಲ್ಲಿ ೮೦ ಮತ್ತು ೭೫ ಎಂಬ ಸಂಖ್ಯೆಗಳು ಬಾವುಟ ಹಾರಿಸಿದ್ದುವು.

ಇದು ಇಂದ್ರಜಾಲ ಎನಿಸಿತು ಸೌದಾಮಿನಿಗೆ.

ಐ ಜಿ ಪಿ ಸಲಹೆ ಕೇಳಲು ಬಂದ.

"ಇವತ್ತು ಮೆರವಣಿಗೆ. ಏನು ಮಾಡೋಣ ?"

ನಾಲಗೆಯ ತುದಿಯವರೆಗೂ ಬಂತು ಸಲಹೆ: ಗುಂಡು ಹಾರಿಸಬೇಕು, ಗುರಿ ಇಟ್ಟು ; ಲಕ್ಷ್ಮೀಪತಿ ಮತ್ತು ವಿಶ್ವಂಭರ ಉರುಳಬೇಕು ; ಅದು ಆಕಸ್ಮಿಕ ಮರಣ ಎಂದು ಜಾಹೀರು ಮಾಡಬೇಕು ; ಸಂಜೆ ಬಹಿರಂಗ ಶೋಕಸಭೆ ; ಸತ್ತವರ ಗುಣ ಗಾನ ಮಾಡಿ ತಾನು ಅಳಬೇಕು, ಅಳಬೇಕು. (ಕರುಣಾಮಯಿ, ಮಾತಾಜಿ!) ನಾಲ ಗೆಯ ತುದಿತನಕ ಬಂದರೂ ಸಲಹೆ ಧ್ವನಿ ಪಡೆಯಲಿಲ್ಲ.

"ಪರಿಸ್ಥಿತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು ?"

"ಮುಂಜಾಗರೂಕತಾ ಕ್ರಮವಾಗಿ ಐನೂರು ಜನರನ್ನು ಬಂಧಿಸಿದ್ದೇವೆ. ಮಧ್ಯಾಹ್ನ ಊಟ ಕೊಟ್ಟು ಬಿಟ್ಟುಬಿಡ್ತೇವೆ: ನಿನ್ನೆ ರಾತ್ರೆ ತಮ್ಮ ಅನುಮತಿ ಪಡೆಯ ಬೇಕೂಂತ ಯತ್ನಿಸಿದೆ: ತಾವು ಸಿಗಲಿಲ್ಲ."

"ಹೌದು. ಸ್ವಲ್ಪ busy ಯಾಗಿದ್ದೆ. ನೀವು ಕೈಕೊಂಡಿರೋ ಕ್ರಮಕ್ಕೆ ನನ್ನ ಸಮ್ಮತಿ ಇದೆ. ಸೌದಾಮಿನಿಯದು ಪೋಲೀಸ್ ರಾಜ್ಯ ಅನ್ನೋ ದೂಷಣೆ ಬರ ಬಾರದು. ಹಾಗೆ ವರ್ತಿಸಿ. ಮೆರವಣಿಗೆಯನ್ನು ನಿಷೇಧಿಸೋದು ಬೇಡ. ರಾಜಭವ ನದ ತಿರುವಿನಲ್ಲಿ ಮೆರವಣಿಗೆ ನಿಲ್ಲಲಿ. ವಿಶ್ವಂಭರ ಮತ್ತು ಲಕ್ಷ್ಮೀಪತಿ ಇಬ್ಬರ ನಿಯೋಗ ರಾಜ್ಯಪಾಲರನ್ನು ಭೇಟಿಯಾಗಲಿ. ಇಲ್ಲಿಂದ ನೇರವಾಗಿ ರಾಜ್ಯಪಾಲ ರಲ್ಲಿಗೆ ಹೋಗಿ ಮನುಷ್ಯ ವಿಳೋದು ತಡ, ಒಂದರ್ಧ ಗಂಟೆ ಕಾಯಬೇಕಾದೀತು– ಕಾರ್ಯಾಚರಣೆಯ ಯೋಜನೆ ತಿಳಿಸಿಬಿಡಿ."

ಆ ಬೆಳಗ್ಗಿನ 'ಕಿಷ್ಕಿಂಧಾವಾಣಿ' ಮುಖಪುಟದಲ್ಲಿ ಅಂಗದ ವಿರಚಿತ ವ್ಯಂಗ್ಯಚಿತ್ರ ಒಂದಿತ್ತು. ದೊಡ್ಡ ಆಕಾರದ್ದು. ಮಧ್ಯದಲ್ಲಿ ಗಂಡುಡುಗೆಯ ಸೌದಾಮಿನಿ ಮುಖದ ಮಹಾವ್ಯಾಧ. ಸುತ್ತಲೂ ವೃತ್ತ ರಚಿಸಿದ್ದರು, ಸಂಪುಟದ ಉಳಿದ ಆರು ಮಂತ್ರಿಗಳು ಸೀರೆಯುಟ್ಟುಕೊಂಡು. ಚಿತ್ರದ ಕೆಳಗೆ ಬರೆದಿತ್ತು : 'ಕಿಷ್ಕಿಂಧೆ ಸಂಪುಟದ ಏಕಮಾತ್ರ ಗಂಡಸು.' ಪರಶುರಾಮ ಮಾತಾಜಿಗೆ ತೋರಿಸಬೇಕೊ ಬೇಡವೊ ಎಂಬ ಗೊಂದಲ ದಲ್ಲಿ ಮುಳುಗಿದ. ಸಂಪುಟದ ಏಕಮಾತ್ರ ಗಂಡಸು ಅಂದರೇನು ? ಈಗಿನ ಸ್ಥಿತಿ ಯಲ್ಲಿ ಇದು ಅಣಕವೊ? ಪ್ರಶಂಸೆಯೊ?.... ಗಂಡಸ್ತನ ಎನ್ನುವುದು ಮೆಚ್ಚುಗೆಯ ಪದವಲ್ಲವೆ ?

ಪರಶುರಾಮ ಮತ್ತೂ ಯೋಚನಾ ಮಗ್ನನಾದಂತೆ, ಮುಖ್ಯಮಂತ್ರಿಯ ಗಂಟಲು ಕೇಳಿಸಿತು.

"ಪರಶು ! ಇವತ್ತಿನ 'ಕಿಷ್ಕಿಂಧಾವಾಣಿ' ಎಲ್ಲಿ ?"

"ತಂದೆ, ಮಾತಾಜಿ."

ವ್ಯಂಗ್ಯ ಚಿತ್ರವನ್ನು ನೋಡಿ ಸೌದಾಮಿನಿಯ ಮುಖ ಅರಳಿತು. ಪರಶುರಾಮನ ಮುಖವೂ ಅಗಲವಾಯಿತು. ಪ್ರಶಂಸೆಯೇ. ರಾಷ್ಟ್ರಪಕ್ಷದೊಳಗಿನ ಜಗಳದ ವಿಷಯ ಆ ಸಂಚಿಕೆಯಲ್ಲೇನೂ ಇರಲಿಲ್ಲ. ಕಳೆದ ತಿಂಗಳಷ್ಟೇ 'ಕಿಷ್ಕಿಂಧಾವಾಣಿ'ಯ ಹೊಸ ಕಟ್ಟಡಕ್ಕಾಗಿ ವಿಶಾಲ ನಿವೇಶನ ಮಂಜೂರಾಗಿತ್ತು.

ರಂಗಧಾಮನಿಂದ ಕರೆ ಬಂತು :

"ಮಾತಾಜಿ, ಇವತ್ತಿನ 'ಕಿಷ್ಕಿಂಧಾವಾಣಿ'ಯ ವ್ಯಂಗ್ಯ ಚಿತ್ರ ಅವಮಾನದ ಪರಮಾವಧಿ. ನಿಮ್ಮ ಸಂಪುಟದಲ್ಲಿ ನಾವಿರುವುದು ಸರಿಯಲ್ಲ."

"ನಾವು ಅಂದರೆ ?"

"ಆರು ಜನ ಹೆಂಗಸರು."

"ರಂಗಧಾಮ್, ಬೆನ್ನಲ್ಲಿ ಇರಿಯೋ ಯೋಚನೇನೊ ?"

"ಆರು ಜನರೂ ಇಲ್ಲಿಯೇ ಇದ್ದೇವೆ... ಮಾತಾಡಿ ಬಾಲಾಜಿ...."

ಒಬ್ಬೊಬ್ಬರಾಗಿ ಅವರೆಲ್ಲ ಒಂದೇ ಮಾತು ಅಂದರು :

"ನನ್ನ ರಾಜಿನಾಮೆ ಸ್ವೀಕರಿಸಿ !"

"ರಂಗಧಾಮ್, ಅವರಿಗೆಲ್ಲ ಹೇಳಪ್ಪ. ಆ ವ್ಯಂಗ್ಯಚಿತ್ರ ನೋಡಿ ನಿಮಗೆಷ್ಟು ಬೇಸರವಾಗಿದೆಯೊ ನನಗೂ ಅಷ್ಟೇ ಆಗಿದೆ. ಆ ಪತ್ರಿಕಾ ಮಾಲಿಕ ಕ್ಷಮೆಯಾಚಿಸೋ ಹಾಗೆ ಮಾಡೋಣ. ಸಹೋದ್ಯೋಗಿಗಳಿಗೆಲ್ಲ ತಿಳಿಸಪ್ಪ. ನಿಮಗೆ ಬೇಡವಾದರೆ ನಾನು ಹೋಗ್ತೀನಿ. ಆ ವಿಷಯ ಬೇರೆ. ಆದರೆ ಒಂದು ವ್ಯಂಗ್ಯ ಚಿತ್ರದಿಂದಾಗಿ ಕಿಷ್ಕಿಂಧಾ ಮಂತ್ರಿಮಂಡಲ ರಾಜಿನಾಮೆ ಕೊಟ್ಟಿತೂಂತ ರಾಷ್ಟ್ರ ನಗೋದಿಲ್ಲವೆ ? ದಿಲ್ಲಿ ಏನು ಹೇಳೀತು ? ಜನತೆ ಏನಂದೀತು ?"

ತುಸು ಕಾಲದ ನೀರವತೆಯ ಬಳಿಕ ರಂಗಧಾಮನ ಸ್ವರ ಬಂತು...

"ನಮಗೆ ಬಹುಮತ ಇದೇಂತ ನಾವು ಸಾಬೀತು ಮಾಡಲೇಬೇಕು. ರಾಷ್ಟ್ರ ಸಭೆಯ ಶಾಸಕಾಂಗ ಪಕ್ಷದ ತುರ್ತು ಸಭೆ ಕರೀರಿ."

"ಕರೆಯೋಣ. ಆ ವಿಶ್ವಂಭರ–ಲಕ್ಷ್ಮೀಪತಿ ಪ್ರಭೃತಿಗಳು ಇವತ್ತು ದಿಲ್ಲಿಗೆ ಹೋಗ್ತಾರೆ. ನಾಳೆಯೇ ವಾಪಸಾದಾರು. 'ಮನೆ ಮುರುಕರಾಗ್ಬೇಡಿ' ಅಂತ ಪ್ರಧಾನಿ ಅವರಿಗೆ ಛೀಮಾರಿ ಹಾಕಿದರೆ ತೆಪ್ಪಗಾಗ್ತಾರೆ."

"ಆದರೂ ತುರ್ತುಸಭೆಗೆ ನೋಟೀಸು ಕೊಟ್ಬಿಡಿ. ವಿಶ್ವಂಭರ—ಲಕ್ಷ್ಮೀಪತಿ ಬೇಸ್ತು ಬಿದ್ದರೆ ನಾವು ವಿಜಯೋತ್ಸವ ಆಚರಿಸೋಣ."

"ಆಗಲಿ ರಂಗಧಾಮ್. ನಿನ್ನ ಆಶೀರ್ವಾದ ಬಲದಿಂದ ನಮಗೇ ಜಯ ವಾಗುತ್ತೆ."

"ಅಷ್ಟರವರೆಗೆ ಪ್ರತಿಪಕ್ಷದವರ ಜತೆ ಸಮ್ಮಿಶ್ರ ಸರ್ಕಾರದ ಮಾತು ಆಡ್ಬೇಡಿ !"

"ಇದೆಲ್ಲ ವಿಶ್ವಂಭರನ ಕಾರಖಾನೆಯಲ್ಲಿ ತಯಾರಾದ ಸುಳ್ಳಿನ ಪಟಾಕಿ. ನೀವು ನಂಬಬಾರದು."

"ಹೋಗಲಿ ಬಿಡಿ. ಸೆರಗಿನಲ್ಲಿ ಕೆಂಡ ಕಟ್ಕೊಳ್ಳೋಕಾಗುತ್ತ ? ಸತ್ಯ ಹೊರಗೆ ಬಂದೇ ಬರುತ್ತೆ."

...ಸಮತಾಪಕ್ಷದ ಕಾರ್ಯದರ್ಶಿ ಮಲ್ಲೇಶ್‌ನಿಂದ ಫೋನ್ ಬಂತು.

"ಚೀಫ್ ಮಿನಿಸ್ಟರಾ? ನಿನ್ನೆ ರಾತ್ರಿ ದಂಡಪಾಣೀನ ಕಂಡು ವ್ಯವಹಾರ ಕುದುರಿ ಸೋಕೆ ನೋಡಿದಿರಂತೆ. ಇಷ್ಟೂ ರಾಜಕೀಯ ತಿಳೀದೆ ನಿಮಗೆ ? ನಮ್ಮ ಪಕ್ಷದಲ್ಲಿ ಕಾರ್ಯದರ್ಶಿ ಮುಖ್ಯ."

"ನಿಮ್ಮ ಕಚೇರಿಗೇ ಬಂದದ್ದು. ದಂಡಪಾಣಿ ಸಿಕ್ಕಿದರು. ನಿಮಗೆ ವರದಿ ಕೊಟ್ಟೇ ಕೊಡ್ತಾರೆ ಅಂತ ಅವರಿಗೆ ವಿಷಯ ತಿಳಿಸ್ದೆ. ಇಬ್ಬರೂ ಬನ್ನಿ. ಮಾತಾಡೋಣ."

"ಅದಕ್ಕೆ ಕೇಂದ್ರ ಸಮಿತಿಯ ಅನುಮತಿ ಬೇಕು."

"ನಮಗೆ ಬಹುಮತ ಇಲ್ಲಾಂತ ನಾನು ಈ ಮಾತುಕತೆ ನಡೆಸ್ತಿಲ್ಲ. ಎಲ್ಲ ಪಕ್ಷಗಳೂ ಇರುವ ರಾಷ್ಟ್ರೀಯ ಸಂಯುಕ್ತರಂಗ ನನ್ನ ಕನಸು ಮತ್ತು ಸಿದ್ಧಾಂತ. ಇವತ್ತು ಕಿಷ್ಕಿಂಧೆಯಲ್ಲಿ ಆದರೆ, ನಾಳೆ ರಾಷ್ಟ್ರವ್ಯಾಪ್ತಿಯಲ್ಲಿ ಆಗ್ತದೆ... ಅಂದ ಹಾಗೆ ಮೆರವಣಿಗೆಗೆ ನಿಮ್ಮವರೂ ಸೇರ್ತಾರ ?"

"ಇಲ್ಲ. ಬೇಡ ಅಂತ ತೀರ್ಮಾನಿಸಿದ್ದೇವೆ."

"ನಿಮ್ಮದು ಸಮರ್ಪಿತ ಬದುಕು. ಸಾರಾಸಾರಾ ವಿಚಾರ ಮಾಡಿಯೇ ನಾನು ಹೇಳಿದ್ದರ ಬಗ್ಗೆ ನಿರ್ಧಾರ ಕೈಗೊಳ್ತೀರಿ ಅಂತ ನಂಬಿದ್ದೇನೆ."

"ಮುಂದೆ ನಾನೇ ತಮಗೆ ಫೋನ್ ಮಾಡ್ತೇನೆ."

....ರಿಸೀವರ್ ಇಟ್ಟೊಡನೆ ಮತ್ತೆ ಫೋನ್ ಜೀವ ತಳೆಯಿತು.

"ಎತ್ತು ಪರಶುರಾಮ್, ನಾಯಕ್ ಇರಬೇಕು," ಎಂದಳು ಸೌದಾಮಿನಿ.

ಹೌದು. ಪ್ರತಿ ಪಕ್ಷದ ನಾಯಕ. ಫೋನಿನ ಬಳಿ ಸಾರಿದಳು.

"ಮಾತಾಜಿಗೆ ಪ್ರಣಾಮ. ಯೋಗಾಸನ ಆಯ್ತ ?"

"ಏನು ತೀರ್ಮಾನಿಸಿದಿರಿ ?"

"ಅವಸರದಲ್ಲಿದೀರೀಂತ ಕಾಣುತ್ತೆ. ಸಹಜ. ಪಾಪ ! ತೀರ್ಮಾನ ನಿನ್ನೇದೆ. ನೀನು ಪಟ್ಟದಿಂದ ಇಳೀಬೇಕು. ಹೆಚ್ಚೆಂದರೆ ನಿನಗೊಂದು ಮಂತ್ರಿಸ್ಥಾನ ಕೊಟ್ಟೇನು, ಸಮಾಜ ಕಲ್ಯಾಣ ಖಾತೆ. ಆದೀತಾ ?"

ಸೌದಾಮಿನಿ ರಿಸೀವರನ್ನು ಕುಕ್ಕಿದಳು. ಅವಳ ಮನಸ್ಸು ಕಲ್ಲಾಯಿತು. ಶಾಂತಿ ಮಾತುಕತೆ ಯಾರೊಂದಿಗೂ ಇಲ್ಲ. ಇನ್ನು ಸಮರ, ಸಮರವೊಂದೇ !

ಮುಖ್ಯ ಕಾರ್ಯದರ್ಶಿಯಿಂದ ಫೋನ್ ಬಂತು :

"ರಾಜ್ಯಪಾಲರು ಇವತ್ತು ಸಂಜೆ ದಿಲ್ಲಿಗೊಂದು ವರದಿ ಕಳಿಸ್ತಾರಂತೆ."

"ಅವನಿಗಿನ್ನೇನು ಕೆಲಸ ? ದೂತ ಬೇಕಾದರೆ ವಿಶ್ವಂಭರ ಇದ್ದಾನೆ. ಅವನ ಕೈಲಿ ಕೊಟ್ಟರಾಯಿತು."

"ಪರಿಸ್ಥಿತಿ ಬಿಗಡಾಯಿಸಿಲ್ಲ ಅಂತ ನನ್ನ ಅನಿಸಿಕೆ."

"ನನಗೂ ಹಾಗೇ ತೋರುತ್ತೆ. ಒಂದು ಕೆಲಸವಾಗಬೇಕಲ್ಲ ಚೌಗುಲೆ ಸಾಹಿಬ್.... ಕಿಷ್ಕಿಂಧಾವಾಣಿ ವ್ಯಂಗ್ಯ ಚಿತ್ರ—"

"ಸೊಗಸಾಗಿದೆ."

"ಆದರೆ ಸಂಪುಟದ ನನ್ನ ಆರು ಜನ ಮಂತ್ರಿಗಳಿಗೆ ಹಾಗೆ ಅನಿಸಿಲ್ಲ. ಇದು ಅವಮಾನ ಅಂತ ಕೂಗಾಡಿದ್ರು. ಆ ಮಾಲಿಕನಿಗೆ ಸ್ವಲ್ಪ ತಿಳಿಯ ಹೇಳಿ. 'ವ್ಯಂಗ್ಯ ಚಿತ್ರದಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತ ಪಡಿಸುತ್ತೇವೆ' ಬೇಡ— 'ಕ್ಷಮೆ ಕೋರುತ್ತೇವೆ' ಅಂತ ನಾಳೆಯ ಸಂಚಿಕೇಲಿ ಅಚ್ಚು ಹಾಕಲಿ. ಇದು ಬಹಳ ಅಗತ್ಯ. ಹಾಗಲ್ಲ. 'ನಿನ್ನೆಯ ವ್ಯಂಗ್ಯಚಿತ್ರ ಕೆಲಮಂತ್ರಿಗಳಿಗೆ ನೋವುಂಟು ಮಾಡಿದೆ ಎಂದು ತಿಳಿದು ಬಂದಿದೆ. ವ್ಯಂಗ್ಯಚಿತ್ರದಲ್ಲಿ ತಮಾಷೆಗೇ ಮಹತ್ವ. ಅಷ್ಟರಲ್ಲೂ ಮನಸ್ಸಿಗೆ ನೋವಾಗಿದ್ದರೆ ನಿಶ್ಶರ್ತ ಕ್ಷಮೆ ಕೋರುತ್ತೇವೆ' ಎಂದು ಹಾಕಿಸಿ. ನುಣುಚಿ ಕೊಂಡು ಪಾರಾಗೋದಕ್ಕೆ ಬಿಡಬೇಡಿ. ಮಂಜೂರಾಗಿರುವ ನಿವೇಶನವನ್ನು ಬೇಗನೆ ಬಿಡುಗಡೆ ಮಾಡ್ತೇವೆ ಅನ್ನಿ."

"ಅವರನ್ನು ಖಂಡಿತ ಒಪ್ಪಿಸ್ತೇನೆ."

ಮಾತಾಜಿ ಕಿಟಕಿಯ ಮೂಲಕ ಆಕಾಶ ನೋಡುತ್ತ ಯೋಚಿಸಿದಳು :

ಮಾನವ ಶಕ್ತಿಗಿಂತ ಮಿಗಿಲಾದದ್ದು ದೈವೀ ಶಕ್ತಿ, ಅದು ತನ್ನ ಪಾಲಿಗೆ ಹೇರಳ ವಾಗಿದೆ. ಹೀಗಿರುತ್ತ ಮಾನವಶಕ್ತಿಯ ಕೈ ಮೇಲಾದೀತೆ ? ಇಷ್ಟರಲ್ಲೂ ಹುಲು ಮಾನವರನ್ನು ಜಯಿಸಬಲ್ಲ ಶಕ್ತಿ ಇಲ್ಲವೆ ? ಇದೆ. ಯಾವುದು ? ಧನಶಕ್ತಿ.

ಭಾನುವಾರ ರಾಷ್ಟ್ರಪಕ್ಷದ ಶಾಸಕಾಂಗದ ಸಭೆ. ತಾನು ಅದರಲ್ಲಿ ಜಯಶೀಲೆ ಯಾಗಲೇಬೇಕು. ಲಕ್ಷ್ಮೀಪತಿ–ವಿಶ್ವಂಭರರನ್ನು ಬಿಟ್ಟು, ಮಂತ್ರಿಗಳನ್ನೂ ಬಿಟ್ಟು,

ತನ್ನ ಪಕ್ಷದ ಉಳಿದೆಲ್ಲ ಶಾಸಕರಿಗೆ, 'ಪ್ರಯಾಣ ವೆಚ್ಚ' ಎಂದು ಚೀಟಿ ಬರೆದು, ಅದಕ್ಕೆ ಎರಡೆರಡು ಸಾವಿರ ಲಗ್ತೀಕರಿಸಿ ಲಕೋಟೆಗಳನ್ನು ನಸುಕಿನಲ್ಲೇ ತಲಪಿಸಬೇಕು. ಚೀಟಿಯಲ್ಲಿ ತನ್ನ ಸಹಿ? ಲಕೋಟೆ ವಿಶ್ವಂಭರನ ಶಿಬಿರದಿಂದ ಬಂದಿದೆ ಎಂದು ಯಾರಾದರೂ ಭಾವಿಸಿದರೆ? ಚೀಟಿಯಲ್ಲಿ ತನ್ನ ಸಹಿ ಇರುವುದೇ ಸರಿ. ಪಕ್ಷದ ನಾಯಿಕೆಯಾಗಿ ತಾನು ಕೊಡುತ್ತಿರುವ ಪ್ರಯಾಣ ವೆಚ್ಚ. ಇದು ಲಂಚವಲ್ಲ.

ಎಂದಿನಂತೆ ಸೌದಾಮಿನಿ ಕಾರ್ಯಸೌಧಕ್ಕೆ ಹೋದಳು. ಹತ್ತಿರದಲ್ಲೇ ಇತ್ತು ರಾಜಭವನ ರಸ್ತೆ. ಅತ್ತ ಬರುವ ಅವಕಾಶ ಯಾವುದಾದರೂ ಮೆರವಣಿಗೆಗೆ ಎಂದಾದರೂ ಸಿಕ್ಕಿದರೆ, ಕಾರ್ಯಸೌಧದಿಂದ ಅದರ ವೀಕ್ಷಣೆ ಸಾಧ್ಯವಿತ್ತು. ಮುಖ್ಯಮಂತ್ರಿಯ ಚೇಂಬರ್ ಇರುವ ಮೊದಲ ಮಹಡಿಯಿಂದಂತೂ ಮೆರವಣಿಗೆಯ ಎಲ್ಲ ವಿವರಗಳೂ –ಕೋಡು, ನಡು, ಬಾಲ ಎಲ್ಲ–ಕಾಣಿಸುತ್ತಿದ್ದುವು, ದುರ್ಬೀನಿನ ನೆರವು ಇಲ್ಲದೆಯೇ.

ಐ.ಜಿ.ಪಿ. ವಿಶ್ವಂಭರನೊಡನೆಯೂ ಚರ್ಚಿಸಿದ್ದ.

"ನಿಮ್ಮಿಂದ ಸ್ವಲ್ಪ ಸಹಾಯವಾಗಬೇಕಲ್ಲ ಐ.ಜಿ.ಪಿಯವರೆ...."

"ಪೋಲೀಸ್ ಬ್ಯಾಂಡ್ ಒಂದನ್ನು ಬಿಟ್ಟು ಬೇರೆ ಏನು ಬೇಕಾದರೂ ಕೇಳಿ."

"ಹಹ್ಹ! ನಮ್ಮದು ಸೆಂಟ್ ಪರ್‌ಸೆಂಟ್ ಅಹಿಂಸಾತ್ಮಕ. ನಿಮ್ಮವರು ಮುಂದೆಯೂ ಹಿಂದೆಯೂ ಲೆಫ್ಟ್‌ರೈಟ್ ನಡೆದರೆ ಸಾಕು."

"ಬಾವುಟ ಯಾವುದು ?"

"ರಾಷ್ಟ್ರಧ್ವಜ."

"ಸ್ಲೋಗನ್ಸ್ ?"

"ರಾಷ್ಟ್ರಪಕ್ಷ ಜಿಂದಾಬಾದ್."

"ಆಮೇಲೆ .."

"ಸೌದಾಮಿನಿ ಸರಕಾರ ಮುರ್ದಾಬಾದ್."

ಐ.ಜಿ.ಪಿ. ಎರಡು ನಿಮಿಷ ಮೌನವಾಗಿದ್ದು, "ಅದೊಂದನ್ನು ಬಿಟ್ಟರಾಗದೆ?" ಎಂದು ಕೇಳಿದ.

"ಅದು ಹೇಗೆ ಸಾಧ್ಯ ? ಜೀವಾಂಶವೇ ಆ ಸ್ಲೋಗನ್."

"ಏನೋಪ್ಪ...."

"ಏನೂ ಚಿಂತಿಸ್ಬೇಡಿ. ನಿಮ್ಮ ವರದಿ ಸರಕಾರಕ್ಕೆ ತಲಪೋ ಹೊತ್ತಿಗೆ–ಇನ್ನೆರಡು ಮೂರು ದಿವಸ–ಹೊಸ ಗೃಹಮಂತ್ರಿ ಅಧಿಕಾರ ವಹಿಸ್ಕೊಂಡಿರ್‍ತಾರೆ."

"ನಿಮ್ಮಿಚ್ಛೆ. ಕಾರ್ಯಸೌಧದ ಮುಂದೆ ಶಾಂತವಾಗಿ ಹೋಗ್ಬೇಕು. ಸಿ.ಎಂ.ನ ಚೇಂಬರ್ ಕಡೆ ನೋಡಿ ಕೂಗಾಡ್ಬಾರದು."

"ನೀವು ಕಿಷ್ಕಿಂಧೆಯ ಗಾಂಧೀ–ಐ ಜಿ ಪಿ."

"ಗೃಹಮಂತ್ರಿಯಾದ್ಮೇಲೆ ಏನು ಹೇಳ್ತೀರೋ ಪರಮಾತ್ಮನಿಗೇ ಗೊತ್ತು !"

....ಘೋಷ ದೂರದಿಂದ ಕೇಳಿಸಿತು, ಹತ್ತಿರ ಬಂತು. ಸೌದಾಮಿನಿ

ಕುಳಿತಲ್ಲಿಂದ ಮಿಸುಕಲಿಲ್ಲ. ಫೈಲುಗಳನ್ನು ಒಂದೊಂದಾಗಿ ನೋಡುತ್ತ ಟಿಪ್ಪಣಿ ಬರೆಯುತ್ತಲೋ ಸಹಿಹಾಕುತ್ತಲೋ ಕುಳಿತಳು. ಮುರ್ದಾಬಾದ್ ಹತ್ತಿರ ಬಂದಾಗ ತನ್ನಷ್ಟಕ್ಕೆ ನಕ್ಕಳು.

ಮೆರವಣಿಗೆಯಲ್ಲಿದ್ದ ವಿಶ್ವಂಭರನೊಮ್ಮೆ ಆ ಕಡೆ ನೋಡಿದ. ತೆರೆದ ಕಿಟಕಿಗಳಿಗೆ ಪರದೆ ಅಡ್ಡವಾಗಿರಲಿಲ್ಲ. 'ಎದ್ದರೆ ಎಲ್ಲಿ ಪೀಠ ಮಾಯವಾದೀತೊ ಅಂತ ಭದ್ರವಾಗಿ ಕುಳಿತಿರಬೇಕು,' ಎಂದುಕೊಂಡ.

ರಾಜಭವನದ ತಿರುವಿನಲ್ಲಿ ಮೆರವಣಿಗೆ ನಿಂತಿತು. ಹೊರಟಾಗ ನೂರು, ದಾರಿಯಲ್ಲಿ ಸೇರಿಕೊಂಡವರು ನೂರಿನ್ನೂರು. ಕಾಫಿ ತಿಂಡಿಗಾಗಿ ಬಂದ ಕಿರಿಯರು ನೂರು ಮಂದಿ. ಬಿಸಿಲು ಚುರುಕ್ ಎಂದರೂ ಮೆರವಣಿಗೆಯ ಜನ ಜಿಂದಾಬಾದ್ ಮುರ್ದಾಬಾದ್ ನಿಲ್ಲಿಸಲಿಲ್ಲ. ರಾಜಭವನದ ಮಹಾದ್ವಾರದ ಬಳಿ ಐಜಿಪಿಯಿಂದ ನೆರವು ದೊರೆಯಿತು. ಲಕ್ಷ್ಮೀಪತಿ–ವಿಶ್ವಂಭರ, ಅಥವಾ ವಿಶ್ವಂಭರ–ಲಕ್ಷ್ಮೀಪತಿ, ಒಳ ನಡೆದರು. ಇಬ್ಬರ ಆ ನಾಯಕತ್ವವನ್ನು ರಾಜ್ಯಪಾಲರು ಗಾಂಭೀರ್ಯದಿಂದ ಸ್ವಾಗತಿಸಿದರು, ತಮ್ಮ ಚೇಂಬರಿನಲ್ಲಿ. ತಮಗೆ ಹತ್ತಿರದಲ್ಲಿದ್ದ ವಿಶ್ವಂಭರನಿಗೆ "ವರದಿ ಕಳಿಸಿದ್ದೇನೆ" ಎಂದರು. ಅದು ಹಳೆಯದು. ಇಂದಿನ ವರದಿ (ಜಿಂದಾಬಾದ್ ಮುರ್ದಾಬಾದ್) ಸಂಜೆ.

"ನಿಮ್ಮ ಹಿಂಬಾಲಕರು ಬಿಸಿಲಲ್ಲಿ ಕಾಯ್ತಿದಾರೆ. ಹೋಗಿ ಬನ್ನಿ. ಒಳ್ಳೆಯದಾಗಲಿ."

—ಇಷ್ಟು ಹೇಳಿ ರಾಜ್ಯಪಾಲರು ವಿಶ್ವಂಭರನೆಡೆಗೆ ನೋಡಿ ನಸುನಕ್ಕರು.

ನಿಯೋಗ ಹಿಂತಿರುಗುತ್ತಿದ್ದಂತೆ ಘೋಷ ತೀವ್ರವಾಯಿತು. ಈಗ ಜಿಂದಾಬಾದ್ ಒಂದೇ. ಅದೂ ಬೇರೆ ರೀತಿಯಲ್ಲಿ.

—"ವಿಶ್ವಂಭರ ಜಿಂದಾಬಾದ್ !"

—"ಲಕ್ಷ್ಮೀಪತಯ್ಯ ಜಿಂದಾಬಾದ್ !"

ಮೆರವಣಿಗೆ ಚೆದರಿತು. ನಾಲ್ಕಾರು ದಾರಿಗಳಲ್ಲಿ. ಕಿರಿಯರು ಹತ್ತಿರದ ದೊಡ್ಡ ಹೋಟೆಲನ್ನು ಹೊಕ್ಕರು. ಶಾಲೆ ತಪ್ಪಿಸಿಕೊಂಡು ಬಂದಿದ್ದ ಪುಟಾಣಿಗಳು ಕೆಲವರು ಹೊಸ ಘೋಷಣೆಗಳನ್ನು ಕಂಠಪಾಠ ಮಾಡಿದರು.

—"ವಿಶ್ವಂಭರ ಜಿಂದಾಬಾದ್ !"

—"ಲಕ್ಷ್ಮೀಪತಯ್ಯ ಜಿಂದಾಬಾದ್ !"

—ಅದಲು ಬದಲು ಆಟ ಇಷ್ಟವಿದ್ದ ಕೆಲ ಹುಡುಗರು "ವಿಶ್ವಂಭರ ಮುರ್ದಾಬಾದ್" "ಸೌದಾಮಿನಿ ಜಿಂದಾಬಾದ್" ಎಂದರು. ರಸ್ತೆಯ ಅಂಚಿನಲ್ಲಿ ಡ್ಯೂಟಿ ಮೇಲಿದ್ದ ಪೋಲೀಸನೊಬ್ಬ, "ಹಲ್ಕಾ ಮುಂಡೇವು. ಹೇಳೋರು ಕೇಳೋರು ಯಾರೂ ಇಲ್ವ ನಿಮಗೆ ? ಸ್ಕೂಲಿಗೋ ಮನೆಗೋ ಹೊರಟ್ಹೋಗ್ರಿ ಇಲ್ಲಿಂದ" ಎಂದು, ಲಾಠಿ ತಿರುಗಿಸುತ್ತ ಬಯ್ದ. ಅಲ್ಲೊಂದು ಗಿಡ ಬೆಳೆದು ನಿಂತಿತ್ತು. ಸೊಕ್ಕಿ

ಬಿರಿಯುತ್ತಿದ್ದ ಸೊಪ್ಪಿಗೆ ಅವನೊಂದು ಏಟುಕೊಟ್ಟ. ಅತ್ತ ಕಡೆ ಎಲೆ ಆರಿಸುತ್ತಲಿದ್ದ ಒಂದು ಆಡು 'ಮೆಹೆ ಮೆಹೆ' ಎನ್ನುತ್ತ ಓಡಿಹೋಯಿತು. ಮೆರವಣಿಗೆಯ ಕಾರಣದಿಂದ ಡೊಂಕು ದಾರಿ ಹಿಡಿದಿದ್ದ ಸಿಟಿ ಬಸ್ಸುಗಳು ಮತ್ತೆ ಆ ಮಾರ್ಗದಲ್ಲೇ ಓಡಾಡತೊಡಗಿದುವು.

....ಅವತ್ತಿನ ಅಂಚೆಯಲ್ಲಿ 'ಖಾಸಗಿ' ಎಂದು ಮೇಲೆ ಬರೆದಿದ್ದ ಒಂದು ಲಕೋಟೆ ಬಂತು. ಪರಶುರಾಮನಿಂದ ಅದನ್ನು ಪಡೆದು ಸ್ವತಃ ಸೌದಾಮಿನಿಯೇ ಒಡೆದಳು. 'ಭಾರತ್ ಸತ್ತಾ' ದೈನಿಕದ ಮತ್ತು 'ಪ್ರೆಸೆಂಟ್' ಸಾಪ್ತಾಹಿಕದ ಪುಟಗಳು. ಮೃದುಲಾಬೆನ್ ಮತ್ತು ಅವಳ ತಂಡ ಕಿಷ್ಕಿಂಧೆಗೆ ನೀಡಿದ ಭೇಟಿಯನ್ನು ಕುರಿತು ಹಿಂದಿಯಲ್ಲೂ ಇಂಗ್ಲಿಷಿನಲ್ಲೂ ಲೇಖನಗಳಿದ್ದುವು. ಸಚಿತ್ರ. ಸೌದಾಮಿನಿಯ ದೊಡ್ಡದಾದ ಒಂಟಿ ಚಿತ್ರವೂ ಇತ್ತು ಎರಡೂ ಲೇಖನಗಳಲ್ಲಿ. ಕಾಗದದಲ್ಲಿ ಮೃದುಲಾಬೆನ್ ಬರೆದಿದ್ದಳು :

ಪ್ರೀತಿಯ ಸೌದಾ,

ಮುಂಬಯಿ ತಲಪಿದೊಡನೆ ಕಿಷ್ಕಿಂಧೆಯ ಮುಖ್ಯಮಂತ್ರಿಗೆ ನಾನು ಬರೆದ ಔಪಚಾರಿಕ ಪತ್ರ ಆಗಲೇ ಕೈಸೇರಿರಬಹುದು. (ಸೇರಿತ್ತು) ಇದನ್ನು ಬರೆಯುತ್ತಿರುವುದು ನನ್ನ ಆದರಣೀಯ ಗೆಳತಿ ಸೌದಾಗೆ. ಇನ್ನೊಂದು ಹೆಸರಿನಿಂದಲೇ ಸಂಬೋಧಿಸಬಹುದಾಗಿತ್ತು. ಆದರೆ ಈಗಿನ ಪರಿಸ್ಥಿತಿಯಲ್ಲಿ ಅದು ಸರಿಯಲ್ಲ (ಸೌದಾ : ಸ್ವಗತ—'ಈಗಿನ ಪರಿಸ್ಥಿತಿಯಲ್ಲಿ ಅದೇ ಸರಿ !') ಎಷ್ಟೆಂದರೂ ನೀವು ಮುಖ್ಯಮಂತ್ರಿ. ನಾನು ಸಮಾಜ ಸೇವಿಕೆ. ನಿಮ್ಮದು ಐಂದ್ರಜಾಲಿಕ ಸಾಧನೆ. ನನ್ನಿಂದ ಅಂಥದು ಕನಸಿನಲ್ಲೂ ಸಾಧ್ಯವಿಲ್ಲ.

ಈಗ ಇಲ್ಲಿ ಜಡಿಮಳೆ. ಮುಂಬಯಿ ಮಳೆ ನಿಮಗೆ ನೆನಪಿದ್ದೀತು. ಬಾಲ್ಕನಿಗೆ ಹೋಗೋಣ ಎಂದರೆ ಇರಿಚಲು ಕಾಟ. ಆದರೂ ಹುಟ್ಟೂರಿನ ಮಳೆ ಇಷ್ಟವಾದ್ದೇ ಅಲ್ಲವೆ ?

ವಿನೋದನಿಗೆ ಕಿಷ್ಕಿಂಧಾ ಯಾತ್ರೆಗೆ ಆಮಂತ್ರಣ ಬೇಕಂತೆ. ಸರಕಾರದ ಅತಿಥಿಯಾಗಿ ಇಡೀ ರಾಜ್ಯ ಸುತ್ತಿ ಕಿಷ್ಕಿಂಧೆಯ ಮೇಲೆ ಒಂದು ಪುಸ್ತಕ ಬರೀತಾನಂತೆ. ಅವನ ಗೆಳೆಯನೊಬ್ಬ ವಿಶ್ವವಿಖ್ಯಾತ ಪೇಂಟರ್—ಪೋರ್ಟ್ರೇಯ್ಟ್ ಪೇಂಟರ್—. ನೀವು ಪುರಸೊತ್ತು ಮಾಡಿಕೊಂಡು ಅವನಿಗೆ ಸಿಟಿಂಗ್ಸ್ ಕೊಡಬೇಕಂತೆ—ಇನ್ನೊಬ್ಬ ಶಿಲ್ಪಿ. ಅವನೂ ಮಿತ್ರನೇ, ಎದೆ ಮಟ್ಟದ ಶಿಲ್ಪಕೃತಿ ರಚಿಸಿದರೆ ಹೇಗೆ—ಅಂತ ವಿನೋದ ಕೇಳ್ತಿದ್ದಾನೆ. ಈ ಎಲ್ಲ ಕಾರ್ಯಕ್ರಮದಿಂದ ನಿಮ್ಮ ಬೊಕ್ಕಸ ಖಂಡಿತ ದಿವಾಳಿಯಾಗುವುದಿಲ್ಲವಂತೆ.

ಈ ಲೇಖನಗಳನ್ನು ಬಹಳ ಹಿಂದೆಯೇ ಕಳಿಸಬೇಕಾಗಿತ್ತು. ಕ್ಷಮಿಸಿ.

ವಿನೋದನೇ ಕಳಿಸ್ತಾನೆ ಅಂತ ನಾನು ಸುಮ್ಮನಿದ್ದೆ. ನಾನು ಕಳಿಸ್ತೇನೆ ಅಂತ ಅವನು ಸುಮ್ಮನಿದ್ದ. ಕರುಣಾ ಊರಲ್ಲಿಲ್ಲ. ಎರಡು ವಾರಗಳ ಮಟ್ಟಿಗೆ ಅಲಹಾಬಾದಿಗೆ ಹೋಗಿದ್ದಾಳೆ.

ಮುಂದಿನ ತಿಂಗಳು ನಮ್ಮ ತಂಡ ಲಕ್ನೋಗೆ ಹೋಗುತ್ತದೆ. ನಿಮ್ಮ ಶುಭಾಶಯ ನಮಗೆ ಶ್ರೀರಕ್ಷೆ,

ಮೃದುಲಾಬೆನ್ (ದೀದಿ)
ಅಧ್ಯಕ್ಷೆ
ಭಾರತಿ ಅನಾಥಾಶ್ರಮ ಪ್ರತಿಷ್ಠಾನ

ಕಾಗದ ಓದಿ ಮುಗಿಸುತ್ತಿದ್ದಂತೆ ಸೌದಾಮಿನಿಯ ಕಣ್ಣುಗಳಿಂದ ಎರಡು ಹನಿ ಕಣ್ಣೀರು ತೊಟ್ಟಿಕ್ಕಿತು. (ಎಲ್ಲ ಅನಾಥ ಮಕ್ಕಳಿಗೆ ಒಳ್ಳೆಯದಾಗಲಿ. ಈ ರಾಜ್ಯದ, ಈ ರಾಷ್ಟ್ರದ, ಈ ಜಗತ್ತಿನ ಎಲ್ಲಾ ಅನಾಥ ಮಕ್ಕಳಿಗೆ ಒಳ್ಳೆಯದಾಗಲಿ) ಪತ್ರವನ್ನು ಮಡಚಿ ಕಟಿಂಗ್ಸ್ ಸಹಿತ ಅವು ಬಂದಿದ್ದ ಲಕೋಟೆಯೊಳಕ್ಕೆ ತುರುಕಿ, ಅದನ್ನು ಪಕ್ಕದಲ್ಲಿರಿಸಿದಳು.

ಮೂಲೆಯಲ್ಲಿ ಫೋನ್ ಸದ್ದು ಮಾಡಿತು. ಪರಶುರಾಮ ರಿಸೀವರನ್ನೆತ್ತಿ, ಮಾತನಾಡಿ, ಮುಖ್ಯಮಂತ್ರಿಯ ಬಳಿ ಬಂದ.

"ಚೀಫ್ ಸೆಕ್ರೆಟರಿ ನೋಡಲು ಬರಬಹುದೆ ? ಅಂತ ಕೇಳ್ತಿದ್ದಾರೆ."

ಬೇಡ–ಎನ್ನಲೆ. ಎನಿಸಿತು ಒಮ್ಮೆ. ಬರಲಿ, ಆತನಿಗೆ ಹೇಗೆ ಅನಿಸುತ್ತೆ ಅಂತ ಕೇಳೋಣ ಎನಿಸಿತು ಮರುಕ್ಷಣ.

"ಬರಲಿ...."

....ಒಳಗೆ ಬಂದ ಚೌಗುಲೆ ನಮಸ್ಕರಿಸಿ ಕುಳಿತ.

"ಚೆನ್ನಾಗಿದ್ದೀರಾ ಶಿವಭಾವು ಸಾಹಿಬ್ ?"

"ಚೆನ್ನಾಗಿದ್ದೇನೆ, ಮಾತಾಜಿ... ನಿಗಮಗಳ ಖಾಲಿ ಹುದ್ದೆಗಳ ಬಗ್ಗೆ ತಾವೇನೂ ಹೇಳಲಿಲ್ಲ."

"ಶಾಸಕಾಂಗ ಪಕ್ಷದ ಸಭೆ ಕಳೀಲಿ–ಆಮೇಲೆ ಸಂಪುಟವನ್ನು ಪುನರ್ ರಚಿಸ್ತೇನೆ. ಆಗ ಖಾಲಿ ಹುದ್ದೆಗಳ ಇತ್ಯರ್ಥವನ್ನೂ ಮಾಡೋಣ."

"ನನ್ನಿಂದ ಆಗಬೇಕಾದ ಕೆಲಸವೇನಾದರೂ ಇದ್ದರೆ ಹೇಳಿ."

"ನಮ್ಮ ಗುಪ್ತಚಾರದಳದ ಮುಖ್ಯಸ್ಥ ನಾಪತ್ತೆ. ಹುಡುಕಿ ಹಿಡಿದು ಸ್ವಲ್ಪ ಕಳಿಸ್ಕೊಡಿ."

"ಹೂಂ. (ಏಳುತ್ತ) ನಿಮ್ಮ ಮನೋಸ್ಥೈರ್ಯಕ್ಕೆ ಯಾರಾದರೂ ತಲೆಬಾಗಲೇಬೇಕು."

"ಥ್ಯಾಂಕ್ಸ್, ಗೃಹ ಕಾರ್ಯಾಲಯಕ್ಕೆ ಹೋಗ್ತೀನಿ. ಆತ ಅಲ್ಲಿಗೇ ಬರಲಿ."

"ಆಗಲಿ."

* * *

ತುಸು ಊಟ ಮಾಡಿದ ಮೇಲೆ, ನಿದ್ರಿಸುವುದು ಮೇಲು—ಒಂದಿಷ್ಟು ನೆಮ್ಮದಿ ಸಿಗಬಹುದು ಎನಿಸಿ, ಸೌದಾಮಿನಿ ಅಡ್ಡಾಗಲು ಸಿದ್ಧವಾದಳು.

"ಅಧಿಕಾರಿಗಳು ಯಾರಾದರೂ ಬಂದರೆ, ನಾನು ಏಳುವವರೆಗೆ ಕಾದಿರ್ಲಿ." ಎಂದಳು ಹೊರಗಿದ್ದ ಸೇವಕನಿಗೆ.

"ಪರಶುರಾಮ, ಮನೆಗೆ ಹೋಗಪ್ಪ. ಹೆಂಡತೀನ ಬಹಳ ಕಾಯಿಸ್ಬಾರ್ದು."

ಆಪ್ತ ಕಾರ್ಯದರ್ಶಿಗೆ ಅಳು ಬಂತು. ಎಲಾ! ನನ್ನ ಅವಸ್ಥೆಗಾಗಿ ಇವನ ಕಣ್ಣೀರೆ? ಎಂದು ಸೌದಾಮಿನಿಗೆ ಆಶ್ಚರ್ಯವಾಯಿತು.

"ಯಾಕೆ?"

"ಹೆಂಡತಿ ಅಲ್ಲ,—ಹೆಂಡಿರು ಮಾತಾಜಿ. ಮೊದಲಿನವಳೂ ಬೆಳಗಿನ ಜಾವ ಬಂದ್ಬಿಟ್ಳು."

"ಪೇಪರ್ ಓದಿ ತಲೆ ಕೆಟ್ಟು ಅವರಪ್ಪ ಕಳಿಸಿದ್ನೇನೊ?"

"ದಾಸಿ ಪಾತ್ರದಲ್ಲಾದರೂ ಸರಿ, ಇಲ್ಲಿಯೇ ಇರ್‍ತಾಳಂತೆ."

"ಎಲ್ಲರೂ ನಾಟಕ ಪಾತ್ರಧಾರಿಗಳೇ...! ಒಬ್ಬಳಿದ್ದರೂ ಅಷ್ಟೆ, ಇಬ್ಬರಿದ್ದರೂ ಅಷ್ಟೆ. ವಿಶ್ರಾಂತಿ ಸುಖ ನಿನ್ನ ಹಣೇಲಿ ಬರೆದಿಲ್ಲ. ಹೋಗು, ಪ್ರೇಮ ಸಲ್ಲಾಪ ಮಾಡ್ಕೊಂಡು ಕೂತಿರು. ಕತ್ತಲಾದ್ಮೇಲೆ ಮಠಕ್ಕೆ ಹೋಗಿ ಬರ್‍ಬೇಕು."

"ಹೂಂ ಮಾತಾಜಿ."

....ಗೃಹ ಕಾರ್ಯಾಲಯಕ್ಕೆ ಹೋದ ಮೇಲೆ ಎಷ್ಟು ಹೊತ್ತಾಗುತ್ತದೊ ಏನೊ ಎಂದು, ಗುಪ್ತಚಾರ ದಳದ ಮುಖ್ಯಸ್ಥ ತನ್ನ ಊಟ ಮುಗಿಸಿ ನಿಧಾನವಾಗಿ ಬಂದ. ಅಲ್ಲಿ ನೆಲೆಸಿದ್ದ ಮೌನ ಕಂಡು, ಮುಖ್ಯಮಂತ್ರಿ ನಿದ್ರಾಂಗನೆಯ ವಶದಲ್ಲಿದ್ದರೂ ಇರಬಹುದು—ಎನಿಸಿತು. ಫೋನ್ ಸಪ್ಪಳ ಮಾಡುತ್ತಿರಲಿಲ್ಲ. 'ಒಂದೋ ಕೆಟ್ಟಿರ ಬೇಕು, ಇಲ್ಲವೆ ಪ್ಲಗ್ ತೆಗೆದಿರಬೇಕು,' ಎಂದು ತರ್ಕಿಸಿದ. (ಎರಡನೆಯ ತರ್ಕ ಸರಿಯಾಗಿತ್ತು.) ಸೇವಕನ ಸೂಚನೆಯಂತೆ ಹೊರಗಿದ್ದ ಸೋಫಾದಲ್ಲಿ ಕುಳಿತ. ಸದ್ದಿಲ್ಲದೆ ನಿದ್ದೆ ಮಾಡಿದ. ಬಂದು ನೋಡಿದ ಸೇವಕನಿಗೆ ಆಶ್ಚರ್ಯವಾಯಿತು—ಗೊರಕೆಯೇ ಇಲ್ಲವಲ್ಲ ಎಂದು.

ಗುಪ್ತಚಾರ ದಳದ ಮುಖ್ಯಸ್ಥ ಮೆಲ್ಲನೆ ಎವೆ ತೆರೆದಾಗ ಕೈಗಡಿಯಾರ 'ನಾಲ್ಕು' ಎಂದಿತು. ಒಳಗಿನಿಂದ ಜನರ ಚಲನೆಯ ಸದ್ದು ಕೇಳಿಸಿತು. ಥಟಕ್ಕನೆ ಎದ್ದು ಕರವಸ್ತ್ರದಿಂದ ಮುಖವನ್ನು ಚೆನ್ನಾಗಿ ಒರೆಸಿದ. ಸೇವಕ ಬಂದು ನುಡಿದ :

"ಎದ್ದಿದ್ರೆ ಆಫೀಸು ರೂಮಿಗೆ ಕಳಿಸು ಅಂದ್ರು."

ಬಹು ಕಾಲದಿಂದ ಕರಗತವಾಗಿದ್ದ ವಿದ್ಯೆ ಇವತ್ತು ಕೈಕೊಟ್ಟಿತಲ್ಲ ಎಂದು ಗುಪ್ತಚಾರ ದಳದ ಮುಖ್ಯಸ್ಥನಿಗೆ ಪಿಚ್ಚೆನಿಸಿತು.

ಮೇಜಿನ ಮೇಲೆ ಹತ್ತಿಪ್ಪತ್ತು ಫೈಲುಗಳು. ಒಂದನ್ನು ತೆರೆದು ನೋಡುತ್ತ ಮುಖ್ಯಮಂತ್ರಿ ಕುಳಿತಿದ್ದಳು.

"ನಮಸ್ತೆ, ಮಾತಾಜಿ."

ಆಕೆ ತಲೆ ಎತ್ತಿ ಮುಗುಳು ನಕ್ಕು, ಪಕ್ಕದ ಬಾಗಿಲು ತೋರಿಸಿ, "ಮುಖ ತೊಳ್ಕೊಳ್ಳಿ" ಎಂದಳು. ಆತ ಮುಖಕ್ಕೆ ನೀರು ಹನಿಸಿ ಕರವಸ್ತ್ರದಿಂದ ಒರೆಸಿಕೊಂಡು ಹಿಂತಿರುಗಿದ.

"ರಾತ್ರೆ ಡ್ಯೂಟಿ ಇತ್ತಾ ?"

"ಹೂಂ, ಮಾತಾಜಿ. ಐಜಿಪಿಯವರೂ ನಾನೂ ಒಟ್ಟಿಗಿದ್ವಿ."

"ಗುಪ್ತದಳ ಬಹಿರಂಗದಳ ಎರಡೂ ಜತೆಯಾಗೋದು ಸರೀನಾ ? ಘಾಟಿ ಗಳಪ್ಪ ನೀವು !"

"ಇವತ್ತಿನ ಮೆರವಣಿಗೆ ವಿಷಯ ಅವರಿಗೆ ಒಂದೆರಡು ಮಾಹಿತಿಕೊಡುವುದಿತ್ತು."

"ಅಂತೂ ಇವತ್ತು ಕ್ರಾಂತಿಯಾಗೋದು ತಪ್ಪಿತು ಅನ್ನಿ!"

"ನಿಮ್ಮ ಮನೋಸ್ಥೈರ್ಯಕ್ಕೆ ಯಾರಾದರೂ ತಲೆದೂಗಲೇಬೇಕು."

"ಅರೇ ! ಇದೇ ಮಾತನ್ನು ಬೆಳಗ್ಗೆ ಹೇಳಿದವರು ಯಾರು ? ಚೀಫ್ ಸೆಕ್ರೆಟರಿ, ನೌಕರಶಾಹಿ ಮಂದಿಯ ಮಾತೆಲ್ಲ ಒಂದೇ ತರಹೆ..."

"ಸಿಬಿಐಯ ಒಬ್ಬ ಮತ್ತೆ ಬಂದಿದ್ದಾನೆ. ಚೆನ್ನೈ ದಾರಿಯಾಗಿ ಬಂದನಂತೆ."

"ಇಲ್ಲಿಯ ಘಟನೆಗಳ ಬಗ್ಗೆ ಆಸಕ್ತಿ ಇಲ್ಲವಂತೊ ?"

"ಹೀಗೆ ಪರಸ್ಪರ ನೇರ ಪ್ರಸ್ತಾಪ ನಾವು ಮಾಡೋದೇ ಇಲ್ಲ."

"ಪರೋಕ್ಷ ಪ್ರಸ್ತಾಪದಿಂದ ನಿಮಗೆ ಏನು ತಿಳೀತು ?"

"ಇವತ್ತಿನ ಮತಪ್ರದರ್ಶನ ಇತ್ಯಾದಿ ಕುರಿತು ರಾಜ್ಯಪಾಲರ ವರದಿ, ಈ ಸಿಬಿಐ ಅಧಿಕಾರಿ ಒದಗಿಸುವ ಮಾಹಿತಿ, ವಿಶ್ವಂಭರ–ಲಕ್ಷ್ಮೀಪತಿಯರ ದಿಲ್ಲಿ ಮಾತುಕತೆ ಈ ಮೂರನ್ನೂ ಆಧರಿಸಿ ವರಿಷ್ಠರು ತೀರ್ಮಾನ ಕೈಗೊಳ್ಳಬಹುದು."

"ಅಂಕೆ ಸಂಖ್ಯೆ ವಿಷಯ ?"

"ಇನ್ನೂ ಗೊಂದಲ ಇದೆ. ಶಾಸಕಾಂಗ ಸಭೆ ಸೇರಿದಾಗಲೇ ಇದು ಸ್ಪಷ್ಟ ವಾದೀತು."

"ಅಷ್ಟೇನಾ ? ಖಚಿತವಾಗಿ ಹೆಚ್ಚು ತಿಳಿಯೋದು ನಿಮ್ಮಿಂದ ಆಗಿಲ್ಲ ಅನ್ನಿ."

"ಒಂದು ನಾಲಗೆ ಎರಡು ಮಾತು, ಒಂದು ಲೇಖನಿ ಎರಡು ಸಹಿ—ವರ್ತನೆ ಹೀಗಿರುವಾಗ ಎಡವಟ್ಟು ತಪ್ಪಿದಲ್ಲ."

"ಎಂಬತ್ತು ಶಾಸಕರು ಆ ಶಿಬಿರದಲ್ಲಿ ಇದ್ದಾರೆ ಅಂತೀರಾ ?

"ಹೌದು. ಈಗ ಇದ್ದಾರೆ. ಶಾಸಕಾಂಗ ಪಕ್ಷದ ಸಭೇಲಿ ತಮ್ಮ ಭಾಷಣ ಕೇಳಿದ ಮೇಲೆ ಯಾರ ಯಾರ ಮನಸ್ಸಾಕ್ಷಿ ಹೇಗೆ ಹೇಗೆ ಇರುತ್ತೊ ?"

"ಸಭೆಗೆ ವೀಕ್ಷಕರಾಗಿರೋದಕ್ಕೆ ದಿಲ್ಲಿಯಿಂದ ಯಾರಾದರೂ ಬಂದರೆ ?"

"ಅವರು ನಿಮ್ಮ ಪಕ್ಷಪಾತಿಯಾದರೆ ವಿಶ್ವಂಭರನಿಗೆ ಸೋಲಾಗ್ತದೆ."

"ಯಾರು ಬರ್ತಾರೆ ಅನ್ನೋದು ಕೋಟಿ ರೂಪಾಯಿಯ ಪ್ರಶ್ನೆ."

ಗುಪ್ತಚಾರ ದಳದ ಮುಖ್ಯಸ್ಥ ಮೆಚ್ಚುಗೆಯ ನಗೆ ಸೂಸಿದ. ಸೌದಾಮಿನಿ ಅಂದಳು :

"ಹಸ್ತ ಸಾಮುದ್ರಿಕ ಜ್ಯೋತಿಷ್ಯ ಏನಾದರೂ ಬರುತ್ತ ನಿಮಗೆ ?"

"ಇಲ್ಲ ಮಾತಾಜಿ."

"ನಿಮ್ಮ ಉದ್ಯೋಗಕ್ಕೂ ಆ ಕಸಬುಗಳಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಇದು ಜೋಕು. ನಗೋದಿಲ್ಲವೆ ?"

ಇಬ್ಬರೂ ನಕ್ಕರು.

"ನಾಡದು ಮಧ್ಯಾಹ್ನ ಇಷ್ಟು ಹೊತ್ತಿಗೆ ಗಂಡೋ ಹೆಣ್ಣೋ ಗೊತ್ತಾಗುತ್ತೆ."

"ನಾನು ಸರಕಾರೀ ಅಧಿಕಾರಿ. ಪಕ್ಷ ವಹಿಸಬಾರದು."

"ಒಳ್ಳೇದು. ವಿಶೇಷವೇನಾದರೂ ಇದ್ದರೆ ಭೇಟಿಗೆ ಬನ್ನಿ."

"ಏನಾದರೂ ಪ್ರಮಾದ ನನ್ನಿಂದ ನಡೆದಿದ್ದರೆ ಕ್ಷಮೆ ಇರಲಿ."

"ಆಮೋದ ಪ್ರಮೋದ ಯಾವುದೂ ಇಲ್ಲ. ನೀವು ಶಿಷ್ಟ ನಡವಳಿಕೆಯ ಮನುಷ್ಯ. ನಿಮಗೆ ಒಳ್ಳೆಯದಾಗಲಿ."

ಮುಖ್ಯಸ್ಥ ಎದ್ದು ಹೊರಬಿದ್ದ.

ಪರಶುರಾಮನ ಆಗಮನವಾಯಿತು. ಫೋನ್ ಬಾರಿಸತೊಡಗಿತು.

"ಮಾತಾಜಿ, ಐ.ಜಿ.ಪಿ—"

"ಬಂದರಾ ?"

"ಇಲ್ಲ. ಅವರ ಪತ್ನಿ ಫೋನ್ ಮಾಡಿದಾರೆ."

"ಏನಂತೆ ?"

"ಒಂದು ವಿನಂತಿ ಮಾಡ್ತಿದಾರೆ. ಭಾನುವಾರ ಬೆಳಗ್ಗೆ ಅನಾಥಾಶ್ರಮದ ಅತಿಥಿ ಗೃಹದ ಉದ್ಘಾಟನೆಗೆ ತಾವು ಒಪ್ಪಬೇಕಂತೆ. ಅವಸರದ ಏರ್ಪಾಟು. ಆಮಂತ್ರಣ ಪತ್ರಿಕೆ ಇವತ್ತು ರಾತ್ರೆ ಅಚ್ಚಾಗಿ ನಾಳೆಯೆಲ್ಲ ವಿತರಣೆ ಆಗ್ತದಂತೆ. ಔಪಚಾರಿಕವಾಗಿ ಆಮಂತ್ರಿಸೋದಕ್ಕೆ ಈಗ ಬರಬಹುದೆ ಅಂತ—"

ಭಾನುವಾರ ಮುಖ್ಯಮಂತ್ರಿಯ ಕಾರ್ಯಕ್ರಮ ! ಸೌದಾಮಿನಿಗೆ ನಗೆ ಬಂತು, ಖುಶಿಯೂ ಆಯಿತು.

"ಒಪ್ಪಿದ್ದೇನೆ ಅಂತ ಹೇಳು. ನಾಳೆ ಬೆಳಗ್ಗೆ ಹತ್ತಿಪ್ಪತ್ತು ಆಮಂತ್ರಣದ ಪ್ರತಿಗಳನ್ನು ತಗೊಂಡು ಐ.ಜಿ.ಪಿ. ಪತ್ನಿಯೂ ಸುಲೋಚನಾಬಾಯಿಯೂ ಉಪಾಹಾರಕ್ಕೆ ಬರಲಿ. ವಿತರಣೆಗೆ ದೂತರ ಸಹಾಯವೇನಾದರೂ ಬೇಕೆ ಕೇಳು. ನಮ್ಮ ದೂತರ ಮೂಲಕ ಏರ್ಪಡಿಸಬಹುದು. ಒಂದು ಸಾವಿರ ಮುದ್ರಿಸಲಿ."

ಅವನು ಅವರಿಗೆ ತಿಳಿಸಿದ. ಮಾತಾಜಿಗೆ ವರದಿ ಸಲ್ಲಿಸಿದ.

"ಧನ್ಯವಾದ ಧನ್ಯವಾದ ಅಂತ ಅವರಿಬ್ಬರೂ ನಾಲ್ಕಾರು ಸಲ ಹೇಳಿದರು. ನಾಳೆ ಬೆಳಗ್ಗೆ ಬರ್ತಾರಂತೆ.

ಸೌದಾಮಿನಿ ಯೋಚಿಸಿದಳು : ಇನ್ನೊಂದು ದೊಡ್ಡ ನಮಸ್ಕಾರ ? ಮುಖ ಭಂಗ ?.... ಛೆ ! ಛೆ ! ಎನಿಸಿತು. ಐ.ಜಿ.ಪಿ.ಯ ಪತ್ನಿ ಇರುವುದರಿಂದ ಆಭಾಸಕರವಾದುದೇನೂ ನಡೆಯುವುದಿಲ್ಲ ಎಂದು ಮುಖ್ಯಮಂತ್ರಿಗೆ ಖಾತರಿ. ಇನ್ನೂ ಅಧಿಕಾರದಲ್ಲಿದ್ದೇನೆ. ತನಗೆ ದೊರೆಯುವುದು ಕುರ್ನಿಸೊಂದೇ.

* * *

ಸಂಜೆ ಸೌದಾಮಿನಿ ತಡವಾಗಿ ಧರ್ಮಮಠಕ್ಕೆ ಹೋದಳು. ಸ್ವಾಮೀಜಿ ಗೌರವದಿಂದ ಬರಮಾಡಿಕೊಂಡರು. ಹೂ ಗಿಡಬಳ್ಳಿಗಳು ಸೊಂಪಾಗಿ ಬೆಳೆದಿದ್ದುವು. ಇಲ್ಲಿ ರಾಜಕೀಯದ ಗೊಂದಲವಿಲ್ಲ. ಬಹಳವೆಂದರೆ ಭಕ್ತಾದಿಗಳು ದರ್ಶನಕ್ಕೆ ಬರುತ್ತಾರೆ. ಪ್ರಣಾಮ ಸಲ್ಲಿಸಿ, ಪ್ರಸಾದ ಸ್ವೀಕರಿಸಿ (ಕಾಣಿಕೆ ಸಂದಾಯಮಾಡಿ), ಹೋಗುತ್ತಾರೆ. ಏಳರ ಬಳಿಕ ದರ್ಶನವಿಲ್ಲ. ಕೇವಲ ಶಾಂತಿಃ ಶಾಂತಿಃ ಶಾಂತಿಃ.

ಮುಖ್ಯಮಂತ್ರಿ ತಂದ ಹೂ ಹಣ್ಣುಗಳನ್ನು ಕಿರಿಯ ಸ್ವಾಮಿ ಒಳಕ್ಕೊಯ್ದ. ಮಠದಲ್ಲಿನ ದಂತೇಶ್ವರಿಯ ಮುಂದೆ ಸ್ವಲ್ಪ ಸಮಯ ಧ್ಯಾನಮಗ್ನಳಾಗಿ ಕುಳಿತು, ಸೌದಾಮಿನಿ ಸ್ವಾಮೀಜಿಯ ಬಳಿಗೆ ಬಂದಳು.

"ಇಲ್ಲಿ ಸ್ವಾರ್ಥಿಗಳು ಕೆಲವರು ಆರಂಭಿಸಿರುವ ಕಿರಿಕಿರಿ ವಿಷಯ ತಮಗೆ ಗೊತ್ತಾಗಿರಬಹುದು."

"ಗೊತ್ತಾಗಿದೆ. ಬೇಸರದ ಸಂಗತಿ. ನಾನು ಧರ್ಮೇಂದರ್ ಮಠಕ್ಕೆ ಯಾವಾಗ ಹೋಗಿ ಬರಲಿ ?"

"ನಿಮಗೆ ಅನುಕೂಲವಾದಾಗ. ತಾವು ಅಲ್ಲಿರುವಾಗಲೇ ನಾನೂ ಒಮ್ಮೆ ಬಂದರೂ ಬಂದೆ."

"ದಂತೇಶ್ವರಿಯ ದಯೆಯಿಂದ ತಮಗೇನೂ ತೊಂದರೆಯಾಗದು."

"ಆ ವಿಶ್ವಾಸ ನನಗೂ ಇದೆ. ಆದರೆ ರಾಜಕೀಯ ಕ್ಷುದ್ರ ಆಟ. ಅದರಲ್ಲಿ ನೀತಿ ನಿಯತ್ತು ಒಮ್ಮೊಮ್ಮೆ ಮಾಯವಾಗುವುದುಂಟು."

"ದೈವೀಕೃಪೆಯ ಮುಂದೆ ಕ್ಷುದ್ರ ಆಟ ನಡೆಯೋದಿಲ್ಲ."

"ತಮ್ಮ ಮಾತು ಸತ್ಯವಾಗಲಿ, ಸ್ವಾಮೀಜಿ."

"ಶಾಸಕಾಂಗ ಪಕ್ಷದ ಸಭೆ ಭಾನುವಾರ ಅಪರಾಹ್ನ ಅಲ್ಲವೆ ?"

"ಊಟದ ಬಳಿಕ ಒಂದು ಗಂಟೆಗೆ."

"ಆಗ ತಮ್ಮ ವಿಜಯಕ್ಕಾಗಿ ವಿಶೇಷ ಪೂಜೆ ಸಲ್ಲಿಸ್ತೇನೆ. ತಮ್ಮಿಂದಾಗಿ ಕಲ್ಯಾಣನಗರದ ಧರ್ಮಮಠಕ್ಕೆ ಕೀರ್ತಿ ಬಂತು."

"ಅಷ್ಟು ಕೆಲಸವನ್ನು ನನ್ನಿಂದ ಆಗ ಮಾಡಿಸಿದವರು ಪೂಜ್ಯ ಬಾಬಾಜಿ."

"ತಮ್ಮ ಭಕ್ತಿ, ನಿಷ್ಠೆ ಅನಾದೃಶ."

ಕಿರಿಯ ಸ್ವಾಮಿ ಹಿರಿಯ ಸ್ವಾಮೀಜಿಯ ಸೂಚನೆಯಂತೆ ಮುಖ್ಯಮಂತ್ರಿಗೆ ಬೆಳ್ಳಿಯ ತಟ್ಟೆಯಲ್ಲಿ ಪ್ರಸಾದ ತಂದ...

"ಭಾನುವಾರ ರಾತ್ರಿ ದರ್ಶನಕ್ಕೆ ಬರ್ತೀನೆ," ಎಂದು ಹೇಳಿ ಸೌದಾಮಿನಿ ಹೊರಟಳು.

* * *

ಊಟದ ಹೊತ್ತಾಗಿದ್ದರೂ ಧನಂಜಯಕುಮಾರ ಕಾದಿದ್ದ, ಪರಶುರಾಮ ನಿಂದ ಭರವಸೆಯ ಮಾತುಗಳನ್ನು ಕೇಳುತ್ತ.

ಮಠಕ್ಕೆ ಹೋಗಿದ್ದಾರೆ ಎಂದು ಅರಿತಾಗ, ತಾನೂ ಅಲ್ಲಿಗೇ ಹೋಗುತ್ತಿದ್ದೆ, ಈ ಪರಶುರಾಮ ತಿಳಿಸಲಿಲ್ಲವಲ್ಲ ಎಂದುಕೊಂಡ ಧನಂಜಯ. ಹಾಗೆಲ್ಲ ತಿಳಿಸಬೇಕೆಂಬ ಕರಾರು ಇಲ್ಲ ಎನ್ನುವುದೂ ಅವನಿಗೆ ಗೊತ್ತಿಲ್ಲದ ಸಂಗತಿಯಲ್ಲ....

ಒಳಕ್ಕೆ ಕಾಲಿರಿಸಿದ ಸೌದಾಮಿನಿ "ಏನು ಧನಂಜಯ್ ?" ಎಂದಳು.

ಪ್ರಶ್ನೆಗೆ ಉತ್ತರ ಪರಶುರಾಮನಿಂದ ಬಂತು.

"ಲಕ್ಷ್ಮೀಪೂಜೆಯ ದಿನ ಮಾತಾಜಿ ಸಾಹುಕಾರರ ಅಂಗಡಿಗೆ ಬರಲೇಬೇಕಂತೆ. ವರ್ಣರಂಜಿತ ಆಮಂತ್ರಣ ಪತ್ರಿಕೆ ಮುದ್ರಿಸ್ತಾರಂತೆ."

"ಇನ್ನೂ ಬೇಕಾದಷ್ಟು ಸಮಯವಿದೆಯಲ್ಲ ?"

"ಮುದ್ರಣ ಶಿವಕಾಶಿಯಲ್ಲಿ ಆಗಬೇಕಂತೆ."

"ಸರಿ. ಸಾಹುಕಾರರಿಗೆ ಇಲ್ಲ ಅನ್ನುವಂತಿಲ್ಲವಲ್ಲ...."

"ಋಣಿಯಾಗಿದ್ದೇನೆ" ಎಂದು ಹೇಳಿ ಹೊರಟವನು, ಅಂಗಳದಲ್ಲಿ, ಮುಖ್ಯ ಮಂತ್ರಿಯ ಕಾರ್ಯದರ್ಶಿಯ ಜತೆ "ಭಾನುವಾರ ಸಭೆ ಮುಗಿಯುವ ಹೊತ್ತಿಗೆ ಒಂದು ಹಾರ ತಗೊಂಡು ನಾನು ಬರಬಹುದಾ ?" ಎಂದು ಕೇಳಿದ.

ಪರಶುರಾಮ ತಲೆ ಕೆರೆದು, "ಬನ್ನಿ, ಅದಕ್ಕೇನು ? ನಾನು ಬಾಗಿಲಲ್ಲೇ ಇರ್ತೀನೆ" ಎಂದ.

.. ಮುಖ್ಯಮಂತ್ರಿ ಬಂದಿದ್ದ ಫೋನ್‌ಕರೆಗಳ ಪಟ್ಟಿ ನೋಡಿದಳು. ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ.

ವಿಶ್ವಂಭರ–ಲಕ್ಷ್ಮೀಪತಿ ದಿಲ್ಲಿಯಲ್ಲಿ ಇಳಿಯುವ ಹೊತ್ತು. ಅವರ ಆಪ್ತರು ಯಾರಾದರೂ ಇದ್ದೇ ಇರುತ್ತಾರೆ. ದೂತನ ಮೂಲಕ ರಾಜ್ಯಪಾಲರ ವರದಿಯೂ ಅದೇ ವಿಮಾನದಲ್ಲಿ ಹೋಗಿರುತ್ತದೆ. ಅಲ್ಲಿ ನಾಳೆ ಪೂರ್ವಾಹ್ನ ತೀರ್ಮಾನವಾಗುತ್ತದೆ. ಎಂತಹ ಪಾತ್ರ ವಹಿಸಬಹುದು ನಕುಲ್‌ದೇವ್‌ಜಿ ? ಅವರು ಮತ್ತು ಬಾಬಾಜಿ ನಡುವೆ ಸಂವಾದ ನಡೆದಿರುತ್ತದೆ. ಪ್ರಧಾನಿ ?.. ನೋಡೋಣ, ನೋಡೋಣ.

ನಾಳೆ ಸಂಜೆ ಈ ಮಹಾನುಭಾವರು ವಾಪಸಾಗುತ್ತಾರೆ. ವೀಕ್ಷಕರು ಬರದಿದ್ದರೆ ಭಾನುವಾರ ಬಿರುಗಾಳಿಯಾಗುತ್ತೇನೆ. ಕೆಲವು ತರಗೆಲೆಗಳು ಹಾರಿ ಹೋಗುತ್ತವೆ. ನನ್ನ ಚೀಲದಲ್ಲಿ ಸಾಕಷ್ಟು ಗಟ್ಟಿ ಕಾಳು ಉಳಿದುವೆಂದರೆ ? ಅದು ಇನ್ನೊಂದು ವಿಜಯೋತ್ಸವ !

ಆ ರಾತ್ರಿ ಸೌದಾಮಿನಿ ಮರೆಯದೆ ಲೇಹ್ಯ ತಿಂದಳು.

೨೩

ಬೆಳಗ್ಗೆ ಎದ್ದವಳು ಯೋಗಾಸನ ನಿರತಳಾದಳು.

ಅಂಗರಕ್ಷಕರು ಬಂದು, ವಂದಿಸಿ, ಮರೆಗೆ ಸರಿದರು.

ಎಂದಿನಂತೆ ಪರಶುರಾಮ ನಮಸ್ತೆಯ ಹಾಜರಿ ಹಾಕಿದ.

ಎಂಟು ಗಂಟೆಗೆ ಉಪಾಹಾರ. ಮಹಿಳಾಮಣಿಗಳು ಬಂದರು, ಟ್ಯಾಕ್ಸಿಯಲ್ಲಿ. ಐ.ಜಿ.ಪಿ. ಅಮ್ಮಾವ್ರು ಬರುತ್ತಾರೆಂದು ಪರಶುರಾಮ ಗೇಟಿನ ಕಾವಲು ಪೋಲೀಸರಿಗೆ ತಿಳಿಸಿದ್ದ. ಒಬ್ಬನಿಗೆ ಅಮ್ಮಾವ್ರ ಮುಖಪರಿಚಯ ಇತ್ತು. ಇಬ್ಬರೂ ಲವಲವಿಕೆಯಿಂದ ಸೆಲ್ಯೂಟ್ ಹೊಡೆದರು.

ಆಮಂತ್ರಣ ಪತ್ರಿಕೆ ಸರಳವಾಗಿತ್ತು, ಸುಂದರವಾಗಿತ್ತು. ಅತಿಥಿಗೃಹವೆಂದೇ ಕರೆದಿದ್ದರು—'ಸೌದಾಮಿನಿ ಗೃಹ' ಎಂದಿರಲಿಲ್ಲ. ಕಲ್ಲಿನ ಫಲಕದ ಮೇಲೆ ಹೇಗೂ ಹೆಸರು ಕೊರೆಸಿರುತ್ತಾರೆ. ಸಿಮೆಂಟಿನ ಗೋಂದು ಸಾರಿಸಿ ಫಲಕವನ್ನು ಗೋಡೆಗೆ ಅಂಟಿಸುತ್ತಾರೆ. ಕಲ್ಲಿನ ಮೇಲಿನ ಹೆಸರು ಶಾಶ್ವತ. ಮೂರು ಸಾವಿರ ವರ್ಷಗಳ ಅನಂತರ ಯಾರೋ ಯಾಕೋ ಅಗೆದಾಗ, ತುಸು ಹರಿದರೂ ಒಂದಕ್ಕೊಂದು ಜೋಡಿಸಿ ಆ ಹಾಳೆಯನ್ನು ವಿದ್ವಾಂಸರು ಓದಿದಾಗ, ತಾನು ಇತಿಹಾಸವಾಗಿರುತ್ತೇನೆ—ಸೌದಾಮಿನಿ ದೇವಿ, ಕಿಷ್ಕಿಂಧೆ ರಾಜ್ಯದ ಮುಖ್ಯಮಂತ್ರಿ....

"ಸುಲೋಚನಾಬಾಯಿ, ಮೃದುಲಾಬೆನ್‌ರಿಂದ ಕಾಗದ ಬಂದಿತ್ತು. ನಿಮ್ಮನ್ನೆಲ್ಲ ನೆನೆದು ಶುಭಾಶಯ ತಿಳಿಸಿದ್ದರು. ಪತ್ರಿಕೆಗಳಲ್ಲಿ ಸಚಿತ್ರ ಲೇಖನಗಳೂ ಪ್ರಕಟವಾಗಿದ್ದುವು. ಎಲ್ಲಿ ಹೋದುವೋ ಏನೋ. ಸ್ಟಾಫ್ ಎಷ್ಟಿದ್ದರೂ ಸಾಕಾಗೋದಿಲ್ಲ. ಒಳಗೆ ಬನ್ನಿ."

ಮೇಜಿನ ಸುತ್ತ ಕುಳಿತ ಬಳಿಕ ಸೌದಾಮಿನಿ ಮಾತು ಮುಂದುವರಿಸಿದಳು :

"ಶಾಸಕರೆಲ್ಲ ರಾಜಧಾನಿಯಲ್ಲಿದ್ದಾರೆ. ಅವರಿಗೆಲ್ಲ ಆಮಂತ್ರಣ ಪತ್ರಿಕೆ ಹೋದರೆ ಚೆನ್ನಾಗಿರುತ್ತೆ. ಹೆಚ್ಚಿನವರು ಶಾಸಕರ ಭವನದಲ್ಲಿದ್ದಾರೆ."

"ಅವರಿಗೆ ತಲಪಿಸ್ತೇವೆ."

ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿಯನ್ನು ಕರೆದಳು.

"ಇವರಿಗೆ ನಮ್ಮ ಆಮಂತ್ರಣ ವಿಳಾಸಗಳ ಒಂದು ಕಟ್ಟು ಕೊಡು."

ಅದು ಬಂತು.

"ಸ್ವಲ್ಪ ಜರಡಿ ಹಿಡಿದು ಉಪಯೋಗಿಸಿ."

ಉಪಾಹಾರ ಚೆನ್ನಾಗಿತ್ತು.

"ಅಲ್ಲಿ ನಾಳೆ ಬೆಳಗ್ಗೆ ಇಂಥದೇನೂ ಇರೋದಿಲ್ಲ", ಎಂದಳು ಸುಲೋಚನಾ ಬಾಯಿ.

"ದೊಡ್ಡದಲ್ಲ. ಶುಭ ಸಮಾರಂಭಕ್ಕೆ ಎಲ್ಲ ನಿಮ್ಮ ಅಭಿಮಾನಿಗಳು ಬರೋದು ಮುಖ್ಯ."

"ತಾವು ಬರ್ತೀರೀಂತ ಜನ ಮುಕುರ್ತಾರೆ."

"ಚಪ್ಪರ ಗಿಪ್ಪರ ಬೇಡಿ. ಒಂಭತ್ತು ಘಂಟೆಗೆ ಬಿಸಿಲಿರೋದಿಲ್ಲ. ಮಡಚು ಕುರ್ಚಿಗಳಿರಲಿ."

"ನಮ್ಮ ಪಾಲಿಗೆ ನಾಳೆ ಸುದಿನ."

"ಮುಹೂರ್ತ ನೋಡಿದೀರೊ ?"

"ಹೌದು. ಶುಭ ದಿವಸ."

ಮನಸ್ಸಿನಲ್ಲಿ ಸೌದಾಮಿನಿ ಅಂದುಕೊಂಡಳು : ತನ್ನ ಪಾಲಿಗೂ ಶುಭದಿವಸವೇ ಆಗಲಿ. ಅಥವಾ, ಸಿ.ಎಂ. ಬರಲೇಬೇಕೂಂತಾದರೆ ಭಾನುವಾರ ಬೆಳಗ್ಗೆ ಇಟ್ಟು ಕೊಳ್ಳೋದೇ ವಾಸೀಂತ ಐ.ಜಿ.ಪಿ. ಹೇಳಿದನೊ ? ನಾಳೆ ತನ್ನ ಸತ್ವಪರೀಕ್ಷೆ. ಅಂದೇ ಈ ಸಾರ್ವಜನಿಕ ಕಾರ್ಯಕ್ರಮ ಇರುವುದರಿಂದ ತನಗೇ ಲಾಭ. ಎಲ್ಲರೂ ಅಚ್ಚರಿಪಡುತ್ತಾರೆ. ಒಂದಷ್ಟು ಶಾಸಕರು ತನ್ನ ಶಿಬಿರಕ್ಕೆ ಬಂದರೂ ಬಂದರೇ. ಹಾಗೆಯೇ ಆಗಲಿ, ದಂತೇಶ್ವರಿ.

–ಕಾಫಿ ಹೀರುತ್ತಲಿದ್ದಾಗ ಮುಖ್ಯಮಂತ್ರಿ ಮಾತನಾಡಲಿಲ್ಲ. ಯೋಚನೆಗಳ ಸುರುಳಿಯೊಳಗೆ ಆಗ ಅವಳು ಬಂದಿ.

ಕಾಫಿ ಮುಗಿಯಿತು. ಮುಗುಳ್ನಕ್ಕಳು. ಯೋಚನೆಗಳ ಸಂಕೋಲೆಗಳು ಕಳಚಿದುವು.

ಬಂದವರು ಎದ್ದರು.

"ಒಂಭತ್ತು ಗಂಟೆಗೆ ಸರಿಯಾಗಿ ಅಲ್ಲಿರ್ತೇವೆ."

"ತಮ್ಮ ದಾರಿ ನೋಡ್ತೇವೆ, ನಮಸ್ಕಾರ."

ಪ್ರತಿವಂದನೆ ಎನ್ನುವಂತೆ ಸೌದಾಮಿನಿ ತಲೆಯಾಡಿಸಿದಳು. ಜೀವನದಲ್ಲಿ ಮೊಟ್ಟ ಮೊದಲ ಸಲ ತಾನು ನಮಸ್ಕಾರ ಪಡೆದುದು ಯಾವಾಗ ? ಕೊಟ್ಟವರು ಯಾರು ? ಬೇರೆ ಯಾರೋ ಎಂದು ತಪ್ಪು ಗ್ರಹಿಸಿ ತನಗೆ ಕೈ ಜೋಡಿಸಿದಳೊ(ರೊ) ? ಹೆಂಗಸು. ಹೆಂಗಸೇ ಅಂತ ತೋರ್‍ತದೆ–ಆ ಪದ ಕೇಳಿದೊಡನೆ ಜೋಡಿಸಿದ ಕೈಗಳನ್ನು ಕಂಡೊಡನೆ, ಅವಳ ಮೈ ಪುಲಕಗೊಂಡಿತ್ತು. ಆಮೇಲೆ ಬೀದಿಗಿಳಿದಾಗಲೆಲ್ಲ ನಮಸ್ಕಾರದ ನಿರೀಕ್ಷೆಯಲ್ಲಿರುತ್ತಿದ್ದಳು. ಅದರ ಆಗಮನ ಸುಲಭಸಾಧ್ಯವಲ್ಲವೆಂದು ಮನವರಿಕೆ

ಯಾದಾಗ, ಅರ್ಹರೆಂದು ಕಂಡವರಿಗೆ ತಾನೇ ನಮಸ್ಕರಿಸತೊಡಗಿದಳು. ಆಗ ಪ್ರತಿ ನಮಸ್ಕಾರ ದೊರೆಯುತ್ತಿತ್ತು. ಕ್ರಮೇಣ ಅವಳು ಗಣನೀಯ ವ್ಯಕ್ತಿಯಾದಾಗ,ಪ್ರತಿ ದಿನವೂ ನಮಸ್ಕಾರಗಳು ಹೇರಳವಾಗಿ ಸಿಗತೊಡಗಿದುವು. ಒಂದು ದಿವಸ ಕುತೂಹಲದಿಂದ ನಮಸ್ಕಾರಗಳನ್ನು ಎಣಿಸಿದ್ದಳು. ಸೆರಗಿಗೆ ಮನೆ ಸೇರುವ ಹೊತ್ತಿಗೆ ಅಂದು ಒಟ್ಟು ದೊರೆತುದು ನಾಲ್ವತ್ತಾರು ! ಈಗ ಸಹಸ್ರಾರು. ಸಹಸ್ರ ವಂದನೆಗಳಿಗೆ ಪ್ರತಿಯಾಗಿ ಒಂದನ್ನು ತಾನು ಕೊಟ್ಟರೆ ಸಾಕು. ಗೋಣು ಆಡಿಸಿದರೂ ಸರಿಯೆ.

"ಪರಶುರಾಮ್...."

"ಬಂದೆ ಮಾತಾಜಿ."

ಒಂದವನಿಗೆ ಅವಳೆಂದಳು :

"ಚೌಗುಲೆಗೆ ಫೋನ್ ಮಾಡ್ತೇನೆ. ಹನ್ನೊಂದು ಗಂಟೆಗೆ ಹೋಗಿ ಭೇಟಿಯಾಗು."

"ಈಗ ಮನೆಯಲ್ಲಿರ್‍ತಾರೆ."

"ಕೊಡು."

ಅಲ್ಲಿಂದ : "ನಮಸ್ತೆ ಮಾತಾಜಿ"

ಇಲ್ಲಿಂದ : "ಪರಶುರಾಮರ ಸರ್ವಿಸ್ ರೆಕಾರ್ಡ್ಸ್ ಸ್ವಲ್ಪ ನೋಡಿ. ವಾರ್ತಾ ಇಲಾಖೇಲಿ ಅವರಿಗೆ ಯಾವ ಹುದ್ದೆಯ ಸಮೀಕರಣವಾಗ್ತದೇಂತ ಪರಿಶೀಲಿಸಿ.... ಸರಿ....ಅನುಜ್ಞೆ ಹೊರಡಿಸಿ....ದುಡಿಮೆ ಮುಖ್ಯಮಂತ್ರಿಯ ಆಪ್ತಕಾರ್ಯದರ್ಶಿಯಾಗಿಯೇ....ಆಜ್ಞಾಪತ್ರ ಇಲ್ಲಿಗೇ ಕಳಿಸಿಕೊಡ್ತೀರಾ ? ಥ್ಯಾಂಕ್ಸ್."

ಸೌದಾಮಿನಿ ಏನನ್ನಾದರೂ ಹೇಳಬಹುದೆಂದು ಪರಶುರಾಮ ಇದಿರು ನೋಡಿದ. ಮೌನದಿಂದ ಅಚ್ಚರಿಯಾಯಿತು,

"ಇದೇನು ಮಾತಾಜಿ?—ಅಂತ ಕೇಳು,"

ಅವನ ತುಟಿಗಳು ಬಿಮ್ಮನೆ ಬಿಗಿದುವು. ಆಕೆಯೇ ಹೇಳಿದಳು :

"ಚೌಗುಲೆ ಜೊತೆ ನಾನೇನು ಮಾತನಾಡಿದೆ ಅಂತ ಊಹಿಸು ನೋಡೋಣ."

"ನನಗೆ ತಿಳೀದು, ಮಾತಾಜಿ."

"ನಿನ್ನದೊಂದು ತಮಾಷೆ ಸ್ವಿಚ್ಚು. ಒಂದು ಸಲ ಜೋರಾಗಿ ಉರಿದರೆ, ಇನ್ನೊಂದ್ಸಲ ಮಿಣಿಮಿಣಿ. ಲಾಟರೀಲಿ ನಿನ್ನ ಹಣೆಬರಹ ಹೇಗಿರುತ್ತೊ ನೋಡೋಣ."

ನಸುನಕ್ಕಂತೆ ಮಾಡಿ ಪರಶುರಾಮ ಸುಮ್ಮನಾದ. ಒಮ್ಮೆಲೆ ಆತಂಕದ ಮಾತು ಹೊರಟಿತು :

"ನನ್ನ ಕುಟುಂಬದ ವಿಷಯ ಏನು ಮಾಡಲಿ ಮಾತಾಜಿ ?"

"ಇಬ್ಬರ್‍ಹೆಂಡಿರ ಕಾಟ....! ಕಾನೂನು ಕ್ರಮ ಇತ್ಯಾದಿಗೆ ಹೋಗ್ಬೇಡ. ಎರಡು ಮನೆ ಮಾಡು. ಇಬ್ಬರನ್ನೂ ಪ್ರೀತಿಸು. ಇಬ್ಬರಿಗೂ ಹಣಕಾಸು, ಸೀರೆ, ಆಭರಣ ಕೊಡು. 'ಎರಡು ಮನೆ' ಇರುವವರು ಎಷ್ಟು ಜನ ಇಲ್ಲ ? ಅರ್ಥವಾಯ್ತಾ ?"

"ಆಯ್ತು, ಮಾತಾಜಿ."

........ಹನ್ನೆರಡು ಆಗುತ್ತಿದ್ದಂತೆ ದಿಲ್ಲಿಯ ಕಿಷ್ಕಿಂಧಾ ಸಂಪರ್ಕಾಧಿಕಾರಿ ಫೆರ್ನಾಂಡೀಸ್‌ನ ಕರೆ ಬಂತು.

ಮಾರ್ದವತೆ ತುಂಬಿದ ಧ್ವನಿಯಲ್ಲಿ ಸೌದಾಮಿನಿ ಅಂದಳು :

"ಹಲ್ಲೋ ಸಂಪರ್ಕಾಧಿಕಾರಿ ಫೆರ್ನಾಂಡೀಸ್ ! ನಮ್ಮ ಸ್ಪೀಕರ್ ಮತ್ತು ಶಾಸಕ ಏನ್ಮಾಡ್ತಿದಾರೆ ?"

"ಕುಟೀರಕ್ಕೆ ಬರಲಿಲ್ಲ. ನಕುಲದೇವ್‌ಜಿ ಅವರನ್ನು ಕರಕೊಂಡು ಪ್ರಧಾನಿಯವರನ್ನು ಕಾಣ್ತಾರೆ ಅಂತ 'ಹಿಂದೂಸ್ಥಾನ್ ಹೆರಾಲ್ಡ್' ಮಿತ್ರನಿಂದ ತಿಳೀತು."

"ನಮ್ಮ ಇಬ್ಬರು ಪತ್ರಿಕಾಗೋಷ್ಠಿ ಕರೆಯೋದಿಲ್ಲ ?"

"ಇಷ್ಟರವರೆಗೆ ಅದರ ಸುದ್ದಿ ಇಲ್ಲ."

"ಸಂಜೆ ಅಲ್ಲಿಂದ ಯಾರು ಯಾರು ಹೊರಡ್ತಾರೇಂತ ತಿಳಕೊಂಡು ಫೋನ್ ಮಾಡಿ. ವಿಮಾನ ನಿಲ್ದಾಣಕ್ಕೆ ಹೋಗಿ 'ನಮಸ್ಕಾರ' ಮಾಡಿದರೂ ತಪ್ಪಿಲ್ಲ."

"ನನಗೆ ವಿಶ್ವಂಭರರ ಪರಿಚಯ ಇಲ್ಲ."

"ನಕುಲದೇವ್‌ಜಿಗೆ ಸಲಾಂ ಹೊಡೀರಿ."

"ಆಗಲಿ, ಮಾತಾಜಿ, ನಿಲ್ದಾಣದಿಂದ ವಾಪಸು ಬಂದು ಫೋನ್ ಮಾಡ್ತೀನಿ."

"ಹೂಂ. ಗೃಹ ಕಾರ್ಯಾಲಯದಲ್ಲೇ ಇರ್ತೀವೆ."

ಚೌಗುಲೆಯವರ ದೂತ ಪರಶುರಾಮನಿಗೆ ಆಜ್ಞಾಪತ್ರ ತಂದ. ಅಂಟಿಸಿದ ಲಕೋಟೆ. ಸೌದಾಮಿನಿ ತೆರೆದು ಓದಿದಳು. ಮುಖ ಅಗಲಿಸಿ, ಆಪ್ತ ಕಾರ್ಯದರ್ಶಿಗೆ ಅಂದಳು :

"ತಗೋ. ಲಕೋಟೆ, ಕಾಗದ ಎರಡೂ."

ಕೊಠಡಿಯಿಂದ ಹೊರಬಿದ್ದು ಒಬ್ಬನೇ ಮೂಲೆಯಲ್ಲಿ ನಿಂತು ಆಜ್ಞಾಪತ್ರವನ್ನು ಓದಿದ. ಇನ್ನು ಪರಶುರಾಮ ವಾರ್ತಾ ಇಲಾಖೆಯ ಜಂಟಿ ನಿರ್ದೇಶಕ. ನಂಬಲಾರ. ಮಾತಾಜಿ ಸಾಧಿಸಿದ ಪವಾಡ.

ವಾರ್ತಾ ಇಲಾಖೆಯ ನಿರ್ದೇಶಕನಿಂದ ಫೋನ್ ಬಂತು :

"ಹಿಂದೆ ಒಮ್ಮೆ ನಾನು ಹೇಳಿದ್ದು ನೆನಪಿದೆಯ ಮಿ. ಪರಶುರಾಮ್ ?"

"ಹೌದಲ್ಲ ? ನೀವು ತಮಾಷೆಗೆ ಹೇಳಿದ್ದಿರಿ."

"ಈಗ ನಿಜವಾಗಿದೆ."

"ಏನಿದ್ದರೂ ನಾನು ಇಲ್ಲೇ ಇರ್ತೀನಿ."

"ಅದ್ಸರಿ. ಯಾವಾಗಲಾದರೂ ಬೇಸರ ಅನಿಸಿದಾಗ, ಅಥವಾ ಎತ್ತಂಗಡಿ ಆದಾಗ ನೀವು ಇಲ್ಲಿಗೆ ಬಂದೇ ಬರ್ತೀರಿ. ಜೋಡಿ ಕತ್ತೆ ದುಡಿತ ಚೆನ್ನಾಗಿರ್ತದೆ."

"ಏನೋಪ್ಪ."

ಸ್ವರತಗ್ಗಿಸಿ ಆ ಕಡೆಯಿಂದ ನಿರ್ದೇಶಕ ಕೇಳಿದ :

"ನಾಳೆ ಏನಾಗುತ್ತೆ ? ಈ ಆಜ್ಞಾಪತ್ರ ಅದಕ್ಕೆ ಸಿದ್ಧತೆ ಅಂದ್ಕೊಂಡೆ."

"ಗೊತ್ತಿಲ್ಲ."

"ಗೊತ್ತಿದೆ ಅಂತ ನೀವು ಯಾವತ್ತಾದರೂ ಹೇಳಿದೀರಾ ? ಅದೇ ನಿಮ್ಮ ಯಶಸ್ಸಿನ ಗುಟ್ಟು !"

"ಇದ್ದೀನಿ."

"ಮಾತಾಜಿ ಅಲ್ಲೇ ಇದಾರೆ ಅಲ್ವಾ ?"

ಮುಖ್ಯಮಂತ್ರಿ ಕೇಳಿದಳು :

"ಯಾರು ? ನಿನ್ನ ಇಲಾಖಾ ನಿರ್ದೇಶಕನಾ ?"

"ಹೌದು, ಮಾತಾಜಿ."

"ನಾಳೆ ಏನಾಗುತ್ತೆ ಅಂತ ತಿಳಿಯುವ ತವಕ ಎಲ್ಲರಿಗೂ—ಅಲ್ಲವಾ ?"

"ಹೂಂ."

"ಜಂಟಿ ನಿರ್ದೇಶಕ ಮಾಡ್ದೆ. ಕೃತಜ್ಞತೆ ಸಲ್ಲಿಸೋದಿಲ್ಲವ ?"

ಪರಶುರಾಮ ಮುಖ್ಯಮಂತ್ರಿಯ ಬಳಿಸಾರಿ ಪಾದ ಮುಟ್ಟಿದ.

"ಏಳು, ಮರುಳ !"

ಸೌದಾಮಿನಿ ಪರಶುರಾಮನ ಎರಡೂ ಭುಜಗಳನ್ನು ಹಿಡಿದು ಮೇಲಕ್ಕೆ ಎತ್ತಿದಳು. ಧಾರೆಗಟ್ಟಿ ಹರಿಯುತ್ತಿದ್ದ ತನ್ನ ಕಂಬನಿಯನ್ನು ಅವನು ಕರವಸ್ತ್ರದಿಂದ ಒರೆಸಿದ.

ತಕ್ಷಣವೆ ಮೊದಲಿನಂತಾಗಿ, "ಲಂಚ್ ರೆಡಿ ಮಾಡೋದಕ್ಕೆ ಹೇಳ್ಲಾ ?" ಎಂದು ಕೇಳಿದ.

"ಹೇಳು."

ಪುಟ್ಟ ಲಂಚ್. ಹಸಿವಿಲ್ಲ. ನಾಲಗೆ ರುಚಿ ಇಲ್ಲ....

....ಊಟದ ಕ್ರಿಯೆ ಮುಗಿಸಿ ಹೊರ ಬಂದೊಡನೆ ಅವಳೆಂದಳು :

"ನೀನು ಮನೆಗೆ ಹೋಗಿ ಬಾ. ಫೋನ್ ನಾನೇ ಎತ್ತುತೀನಿ."

ಪರಶುರಾಮ ಹೊರಗೆ ಕಾಲಿಡುತ್ತಿದ್ದಂತೆ ಫೋನ್ ಬಂತು. ಪರವಾಗಿಲ್ಲ, ಹೋಗು—ಎಂದು ಸೌದಾಮಿನಿ ಸನ್ನೆ ಮಾಡಿದಳು: ಸ್ವತಃ ತಾನು ಫೋನ್ ಎತ್ತಿದಳು.

"ಚೀಫ್ ಮಿನಿಸ್ಟರ ನಿವಾಸ."

"ಕಾಕಿನಾಡದಿಂದ ಬಂದಿದ್ದೇವೆ. ಸ್ವಲ್ಪ ಅವರನ್ನು ಅರ್ಜೆಂಟಾಗಿ ಕಾಣ್ಬೇಕಾಗಿತ್ತು."

"ಯಾವ ಸಂಬಂಧವಾಗಿ ?"

"ಕಿಷ್ಕಿಂಧೆಯಲ್ಲಿ ಒಂದು ಪೆಪ್ಪರ್‌ಮಿಂಟ್ ಫ್ಯಾಕ್ಟರಿ ಆರಂಭಿಸಬೇಕೂಂತ ಅಪೇಕ್ಷೆ."

"ಇವತ್ತು ನಾಳೆ ಆಗೋದಿಲ್ಲ. ಸೋಮವಾರ ನಾಲ್ಕು ಗಂಟೆಗೆ ಕಾರ್ಯ ಸೌಧಕ್ಕೆ ಬನ್ನಿ."

"ವ್ಯವಹಾರ ಮುಗಿಸಿ ಈ ರಾತ್ರೆಯೇ ಊರಿಗೆ ವಾಪಸಾಗೋಣಾಂತಿದ್ವಿ."

"ಕುದುರೆ ಮೇಲೆ ಕೂತೇ ಇದ್ದೀರಲ್ಲ. ವಿಶ್ರಾಂತಿ ತಗೊಳ್ಳಿ. ನಾಡದ್ದು ಬನ್ನಿ."

ಸೌದಾಮಿನಿ ಫೋನನ್ನು ಟಕ್ ಎಂದು ಕೆಳಗಿಟ್ಟಳು.

ಎರಡು ಮೂರು ನಿಮಿಷಗಳಲ್ಲಿ ಇನ್ನೊಂದು ಕರೆ ಬಂತು:

"ಪರಶುರಾಮ್ ಅವರು ಇಲ್ಲವ ?"

ಸ್ವರವನ್ನು ಗೊಗ್ಗರಗೊಳಿಸಿ ಸೌದಾಮಿನಿ ಅಂದಳು :

"ಕಾಲು ಗಂಟೆ ಬಿಟ್ಕೊಂಡು ಫೋನ್ ಮಾಡಿ."

"ನಾನು ಮುರಬದ ಶಾಸಕ. ಶಾಸಕರ ಭವನದಲ್ಲಿದ್ದೇನೆ. ಅರ್ಜೆಂಟ್. ಫೋನ್ ಮಾಡೋದಕ್ಕೆ ಅವರಿಗೇ ಹೇಳಿ."

ಒಬ್ಬಳಿಂದಲೇ ವಿವಿಧ ಪಾತ್ರಾಭಿನಯ.

ಮತ್ತೊಂದು ರಿಂಗ್ ಬಂತು. ರಿಸೀವರನ್ನು ಎತ್ತಿ ಇಟ್ಟಳು. ಸಂಪರ್ಕ ಕಡಿಯಿತು. ಇನ್ನೊಂದು ರಿಂಗ್. ಪುನಃ ಹಿಂದಿನಂತೆ ಎತ್ತಿಟ್ಟಳು. ಹೀಗೆ ನಾಲ್ಕು ಬಾರಿ. ರಾಬರ್ಟ್ ಬ್ರೂಸ್‌ನ ತಾಳ್ಮೆ ಇರಲಿಲ್ಲ ಆತನಿಗೆ. ಫೋನ್ ಕೆಟ್ಟಿರಬೇಕೆಂದು ಭಾವಿಸಿ ಸುಮ್ಮನಾದ.

ಪ್ಲಗ್ ತೆಗೆಯದೆ ರಿಸೀವರನ್ನಷ್ಟೆ ಕೆಳಗಿಟ್ಟರೆ ? ಟರ್‌ರ್‌ರ್‌ರ್.

ತಾನು ಮೊದಲು ಫೋನ್ ಮಾಡಿದ್ದು ಎಲ್ಲಿ ? ಯಾವಾಗ ? ಯಾಕೆ ?

ಮುಂಬಯಿ ನಗರದಲ್ಲಿ. ಉಳಿದ ಪ್ರಶ್ನೆಗೆ ಉತ್ತರ ತಿಳಿಯದು.

ಪರಶುರಾಮ ನೂರಾರು ಜನರಿಗೆ ನೆನಪಿನಿಂದಲೆ ರಿಂಗ್ ಮಾಡಬಲ್ಲ. ತಾನು ಒಬ್ಬರಿಗಾದರೂ ನೆರವಿಲ್ಲದೆ ಹಲ್ಲೋ ಎನ್ನಬಲ್ಲೆನೆ ? ಮುಖ್ಯಮಂತ್ರಿಯ ಅಧಿಕೃತ ನಂಬರಿನ ಕಾರಿನ ನೆನಪಾದರೂ ಉಂಟೆ ತನಗೆ ? ಸಾವಿರ ? ಲಕ್ಷ ? ಕೋಟಿ ? ಊಹೂಂ. ಒಮ್ಮೆ ತನಗೆ ಬಾಲ್ಯದಲ್ಲಿ, ಹೆದ್ದಾರಿಯಲ್ಲಿ, ಒಂದು ರೂಪಾಯಿ ನಾಣ್ಯ ಸಿಕ್ಕಿತ್ತು. ಅತ್ತಿತ್ತ ನೋಡದೆ ಅದನ್ನೆತ್ತಿಕೊಂಡು ಕಾಲಿಗೆ ಬುದ್ಧಿ ಹೇಳಿದ್ದೆ. ಅದನ್ನು ಎಷ್ಟೋ ಕಾಲ ಸುರಕ್ಷಿತವಾಗಿ ಇಟ್ಟಿದ್ದೆ. ಪುಟ್ಟವ್ವನಾಗಿದ್ದಾಗಲೂ ಅದಿತ್ತು. ಅಲ್ಲಿ ಯಾರೋ ಕದ್ದರು.

ಹೊತ್ತು ಕಳೆಯಬೇಕು. ವಿಮಾನ ನಿಲ್ದಾಣದಲ್ಲಿ ಹಾಜರಿ ಹಾಕುವ ಹೊತ್ತಾಯಿತೆ ?

ನಿಮಿಷಗಳನ್ನು ಕಲೆ ಹಾಕಬೇಕು.

ಕ್ಷಣವೊಂದು ಯುಗವಾಗಿ ?

ಪರಶುರಾಮ ಹೆಂಡಿರೊಡನೆ ಜಗಳವಾಡುತ್ತ ಕುಳಿತನೊ? ಅವನಾದರೂ ಬಂದಿದ್ದರೆ ಮುರಬದ ನಿಗೂಢ ವ್ಯಕ್ತಿಗೆ ಫೋನ್ ಮಾಡಬಹುದಿತ್ತು.

ಹೊರಗೆ ನಡೆದಾಡಿದ ಸದ್ದು. ಪರಶುರಾಮನ ಸ್ವರ: "ಕೂತ್ಕೊಳ್ಳಿ. ಒಂದ್ನಿಮಿಷ."

ಮುರಬದ ಶಾಸಕ ಬಂದೇ ಬಿಟ್ಟಿದ್ದಾನೆ. ರಸ್ತೆಯಲ್ಲಿ ಆಟೊ ನಿಲ್ಲಿಸಿ ಬಾಗಿಲ ವರೆಗೆ ನಡೆದು ಬಂದಿರಬೇಕು.

"ಮಾತಾಜಿ, ಮುರಬದ ಶಾಸಕರು—"

"ಕರಿ. ಬನ್ನಿ, ನಮಸ್ಕಾರ." ತಾನೆ ಮೊದಲು ವಂದಿಸಿದೆ, ತಪ್ಪೇನು? ವಿನಯ ಇರಬೇಕು—ವಿನಯ.

"ನಮಸ್ಕಾರ, ಮಾತಾಜಿ, ಒಂದು ಗುಟ್ಟಿನ ವಿಷಯ (ಹತ್ತಿರ ಬಂದು). ಅವರ ತಂಡದಿಂದ ಹತ್ತು ಜನ ತಮ್ಮಲ್ಲಿ ಬರೋದಕ್ಕೆ—"

"ತಾವೂ ಸೇರಿ?"

"ಹೌದು. ಸಿದ್ಧ. ಇನ್ನರ್ಧ ಗಂಟೆಯೊಳಗೆ ವ್ಯವಹಾರ ಮುಗೀಬೇಕು. ಒಬ್ಬರಿಗೆ ಒಂದೊಂದು ಲಕ್ಷ."

"ಈಗೆಲ್ಲಿಂದ ತರಲಿ? ಪುನರಾಯ್ಕೆಯಾಗಿ ಮಂತ್ರಿಮಂಡಲದ ರಚಿಸಿದ ಮೇಲೆ ಕೊಟ್ಟೇನು. ಅದೂ ಅರ್ಧಅರ್ಧ ಲಕ್ಷ.... ಇಷ್ಟಕ್ಕೆ ಒಪ್ಪಬೇಕಪ್ಪ. ಸಂಪಾದಿಸಿದ ಮೇಲೆ ಕೊಡಬೇಕಲ್ಲವ ನಾನು? ಈಗ ಹಣದ ಮಾರ್ಕೆಟು ಎಷ್ಟು ಟೈಟ್ ಅನ್ನೋದು ತಮಗೆ ಗೊತ್ತೇ ಇದೆ."

"ತಮ್ಮನ್ನು ಕಂಡರೆ ಮರಬದವರಿಗೆ ಇಷ್ಟ. ನಿಮ್ಮ ಪಕ್ಕದಲ್ಲೇ ಇರಬೇಕೂಂತ ನನ್ನ ಆಸೆ."

"ನಮ್ಮಿಬ್ಬರ ಪಕ್ಷವೂ ಒಂದೇ ಅಲ್ಲವ?"

"ಅದು ಹ್ಯಾಗೆ? ಮನಸ್ಸು ಒಡೀತು ಅಂದ್ಮೇಲೆ ಏನು ಉಳೀತು? ತಾವು ಹೇಳಿದ ಹಾಗೆ ಅರ್ಧ ಅರ್ಧ ಲಕ್ಷ ಮುಂದೆ ಕೊಡೋದಾದರೆ, ಈಗ ಐವತ್ತೈವತ್ತು ಸಾವಿರವಾದರೂ ಕೊಡಿ."

"ಹತ್ತು ಹತ್ತು ಸಾವಿರ ಕೊಡ್ತೇನೆ. ಒಂದು ಶರತ್ತ. ವಿಶ್ವಂಭರರನ್ನೂ ನಮ್ಮ ಕಡೆಗೆ ಕರಕೊಂಡು ಬರಬೇಕು."

"ಅವರನ್ನು ಕಟ್ಕೊಂಡು ಏನು ಮಾಡ್ತೀರಿ? ಒಟ್ಟು ಹತ್ತು ತಲೆ ತರ್ತೇನಪ್ಪ. ಒಬ್ಬೊಬ್ಬರಿಗೆ ಹತ್ತು ಹತ್ತು ಸಾವಿರ."

"ನಾಳೆ ಸಭೆಯಲ್ಲಿ ಓಟು ಹಾಕಿ, ಇಲ್ಲವೆ ಕೈಯೆತ್ತಿ. ಆಮೇಲೆ ಸಾಯಂಕಾಲ ಇಲ್ಲಿಗೆ ಬಂದು ಹತ್ತು ಹತ್ತು ತಗೊಂಡು ರೈಲು ಹತ್ತಿ—ನಿಮ್ಮ ನಿಮ್ಮ ಊರಿಗೆ." ಮುಂದುವರಿಸುತ್ತ ಆಕೆ ಅಲ್ಲಿ ಕುಳಿತಿದ್ದ—ಶಾಸಕನನ್ನು ಕೇಳಿದಳು:

"ಕಾರಿನಲ್ಲಿ ಬಿಟ್ಟು ಬರಬೇಕಾ ನಿಮ್ಮನ್ನು?"

"ಬ್ಯಾಡ. ಗುಟ್ಟು ಬಹಿರಂಗವಾಗ್ತದೆ. ಆಟೋರಿಕ್ಷಾದಲ್ಲಿ ಹೋಗ್ತೀನಿ. ಒಂದೈದು ರೂಪಾಯಿ ಚಿಲ್ಲರೆ ಕೊಡಿ."

"ಇಲ್ಲಿ ಚಿಲ್ಲರೆ ಒಂದಿಲ್ಲ. ಹೀಗೇ ನಡಕೊಂಡು ಹೋಗಿ. ಹೆಚ್ಚು ದೂರ ಇಲ್ಲ."

ಸಂಭಾಷಣೆಯನ್ನು ಆಲಿಸುತ್ತ ನಿಂತಿದ್ದ ಪರಶುರಾಮ ದಂಗಾದ.

"ನೋಡಿದೀಯಪ್ಪ. ಇವರೆಲ್ಲ ನಮ್ಮ ಶಾಸಕರು !"

ಪರಶುರಾಮ ಏನೋ ಹೇಳಲು ಹೊರಟ. ನಾಲಗೆ ಹೊರಳಿಸಿದ. ಬಾಯಿ ಆಡಿಸಿದ. ಸುಮ್ಮನಾದ.

....ನಾಲ್ಕೂವರೆ. ದಿಲ್ಲಿಯಿಂದ ಫೋನ್ ಕರೆ ಬಂತು.

"ನಮಸ್ತೆ ಮಾತಾಜಿ. ನಕುಲದೇವ್, ವಿಶ್ವಂಭರ, ಲಕ್ಷ್ಮೀಪತಿ ಹೊರಟಿದ್ದಾರೆ."

"ಥ್ಯಾಂಕ್ಸ್. ನಿಮಗೆಲ್ಲ ಒಳ್ಳೆಯದಾಗಲಿ."

ಒಂದು ಕ್ಷಣ ತನ್ನ ಎರಡು ಪಾದಗಳೂ ಮರಗಟ್ಟಿದಂತೆ, ಕೈಗಳು ನಿಶ್ಚೇಷ್ಟಿತ ವಾದಂತೆ, ಮಾತು ನಿಂತಂತೆ ಅನಿಸಿತು. ತುಸು ಪ್ರಯಾಸಪಟ್ಟು ಅವಳೆಂದಳು :

"ಒಂದು ಕಪ್ ಬಿಸಿ ಕಾಫಿ ಬೇಕಲ್ಲ, ಪರಶು ?"

"ತರ್ತೇನೆ, ಮಾತಾಜಿ."

....ತುಸು ತುಸುವೆ ಕುಡಿದ ಕಾಫಿ ಅವಳ ದೇಹದಲ್ಲಿ ಶಕ್ತಿ ತುಂಬಿತು.

ಆಗಲೆ ಆಗಿರುವ ತೀರ್ಮಾನ ಈಗ ಆಕಾಶ ಮಾರ್ಗವಾಗಿ ಬರುತ್ತಿದೆ, ಗುಪ್ತ ಚಾರ ದಳದ ಮುಖ್ಯಸ್ಥನಿಗೇನಾದರೂ ರಾತ್ರಿ ಗೊತ್ತಾದರೆ ಫೋನ್ ಮಾಡಬಹುದು, ಆದರೆ, ಮಾಡದೆಯೂ ಇರಬಹುದು. ತಾನು ಅಧಿಕಾರದಲ್ಲಿರುವುದಾದರೆ, ತನಗೆ ಅನುಕೂಲವಾದ ಸುದ್ದಿಯಾದರೆ ತಿಳಿಸುತ್ತಾನೆ. ಇಲ್ಲವಾದರೆ, ನಿದ್ದೆ ಹೋಗು ತ್ತಾನೆ. ಸೋಮವಾರ ತಾನು ಪೀಠದ ಮೇಲಿರುವೆನೊ ? ವಿಶ್ವಂಭರನೊ ? ಲಕ್ಷ್ಮೀಪತಯ್ಯನನ್ನು ಉಪಮುಖ್ಯಮಂತ್ರಿ ಮಾಡಬಹುದು. ಅರ್ಥವನ್ನೊ ಗೃಹ ಇಲಾಖೆಯನ್ನೊ ಕೊಡಬಹುದು.

ಹಾಗಾಗದೆ ನಕುಲದೇವ್‌ಜಿ ತನ್ನ ಪರವಾಗಿ ದಾಳ ಸರಿಸಿದರೆ ? (ಆದರೆ— ಹೋದರೆ, ಅಜ್ಜಿಗೆ ಮೀಸೆ ಬಂದರೆ) ಹಾಗೇನಾದರೂ ಸಂಭವಿಸಿದರೆ ನಾಳೆ ರಾತ್ರಿ 'ನೃಪತುಂಗ'ದಲ್ಲಿ ಊಟ—ಆಟ.

ಇವತ್ತು ನಕುಲದೇವ್ 'ಅರಿಕೇಸರಿ'ಯಲ್ಲಿರುತ್ತಾನೆ, ಪ್ರಾಯಶಃ,

"ಪರಶು, ಧನಂಜಯ ಸಿಗ್ತಾನೊ ನೋಡು."

ಆತ ಅಂಗಡಿಯಲ್ಲಿದ್ದ. ವಾರಾಂತ್ಯದ ವ್ಯಾಪಾರ.

"ನಾನು—ಮಾತಾಜಿ ."

ಸಾಹುಕಾರ ಎದ್ದು ನಿಂತು, "ನಮಸ್ತೆ, ನಮಸ್ತೆ. ಅಪ್ಪಣೆಯಾಗಲಿ" ಎಂದ.

"ನಾಳೆ ಮಧ್ಯಾಹ್ನ ಒಂದು ಅಂಬಾಸಡರ್ ಕಳಿಸಿ ಕೊಡಿ, ಒಂದೆರಡು ದಿನಗಳ ಮಟ್ಟಿಗೆ."

"ಕಳಿಸಿ ಕೊಡ್ತೇನೆ, ಮಾತಾಜಿ. ನಾನೇ ತರ್ತೇನೆ. ಎಕ್ಸ್‌ಪ್ರೆಸ್ ಟ್ರಾವಲ್ಸ್‌ನವರ ಕಾರು. ಕರೀಮ್ ಅಂತ ಒಳ್ಳೇ ಡ್ರೈವರ್ ಇದ್ದಾನೆ. ಇನ್ನೇನಾದರೂ ಬೇಕೆ ಮಾತಾಜಿ ?"

"ಏನೂ ಬೇಡ. ನಾಳೆ ಸಭೆ ಆದ್ಮೇಲೆ ಭೇಟಿಯಾಗೋಣ."

* * *

ರಾತ್ರೆ ವಿಮಾನ ಬಂದ ಸದ್ದಾಯಿತು. ಅದು ಬಂದು ಒಂದು ಗಂಟೆಯಾಯಿತು. ಫೋನ್ ಸರಿಯಾಗಿದೆ ಎಂದು ಖಚಿತ ಮಾಡಿಕೊಳ್ಳಲು ರಿಸೀವರನ್ನೆತ್ತಿ ಕೆಳಗಿಟ್ಟಳು, ಎರಡು ಸಲ. ಟಿಣ್ ಟಿಣ್ ಸದ್ದಾಯಿತು. ಕೆಟ್ಟಿಲ್ಲ.

ಇರುಳು ದಟ್ಟವಾಯಿತು. ದೀಪಗಳು ಮಂಕಾದುವು.

"ಇನ್ನು ಯಾರು ಫೋನ್ ಮಾಡ್ತಾರೆ ? ಮಾಡಿದರೆ ನಡುರಾತ್ರೆಯೊಳಗೆ ನಕುಲದೇವ್‌ಜಿ ಮಾಡಬೇಕು. ನಾನು ನೋಡ್ಕೊಳ್ತೀನಿ. ನೀನು ಹೋಗು, ಪರಶುರಾಮ್. ನಾಳೆ ಬೆಳಗ್ಗೆ ಅನಾಥಾಶ್ರಮದ ವಸತಿಗೃಹದ ಉದ್ಘಾಟನೆ. ಮರೀಬೇಡ."

"ಏಳು ಗಂಟೆಗೇ ಬರ್ತೀನಿ, ಮಾತಾಜಿ."

ಒಂಭತ್ತು ಗಂಟೆಯ ಆಲ್ ಇಂಡಿಯಾ ರೇಡಿಯೊ ವಾರ್ತಾ ಬುಲೆಟಿನ್‌ನಲ್ಲಿ ಕಿಷ್ಕಿಂಧೆಯ ಪ್ರಸ್ತಾಪವಿರಲಿಲ್ಲ. ನಾಳೆ ಸಂಜೆ ಆರು ಗಂಟೆಯ ವಾರ್ತೆಯಲ್ಲಿರುತ್ತೆ.

ಲೇಹ್ಯ ? ನಿದ್ದೆ ಮಾತ್ರೆ ?

ಹತ್ತು, ಹನ್ನೊಂದು, ಹನ್ನೆರಡು... ಗಾಢ ಮೌನ.

ನಿದ್ದೆ ಬರಲಪ್ಪ, ಒಂದಿಷ್ಟು ನಿದ್ದೆ ಬರಲಿ.

೨೪

ಜೀಪು, ಕಾರು, ಕಾರು, ಕಾರು, ಜೀಪು........

ಜನ ನೆರೆದಿದ್ದರು, ಸಹಸ್ರ ಜನ. ಸೌದಾಮಿನಿಗೆ ಅನಿಸಿತು : ತಾನು ಜನ ಪ್ರಿಯ ನಾಯಕಿ ಎನ್ನುವುದರಲ್ಲಿ ಏನು ಸಂದೇಹ ?

ಒಳ್ಳೆ ಬಟ್ಟೆ ಧರಿಸಿದ ಅನಾಥ ಮಕ್ಕಳಿಂದ ಗೌರವರಕ್ಷೆ. (ಇಲ್ಲಿ, ಆ ಹುಡುಗರು ಯಾರೂ ಇಲ್ಲ. ಇವರು ಭಿಕ್ಷುಕರಲ್ಲ, ಭಕ್ಷಕರು.) ಹತ್ತಕ್ಕೂ ಹೆಚ್ಚು ಛಾಯಾ ಚಿತ್ರಗ್ರಾಹಕರು. ತಳಿರು ಸಿಂಗಾರ. ಹಸಿರು ಬಿಸಿಲು. ಕಪ್ಪು ಕನ್ನಡಕ ಧರಿಸಿ ಕೊಂಡರೆ ಛದ್ಮವೇಷವಾಗುತ್ತಿತ್ತು. ಈಗ ತಾನು ನಸು ನಗುತ್ತ ನೆಟ್ಟದೃಷ್ಟಿಯಿಂದ ಎಲ್ಲರನ್ನೂ ನೋಡುವವಳು. ಗತಕಾಲದ ಪುಟ್ಟವ್ವನಲ್ಲ, ಆಧುನಿಕ ಸೌದಾಮಿನಿ.

ವಿಶ್ವಂಭರನ ಹಿಂಬಾಲಕರು ಹಲವರು ಬಂದಿದ್ದಾರೆ—ತನ್ನ ಎದೆಗಾರಿಕೆ ಎಷ್ಟು ಎಂದು ನೋಡಲು. ತನ್ನ ಕಡೆಯವರಲ್ಲೂ ಹೆಚ್ಚಿನವರಿದ್ದಾರೆ. ಯಾವ ಶಿಬಿರಕ್ಕೂ ಸೇರದವರದೇ ದೊಡ್ಡ ಸಂಖ್ಯೆ. ಭಾನುವಾರ ಬೆಳಗ್ಗೆ ವಿಪರೀತ ಕೆಲಸವಾದರೂ ಮಹಿಳೆಯರು ತಮ್ಮ ಮುಖ್ಯಮಂತ್ರಿಯನ್ನು ನೋಡಲು ಹಲವು ದಾರಿಗಳಿಂದ ಬಂದಿದ್ದಾರೆ.

ಸೌದಾಮಿನಿ ಕೇಳಿದಳು :

"ಮಕ್ಕಳಿಗೆ ತಿಂಡಿಕೊಟ್ಟಿರಾ ?"

"ನಿತ್ಯದಂತೆ ಉಪಾಹಾರ ಆಗಿದೆ."

ಕಮಲಮ್ಮ ಇರಬಹುದು. ಲಕ್ಷ್ಮೀನರಸಿಂಹಯ್ಯ ? ಸುಲೋಚನಾಬಾಯಿಯ ಪ್ರೊಫೆಸರ್ ಗಂಡ ? ರಂಗಸ್ವಾಮಿ ಬಂದಿಲ್ಲ. ಮತದಾರರ ಪಟ್ಟಿಯ ಪ್ರಕರಣ ತೀರ್ಮಾನವಾಗಲು ಹಲವು ವರ್ಷ ಹಿಡಿದೀತು, ಹಿಡಿದೀತು. ವಿಶ್ವಂಭರ ಮತ್ತು ನಕುಲದೇವ್ ಬಂದಿದ್ದರೆ ಚೆನ್ನಾಗಿತ್ತು. ಆದರೆ ದೂತರಿಂದ ವರದಿ ಹೋಗುತ್ತದೆ. (ಅಷ್ಟೇನೂ ಜನ ಇರಲಿಲ್ಲ, 'ಜಾತ್ರೆ ಮರುಳೊ, ಜನಮರುಳೊ' ಅಂತ ನೆರೆದಿದ್ದರು.) ಸತ್ಯ ಯಾವುದು ? ಅದೊ ? ಇದೊ ? ಸತ್ಯ ಎಂಬುದೇ ಇಲ್ಲವೇನೊ ಕಡೆಗೆ ?

ಶಿಲಾಫಲಕವನ್ನು ಮುಚ್ಚಿದ್ದ ರೇಷ್ಮೆ ಹೊದಿಕೆ. ಆತುರ ಮಾಡದೆ ನಿಧಾನವಾಗಿ ಅರಿವೆಯನ್ನು ಸರಿಸಿದಳು. ಕಿವಿಗೆ ಹಬ್ಬವಾಯಿತು ಕರತಾಡನ. ಫಲಕವನ್ನು

ನೋಡಿಯೂ ನೋಡದವಳಂತೆ ಮಾಡಿದಳು ಸೌದಾಮಿನಿ. ...ಮೂರು ಸಾವಿರ ವರ್ಷಗಳ ಅನಂತರ ಆಗೆದಾಗ....

"ಹೀಗೆ ದಯಮಾಡಿಸಿ, ಹೀಗೆ ದಯಮಾಡಿಸಿ."

ಮಕ್ಕಳಿಂದ ಸಮೂಹಗಾಯನ ನಡೆಯಿತು:

"ಈಗ ಮುಖ್ಯಮಂತ್ರಿಯವರಿಂದ ಆಶೀರ್ವಚನ."

"....ಬಿಸಿಲು ಏರುವುದಕ್ಕೆ ಮುಂಚೆ ನಾವೆಲ್ಲರೂ ಮನೆಗಳನ್ನು ಸೇರಬೇಕು. ಬೆವರು ಒರೆಸಿಕೊಳ್ಳುತ್ತ ನಿಮ್ಮ ಪ್ರೀತಿಯ ಮುಖ್ಯಮಂತ್ರಿಯನ್ನು ನೀವು ಶಪಿಸುವ ಹಾಗಾಗಬಾರದು. ಕೆಲವರಿಗೆ ಮಾತನಾಡುವ ಚಟ. ಹೊತ್ತು ಗೊತ್ತು ಒಂದೂ ಇಲ್ಲ. ಧ್ವನಿವರ್ಧಕ ನೋಡಿದರಂತೂ ಆವೇಶ ಬರುವುದುಂಟು. ನಾನು ಕಡಮೆ ಮಾತಿನ ಮುಖ್ಯಮಂತ್ರಿ ಎನ್ನುವುದನ್ನಂತೂ ನೀವೆಲ್ಲ ಅರಿತಿದ್ದೀರಿ. ಮಾತು ಹೆಚ್ಚೊ ? ಕೃತಿ ಹೆಚ್ಚೊ ? ನಾನು ಎರಡನೆಯ ಪಂಗಡಕ್ಕೆ ಸೇರಿದವಳು."

ಹೆಚ್ಚೇನೂ ಇಲ್ಲವೆಂದರೂ ಇಪ್ಪತ್ತು ಮಿನಿಟು ಸೌದಾಮಿನಿ ಮಾತನಾಡಿದಳು. ಮುಕ್ತಾಯದಲ್ಲಿ ಅವಳೆಂದಳು :

"ಸುಖದ ಸುಪ್ಪತ್ತಿಗೆಯ ಮೇಲಿರುವವರು ಹರಕು ಚಾಪೆಯವರನ್ನು ನೆನಪಿಡಿ. ದಿನಕ್ಕೊಂದು ಹಿಡಿ ಅಕ್ಕಿ ಹತಭಾಗ್ಯರಿಗೆ. ಇದು ಕಲ್ಯಾಣನಗರ, ಕಲ್ಯಾಣ ರಾಜ್ಯ. ಇಲ್ಲಿ ಸರ್ವರೂ ಸುಖಿಗಳಾಗಲಿ ! ಜಯ ಕಿಷ್ಕಿಂಧೆ ! ಜಯ ಭಾರತ !"

ಹುಡುಗರೂ ಅಂದರು :

"ಜಯ ಕಿಷ್ಕಿಂಧೆ ! ಜಯ ಭಾರತ !"

* * *

ಶಾಸಕರಲ್ಲಿ ಹಲವು ತೆರ: ಜನರಿಗೆ ತಮ್ಮಿಂದಾದಷ್ಟು ಒಳ್ಳೆಯದನ್ನು ಮಾಡುವವರು; ತಮ್ಮನ್ನೇ ಪೊರಕೆ ಕಡ್ಡಿಯಾಗಿ ಮಾಡಿ ಸವೆಯುವವರು (ತಮ್ಮ ಹೆಂಡತಿ ಮಕ್ಕಳ ಗಮನವೂ ಅವರಿಗಿಲ್ಲ; ಇನ್ನು ಕೆಲವರು ಸ್ವಾರ್ಥಕ್ಕಿಷ್ಟು ಪರಾರ್ಥಕ್ಕಿಷ್ಟು ಪೈಕಿ); ಬೇರೆ ಕೆಲವರು ಎಂಥ ಕೀಳು ಕೆಲಸಕ್ಕೆ ಬೇಕಾದರೂ ಕೈಇಕ್ಕಿ ತಮ್ಮ ಬೇಳೆ ಬೇಯಿಸಿಕೊಳ್ಳುವವರು; ಹೇರಳ ಇದ್ದಿತೆಂದರೆ ಪಾಲುಕೊಡುವುದಕ್ಕೂ ಬಟವಾಡೆಗೂ ಅವರು ಹಿಂದೆ ಮುಂದೆ ನೋಡುವುದಿಲ್ಲ, ಮೇಲಿನ ಕೆಲಸಗಳೆಲ್ಲ ನಡೆಯುವುದು— ಆಯಾ ಶಾಸಕ ಎಷ್ಟು ಕುಶಲಮತಿ, ಬುದ್ಧಿವಂತ, ಸಾಧಾರಣಿಗ, ದಡ್ಡ ಎಂಬುದನ್ನು ಅವಲಂಬಿಸಿ. ಇವರೆಲ್ಲರಿಗೂ ಒಂದು ಸಂಗತಿ ಮಾತ್ರ ಸಮಾನ. ವ್ಯಷ್ಟಿಯಾಗಿಯೂ ಸಮಷ್ಟಿಯಾಗಿಯೂ ಜನತೆ ಇವರ ಕಣ್ಣಿಗೆ ಕಾಣಿಸುವುದು ಮತದಾರರಾಗಿ. ಅವರೆಂದೂ ಜಯಘೋಷ ಮಾಡುವುದಿಲ್ಲ. ಮಾಡಿದರೂ ಜನಸ್ತೋಮಕ್ಕೆ ಮೇಲ್ಪಂಗ್ತಿಯಾಗಿ. ಕಿಷ್ಕಿಂಧೆಯಿರಲಿ, ಭಾರತವಿರಲಿ ಇವೆಲ್ಲ ಭೌಗೋಳಿಕ ಘಟಕ

ಗಳು. ಈ ಘಟಕಗಳ ಒಳಗಿರುವುದು ಜನ, ಬೆಳೆ ಪೈರು, ಗುಡಿಸಲು ಸೌಧ, ಕೈಗಾರಿಕೋದ್ಯಮ ಗುಡಿ ಕೈಗಾರಿಕೆ, ಸಂಪತ್ತು, ನೆಲ–ಜಲ–ಆಕಾಶ. ಇಲ್ಲಿನ ಶಾಸಕರು ಇಲ್ಲಿಗೆ ಒಡೆಯರು. ಎಲ್ಲೆಡೆಯ ಶಾಸಕರು ಎಲ್ಲೆಡೆಗೆ ಒಡೆಯರು.

ಒಳ್ಳೆಯ ಶಾಸಕ ವಸ್ತುನಿಷ್ಠ, ಚಿಕಿತ್ಸಕ ಪ್ರವೃತ್ತಿಯವ, ಭಾವ ವಿಕಾರಗಳಿಗೆ ಗುರಿಯಾಗುವುದಿಲ್ಲ. ಗುರಿಯಾದರೂ ನೆರೆದ ಸಮುದಾಯದಿಂದ ಕಣ್ಣೀರು ಹಿಂಡುವುದಕ್ಕಾಗಿ. ಅವನಿಗೆ ದಕ್ಕುವ ಮೆಚ್ಚುಗೆ–ಭಳಿರೆ ! ಭಪ್ಪರೆ !

ಪರಸ್ಪರ ವೈರ (ಸ್ನೇಹ ಕೂಡ) ಶಾಸಕರ ಗುಣಗಳೇ. ವೈರ ಗಾಢ. ಸ್ನೇಹ ಸೀಮಿತ.

ಇವರ ಕಾರ್ಯಾಚರಣೆ ಒಮ್ಮೊಮ್ಮೆ ವೈಯಕ್ತಿಕ ನೆಲೆಯಿಂದ, ಒಮ್ಮೊಮ್ಮೆ ಸಾಮೂಹಿಕ ಅಖಾಡದಿಂದ. ಗೆದ್ದಾಗ ಠೇಂಕಾರ, ಸೋತಾಗ ಬಿಸುಸುಯ್ಲು.

ವಿಧಾನಸಭೆಗೆ ಒತ್ತಿಕೊಂಡೇ ಇತ್ತು ಶಾಸಕಾಂಗ ಪಕ್ಷದ ಸಭೆ ಜರಗುವ ಸ್ಥಳ. ಉಳಿದ ಪಕ್ಷಗಳಿಗೂ ಇದ್ದುವು ಪುಟ್ಟ ಒಂದೊಂದು ಕೊಠಡಿ. ಜಗಲಿಯಲ್ಲಿ ಬೆತ್ತದ ಕುರ್ಚಿಗಳಿದ್ದುವು. ಇಪ್ಪತ್ತು ಮಿನಿಟು ಮೊದಲೇ ಬಂದ ಸೌದಾಮಿನಿ ಒಂದು ಕುರ್ಚಿಯನ್ನು ಆರಿಸಿಕೊಂಡಳು.

ಬರತೊಡಗಿದವರಿಂದ :

"ನಮಸ್ಕಾರ."

ತಪ್ಪದೆ ಇವಳ ಉತ್ತರ :

"ನಮಸ್ಕಾರ."

ಸುಯ್‌ಸುಯ್ಯೆಂದು ಸರಿದಾಡುವ ಮೀನುಗಳು. ಮಹಾವ್ಯಾಧನ ಬಾಣಕ್ಕೆ ಯಾರು ತುತ್ತು ? ಬಲೆಗೆ ಸಿಕ್ಕಿದವರು ಉಪ್ಪೇರಿಯಾಗುವುದು ತನ್ನ ಬಾಣಲೆಯಲ್ಲೊ ? ವಿಶ್ವಂಭರನ ತಪ್ಪಲೆಯಲ್ಲೊ ?

ಬಾಗಿಲು ದಾಟುವ ಮುನ್ನ ಆಮಂತ್ರಣ ತೋರಿಸಬೇಕು. ಕಳೆದುಹೋಗಿದ್ದರೆ, ಗುರುತಿಸುವವರು ಯಾರಾದರೂ ಬೇಕು.

ಸೌದಾಮಿನಿ ಬೇಗನೆ ಬಂದಿರುವಳೆಂಬ ವಾರ್ತೆ ತಲಪಿದೊಡನೆ ವಿಶ್ವಂಭರನ ಕಾರು ಕಾರ್ಯಸೌಧಕ್ಕೆ ಧಾವಿಸಿತು. (ನಕುಲದೇವ್ ಅಂದಿದ್ದ : ನೀವು ಮೊದಲು ಹೋಗಿ ಅಲ್ಲೇ ಇರಿ; ನಾನು ಒಂದು ಘಂಟೆಗೆ ಐದು ಮಿನಿಟು ಇರುವಾಗ ಬರ್ತೇನೆ. ಬೆಟ್ಟುಕೊಟ್ಟರೆ ಹಸ್ತವನ್ನು ಅದೃಶ್ಯಮಾಡುವ ಸಮರ್ಥೆ ಆಕೆ.)

ಊಟವಾಗಿತ್ತು. ಬಿಸಿಲಿನ ದಣಿವಾರಿಸಿಕೊಳ್ಳಲು ಒಂದಿಷ್ಟು ಪೇಯ. ಕೋಕೊ ಕೋಲಾ ವಿತರಣೆಯಾಯಿತು. ಕೆಳಗಿರಿಸಿದ ಎರಡು ಖಾಲಿ ಬಾಟಲಿಗಳು ಬಿದ್ದುವು. (ಒಂದರ ಕತ್ತು ಮುರಿಯಿತು. ಇನ್ನೊಂದರ ಹೊಟ್ಟೆ ಬಿರಿಯಿತು), ಕಾರ್ಯಸೌಧದ ಜವಾನರಿಗೆ ಗಾಜಿನ ಚೂರುಗಳನ್ನೆತ್ತುವ ಕೆಲಸ.

ವಿಶ್ವಂಭರ :

"ಹಲ್ಲೋ."

ಸೌದಾಮಿನಿ :

"ಹಲ್ಲೋ."

ಅರ್ಧ ಲಕ್ಷವಲ್ಲ—ಐವತ್ತು ಸಾವಿರ ಬೇಕು, ಈಗಲೇ, ಎಂದವನು ಬಂದ.

"ಬಡವರ ಮೇಲೆ ಕೃಪೆ ಇಡಲಿಲ್ಲ." ಎಂದ.

ಸೌದಾಮಿನಿ ಅಂದಳು :

"ಇವತ್ತು ವ್ಯಾಪಾರ ಬಂದ್."

"ಮನಸ್ಸು ಮಾಡಿದರೆ ಈಗಲೂ—"

"ಟಂಕಸಾಲೆ – ನೋಟು ಮುದ್ರಿಸೊ ಪ್ರೆಸ್ – ಮುಖ್ಯಮಂತ್ರಿಯ ನಿವಾಸದಲ್ಲಿ ಇಲ್ಲವಪ್ಪ."

"ಲಕ್ಷ್ಮೀಪತಯ್ಯ ಬಂದ್ರು. ನಾನು ಒಳಗೆ ಹೋಗ್ತೀನಪ್ಪ."

"ಅಲ್ಲಿ ಕುಡಿಯೋಕೆ ಕೊಡ್ತಾರೆ. ಹೋಗಿ ರುಚಿ ನೋಡಿ."

ಅಸ್ವಸ್ಥನೊಬ್ಬ ಗಾಲಿ ಕುರ್ಚಿ ಮೇಲೆ ಕುಳಿತು ತಳ್ಳಿಸಿಕೊಂಡು ಬರುತ್ತಿದ್ದಾನೆ. ಹಬೀಬುಲ್ಲ. ಈತ ತನಗೆ ಮತ ಕೊಡುತ್ತಿದ್ದ ಬಹುಮತ ಖಚಿತ ಎಂಬುದು ತಿಳಿದಿದ್ದರೆ, ಬಹಳ ಜನರದು ಅದೇ ತೊಂದರೆ. ಉಳಿದ ಅವಧಿಗೆ ಅಧಿಕಾರ ಪಡೆಯುವ ಹಂಬಲ. ರಾಷ್ಟ್ರಪತಿಯ ಆಡಳಿತವೇನಾದರೂ ಬಂತೋ ಇವನು ಇನ್ನೊಮ್ಮೆ ಕಾಹಿಲೆ ಬೀಳುವುದು ಖಂಡಿತ. ಪುನಃ ಚುನಾವಣಾ ಅಭ್ಯರ್ಥಿಯಾಗಿ ಹೋರಾಡುವುದು ಇವನಿಂದ ಸಾಧ್ಯವಾಗದ ಮಾತು.

"ಸಲಾಂ ಮಾಜಿ."

"ಆಲೇಕುಂ ಸಲಾಂ."

ಶುಭಾಶಯಗಳ ನಾಟಕ ಬೇರೆ. ಐ.ಜಿ.ಪಿ.ಯ ಮುಖ ಕಂಡಂತಾಯಿತು : ಕಮಿಷನರನದೂ. ಯಾರಿಗೆ ಸೆಲ್ಯೂಟ್ ? ಇನ್ನು ಮುಕ್ಕಾಲು ಗಂಟೆಯೊಳಗೆ ನಿರ್ಧಾರವಾಗಿಯೇ ಹೋಗುತ್ತದೆ.

ನಕುಲ್‌ದೇವ್ ಮೆಟ್ಟಲುಗಳನ್ನೇರಿ ಬಂದ. ಸೌದಾಮಿನಿ ಎದ್ದು ನಿಂತಳು.

"ನಮಸ್ತೆ, ಭಾಯಿ ಸಾಬ್."

"ರಾಮ್‌ರಾಮ್, ಮಾತಾಜಿ."

"ತಾವು ಬಂದದ್ದು ಒಳ್ಳೇದೇ ಆಯಿತು."

"ನಿಮಗೆ ಶುಭ ಹಾರೈಸಲೆ ?"

"ಉಪಕೃತ."

"ಸಮಯವಾಯಿತು. ಒಳಗೆ ಹೋಗೋಣವೊ ?"

"ನಡೀರಿ."

ಒಳಗೆ ಕುಳಿತಿದ್ದವರೆಲ್ಲ ಎದ್ದುನಿಂತರು. ನಕುಲದೇವನ ಜತೆಯಲ್ಲಿ ಸೌದಾಮಿನಿಯೂ ಶಾಸಕ ಸಮೂಹಕ್ಕೆ ವಂದಿಸಿದಳು.

ನಕುಲದೇವ್ ವೇದಿಕೆಯ ಕೇಂದ್ರ ಬಿಂದುವಾದೊಡನೆ, ಸೌದಾಮಿನಿ ಕೇಳಿದಳು:

"ವಿಶ್ವಂಭರರೆ, ನೀವು ವರಪ್ಪರ ಬಲಕ್ಕೊ ? ಎಡಕ್ಕೊ ?"

ಸೂಕ್ಷ್ಮವನ್ನು ಗಮನಿಸಿ, ನಕುಲದೇವ್ "ಎಲ್ಲಾದರೆ ಏನು ? ನೀವು ಈಚೆಗೆ ಬನ್ನಿ, ಮಾತಾಜಿ" ಎಂದ. ಅದು ಬಲ. ಅಲ್ಲಿ ಕುಳಿತವರಿಗೆ ಗೆಲುವು ಎಂದು ಭಾವಿಸುವುದು ಎಷ್ಟು ಮೂರ್ಖತನ !

ರಾಜ್ಯ ರಾಷ್ಟ್ರಪಕ್ಷದ ಅಧ್ಯಕ್ಷ ಕೃಷ್ಣಪ್ರಸಾದ್ ಶಾಸಕರ ಮಧ್ಯೆ ಕುಳಿತಿದ್ದ.

"ಎಲ್ಲಿ ಪ್ರಸಾದ್ ?" ಎಂದು ಕೇಳಿದ ನಕುಲದೇವ್.

"ನೋಡಿ ಅಲ್ಲಿದ್ದಾರೆ. ಎರಡನೇ ಬಾಲ್ಯದ ಹುಡುಗಾಟ ಈಗ," ಎಂದ ವಿಶ್ವಂಭರ.

"ಕೈ ಹಿಡಿದು ಕರಕೊಂಡು ಬನ್ನಿ."

ಬಂದನಪ್ಪ ನಮ್ಮ ಕೃಷ್ಣ ಮುದ್ದುಕೃಷ್ಣ ಬಂದನು.... ಸೌದಾಮಿನಿ ನಿರ್ವಿಕಾರ ದೃಷ್ಟಿಯಿಂದ ಅವನನ್ನು ನೋಡಿದಳು. ಈತನ ಮೇಲೆ ಯಾಕೆ ವಿಶ್ವಾಸವಿಟ್ಟೆ ?.... ನಂಬಿಕೆಟ್ಟೆನೋ ರಂಗ ನಂಬಿಕೆಟ್ಟೆನು. ತಾನು ಹೆಸರು ಸೂಚಿಸಿದ ತಪ್ಪಿಗೆ ಈಗ ಇವನ ಬಡಿವಾರ ಸಹಿಸಬೇಕು.

ನಕುಲದೇವ್‌ಜಿ ಕೇಳಿದ :

"ಸ್ವಾಗತ ಬಯಸೋದಿಲ್ವೆ ಕೃಷ್ಣಪ್ರಸಾದ್‌ಜಿ ?"

ಇವನು ಕೊರೆಯ ತೊಡಗಿದ ಎಂದರೆ ಶ್ರೋತೃಗಳಿಗೆ ನಿದ್ದೆ ಬರಲೇಬೇಕು. ಈ ಸಂಗತಿ ಕೇಳಿ ತಿಳಿದಿದ್ದ ನಕುಲದೇವನೆಂದ :

"ಒಂದೆರೆಡು ಮಾತು ಹೇಳಿಬಿಡಿ ಸಾಕು."

ಔಪಚಾರಿಕ ಸ್ವಾಗತದ ಬಳಿಕ, ದಿಲ್ಲಿಯಿಂದ ಬಂದವರಿಂದ ಪ್ರಾಸ್ತಾವಿಕ ಭಾಷಣ.

"ಇವತ್ತಿನ ಸಭೆಯ ಹಿನ್ನೆಲೆ ಏನು ಎಂಬುದು ನಿಮಗೆ ಗೊತ್ತೇ ಇದೆ. ನನ್ನದು ಬರಿಯ ವೀಕ್ಷಕನ ಪಾತ್ರ. ಸೌದಾಮಿನಿಜಿ ಮತ್ತು ವಿಶ್ವಂಭರಜಿ ಇಬ್ಬರೂ ನಮಗೆಲ್ಲ ಆದರಣೀಯರು. ಚುನಾವಣೆಯ ಅನಂತರ ನವ ಶಾಸಕರ ಸಭೆಗೆ ನಾನು ಬಂದದ್ದು ನಿಮ್ಮಲ್ಲಿ ಎಲ್ಲರಿಗೂ ನೆನಪಿದ್ದೀತು. ನನ್ನ ಮೇಲಿನ ವಿಶ್ವಾಸದಿಂದ ಈ ಸಲವೂ ಪ್ರಧಾನಿ ನನ್ನನ್ನೇ ಕಳಿಸಿಕೊಟ್ಟಿದ್ದಾರೆ. ನಾನು ಅವರ ಭಕ್ತ, ಹನುಮಂತ.

"ಸೌದಾಮಿನಿಜಿಯವರ ನಾಯಕತ್ವದಲ್ಲಿ ವಿಶ್ವಾಸವಿಲ್ಲ ಎನ್ನುವ ಮಾತು ಬಂದಿದೆ. ಈ ವಾದವನ್ನು ವಿಶ್ವಂಭರಜಿ ಮಂಡಿಸಿದ್ದಾರೆ. ಅವರ ಮಾತು ಕೇಳೋಣ: ಸೌದಾಮಿನಿಜಿಯವರ ಮಾತನ್ನೂ ಕೇಳೋಣ. ಅವರಲ್ಲಿ ವಿಶ್ವಾಸವಿಲ್ಲ ಎಂದು ಸಾಬೀತಾದರೆ ಹೊಸ ನಾಯಕನನ್ನು ಆರಿಸೋಣ."

ಯಾರೋ ಒಬ್ಬ ಶಾಸಕನೆಂದ :

"ಆ ಫ್ಯಾನ್ ಎಲ್ಲ ಬಂದ್ ಮಾಡ್ರೋ. ನಿದ್ದೆ ಬರ್‍ತೈತಿ....!"

ಬಹಳ ಜನ ನಕ್ಕರು. ಫ್ಯಾನ್‌ಗಳ ಜಾಲಗಳ ಚಾಲನೆ ಮುಂದುವರಿಯಿತು.

ನಕುಲದೇವರ ಸೂಚನೆಯಂತೆ ವಿಶ್ವಂಭರ ಮಾತನಾಡಲು ಎದ್ದ. ಸಾಯುತ್ತಿರುವ ಕುದುರೆಗೆ ಇನ್ನೆಷ್ಟು ಬಡೆಯಬಹುದು ಚಾಟಿಯಿಂದ? ರಹಸ್ಯ ಮತದಾನಕ್ಕೆ ಒಪ್ಪಬಾರದು ಎಂದುಕೊಂಡ ವಿಶ್ವಂಭರ. ಸೌದಾಮಿನಿಯ ದುರಾಡಳಿತದ ಪುಟ್ಟ ಚಿತ್ರ ಕೊಟ್ಟ. ಇಲ್ಲಿ ಪಕ್ಷದ ಭವಿತವ್ಯದ ಪ್ರಶ್ನೆ ಅಡಗಿದೆ, ಎಂದ. ತೀರಾ ಹಾಳಾಗುವುದಕ್ಕೆ ಮುನ್ನ ರಿಪೇರಿ ಕಾರ್ಯ ನಡೆಯಬೇಕು ಎಂದು ಸೂಚಿಸಿದ. ನಮ್ಮವರು ಯಾರಿಗೂ ಅಧಿಕಾರ ವ್ಯಾಮೋಹವಿಲ್ಲ ; ನಮಗೆ ಬೇಕಾದ್ದು ಸುಗಮ ರಾಜ್ಯಾಡಳಿತ. ಸಹಿ ಹಾಕಿರುವ ನಮ್ಮ ಎಂಬತ್ತು ಜನ ಮಾತ್ರವಲ್ಲ, ಎಲ್ಲರೂ ಈಗಿನ ಮುಖ್ಯಮಂತ್ರಿಯಲ್ಲಿ ಅವಿಶ್ವಾಸ ಸೂಚಿಸಬೇಕೆಂದು ನಾನು ಕರೆ ಕೊಡುತ್ತೇನೆ. ಹೊಸ ಅಧ್ಯಾಯ ಆರಂಭಿಸೋದಕ್ಕೆ ಇನ್ನು ಸಿದ್ಧರಾಗೋಣ.

ಈ ವಿಶ್ವಂಭರ ನಾಲಗೆ ಸಡಿಲ ಬಿಟ್ಟಿರಲಿಲ್ಲ. ತನ್ನ ಗತ ಜೀವನವನ್ನು ಕೆದಕಬೇಡ–ಎಂದು ನಕುಲದೇವ್‌ಜಿ ಹಿತೋಕ್ತಿ ಆಡಿರಬಹುದು. (ಆಡಿದ್ದರು : 'ಇಂಥವಳನ್ನು ಮುಖ್ಯಮಂತ್ರಿ ಮಾಡಿದೆವಲ್ಲ ? ಪಕ್ಷದ ಮಾನ ಏನು ಉಳಿದ ಹಾಗಾಯಿತು?')

ಅವನು ಕುಳಿತ ; ಇವಳು ಎದ್ದಳು.

"ಹಲವು ಕನಸುಗಳೊಂದಿಗೆ ಈ ಸ್ಥಾನಕ್ಕೆ ಬಂದೆ. ಈಗಲೂ ಆ ಕನಸುಗಳು ಭದ್ರವಾಗಿವೆ. ನಿಮ್ಮೆಲ್ಲರ ವಿಶ್ವಾಸಕ್ಕೆ ಪಾತ್ರಳಾದ ನನ್ನನ್ನು ನೋಡಿ ಪ್ರಧಾನಿ ಹೇಳಿದ್ದರು– 'ನೀನು ದೇಶದ ಪ್ರಥಮ ಮಹಿಳಾ ಮುಖ್ಯಮಂತ್ರಿ. ಎಲ್ಲ ಕಣ್ಣುಗಳೂ ನಿನ್ನ ಮೇಲಿವೆ' ಇಲ್ಲ, ಮರೆತಿಲ್ಲ ನಾನು ಏನನ್ನೂ ಮರೆತಿಲ್ಲ. ಅಮಾಯಕ ಶಾಸಕರಿಗೆ ಇಲ್ಲದ ಸಲ್ಲದ ಆಸೆ ತೋರಿಸಿ ನನ್ನ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ನಡೆಯಿತು. ಆದರೆ ಶಾಸಕರು ಅವರ ಬೋನಿಗೆ ಬಿದ್ದರೆ ? ಇಲ್ಲ–ಇಲ್ಲ ! ನನ್ನ ಪಕ್ಷದ ಬಹುಸಂಖ್ಯಾಕ ಶಾಸಕರು ನನಗೇ ಬೆಂಬಲ ಕೊಡ್ತಾರೆ ಅನ್ನೋ ಭರವಸೆ ನನಗಿದೆ. ರಾಜ್ಯದ ಏಳ್ಗೆಗೆ, ರಾಷ್ಟ್ರದ ಏಳ್ಗೆಗೆ ಬೇಕಾಗಿರುವುದು ಅರ್ಜಿತ ದುಡಿಮೆ, ಅಚಲ ನಿಷ್ಠೆ. ಕಿಷ್ಕಿಂಧೆಯ ದರಿದ್ರ ಕೋಟಿಯನ್ನು ಕಂಡಾಗ ನನ್ನ ಹೃದಯ ಕರಗಿ ನೀರಾಗ್ತದೆ. ನನ್ನ ಕಡೆಯವರು ಆತ್ಮಾಭಿಮಾನಿಗಳು. ದಯವಿಟ್ಟು ಒಂದು ವಿಷಯ ನೆನಪಿಡಿ : ವಿಶ್ವಂಭರ ಹೊಸಬರು. ನಾನು ಅನುಭವಿ (ಒಂದು ಧ್ವನಿ : 'ಮೊದಲು ನೀವೂ ಹೊಸಬರಾಗಿದ್ರಿ') ಸಾರಿ ಹೇಳ್ತೇನೆ : ಈಗ ಹಳಬಳಾಗಿಲ್ಲ. ನನ್ನ ಪರಮ ವಿಶ್ವಾಸಕ್ಕೆ ನೀವೆಲ್ಲರೂ ಪಾತ್ರರು ಅನ್ನೋದನ್ನು ತೋರಿಸಿಕೊಡಿ."

—ಇದು ಸೌದಾಮಿನಿ ಆಡಿದ ಮಾತಿನ ಸಾರ.

ನಕುಲದೇವರ ಎದುರು ಸಭಾಂಗಣದಲ್ಲಿ ಮೌನ ಹೆಪ್ಪುಗಟ್ಟಿತು.

ಎಡಗಡೆಯವರೊಡನೆ ನಕುಲದೇವರ ಗುಸು ಗುಸು, ಬಲಗಡೆಯವಳೊಡನೆ ಗುಸು ಗುಸು.

ಈಗಿನ ವಾತಾವರಣವನ್ನು ಗಮನಿಸಿದಾಗ, ಬಹಿರಂಗ ಮತಗಣನೆ ಮೇಲು ಎಂದು ವೀಕ್ಷಕ ಮಹಾಶಯನಿಗೆ ಅನಿಸಿತು. ರಹಸ್ಯಮತದಾನದಲ್ಲಿ ಅಪಾಯ ಸಂಭವನೀಯ. ವಿಶ್ವಂಭರನ ಕಡೆಯ ಕೆಲವರನ್ನು ಈಕೆ ಈಗಾಗಲೇ ಒಲಿಸಿ ಕೊಂಡಿದ್ದರೆ ಅವರೆಲ್ಲ ನಿರ್ಭಯವಾಗಿ ಪೆಟ್ಟಿಗೆಯಲ್ಲಿ ಬಚ್ಚಿಟ್ಟುಕೊಂಡು ಮೋಸ ಮಾಡುತ್ತಾರೆ.

"ಸೌದಾಮಿನಿಜಿಯವರ ಪಕ್ಷಪಾತಿಗಳು ಬಲಕ್ಕೆ ಬನ್ನಿ. ವಿಶ್ವಂಭರಜಿಯವರ ಕಡೆಗಿರುವವರು ಎಡಕ್ಕೆ."

ನಕುಲದೇವ ಇಂಗ್ಲಿಷಿನಲ್ಲೊ ಹಿಂದೂಸ್ಥಾನಿಯಲ್ಲೊ ಹೇಳಿದುದನ್ನು ಕಿಷ್ಕಿಂಧೆಯ ಭಾಷೆಗೆ ಅನುವಾದಿಸಬೇಕು: ಅದಾದಮೇಲೆ ನಿರ್ದೇಶದ ಪುನರುಚ್ಚಾರ. ಜನ ಅತ್ತ ಇತ್ತ ನಡೆದಾಡಿದರು: ಪರಿಚಿತರನ್ನು ಗುರುತಿಸಿ ಜತೆಗೆ ಕುಳಿತರು. ಎಲ್ಲ ಸರಿಯಾಯಿತೆ ? ಯಾರೋ ಅನಧಿಕೃತವಾಗಿ ಎಣಿಸುತ್ತಿದ್ದರು.

ವಿದ್ಯಾಧರ ಗಣಿತ ವಿಶಾರದ. ಅಲ್ಲಿ ಮಂತ್ರಿಪಟ್ಟ ಸಿಗುತ್ತದೆ ಅಂತ ಅತ್ತ ಹೋದನಲ್ಲ? ವಿಶ್ವಂಭರ ಇವರಿಗೆ ಕೊಕ್ ಕೊಟ್ಟು ಹೊಸದೇ ಮಂತ್ರಿಮಂಡಲ ರಚಿಸುತ್ತಾನೆ–ಈಗ ಅಂಕಗಳ ಕಿತ್ತಾಟದಲ್ಲಿ ಗೆದ್ದರೆ. ರಂಗಧಾಮ.... ಪಾಪ, ಹುಡುಗ. ವಿಶ್ವಂಭರ ಇವತ್ತು ಜಯಶಾಲಿಯಾದರೆ ಸಂಜೆ ಈ ಧ್ರುವ ಅಳುತ್ತಾನೆ.

"ಸೌದಾಮಿನಿಜಿಯವರ ನಾಯಕತ್ವದಲ್ಲಿ ವಿಶ್ವಾಸವಿರುವವರು ಕೈಯೆತ್ತಿ."

ಎಪ್ಪತ್ತೈದು.

ಎರಡನೇ ಎಣಿಕೆಯಲ್ಲೂ ಅಷ್ಟೆ.

"ದೇವಿಜಿಯವರ–ಸೌದಾಮಿನಿದೇವಿಜಿಯವರ– ನಾಯಕತ್ವದಲ್ಲಿ ವಿಶ್ವಾಸವಿಲ್ಲದವರು ಕೈಯೆತ್ತಿ."

ಎಂಬತ್ತು.

ಅಷ್ಟೆ, ಎರಡನೇ ಎಣಿಕೆಯಲ್ಲೂ.

"ಸೌದಾಮಿನಿಜಿ, ಬೇಸರದ್ದಾದರೂ ನಾನು ಮಾಡಲೇಬೇಕಾದ ಕೆಲಸ. ಸಂಪುಟಕ್ಕೆ ರಾಜೀನಾಮೆ ಕೊಟ್ಟು, ಹೊಸ ನಾಯಕತ್ವದ ಆಯ್ಕೆಗೆ ಎಡೆ ಮಾಡಿಕೊಡಿ. ತಗೊಳ್ಳಿ ಪೇಪರ್."

"ಪೆನ್ನೂ ನೀವೇ ಕೊಡಿ. ನಿಮ್ಮ ಪೆನ್ ನನಗೆ ಪರಿಚಿತ."

"ಹೆಹ್ಹೆಹ್ಹೆ ! ಇದು ಬೇರೆ ಪೆನ್ !" ಎಂದ ನಕುಲದೇವ್, ತಾನು ಸೋತಿಲ್ಲ ಎಂಬಂತೆ.

ಶಾಸಕರನ್ನು ಉದ್ದೇಶಿಸಿ ಆತನೆಂದ :

"ಮುಖಂಡರು ಯಾರು ಅನ್ನೋದು ನಿಮಗೆ ಗೊತ್ತಿದ್ದರೂ ಪಕ್ಷದ ಐಕ್ಯಕ್ಕೆ

ಧಕ್ಕೆಯಾಗದಂತೆ, ಕುಂದು ಬರದಂತೆ, ನಿವೃತ್ತರಾಗುತ್ತಿರುವ ನಾಯಕಿ ಹೊಸಬರ ಹೆಸರನ್ನು ಸೂಚಿಸಬೇಕು. ಸೌದಾಮಿನಿಜಿ, ವಿಶ್ವಂಭರರ ಹೆಸರನ್ನು ಸೂಚಿಸ್ತೀರಾ?"

"ಸಂತೋಷದಿಂದ. ಹೆಸರು ಸೂಚಿಸ್ತಾ, ಐದು ನಿಮಿಷ ವಿಶ್ವಂಭರರ ಗುಣ ಗಾನ ಮಾಡೋದಕ್ಕೆ ಅವಕಾಶ ಕೊಡಿ."

"ಧಾರಾಳವಾಗಿ. ಐದಲ್ಲ ಹತ್ತು ನಿಮಿಷ ತಗೊಳ್ಳಿ."

ಪ್ರಚಂಡ ಚಪ್ಪಾಳೆಯ ನಡುವೆ ಮುಗುಳುನಗುತ್ತಲೇ ಸೌದಾಮಿನಿ ಎದ್ದಳು; ಸರಿಗೊಳಿಸಿದ ಧ್ವನಿವರ್ಧಕದೆದುರು ನಿಂತಳು. ಮುಖಗಳನ್ನು ಹುಡುಕುತ್ತ ಹುಡುಕುತ್ತ ಕುಳಿತವರ ಮೇಲೆಲ್ಲ ಕಣ್ಣೋಡಿಸಿದಳು. ವೇದಿಕೆಯತ್ತ ತಿರುಗಿದಳು :

"ರಾಷ್ಟ್ರದ ಹಿರಿಯ ನಾಯಕರಲ್ಲೊಬ್ಬರಾದ, ದೀರ್ಘಕಾಲದ ನನ್ನ ಆತ್ಮೀಯ ಗೆಳೆಯರಾದ ಸನ್ಮಾನ್ಯ ನಕುಲದೇವ್‌ಜಿ, ಇದು ನನ್ನ ಪಾಲಿಗೆ ಅತ್ಯಂತ ಸಂತೋಷದ ಘಳಿಗೆ. ವಿಶ್ವಂಭರರು ನನ್ನ ಮಟ್ಟಿಗೆ ನಿಜವಾಗಿಯೂ ಅಪರಿಚಿತರು. ಆದರೆ ಅವರ ಚಟುವಟಿಕೆಯನ್ನು ಈಕ್ಷಿಸಿ ತೃಪ್ತಳಾಗಿದ್ದೇನೆ. ಅವರ ವಿಷಯದಲ್ಲಿ ನನಗೆ ವಾತ್ಸಲ್ಯ, ಮಮತೆ. ಅವರನ್ನು ನನ್ನ ಸಂಪುಟಕ್ಕೆ ಸೇರಿಸಿಕೊಳ್ಳಬೇಕೆಂಬ ಅಪೇಕ್ಷೆ ನನಗಿತ್ತು. ಆದರೆ ಏನೋ ಗಾಳಿ ಬೀಸಿ, ರಾಜ್ಯ ಪುರುಷನ ಕೂದಲು ಕೆದರಿತು.

"ಪ್ರೀತಿಯ ಸಹೋದ್ಯೋಗಿ ವಿಶ್ವಂಭರರು ಒಂದೆರಡು ತಿಂಗಳ ಹಿಂದೆ ನನ್ನ ಬಗ್ಗೆ ಒಂದು ಪುಸ್ತಕ ಬರೆದಿದ್ದರು. ಬಹಳ ಸ್ವಾರಸ್ಯ ಉಳ್ಳ ಕಥೆ. ನನ್ನನ್ನು ಕೇಳಿದ್ದರೆ ಇನ್ನಷ್ಟು ಮಾಹಿತಿ ಕೊಡ್ತಿದ್ದೆ. ಓದುವುದಕ್ಕೆ ಪುಸ್ತಕ ಇನ್ನೂ ಹೆಚ್ಚು ಖುಶಿ ನೀಡ್ತಿತ್ತು. ಒಬ್ಬ ಶಾಸಕ ಮುಖ್ಯಮಂತ್ರಿಯ ಜೀವನಕಥೆ ಬರೆದದ್ದು ಎಲ್ಲಿಯಾದರೂ ಉಂಟಾ ? ನಕುಲದೇವ್‌ಜಿ ಇಂಗ್ಲಿಷಿನಲ್ಲಿ ಆ ಪುಸ್ತಕದ ಸಾರಾಂಶ ಮಾತ್ರ ಓದಿದ್ದಾರೆ. ಪ್ರಧಾನಿಯೂ ಓದಿದ್ದಾರೆ.

"ಹಿಂದೆ ರಾಷ್ಟ್ರಸಭಾ ಪಕ್ಷದಲ್ಲಿದ್ದ ಮುಖಂಡನೊಬ್ಬ 'ಅವಳನ್ನು ಕೋರ್ಟಿನ ಕಟ್ಟೆ ಹತ್ತಿಸ್ತೀನಿ, ಬೆತ್ತಲೆ ಮಾಡ್ತೀನಿ' ಅಂತ ಗುಟ್ಟಿನಲ್ಲಿ ಅಂದರಂತೆ. ಆ ಕ್ಷಣಕ್ಕಾಗಿ ನನ್ನ ಸೀರೆ ಕಾಯ್ತಾ ಇದೆ ! (ವಿಶ್ವಂಭರನೂ ನಕುಲದೇವನೂ ಪಿಸುಮಾತನಾಡಿದರು. ನಿಲ್ಲಿಸಬೇಕಲ್ಲ ಇವಳ ಪ್ರವರ ? ನಕುಲದೇವ : 'ಸೌದಾಮಿನಿಜಿ, ಚುಟುಕು ಮಾಡಿ') ಮೊಟಕು ಮಾಡಿದರೆ ಮಜಾ ಇರೋದಿಲ್ಲ–ನಿಮಗೆ ಗೊತ್ತಿಲ್ವ ನಕುಲಣ್ಣ ? ನೀವೇ ದಯಪಾಲಿಸಿದ ಕಾಲಾವಕಾಶವನ್ನಾದರೂ ಕೊಡಿ. (ಗದ್ದಲ : "ಅವರು ಮಾತಾಡಲಿ ! ಮಾತಾಡಲಿ !" "ಬೇಡ ! ಬೇಡ !" ಸದ್ದು ಎಡದಿಂದಲೊ ? ಬಲದಿಂದಲೊ ? ಯಾವ ಸದ್ದು ಎಲ್ಲಿಂದ ?) ಸ್ವತಂತ್ರ ಭಾರತದಲ್ಲಿ ಬಡಪ್ರಾಣಿಗೂ ಹುಲ್ಲು ಮೇಯುವ, ಉಸಿರಾಡುವ ಹಕ್ಕಿದೆ. ನನಗಿಲ್ಲವಾ ? ಮಾತು ಬರ್ತದೆ. ಅದನ್ನು ಆಡುವಂತಿಲ್ಲವಾ ? ಕಿಷ್ಕಿಂಧೆಯ ಮುಖ್ಯಮಂತ್ರಿಯಾದ ನಾನು ಒಂದು ಕಾಲದಲ್ಲಿ ಪುಟ್ಟವ್ವನಾಗಿದ್ದೆ–ಅನಾಥಾಶ್ರಮ ನಡೆಸ್ತಿದ್ದ ಸಮಾಜ ಸೇವಿಕೆ ಪುಟ್ಟವ್ವ ! ("ನಿಲ್ಲಿಸಿ ! ನಿಲ್ಲಿಸಿ !" "ಮಾತಾಡಿ ! ಮಾತಾಡಿ !")

ನಾನೊಬ್ಬಳು ಢಾಕಿನಿ, ಅವರೆಲ್ಲ ದೇವತೆಗಳು ಅಂದುಕೊಂಡಿರಾ ?! ಅರ್ಧರ್ಧ ಲಕ್ಷಕ್ಕೆ ವ್ಯವಹಾರ ಕುದುರಿಸೋಕೆ ಕೆಲ ಶಾಸಕರು ಸಿದ್ಧವಾಗಿದ್ದರು....ಇದೇನಾ ನೀತಿ, ಧರ್ಮ ? ನಾನು ಅವರನ್ನು ಕೊಳ್ಳಲಿಲ್ಲ ! (ಅವರು ಯಾರು ? "ಹೆಸರು ಹೇಳಿ !") ಮುರಬದ ಶಾಸಕ !"

ನಕುಲದೇವ್ ಎದ್ದು ಧ್ವನಿವರ್ಧಕವನ್ನು ಬದಿಗೆ ಎಳೆದ. ಸೌದಾಮಿನಿ ಕೂಗಾಡಿದಳು :

"ತುಂಬಿದ ಸಭೆಯಲ್ಲಿ ವಸ್ತ್ರಾಪಹರಣವೇನ್ರಿ ? ಮಾನಭಂಗ ಮಾಡ್ತೀರೇನ್ರಿ ?....(ಧ್ವನಿ ಏರಿಸಿ) ಧ್ವನಿವರ್ಧಕವಿಲ್ಲದೆಯೇ ಮಾತಾಡ್ತೀನಿ ! ಇನ್ನು ಹತ್ತು ನಿಮಿಷ ಕೊಟ್ಟರೆ ನಿಮ್ಮ ಅಂಕೆ ಸಂಖ್ಯೆಗಳು ಅಡಿಮೇಲಾಗ್ತವೆ."

"ಸೌದಾಮಿನಿ ! ಇದು ಮೂರ್ಖತನ ! ನಿಲ್ಲಿಸಿ !"

–ನಕುಲದೇವ್ ಕಿರಿಚುತ್ತಿದ್ದಂತೆ ಎಡಬಲ ಎರಡೂ ಕಡೆಗಳಿಂದ ಜನ ಧಾವಿಸಿ ಬಂದು ವೇದಿಕೆಯನ್ನು ಸುತ್ತುವರಿದರು.

ವಿಶ್ವಂಭರ ನಿಂತು ಕೈಜೋಡಿಸಿ ಎಲ್ಲರಿಗೂ ಪ್ರಾರ್ಥಿಸಿದ :

"ದಯವಿಟ್ಟು ಕುಳಿತುಕೊಳ್ಳಿ ! ಎಲ್ಲರೂ ಕುಳಿತುಕೊಳ್ಳಿ !"

ಸದ್ದು ಕ್ರಮೇಣ ಅಡಗಿತು. ಎದ್ದು ನಿಂತಿದ್ದಲ್ಲೆ ಜನ ಜಮಖಾನ ಹಿಡಿದರು.

ಸೌದಾಮಿನಿ ವೇದಿಕೆಯಿಂದಿಳಿದು ಸಭಾಂಗಣದ ಮಧ್ಯೆ ಶಾಸಕರೊಂದಿಗೆ ಕುಳಿತಳು.

"ಲಕ್ಷ್ಮೀಪತಯ್ಯನವರನ್ನು ಕರೀರಿ. ಅವರು ಪ್ರಪೋಸ್ ಮಾಡಲಿ."

ಹೆಸರು ಹಿಡಿದು ಕರೆದೊಡನೆ ಲಕ್ಷ್ಮೀಪತಯ್ಯ ಬಂದರು. "ರಾಷ್ಟ್ರಸಭಾ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಶ್ರೀ ವಿಶ್ವಂಭರರನ್ನು ಸಂತೋಷದಿಂದ ಸೂಚಿಸ್ತೇನೆ," ಎಂದರು. ಅವರ ಪಕ್ಕದಲ್ಲಿ ಇದ್ದ ಶಾಸಕರದ್ದು, "ನಾನು ಅನುಮೋದಿಸ್ತೇನೆ," ಎಂದರು.

ನಕುಲದೇವ್ ಭರತವಾಕ್ಯ ನುಡಿದ :

"ಕಿಷ್ಕಿಂಧೆ ರಾಜ್ಯದ ರಾಷ್ಟ್ರಸಭಾ ಶಾಸಕಾಂಗ ಪಕ್ಷದ ನಾಯಕನಾಗಿ ಶ್ರೀ ವಿಶ್ವಂಭರ್‌ಜಿಯವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಅವರಿಗೆ ನನ್ನ ಮತ್ತು ತಮ್ಮ ಹಾರ್ದಿಕ ಅಭಿನಂದನೆ !"

ಕೊನೆಯ ಬಾರಿಗೆ ಚಪ್ಪಾಳೆ.

"ವಿಶ್ವಂಭರ್ ! ರಾಜ್ಯಪಾಲರಲ್ಲಿಗೆ ಹೋಗಿ ನಿಮ್ಮ ಪಟ್ಟಾಭಿಷೇಕವನ್ನೊಂದು ಮಾಡಿಸಿಬಿಟ್ಟರೆ ನನ್ನ ಕೆಲಸ ಮುಗಿಯಿತು."

"ಈಗ ಅವರ ವಿಶ್ರಾಂತಿಯ ಹೊತ್ತು."

"ಇವತ್ತು ಸ್ವಲ್ಪ ಕಾದಿರ್ತಾರೆ. ನಡೀರಿ."

ಅದೆಲ್ಲಿಂದ ಬಂದಿದ್ದುವೊ ಹಾರಗಳು ! ಯಾರು ಗೆದ್ದರೂ ಸರಿ ಅಲಂಕರಿಸ

ಲೆಂದೇ ಅವು ಅಲ್ಲಿದ್ದುವು. ಬಹಳ ದೊಡ್ಡ ಹಾರವನ್ನು ಧನಂಜಯಕುಮಾರತಂದಿದ್ದ. ಹೊರ ಕೊಠಡಿಯಲ್ಲಿ ಪರಶುರಾಮ ಕಣ್ಣೀರು ಒರೆಸಿಕೊಳ್ಳುತ್ತಿದ್ದುದನ್ನು ಕಂಡು. ಅವನ ಮುಖ ಕಪ್ಪಿಟ್ಟಿತು. "ಸೋತು ಹೋದ್ರಾ ?" ಎಂದು ಕೇಳಿದ. ಆಗ ಯಾರೋ ಓಡಿ ಬಂದು ಸಾಹುಕಾರನ ಕೈಯಿಂದ ಹಾರವನ್ನೆಳೆದುಕೊಂಡು ಸೌದಾಮಿನಿಯ ಬಳಿಗೆ ಓಡಿ ಆಕೆಗೆ ಅದನ್ನು ಹಾಕಿದರು. ಬೇರೆಯೂ ಕೆಲ ಹಾರಗಳು ಆಕೆಯ ಎದೆಯನ್ನು ಮುಚ್ಚಿದುವು.

ಪರಶುರಾಮ ಬಂದು ಮಾತಾಜಿಗೆ ನುಡಿದ :

"ನಕುಲದೇವ್ ಹೇಳಿದ್ರು. ರಾಜಭವನಕ್ಕೆ ನೀವು ಬರಬೇಕಂತೆ. ಇನ್ನು ಅರ್ಧ ಗಂಟೆಯಲ್ಲಿ ಹೊಸ ಮುಖ್ಯಮಂತ್ರಿಗೆ ರಹಸ್ಯಾ ಪ್ರತಿಜ್ಞಾ ಬೋಧನೆಯಂತೆ."

ಅವಳೆಂದಳು :

"ಧನಂಜಯರ ಕಾರು ಬಂದಿದೆಯಾ ? ಎಕ್ಸ್‌ಪ್ರೆಸ್ ಏಜನ್ಸೀದು ? ನಾನು ಇನ್ನು ಸರಕಾರೀ ಕಾರು ಬಳಸೋದಿಲ್ಲ. ನಿವಾಸಕ್ಕೆ ಹೋಗೋಣ."

ಸೌದಾಮಿನಿಯನ್ನು ಹಿಂಬಾಲಿಸಿ ಬಹಳ ಜನ ಬಂದರು. ಇನ್ನೆಷ್ಟೋ ಜನ ರಾಜಭವನಕ್ಕೆ ನಡೆದರು.

....ಸೌದಾಮಿನಿ ಅಷ್ಟರ ತನಕ ಹಾಗೆಯೇ ಇದ್ದ ಹಾರವನ್ನು ತೆಗೆದು ಸೋಫಾದ ಮೇಲೆ ಎಸೆದಳು.

"ಪರಶುರಾಮ, ಮನೆಯಲ್ಲಿ ಯಾರಿಗಾದರೂ ಹೇಳಿ ಕಾಫಿ ಮಾಡಿಸಿ ಫ್ಲಾಸ್ಕಿನಲ್ಲಿ ತಾರೋ. ಇನ್ನು ನಾನು ಸರಕಾರೀ ಲೆಕ್ಕದಲ್ಲಿ ಕಾಫಿ ಕುಡಿಯೋದಿಲ್ಲ."

ಆತ ಮನೆಗೆ ಓಡಿದ.

"ಮುಗಿಯಿತೋ ನಿಮ್ಮ ಹಾರಾಟ ? ಕಾಫಿಗೇನಂತೆ ? ಮಾಡ್ಕೊಡ್ತೀವಿ.... ನೆಸ್ಕೆಫೇನೆ ಇದೆ."

....ಬಿಸಿ ಕಾಫಿ ರುಚಿಯಾಗಿತ್ತು.

"ಯಾರು ಮಾಡಿದ್ದು—ಹರಿಣಾಕ್ಷಿನೊ ? ಇನ್ನೊಬ್ಳೊ ?"

"ಇಬ್ರೂ ಸೇರಿ ಮಾಡಿದ್ರು, ಮಾತಾಜಿ."

"ಧನಂಜಯ ಅಲ್ಲಿದ್ರೆ ಅವನಿಗೆ ಹೇಳು. ಎಕ್ಸ್‌ಪ್ರೆಸ್ ಟ್ರಾವೆಲ್ ಏಜನ್ಸಿಗೆ ಹಣ ನಾನ್ಕೊಡ್ತೀನಿ. ನಾಳೆ ನಸುಕಿನಲ್ಲಿ ಕಾವೇರಿಗೆ ಹೋಗಿ ಸ್ನಾನ ಮಾಡಿ ಹೊಸ ಜೀವನ ಆರಂಭಿಸ್ಬೇಕು. ಬೇರೆ ಮನೆ ಹುಡುಕ್ಬೇಕು. ನಮ್ಮ ಅನಾಥಾಶ್ರಮದಲ್ಲಿ ಅತಿಥಿಗೃಹದಲ್ಲಿ ನಾನು ಹತ್ತು ದಿವಸ ಇರಬಹುದೇನೊ ಕೇಳು. ಉತ್ಕಲಮಠಕ್ಕೆ ಹೋಗಿ ಬರೋ ವಿಚಾರ ಒಂದಿದೆ. ಶಾಸಕಾಂಗ ಪಕ್ಷದ ವಿಶೇಷ ಸಭೆ ಏನಾದರೂ ಈ ಮಧ್ಯೆ ಕರೆದರೆ ವಾಪಸು ಬಂದ್ಬಿಡ್ತೀನಿ."

ಕಾಫಿ ಕುಡಿದು, ಇತರರು ತನ್ನನ್ನು ಹಿಂಬಾಲಿಸುವುದಕ್ಕೆ ಮೊದಲೇ ಸೌದಾಮಿನಿ

ಧರ್ಮಮಠಕ್ಕೆ ಹೋದಳು. ಡ್ರೈವರನಿಗೆ "ಕಾರಲ್ಲೇ ಇರು" ಎಂದು ಹೇಳಿ ಪರಶುರಾಮನನ್ನು ಜಗಲಿಯಲ್ಲಿ ನಿಲ್ಲಿಸಿ ಒಳ ಸಾಗಿದಳು.

ಸ್ವಾಮೀಜಿ ಒಂದು ತಾಳೆಗರಿ ವಾಚನದಲ್ಲಿ ಮಗ್ನರಾಗಿದ್ದರು. ಅವರಿಗಿನ್ನೂ ಮುಖ್ಯಮಂತ್ರಿಯ ಪದಚ್ಯುತಿಯ ಸುದ್ದಿ ಮುಟ್ಟಿರಲಿಲ್ಲ. ಅವರು ನಿರ್ಲಿಪ್ತ ಮುಖ ಮುದ್ರೆಯಿಂದ ಸೌದಾಮಿನಿಯನ್ನು ನೋಡಿದರು.

"ನಿಮ್ಮ ಮನಸ್ಸು ಶಾಂತವಾಗಿರಲಿ. ದಂತೇಶ್ವರಿ ಅದೇನೊ ಪರೀಕ್ಷೆ ನಡೆಸುತ್ತಿದ್ದಾಳೆ. ಎಲ್ಲ ಸರಿ ಹೋಗ್ತದೆ," ಎಂದರು.

"ಒಮ್ಮೆ ತಿಜೋರಿಗಳ ಕೊಠಡಿಗೆ ಹೋಗಣವೊ ?"

"ಬನ್ನಿ."

ತಿಜೋರಿ ತೆರೆದು, "ಎಣಿಸಿಲ್ಲ," ಎಂದರು.

"ದೊಡ್ಡದಲ್ಲ. ಒಂದು ದಿನ ಎಣಿಸಿ ಬಾಬಾಜಿಗೆ ತಲಪಿಸಬಿಡಿ. ಅದು ಧರ್ಮೇಂದ್ರ ಮಠಕ್ಕೆ ನನ್ನ ಕಾಣಿಕೆ."

"ಆಗಲಿ."

ಬೀಗ ಹಾಕಿ, ಮತ್ತೆ ಬಂದು ಕುಳಿತರು.

ಸೌದಾಮಿನಿ ಅಂದಳು :

"ನಾಲ್ಕು ದಿನ ಹಾಯಾಗಿರಬೇಕು, ಪ್ರಕೃತಿಯ ಮಡಿಲಲ್ಲಿ ಅವಿತಿರಬೇಕು ಅಂತ ಆಸೆ. ಏಕಾಗ್ರಚಿತ್ತದಿಂದ ಸ್ವಲ್ಪ ಧ್ಯಾನ ಮಾಡಬೇಕು."

"ಬ್ರಹ್ಮಗಿರಿಯ ತಪ್ಪಲಲ್ಲಿ ನಮ್ಮದೊಂದು ಧರ್ಮಮಠ ಇದೆ. ಸ್ವಾಮೀಜಿಗೆ ಓಲೆ ಕೊಡ್ತೇನೆ. ಅಲ್ಲಿ ಇದ್ದು ಬನ್ನಿ."

"ನಾಳೆ ಬೆಳಗ್ಗೆ ಕಾವೇರಿ ಸ್ನಾನ ಮಾಡಿ ಹಾಗೇ ಮುಂದುವರೀತೇನೆ. ಈಗ ಬರಲಾ ? ಆಶೀರ್ವದಿಸಿ."

ಅವಳು ಸ್ವಾಮೀಜಿಯ ಪಾದಗಳಿಗೆ ನಮಸ್ಕರಿಸಿದಳು.

"ದಂತೇಶ್ವರಿಯ ರಕ್ಷೆ ನಿಮಗಿರಲಿ."

* * *

ಮುಖಕ್ಕೆ ನೀರು ಹನಿಸಿದಳು. ಮೈಯುರಿ ಕಡಮೆಯಾಗಲಿಲ್ಲ.

ತಲೆಯನ್ನು ದಿಂಬು ಕರೆಯಿತು.

ಧ್ವನಿವಾಹಕವನ್ನೆ ಕಿತ್ತನಲ್ಲ ಆ ಶುಚ್ಛ ಮನುಷ್ಯ? ಸೌದಾಮಿನಿಯನ್ನು ಹಾಸಿಗೆ ಮಾಡಿದಾಗ ಚೆನ್ನಾಗಿತ್ತೇನೊ ? ...ತಾನು ಕಿಷ್ಕಿಂಧೆಗೆ ಮರಳದೇ ಇದ್ದಿದ್ದರೆ ಜಾಣಪ್ಪನ ಬಳಿಕ ವಿಶ್ವಂಭರನೇ ಮುಖ್ಯಮಂತ್ರಿಯಾಗುತ್ತಿದ್ದನೇನೊ ? ಯಾರಿಗೆ ಗೊತ್ತು ? ಅಂತೂ ಎಲ್ಲರ ಲೆಕ್ಕಾಚಾರಗಳನ್ನೂ ನಾನು ತಲೆಕೆಳಗು ಮಾಡಿದೆ.

....ಬೆಳಗಿನಿಂದ ನಡೆದುದೆಲ್ಲ ಒಂದೊಂದಾಗಿ ಕಣ್ಣಿಗೆ ಕಟ್ಟಿತು. ಶಾಸಕಾಂಗ ಸಭೆಯಲ್ಲಿ ತನ್ನ ವರ್ತನೆ ಅದ್ಭುತವಾಗಿತ್ತು. ಯಾವ ಅಭಿನೇತ್ರಿಗೆ ಕಡಮೆ ತನ್ನ ನಟನೆ ? ಯಾವ ವಕೀಲ ತನಗೆ ಸಾಟಿ ?.... ಗಂಟೆಗಳು ಕಳೆದಿವೆ. ಆದರೂ ನಾಯಕನ ಆಯ್ಕೆ ಯನ್ನು ಸ್ಮರಿಸಿದಂತೆಲ್ಲ ಈಗಲೂ ಗುಂಡಿಗೆ ಬಡಿತ ತೀವ್ರಗೊಳ್ಳುತ್ತಿದೆಯಲ್ಲ ?

ರಾಜ್ಯಪಾಲರಲ್ಲಿ ಸಂತೋಷ ಕೂಟ ಮುಗಿದಿರಬಹುದು. ಸಂಪುಟದ ರಚನೆ ಬಗ್ಗೆ ಆಪ್ತಾಲೋಚನೆ ಎಲ್ಲಿ ? ಇದನ್ನು ವಿಶ್ವಂಭರ ತನ್ನ ಮನೆಯಲ್ಲೇ ನಡೆಸುತ್ತಿರ ಬಹುದು. ಅದು ಹೆಚ್ಚುಗಾರಿಕೆಯಲ್ಲವೆ ? ಅಥವಾ, ರಾಷ್ಟ್ರ ಸಭಾ ಸಮಿತಿಯ ಕಾರ್ಯಾಲಯದಲ್ಲಿ ? ಚುನಾವಣೆಯ ಅನಂತರ ಈವರೆಗಿನ ಧೂಳಿನ ರಾಶಿಯನ್ನೆಲ್ಲ ಗುಡಿಸುವವರು ಯಾರು ?

ಮಾಜಿ ಮುಖ್ಯಮಂತ್ರಿ—ಮಾತಾಜಿ ಮುಖ್ಯಮಂತ್ರಿ—ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ಈಗ ಪುಕಾರು ಹಬ್ಬಿಸಿದರೆ ಯಾರೆಲ್ಲ ಬರಬಹುದೊ ತನ್ನನ್ನು ನೋಡಲು ? ರಾಜ್ಯಪಾಲ ? ವಿಶ್ವಂಭರ ? ಹಿಂದಿನ ತನ್ನ ಸಹೋದ್ಯೋಗಿಗಳು ? ನಕುಲದೇವ್ ? ಅವನು ಈ ಸಂಜೆ ಹೊರಡಲಾರ. ನಾಳೆ ಬೆಳಗ್ಗೆ ಸಂಪುಟದ ಸದಸ್ಯರಿಗೆ ರಹಸ್ಯ ಪ್ರತಿಜ್ಞಾ ಬೋಧನೆಯನ್ನೂ ಮಾಡಿಸಿ, ಉಳಿದ ಏರ್ಪಾಟಿನ (ಕ್ವೋಟಾ ಇತ್ಯಾದಿ) ಬಗ್ಗೆ ಚರ್ಚಿಸಿ ಹೊರಟಾನು...

ಯೋಚನೆಗಳ ಗುಂಯಾರವದಿಂದ ಕಿವಿ ಕಿವುಡಾದೀತೆಂದು ಸೌದಾಮಿನಿ ಎದ್ದಳು. ತಲೆಗೂದಲು ಸರಿಪಡಿಸಿಕೊಂಡು ಮೇಜಿನ ಬಳಿ ಕುಳಿತಳು.

'ಟಕ್ ಟಕ್ ಟಕ್'

ಮೆಲ್ಲನೆ ತಟ್ಟಿದವನು ಪರಶುರಾಮ.

"ಒಳಗ್ಬನ್ನಿ."

"ನಾನು, ಮಾತಾಜಿ. ಗುಪ್ತಚಾರದಳದ ಮುಖ್ಯಸ್ಥ ಬಂದಿದ್ದಾರೆ. ಕರೀಲಾ?"

"ಪಾಪ ! ಅವರಿನ್ನೂ ಬಂಧನದಲ್ಲೇ ಇದ್ದಾರಾ ? ಬರಲಿ."

ಮುಖ್ಯಸ್ಥ ಒಳಬಂದು ಕೈ ಜೋಡಿಸಿದ.

"ಶಾಸಕರ ಸಭೆಯ ಅನಂತರ ನಾನೇನು ಮಾಡಿದೆ ಅನ್ನೋ ವಿವರದಿಂದ ನಿಮ್ಮ ಟಿಪ್ಪಣಿ ಪುಸ್ತಕದ ಒಂದೆರಡು ಪುಟ ತುಂಬಿರಬಹುದು."

"ತಾವು ತಪ್ಪು ತಿಳೀಬಾರದು. ಬರೇ ಕರ್ತವ್ಯ ಪಾಲನೆ."

"ನಿಮ್ಮ ಹೊಸ ಪುಟಗಳಲ್ಲಿ ಏನಿದೇಂತ ಹೇಳ್ಲಾ ? ಅನಾಥಾಶ್ರಮದ ವಸತಿ ಗೃಹದಲ್ಲಿ ಸ್ವಲ್ಪ ದಿನ ಇರೋ ಯೋಚನೆ ಮಾಡಿದ್ದು. ಉತ್ಕಲ ಪ್ರವಾಸದ ವಿಚಾರ. ಕಾವೇರಿ ಸ್ನಾನ. ಬ್ರಹ್ಮಗಿರಿ ಆಶ್ರಮದಲ್ಲಿ ಕೆಲ ದಿನಗಳ ಏಕಾಂತವಾಸ. ಮನೆ ಹುಡುಕಾಟ. ಮಾಹಿತಿ ಸಂಗ್ರಹಿಸಿದ್ದು ನಾನಾ ಜನರಿಂದ."

"ತಲೆಬಾಗಿದೆ."

"ಇನ್ನು ಎತ್ತಿ."

"ಸಂಪುಟರಚನೆ ಜಟಿಲವಾಗ್ತಿದೆಯಂತೆ."

"ನಂಬಬೇಡಿ. ವಿಶ್ವಂಭರ ಹಿಕ್ಮತ್‌ವಾಲಾ ಹಿಮ್ಮತ್‌ವಾಲಾ ಎರಡೂ. ರಾಜ್ಯ ಚೆನ್ನಾಗಿ ಆಳ್ತಾನೆ."

ಪರಶುರಾಮ ಒಳಕ್ಕೆ ತಲೆಹಾಕಿ "ಪತ್ರಿಕೆಯವರು ಕಾದಿದ್ದಾರೆ" ಎಂದ.

"ಇನ್ನು ನನ್ನ ಹತ್ತಿರ ಏನಿದೆಯಪ್ಪ? ರಾಜಕೀಯದಲ್ಲಿ ಇರೋವರೆಗೂ ಪತ್ರಿಕೆಯವರ ನಂಟು ತಪ್ಪಿದ್ದಲ್ಲ. ನಾಳೆ ಹೊಸ ಸಂಪುಟದ ಅಧಿಕಾರ ಗ್ರಹಣ ಆದ್ಮೇಲೆ—ಬೇಡ, ೧೦ ಗಂಟೆಗೆ—ಇಲ್ಲಿಗೆ ಬರ್‍ಲಿ. ನಿವಾಸ ಬಿಡೋ ಗಲಾಟೇಲಿ ಇರ್‍ತೀನಿ. ಆದರೂ ಪರವಾಗಿಲ್ಲ ಮಾತನಾಡೋಣ. ರಾಜಭವನದಲ್ಲಿ ಉಪಾಹಾರ ಮುಗಿಸ್ಕೊಂಡೇ ಬರ್‍ಲಿ. ಇಲ್ಲಿ ಅಂಥದು ಏನೂ ಇರೋದಿಲ್ಲ. ಹಾಗೇಂತ ಹೇಳ್ಬಿಡಪ್ಪ."

ಗುಪ್ತಚಾರ ದಳದ ಮುಖ್ಯಸ್ಥ ಕೇಳಿದ :

"ನಾಳೆ ಹೊರಗಿರೋ ಕಾರಿನಲ್ಲೇ ಹೋಗ್ತೀರಾ ?"

"ಹೌದು. ಬಾಡಿಗೆಗೆ ತಗೊಂಡಿದೀನಿ. ಅಷ್ಟು ಹಣ ನನ್ನಲ್ಲಿದೆ. ಸಂಬಳ ತಗೊಳ್ತಿದ್ದೆ ನೋಡಿ."

"ಮಾತಾಜಿ, ಇನ್ನೂ ಬೇಸರದಲ್ಲಿದೀರಿ."

"ಇದು ಬೇಗನೆ ಮುಗಿಯೋ ಬೇಸರವಲ್ಲವಪ್ಪ."

ಪರಶುರಾಮ ಮತ್ತೊಮ್ಮೆ ತಲೆ ಒಳಹಾಕಿ, "ಚೀಫ್ ಸೆಕ್ರೆಟರಿ ಬಂದ್ರು" ಎಂದ.

ಗುಪ್ತಚಾರದಳದ ಮುಖ್ಯಸ್ಥ "ನಾನು ಬರ್‍ತೇನೆ" ಎಂದು ಹೇಳಿ ಹೊರಟು ಹೋದ.

"ಬನ್ನಿ ಚೌಗುಲೆ ಸಾಹಿಬ್. ನಕುಲದೇವ್ ಸಿಕ್ಕಿದ್ರಾ ?"

"ಸಿಕ್ಕಿದ್ರು. ಹೀಗೆಲ್ಲ ಆಯ್ತೂಂತ ನನಗೆ ಬೇಸರವಾಗ್ತಿದೆ, ಮಾತಾಜಿ."

"ನನ್ನ ಅಧಿಕಾರಾವಧಿಯಲ್ಲಿ ಸಹಕಾರ ನೀಡಿದಿರಿ. ನಮ್ಮೊಳಗೆ ಸದ್ಭಾವನೆ ಸದಾ ಕಾಲ ಇರಲಿ."

"ಬರಲಾ ? ನಮಸ್ಕಾರ."

"ಖಾತೆ ಹಂಚಿಕೆ ಸಮಾಲೋಚನೆಗಾಗಿ ನಿಮ್ಮ ದಾರಿ ಕಾಯ್ತಿದಾರೇನೋ ? ಯಾರು ಯಾರು ಮಂತ್ರಿಗಳು ಅಂತ ಗೊತ್ತಾಯ್ತೆ ?"

"ಮೊದಲನೆ ಪ್ರಶ್ನೆಗೆ ಉತ್ತರ–ಹೌದು. ಎರಡನೆಯದಕ್ಕೆ–ಇಲ್ಲ."

"ಹೋಗಿ ಬನ್ನಿ. ಸದಾ ನಿಮ್ಮ ಶುಭ ಚಿಂತನೆ ಮಾಡ್ತೇನೆ."

ಅಂಗರಕ್ಷಕರು ಬಂದರು.

ರಾಮ್‌ಧನ್ ಹೇಳಿದ್ದನ್ನೇ ಬೋಲಾನಾಥ್ ಹೇಳಿದ :

"ಇಲ್ಲಿಯ ಕೆಲಸ ಆಯ್ತು. ದಿಲ್ಲಿಗೆ ಬನ್ನಿ ಅಂತ" ನಕುಲದೇವ್‌ಸಾಬ್ ಹೇಳಿದರು."

"ನಾಳೆಯೇ ಹೊರಡ್ತೀರಾ ?"

"ಹೌದು, ರೈಲಿನಲ್ಲಿ." (ವಿಮಾನದಲ್ಲಿ ಅಂದ್ಕೊಂಡ್ರೇನೊ ಈ ಗೂಳಿಗಳು ?)

ಸೌದಾಮಿನಿ ಗೋದ್ರೆಜ್ ಕಪಾಟಿನ ಬಾಗಿಲು ತೆರೆದು, ಐನೂರು ಐನೂರು ರೂಪಾಯಿ ತೆಗೆದು ಅಂಗರಕ್ಷಕರಿಗೆ ಕೊಟ್ಟಳು.

"ಭಕ್ಷೀಸ್. ಇವತ್ತಿನವರೆಗಿನ ಈ ತಿಂಗಳ ಸಂಬಳ ಆಫೀಸಿನಿಂದ ತಗೊಳ್ಳಿ."

ಬೋಲಾನಾಥ್ "ದಿಲ್ಲಿಯಲ್ಲಿ ನಮಗೆ ಕೆಲಸ ?" ಎಂದು ಕೇಳಿದ.

"ನಕುಲದೇವ್ ಆ ಏರ್ಪಾಡು ಮಾಡ್ತಾರೆ."

ಅವರು ಹೋದೊಡನೆ ಪರಶುರಾಮನಿಗೆ ಸೌದಾಮಿನಿ ಅಂದಳು :

"ಅಲ್ಲಿ ಒಂದು ಪ್ಯಾಕೆಟಿದೆ, ತೆಗೆ."

ಪ್ಯಾಕೆಟಿನ ಮೇಲೆ ಐದು ಸಾವಿರ ಎಂದು ಬರೆದಿತ್ತು.

"ಇನ್ನೊಂದು ಪ್ಯಾಕೆಟ್ ಇದೆಯಾ ನೋಡು."

"ಇದೆ."

"ತೆಗೆ ಮತ್ತೆ. ಮನೆಗೆ ತಗೊಂಡು ಹೋಗಿ ಕೊಡು. ಒಬ್ಬೊಬ್ಬರಿಗೆ ಒಂದೊಂದು. ಈಗಲೇ ಹೋಗು."

ಕತ್ತಲಾದ ಬಳಿಕ ಮೇಲಲ್ಲವೇನೊ ಎಂಬಂತೆ ಪರಶುರಾಮ ಅನುಮಾನಿಸಿದ.

"ಹೆದರಬೇಡ್ವೋ. ನಾನು ಕಷ್ಟ ಪಟ್ಟು ಸಂಪಾದಿಸಿದ್ದು. ಯಜಮಾನಿಯರಿಗೆ ಕೊಟ್ಟು ಬೇಗ್ಬಾ."

ಪರಶುರಾಮ ಅಷ್ಟು ಮಾಡಿ ಬಂದ. ಗೋದ್ರೆಜ್ ಬಾಗಿಲನ್ನು ಮರೆ ಮಾಡಿತ್ತು.

"ತೆರೆ, ಬೀಗ ಹಾಕಿಲ್ಲ. ಅಲ್ಲಿ ಚಿಲ್ಲರೆ–ಅಂದರೆ ಹತ್ತರ ನೋಟುಗಳು–ಇರಬೇಕು."

"ಸಿಗ್ತು."

"ಆ ಗೇಟ್ ಪೊಲೀಸರಿಗೆ ನೂರು ನೂರು ರೂಪಾಯಿ ಮಾತಾಜಿಯ ಇನಾಂ ಅಂತ ಹೇಳಿ ಕೊಡು. ಇಲ್ದೆ ಹೋದ್ರೆ ನಾಳೆ ಬೆಳಗ್ಗೆ ಹೊರಡುವಾಗ ಅಡ್ಡಕಟ್ಟಿ ಲಂಚ ಕೇಳಿದರೂ ಕೇಳಿದ್ರೇ. ಅವಸರ ಇಲ್ಲ. ಗೇಟಿಗೆ ಹೋಗಿ ಕೊಡು. ಆ ಮಾಲಿಗಳು—"

"ಬಂದಿದ್ದಾರೆ."

"ಬರದೇ ಇರ್ತಾರ ? ಎಲ್ಲರಿಗೂ ಗೊತ್ತಾಗಿದೆಯಪ್ಪ. ಅವರಿಗೆ ಐವತ್ತೈವತ್ತು ರೂಪಾಯಿ ಕೊಡು. ಅಡುಗೆಯವರಿಗೆ ಕಸ ಗುಡಿಸುವ ಜವಾನರಿಗೆ ಎಲ್ಲರಿಗೂ ಅದೇ ಮೊತ್ತದ ಹಣ—ಹತ್ತರ ಐದೈದು ನೋಟು."

"ಯಾರಾದರೂ ಉಳಿದರೇನೊ ಪರಶು ?"

"ಯಾರೂ ಇಲ್ಲ, ಮಾತಾಜಿ."

"ಇನ್ನೂ ಎರಡು ಸಾವಿರ ಕಪಾಟ್ನಲ್ಲಿದೆ. ಹೋದ ತಿಂಗಳ ನನ್ನ ಸಂಬಳದಲ್ಲಿ ಉಳಿದದ್ದು. ಮಾಜಿ ಮುಖ್ಯಮಂತ್ರಿ ಕಪಾಟಿನಲ್ಲಿ ಅಷ್ಟೂ–ಇಲ್ಲದಿದ್ದರೆ ಕಿಷ್ಕಿಂಧೆಗೇ ಅವಮಾನ. ನಾಳೆಗೆ ಬೇಕಾಗುತ್ತೆ. ಅಲ್ಲಿರಲಿ."

"ಬೆಳಗ್ಗೆ ಎಷ್ಟು ಗಂಟೆಗೆ ಹೊರಡೋದು ಮಾತಾಜಿ ? ಈಗ ಮನೆಗೆ ಹೋಗಿ ಬೀಬಿಗೆ ಹೇಳಿ ಬರಬೌದಾಂತ ಆ ಡ್ರೈವರ್—ಕರೀಂ—ಕೇಳ್ತಿದ್ದಾನೆ."

"ಹೋಗಿ ಬರಲಿ. ನಾಲ್ಕೂವರೆಗೆ ಸರಿಯಾಗಿ ಇಲ್ಲಿಂದ ಪಯಣ. ಆರು ಗಂಟೆ ಚುಮು ಚುಮು ಬೆಳಗಾಗುವಾಗ ದರಿಯಾದೌಲತ್ ಸ್ನಾನ ಘಟ್ಟದಲ್ಲಿರಬೇಕು."

ವಿತರಣೆಯ ಕೆಲಸ ಮುಗಿಸಿ ಬರಲು ಪರಶುರಾಮ ತೆರಳಿದ.

ರಾತ್ರೆ ಊಟ ಬೇಡ, ಎಂದಳು ಸೌದಾಮಿನಿ.

"ಪರಶು, ಒಂದು ನಾಲ್ಕು ಯಾಲಕ್ಕಿ ಬಾಳೆಹಣ್ಣು ಸಿಕ್ಕಿದರೆ ತಂದ್ಕೊಡೊ."

ಸ್ವತಃ ಪರಶು ದೂರದಲ್ಲಿದ್ದ ಅಂಗಡಿಗೆ ನಡೆಯುತ್ತಲೂ ಓಡುತ್ತಲೂ ಹೋಗಿ ಒಂದು ಇಡೀ 'ಚೀಪು' ತಂದ.

"ಮಲಗುವ ಮನೇಲಿ ಇಟ್ಬಿಡು."

೧೫

ಹಗ್ಗ ಹರಿದ ಎತ್ತು ಹಸುಗಳಂತೆ ಜನ ಅತ್ತಿತ್ತ ಕತ್ತಲಲ್ಲಿ ಓಡಾಡುತ್ತಿದ್ದಾರೆ. ಮುಖ್ಯಮಂತ್ರಿ ಮಲಗಿದ್ದಾರೆ, ಸದ್ದು ಮಾಡಬಾರದು ಎನ್ನುವ ಯೋಚನೆ ಈ ರಾತ್ರಿ ಯಾರಿಗೂ ಇಲ್ಲ. ಯಾರೋ ಒಬ್ಬಿಬ್ಬರು ಆಗೊಮ್ಮೆ ಈಗೊಮ್ಮೆ ಶಯ್ಯಾ ಗೃಹಕ್ಕೆ ಹತ್ತಿರವಿದ್ದಾಗ ಮಾತಿನ ಧ್ವನಿ ಕುಗ್ಗಿಸುತ್ತಾರೆ, ಮುಂದೆ, ದಾಟಿದೊಡನೆ ಸ್ವರ ಏರಿಸುತ್ತಾರೆ.

ಇದು ಜಾಗರಣದ ರಾತ್ರೆ.

ಯಾರನ್ನು ಭಜಿಸಲಿ ? ಯಾರನ್ನು ಧ್ಯಾನಿಸಲಿ ? ಹೇಗೆ ಕಳೆಯಲಿ ಹೊತ್ತು ?

ಮೀರಾ ಭಜನೆಯ ರೆಕಾರ್ಡ್ ಹಾಕಿದಳು. ಸಣ್ಣಗೆ, ಇನ್ನು ಒಂದೂವರೆ ತಾಸು ತನ್ನ ಮೌನದೊಂದಿಗೆ ಇದರ ರಾಗಬಂಧ. ನುಡಿಯೆ ಮೀರಾ ಪಿಸು ನುಡಿಯೆ....

ಟೆಲಿಫೋನಿನೊಂದಿಗೆ ಸಂಪರ್ಕ ಕಡಿದಾಗಲೇ ತನಗೆ ನಿಜವಾದ ಮುಕ್ತಿ. ಪ್ಲಗ್ ತೆಗೆದಳು.

ತನ್ನ ಪಾಡು ತನಗೆ. ಅವಳ ಹಾಡು ಅವಳಿಗೆ...

ಹಣ್ಣು ತಿನ್ನಲೆ ? ಹಸಿವಿಲ್ಲ.

ಇವತ್ತು ಉಪವಾಸದ ರಾತ್ರಿ.

ಮಲಗುವ ಮನೆ ಪೂಜಾ ಕೊಠಡಿ ನಡು ದಾರಿ ಇಷ್ಟನ್ನುಳಿದು ಇತರ ದೀಪ ಗಳನ್ನು ಸೌದಾಮಿನಿ ಆರಿಸಿದಳು.

ಮೇಜಿನ ಮೇಲೆ ಕೆಲ ಪುಸ್ತಕಗಳಿದ್ದುವು. ಅವುಗಳನ್ನು ಜೋಡಿಸಲೆಂದು ಅತ್ತ ಸಾಗಿದಾಗ ಕತ್ತಲು ಬಹುಮಟ್ಟಿಗೆ ಆವರಿಸಿದ್ದ ಪ್ರಸಾಧನ ಕೋಣೆಯಲ್ಲಿ ಯಾರೋ ಚಲಿಸಿದಂತೆ ಭಾಸವಾಯಿತು.

"ಯಾರದು ?"

ಉತ್ತರವಿಲ್ಲ. ಗುಂಡಿಗೆ ಸ್ತಬ್ಧವಾಯಿತೊಮ್ಮೆ. ಎಚ್ಚರಿಕೆಯಿಂದ ಕೋಣೆ ಯತ್ತ ಸರಿದಳು. ನಿಲುವುಗನ್ನಡಿಯಲಿ ತನ್ನ ಪ್ರತಿಬಿಂಬವನ್ನೆ ಕಂಡೆನೆ? ಹೌದು. ಕನ್ನಡಿಗೆ ಅಡ್ಡವಾಗಿ ನಿಂತಿರುವುದು, ತಾನೇ! ಸ್ವಿಚ್ ಹಾಕಿದಳು. ಕನ್ನಡಿಯಲ್ಲಿ ತನ್ನನ್ನು ನೋಡಿ ಬೆಚ್ಚಿಬಿದ್ದಳು. ನಿಲುವುಗನ್ನಡಿಯ ಎದುರಿಗಿದ್ದ ಪೀಠದಲ್ಲಿ ಕುಳಿತಳು. ಏನಾಯಿತು ತನಗೆ ? ಲೇಹ್ಯದ ಪ್ರತಾಪ—ಪ್ರಭಾವ—ಆವಿಯಾಯಿತೆ ? ತಲೆಗೂದಲೆಲ್ಲ ಅರ್ಧಕ್ಕೆ ಬಿಳಿಚಿಕೊಂಡಿದೆಯಲ್ಲ ? ಕಣ್ಣುಗಳ ಕೆಳಗೆ ಏನಿವು ಈ ಕಪ್ಪು ಸಂಚಿಗಳು?

ಚುಚ್ಚಲೆ ಅವನ್ನು ? ಕೆಡು ರಕ್ತವಿದ್ದರೆ ಹೊರಕ್ಕೆ ಹರಿದೀತು. ಪುಟ್ಟಾ, ಸೌದಾ, ಮಿನೀ.... ಛೆ! ಏನೂ ಆಗಿಲ್ಲ. ಹಗಲು ನಡೆದ ಕುರುಕ್ಷೇತ್ರದ ರಣಭೂಮಿಗೆ ಸಿಂಗರಿಸಿಕೊಳ್ಳದೆಯೇ ನಾನು ಹೋದೆ. ಲಕ್ಸ್‌ನಿಂದ ಮುಖಮಾರ್ಜನ. ಸುವಾಸನೆಯ ಕೊಬರಿ ಎಣ್ಣೆ ಕೇಶರಾಶಿಗೆ. ಹಣಿಗೆಯಿಂದ ನಿಧಾನವಾಗಿ. ಅವಸರವಿಲ್ಲ. ಯಾತರ ಅವಸರ ? ಹಣಿಗೆಯಲ್ಲಿ ಸಿಕ್ಕಿಕೊಳ್ಳುತ್ತಿರುವ ಬಿಳಿ ಕೂದಲು: ಉದುರಿವೆ ಕೆಲವು. ಬಿಳಿಯಾಗುತ್ತಿರುವುದಂತೂ ಖಂಡಿತ: ಸ್ನೋ ಪೌಡರ್, ತುಟಿಗಳಿಗೂ ಇರಲಿ ಒಂದಿಷ್ಟು ಕಾಂತಿ. ಬಿಳಿ ರೇಷ್ಮೆ ಸೀರೆ. ಒಂದೆಳೆ ಮುತ್ತಿನ ಸರ....

....ಮೀರಾಭಜನೆ ಮುಗಿಯಿತು. ಕರಕರಕರ. ಭಕ್ತಾದಿಗಳು ಚೆದರುತ್ತಿದ್ದಾರೆ.

ನಿಲ್ಲಿಸಿದಳು.

ದಂತೇಶ್ವರಿಗೆ ಆ ಹಣ್ಣುಗಳನ್ನು ಅರ್ಪಿಸಬೇಕು: ತಾನು ತಿನ್ನಲು ಅಲ್ಲ–ನೈವೇದ್ಯ.

ದೇವಿಯ ಎದುರು ಸೌದಾಮಿನಿ ಪದ್ಮಾಸನ ಹಾಕಿ ಕುಳಿತಳು.

ಅಲ್ಲಿ ಜಗದಲಪುರದಲ್ಲಿ, ಹಿರಿಯ ಯೋಗಿನಿ ಲೇಹ್ಯ ತಯಾರಿಯ ಮೇಲ್ವಿಚಾರಣೆಯಲ್ಲಿದ್ದಾಗ ಸೌದಾಮಿನಿ ಆ ಅಕ್ಕಾಜಿಯ ಜತೆ ಹೊತ್ತು ಕಳೆದಿದ್ದಳು. ಕಾನನದ ನೂರು ಪುಷ್ಪಗಳನ್ನು ನೂರು ಚಿಗುರುಗಳನ್ನು ತಂದು ಭಟ್ಟಿ ಇಳಿಸಿ ಯೌವನದ ಮಕರಂದವನ್ನು ಸೆರೆ ಹಿಡಿಯುವುದು ಎಂಥ ಅದ್ಭುತ!

ಒಂದು ದಿನ ಆವರೆಗೆ ತಾನು ನೋಡದೆ ಇದ್ದ ಒಳಕೊಠಡಿಗೆ ಪುಟ್ಟವ್ವ ಕಾಲಿಟ್ಟಳು. ಅಲ್ಲಿ ಒಬ್ಬಳು ಅರೆಯುತ್ತಿದ್ದಳು. ಮಣ್ಣಿನ ಹೂಜಿಯಿಂದ ಏನನ್ನೋ ತೊಟ್ಟುತೊಟ್ಟಾಗಿ ಬಿಡುತ್ತಿದ್ದಳು: ಬಳಿಕ ಎಲ್ಲವನ್ನೂ ಕೆರೆದು ಬೆಣ್ಣೆ ಬೆರೆಸಿ ಮಣ್ಣಿನ ಪಾತ್ರೆಯಲ್ಲಿರಿಸಿ ಕುದಿಸುತ್ತಿದ್ದಳು.

"ಅದು ಏನು ತಂಗಿ ?"

"ಶ್ ! ಬಾಬಾಜಿಗೆ ಗೊತ್ತಾದರೆ ಬಯ್ತಾರೆ."

"ಹಾಗಾದರೆ ಅವರನ್ನೇ ಕೇಳ್ತೇನೆ."

"ಒಳಗೆ ಯಾಕೆ ಬಿಟ್ಟೆ ಅಂತ ಬಯ್ತಾರೆ."

"ಅವರನ್ನು ಕೇಳೋದೂ ಇಲ್ಲ, ಅವರಿಗೆ ಹೇಳೋದೂ ಇಲ್ಲ. ನಾನು ಹೊರಗಿನವಳಲ್ಲ: ಲೇಹ್ಯ ಸೇವಿಸುತ್ತಿರುವ ಭಕ್ತೆ: ಗುಟ್ಟಿನಲ್ಲಿ ತಿಳಿಸು."

"ಹೊರಡು, ಹೊರಡಿಲ್ಲಿಂದ !"

ಬೇರೊಂದು ದಿನ ಆ ಕಿರಿಯ ಯೋಗಿನಿ "ಬಾ" ಎಂದು ಪುಟ್ಟವ್ವವನ್ನು ಕರೆದಳು, ಮಠದ ಹಿಂಭಾಗಕ್ಕೆ. "ನೋಡು, ಆ ಪೊದೆಗಳ ಬುಡದಲ್ಲಿ......" ಎಂದಳು.

"ಏನೂ ಇಲ್ಲವಲ್ಲ."

"ಸರಿಯಾಗಿ ನೋಡು. ನಿಧಾನವಾಗಿ, ಒಂದರ ಮೇಲೊಂದು ತೆವಳುತ್ತ, ಚಲಿಸುತ್ತಿರುವ ಘಟಸರ್ಪಗಳು."

ಪುಟ್ಟವ್ವ ಮತ್ತೂ ನೋಡಿದಳು. ಚಲನೆ ಗೋಚರವಾಯಿತು.

"ಅಬ್ಬ! ಅವು ಈಚೆಗೆ ಬರೋದಿಲ್ಲವ ?"

"ಇಲ್ಲ ಅವು ಆ ಗಿಡಗಳ ಸಮ್ಮೋಹನಕ್ಕೆ ಒಳಗಾಗಿವೆ. ನಾವು ಹೋಗಿ ಅವುಗಳ ಬಾಯಿ ತೆರೆದು ವಿಷ ಹಿಂಡಿ ತರ್ತೀವೆ."

"ವಿಷ ?"

"ಹೌದು. ಅಮೃತ ತಯಾರಿಸೋದಕ್ಕೆ ಅದು ಬೇಕು."

"ಅಮೃತ ?"

"ವಿಷದಿಂದ ಅಮೃತ. ವಿಷಾಮೃತ. ದಿನವೂ ಒಂದೊಂದು ತೊಟ್ಟು ನೆಕ್ಕಿದರೆ ಅಮರತ್ವ ಪ್ರಾಪ್ತವಾಗ್ತದಂತೆ."

"ಇಷ್ಟರತನಕ ಯಾರಿಗೆ ಆಗಿದೆ ?"

"ಯಾರಿಗೂ ಇಲ್ಲ. ಧರ್ಮೇಂದರ್ ಬಾಬಾ ಏನು ನಿರ್ಧಾರ ಮಾಡ್ತಾರೋ ಗೊತ್ತಿಲ್ಲ. ಮೊದಲ ಬಿಂದು ಸಾವಿಗೆ ಕಾರಣ. ಸುಂದರ ಕನಸು ಕಾಣ್ತ ನಿದ್ದೆ ಹೋದಹಾಗೆ. ಮುಂದಿನ ಸೇವನೆಯಿಂದ ಎಷ್ಟೋ ದಿನಗಳಾದ ಮೇಲೆ, ನಿಧಾನ ವಾಗಿ, ಆ ಹಾವುಗಳು ಹರಿದಾಡುವ ಹಾಗೆ, ಎಚ್ಚರ."

"ಅಮೃತವನ್ನು ಯಾವುದರಲ್ಲಿ ಇಡ್ತೀರಾ ?"

"ಹುಣಸೆಬೀಜವನ್ನು ಕೊರೆದು ಅದರಲ್ಲಿ ಒಂದೆರಡು ತೊಟ್ಟುಬಿಟ್ಟು ಮಯಣ ದಿಂದ ಮುಚ್ತೀವಿ."

"ನನಗೊಂದು ಕೊಡೇ."

"ಅಪಾಯ ! ಪ್ರಯೋಗ ಮಾಡೀಯ ಎಲ್ಲಾದರೂ !"

"ಯಾರಲ್ಲೂ ಇಲ್ಲದ್ದು ನಮ್ಮಲ್ಲಿದ್ದರೆ ಅದರಿಂದ ಶುಭವಾಗ್ತದೆ."

"ಬಾಬಾಜಿಗೆ ಹೇಳಿದರೆ ನನ್ನಾಣೆ. ಬಾ. ಆ ಕೊಠಡಿಗೆ ಹೋಗೋಣ."

ಒಂದು ಕಾಯಿ ಕೊಟ್ಟಳು. ಇಷ್ಟು ದೀರ್ಘ ಸಮಯ ನನ್ನಲ್ಲಿ ಸುರಕ್ಷಿತವಾಗಿ ಅದು ಉಳಿಯಿತಲ್ಲ ! ದಂತೇಶ್ವರಿಯ ಬೆನ್ನ ಹಿಂದೆ ಅದು ಅವಿತು ಕುಳಿತಿದೆ (ತಾನು ಬಚ್ಚಿಟ್ಟಿದ್ದೇನೆ.)

ವಿಷಾಮೃತ ಪುರಾಣ ಸ್ವಾರಸ್ಯಕರವಾಗಿತ್ತು. ಆ ಹುಡುಗಿ ಅಂದಳು : ಒಂದು ತೊಟ್ಟು ನಾಲಗೆಗೆ ಬಿದ್ದೊಡನೆ ಕಾಮನಬಿಲ್ಲಿನ ಬಣ್ಣಗಳು ಕಾಣಿಸುತ್ತವಂತೆ. ಹಲವು ವರ್ಣಗಳ ಪುಷ್ಪಗಳಿಂದ ಬರಿಯ ದೇಹವನ್ನು ಅಲಂಕರಿಸದಂತಾಗ್ತದಂತೆ, ಆಮೇಲೆ ದೇವೇಂದ್ರ ಲೋಕಕ್ಕೆ ಪಯಣ.... ಮುಂದೆ ಕ್ರಮೇಣ ಎಚ್ಚರ....

* * *

"ದಂತೇಶ್ವರಿ, ಪ್ರಯೋಗ ಮಾಡಿನೋಡುವ ಆಸೆ ಅನಾದಿ ಕಾಲದ್ದು, ನನ್ನ ಪೂರ್ವಜರದ್ದು. ಅಪ್ಪಣೆಯಾ ?" ಎಂದು ಸೌದಾಮಿನಿ ಯಾಚಿಸಿದಳು ಕೈಜೋಡಿಸಿ.

ಎಷ್ಟಾಯಿತು ಹೊತ್ತು? ಎದುರು ಕೊಠಡಿಯ ಗೋಡೆಯ ಮೇಲಿ ಗಡಿಯಾರದ ಮುಳ್ಳುಗಳು ಚಲಿಸುತ್ತಿವೆ, ಟಿಕ್ ಟಿಕ್ ಸದ್ದು ಮಾಡುತ್ತ. ಎಷ್ಟು ಹೊತ್ತಾದರೆ ಏನೀಗ ? ನಡುವಿರುಳು ದಾಟಿರಬಹುದು, ಒಂದೆರಡು ಗಂಟೆ ಆಗಿರಬಹುದು. ಡ್ರೈವರ್ ಬರುವುದು ನಾಲ್ಕೂವರೆ ಗಂಟೆಗಲ್ಲವೆ ?

ಈ ದಂತೇಶ್ವರಿಯನ್ನು ಇಲ್ಲಿಂದೆತ್ತಿ ದೇವರ ಪೆಟ್ಟಿಗೆಯಲ್ಲಿಡಬೇಕು. ಈ ದೇವಿಯ ಹಿಂಬದಿಯಲ್ಲಿದೆ ಆ ನಿಗೂಢ ಹುಣಸೇಬೀಜ.

ದೇವರನ್ನು ಪೆಟ್ಟಿಗೆಯಲ್ಲಿಟ್ಟಳು. ಪೆಟ್ಟಿಗೆ ಶಯ್ಯಾಗೃಹ ಸೇರಿತು. ಬೀಜ ಮೇಜಿನ ಮೇಲೆ ಕುಳಿತಿತು. ಧರ್ಮೇಂದರ್ ಬಾಬಾರಲ್ಲೇ ತಾನು ಉಳಿದಿದ್ದರೆ ಅಮರತ್ವದ ಪ್ರಯೋಗಕ್ಕೆ ಅವರು ತನ್ನನ್ನೇ ಆರಿಸುತ್ತಿದ್ದರೇನೊ.

ಮೂತ್ರಕೋಶ ಕಟ್ಟಿಕೊಂಡಿತ್ತು. ಒಳ ಕೊಠಡಿಗೆ ಹೋಗಿ ಬಂದ ಮೇಲೆ ಹಾಯೆನಿಸಿತು. ದೀಪ ಆರಿಸಿ, ಮೂಲೆಯ ಮಂದ ದೀಪವನ್ನು ಉರಿಸಿ, ಹುಣಸೇ ಬೀಜದ ಮಯಣ ಮುಚ್ಚಳವನ್ನು ತೆಗೆದು, ಕಿಟಕಿಯ ಬಳಿ ನಿಂತು, ಹೊರಗಿನ ಗಾಳಿ ಯನ್ನು ಎದೆಗೂಡಲ್ಲಿ ತುಂಬಿ ಬಿಟ್ಟು, ಕಾಯಿಯನ್ನು ನಾಲಗೆಯ ಮೇಲೆ ಹಿಡಿದಳು. ಏನೂ ಹೊರಬರುತ್ತಿಲ್ಲವಲ್ಲ ? ಆವಿಯಾಗಿದೆಯೇನೊ ಎಂಬ ಸಂದೇಹ ಹುಟ್ಟಿತು. ಮತ್ತೂ ಒಂದು ನಿಮಿಷ ಹಾಗೆಯೇ ಹಿಡಿದಳು. ಬಂತು ! ಶೀತಲವಾದುದೇನೊ ನಾಲಗೆಯನ್ನು ಸ್ಪರ್ಶಿಸಿತು. ಸೌದಾಮಿನಿ ಬರಿದು ತೊಗಟೆಯನ್ನು ಕಿಟಕಿಯ ಮೂಲಕ ಉದ್ಯಾನಕ್ಕೆಸೆದಳು. ಹಾಸಿಗೆಯ ಮೇಲೆ ಒರಗಿ ಇನ್ನೇನಾಗುವುದೊ ಎಂದು ಅಚ್ಚರಿಪಟ್ಟಳು.

* * *

ಮುಂಜಾವದಲ್ಲಿ ನಾಲ್ಕು ಗಂಟೆಗೆ ಪರಶುರಾಮನಿಗೆ ಎಚ್ಚರವಾಯಿತು. ಪ್ರಯಾಣಕ್ಕೆ ಸಿದ್ಧರಾಗಲು ಮಾತಾಜಿಗೆ ಅರ್ಧ ಗಂಟೆ ಬೇಕು. ಹಿಂದಿನ ಬಾಗಿಲಿ ನಿಂದ ಪರಶುರಾಮ ಒಳ ಬಂದ. ಟಕ್ ಟಕ್ ಮಾಡಿದ. ತನ್ನಲ್ಲಿದ್ದ ಬೀಗದ ಕೈಯನ್ನು ಶಯ್ಯಾಗೃಹದ ಬಾಗಿಲಿಗೆ ತುರುಕಿಸಿ ತಿರುಗಿಸಿದ. ಪುನಃ "ಮಾತಾಜಿ ! ಮಾತಾಜಿ !" ಎಂದು ಗಟ್ಟಿಯಾಗಿ ಕರೆದ. ಸ್ವಲ್ಪ ಗಾಬರಿಯಾಗಿ, ಸ್ವಿಚ್ ಹಾಕಿದ. ದೀಪ ಥಳಾಗಿ ಉರಿಯಿತು. ಗಾಢನಿದ್ರೆಯಲ್ಲಿದ್ದಳು ಸೌದಾಮಿನಿ. ಮೈಮುಟ್ಟಿ ಎಬ್ಬಿಸಬಹುದೊ ಬಾರದೊ ಎಂದು ಅನುಮಾನಿಸಿ, ತಪ್ಪಲ್ಲ ಎಂದು ತೀರ್ಮಾನಿಸಿ ಮೆಲ್ಲನೆ ತೋಳನ್ನು ಮುಟ್ಟಿದ. ಊಹೂಂ. ತಣ್ಣಗಿದೆಯಲ್ಲ ಮೈ ? ಜ್ವರ ಬಂದು ಈಗ ಬಿಟ್ಟಿದೆಯೊ ? ವಕ್ಷಸ್ಥಲದ ಏರಿಳಿತ ಇರಲಿಲ್ಲ. ಅರೇ ! ಉಸಿರಾಟ ? ತನ್ನ

ಬೆರಳಿಗೆ ಉಸಿರಿನ ಸ್ಪರ್ಶವಾಗುತ್ತಿಲ್ಲವಲ್ಲ.... ಅಯ್ಯಯ್ಯೋ! ಪರಶುರಾಮ ಸೋಫಾದ ಮೇಲೆ ಕುಸಿಕುಳಿತ. ತಾನು ಮಾಡಬೇಕಾದುದೇನೆಂದು ಯೋಚಿಸಿದ. ಫೋನ್ ಕಾಣಿಸಿತು. ಪ್ಲಗ್ ಹಾಕಿದ. ಮೊದಲು ತಿಳಿಸಬೇಕಾದ್ದು ಮುಖ್ಯಮಂತ್ರಿಗೆ— ನೂತನ ಮುಖ್ಯಮಂತ್ರಿಗೆ. V I S H ಸಿಕ್ಕಿತು. ತಡವಾಗಿ ಯಾರೋ ಎತ್ತಿದರು. ಹೆಣ್ಣು ಧ್ವನಿ,

"ಹಲ್ಲೋ ಹಲ್ಲೋ ಯಾರು ಮಾತಾಡ್ತಿರೋದು ?"

"ನೀವು ಯಾರು ?"

"ಚೀಫ್ ಮಿನಿಸ್ಟರ ಮನೆಯಿಂದ."

"ತಲೆ ಸರಿ ಇದೆಯ ? ಇದೇ ಚೀಫ್ ಮಿನಿಸ್ಟರ ಮನೆ."

"ಹೌದು. ಇದು ಮಾಜಿ ಚೀಫ್ ಮಿನಿಸ್ಟರ ಮನೆ. ಅವರ ಮೈ ತಣ್ಣಗಾಗಿದೆ. ಮಲಗಿದವರು ಏಳ್ತಾ ಇಲ್ಲ."

"ಅದಕ್ಕೆ ನಾವೇನ್ಮಾಡೋಣ ?"

"ನಾನು ಸಾಹೇಬರಿಗೆ ತಿಳಿಸ್ಬೇಕು. ಎಲ್ಲರಿಗೂ ಅಪಾಯ! ದಮ್ಮಯ್ಯ ಎಬ್ಬಿಸಿ!"

ವಿಶ್ವಂಭರ ಎದ್ದ.

"ಏನ್ರೀ ಪರಶುರಾಮ್ ?"

"ಬೆಳಗ್ಗೆ ಪ್ರವಾಸ ಹೊರಡ್ಬೇಕು, ನಸುಕಿನಲ್ಲಿ ಎಬ್ಬಿಸು ಅಂದಿದ್ರು. ಈಗ ಅವರು ಏಳ್ತಾ ಇಲ್ಲ. ಮೈ ತಣ್ಣಗಿದೆ."

"ಏನ್ರಿ ಹಾಗಂದ್ರೆ ?"

"ಏನೋ ಆಗಿದೆ ಸಾರ್,"

"ಬರ್ತೀನಿ. ಐಜಿಪಿಗೆ ಫೋನ್ ಮಾಡಿ ತಕ್ಷಣ ಬಾ ಅನ್ನಿ. ಡಾಕ್ಟರನ್ನೂ ಅವರೇ ಕರಕೊಂಡ್ಬರ್ಲಿ."

"ಹೇಳ್ತೀನಿ."

ನಿವಾಸದ ಆವರಣದಲ್ಲಿದ್ದ ದೀಪಗಳೆಲ್ಲ ಉರಿದುವು. ಜನ ಕಣ್ಣುಜ್ಜಿಕೊಂಡು ಎದ್ದರು. ಎಲ್ಲರಿಗೂ ದಿಗ್ಭ್ರಮೆ.

ವಿಶ್ವಂಭರ, ಐಜಿಪಿ, ಡಾಕ್ಟರು, ಗುಪ್ತಚಾರದ ದಳದ ಮುಖ್ಯಸ್ಥ ಬಂದರು.

ಪ್ರಶಾಂತ ಮುಖ, ಮುಗಳ್ನಗೆ—ಇನ್ನೊಂದು ಕ್ಷಣದಲ್ಲಿ ಎದ್ದೇ ಬಿಡುವ ಳೇನೋ ಎನ್ನುವಂತಿತ್ತು. ಡಾಕ್ಟರು ವಿವರವಾಗಿ ಪರೀಕ್ಷಿಸಿದರು. ನಾಲಗೆಯಲ್ಲಿ ಯಾವ ಗುರುತೂ ಇರಲಿಲ್ಲ.

"ತೀವ್ರ ಹೃದಯಾಘಾತ. ನಿದ್ದೆಯಲ್ಲೇ ಹೊರಟುಹೋಗಿದ್ದಾರೆ. ಯಾವ ಬಗೆಯ ನರಳಾಟವೂ ಇಲ್ಲದ ಸುಖ ಮರಣ" ಎಂದರು ಅವರು.

"ಅಸ್ವಾಭಾವಿಕ ಸಾವು ಅಲ್ಲವಲ್ಲ ?" ಎಂದು ವಿಶ್ವಂಭರ ಕೇಳಿದ.

"ಅತ್ಯಂತ ಸ್ವಾಭಾವಿಕ ಸಾವು, ಸಂದೇಹವೇ ಇಲ್ಲ–"

"ನಿಜ, ನಿನ್ನೆ ಶಾಸಕಾಂಗ ಸಭೆಯಲ್ಲೇ ಅವರಿಗೆ ಇಂಥ ಅಟ್ಯಾಕ್ ಆಗೋದು ಸಾಧ್ಯವಿತ್ತು. ಅಷ್ಟು ಉದ್ವಿಗ್ನರಾಗಿದ್ದರು."

ಡ್ರೈವರ್ ಕರೀಂ ಬಂದ–ದರಿಯಾ ದೌಲತ್‌ಗೆ ಧಾವಿಸಲು ಸಿದ್ಧನಾಗಿದ್ದವನು:

"ಎಲ್ಲ ದೇವರ ಆಟ. ಏನುಂಟು ನಮ್ಮ ಕೈಲಿ ?" ಎಂದ, ವ್ಯಥೆಯಿಂದ.

ಗುಪ್ತಚಾರ ದಳದ ಮುಖಸ್ಥ ಪರಶುರಾಮನನ್ನು ಬದಿಗೆ ಕರೆದು, "ಬೀಗ ನೀವು ತೆಗೆದಿರಾ ?" ಎಂದು ಕೇಳಿದ.

"ನಸುಕಿನಲ್ಲಿ ಹೊರಡಬೇಕಾದವರು, ತಟ್ಟಿದರೂ ಏಳೋದಿಲ್ಲವಲ್ಲ ಅಂತ, ಡ್ಯೂಪ್ಲಿಕೇಟ್ ಕೀ ತಂದೆ. ಸಣ್ಣಗೆ ತಟ್ಟಿದರೂ ಸಾಕು ಯಾವಾಗಲೂ ಏಳುವ ಅಭ್ಯಾಸ ಅವರದು." (ಬಾಗಿಲು ಮುಚ್ಚದೆಯೇ ಒಮ್ಮೊಮ್ಮೆ ಮಲಗುವುದೂ ಇತ್ತು. ಇವರಿಗೆ ಯಾಕೆ ಹೇಳಬೇಕು ಅದನ್ನು ? ಉತ್ತರ ಕೊಡುವಾಗ ಹುಷಾರಾಗಿರಬೇಕಪ್ಪ.)

ಬೆಳಕು ಹರಿಯಿತು. ಮುಖ್ಯ ಕಾರ್ಯದರ್ಶಿಗೆ, ಲಕ್ಷ್ಮೀಪತಯ್ಯನಿಗೆ, ರಂಗಧಾಮನಿಗೆ ಪ್ರತಿ ಪಕ್ಷದ ನಾಯಕರಿಗೆ, ಅನಾಥ ಆಶ್ರಮದವರಿಗೆ, ಕೃಷ್ಣಪ್ರಸಾದ್‌ರಿಗೆ ಕರೆ ಹೋಯಿತು. ಕರೀಂ ಪರಶುರಾಮರಿಗೆ ವಿನಂತಿಮಾಡಿ ತನ್ನ ಒಡೆಯರಿಗೂ ಧನಂಜಯಕುಮಾರನಿಗೂ ಫೋನ್ ಸುದ್ದಿ ಮುಟ್ಟಿಸಿದ. ವಾರ್ತಾ ಇಲಾಖೆಯ ನಿರ್ದೇಶಕರಿಗೆ ಪರಶುರಾಮ ವಿಷಯ ತಿಳಿಸಿದ. ಬೆಳಗಿನ ಪತ್ರಿಕೆಯಲ್ಲಿ ಬರುವಂತಿಲ್ಲ; ಆದರೆ ಆಕಾಶವಾಣಿಯ ಪ್ರದೇಶ ಸಮಾಚಾರದಲ್ಲಿ ಬಿತ್ತರವಾಗಲೇಬೇಕು ; ಅಂತ್ಯ ವಿಧಿಯ ಸಮಯವನ್ನು ಯಾರು ಗೊತ್ತುಮಾಡುತ್ತಾರೆ ? ಸಂಪುಟದ ಅಧಿಕಾರ ಗ್ರಹಣಕ್ಕೆ ಸೌದಾಮಿನಿ ಅಡ್ಡಿಯಾದಳಲ್ಲ ? ಸಮಾರಂಭ ಏನಿದ್ದರೂ ಸಂಜೆಗೇ. ನಿರ್ದೇಶಕ ಹೊರಟುಬಂದ.

ರಾಜ್ಯಪಾಲರಿಗೆ ತಿಳಿಸಲು ಹೋದ ವಿಶ್ವಂಭರ ಅಲ್ಲಿಂದಲೆ ನಕುಲದೇವರಿಗೆ ಫೋನ್ ಮಾಡಿದ. ಅವರು ಧಾವಿಸಿ ಬಂದರು. ಮೂವರೂ ಮಾತನಾಡುತ್ತ ಗೃಹಕಾರ್ಯಾಲಯ ತಲಪಿದರು.

ಯಾವ ಮುಖ ವಿಕಾರವೂ ಇಲ್ಲ, ಒಂದಿಷ್ಟೂ ದುರ್ನಾತವಿಲ್ಲ. ಧನಂಜಯ ಕುಮಾರ ಮಾರ್ಕೆಟಿಗೆ ಹೋಗಿ ನಾಲ್ಕು ಬುಟ್ಟಿ ತುಂಬ ಹೂ ತಂದ. ಊದುಕಡ್ಡಿಯ ಕಟ್ಟು ಕಟ್ಟುಗಳನ್ನೇ ಹಚ್ಚಿದರು. ಇಂಥದೇನೂ ಇಲ್ಲದೆ, ಅದು ಸಾವಿನ ಕೊಠಡಿ ಎನಿಸಿಕೊಳ್ಳುವುದಾದರೂ ಹೇಗೆ ?

ನಕುಲದೇವ್ ಮುಖದ ಮೇಲೆ ವಿಷಾದ ಬೆರೆತ ಗಾಂಭೀರ್ಯದ ತೆರೆ ಇಳಿಸಿ, "ದುಡುಕು ಬುದ್ಧಿ. ದುರ್ಬುದ್ಧಿಯಲ್ಲ: ಎಲ್ಲದಕ್ಕೂ ಅವಸರ. ಇನ್ನೆರಡು ಮೂರು ಮಹಾ ಚುನಾವಣೆ ಕೂಡ ನೋಡಬಹುದಾಗಿತ್ತು. ಹೊರಟೇ ಹೋದ್ರು !" ಎಂದ.

ರಾಜ್ಯಪಾಲ : "ವರ್ಣಮಯ ಬದುಕು."

ಎಕ್ಸ್‌ಪ್ರೆಸ್ ಟ್ರಾವೆಲ್ಸ್‌ನವರು : "ನಮ್ಮ ಗಾಡಿಯಲ್ಲಿ ಸಫರ್ ಮಾಡುವಾಗ ಪ್ರಾಣ ಹೋಗಿದ್ದಿದ್ರೆ ಬಹಳ ಫಜೀತಿಯಾಗ್ತಿತ್ತು."

ವಿದ್ಯಾಧರ : "ಸ್ನೇಹಪರ ವ್ಯಕ್ತಿ. ಕಿಷ್ಕಿಂಧೆಗೆ ಈ ಸಾವು ತುಂಬಲಾಗದ ನಷ್ಟ."

ರಂಗಧಾಮ್ : "ಅಸಮಾನ ಟೆನ್ನಿಸ್ ಆಟಗಾರ್ತಿ."

ಬಾಲಾಜಿ–ಸಂಗಪ್ಪ : "ನಿಸ್ಪೃಹ, ಪ್ರಾಮಾಣಿಕ ವ್ಯಕ್ತಿತ್ವ."

ಸುಲೋಚನಾಬಾಯಿ : "ನಾರೀಲೋಕದ ಒಂದು ತಾರೆ ಅಸ್ತಂಗತವಾಯಿತು."

ನಕುಲದೇವ್ ಮತ್ತು ರಾಜ್ಯಪಾಲರು ಸಲಹೆ ಇತ್ತರು, ವಿಶ್ವಂಭರನಿಗೆ : "ಪ್ರಮಾಣ ವಚನ ಸ್ವೀಕಾರವಂತೂ ಸಂಜೆಗೆ ಹೋಯಿತು. ದೊಡ್ಡದಲ್ಲ. ಸಕಲ ಪ್ರಭುತ್ವ ಮರ್ಯಾದೆಗಳೊಂದಿಗೆ ಹನ್ನೊಂದು ಗಂಟೆಗೆ ಅಂತ್ಯ ವಿಧಿ. ಯಾರಿಗೂ ಕಾಯಬೇಕಾದ್ದಿಲ್ಲವಲ್ಲ. ನೀವೊಂದು ಪುಟ್ಟ ಭಾಷಣ ಮಾಡಿ."

"ಭಾಷಣ ನಕುಲದೇವರು ಮಾಡ್ಲಿ" ಎಂದ ವಿಶ್ವಂಭರ.

ನಕುಲದೇವ್ ಒಪ್ಪಲಿಲ್ಲ :

"ಬೇಡ. ನೀವು ಸಾಕು."

ಆಕಾಶವಾಣಿಯಿಂದ ಬಿತ್ತರಗೊಂಡುದನ್ನು ಕೇಳಿದೊಡನೆ ಧರ್ಮಮಠದ ಸ್ವಾಮೀಜಿ ಧಾವಿಸಿ ಬಂದರು. ಪರಶುರಾಮ ಅಲ್ಲಿದ್ದ ಪ್ರಭೃತಿಗಳಿಗೆ ಅವರ ಪರಿಚಯ ಮಾಡಿಕೊಟ್ಟ. ಸ್ವಾಮೀಜಿ ಅಂದರು:

"ಸೌದಾಮಿನಿ ದೇವಿ ನಮ್ಮ ಮಠಕ್ಕೆ ನಡೆದುಕೊಳ್ತಿದ್ರು. ದಂತೇಶ್ವರಿ ಅವರ ಕುಲದೇವತೆ."

"ಆ ದೇವತಾವಿಗ್ರಹ ಅಲ್ಲಿ ಪೆಟ್ಟಿಗೆಯಲ್ಲಿದೆ" ಎಂದ ಗುಪ್ತಚಾರ ದಳದ ಮುಖ್ಯಸ್ಥ.

ಸ್ವಾಮೀಜಿ ಮುಂದುವರಿಸಿದರು :

"ನಮ್ಮ ರಿವಾಜಿನ ಪ್ರಕಾರ ಮೊದಲು ಅಗ್ನಿಸ್ಪರ್ಶ. ಹನ್ನೊಂದನೇ ದಿನ ಅಸ್ಥಿ ಭಸ್ಮ ಎಲ್ಲ ಮಣ್ಣಿನ ಮಡಕೆಗಳಲ್ಲಿ ತುಂಬಿ ಮಣ್ಣಿನಲ್ಲಿ ಹೂಳೋದು. ಆರ್ಯರು ಬರುವುದಕ್ಕೆ ಮೊದಲೇ ಈ ನಮ್ಮ ದೇಶದಲ್ಲಿ ರೂಢಿಯಲ್ಲಿದ್ದ ಪದ್ಧತಿ ಇದು."

ವಿಶ್ವಂಭರನೆಂದ :

"ಎಲ್ಲ ಧಾರ್ಮಿಕ ಭಾವನೆಗಳನ್ನೂ ನಾವು ಗೌರವಿಸುತ್ತೇವೆ. ತಾವೇ ಈ ಅಂತ್ಯ ವಿಧಿಕಾರ್ಯದ ನೇತೃತ್ವ ವಹಿಸೋಣಾಗಲಿ. ನಮ್ಮ ಸರಕಾರದ ಸಂಪೂರ್ಣ ಒಪ್ಪಿಗೆ ಇದೆ."

* * *

ಕಲ್ಯಾಣನಗರದ ಮುಖ್ಯ ರಸ್ತೆಗಳಲ್ಲಿ ಪೊಲೀಸ್ ಧ್ವನಿವರ್ಧಕಗಳು "ಕೇಳಿರಿ! ಕೇಳಿರಿ!" ಮೊಳಗಿದವು. ಮುಖ್ಯಮಂತ್ರಿಯ ನಿಧನದ ನಿಮಿತ್ತ ಶಾಲೆ ಕಾಲೇಜುಗಳಿಗೆ, ಸರಕಾರಿ ಕಚೇರಿಗಳಿಗೆ ರಜಾ. ಮಾಜಿ ಚೀಫ್ ಮಿನಿಸ್ಟರ್ ಸೌದಾಮಿನಿ ಮಾತಾಜಿಯವರ ಪಾರ್ಥಿವ ಶರೀರಕ್ಕೆ, ಹನ್ನೊಂದು ಗಂಟೆಗೆ ಸರಿಯಾಗಿ ಹರಿಶ್ಚಂದ್ರ ಘಾಟ್‌ನಲ್ಲಿ ಧರ್ಮಮಠದ ಸ್ವಾಮೀಜಿಯವರಿಂದ ಅಂತ್ಯ ಸಂಸ್ಕಾರ. "ಕೇಳಿರಿ! ಕೇಳಿರಿ!"

ಗನ್ ಕ್ಯಾರಿಯೇಜ್‌ನಲ್ಲಿರಿಸಿದ ಪುಷ್ಪಾಚ್ಛಾದಿತ ಶವವನ್ನು ರಾಜಧಾನಿಯ ಉದ್ದಕ್ಕೆ ಅಗಲಕ್ಕೆ ಮೆರವಣಿಗೆಯಲ್ಲಿ ಒಯ್ದರು. ಮುಂದೆ ಪೊಲೀಸ್ ಪಟಾಲಂ. ಹಿಂದಿನಿಂದ ಕಾರುಗಳು.

ಕೊನೆಯ ಕಾರನ್ನು ಕರೀಂ ನಡೆಸುತ್ತಿದ್ದ. ಧನಂಜಯಕುಮಾರನೂ ಕರೀಮನ ಕಂಪೆನಿಯ ಒಡೆಯನೂ ಆ ಕಾರಿನಲ್ಲಿದ್ದರು.

ಸ್ಮಶಾನದ ಒಳಗೆ_ಹೊರಗೆ, ರಸ್ತೆಗಳಲ್ಲಿ, ಮನೆ ಮಹಡಿಗಳಲ್ಲಿ, ಮರಗಳ ರೆಂಬೆ ಕೊಂಬೆಗಳಲ್ಲಿ ಜನ ಕಿಕ್ಕಿರಿದಿದ್ದರು.

ಸೀಳು ಸೌದೆಗಳಿಂದ ಅಣಿಗೊಳಿಸಿದ್ದ ಅಟ್ಟಣಿಗೆಯ ಮೇಲೆ, ಪೊಲೀಸ್ ಅಧಿಕಾರಿಗಳು ವಾಹನದಿಂದ ತಾವು ಹೊತ್ತು ಇಳಿಸಿದ ಶವವನ್ನು ಇರಿಸಿದರು. ಅವರದೇ ಧ್ವನಿವರ್ಧಕ ವಿಶ್ವಂಭರನ ನೆರವಿಗೆ ಬಂತು.

"ಬಾಂಧವರೇ! ಹಿಂದೆಂದೂ ಅನುಭವಿಸದ ಸಂಕಟದಿಂದ ನಾನು ಬಾಧಿತನಾಗಿದ್ದೇನೆ. ಕಂಠ ಉಮ್ಮಳಿಸುತ್ತಿದೆ, ಅಶ್ರುಭರದಿಂದ ದೃಷ್ಟಿ ಜಡವಾಗಿದೆ, ಇನ್ನು ಹೆಚ್ಚು ನಾನು ಮಾತನಾಡಲಾರೆ. ನಮ್ಮ ರಾಷ್ಟ್ರಪಕ್ಷದ ಹಿರಿಯ ಹುದ್ದರಿಗೆ ನಮ್ಮ ಮಾಜಿ ಮುಖ್ಯಮಂತ್ರಿಗೆ ಇದೋ ಕಿಷ್ಕಿಂಧೆಯ ಶೋಕತಪ್ತ ವಿದಾಯ!"

ಶವದ ಮೇಲೆ ಸೌದೆ ಒಟ್ಟಿದರು. ಸೂಚನೆ ಬಂದೊಡನೆ ಪೊಲೀಸ್ ದಂಡು 'ಸಲಾಮಿ' ನುಡಿಯಿತು. ಆಕಾಶದತ್ತ ಗುಂಡುಗಳು ಹಾರಿದಾಗ ಕರೀಂ ಒಂದೇ ಸಮನೆ ತನ್ನ ಕಾರಿನ ಹಾರ್ನ್ ಒತ್ತಿದ. "ಸಾಕು! ನಿಲ್ಸು!" ಎಂದು ಅವನ ಯಜಮಾನ ಗದರಿಸಿ ತಡೆಯಬೇಕಾಯಿತು.

ಹಸಿ ಸೌದೆ ಹೊಗೆಯುಗುಳುತ್ತ ಕಷ್ಟ ಕೊಟ್ಟಿತು. ಡಬ್ಬ ಡಬ್ಬ ಸೀಮೆ ಎಣ್ಣೆ ಸುರಿದರು.

ಕಂಠ ಬಿರಿಯುವಂತೆ ಜಯಘೋಷ ಮಾಡಿತು ಜನಸ್ತೋಮ :

"ಸೌದಾಮಿನಿದೇವಿ ಚಿರಾಯುವಾಗಲಿ!"

—0—

ನಾಚಿದ ಪುಟ್ಟವ್ವ ಸೆರಗು ಸರಿಪಡಿಸಿಕೊಂಡಳು. ಸುದ್ದಿ ಕಾಳ್ಗಿಚ್ಚಾಗುತ್ತದೆ ಎಂದಿದ್ದರು ನಾಯಕರು. ಕಾಡು ತಣ್ಣಗೇ ಇತ್ತು.

ಬಿರುಗಾಳಿಯಾದಳು ; ಬುಸುಗುಟ್ಟಿದಳು.

ಈಕೆ ಸನ್ಯಾಸಿನಿಯೋ ? ಮಾಯಾವಿನಿಯೊ ?

ಆರ್ತರ ಅನಾಥರ ಸೇವೆಗೆ ಜೀವವನ್ನು ಮುಡಿಪಿಟ್ಟಳು. ಕಿಷ್ಕಿಂಧೆಯ ಮುಖ್ಯಮಂತ್ರಿಯಾದಳು.

'ದಿಲ್ಲಿ ನಮ್ಮ ಮೇಲೆ ಧುರೀಣನನ್ನು ಹೇರುವುದು ನಮಗೆ ಸಮ್ಮತವಿಲ್ಲ.'

'ಸೌದಾಮಿನಿ ದೇವಿ ಚಿರಾಯುವಾಗಲಿ !'

ನಿರಂಜನ ಕೃತಿ
ಮಿಂಚು

IBH
ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

AKRUTI
₹ 90.00
2015